ಹಜರತ್ ಪೈಗಂಬರರ ಮತ್ತು ಅಯ್ಯನಬೆ ವೈಗಂಬರರಂತೆ ಸತ್ಯಸ್ವರೂಪರಾಗಿಯೂ, ಏಸುಕ್ರಿಸ್ತ ಪುತ್ರ ಗೌತಮ ಬುದ್ಧರಂತೆ ತಾಳ್ಮೆಯುಳ್ಳವರಾಗಿಯೂ, ಅಂದರೆ ಸರ್ವ ಅವತಾರಿಕ ಪುರುಷರಲ್ಲಿರತಕ್ಕ ಎಲ್ಲ ಗುಣಗಳನ್ನೂ ಹೊಂದಿ ಜಗತ್ತಿಗೆ ಮೂಲಪುರುಷರಾಗಿ ಒಂದರು. ಇದನ್ನು ಸರ್ವ ಸಾಧಾರಣವಾಗಿ ನೋಡಬೇಕಾದರೆ ಹಿಬ್ಲಿನೋವಾನಿ ಎಂಬ ಮಹಾ ಪುರುಷರು ಹಜರತ್‌ರವರ ಜೀವನಚರಿತ್ರೆಯನ್ನು ಎರಡು ಪುಸ್ತಕಗಳಲ್ಲಿ ಬರೆದಿರುತ್ತಾರೆ. ವಿಚಾರ ಮಾಡುವವರು ವಿಚಾರಿಸಿ ನೋಡಬಹುದು. ಹಜರತ್ ಪೈಗಂಬರರ ಗುಣಕರ್ಮಗಳ ವಿಷಯವಾಗಿ ಕೆಲವು ಅಗತ್ಯವಾದಂಥ ಭಾಗಗಳನ್ನು ಬರೆಯುತ್ತೇನೆ.

ಹಜರತ್‌ರವರ ಮಾತಾಪಿತೃಗಳು ಬಹಳ ಬಡವರಾಗಿದ್ದರು. ಹಜರತ್‌ರವರು ಜನ್ಮಗ್ರಹಣ ಮಾಡಲು ತತ್ಪೂರ್ವದಲ್ಲಿಯೇ ಅಂದರೆ ಆರು ತಿಂಗಳುಗಳ ಮುಂಜೆತವಾಗಿಯೇ ಪಿತೃವು ಪರಂಧಾಮವನ್ನೈದಿದ್ದರು. ಹಜರತ್‌ರವರು ಆರು ವರ್ಷ ವಯಸ್ಸಿನವರಾದಾಗ್ಯೆ ಮಾತೆಯೂ ಕೂಡ ಸ್ವರ್ಗಾರೋಹಣ ಮಾಡಿದರು. ಮಾತಾಪಿತೃಗಳಿಂದ ವರ್ಜಿಸಲ್ಪಟ್ಟು ಅನಾಥಬಂಧುವಿನ ರಕ್ಷಣೆಗೊಳಗಾಗುವಪ್ಪರಲ್ಲಿಯೇ, ಖೈಕವಾವಸ್ಥೆಯಿಂದಲೂ, ಸಲಹಿದ್ದ ದಾದಿಯಾದ ಹಲೀಮಾ ಎಂಬುವರು ಕೇವಲ ಚಿಕ್ಕವಯಸ್ಸಿನವರಾದ ಹಜರತ್‌ರವರನ್ನು ಸಂಗಡ ಕರೆದುಕೊಂಡು ತಮ್ಮ ಮನೆಗೆ ಒಂದರು. ಅಲ್ಲಿ ಅವರ ಕುರಿಯನ್ನು ಕಾಯುತ್ತಾ, ತನ್ನ ಸಂಗಡದಲ್ಲಿದ್ದ ಅನೇಕ ಹುಡುಗರಿಗೆ ಅನೇಕ ಪವಾಡಗಳನ್ನು ತೋರಿಸುತ್ತಾ ಲೀಲೆ ಮಾಡುತ್ತಿದ್ದರು. ಹೀಗೆಯೇ ಬ್ರಹ್ಮಸ್ವರೂಪಿಯಾದ ಬಾಲ್ಯಾವಸ್ಥತೆಯು ಕ್ರಮೇಣ ಕಳೆದುಹೋಯಿತು. ಇದೇ ವಯಸ್ಸಿನಿಂದಲೂ ಇವರು ಆಕಾರಪೂಜೆಯನ್ನು ಒಪ್ಪುತ್ತಿದ್ದಿಲ್ಲ. ಇವರು ಕೆಲವು ವೇಳೆ ಮಕ್ಕಾದಲ್ಲಿದ್ದ ಗುಡಿಗಳಿಗೆ ಹೋಗಿ, ಪೂಜೆಗೋಸ್ಕರ ಕುಳಿಸಿರುವ ಮೂರ್ತಿಗಳನ್ನು ನೋಡಿ ಅಲ್ಲಿನ ಅರ್ಚಕರಿಗೆ "ಎಲ್ಯೆ ಹುಚ್ಚರೇ! ಪರಮಾತ್ಮನನ್ನು ಹೊಂದಬೇಕಾದರೆ ಈ ಮಾರ್ಗವು ಸರಿಯಾದುದಲ್ಲ; ಕಲ್ಲು, ಮಣ್ಣು ಮುಂತಾದುವುಗಳಿಂದ ಮಾಡಲ್ಪಟ್ಟ ಮೂರ್ತಿಗಳಲ್ಲಿ ಆತನ ನಿಜತತ್ವವು ಗೊತ್ತಾಗುವುದಿಲ್ಲ. ಅಂಥ ನಿರಾಕಾರವಸ್ತುವನ್ನು ಹೊಂದಬೇಕಾಗಿದ್ದರೆ, ಧ್ಯಾನವುಳ್ಳವನಾಗಿ ತನ್ನನ್ನು ತಾನು ಅರಿಯು

ಬೇಕಾಗಿದೆ" ಎಂದು ಜೋಧಿಸುತ್ತಿದ್ದರು. ಅಂಥಾ ಅಗಾಧವಾದ ಪಾಪವೆಂಬ ಕರಾಳಗರ್ತ್ತಲೆಯಲ್ಲಿ ಈ ದಿವ್ಯಜ್ಞಾನದ ಮಾತನ್ನು ಕೇಳುವವರು ಯಾರು? ವಿಚಾರಿಸುವವರು ಯಾರು? ಇಂಥಾ ಸಮಯದಲ್ಲಿ, ಪರಮಪಾವನನಾಗಿಯೂ, ಸಕಲ ಕಲ್ಮಷಗಳನ್ನು ಹೋಗಲಾಡಿಸಿ, ನಿರ್ಮಲವಾದ ಬುದ್ಧಿಯನ್ನಿತ್ತು ಪಾವನವಾಗಿ ಮಾಡುವ ಪರಮಾತ್ಮನೊಬ್ಬನೇ ಹೊರತು ಮತ್ಯಾರೂ ಇಲ್ಲವೆಂದು ಹಜರತ್‌ರವರು ಈ ಜನರ ಮೂಢ ಬುದ್ಧಿಯನ್ನು ಹೋಗಲಾಡಿಸಿ ಪ್ರದೀಪ್ತವಾದ ಜ್ಞಾನವೆಂಬ ಬೆಳಕನ್ನು ಪ್ರಸರಿಸಲು, ಆತನ ದಿವ್ಯಚರಣಶರಣ್ನಿಧಿಯಲ್ಲಿ ಮೊರೆಯಿಡುವುದೇ ಹೊರತು ಅನ್ಯಥಾ ಇಲ್ಲವೆಂದು ತಿಳಿದು ಗುಡ್ಡ, ಗುಹೆಗಳಲ್ಲಿ ಪ್ರವೇಶಿಸಿ, ನಿರಂತರದಲ್ಲೂ "ಈ ಜನರ ಮೂಢಬುದ್ಧಿಯನ್ನು ಹೋಗಲಾಡಿಸಿ, ಸುಜ್ಞಾನಸ್ವರೂಪವಾದ ನಿನ್ನ ಜ್ಯೋತಿಯನ್ನು ಅನುಗ್ರಹಿಸು" ಎಂದು ವಾರಿಧಾರೆಯನ್ನು ಸುರಿಸುತ್ತಿದ್ದರು. ಶ್ರೀಪರಮಾತ್ಮನು ಇವರ ಜೀಕ್ಕ ವಯಸ್ಸಿನಲ್ಲಿಯೇ ಪ್ರೀತಿಸಮುದ್ರವನ್ನು ನೆಲೆಗೊಳಿಸಿದ್ದನು.

ಯೌವ್ವನ ಕಾಲದಲ್ಲಿ ವ್ಯಾಪಾರವನ್ನು ಮಾಡುತ್ತ ದೇಶಸಂಚಾರ ಮಾಡಲು ತೊಡಗಿದರು. ಎಲ್ಲಿ ನೋಡಿದರೂ ಈ ಸ್ಥಿತಿಯೇ ಅವರಿಗೆ ಕಂಡುಬರುತ್ತಿದ್ದಿತು. ಜೆರೂಸಲಂನಲ್ಲೂ, ಪ್ರಸಿದ್ಧವಾದ ಸ್ಪೇನ್‌ದೇಶದ ಜರ್ಜೆನಲ್ಲಿಯೂ ಅಗಣಿತವಾದ ಕೆಟ್ಟಕೆಲಸಗಳು ನಡೆಯುತ್ತಿದ್ದವು; ಕಾಶಿಯಲ್ಲಿಯೂ ಅನೇಕ ದುಷ್ಟಕೆಲಸಗಳು ಪವಿತ್ರವೆಂದು ಗಣಿಸಲ್ಪಟ್ಟಿದ್ದವು. ಕಾಶಿಯಲ್ಲಿ ಸದ್ಯಕ್ಕೆ ಕಾಣಬರುವ ನೇಪಾಲಿಮಂದಿರದಲ್ಲಿ ಚಿತ್ರಿಸಿರುವ ಕೋಕಶಾಸ್ತ್ರ ಚಿತ್ರಗಳು ಅದೇ ಕಾಲದಲ್ಲಿ ಮಾಡಿದುದಾಗಿವೆ. ಅಂದರೆ ಸಮಸ್ತ ಭೂಮಂಡಲವೆಲ್ಲವೂ ಕೆಟ್ಟುಹೋಗಿದ್ದಿತು. ಇಂಥ ದುಷ್ಟಕಾಲದಲ್ಲಿ ಹಜರತ್ ಮಹಮ್ಮದ್ ಪೈಗಂಬರರನ್ನು ಕೇಳುವವರು ಯಾರು? ಸ್ವಯಂ ಅರಬ್ಬೀದೇಶದವರೇ ಇವರಜ್ಞಾನಮಾರ್ಗಕ್ಕೆ ವಿರೋಧವಾಗಿದ್ದರು; ಆದರೂ ಇವರ ರೀತಿ ನೀತಿಯನ್ನು ನೋಡಿ ಜನರು "ಅಮಿನ" ಎಂದರೆ "ವಿಶ್ವಾಸಪಾತ್ರ" ಎಂದು ಸಂಬೋಧಿಸುತ್ತಿದ್ದರು. ಯಾವ ಪವಿತ್ರ ಕೆಲಸಗಳು ಆಗಬೇಕೋ ಅವುಗಳನ್ನೆಲ್ಲವನ್ನೂ ಇವರ ಕೈಯಿಂದಲೇ ಮಾಡಿಸುತ್ತಿದ್ದರು. ಹೀಗೆ ಹಜರತ್‌ಮಹಮ್ಮದ್‌ರವರು ಸ್ಥಿತಿಯೊಂದು ಸಮ್ಮಾನದಲ್ಲಿಯೂ ಅದ್ವಿತೀಯ ಪುರುಷರಾಗಿದ್ದುದರಿಂದ

ಅಂದರೆ, ಕೆಲಸನೋಡುವುದರಲ್ಲಿ ಕಟ್ಟಪಡುವರಾಗಿಯೂ, ವಾಣಿಜ್ಯಕಾರ್ಯ ದಲ್ಲಿ ಪ್ರಾಮಾಣಿಕರಾಗಿಯೂ, ನ್ಯಾಯವನ್ನು ವಿಚಾರಿಸುವುದರಲ್ಲಿ ನ್ಯಾಯಾಧಿಪತಿಯಾಗಿದ್ದುದರಿಂದ ಅರಬ್ಬಿದೇಶವಲ್ಲದೆ, ಇತರ ಪ್ರದೇಶ ಗಳಲ್ಲಿಯೂ ಕೂಡ ಇವರು ಪ್ರಸಿದ್ಧರಾಗಿದ್ದರು. ಹೀಗಿರಲು ಅದೇ ಸ್ಥಾನದಲ್ಲಿದ್ದ, ವೈಧವ್ಯದೆಸೆಯಲ್ಲಿದ್ದು ಶ್ರೀಮಂತಳಾಗಿದ್ದ ಬಿಬ್ಬಿ ವಿಧವೆಯು ಇವರ ಪ್ರಸಿದ್ಧಿಯನ್ನು ಕೇಳಿದವರಾಗಿ, ಹಜರತ್‌ರವರನ್ನು ಕರೆಯಿಸಿದರು. ಆಗ ಹಜರತ್‌ರವರ ಚಿಕ್ಕಪ್ಪನವರು ಈ ವಿಷಯ ವನ್ನು ಕೇಳಿದವರಾಗಿ ಬಹಳ ಸಂತೋಷಪಟ್ಟು, ಹೇಗಾದರೂ ಆಕೆಗೆ ಹಜರತ್‌ರವರನ್ನು ಲಗ್ನವಾಗಲು ಇಷ್ಟವಿದೆಯೇ ಎಂಬು ದನ್ನು ಪ್ರಶ್ನಿಸಲು, ಅದಕ್ಕೋಸ್ಕರವಾಗಿ ಅವರು ಮನಸ್ಸಾಕ್ಷಿಯಾಗಿ ಒಪ್ಪಿಕೊಂಡರು. ಅಂತು ಸಕಾಲದಲ್ಲಿ ಸುಲಗ್ನದಲ್ಲಿ ವೈವಾಹ ಮಹೋತ್ಸವವು ಸಡೆಯಿತು. ಆಗ ಹಜರತ್‌ರವರ ವಯಸ್ಸು ಇಪ್ಪತ್ತೈದು ವರ್ಷಗಳು; ಮತ್ತು ಖತೀಜಾಬೀಬಿಯವರ ವಯಸ್ಸು ನಲ್ವತ್ತು ವರ್ಷಗಳು ಆಗಿದ್ದವು. ವೈವಾಹಮಹೋತ್ಸವು ಕಳೆದನಂತರ, ತಮ್ಮ ವಿಶಿಷ್ಟ ಐಶ್ವರ್ಯವನ್ನೂ ಹಜರತ್‌ರವರ ಪಾದಪದ್ಮಗಳಲ್ಲಿ ಸಮರ್ಪಿಸಿ ಸುಖವಾಗಿರುತ್ತಿದ್ದರು. ಹೀಗೆ ಸಕಲ ಐಶ್ವರ್ಯದಿಂದ ಪರಿಪೂರ್ಣ ವಾಗಿದ್ದರೂ ಹಜರತ್‌ರವರಿಗೆ ಈ ಐಶ್ವರ್ಯವು ರುಚಿಸಲಿಲ್ಲ. ಅವರು ಯಾವಾಗಲೂ ಮನೆಯಲ್ಲಿರಲು ಅಪೇಕ್ಷಿಸುತ್ತಿರಲಿಲ್ಲ. ತಮ್ಮ ಸಮಸ್ತ ಕಾಲವನ್ನೂ ಗುಹೆ ಗುಡ್ಡಗಳಲ್ಲಿ ದೇವರ ಪ್ರಾರ್ಥನೆಯಲ್ಲಿ ಕಳೆಯುತ್ತಿದ್ದರು. ಈ ರೀತಿಯಾಗಿ ಹದಿನೈದು ವರ್ಷಗಳು ಕಳೆದು ಹೋದವು.

ಒಂದಾನೊಂದುದಿವಸ ಹಜರತ್‌ರವರು ಮಕ್ಕಾಪಟ್ಟಣದ ಸಮೀಪ ದಲ್ಲಿದ್ದ "ಹಿರಾ" ಗುಹೆಯಲ್ಲಿ ಪ್ರಾರ್ಥನೆಯುಲ್ಲಿ ಮಗ್ನರಾಗಿದ್ದಾಗ ಅಕ ಸ್ಮಾತ್ತಾಗಿ, ದಿಕ್ಕುಟಗಳನ್ನು ಸೀಳುವಂತೆ ಗಂಭೀರ ರವದಲ್ಲಿ ಭೂಮಿಯು ಸಡುಗಿದಂತೆ ಹಜರತ್‌ರವರಿಗೆ ಕಂಡುಬಂದಿತು. ತತ್‌ಕ್ಷಣದಲ್ಲಿಯೇ ಜಿಬ್ರಯೀಲ್ (ಇಂದ್ರದೇವನು) ಪ್ರಸನ್ನನಾಗಿ "ಇಕ್‌ರಾಬಿ ಸ್ಮೆರಬ್ಬಿ ಕ್ಲಜಿ ಪಲಕ್" ಎಂದರೆ "ನಿನ್ನ ಪ್ರಭುವಿನ ನಾಮದಿಂದ ಓದು ಆತನು ನಿನ್ನನ್ನು ಹುಟ್ಟಿಸಿದ್ದಾನೆ" ಎಂದು ಬೋಧಿಸಲು ಅದಕ್ಕೆ

ಪ್ರತ್ಯುತ್ತರವಾಗಿ ಹಜರತ್‌ರವರು "ನನಗೆ ಓದಲು ಬಾರದು" ಎಂದು ಹೇಳಲು, ಪುನಃ ಜೀಬ್ರಯಿಲ್ (ಇಂದ್ರದೇವನು) ಅದೇ ವಾಕ್ಯವನ್ನು ಉಚ್ಚರಿಸು ಎಂದು ನಿಜ್ಞಾಪಿಸಲು, ಹಜರತ್‌ರವರು ಮೊದಲಿನ ಉತ್ತರವನ್ನೇ ದಯಪಾಲಿಸಿದರು. ಇದಾದಮೇಲೆ ಹಜರತ್‌ರವರು ವೇಗವಾಗಿ ನಡಗುತ್ತ, ತಮ್ಮ ಭವಿಷ್ಯಕೆಲಸದ ವಿಷಯಕ್ಕೆ ಹೆದರುತ್ತಾ, ಮನೆಯನ್ನು ಸೇರಿ, ತಮ್ಮ ಸತಿಯಾದ ಬೀಬಿ ಖತೀಜಾರವರನ್ನು ಕುರಿತು, "ನನಗೆ ಕಂಬಳಿಯನ್ನು ಹೊದಿಸು" ಎಂದು ಹೇಳಿ ಮಲಗಿಕೊಂಡರು. ತದನಂತರ ಹಜರತ್‌ರವರು, ತನಗೆ ಗವಿಯಲ್ಲಿ ನಡೆದ ವಿಶಿಷ್ಟಸಂಗತಿಯನ್ನೂ ತಮ್ಮ ಸತಿಯನ್ನು ಕುರಿತು ಹೇಳಲು, ಅದಕ್ಕೆ ಅವರು ತಮ್ಮ ಬಂಧುವಾದ "ವರಖಾಬಿ ನೌಫೀಲ್" ಎಂಬ ಪ್ರಸಿದ್ಧ ಪುರುಷರ ಬಳಿಗೆ ಹಜರತ್‌ರವರನ್ನು ಕರೆದುಕೊಂಡು ಹೋಗಿ ಎಲ್ಲ ವಿಷಯಗಳನ್ನೂ ಸಾಂಗವಾಗಿ ಹೇಳಿಸಲು, ಅದಕ್ಕೆ ಅವರು "ಪ್ರಸನ್ನನಾದವನು ಜೀಬ್ರಯಿಲ್ (ಇಂದ್ರನು) ಇರುತ್ತಾನೆಂದೂ, ಈ ದೇವನು ಮೂಸಾ ಪೈಗಂಬರರಿಗೆ ಇದೇರೀತಿಯಲ್ಲಿ ಪ್ರಸನ್ನನಾಗಿದ್ದನೆಂದೂ, ಮುಂದೆ ಹಜರತ್‌ರವರು "ಪೈಗಂಬರ್" ಎಂದರೆ "ಪ್ರವಾದಿ" ಯಾಗುವರೆಂದೂ," ಹೇಳಿ ಸಂತೈಸಿದರು.

ಈ ದಿವಸದ ಲಾಗಾಯಿತು ಹಜರತ್‌ರವರು ಕಪ್ಪು ಸಮುದ್ರದಲ್ಲಿ ಪದಾರ್ಪಣಮಾಡಿದುದಾಯಿತು. ಅನೇಕ ಜನರು ಇವರಿಗೆ ವೈರಿಗಳಾಗಿ ಕಪ್ಪವನ್ನು ಕೊಡುವುದಕ್ಕೆ ಉದ್ಯೋಗಿಸಿದರು. ಅನೇಕರು ಇವರ ಅಲ್ಪಸ್ವಲ್ಪವಾಗಿದ್ದ ಭಕ್ತರಿಗೆ ಜೀತ್ರವಿಜೀತ್ರ ಹಿಂಸೆಯನ್ನು ಕೊಟ್ಟರು. ಆದರೂ ಹಜರತ್‌ರವರು ತಮ್ಮ ವಜ್ರರೂಪವಾದ ಮನಸ್ಸಿನ ತಾಳ್ಮೆಯಿಂದ ಎಲ್ಲವನ್ನೂ ಸಹಿಸುತ್ತಾ, ತಮ್ಮ ಕೆಲಸವನ್ನು ಸಾಧ್ಯವಾದ ಮಟ್ಟಿಗೂ ನಡೆಯಿಸುತ್ತಿದ್ದರು. ಬಂದಾನೊಂದು ದಿವಸ, ಹಜರತ್‌ರವರ ಕತ್ರುಗಳು ಒಂದು ಸಭೆಯನ್ನು ಮಾಡಿ, ಇವರನ್ನು ಯಾವರೀತಿಯಿಂದಲಾದರೂ ಕೊಲ್ಲಬೇಕೆಂದು ದುಷ್ಪ್ರಯತ್ನಮಾಡಿ, ಆ ಪ್ರಯತ್ನಕ್ಕೆ ಹಜರತ್ "ಉಮರ್" ಎಂಬುವರನ್ನು ಮುಖಂಡರಾಗಿಮಾಡಿ ಹಜರತ್‌ರವರು ಇರುವ ಮನೆಗೆ ಕಳುಹಿಸಿಕೊಟ್ಟರು. ಆದರೆ "ಉಮರ್" ರವರಿಗೆ ಇನ್ನು ಭಗವಂತನಮೇಲೆಯೂ ಪುಷ್ಕಳವಾದ ಪೈಗಂಬರರ

ಮೇಲೆಯೂ ಶಕ್ತಿಯು ಉಂಟಾಗಿರಲಿಲ್ಲವಾದ್ದರಿಂದ. ತಾವು 'ಹಜರತ್' ರಪರಸ್ನು ಕೊಲ್ಲಲು ವಾಗ್ದಾನಮಾಡಿ, ಕರದಲ್ಲಿ ಕತ್ತಿಯನ್ನು ಝಳಪಿಸುತ್ತಾ, ಹಜರತ್‌ರವರು ಇರುವ ಮನೆಯನ್ನು ಕುರಿತು ಹುಡುಕುತ್ತಾ ಹೊರಟರು. ಕಾಳ್‌ಗತ್ತಲೆಯಲ್ಲಿ ಕೊಲ್ಲಲುಬಂದ ಹಜರತ್ ಉಮರ್‌ರವರು ಮನೆಯ ಸಮೀಪಕ್ಕೆ ಒಂದು ಪ್ರಾರ್ಥನೆ ಮಾಡುತ್ತಿದ್ದ ಶಬ್ದಗಳನ್ನು ಕೇಳ ತೊಡಗಿದರು. ಹಜರತ್‌ರವರು ಪರಮಾತ್ಮನಿಗೆ ಸಾಷ್ಟಾಂಗಗಳನ್ನು ಮಾಡಿ "ಸಜಧಾಲಕಾರೂಹಿವಕಲ್‌ಬಿ" ಎಂದರೆ, ಎಲ್ಲೆ ಪರಮಾತ್ಮನೇ, "ನನ್ನ ಸ್ಥೂಲದೇಹವು ಮತ್ತು ಸೂಕ್ಷ್ಮದೇಹವು ನಿನ್ನನ್ನು ನಮಸ್ಕಾರ ಮಾಡುತ್ತವೆ" ಎಂದು ಹೇಳುತ್ತಿರಲು, ಹಜರತ್ ಉಮರ್‌ರವರು ಈ ಜ್ಞಾನಸ್ವರೂಪವಾದ ವಾಕ್ಯವನ್ನು ಕೇಳಿ ಮನಸ್ಸಿನಲ್ಲಿ ಹೆದರಿ, ಹಾ ! ಹಾ ! ಇಂಥ ಸಾಧುವನ್ನು ನಾನು ಹೇಗೆ ಕೊಲ್ಲಲಿ ? ಎಂದು ವ್ಯಸನಪಡುತ್ತಾ ನಿಂತಿದ್ದರು. ಇಷ್ಟರಲ್ಲಿಯೇ ಪ್ರಾರ್ಥನೆಯಾದನಂತರ, ಹಜರತ್‌ರವರು ಹೊರಗೆ ಬಂದು ನೋಡಲು, ಕತ್ತಲೆಯಾಗಿದ್ದುದಿಂದ ಹಜರತ್ ಉಮರ್ ರವರು ಕಾಣಿಸಿಕೊಳ್ಳಲಿಲ್ಲವಾದಾಗ್ಯೂ, ಅವರ ಕಾಲಿನ ಸಪ್ಪಳವು ಕೇಳ ಬಂದಿತು. ಅದಕ್ಕೆ ಹಜರತ್‌ರವರು ಯಾರು ? ಎಂದು ಪ್ರಶ್ನಿಸಲಾಗಿ, ಅದಕ್ಕೆ "ಉಮರ್" ಎಂದು ಗಂಭೀರಧ್ವನಿಯು ಕೇಳಬರಲು, ಹಜರತ್ ರವರು, ಹೇ! ಉಮರ್! ನೀನು ಹಗಲೂ ಬಿಡುವುದಿಲ್ಲ, ರಾತ್ರಿಯಾದರೂ ಬಿಡುವುದಿಲ್ಲವೇ ? ಎಂದು ಪ್ರಶ್ನಿಸಲಾಗಿ, ಅದಕ್ಕೆ ಹಜರತ್ "ಉಮರ್" "ಎಲ್ಲೆ ಮಹಾಪುರುಷನೇ ! ತಾವು ನನಗೋಸ್ಕರ ಹರಕೆಯನ್ನು ಕೊಡಿರಿ. ನಾನು ಬಹಳ ಪಾಪಿಯು" ಎಂದು ಹೇಳಿದರು.

ಹಜರತ್‌ರವರು ತಮ್ಮ ಸತ್ಯವನ್ನು ಪ್ರಸರಿಸುವುದಕ್ಕೆ ಅನೇಕ ಕಷ್ಟಪರಂಪರೆಗಳನ್ನು ಅನುಭವಿಸಬೇಕಾಯಿತು. ಈ ಕಷ್ಟಕಾಲ ದಲ್ಲಿ ಅನೇಕ ದಿವಸಗಳು ಕಳೆದುಹೋದವು. ಕತ್ತುಗಳು ಹಜರತ್‌ರವರ ಧರ್ಮಕಾರ್ಯಗಳನ್ನು ನಾಶಮಾಡಲು ಎಷ್ಟು ಪ್ರಯತ್ನಿಸಿದರೋ ಅಷ್ಟು ಹೆಚ್ಚು ಹೆಚ್ಚಾಗಿ ಸಮಾಜದಲ್ಲಿ ಜನರ ಏಳಿಗೆಯು ಅಭಿವೃದ್ಧಿಯಾಯಿತು. ಆಗ ಅವರು ಹಜರತರಿಗೆ ಬಂದು ಸ್ಥಳದಲ್ಲಿ ಪ್ರಾರ್ಥನೆ ಮಾಡುತ್ತಾ ನೋಡಿ ದರು. ಸತ್ಯದ ಮಹಿಮೆಯು ಹೀಗೆಯೇ ಅಲ್ಲವೇ ? ಹೀಗೆ ಹಜರತ್‌ರವರ

ಅನುಯಾಯಿಗಳು ದಿನೇದಿನೇ ಅಭಿವೃದ್ಧಿಯಾಗುವುದನ್ನು ಕಪ್ಪುಗಳು ನೋಡಿ ಸಹಿಸಲಾರದೆ, ಮತ್ತೊಂದು ಸಮಾಜವನ್ನು ಕೂಡಿಸಿ ಅದರ ಮೂಲಕವಾಗಿ ಹಜರತ್‌ರವರನ್ನು ಸಂಹರಿಸಲು ಪ್ರಯತ್ನಪಾಡಿದರು. ಈ ಕೆಲಸವನ್ನು ನಿರ್ವಹಿಸಲು ಹಜರತ್ ಉಮರ್‌ರವರೇ ಉಮೇದು ವಾರರಾಗಿ ನಿಂತು, ಕರದಲ್ಲಿ ಕತ್ತಿಯನ್ನು ಝಳಪಿಸುತ್ತಾ, ಹಜರತ್‌ರವರ ಮನೆಯನ್ನು ಕುರಿತು ಹೊರಟರು. ಹಗಲು ಸಮಯ ಪಟ್ಟಣದಲ್ಲಿ ಭಯಂಕರವಾದ ಗಲಭೆಯು ನಡೆಯುತ್ತಿದ್ದಿತು. ಹಜರತ್ ಉಮರರು ಹಾದಿಯಲ್ಲಿ ಕೋಪಾವೇಶದಿಂದ ಬರುತ್ತಿರುವುದನ್ನು ಒಬ್ಬ ಗೃಹಸ್ಥನು ನೋಡಿ ಅವರನ್ನು ಕುರಿತು ಎಲ್ಲಿಗೆ ಹೋಗುತ್ತಿರುವಿರಿ? ಎಂದು ಪ್ರಶ್ನಿಸಲು ಅದಕ್ಕೆ ಉಮರ್‌ರವರು ಮಹಮ್ಮದ್‌ರವರನ್ನು ನಾಶಪಾಡಲು ಹೋಗುತ್ತಿರುವೆನೆಂದು ಉತ್ತರವನ್ನೀಯಲು, ಅದಕ್ಕೆ ಗೃಹಸ್ಥನು "ನೀವು ಮಹಮ್ಮದ್‌ರವರನ್ನು ಕೊಲ್ಲುವುದಕ್ಕೆ ಮುಂಚೆ ನಿಮ್ಮ ತಂಗಿಯವರನ್ನು ಹೋಗಿ ನೋಡೋಣಾಗಲಿ ಅವರೂ ಅವರ ಗಂಡಂದಿರೂ ಇಬ್ಬರೂ ಮುಸಲ್ಮಾನರಾಗಿರುತ್ತಾರೆ" ಎಂದು ಹೇಳಿದಾಗ, ಮೊದಲೆ ಉರಿಯುತ್ತಿದ್ದ ಬೆಂಕಿಯಲ್ಲಿ ಘೃತವನ್ನು ಬಿಟ್ಟಂತಾಗಿ, ಉಮರ್‌ರವರು ಕ್ರೋಧಾನ್ವಿತರಾಗಿ, ತಮ್ಮ ತಂಗಿಯ ಮನೆಯ ಹಾದಿಯನ್ನು ಕುರಿತು ಹೊರಟರು. ಆ ಕಾಲದಲ್ಲಿಯೇ ಅವರ ತಂಗಿಯವರು ತಮ್ಮ ಪತಿಗೆ ಕುರಾನನ್ನು (ಈಶ್ವರಗೀತೆ) ಓದಿ ತಿಳಿಸುತ್ತಿದ್ದರು. ತತ್‌ಕ್ಷಣದಲ್ಲಿ ಒಳಗೆ ನುಗ್ಗಿ ತಮ್ಮ ತಂಗಿಯನ್ನು ಕುರಿತು, "ಏನು ಓದುತ್ತಲಿರುವೆ" ಎಂದು ಪ್ರಶ್ನಿಸಲಾಗಿ, ಅವರು ಅದಕ್ಕೆ ಪ್ರತ್ಯುತ್ತರವಾಗಿ "ಕುರಾನು" (ಈಶ್ವರ ಗೀತೆ) ಯನ್ನು ಪಠಿಸುತ್ತೇನೆಂದು ಹೇಳಿದ ತಕ್ಷಣವೇ, ಕೋಪಾಗ್ನಿಯಿಂದ ದಗ್ಧರಾಗಿ, ಪ್ರಹರಿಸುವುದಕ್ಕೆ ಪ್ರಾರಂಭಿಸಿ, ಕಡೆಗೆ ಅಂಗಾಂಗವೆಲ್ಲವೂ ರಕ್ತಮಯವಾಗುವವರಿಗೂ ಪ್ರಹರಿಸುತ್ತಾ ಇರಲು, ಅವರ ತಂಗಿಯವರು ನಮ್ಮ ಪ್ರಾಣಗಳಾದರೂ ತೆಗೆಯಬಹುದು" ಆದರೆ ನಾವು ಹಿಡಿದಿರುವ ಹಾದಿಯು ಪವಿತ್ರವಾದುದು. ಇದನ್ನು ಬಿಟ್ಟು ನಾವು ಭವಿಯಾಗಲಾರೆವು. ತಮ್ಮ ಕೈಯಿಂದಲೇ ಮಾಡಲ್ಪಟ್ಟು ಪೂಜಿಸಲ್ಪಡುವ ಮೂರ್ತಿಗಳನ್ನು ಎಂದಿಗೂ ಪೂಜಿಸಲಾರೆವು, ಎಂದು ಮುಕ್ತಕಂಠವಾಗಿ ಹೇಳಿದರು. ಹಜರತ್ ಉಮರ್‌ರವರು ಇದನ್ನು ಕೇಳಿ, ತಂಗಿಯ ಅಂಗಾಂಗಗಳಿಂದ ರಕ್ತವು

ಕಾರಿಯಾಗಿ ಪ್ರವಹಿಸುತ್ತಿದ್ದನ್ನು ನೋಡಿ ಮರುಗಿ, ಇದರಲ್ಲಿ ಏನೋ ಮಹತ್ವವಿರಬೇಕೆಂದು ಯೋಚಿಸುತ್ತಾ, ಕಡೆಗೆ ತಂಗಿಯನ್ನು ಕುರಿತು 'ಹೇ! ತಂಗಿ, ಈ ಕುರಾನವು (ಈಶ್ವರಗೀತೆಯು) ಎಂತಹದು? ಪಠಿಸು, ನಾನು ಸ್ವಲ್ಪ ಕೇಳುವೆನು" ಎಂದು ಪ್ರಶ್ನಿಸಲು, ಅದಕ್ಕೆ ತಂಗಿಯು ಸಂತೋಷಪಟ್ಟು ಅಣ್ಣನ ಕೈಕಾಲುಗಳನ್ನು ತೊಳೆಯಿಸಿ, ಸಮಾಧಾನ ಮನಸ್ಸಿನಿಂದ ಕುರಾನಿನ (ಈಶ್ವರಗೀತೆಯ) ಲ್ಲಿ "ತಾಹಾ" ಎಂಬ ಅಧ್ಯಾಯವನ್ನು ಆರಂಭಮಾಡಿದರು. ಇದು ಮುಂದೆ ಬರೆಯಲ್ಪಟ್ಟಿರುವುದು.

ಕುರಾನ:—ತಾಹಾ ಮಾಲ್ ಅನ್ಜಲ್ನಾ ಅಲೈಕಲ್ ಕುರ್ಆನ ಲೆತ ಷ್ಕಾ ಇಲ್ಲಾ ತಜ್ಕಿರತಲ್ಲಿ ಮೈಯ್ಯಖಷಾ, ತಂಜೀಲಂ ಮಿನ್ಮನ್ಖಲಾಲ್ ಅರ್ದ ವಸ್ಸಮಾವಾತಿಲ್ ಉಲಾ—ಅರ್ರಹ ಮಾನೂ ಅಲಲ್ ಅರ್ಷಿಸ್ ತವಾ, ಲಹು ಮಾಫಿಸ್ ಸಮಾ ವಾತೆ ವಮಾ ಫಿಲ್ಅರ್ದೆ ವಮಾ ಬೈನಹುಮಾ ವಮಾ ತಹ್ತಸ್ಸರಾ—ವಇನ್ತಜಹರ್ ಬಿಲ್ ಕೌಲೆ ಫ ಇನ್ನಹು ಯಾಲಮುಸ್ಸಿರ್ರ ವಅಖ್ಫಾ ಅಲ್ಲಾಹು ಲಾ ಇಲಾಹ ಇಲ್ಲಾ ಹುಲಹುಲ್ ಅಸ್ಮಾವುಲ್ ಹುಸ್ನಾ.

(೨೦ನೇ ಅಧ್ಯಾಯ ೧ನೇ ಸಂಧಿ)

ಅರ್ಥ:—ಎಲೈ, ಮನುಜಾ! ಈ ಕುರಾನವು (ಈಶ್ವರಗೀತೆಯು) ಜನರಿಗೆ ದುಃಖಕೊಡಲಿಕ್ಕೆ ನಾವು ಪ್ರಕಟಿಸಿಲ್ಲ. ಆದರೆ ಭಕ್ತಿಯುಳ್ಳವರಿಗೆ ತನ್ನ ನಿಜತ್ವವನ್ನು ತಿಳಿದುಕೊಳ್ಳಲು ಉಂಟುಮಾಡಿದ್ದಾಗಿದೆ. ಯಾವನು ಮೇಲಿರುವ ಆಕಾಶವನ್ನು ಮತ್ತು ಪೃಥ್ವಿಯನ್ನು ಹುಟ್ಟಿಸಿದ್ದಾನೋ ಅವನೇ ಇದನ್ನು ಪ್ರಕಟಪಡಿಸಿರುತ್ತಾನೆ. (ಅವನು ಎಂಥವನೆಂದರೆ):—ಬ್ರಹ್ಮಶಕ್ತಿಯುಳ್ಳವನು, ಸೃಷ್ಟಿಕರ್ತನು, ಶಕ್ತಿಗೆ ಅಧಿಕಾರಿಯು. ತ್ರೈಲೋಕ್ಯಗಳನ್ನೂ ಅದರಲ್ಲಿ ನೆಲಗೊಂಡಿರುವ ಸಮಸ್ತ ಚರಾಚರ ವಸ್ತುಗಳನ್ನೂ ಮತ್ತು ಸರ್ವ ಪಾತಾಳಗಳಲ್ಲಿರುವ ಸಮಸ್ತ ಪದಾರ್ಥಗಳನ್ನೂ ತನ್ನ ಸ್ವಾಧೀನ ಮಾಡಿ

ಕೊಂಡಿರುತ್ತಾನೆ. ಮತ್ತು ತಾವು ಫಂಟಾಫೋಷದಿಂದಾಗಲೀ ಮತ್ತು ರಹಸ್ಯ ಮೊತುಗಳನ್ನು ಗುಪ್ತರೀತಿಯಿಂದ ಉಚ್ಚರಿಸುವದಾದರೂ ಅವನು ಎಲ್ಲಾ ಕೇಳುತ್ತಾನೆ. ಅಲ್ಲಾಹನೇ ಸರ್ವಾಂತರ್ಯಾಮಿ. ಅವನ ಹೆಸರುಗಳು ಬಹಳ ಪವಿತ್ರವಾಗಿವೆ.

ಹಜರತ್ ಉಮರ್‌ರವರು ಈ ವಾಕ್ಯಗಳನ್ನು ಕೇಳಿ "ಇದರಲ್ಲಿ ಸೆನಗೆ ಯಾವುದೂ ವ್ಯತ್ಯಾಸವೇ ಕಂಡುಬರುವುದಿಲ್ಲ ; ಇದು ಶ್ರೇಷ್ಠವಾದ ಧರ್ಮವಾಗಿದೆ" ಎಂದು ಅಲ್ಲಿಂದ ಹೊರಟು ಹಜರತ್ ಮಹಮ್ಮದ್‌ರವರು ಇದ್ದ ಸ್ಥಳವನ್ನು ಕುರಿತು ಹೊರಟರು. ಹಜರತ್‌ರವರು ಮತ್ತು ಅವರ ಶಿಷ್ಯಮಂಡಲಿಯು ತಮ್ಮ ಯಾವಕಾರ್ಯಗಳನ್ನೂ ಗೋಪ್ಯವಾಗಿಯೇ ಮಾಡುತ್ತಿದ್ದರು. ಹಜರತ್ ಮಹಮ್ಮದ್‌ರವರೂ ಇವರ ಶಿಷ್ಯ ಮಂಡಲಿಯೂ ಒಂದು ಮನೆಯಲ್ಲಿ ತಮ್ಮ ಸಮಾಜದ ಕಾರ್ಯವನ್ನು ನಡೆಸುತ್ತಿರಲು, ಹಜರತ್ ಉಮರ್‌ರವರು ಬಾಗಿಲಬಳಿಯಲ್ಲಿ ನಿಂತು "ಬಾಗಿಲನ್ನು ತೆರೆಯಬೇಕೆಂದು" ಪ್ರಶ್ನಿಸಿದರು. ಹಜರತ್‌ರವರ ಶಿಷ್ಯಮಂಡಲಿಯಲ್ಲೊಬ್ಬನು ಬಾಗಿಲಿನ ಕಂಡಿಯಿಂದ ಹಜರತ್ ಉಮರ್‌ರವರು ಕತ್ತಿ ಹಿಡಿದಿರುವುದನ್ನುನೋಡಿ ಘಾಬರಿಯಿಂದ ಓಡುತ್ತಾ ಹಜರತ್ ಮಹಮ್ಮದ್‌ರವರನ್ನು ಸೇರಿ ಈಕ್ಷಿಸಿದ ಸನುಸ್ತ ವಿಷಯವನ್ನೂ ಬಿತ್ತರಿಸಿದರು. ಹಜರತ್‌ರವರು ತ್ರಿಕಾಲಜ್ಞಾನಿಯಾಗಿದ್ದುದರಿಂದ ಸ್ವಲ್ಪವೂ ಭಯಪಡದೆ, ಬಾಗಿಲನ್ನು ತೆರೆಯಬೇಕೆಂದು ಪ್ರತ್ಯುತ್ತರವನ್ನಿತ್ತರು. ಅಪ್ಪಣೆಯ ಮೇರೆಗೆ ಬಾಗಿಲನ್ನು ತೆರೆಯೋಣ, ಹಜರತ್ ಉಮರ್‌ರವರು ಮೌನದಿಂದ ಒಳಗೆ ಪ್ರವೇಶಿಸಿ, ಗಂಭೀರವಾದ ಧ್ವನಿಯಿಂದ "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದರ್ ರಸೂಲಿಲ್ಲಾಹೆ" ಎಂಬ ಪವಿತ್ರವಾಕ್ಯವನ್ನು ಉಚ್ಚರಿಸಿದರು. ಆಕಸ್ಮಿತವಾದ ಈ ವಿಷಯವನ್ನು ಹಜರತ್‌ರವರ ಶಿಷ್ಯಮಂಡಲಿಯು ಕೇಳಿ ಬೆರಗಾಗಿ ಏಕಧ್ವನಿಯಿಂದ ಪರಮಾತ್ಮನ ಪ್ರಾರ್ಥನವನ್ನು ಮಾಡಿದರು. ಆ ದಿವಸ ಅವರಿಗೆ ಎಂಥ ಸುದಿವಸ! ಯಾವ ಪುರುಷನು ಬದ್ಧದ್ವೇಷಿಯಾಗಿ ಹಜರತ್ ಮಹಮ್ಮದ್‌ರವರನ್ನು ನಾಶಮಾಡಲು ಪ್ರಯತ್ನಿಸಿ ಹಿಂಬಾಲಿಸಿದನೋ ಈಗ ಅದೇ ಪುರುಷನು ಸಾತ್ವಿಕಭಾವದಿಂದ ಹಜರತ್‌ರವರ ಶಿಷ್ಯಮಂಡಳಿಯಲ್ಲಿ ಬಬ್ಬನಾಗಿರುತ್ತಾನೆ! ಇದೊಂದು ಭಗವಂತನ ಲೀಲಾಜಾಲವಲ್ಲವೇ? ಆಗಿನಿಂದಲೂ

ಹಜರತ್ ಮುಹಮ್ಮದ್‌ರವರು ಮತ್ತು ಅವರು ಶಿಷ್ಯಮಂಡಲಿಯು ಜೈಲಿನಲ್ಲಿ ಪ್ರಾರ್ಥನೆ ಮಾಡುವುದಕ್ಕೆ ತೊಡಗಿದರು.

ಇದನ್ನು ಕಂಡು ಇವರ ಕತ್ತುಗಳು ಮತ್ತಷ್ಟು ರೇಗಿಹೋದರು. ಹಜರತ್‌ರವರ ವ್ಯಾಖ್ಯಾನವನ್ನು ಕೇಳುವುದಕ್ಕೆ ಬರುವ ಜನರನ್ನು ನೋಡಿ, ಅವರ ಕತ್ತುಗಳು ವ್ಯಾಖ್ಯಾನವನ್ನು ಮುಕ್ತಾಪಟ್ಟಣದಲ್ಲಿ ನಿಲ್ಲಿಸಿದರು. ಆದುದರಿಂದ ಹಜರತ್‌ರವರು ಮುಕ್ತಾಪಟ್ಟಣವನ್ನು ಬಿಟ್ಟು ಅದರ ಸಮೀಪ ಪ್ರದೇಶದಲ್ಲಿರುವ "ತಾಯಿಫ್" ಎಂಬ ಪಟ್ಟಣಕ್ಕೆ ಹೋಗಿ ವ್ಯಾಖ್ಯಾನವನ್ನು ಕೊಡುವುದಕ್ಕೆ ಪ್ರಾರಂಭಿಸಿದರು. ಹಜರತ್‌ರವರ ಚಿಕ್ಕಪ್ಪನವರಾದ ಅಬೂ-ಲಹಬ್ ಎಂಬಾತನು ಹಜರತ್‌ರವರನ್ನು ಅನುಸರಿಸಿ ವ್ಯಾಖ್ಯಾನಕಾಲದಲ್ಲಿ ಅಲ್ಲಿ ನೆರೆದಿರುವ ಜನರನ್ನು ಕುರಿತು "ಎಲ್ಲ ಜನರೇ! ಇವನು ನನ್ನ ಅಣ್ಣನ ಮಗನು, ಇವನಿಗೆ ಹುಚ್ಚು ಹಿಡಿದಿರುವುದು, ಇವನಿಗೆ ಯಾವುದೋ ರೋಗವುಂಟಾಗಿ ತಲೆ ಕೆಟ್ಟುಹೋಗಿದೆ, ತಾವುಗಳು ಈತನ ಮಾತನ್ನು ಕೇಳಬಾರದು" ಎಂದು ಗಟ್ಟಿಯಾಗಿ ಹೇಳುತ್ತಿದ್ದನು. ಹಜರತ್‌ರವರು ಇವನ ಮಾತನ್ನು ಲಕ್ಷ್ಯಮಾಡದೆ ವ್ಯಾಖ್ಯಾನವನ್ನು ಮಾಡುತ್ತಿದ್ದರು. ಧರ್ಮದ್ವೇಷಿಗಳು ವ್ಯಾಖ್ಯಾನ ಮಧ್ಯದಲ್ಲಿ ಗಲಿಬಿಲಿಯನ್ನು ಮಾಡುತ್ತಾ, ಕಲ್ಲು ಮಣ್ಣುಗಳಿಂದ ಪ್ರಹಾರಿಸುವುದಕ್ಕೆ ತೊಡಗಿ ಹಜರತ್‌ರವರನ್ನು ಅಲ್ಲಿ ನಿಲ್ಲಗೊಡದೆ ಊರಿನ ಹೊರಗೆ ಓಡಿಸಿಬಿಟ್ಟರು. ಹೀಗೆ ಓಡಿಬರುತ್ತಿರುವುದನ್ನು ಕೆಲವು ದ್ವೇಷಿಗಳು ಕಂಡು ಹಜರತ್‌ರವರ ಕಾಲುಗಳಮೇಲೆ ಕೋಲುಗಳನ್ನು ಬೀರಿದರು. ಇದರ ಯಾತನೆಯನ್ನು ತಡೆಯಲಾರದೆ ನೆಲದಲ್ಲಿ ಕುಳಿತುಕೊಳ್ಳಲು, ಅದರಲ್ಲೂ ಬಿಡದೆ ಇಬ್ಬರು ಬಂದು ಕಂಕಳಲ್ಲಿ ಕೈಗಳನ್ನು ಹಾಕಿ "ನಮ್ಮ ಊರನ್ನು ಬಿಟ್ಟು ಹೊರಗೆಹೋಗಬೇಕು" ಎಂದು ಬಲೋದ್ಬಂಧನವನ್ನು ಮಾಡಲು ಕಡೆಗೆ ಹೋಗಬೇಕಾಯಿತು. ಹಜರತ್‌ರವರು ಈ ಕಷ್ಟಗಳನ್ನು ಅನುಭವಿಸಿ ಊರಿನ ಹೊರಗೆ ಬಂದು ಭಗವಂತನನ್ನು ಸಾಷ್ಟಾಂಗ ಪ್ರಮಾಣದಿಂದ ಮೊರೆಯಿಟ್ಟು "ಹೇ! ಭಕ್ತಪಾಲಕ! ಹೇ! ಸಜ್ಜನೋದ್ಧಾರಕ! "ಈ ಜನರು ನನ್ನನ್ನು ತಿಳಿಯಲಾರರು, ಇವರಿಗೆ ಅಜ್ಞಾನವು ಮುಚ್ಚಿ ಕೊಂಡಿದೆ, ಇವರಿಗೆ ಸುಜ್ಞಾನವನ್ನು ಇತ್ತು ರಕ್ಷಿಸು" ಎಂದು ಪ್ರಾರ್ಥಿಸಿದರು. ಪ್ರಾರ್ಥನೆಯಾದ ತರುವಾಯ ಶಿವದೂತನೊಬ್ಬನು

ಬಂದು "ತಾವು ಅಪ್ಪಣೆಯನ್ನು ಕೊಟ್ಟಲ್ಲಿ ಈ ಪಟ್ಟಣವನ್ನೇ ಕೆತ್ತು ನಾಶಮಾಡುವೆ" ನೆಂದು ಹೇಳಲು, ಅದಕ್ಕೆ ಸತ್ಯಸ್ವರೂಪಿಗಳಾದ ಹಜರತ್‌ರವರು "ಹಾಗೆ ಮಾಡಬಾರದೆಂದೂ, ಇವರು ಸರಿಯಾದ ಮಾರ್ಗವನ್ನು ಹಿಡಿಯಲಾರದೆ ಇದ್ದರೆ ಇವರ ಪುತ್ರರಾದರೂ ಕೂಡ ಒಳ್ಳೇ ಹಾದಿಗೆ ಬಂದಾರು" ಎಂದೂ ಅಪ್ಪಣೆ ಮಾಡಿದರು.

ಆ ದಿವಸ ಅಲ್ಲಿಂದ ಆ ಸ್ಥಳವನ್ನು ಬಿಟ್ಟು ಮುಕ್ಕಾಪಟ್ಟಣಕ್ಕೆ ದಯ ಮಾಡಿಸಿ ಅಲ್ಲಿಯೂ ತಮ್ಮ ಧರ್ಮಪ್ರಚಾರವನ್ನು ಮಾಡುತ್ತಿದ್ದರು. ಕೆಲವರು ಹಿರೇಮನೆತನದವರು ಬಂದು ಹಜರತ್‌ರವರನ್ನು ಕುರಿತು "ತಾವು ತಮ್ಮ ಧರ್ಮಪ್ರಚಾರವನ್ನು ಮಾಡಬಾರದು" ಎಂದು ಹೇಳಲು, ಅದಕ್ಕೆ ಹಜರತ್‌ರವರು ಅವರನ್ನು ಕುರಿತು "ತಾವು ಏನುಬೇಕಾದರೂ ಮಾಡಬಹುದು, ನಾನು ಯಾವ ಕೆಲಸವನ್ನು ಮಾಡಬೇಕೊ ಆ ಕೆಲಸವನ್ನು ನಾನು ಎಂದಿಗೂ ಬಿಡಲಾರೆ, ಇದರ ಪರಿಣಾಮವನ್ನು ತಾವೇ ನೋಡುವಿರಿ, ಪರಮಾತ್ಮನು ನನಗೆ ತೊಂದರೆ ಕೊಡುವವರನ್ನು ಬಂದು ದಿವಸ ನನ್ನ ಮುಂದೆ ಕೈಕಾಲಿಗೆ ಬೇಡಿಹಾಕಿಸಿಕೊಂಡು ತರುವನು, ಕಡಗೆ ನನ್ನ ಜಯವೇ ಇರುವುದು" ಎಂದು ಪ್ರತ್ಯುತ್ತರವನ್ನಿತ್ತರು. ಈ ಉತ್ತರದಿಂದ ಮುಕ್ಕಾಪಟ್ಟಣದವರು ವ್ಯಸ್ತಚಿತ್ತರಾಗಿ, ಈ ಶಬ್ದಗಳಿಂದ ನಮಗೆ ನಿಂದ್ಯವಾಯಿತೆಂದು ತಿಳಿದು, ಹಜರತ್‌ರವರ ಚಿಕ್ಕಪ್ಪನವರಾದ "ಅಬುತಾಲಿಬ್" ರವರ ಸಮಕ್ಷವನ್ನು ಹೊಂದಿ, "ನಾವು ನಿಮ್ಮ ಮರ್ಯಾದೆಗೂ ವೈದ್ಧಾಪ್ಯದೆಸೆಗೂ ಮರ್ಯಾದೆ ಮಾಡುತ್ತೇವೆ; ಆದರೆ ನಿಮ್ಮ ಮಗನಾದ ಮಹಮದ್‌ನು ನಮ್ಮ ಮೂರ್ತಿಗಳಿಗೆ ವಿರೋಧವಾಗಿ ಮಾತಾಡುತ್ತಾನೆ. ನಾವು ಎಷ್ಟು ಹೇಳಿದರೂ ಸ್ವಲ್ಪವೂ ಲಕ್ಷಿಸದೆ ನಮ್ಮ ಮೂರ್ತಿಗಳಿಗೆ ಖಂಡನೆಮಾಡುತ್ತಾನೆ. ಆದ್ದರಿಂದ, ತಾವು ಅವರನ್ನು ಕರೆದು "ನಮ್ಮ ಮೂರ್ತಿಗಳಿಗೆ ಖಂಡನೆ ಮಾಡದಹಾಗೆ ಮಾಡಿದರೆ ನಾವು ಅವರಿಗೆ ಹೆಚ್ಚಾದ ಐಶ್ವರ್ಯವನ್ನು ಕೊಡುವೆವು, ಮತ್ತು ಬಹು ಸುಂದರಿಯಾದ ಸ್ತ್ರೀಯನ್ನೂ ಕೂಡ ಕೊಡಿಸುವೆವು. ಹಾಗೆ ಇವೆರಡಕ್ಕೂ ಒಪ್ಪದಿದ್ದಲ್ಲಿ ಯುದ್ಧವನ್ನು ಮಾಡಬೇಕಾದೀತು" ಎಂದು ಹೇಳಿದರು. ಈ ವಿಷಯವನ್ನು ಅವರ ಚಿಕ್ಕಪ್ಪನವರು ಕೇಳಿ, ಮಹಮ್ಮದ್‌ರವರನ್ನು ಕರೆದು, "ಎಲ್ಲೆ ಬ್ಬುಲಕನ್ನೇ! ಅವರ ಮೂರ್ತಿಗಳನ್ನು ನಿಂದೆಮಾಡಬೇಡ; ಅವರು

ಬೇಕಾದ ದ್ರವ್ಯವನ್ನು ಸಂಪಾದಿಸಿಕೊಡುವರು; ಅರಬ್ಬೀದೇಶದಲ್ಲಿರುವ ಸುಂದರ ಸ್ತ್ರೀಯರಲ್ಲಿ ಸುಂದರ ಯುವತಿಯನ್ನು ಕೊಡುವರು; ಆದ್ದರಿಂದ, ನೀನು ಈ ಕೆಲಸಕ್ಕೆ ಕೈಹಾಕಬೇಡ" ಎಂದು ಬೋಧಿಸಲು, ಅದಕ್ಕೆ ಹಜರತ್‌ರವರು "ಹೇ! ಕಾಕ! ನನ್ನನ್ನು ನೀವು ತಿಳಿದಿರುವುದಿಲ್ಲ. ನಾನು ಜಗತ್ತಿನ ದುಃಖವನ್ನು ದೂರವಾಡಲು ಬಂದಿರುತ್ತೇನೆಯೇಹೊರತು ಐಶ್ವರ್ಯಕ್ಕೂ, ಸುಂದರಸ್ತ್ರೀಯನ್ನು ಮದುವೆಯಾಗಿ ಸುಖವನ್ನು ಭೋಗಿಸಲೂ ಅಲ್ಲ. ಈ ಮೂಢಜನರು ಬಲಗೈಯ್ಯಲ್ಲಿ ಸೂರ್ಯನನ್ನೂ, ಎಡಗೈಯ್ಯಲ್ಲಿ ಚಂದ್ರನನ್ನೂ ಕೊಟ್ಟರೂ, ದೇವರಿಂದ ನಾನು ಏತಕ್ಕೆ ಕಳುಹಿಸಲ್ಪಟ್ಟಿರುವೆನೋ ಅದಕ್ಕೂತೀರ್ಥರ ಬಂದು ಹೆಜ್ಜೆಯಾದರೂ ಹಿಂದಿರುಗುವವನಲ್ಲ. ಇದು ಖಂಡಿತ" ವೆಂದು ದೃಢವಾಗಿ ಹೇಳಿದರು. ಈ ಮಾತನ್ನು ಅವರ ಕಕ್ಕನವರು ಕೇಳಿ ಬೇರಗಾಗಿ ಕುಳಿತರು.

ಹೀಗೆ, ಅವರ ಶತ್ರುಗಳು ಪರಂಪರೆಯಾಗಿ ಕಷ್ಟವನ್ನು ಕೊಡುತ್ತಲೇ ಇದ್ದರು. ಅದರಲ್ಲೂ ತಮ್ಮ ಧರ್ಮಕಾರ್ಯವನ್ನು ಎಂದಿಗೂ ಬಿಡುತ್ತಿರಲಿಲ್ಲ. ಒಂದುದಿವಸ ಹಜರತ್‌ರವರು ಪ್ರಾರ್ಥನೆಮಾಡುತ್ತಿರಲು, ದುಷ್ಟರಾದವರು ಒಂಟೆಯ ಕರುಳುಗಳನ್ನು ಅವರ ಕುತ್ತಿಗೆಯಲ್ಲಿ ಹಾಕಿದರು. ಹಾದಿಯಲ್ಲಿ ಹೋಗುತ್ತಿರುವಾಗ ಮುಳ್ಳುಗಳನ್ನು ಹಾಕುತ್ತಿದ್ದರು. ಮುಸಲ್ಮಾನರಾದವರನ್ನು ಕಾಯುತ್ತಿದ್ದ ಬಿಸಲಿನಲ್ಲಿ ಕಟ್ಟಿಹಾಕುತ್ತಿದ್ದರು. ಇನ್ನು ಕೆಲವರಿಗೆ ಅತ್ಯಧಿಕವಾದ ಶಿಕ್ಷೆಗಳನ್ನು ಕೊಡುತ್ತಿದ್ದರು. ಹೀಗೆ ಹದಿಮೂರು ವರ್ಷಗಳವರೆಗೂ ವರ್ಣಿಸಲಸಾಧ್ಯವಾದ ಕಷ್ಟಗಳನ್ನು ಅನುಭವಿಸಿ, ಕಡೆಗೆ ತಮ್ಮ ಭಕ್ತರನ್ನು ಪರದೇಶಗಳಿಗೆ ಹೋಗಬೇಕೆಂದು ಅಪ್ಪಣೆ ಮಾಡಿದರು. ಇದರಂತೆ ಕೆಲವರು ಅಬಿಸೀನಿಯಾ ದೇಶಕ್ಕೂ ಮತ್ತೆ ಕೆಲವರು ಈಜಿಪ್ಟ್, ಮದೀನ ದೇಶಗಳಿಗೂ ಪ್ರಯಾಣ ಬೆಳಸಿದರು.

ಒಂದಾನೊಂದುದಿವಸ ಮಕ್ಕಾದವರು ಹಜರತ್ ಮಹಮ್ಮದ್‌ರವರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದಾಗ ಪರಮಾತ್ಮನು ಹಜರತ್ ಮಹಮ್ಮದ್‌ರವರಿಗೆ ಓಂಕಾರದಿಂದ ಈ ವಿಷಯವನ್ನು ತಿಳಿಸಲು, ಆಗ ಅವರು ತಮ್ಮ ಅನುಯಾಯಿಯಾದ ಹಜರತ್ ಸಿದ್ದೀಕರವರ ಮನೆಯನ್ನು ಸೇರಿ, ಸಮಸ್ತ ವಿಷಯಗಳನ್ನೂ ತಿಳಿಸಿ, ಈ ಪಟ್ಟಣವನ್ನು

ಬಿಟ್ಟು ಹೊರಟುಹೋಗಬೇಕೆಂದು ಸೂಚಿಸಿದರು. ಆದರೆ ಯಾವ ಪಟ್ಟಣವನ್ನು ಕುರಿತು ಹೇಗೆಹೋಗಬೇಕೆಂಬ ವಿಷಯವು ಗೊತ್ತಾಗಲಿಲ್ಲವಾದ್ದರಿಂದ, ಹಜರತ್‌ರವರು ಭಗವಂತನನ್ನು ಕುರಿತು ಪ್ರಾರ್ಥಿಸಲು, ತಮ್ಮ ಕನಸಿನಲ್ಲಿ (  ) ಬಂದು ವನವನ್ನು ಕಂಡು, ಅದು ಮದೀನೆ ಪಟ್ಟಣದ ವನ ಅಥವಾ ಯಮಾನ ಪಟ್ಟಣದ ವನಗಳಹಾಗೆ ಕಂಡುಬರುತ್ತದೆಂಬದಾಗಿಯೂ, ಮದೀನಾಪಟ್ಟಣವು ತನಗೆ ನಿಲ್ಲುವುದಕ್ಕೆ ಉತ್ತಮ ಸ್ಥಾನವೆಂದು ತಿಳಿದು, ಈದಿವಸ ರಾತ್ರಿಯೇ ಅಲ್ಲಿಗೆ ಪ್ರಯಾಣ ಮಾಡಬೇಕೆಂದೂ ಯೋಚಿಸಿದರು ರಾತ್ರಿಯು ಪ್ರಾರಂಭವಾಯಿತು. ಹಜರತ್ ಮಹಮ್ಮದ್‌ರವರು ಹಜರತ್ ಅಲಿಯವರನ್ನು ತಮ್ಮ ಸ್ಥಳದಲ್ಲಿ ಮಲಗಿಸಿ, ತಾವೂ ಮತ್ತು ಹಜರತ್ ಸಿದ್ದೀಖರವರೂ ಒಂಟೆಯನ್ನು ಮೇಯಿಸುವವಂತೆ ವೇಷವನ್ನು ಮರೆಯಿಸಿಕೊಂಡು ಬುತ್ತಿ ಮುಂತಾದುವುಗಳನ್ನು ಕಟ್ಟಿಕೊಂಡು ಮದೀನಾಪಟ್ಟಣದ ಕಡೆಗೆ ಪ್ರಯಾಣ ಬೆಳಸಿದರು. ರಾತ್ರಿಯೆಲ್ಲವೂ ಒಂಟೆಯನ್ನು ಓಡಿಸುತ್ತಾ ಬೆಳಗಾಗುವುದರೊಳಗೆ ಒಂಟೆಯನ್ನು ಬಿಟ್ಟು ಸವಿೂಪದ ಗುಹೆಯಲ್ಲಿ ಅಡಗಿಕೊಂಡರು. ಬೆಳಗಾದತರುವಾಯ ಅವರ ಶತ್ರುಗಳು ಹಜರತ್ ಮಹಮ್ಮದ್‌ರವರು ಮನೆಯಲ್ಲಿ ಇಲ್ಲದೇ ಇರುವುದನ್ನು ನೋಡಿ, ಒಂಟೆ ಹೆಜ್ಜೆಯನ್ನು ಹಿಡಿದು ನಡೆಯುತ್ತಾ ಬಂದು ಗವಿಯ ಪ್ರದೇಶವನ್ನು ತಲುಪಿದರು. ಆ ಗವಿಯ ಮುಂಭಾಗದಲ್ಲಿ ಬಂದು ಜೇಡರಹುಳುವು ತನ್ನ ನಿವಾಸಸ್ಥಾನವನ್ನೂ ಮತ್ತೊಂದು ಪಾರಿವಾಳವು ಮೊಟ್ಟೆಯನ್ನೂ ಇಟ್ಟು ಕುಳಿತಿದ್ದು ಶತ್ರುಗಳು ಬಂದ ತಕ್ಷಣವೇ ಹಾರಿಹೋಯಿತು. ಇದರಿಂದ ಶತ್ರುಗಳು ಇಲ್ಲಿ ಹಜರತ್‌ರವರು ಇರಲಾರರೆಂದು ತಿಳಿದು ಹಿಂದಿರುಗಿದರು. ಆದರೆ ಗವಿಯ ಮುಖಪ್ರದೇಶವು ಭೂಮಿಯಸಮಕ್ಕೆ ಇದ್ದುದರಿಂದ, ಗವಿಯ ಪ್ರದೇಶದಲ್ಲಿ ಬಂದ ಶತ್ರುಗಳನ್ನು ಹಜರತ್ ಸಿದ್ದೀಖ್‌ರವರು ನೋಡಿ "ಹೇ! ಗುರುಗಳೇ! ಶತ್ರುಗಳು ಬಂದರು ಎಂದು ಹೇಳಲು," ಅದಕ್ಕೆ ಗುರುಸ್ವರೂಪಿಯಾದ ಹಜರತ್‌ರವರು "ಹೆದರಬೇಡ, ದೇವರು ನಮ್ಮ ಸಂಗಡವಿರುವನು" ಎಂದು ಪ್ರತ್ಯುತ್ತರವನ್ನಿತ್ತರು.

ಶತ್ರುಗಳು ತಮ್ಮ ಮನಸ್ಸಿನ ಕೋರಿಕೆಯು ಈಡೇರಿದುದರಿಂದ "ಯಾರು ಹಜರತ್ ಮಹಮ್ಮದ್‌ರವರನ್ನು ಹಿಡಿದುತರುವರೋ ಅಂಥವ

ರಿಗೆ ನೂರು ಒಂಟೆಗಳನ್ನು ಇನಾಮಾಗಿ ಕೊಡುತ್ತೇವೆಂದು ಪ್ರಸಿದ್ಧ ಪತ್ರಿಕೆಯು ಪ್ರಕಟಿಸಿತು. ಒಂಟೆಗಳ ಆಸೆಗೋಸ್ಕರ ಅನೇಕ ಜನರು ಹುಡುಕಲು ಹೊರಟರು. ಅವರೊಳಗೆ ಇಬ್ಬರಲ್ಲಿ "ಸುರೇಖಾ" ಎಂಬಾತನು ಹಜರತ್‌ರವರು ಪ್ರಯಾಣಬೆಳೆಸಿದ್ದ ದಾರಿಯನ್ನು ಹಿಡಿದು ದೂರದಿಂದ ಬಾಣವನ್ನು ಸೆಳೆದ ಕುದುರೆಯನ್ನು ಮುಂದರಿಸಿದನು. ಆದರೆ, ಕುದುರೆಯು ಗೊರಸು ಹಾದಿಯೆಲ್ಲಿ ಬಿದ್ದಿದ್ದ ಕಲ್ಲಿಗೆ ತಾಕಿ ಮುಗ್ಗರಿಸಿದುದರಿಂದ ಇದು ಅಪಶಕುನವೆಂದು ಸ್ವಲ್ಪಹೊತ್ತು ಯೋಚಿಸಿ, ಪುನಃ ಕುದುರೆಯನ್ನು ವೇಗವಾಗಿ ಬಿಡಲಾರಂಭಿಸಿದನು. ಕುದುರೆಯು ಸ್ವಲ್ಪದೂರ ಹೋಗಿ ತತ್‌ಕ್ಷಣವೇ ಅದರ ಎರಡು ಕಾಲುಗಳೂ ಭೂಮಿಯಲ್ಲಿ ಸಿಕ್ಕಿಕೊಂಡವು. ಆದ್ದರಿಂದ ಇದು ಅಪಶಕುನವೆಂದು ತಿಳಿದು ಪ್ರಯಾಣಬೆಳೆಸಿದ್ದವನು ಮುಂದೆ ಹೋಗದೆ ಹಿಂದಿರುಗಿದನು. ಹೇಗೋ ಪರಮಾತ್ಮನು ಎಲ್ಲ ಶತ್ರುಗಳಿಂದುಳಿಸಿ ಮದೀನಾಪಟ್ಟಣಕ್ಕೆ ಸೇರಿಸಿದನು.

ಕೆಲವು ದಿವಸಗಳು ಕಳೆದುಹೋದುವು. ಸಮೂಹವು ಅಭಿವೃದ್ಧಿಯಾಗಲು ಪ್ರಾರಂಭಿಸಿತು. ಈ ಸುದ್ದಿಯನ್ನು ಮಕ್ಕಾಪಟ್ಟಣದವರು ಕೇಳಿ ಬಹು ಕೋಪೋದ್ರೇಕವುಳ್ಳವರಾಗಿ, ಒಂದು ಸಭೆಯನ್ನು ಸೇರಿಸಿ, "ನಾವೆಲ್ಲರೂ ಒಂದಾಗಿ ಸೇರಿ ಮದೀನಾಕ್ಕೆ ಪ್ರಯಾಣಮಾಡಿ ಹಜರತ್ ರವರನ್ನು ಕೊಲ್ಲಬೇಕೆಂದು" ಠರಾವು ಮಾಡಿದರು ಆದ್ದರಿಂದ, ಒಂದು ಸಾವಿರ ಜನ ಗುಂಪುಳ್ಳ ಸೈನ್ಯವು, ಶಸ್ತ್ರಗಳಿಂದ ಸನ್ನದ್ಧರಾಗಿ ಮದೀನಾ ಪಟ್ಟಣದ ಸಮೀಪದಲ್ಲಿರುವ "ಬದರ್" ಎಂಬ ಮೈದಾನದಲ್ಲಿ ಇಳಿದರು. ಈ ಸಮಾಚಾರವು ಮದೀನಾದಲ್ಲಿರುವ ಹಜರತ್ ಮಹಮ್ಮದ್‌ರವರಿಗೆ ತಿಳಿಯಲು, ಅವರೂ ಕೂಡ ಯುದ್ಧಕ್ಕೆ ಸನ್ನದ್ಧರಾದರು. ಇವರ ಸೈನ್ಯದಲ್ಲಿ ಮುನ್ನೂರ ಹದಿಮೂರು ಜನಗಳೂ, ಎದರುಪಕ್ಷದಲ್ಲಿ ಸಾವಿರ ಮಂದಿಗಳೂ ಇದ್ದರು. ಈ ಎರಡು ಪಕ್ಷದವರಿಗೂ "ಬದರ್" ಸ್ಥಳದಲ್ಲಿ ಯುದ್ಧವಾಯಿತು. ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಹಜರತ್ ಮಹಮ್ಮದ್‌ರವರು ಯುದ್ಧದ ಮೈದಾನದ ಸಮೀಪದಲ್ಲಿದ್ದ ಬಂದು ಗುಡಿಸಲಿಗೆ ದಯಮಾಡಿಸಿ, ಪರಮಾತ್ಮನಿಗೆ ಸಾಷ್ಟಾಂಗನಮಸ್ಕಾರ ಮಾಡಿ "ಎಲೈ ಪರಮಾತ್ಮನೇ! ನಿನ್ನ ಸಮೂಹವೆಲ್ಲವೂ ನಶಿಸಿಹೋದಮೇಲೆ ನಿನ್ನ ಸಾಮಾನ್ಯತೆಯನ್ನು ಪರಿಸುವವರಾರು ? ಎಲೈ ಸರ್ವಶಕ್ತನೇ!

ನಿನ್ನನ್ನು ನಂಬಿದ ಪಂಗಡವನ್ನು ನೀನು ಉಳಿಸದೇ ಇದ್ದರೆ ಮತ್ತಾರು ಕಾಪಾಡುವರು?" ಎಂದು ಪ್ರಾರ್ಥಿಸುತ್ತಾ ಹೊರಗೆಬಂದು, ಬಂದು ಹಿಡಿ ಮರಳನ್ನು ಕೈಯ್ಯಲ್ಲಿ ತೆಗೆದುಕೊಂಡು ತಮ್ಮ ಶತ್ರು ಸೈನಿಕರ ಕಡೆಗೆ ಎಸೆಯಲು, ತತ್‌ಕ್ಷಣವೇ ಆ ದಿಕ್ಕಿನಿಂದ ಬಿರುಗಾಳಿ ಬೀಸುವುದಕ್ಕೆ ಪ್ರಾರಂಭವಾಗಿ, ಧೂಳೆಲ್ಲವೂ ಜದರಿ ಶತ್ರುಗಳ ಕಣ್ಣಿನಲ್ಲಿ ಬೀಳಲಾರಂಭಿಸಿತು. ಇದಾದ ಸ್ವಲ್ಪಹೊತ್ತಿನಮೇಲೆ ವೃಷ್ಟಿಧಾರೆಯು ಪ್ರಾರಂಭಿಸಿ ಹಜರತ್‌ರವರ ಕಡೆ ಇದ್ದ ಸ್ಥಳಗಳು ನೀರಿನಿಂದಾವೃತವಾದವು. ಆದ್ದರಿಂದ ಇವರ ಕುದುರೆಗಳಿಗೂ ಮತ್ತು ಜನರಿಗೂ ಕುಡಿಯಲು ನೀರು ಸಿಕ್ಕಿತು. ಆದರೆ, ಶತ್ರುಗಳಕಡೆಗೆ ಯಾವ ಮಳೆಯೂ ಬೀಳಲಿಲ್ಲ. ಆದ್ದರಿಂದ ಅವರ ಕಡೆಯವರು ನೀರಿಲ್ಲದೆ ಬಹಳ ಕಷ್ಟವನ್ನು ಅನುಭವಿಸಬೇಕಾಯಿತು. ಯುದ್ಧ ಪ್ರಾರಂಭವಾದ ಸ್ವಲ್ಪ ಹೊತ್ತಿನಲ್ಲೇ ಮಕ್ಕಾ ಪಟ್ಟಣದವರು ಪಲಾಯನಮಾಡಿದ್ದರು. ಮೈದಾನದಲ್ಲಿ ಮಾತ್ರ ಎಂಟು ಮಂದಿ ದೊಡ್ಡ ದೊಡ್ಡ ಅಧಿಕಾರಿಗಳೂ ಮತ್ತು ಎಪ್ಪತ್ತೇಮಂದಿ ಸಿಪಾಯಿಗಳೂ ಭೂಮಿಯಮೇಲೆ ಉರುಳಿದ್ದರು. ಇದೇ ಮೊದಲನೆಯ ಯುದ್ಧದಲ್ಲಿ ಮೊದಲನೆಯ ಜಯಕಾರ.

ಯುದ್ಧವು ಮುಗಿದನಂತರ ಮಕ್ಕಾಪಟ್ಟಣದವರು ಇನ್ನೂ ಕೋಪಾವೇಶಿತರಾದರು. ಮಾರನೆಯವರ್ಷ ಶತ್ರುಗಳು ಮೂರು ಸಾವಿರ ಸೈನ್ಯದಿಂದ ಸಿದ್ಧರಾಗಿ ಮದೀನಪಟ್ಟಣದಮೇಲೆ ಪ್ರಯಾಣ ಬೆಳಸಿದರು. ಆಗ ಮುಸಲ್ಮಾನರ ಸೈನ್ಯವು ಸಾವಿರಮಂದಿಯವರೆಗಿತ್ತು. ಈ ಬಂದುಸಾವಿರ ಜನರಲ್ಲಿ ಮುನ್ನೂರುಮಂದಿಯು ಯುದ್ಧಕ್ಕೆ ಬರುತ್ತೇವೆಂದು ವಾಗ್ದಾನಮಾಡಿ, ಹಿಂದಿರುಗಿ ಪಲಾಯನವಾದರು. ಆದ್ದರಿಂದ ಇದ್ದ ಸೈನ್ಯದಲ್ಲಿಯೇ ಅಂದರೆ ಏಳುನೂರು ಮಂದಿ ಸೈನ್ಯದಿಂದ ಮೂರು ಸಾವಿರ ಸೈನ್ಯದೊಂದಿಗೆ ಯುದ್ಧಮಾಡಬೇಕಾಯಿತು. ಯುದ್ಧಮಾಡುವುದಕ್ಕೆ ಮುಂಚೆ ಹಜರತ್‌ರವರು ತಮ್ಮ ಕಡೆಯ ಬಿಲ್ಲು ಸೈನ್ಯವನ್ನು ಬಳ್ಳೀ ಸ್ಥಳದಲ್ಲಿ ಸ್ಥಾಯಿಯಾಗಿರುವಂತೆ ಹೇಳಿ ಯುದ್ಧದಲ್ಲಿ ಮಗ್ನರಾದರು. ಎದರು ಕಕ್ಷಿಗಾರರು ಸ್ವಲ್ಪಹೊತ್ತು, ಯುದ್ಧಮಾಡಿ ಎದರುಪಕ್ಷದಲ್ಲಿ ಅಲ್ಪ ಸ್ವಲ್ಪ ಜನರು ಯುದ್ಧದಿಂದ ಪಲಾಯನವಾದಂತೆ ನಟಿಸಿ ಸ್ವಲ್ಪದೂರ

ಹಿಂದಕ್ಕೆಹೋದಮೇಲೆ, ಹಜರತ್‌ರವರು ನಿಯಮಿಸಿದ್ದ ಬಿಲ್ಲಾಳುಗಳು ತಾವು ನಿಂತಿದ್ದ ಸ್ಥಳವನ್ನು ಬಿಟ್ಟು ಎದರುಪಾರ್ಟಿಯಮೇಲೆ ನುಗ್ಗಿದರು ; ತಕ್ಷಣವೇ, ಸಮಯವನ್ನೇ ಕಾಯುತ್ತಿದ್ದ ಎದರು ಪಕ್ಷದವರು ಈ ಸ್ಥಳವನ್ನು ಆಕ್ರಮಿಸಿ ಯುದ್ಧವನ್ನುಮಾಡಲು ಪ್ರಾರಂಭಿಸಿದರು. ಮುಸಲ್ಮಾನರು ಎದರುಪಕ್ಷಿಯವರ ಪ್ರಹಾರವನ್ನು ತಡೆಯಲಾರದೆ ಹಿಮ್ಮೆಟ್ಟಬೇಕಾಯಿತು. ಈ ಯುದ್ಧದಲ್ಲಿ ಮುಸಲ್ಮಾನರ ಪಕ್ಷದವರು ವೀರಸ್ವರ್ಗವನ್ನನುಭವಿಸಿದರು ಹಜರತ್‌ರವರಿಗೂ ಅನೇಕ ಘಾಯಗಳುಂಟಾಗಿ ಬಂದು ದಂತವುಕೂಡ ಶಿಥಿಲವಾಯಿತು. ಮೈ ಘಾಯಗಳಿಂದ ರುಧಿರವು ಪ್ರವಹಿಸಿ, ಕಕ್ಕಿಯಿಲ್ಲದೆ, ಮೂರ್ಛೆಯನ್ನು ಹೊಂದಿ ಸಮೀಪದಲ್ಲಿದ್ದ ಹಳ್ಳದಲ್ಲಿ ಬಿದ್ದುಬಿಟ್ಟರು. ಇವರ ಅನುಯಾಯಿಗಳು ಹಜರತ್‌ರವರನ್ನು ಕಾಣದೆ ಘಾಬರಿಯಾಗಿ ಬೇಚಾಡುವುದಕ್ಕೆ ಪ್ರಾರಂಭಿಸಿದರು. ಅಷ್ಟರಲ್ಲಿ ಶತ್ರುಗಳಲ್ಲಿ ಕೆಲವರು ಹಜರತ್‌ರವರು ಕಾಲವಾದರೆಂಬದಾಗಿ ಸುಳ್ಳುವರ್ತಮಾನ ಹುಟ್ಟಿಸಿದ್ದರಿಂದ, ಮೊದಲೇ ಕಕ್ಕಿಕುಂದಿದ್ದವರಿಗೆ ಇನ್ನು ಶಕ್ತಿ ಗತವಾಗಿಹೋಯಿತು. ಇದನ್ನು ಕೇಳಿ, ಹಜರತ್ ಸಿದ್ದೀಖ್‌ರವರು ತಮ್ಮ ಜನರನ್ನು ಕುರಿತು " ಎಲ್ಲೆ ಜನರೇ ! ನಾವು ಹಜರತ್‌ರವರಿಗೋಸ್ಕರ ಯುದ್ಧಮಾಡಲಿಲ್ಲ ಯಾವ ಧರ್ಮವನ್ನು ಉಜ್ವಲಮಾಡಲೋಸುಗ ಹಜರತ್‌ರವರು ಯುದ್ಧಮಾಡುತ್ತಿದ್ದರೋ ಆ ಧರ್ಮವನ್ನು ಉಜ್ವಲಮಾಡಲು ಯುದ್ಧಮಾಡಿರಿ" ಎಂದು ಘಟ್ಟಿಯಾಗಿ ಹೇಳುತ್ತಾ ಯುದ್ಧಕ್ಕೋಸ್ಕರ ಕರೆಯುತ್ತಿದ್ದರು. ಕೆಲವರು ಹಜರತ್‌ರವರು ಸತ್ತರೆಂಬದಾಗಿ ವ್ಯಸನಪಡುತ್ತಾ ಹುಡುಕುತ್ತಾ ಹೋರಟು ಹಜರತ್‌ರವರು ಮೂರ್ಛೆಯಿಂದ ಬಿದ್ದಿರುವುದನ್ನು ಕಂಡು, ಹಣೆಗೆ ಚುಚ್ಚಿಕೊಂಡಿದ್ದ ಬಾಣಗಳನ್ನು ತೆಗೆದು, ವ್ರಣಗಳಿಗೆ ಪಟ್ಟಿ ಮುಂತಾದ್ದನ್ನು ಕಟ್ಟಿದ ನಂತರ ಹಜರತ್‌ರವರಿಗೆ ಸ್ವಲ್ಪ ಎಚ್ಚರವಾಯಿತು. ಇದಾದನಂತರ ಶತ್ರುಗಳು ತಮಗೆ ಜಯವಾಯಿತೆಂದು ತಿಳಿದು ಸಂತೋಷದಿಂದ ಉಬ್ಬಿಹೋದರು. ಅವರಲ್ಲೊಬ್ಬನಾದ " ಅಬುಸುಫಿಯಾನ್ " ಎಂಬಾತನು ಮುಸಲ್ಮಾನರನ್ನು ಕುರಿತು ತಮ್ಮ ಮಹಮ್ಮದ್‌ರವರು ಇದ್ದಾರೆಯೇ ? ಎಂದು ಪ್ರಶ್ನಿಸಿದನು. ಆದಕ್ಕೆ ಮಹಮ್ಮದ್‌ರವರು " ಮೌನವಾಗಿರಿ " ಎಂದು ತಮ್ಮ ಅನುಯಾಯಿಗಳಿಗೆ ತಿಳಿಸಿದರು,

ಇನ್ನೊಮ್ಮೆ ತಮ್ಮಲ್ಲಿ ಅಬೂಬಕರ್ ಸಿದ್ದೀಖ್‌ರವರು ಇದಾರೆಯೇ ಎಂದು ಪ್ರಶ್ನಿಸಿದನು. ಅದಕ್ಕೂ ಉತ್ತರಕೊಡಬಾರದೆಂದು ಆಜ್ಞಾಪಿಸಿದರು. ಆ ಸರದಾರನೇ ಮತ್ತೊಮ್ಮೆ "ತಮ್ಮಲ್ಲಿ ಉಮರ್ ಇದ್ದಾರೆಯೇ" ಎಂದು ಪ್ರಶ್ನಿಸಿದನು. ಆಗಲೂ ಕೂಡ ಮೌನವಾಗಿರಬೇಕೆಂದು ಆಜ್ಞಾಪಿಸಿದರು. ಕಡೆಗೆ ಅಬುಸುಫ್ಯಾನನು ಎದರುಪಕ್ಷದಲ್ಲಿ ಎಲ್ಲರೂ ಸತ್ತರೆಂದು ತಿಳಿದು ಎಯಿಲಿ ಎಯಿಲಿ ಹುಬಲ್ (ಮೂರ್ತಿ) (ಹುಬಲ್ ಕೆ ಜೈ) ಎಂದನು. ಆಗ ಹಜರತ್‌ರವರು "ಈಗ ನಾವು ಉತ್ತರ ಕೊಡಬೇಕಾದುದು ಕರ್ತವ್ಯಧರ್ಮವೆಂದು "ಅಲ್ಲಾಹು ಆಲ ನ್ನೊ ಅಜಲ್" (ಅಲ್ಲಾಹ ಪರಮನು ಮತ್ತು ರುದ್ರನು) ಎಂದು ಹೇಳುತ್ತಾ ಕರದಲ್ಲಿ ಕತ್ತಿಯನ್ನು ಪಿಡಿದು ಕುದುರೆಯಮೇಲೇರಿ ಅಲ್ಲಾ ಹನಿಗೋಸ್ಕರ ಯುದ್ಧಮಾಡುವುದಕ್ಕೆ ತೊಡಗಿದರು. ಪುನಃ ದೊಡ್ಡ ಯುದ್ಧವು ಪ್ರಾರಂಭವಾಗಿ ಬಂದುಗಂಟೆಯಕಾಲದಲ್ಲಿ ಅದ್ಭುತವಾದ ಜಯವನ್ನು ಹೊಂದಿ ಮುಕ್ಕಾದವರನ್ನು ಹಿಂದಕ್ಕೆ ಓಡಿಸಿದರು.

ಮುಂದಿನವರ್ಷ ಮಕ್ಕಾದವರು ಪುನಃ ಹಜರತ್‌ರವರಮೇಲೆ ಯುದ್ಧಕ್ಕೆ ಅನುವಾಗಿ ದಂಡೆತ್ತಿಬಂದರು. ಇದೇವೇಳೆಯಲ್ಲಿ ಮದೀನ ಪಟ್ಟಣದ ಸುತ್ತಮುತ್ತಲಿರುವ ಎರಡನೆಯ ಕುಲದವರು ಇವರ ಶತ್ರುಗಳಾಗಿ ಹಜರತ್‌ರವರನ್ನೂ ಮತ್ತು ಇವರ ಅನುಯಾಯಿಗಳನ್ನುಕೊಲ್ಲಲು ಪ್ರಯತ್ನಿಸಿದರು. ಈ ಒಳಸಂಚು ಮೊದಲೇ ಇವರಿಗೆ ಗೊತ್ತಿದ್ದದ್ದರಿಂದ ಹಜರತ್‌ರವರು ಮದೀನಪಟ್ಟಣದ ಸುತ್ತಲೂ ಬಂದು ಕಂದಕವನ್ನು ಅಗಿಯಿಸಿದರು. ಹೀಗೆ ಅಗೆಯುವುದರಲ್ಲಿ ಇತರ ಕೂಲಿಗಳಂತೆ ತಾವೂ ಕೂಡ ಅಗೆಯುತ್ತಾ ಸ್ವಲ್ಪವೂ ಬೇಸರವಿಲ್ಲದೆ ಕೆಲಸಮಾಡುತ್ತಿದ್ದರು. ತಾವು ಇತರ ಕೂಲಿಗಳಂತೆ ಕೆಲಸಮಾಡುತ್ತಿದ್ದಾಗ ಈರ್ಷೆ ಮತ್ತು ರೂಂ ದೇಶಗಳ ಅರಮನೆಗಳು ಪ್ರಸನ್ನವಾದಂತೆ ಕಂಡುಬಂದುದನ್ನು ನೋಡಿ, ಈ ವಿಷಯವನ್ನು ತಮ್ಮ ಅನುಯಾಯಿಗಳಿಗೆ "ಪರಮಾತ್ಮನು ನಮಗೆ ಈ ಅರಮನೆಗಳನ್ನು ಕೊಡುವುದಕ್ಕೆ ಇಚ್ಛೈಸಿದ್ದಾನೆ" ಎಂದು ತಿಳಿಸಿದರು. ಇದೇ ಪ್ರಕಾರ ಕೆಲವು ವರ್ಷಗಳಲ್ಲಿಯೇ ಇರ್ಷೆ ಮತ್ತು ರೂಂ ದೇಶಗಳು ಮುಸಲ್ಮಾನರ ಸ್ವಾಧೀನವಾದವು.

ದಿವಸ ಹಜರತ್‌ರವರು ತಾವು ಮುಕ್ಕಾ ತೀರ್ಥಯಾತ್ರೆ
ಮಾಡುತ್ತಿರುವಂತೆ ಕನಸನ್ನು ಕಂಡರು. ಕೂಡಲೇ ಹಜರತ್‌ರವರು
ಒಂದುಸಾವಿರ ನಾಲ್ಕುನೂರು ಜನರೊಡನೆ ಆಯುಧರಹಿತರಾಗಿ ಮುಕ್ಕಾ
ಪಟ್ಟಣಕ್ಕೆ ಹೊರಟರು. ಮುಕ್ಕಾ ಪಟ್ಟಣವನ್ನು ಸಮೀಪಿಸಿದಾಗ
ಮುಕ್ಕಾದವರು ಮುಸಲ್ಮಾನರು ಕಸ್ತ್ರರಹಿತರಾಗಿ ಬಂದಿರುವುದನ್ನು
ನೋಡಿ ತಮ್ಮ ಬಳ್ಳಿ ಸರದಾರರನ್ನು ಅವರ ಬಳಿಗೆ ಕಳುಹಿಸಿಕೊಟ್ಟರು
ಆ ಸರದಾರನು ಸಮೀಪಿಸಿದವೇಳೆಯು ಪ್ರಾರ್ಥನಾಕಾಲವಾಗಿದ್ದರಿಂದ ಹಜ
ರತ್‌ರವರು ಸಮೀಪದ ಗುಂಡಿನಮೇಲೇರಿ (ವಜು) ಕರಜರಣಗಳನ್ನು
ತೊಳೆಯುತ್ತಿದ್ದಾಗ, ಅವರ ಅನುಯಾಯಿಗಳು ಸುತ್ತಲೂ ನಿಂತುಕೊಂಡು
ಕೈಕಾಲುಗಳನ್ನು ತೊಳೆದು ಕೆಳಗೆ ಬೀಳುತ್ತಿದ್ದ ನೀರನ್ನು ಬಂದು
ತೊಟ್ಟು ಕೆಳಗೆ ಬೀಳುಗೊಡಿಸದೆ ಎಲ್ಲವನ್ನೂ ಮೈಗಳಿಗೂ ಮುಖಗಳಿಗೂ
ಸವರಿಕೊಳ್ಳುತ್ತಿದ್ದುದನ್ನು ನೋಡಿ ಬಹಳ ಆಶ್ಚರ್ಯದಿಂದ ತನ್ನಲ್ಲಿ ತಾನು
"ನಾವು ಇವರ ಸಂಗಡ ಯುದ್ಧಮಾಡಿದರಹ್ಹದಲ್ಲಿ ಖಂಡಿತವಾಗಿಯೂ
ನೋಲಾಗುವುದೆಂದು ತಿಳಿದು, ಇವರ ಸಂಗಡ ಬಂದು ಕರಾರನ್ನು
ಬರೆಯಿಸಿಕೊಂಡು ಅದರಿಂದ ಅವರ ಧರ್ಮಕಾರ್ಯವನ್ನು ನಿಲ್ಲಿಸಬೇಕಾಗಿ
ಯೋಜನೆಮಾಡಿ" ಮುಕ್ಕಾಕ್ಕೆ ಹಿಂದಿರಾಗಿಹೋಗಿ ಈ ಸಮಸ್ತ ವಿಷಯ
ಗಳನ್ನೂ ಅಲ್ಲಿಯವರಿಗೆ ತಿಳಿಸಿದನು. ಇದಕ್ಕೆ ಎಲ್ಲರೂ ಸಮ್ಮತಪಟ್ಟರು.
ಆದ್ದರಿಂದ ಅವರು ತಮ್ಮಲ್ಲಿದ್ದ "ಸೊಹೇಲ್" ಎಂಬ ವಿದ್ಯಾವಂತನನ್ನು
ಸಂಗಡ ಕರೆದುಕೊಂಡು ಮುಸಲ್ಮಾನರು ಇಳಿದಿದ್ದ ಸ್ಥಳಕ್ಕೆ ಬಂದರು.
ಹುಸಿಸ್ಸಿನಲ್ಲಿ ಯೋಜಿಸಿಕೊಂಡುಬಂದಂತೆ ಕರಾರು ಮಾಡಿಕೊಳ್ಳುವು
ದಕ್ಕೆ ಪ್ರಯತ್ನಿಸಿ. ತಮ್ಮ ಮನಸ್ಸಿನಲ್ಲಿ ಯಾವ ಯಾವ ನಿಬಂಧನೆಗಳ
ಸ್ಥಿರಪಬೇಕೆಂದಿತ್ತೋ, ಅವುಗಳನ್ನೆಲ್ಲಾ ಆ ಪತ್ರಿಕೆಯಲ್ಲಿ ನಮೂದಿಸಿ
ಅದನ್ನು ಮುಂದುಮಾಡಿದರು. ಪರತ್ತುಗಳು ಅರು ಮಾತ್ರವಿದ್ದವು.
ಅವುಗಳಲ್ಲಿ ಬಂದು "ಯಾವನು ಮಕ್ಕಾದಿಂದ ಮುಸಲ್ಮಾನನಾಗಿ
ಮದೀನಾಕ್ಕೆ ಹೋದರೆ ಆಂಥವನನ್ನು ಅಲ್ಲಿ ಇಟ್ಟುಕೊಳ್ಳದೆ ಪುನಃ
ಅವನನ್ನು ಮಕ್ಕಾಕ್ಕೆ ಕಳುಹಿಸಿಕೊಡಬೇಕು." ಈ ಪರತ್ತು ಆ
ಕಾಲದಲ್ಲಿ ಹಜರತ್‌ರವರಿಗೆ ಅನಾನುಕೂಲವಾಗಿದ್ದರೂ ಬಲೋದ್ಭಂಧ
ನಕ್ಕೋಸ್ಕರ ಒಪ್ಪಿಕೊಳ್ಳಬೇಕಾಯಿತು. ಅಲ್ಲಿ ನೆರೆದಿದ್ದ ಮುಸಲ್ಮಾನ

ರೆಲ್ಲರೂ ಈ ಪಕ್ಷಕ್ಕೆ ಒಪ್ಪದೆ ವಿರೋಧಭಾವವನ್ನು ಸೂಚಿಸುವಲ್ಲಿ ಅಬೂಕರ್ ಸಿದ್ದೀಖ್ ಎಂಬುವರು ತಮ್ಮ ಸ್ನೇಹಿತರನ್ನು ಕುರಿತು "ಎಲೈ ಸ್ನೇಹಿತರೇ, ಮಹಮ್ಮದ್‌ರು ಯಾವುದು ಹೂಡಿದರೂ ಪರಮಾತ್ಮನ ಅಪ್ಪಣೆಯಿಲ್ಲದೆ ಮಾಡಲಾರರು" ಎಂದು ಎಲ್ಲರಿಗೂ ಸಂತೈಸಿದರು. ಕರಾರನ್ನು ಪೂರೈಸಿಕೊಂಡು ಮದೀನಾಪಟ್ಟಣಕ್ಕೆ ಹಿಂದಿರುಗುವಷ್ಟರಲ್ಲಿಯೇ ಮುಕ್ಕಾದಿಂದ ಬಬ್ಬ ಮುಸಲ್ಮಾನನು ತನ್ನ ದೇಶದವರು ಕೊಡುತ್ತಿದ್ದ ಕಷ್ಟವನ್ನು ಸಹಿಸಲಾರದೆ, ಓಡಿಬಂದು ಹಜರತ್‌ರವರಿಗೆ ನಮಸ್ಕಾರಮಾಡಿ ತನ್ನನ್ನು ಉಳಿಸಿಕೊಳ್ಳಬೇಕೆಂದು ಮೊರೆಯಿಟ್ಟನು. ಆದರೆ, ಕರಾರು ಪೂರೈಸಿದ್ದಿತು. ಕರಾರನ್ನು ಉಲ್ಲಂಘಿಸಲು ಹಜರತ್‌ರವರು ಒಪ್ಪಲಿಲ್ಲ. ಆದ್ದರಿಂದ ಆ ಬಡಪ್ರಾಣಿಯನ್ನು ನಮ್ರಭಾವದಿಂದ "ನಿನಗೆ ದೇವರು ಸಹಾಯಮಾಡುವನು. ನಾನು ಈಗಲೇ ಕರಾರಿಗೆ ಒಪ್ಪಿರುತ್ತೇನೆಂದು ವಾಗ್ದಾನಮಾಡಿರುವೆನು. ಆದ್ದರಿಂದ ಸದ್ಯಕ್ಕೆ ನಿನ್ನ ಇಷ್ಟವನ್ನು ಪೂರೈಸಲಾರದೆಂದು ಹೇಳಿದರು. ಹಜರತ್‌ರವರ ಅನುಯಾಯಿಗಳೂ ಕೂಡ ಗುರುಗಳ ಮಾತಿಗೆ ಪ್ರತ್ಯುತ್ತರವನ್ನೀಯದೆ ಸುಮ್ಮನೆ ನೋಡುತ್ತ ಗೊಂಬೆಗಳಂತೆ ಕುಳಿತುಕೊಂಡರು. ಆಗ ನನೆಯುವಕನು ಅಲ್ಲಿಂದ ಪಲಾಯನವಾಗಿ ಸಮುದ್ರದ ದಡೆಯಮೇಲೆ ಗುಡಿಸಲನ್ನು ಕಟ್ಟಿಕೊಂಡು ಇರಲಾರಂಭಿಸಿದನು. ತದನಂತರ ಹಜರತ್‌ರವರು ಮತ್ತು ಅವರ ಅನುಯಾಯಿಗಳು ಹಿಂದಿರುಗಿ ಮದೀನಾಪಟ್ಟಣಕ್ಕೆ ಹೋಗುವಾಗ ಸೂರೆ "ಫತ್ಹಾ" ಅಂದರೆ "ವಿಜಯ" ಎಂಬ ಹೆಸರಿನ ಅಧ್ಯಾವು ಪರಮಾತ್ಮನಿಂದ ಪ್ರಕಟವಾಯಿತು. ಇದರಂತೆಯೇ ಮುಸಲ್ಮಾನರಿಗೆ ವಿಜಯವಾಗುತ್ತಲಿದ್ದಿತು. ಹೇಗೆಂದರೆ, ಕೆಲವು ದಿವಸಗಳಲ್ಲಿ ಮುಕ್ಕಾದಲ್ಲಿರುವ ಅನೇಕ ಜನರು ಮುಸಲ್ಮಾನರಾಗಿ ಮುಕ್ಕಾಪಟ್ಟಣವನ್ನು ಬಿಟ್ಟು, ಸಮುದ್ರದ ತೀರಪ್ರದೇಶದಲ್ಲಿರಲಾರಂಭಿಸಿದರು. ಇದೇ ಮುಕ್ಕಾಪಟ್ಟಣದ ವಿಜಯಯಾತ್ರೆಗೆ ಮೂಲಕಾರಣವಾಯಿತು.

ಹಜರತ್‌ರವರು ಸಮಸ್ತ ಅವತಾರಿಕರಿಗೆ ಸರ್ವ ವಸ್ತುರೂಪವಾಗಿದ್ದಕಾರಣ, ಎಲ್ಲಾ ಕುಲಗಳ ಅಧಿಪತಿಗಳಿಗೂ ಮತ್ತು ಭೂಪಾಲರಿಗೂ ಇಸ್ಲಾಂ ಧರ್ಮಪ್ರಚಾರಕದ ಪತ್ರಿಕೆಯನ್ನು ಕಳುಹಿಸಿಕೊಟ್ಟರು. ಅವರಲ್ಲಿ ಈರಾನ್‌ದೇಶದ ರಾಜನು ಈ ಪತ್ರಿಕೆಯನ್ನು

ಹೋಡಿದಕೂಡಲೆ ಜತಕೋಪದಿಂದ ಪತ್ರವನ್ನು ಹರಿದು ಚೂರುಚೂರು
ಮಾಡಿ ಎಸೆದನು. ಮತ್ತು ತನ್ನ ಇಬ್ಬರು ಸಿಪಾಯಿಗಳಿಗೆ, "ಅರಬ್ಬೀ
ದೇಶದಲ್ಲಿರುವ ನನ್ನ ದಾಸನಾದವನು ಅವತಾರೀ ಪುರುಷನೆಂದು ಹೇಳಿಸಿ
ಕೊಳ್ಳುತ್ತಾ ಇರುವನು. ನೀವು ಹೋಗಿ ಅವನನ್ನು ಕೈ ಹಿಡಿದು ತರ
ಬೇಕು. ಹಾಗೆ ಬಾರದೇ ಇದ್ದಪಕ್ಷದಲ್ಲಿ ಯುದ್ಧಮಾಡಲು ಸೈನ್ಯವು
ಹಿಂಬಾಲಿಸುತ್ತಿದೆ ಎಂಬುದಾಗಿ ವಿಜ್ಞಾಪಿಸಬೇಕು" ಎಂದು ಆಜ್ಞಾಪಿಸಲು,
ಅದಕ್ಕೆ ಅವರು ಮದೀನಾಪಟ್ಟಣವನ್ನು ಕುರಿತು ಪ್ರಯಾಣಮಾಡಿ ಹಜ
ರತ್ ಮಹಮ್ಮದ್‌ರವರ ಸನ್ನಿಧಿಗೆ ಬಂದು ತಮ್ಮ ರಾಜನು ಯಾವರೀತಿ
ಯಲ್ಲಿ ವಿಜ್ಞಾಪಿಸಿದ್ದನೋ ಅದೇರೀತಿಯಿಂದ ವಿಜ್ಞಾಪಿಸಿದರು. ಅದಕ್ಕೆ ಹಜ
ರತ್‌ರವರು ಆ ಸಿಪಾಯಿಗಳನ್ನು ಕುರಿತು "ನಿಮ್ಮ ರಾಜನು ನನ್ನ
ಪತ್ರಿಕೆಯನ್ನು ಯಾವರೀತಿ ಹರಿದು ಬಿಸಾಡಿದನೋ ಅದೇರೀತಿಯಲ್ಲಿಯೇ
ಅವನೂಕೂಡ ಹಾಳು ಬಿಸಾಡಲ್ಪಡುವನು. ಮತ್ತು ನಿಮ್ಮ ರಾಜ್ಯವು
ಬಂದು ದಿವಸ ಮುಸಲ್ಮಾನರ ಕೈವಶವಾಗುವುದೆಂದು" ಹೇಳಿ ಕಳುಹಿಸಿ
ಕೊಟ್ಟರು. ಅದರಂತೆಯೇ ಸಿಪಾಯಿಗಳು ತಮ್ಮ ದೇಶವನ್ನು ಪ್ರವೇಶಿಸಿ
ರಾಜನನ್ನು ನೋಡಲು ಬಂದಾಗ ರಾಜನು ತುಂಡುತುಂಡಾಗಿ ಬಿದ್ದಿ
ದ್ದನು. ಈ ಮಹತ್ವವನ್ನು ಕಂಡು ಆ ದೇಶದ ಜನರೆಲ್ಲರೂ ಮುಸಲ್ಮಾನ
ರಾದರು.

ಏಷ್ಯಮೈನರಿನ ಒಬ್ಬ ರಾಜನು ಇದೇರೀತಿಯಲ್ಲಿ ವಿರೋಧವಾಗಿ
ನಡೆದುದರಿಂದ ಅವನ ರಾಜ್ಯವು ಮತ್ತು ರಾಜನು ಹೀಗೆಯೇ ನಾಶವಾಗಿ
ಹೋದವು. ಮಿಕ್ಕವರೆಲ್ಲರೂ "ಇಸ್ಲಾಂ ಸತ್ಯವೆಂದು ನಂಬಿ ಮುಸಲ್ಮಾನ
ರಾದರು. ಹಜರತ್‌ರವರ ಶಕ್ತಿಯು ದಿನದಿನಕ್ಕೆ ಅಭಿವೃದ್ಧಿಯಾಗಲಾ
ರಂಭಿಸಿತು. ಪ್ರತಿ ದಿವಸವೂ ವಿಜಯದ ಸಮಾಚಾರವೇ ಹೊರತು
ಬೇರೆ ಸುದ್ದಿಯೇ ಬರುತ್ತಿರಲಿಲ್ಲ. ಇದರಂತೆಯೆ ಮದೀನಾ ಪಟ್ಟಣದಲ್ಲಿ
ಎಂಟು ವರ್ಷಗಳು ಕಳೆದುಹೋದುವು. ಕಡೆಗೆ ಹಜರತ್‌ರವರು ಪ
ಮಾತ್ಮನ ಅಪ್ಪಣೆಯ ಮೇರಗೆ ಪವಿತ್ರವಾಗಿಯೂ, ತೀರ್ಥಸ್ಥಳವಾ
ಯೂ ಇರುವ ಮುಕ್ಕಾ ಪಟ್ಟಣಕ್ಕೆ ಹೋಗಲು ಲಕ್ಷ್ಯಮಾಡಿದರು. ಆ
ತಮ್ಮ ಸಂಗಡ ಹತ್ತುಸಾವಿರ ಜನರನ್ನು ಕರೆದುಕೊಂಡು ಮುಕ್ಕಾವನ್ನು
ಹೊಕ್ಕರು. ಹೊಕ್ಕಕೂಡಲೆ ಪವಿತ್ರಸ್ಥಾನದಲ್ಲಿದ್ದ ಮೂರ್ತಿಗಳೆಲ್ಲವನ್ನೂ

ಓಡೆದು ಪುಡಿಮಾಡಿ, ಒಳ್ಳೇ ಜ್ಞಾನದಿಂದ ಜನರನ್ನು ಬೋಧಿಸಿದರು. ಯಾವ ಶತ್ರುಗಳು ಬಂದು ಕಾಲದಲ್ಲಿ ಹಜರತ್‌ರವರನ್ನು ಚಿತ್ರಹಿಂಸೆ ಮಾಡಿ ಊರಿನಿಂದ ಹೊರಡಿಸಿದ್ದರೋ, ಈಗ ಅದೇ ಶತ್ರುಗಳು ಕೈವಶವಾಗಿದ್ದರು. ಆಗ ಅವರು ತಮ್ಮ ಕೈಸೆರೆಯಾಗಿದ್ದವರನ್ನು ಯಾವ ಶಿಕ್ಷೆಗಾದರೂ ಗುರಿಮಾಡಬಹುದಾಗಿದ್ದಿತು. ಆದರೆ ದಯಾಸ್ವರೂಪರಾದ ಮಹಮ್ಮದ್‌ರವರು "ಯಾರು ಅಬುಸುಫಿಯಾನ್ (ಕಠಿಣಶತ್ರು) ಮನೆಯಲ್ಲಿ ಸೇರುತ್ತಾರೋ ಅಂಥವರಿಗೆ ಬಿಡುಗಡೆಯಾಗುತ್ತೆ" ಎಂದು ಹೇಳಿದರು. ಭಕ್ತರು ತಮ್ಮ ವೈರಿಗಳನ್ನು ಕೈಬೇಡಿಗಳನ್ನು ಹಾಕಿ ಹಜರತ್‌ರವರ ಮುಂದೆ ಕರೆದುಕೊಂಡುಬಂದರು. ಹಜರತ್‌ರವರು ಅವರನ್ನು ಕುರಿತು "ನಾನು ನಿಮ್ಮ ವಿಷಯವಾಗಿ ಯಾವರೀತಿಯಲ್ಲಿ ಪ್ರವರ್ತಿಸಬೇಕು ಎಂದು ಪ್ರಶ್ನಿಸಲು" ಅದಕ್ಕೆ ಅವರು "ನಾವು ನಿಮ್ಮ ಬಂಧುಗಳು" ಎಂದು ಹೇಳಿದುದರಿಂದ, ದಯಾಸಮುದ್ರನಾದ ಈಶ್ವರರೂಪನು (ಮಹಮ್ಮದ್‌ರವರು) ಅವರನ್ನು ಕುರಿತು "ನಿಮ್ಮನ್ನು ಬಿಡುಗಡೆ ಮಾಡಿರುತ್ತೇನೆ" ಎಂದು ಹೇಳಲು, ಇಂಥವಚನವನ್ನು ಕೇಳಿ ಎಲ್ಲಾ ಖೈದಿಗಳೂ ಮಹಾವಾಕ್ಯದಿಂದ "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲಿಲ್ಲಾಹೆ" ಎಂದು ಗಂಭೀರರವದಿಂದ ಉಚ್ಚಕಂಠವಾಗಿ ಉಚ್ಚರಿಸಿದರು ಬಂದು ಮೂಲೆಯಲ್ಲಿ "ಹಿಂದಾ" ಎಂಬ ಯುವತಿಯು ನರರಾಕ್ಷಸಿಯಂತೆ ಹಜರತ್‌ರವರನ್ನು ಎಷ್ಟೋ ಕಷ್ಟಗಳಿಗೆ ಗುರಿಮಾಡಿದ್ದಳು ಮತ್ತು ಬಂದು ಯುದ್ಧದಲ್ಲಿ ಹಜರತ್‌ರವರ ಚಿಕ್ಕಪ್ಪನವರಾದ "ಹಂಜ" ಎಂಬುವರ ಈರಿಯನ್ನು ಅಗೆದು ಸುಂಗಿದ್ದಳು. ಅಂಥವಳೂ ಕೂಡ ಹಜರತ್‌ರವರ ಮುಂದೆ ಬಂಧಿಸಲ್ಪಟ್ಟು ನಿಂತಿದ್ದಳು. ಹಜರತ್‌ರವರು ಅವಳನ್ನು ಕುರಿತು "ಎಲೆ ಹೆಂಗಸೇ! ನಿನ್ನ ಮುನ್ನೂರು ಮೂವತ್ತು ಮೂರ್ತಿಗಳು ಶಕ್ತಿವಂತರೋ ಸನ್ನ ಅಲ್ಲಾಹನು ಒಬ್ಬನೇ ಶಕ್ತಿವಂತನೋ" ಎಂದು ಪ್ರಶ್ನಿಸುವುದರಲ್ಲಿ ಅದಕ್ಕೆ ಅವಳು ಹಜರತ್‌ರವರನ್ನು ಕುರಿತು "ಹಜರತ್‌ರವರೇ, ನಾನು ಈ ಪವಿತ್ರವಾದ ವಾಕ್ಯವನ್ನು ಪಠಿಸುವೆನು" ಎಂದು "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದರ್ ರಸೂಲಿಲ್ಲಾಹೇ" ಎಂದು ಉಚ್ಚರಿಸಿದಳು. ಮತ್ತು "ಹಜರತ್‌ರವರೇ! ನೀವು ಮಕ್ಕಾಕ್ಕೆ ಬಾರದೇ ಇರಬೇಕೆಂದು ಈ ಮುನ್ನೂರು ಅರವತ್ತು ದೇವತೆಗಳನ್ನೂ ಬಹಳವಾಗಿ ಬೇಡಿಕೊಂಡಿ

ದ್ದೆನು. ಆದರೆ ಈ ಕೆಲಸವನ್ನು ಇವರ ಶಕ್ತಿಯಿಂದ ಆಗಲಿಲ್ಲ. ಈಗ ನನಗೆ ಜ್ಞಾನೋದಯವಾಯಿತು. ಗತಿರ್ಗಾಮಿಗಳಾದ ಜನರು ಮೂಢತನದಿಂದ ಪ್ರಪಂಚದ ವ್ಯವಹಾರಕ್ಕೋಸ್ಕರ ಪೂಜಿಸುತ್ತಿದ್ದರು. ಎಲೈ ಮಹಾನುಭಾವನೇ! ಕರುಣಾಸಾಗರನಾದ ಪ್ರಭುವಿಯು ನಿನ್ನ ಮಾತ್ಸರ್ಯದಿಂದ ಕುರುಡಳಾದ ನನ್ನಂಥ ಪಾಪಿಯನ್ನು ಕ್ಷಮಿಸು" ಎಂದು ಬೇಡಿಕೊಳ್ಳಲು, ಕರುಣಾಸಮುದ್ರರಾದ ಹಜರತ್‌ರವರು ಅವಳನ್ನು ಕ್ಷಮಿಸಿ ದೀಕ್ಷೆಯನ್ನು ಅನುಗ್ರಹಿಸಿದರು. ತದನಂತರ, ಮಕ್ಕಾದಲ್ಲಿ ಎಲ್ಲಿ ನೋಡಿದರೂ ಶಾಂತಿ, ಶಾಂತಿಯೇ ನೆಲೆಗೊಂಡಿತು. ಮಕ್ಕಾಪಟ್ಟಣವು ಜಯವಾದ ಎರಡು ವರ್ಷಗಳ ಪರಿಯಂತರ ರುದ್ರಶಕ್ತಿಗೆ ಪಾತ್ರರಾಗಿ ದುಷ್ಟ ಶಿಕ್ಷಣ, ಶಿಷ್ಟ ಪರಿಪಾಲನೆಯನ್ನು ಮಾಡಿ ರಾಜ್ಯಸ್ಥಾಪನೆಯನ್ನು ಮಾಡಿದರು.

ಯಾವ ಮಹಾಪುರುಷನು ತನ್ನ ಶೈಶವಾವಸ್ಥೆಯಲ್ಲಿ ಮಾತಾಪಿತೃಗಳನ್ನು ಹೋಗಲಾಡಿಸಿಕೊಂಡು ಅಗಾಧವಾದ ಮರಳು ಪ್ರದೇಶದ ಅರಬ್ಬೀ ದೇಶದಲ್ಲಿ ಕೂನ್ಯಸ್ವರೂಪದಿಂದ ಜನ್ಮಿಸಿ, ತನ್ನ ನೆರೆಹೊರೆಯವರಿಂದ ಕೊಡಲ್ಪಟ್ಟ ಕಷ್ಟಸಮುದ್ರವನ್ನು ಪರಮಾತ್ಮನ ಭಕ್ತಿಯೆಂಬ ದೋಣಿಯಲ್ಲಿ, ತಾಳ್ಮೆಯೆಂಬ ಕಾಪ್ಯದಿಂದ ಹೇಗೆ ನೂಕಿದನೋ ಅದೇ ಮಹಾಪುರುಷನು ಈಗ ಅರಬ್ಬೀ ದೇಶದ ಚಕ್ರವರ್ತಿಯಾಗಿ ವಿರಾಜಮಾನವಾಗಿ ಕುಳಿತಿರುವನು. ಇದೆಲ್ಲ ಪರಮಾತ್ಮನ ಲೀಲಾಜಾಲವಲ್ಲವೇ. ಪರಮಾತ್ಮನಿಂದ ಕಳುಹಿಸಲ್ಪಟ್ಟ ಯಾವ ಅವತಾರೀಕ ಪುರುಷನು ಮೊದಲು ಮೊದಲು ಅನೇಕ ಕಷ್ಟಗಳನ್ನು ಅನುಭವಿಸಿ ಕಡೆಗೆ ಜಯವನ್ನು ಹೊಂದುತ್ತಾನೆಂದು ಗೊತ್ತಾಗುವುದಿಲ್ಲವೇ, ನಶ್ವರವಾದ ಸುಖವನ್ನು ನಂಬಿ ಪ್ರಪಂಚವನ್ನು ನಂಬಿರುವ ಜನರು ಸಭೆಯಲ್ಲಿ ಮಾಡುವ ಯಾವ ಅವತಾರಿಕನನ್ನು ಮೊದಲು ತೊಂದರೆಮಾಡಿದರೂ ಕಡೆಗೆ ಆ ಮಹಾಪುರುಷನು ತನ್ನ ಜಯಪತಾಕೆಯನ್ನು ನೆಡುತ್ತಾನೆಂಬುವುದು ಇದರಿಂದ ಗೊತ್ತಾಗುವುದಿಲ್ಲವೇ ?

ಹಜರತ್ ಮಹಮ್ಮದ್‌ರವರು ತಮ್ಮ ಜೀವಮಾನಕಾಲದಲ್ಲಿ ಕತ್ತುಗಳ ಸಂಗಡ ಇಪ್ಪತ್ತೇಳು ಯುದ್ಧಗಳು ಮಾಡಬೇಕಾಯಿತು. ಅದರಲ್ಲಿ ಕೆಲವು ಪ್ರಸಿದ್ಧವಾದ ಯುದ್ಧಗಳೂ ಇರುತ್ತವೆ. ಇವರ ಯುದ್ಧಗಳು

ಪ್ರವಾದಿಗಳೆಲ್ಲರೂ ಸ್ವತಃ ಯುದ್ಧಮಾಡುವ ಪ್ರಸಂಗವು ಜಗತ್ತಿಗೆ ದುರ್ಲಭವಾದುದು ಏಂಥಾದ್ದಾಗಿರಲಿಲ್ಲ. ಇವರು ರಾಜಾಧಿರಾಜರಾಗಿದ್ದರೂ ಯುದ್ಧದಲ್ಲಿ ಮುಂದಾಳಾಗಿರುತ್ತಿದ್ದರು. ಮುಂದಾಳತ್ವವಲ್ಲದೆ ಸ್ವಯಂ ಯುದ್ಧಮಾಡುತ್ತಲಿದ್ದರು. ಯುದ್ಧಮಾಡುವವರ ಹೊರತು ಸಂದರ್ಭಾನುಸಾರವಾಗಿ ಸೈನ್ಯದ ಮುಂದೆ "ಸೇನಾಧಿಪತಿಯಾಗಿರುತ್ತಿದ್ದರು." "ಹುನೇಕ್" ಎಂಬ ಯುದ್ಧದಲ್ಲಿ ತಮ್ಮ ಸಿಪಾಯಿಗಳ ಮುಂದೆ ಕಾಣಿಸಿಕೊಂಡು ಉಚ್ಚ ಕಂಠದಿಂದ ತಮ್ಮ ಜನರನ್ನು ಯುದ್ಧಮಾಡುವುದಕ್ಕಾಗಿ ಪ್ರೇರೇಪಿಸುತ್ತಿದ್ದರು. "ಅನನ್ನಬೀಯೆ ಲಾಕಜೆಬ ಅನಾ ಇಬ್‌ನೇ ಅಬ್ದುಲ್ ಮುತಲ್ಲಿಬ್" ಅಂದರೆ "ನಾನು ಅವತಾರಪುರುಷನಾಗಿರುವುದು ಸುಳ್ಳಲ್ಲ. ನಾನು ಅಬ್ದುಲ್ ಮುತಲ್ಲಿಬನ ಮಗನಾಗಿದ್ದೇನೆ" (ಅರಬ್ಬಿಯವರು ಅಜ್ಜನನ್ನೂ ತಂದೆಯೇ ಎನ್ನುತ್ತಾರೆ). ಬಂದು ದಿವಸ ಮದೀನಾದಲ್ಲಿದ್ದಾಗ ಪ್ರಾತಃಕಾಲಕ್ಕೆ ಮುಂಚೆ ಜನರು ಗಲಭೆಮಾಡಿದ ಧ್ವನಿಯು ಕೇಳಬಂದಿತು. ಜನರೆಲ್ಲರೂ ಗುಂಪುಸೇರಿ ಏನು ಸಮಾಚಾರವೆಂದು ನೋಡಲು ಮದೀನದ ಹೊರಗೆ ಹೊರಟರು. ಹೊರಗೆಬಂದ ಕಾಲದಲ್ಲಿ ಹಜರತ್‌ರವರು ಜೊರಗಿನಿಂದ ಕುದುರೆಯ ಬೆತ್ತಲೆಯ ಜೀನಿನ ಮೇಲೆ ಕುಳಿತು ಬರುತ್ತಿರುವುದನ್ನು ಕಂಡರು. ಜನರು ಆಶ್ಚರ್ಯವಂತರಾಗಿ ಹಜರತ್‌ರವರನ್ನು ನೋಡಲು ಪ್ರಾರಂಭಿಸಿದರು. ಹಜರತ್‌ರವರು ಜನರ ಸಮೀಪವನ್ನು ಸಾರಿದಾಗ "ಏನೂ ಇಲ್ಲ, ಹಿಂದಿರುಗಬಹುದು" ಎಂದು ಅಪ್ಪಣೆಮಾಡಿದರು. ಇವರಲ್ಲಿ ಈ ಪರಾಕ್ರಮವೇ ಬಂದಲ್ಲ, ಯಾರು ಹಜರತ್‌ರವರ ಚರಿತ್ರೆಯನ್ನು ಸಂಪೂರ್ಣವಾಗಿ ಓದುವರೋ ಅಂಥವರಿಗೆ ಬಂದು ವಿಶೇಷವಾದ ಸಂಗತಿಯು ಕಾಣಬರುತ್ತದೆ. ಅದೇನೆಂದರೆ! ಯಾವ ಗುಣಗಳು ಮಾನವಜಾತಿಯಲ್ಲಿರಬೇಕೋ ಆ ಎಲ್ಲಾ ಗುಣಗಳೂ ಈ ಮಹಾಪುರುಷರಲ್ಲಿ ಮೂರ್ತಿಯಂತೆ ಕಂಡುಬರುತ್ತವೆ. ವೀರ ಮತ್ತು ಶೂರನಾದವನು ಇಂಥಾ ಭಯಂಕರವಾದ ಯುದ್ಧಗಳಲ್ಲಿ ಮತ್ತೊಂದು ವಿಶೇಷವಾದ ಗುಣವು ಕಾಣಬರುತ್ತದೆ. ಅದೇನೆಂದರೆ, ಇಷ್ಟು ಘೋರಯುದ್ಧಗಳಲ್ಲಿ ಈ ಮಹಾಪುರುಷರ ಕೈಯಿಂದ ಒಬ್ಬನಾದರೂ ಲಯಹೊಂದಲಿಲ್ಲ. ಆದುದರಿಂದ ಈ ಮಹಾ ಪುರುಷರೇ ಜಗತ್ತಿಗೆ ಒಬ್ಬನಾದಂಥ ಈಶ್ವರಸ್ವರೂಪರಾಗಿದ್ದಾರೆಂದು ಸಿದ್ಧವಾದ ಕುರುಹು,

ಕೊಲ್ಲುವವರು ಬೇರೆ, ಕೊಲ್ಲಲ್ಪಟ್ಟವರು ಬೇರೆ ಅವನು ಕೊಲ್ಲುವವನೂ ಅಲ್ಲ. ಕೊಲ್ಲಲ್ಪಡುವವನೂ ಅಲ್ಲ. ಅಂಥವನೇ ಜಗದೀಶ್ವರನು. ತಾಯಿಯನ್ನು ಸ್ವಾಧೀನಮಾಡಿಕೊಂಡು ನಾನಾರೂಪಗಳನ್ನು ಧರಿಸಿ, ಲೀಲೆಗಳನ್ನು ಮಾಡುವನೇ ಗುರುನಾಂಗುರು ಇಂಥ ಮೂಲಪುರುಷನಿಗೆ ಜಗತ್ತು ಕಾಣಬರುವುದಲ್ಲವೆ ಮಾಯಾ ಚಾತುರ್ಯಗಳಲ್ಲಿ ನೆಲಗೊಳ್ಳುತ್ತಾ, ಪಂಚಭೂತಗಳಿಂದ ಕೂಡಿದ ವಸ್ತುಗಳಲ್ಲಿರತಕ್ಕ ಭಿನ್ನ ಭಿನ್ನ ರೂಪುಗಳಲ್ಲಿ ಸಂಚಾರಮಾಡುತ್ತ, ಬೀಜದಪ್ರಕಾರ ಸರ್ವಜಂತ್ತಿಗೆ ಸಂರಕ್ಷಣಮಾಡುವವನೇ ಈ ಜಗದ್ಗುರು ವರ್ಗಕ್ಕೆ ಸಮರ್ಥನು ಇಷ್ಟು ಸಂಕ್ಷೇಪವಾಗಿ ಈ ಜಗದ್ಗುರುವಿನ ಚರಿತ್ರೆಯನ್ನು ಹೇಳಿದಮೇಲೆ, ನಾನು ಈ ಅಧಿಪತಿಯಾದವನು ತನ್ನ ಜ್ಞಾನಯೋಗಗಳಿಂದ ಸಕಲ ಭಾವವದಾರ್ಥಗಳನ್ನೂ ಸೃಜಿಸಿ, ಗುಣಲಕ್ಷಣದಿಂದ ಯಾವಪ್ರಕಾರ ಜನರ ಆತ್ಮಭಾವವನ್ನು ರಕ್ಷಿಸಿದನೋ ಆರೀತಿ ನೀತಿಗಳನ್ನು ಕೆಳಗೆ ವಿವರಿಸುವೆನು.

---

## ಹಜರತ್ತ್ರವರ ಕೆಲವು ಗುಣಲಕ್ಷಣಗಳು.

ಹಜರತ್ತ್ರವರು ಯಾವ ಕೆಲಸವನ್ನು ಪ್ರಾರಂಭಮಾಡುತ್ತಿದ್ದರೂ ಆ ಕೆಲಸವನ್ನು ಸ್ಥಿರಮನಸ್ಸಿನಿಂದ ಮಾಡುತ್ತಿದ್ದರು. ದಾರಿಯಲ್ಲಿ ಕಂಡು ಬರುವವನಿಗೆ ಮೊದಲೇ ಸಲ್ಲಾಮನ್ನು ಮಾಡುತ್ತಿದ್ದರು. ಯಾವನು ಕೈಯ್ಯಲ್ಲಿ ಕ್ಕೆ (ಮುಸಾಫೆಯ) ಕೊಟ್ಟರೆ ಅವನು ಕೈಬಿಡುವವರಿಗೂ ತಾವು ಕೈಬಿಡುತ್ತಿದ್ದಿಲ್ಲ. ಪ್ರಯಾಣಮಾಡುವ ಸಂದರ್ಭದಲ್ಲಿ ಬಂದೇ ಸವಾರಿಯು ಬಂದರೆ ಕುದುರೆಯಾಗಲಿ ಅಥವಾ ಒಂಟೆಯಾಗಲಿ ಇದ್ದಲ್ಲಿ ತಾವು ಅರ್ಧಹಾದಿಯನ್ನೂ ತಮ್ಮ ಸೇವಕನು ಅರ್ಧದಾರಿಯನ್ನೂ ಕುಳಿತುಕೊಂಡು ಬರುತ್ತಿದ್ದರು. ದಾರಿಯಲ್ಲಿ ಹುಡುಗಿಯಾಗಲಿ ಮುತ್ತು ಹುಡುಗನಾಗಲಿ ಸಿಕ್ಕಿದರೆ ಅವಗೆ ಬಹಳ ಪ್ರೀತಿಯಿಂದ ಸಲಾಮನ್ನು ಮಾಡುತ್ತಿದ್ದರು. ದಾನವ ಕೊಡುವವರಲ್ಲಿ ಅದ್ವಿತೀಯರಾಗಿದ್ದರು. ರಂಜಾನ್ ತಿಂಗಳಲ್ಲಿ ವಿಶೇಷವಾಗಿ ದಾನಮಾಡುತ್ತಿದ್ದರು. ಸತ್ತಿದ್ದವರ ಸಾಲ ಮುಗಿಸುವ ಬಂದು ವಿಶೇಷ [illegible] ಬಂದು ದಿವಸ ಹಜರತ್ತ್ರವರು "ನನಗೆ ಬಂದು ಗುಡ್ಡದಷ್ಟು ದ್ರವ್ಯಸಿಕ್ಕಿದರೂ, ಮಾರನೆಯ

ದಿವಸವೇ ನನ್ನ ಹತ್ತಿರ ಬಂದು ತಾನೂ ಇರುವುದಿಲ್ಲ" ಎಂದು ಹೇಳುವರು. ಯಾವಾಗಲೂ ಮನೆಯಲ್ಲಿ ದ್ರವ್ಯವನ್ನಿಟ್ಟುಕೊಂಡು ಬಂದು ದಿವಸವಾದರೂ ನಿರ್ಮಲ ಮನಸ್ಸಿನಿಂದ ಮಲಗುತ್ತಿರಲಿಲ್ಲ. ಹುನ್ಯೆನ್ ಯುದ್ಧವಾದನಂತರ ಹಜರತ್‌ರವರಿಗೆ ಬಹಳ ದ್ರವ್ಯವು ಕರಗತವಾಯಿತು. ಆದಕ್ಕೆ ಅದನ್ನೆಲ್ಲ ತಮ್ಮ ಅನುಯಾಯಿಗಳಿಗೆ ಹಂಚಿಕೊಡುತ್ತಾ, "ನನ್ನ ಹತ್ತಿರ ಅರಣ್ಯದಲ್ಲಿರುವಷ್ಟು ಒಂಟೆಗಳಿದ್ದರೆ ಅವುಗಳೆಲ್ಲವನ್ನೂ ಹಂಚಿಕೊಡುತ್ತಿದ್ದೆನು" ಎಂದು ಹೇಳಿದರು. ತಮ್ಮ ಮನೆಯಲ್ಲಿ ಯಾವ ಆಳುಗಳೂ ಇರಲಿಲ್ಲ. ಮನೆಯಲ್ಲಿ ಹೆಂಗಸರು ಬೀಸಿ ಬೀಸಿ ಕೈಗಳು ಜಡ್ಡುಕಟ್ಟಿದ್ದವು. ದಾನದಲ್ಲಿ ಇವರು ಈ ಕುಲದವರು, ಅವರು ಆ ಕುಲದವರು ಎಂದು ಭೇದಭಾವವನ್ನು ಎಣಿಸುತ್ತಿರಲಿಲ್ಲ. ಭಿಕ್ಷಬೇಡುವವರಿಗೆ, ಭಿಕ್ಷವನ್ನು ಬೇಡಬಾರದೆಂದು ಉತ್ತಮರೀತಿಯಿಂದ ಬೋಧಿಸುತ್ತಿದ್ದರು. ಮೇಲಿರುವ ಕೈ ಕೆಳಗಿರುವ ಕೈಗಿಂತಲೂ ಉತ್ತಮವಾಗಿದೆಯೆಂದು ಇವರು ಹೇಳುವ ಗಾದೆಯು. ಯಾವನು ಮೂರು ದಿವಸದವರೆಗೂ ಉಪವಾಸವಿರುತ್ತಾನೋ ಮತ್ತು ಇದಕ್ಕೆ ಶ್ರೇಷ್ಠರಾದ ಮೂರು ಜನರು ಸಾಕ್ಷಿಯಾದರೆ ಅಂಥವನು ಭಿಕ್ಷವನ್ನು ಬೇಡಬಹುದು; ಇದರ ಹೊರತು ಯಾವನು ಬೇಡುತ್ತಾನೋ ಅಂಥವನು ಅಕುಜೆಯಾದುದನ್ನುತಿನ್ನುತ್ತಾನೆ ಎಂದು ಹೇಳಿದರು. ತನ್ನ ವಂಶೀಕರು ದ್ರವ್ಯಗಳನ್ನು ತೆಗೆದುಕೊಳ್ಳಕೂಡದೆಂದು ವಿಧಿಸಿದರು. ಒಂದು ದಿವಸ ಹಜರತ್ ಇಮಾಂ ಹುಸೇನರವರು ದಾನಕೊಟ್ಟಿದ್ದ ಒಂದು ವಸ್ತುವನ್ನು ಬಾಯಿಯಲ್ಲಿ ಹಾಕಿಕೊಂಡರು. ಹಜರತ್‌ರವರು ಅವರ ಬಾಯಿಗೆ ಬೆರಳನ್ನು ಹಾಕಿ ತೆಗೆದುಹಾಕಿದರು. ಯಾರು ಏನು ತಂದುಕೊಟ್ಟರೂ "ಇದು ದಾನವೋ ಅಥವಾ ದಕ್ಷಿಣೆಯೋ" ಎಂದು ಕೇಳುತ್ತಿದ್ದರು. ಒಂದು ದಿವಸ ಕೆಲವು ಗಣಂಗಳು ಬಂದು "ನಾವು ಮದುವೆಯಾಗುವುದಿಲ್ಲವೆಂದೂ ಮತ್ತೊಬ್ಬರು ಜೀವ ವಿರುವರೆಗೆ ನಾನು ಬಿಕ್ಷತ್ತಿರುತ್ತೇನೆಂದೂ" ಹೇಳಿದರು. ಇದನ್ನು ಕೇಳಿ ಹಜರತ್‌ರವರು "ತಾನು ಪ್ರಾರ್ಥನೆಯನ್ನು ಪೂರೈಸುತ್ತೇನೆ, ಉಪವಾಸವನ್ನೂ ಕೂಡ ಇಡುತ್ತೇನೆ, ಹೆಂಡತಿಯರನ್ನೂ ಕೂಡ ಇಟ್ಟುರುತ್ತೇನೆ. ಯಾವನು ನನ್ನ ಮಾರ್ಗದಮೇಲೆ ಆಚರಿಸುವುದಿಲ್ಲವೋ ಅಂಥವನು ನನ್ನವನೇ ಅಲ್ಲ" ಎಂದು ಹೇಳಿದರು. ರೀತಿ

ನೀತಿ, ಊಟ, ಬಟ್ಟೆ, ಹಾಸಿಗೆ ಮುಂತಾದ ವಿಷಯಗಳಲ್ಲಿ ಕಲಸವೇ ಇರಲಿಲ್ಲ. ಸಿಕ್ಕಿದುದಕ್ಕೆ ಊಟಮಾಡುತ್ತಿದ್ದರು. ಸಿಕ್ಕಿದುದನ್ನು ಉಡುತ್ತಿದ್ದರು. ಮನುಷ್ಯನಿಗೆ ಮನೆಯಲ್ಲಿ ೪ನುಗೋಸ್ಕರ ಒಂದು ಹಾಸಿಗೆಯೂ, ತನ್ನ ಹೆಂಡತಿಗೋಸ್ಕರ ಒಂದು ಹಾಸಿಗೆಯೂ, ಇಂಟರಿಗೋಸ್ಕರ ಒಂದು ಹಾಸಿಗೆಯೂ ಇದ್ದರೆ ಸಾಳು. ಸಾಲ್ಯನೇ ಹಾಸಿಗೆಯು ಇದ್ದರೆ ವಿಶಾಜೆಯುಹಾಸಿಗೆಯೆಂದು ಹೇಳುತ್ತಿದ್ದರು. ಪುರುಷನಿಗೆ ರೇಷ್ಮೆ, ಬೆಳ್ಳಿ ಭಂಗಾರ ಬೇಕಾಗಿಲ್ಲವು. ಜನರು ಮಗಳಾದ ಸ್ತಾತಿಯಾಯವರ ಕೊರಳಿನಲ್ಲಿ ಭಂಗಾರದ ಸರಿಗೆಯನ್ನು ಹಾಕಿದ್ದರು ಹಜರತ್‌ರವರು ನಮ್ಮ ವಂಶೀಕರಿಗೆ ಇಂಥಾ ಆಭರಣ ಬೇಕಾಗಿರುವುದಿಲ್ಲವೆಂದು ತೆಗೆದುಹಾಕಿದರು. ಹಜರತ್‌ರವರ ಮೈಮೇಲೆ ಧಪ್ಪವಾದ ಒಟ್ಟೆಗಳು ಬಿತ್ತು ಒಂದು ಕಂಬಳಿಯು ಮಾತ್ರ ಇದ್ದವು. ಹಾಸಿಗೆಯು ಮತ್ತು ತಲೆದಿಂಬು ಚರ್ಮದಿಂದ ಮಾಡಲ್ಪಟ್ಟಿದ್ದವು. ಚಾಪೆಯು ಮೇಲಾದರೂ ನುಲಗಿ ನಿದ್ರೆ ಮಾಡುತ್ತಿದ್ದರು. ದೊಡ್ಡ ಹಾಸಿಗೆಯು ಯಾವಾಗಲೂ ಕಂಡುಬರುತ್ತಿರಲಿಲ್ಲ. ಎರಡನೆಯವರಿಗೆ ಕೂಡಲಿಕ್ಕಾದರು ಚರ್ಮಗಳು ಮಾತ್ರ ಇದ್ದವು. ಹಜರತ್‌ರವರ ಸನ್ನಿಧಿಯಲ್ಲಿ ದೊಡ್ಡವರು, ಬಡವರು, ಸಿಪಾಯಿಗಳು, ರಾಜರು ಒಂದೇ ಇದ್ದರು. ಸಮಯಬಂದರೆ ಬಟ್ಟೆ ಕೂಲಿಯ ಪ್ರಕಾರ ದುಡಿಯುತ್ತಿದ್ದರು. ತಮ್ಮ ಕೆಲಸಗಳನ್ನೆಲ್ಲಾ ತಾವೇ ಮಾಡಿಕೊಳ್ಳುತ್ತಿದ್ದರು ಅಂಗಡಿಯಿಂದ ಮನೆಗೆ ಯಾವ ಸಾಮಾನು ಬೇಕಾಗಿದ್ದರೂ ತಾವೇ ತೆಗೆದುಕೊಂಡು ಬರುತ್ತಿದ್ದರು ತಮ್ಮ ಬಟ್ಟೆಯು ಹರಿದುಹೋಗುವ ಸಂದರ್ಭದಲ್ಲಿ ತಾವೇ ಹೊಲಿದುಕೊಳ್ಳುತ್ತಿದ್ದರು. ತಮ್ಮ ಪಾದರಕ್ಷೆಯನ್ನು ತಾವೇ ಸರಿಮಾಡಿಕೊಳ್ಳುತ್ತಿದ್ದರು. ಒಂದೊಂದುವೇಳೆ ತಮ್ಮ ಮನೆಯನ್ನು ತಾವೇ ಗುಡಿಸಿಕೊಳ್ಳುತ್ತಿದ್ದರು. ಜನರೊಳಗೆ ಕುಳಿತಿದ್ದರೆ ಯಾರಿಗೂ ಗುರುತು ಸಿಕ್ಕುತ್ತಿರಲಿಲ್ಲ. ನಮಸ್ಕಾರಮಾಡುವ ಪದ್ಧತಿಯು "ಅಸ್ಸಲಾಮೂ ಅಲೈಕುಂ" ಎಂದು ಕೈಯೆತ್ತಿ ಅಥವ ಕೈ ಎತ್ತದೆ ಇದ್ದ ಪದ್ಧತಿಹೊರತು ಬೇರೆ ಯಾವ ರೀತಿಯನ್ನೂ ಕಲಿಸಲಿಲ್ಲ. ಒಂದುದಿವಸ ಒಬ್ಬ ಹುಡುಗಿಯು ಬಂದು ಸಾಷ್ಟಾಂಗ ನಮಸ್ಕಾರವನ್ನು ನೂಡಲು ಪ್ರಯತ್ನಿಸಲು, ಹಜರತ್‌ರವರು ಈರೀತಿ ಯಾಕೆ ನಮಸ್ಕಾರವು? "ಇಸ್ಲಾಂ" ಮತ

ದಲ್ಲಿರುವುದಿಲ್ಲ ಎಂದು ತಿಳಿಸಿದರು. ಯುದ್ಧದಲ್ಲಿ ಯಾವಾಗಲೂ ಮುಂದಾಳಾಗಿರುತ್ತಿದ್ದರು. ಬಡವರನ್ನು ಅತ್ಯಂತ ಪ್ರೀತಿಯಿಂದ ನೋಡುತ್ತಿದ್ದರು. ಅವರು ಯಾವಾಗಲೂ ಪರಮಾತ್ಮನನ್ನು ಕುರಿತು "ಹೇ, ಪರಮಾತ್ಮ! ನೀನು ನನ್ನನ್ನು ಬಡವರ ಮನೆಯಲ್ಲಿಯೇ ಜನ್ಮಗ್ರಹಣಮಾಡಿಸಿದೆ. ಈಗಲೂ ಬಡತನದಲ್ಲಿಯೇ ವಾಸಿಸುತ್ತೇನೆ. ಪ್ರಳಯಕಾಲದಲ್ಲಿ ಕೂಡ ನನ್ನನ್ನು ಬಡವರಲ್ಲಿಯೇ ಹುಟ್ಟಿಸುವವನಾಗು" ಎಂದು ಪ್ರಾರ್ಥಿಸುತ್ತಿದ್ದರು. ಸಣ್ಣಮಕ್ಕಳಮೇಲೆ ಬಹಳ ಮಮತೆಯು ಇದ್ದಿತು. ಪ್ರಾರ್ಥನೆಯ ವೇಳೆಯಲ್ಲಿ ಯಾವ ಮಗುವು ಅಳುತ್ತಿದ್ದರೂ, ಜಾಗ್ರತೆಯಾಗಿ ಪ್ರಾರ್ಥನೆಯನ್ನು ಮುಗಿಸಿ ಅವರನ್ನು ಒಳ್ಳೇರೀತಿಯಿಂದ ಆದರಿಸುತ್ತಿದ್ದರು. ಯುದ್ಧದಲ್ಲಿ ಜಯವನ್ನು ಹೊಂದಿದನಂತರ ಯಾವರೀತಿಯಿಂದ ಮಕ್ಕಳನ್ನು ಸಂರಕ್ಷಿಸಬೇಕೋ ಅದನ್ನು ಜನರಿಗೆ ಬೋಧಿಸಿ ಆದರಂತೆ ನಡೆಯುವಂತೆ ಮಾಡುತ್ತಿದ್ದರಲ್ಲದೆ, ಯಾವ ಕೂಸು ಹುಟ್ಟಿದರೂ ಪ್ರಕೃತಿಯ ಸ್ವಭಾವ ಸಂಯುಕ್ತವಾದ "ಇಸ್ಲಾಂ" ಧರ್ಮಕ್ಕೆ ಅನುಗುಣವಾಗಿ ಹುಟ್ಟುತ್ತದೆಂದೂ ಯಾವ ದೇಶದಮೇಲೆ ಜಯವನ್ನು ಹೊಂದಿದರೂ ಅದರಲ್ಲಿರುವ ಜನರನ್ನು ಮತ್ತು ಅವರ ವಸ್ತುಗಳನ್ನು ಇತರ ರಾಜರಂತೆ ನಾಶಮಾಡಬಾರದೆಂದೂ ಮತ್ತು ಅಂಥ ಸ್ಥಳದಲ್ಲಿ ಯಾವನು ಪವಿತ್ರವಾದ "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದರ್ ರಸೂಲಿಲ್ಲಾ" ಎಂಬ ವಾಕ್ಯ ಪಠಿಸುತ್ತಾನೋ ಅಂಥವನನ್ನು ಉದ್ಧಾರ ಮಾಡಲು ಪ್ರಯತ್ನಿಸಬೇಕು. ಏತಕ್ಕೆಂದರೆ ನಾನು ಇಳೀ ಭೂಮಂಡಲಕ್ಕೆ ದಯಾಸಮುದ್ರನಾಗಿ ಬಂದಿರುತ್ತೇನೆಂದು ಅನೇಕವಿಧವಾಗಿ ಉಪದೇಶ ಮಾಡುತ್ತಿದ್ದರು, ಮತ್ತು ದಾಸಿಯರಲ್ಲಿ ಒಳ್ಳೇರೀತಿಯಿಂದ ನಡೆದುಕೊಳ್ಳಬೇಕೆಂದೂ, ತಾವು ಯಾವ ಊಟವನ್ನು ಊಟಮಾಡುತ್ತೀರೋ ಅವರಿಗೂ ಅದೇ ಊಟವನ್ನೂ, ತಾವು ಯಾವ ಬಟ್ಟೆಯನ್ನು ತೊಡುತ್ತೀರೋ ಅದೇ ಬಟ್ಟೆಗಳನ್ನೂ ಅವರಿಗೂ ಕೊಡಿಸಿರಿ. ಅವರು ನಿಮ್ಮ ಅಣ್ಣ ತಮ್ಮಂದಿರಾಗಿರುತ್ತಾರೆ. ದಾದಿಯರಿಗೆ ಇವರು ನನ್ನ ದಾಸಿಯೆಂದು ಯಾವಾಗಲೂ ಕರೆಯದೆ, ಮಕ್ಕಳಂತೆ ಸಂಭೋಧಿಸಿರಿ. ತಾವು ಯಾವ ಮನೆಯ ಕೆಲಸವನ್ನು ಮಾಡಬೇಕಾದರೂ ಅವರೊಂದಿಗೆ ಕೂಡಿ ಮಾಡಬೇಕು ಎಂದು ಬೋಧಿಸುತ್ತಿದ್ದರು. ಯಾರಾದರೂ ಮೃತಶರೀರ

ವನ್ನು ಸ್ಮಶಾನಕ್ಕೆ ತೆಗೆದುಕೊಂಡುಹೋಗುತ್ತಿದ್ದಲ್ಲಿ ತಾವು ಸ್ವಲ್ಪ ನಿಂತು
ಕೊಳ್ಳುತ್ತಿದ್ದರು. ಹಜರತ್‌ರವರ ಜ್ಞಾನ, ಧ್ಯಾನ ಶಕ್ತಿಗಳಲ್ಲಿ ಯಾವ
ಅವತಾರೀಕ ಪುರುಷರೂ ಸರಿಬರಲಾರರು. ಬಂದೊಂದು ದಿವಸ ಹಜ
ರತ್‌ರವರು ಪ್ರಾರ್ಥನೆಮಾಡಲು ಸಾಯಂಕಾಲ ನಿಂತುಕೊಂಡಲ್ಲಿ ಬೆಳ
ಗಾಗುತ್ತಲಿದ್ದಿತು. ನಿಂತು, ನಿಂತು, ಕಾಲುಗಳೆಲ್ಲವೂ ಊಮುತ್ತಿದ್ದವು.
ಅವರು ಪ್ರತಿನಿತ್ಯವೂ ಐದುವೇಳೆಯ ಪ್ರಾರ್ಥನೆಯ ಹೊರತು ಮಧ್ಯ
ರಾತ್ರಿಯಲ್ಲಿಯೂ ಎದ್ದು ಪ್ರಾರ್ಥಿಸುತ್ತಿದ್ದರು. ವ್ಯಾಖ್ಯಾನವನ್ನು ಹೇಳಲು
ನಿಂತಲ್ಲಿ ಸಂದರ್ಭಾನುಸಾರವಾಗಿ ಹನ್ನೆರಡು ತಾಸುಗಳವರೆಗೂ ಅವಿ
ಚ್ಛಿನ್ನವಾಗಿ ಹೇಳುತ್ತಿದ್ದರು ಬಂದೊಂದು ದಿವಸ ಹಜರತ್‌ರವರು
ಪ್ರಾತಃಕಾಲದ ಪ್ರಾರ್ಥನೆಯನ್ನು ನೆರವೇರಿಸಿಕೊಂಡು ಕಾಲಜ್ಞಾನಗಳನ್ನು
ಮಧ್ಯಾಹ್ನದವರೆಗೂ ನಡೆಯಿಸಿ ತದನಂತರ ಪ್ರಾರ್ಥನೆಯನ್ನು ಹೇಳು
"ಮೆಂಬರ್" ರನ್ನು ಏರಿ ಕಾಲಜ್ಞಾನಗಳನ್ನು ಸಾಯಂಕಾಲದವರೆಗೂ
ಹೇಳಿ ಅಲ್ಲಿಂದಿಳಿದು ಸಾಯಂಕಾಲದ ಪ್ರಾರ್ಥನೆಯನ್ನು ನೆರವೇರಿಸಿ
ಕೊಂಡು ಪುನಃ ರಾತ್ರಿಯ ಹೆಚ್ಚು ಭಾಗದವರೆಗೂ ಕಾಲಜ್ಞಾನಗಳು ಮಾಡು
ತಿದ್ದರು. ಈ ಸ್ಥಿತಿಯು ಹಜರತ್‌ರವರ ಜೀವಿತಾವಸಾನಕಾಲದಲ್ಲಿ ಅಲ್ಲಲ್ಲಿ
ಕಂಡುಬರುತ್ತವೆ. ಇವರು ಹೇಳಿದ ಕಾಲಜ್ಞಾನದ ವಚನಗಳು ನೂರೈ
ವತ್ತು ಪುಸ್ತಕಗಳಲ್ಲಿ ಬರೆಯಲ್ಪಟ್ಟಿವೆ. ಇವರ ಹದೀಸ್ ಎಂಬ
ಪುಸ್ತಕಗಳಲ್ಲಿ ಒಂಭತ್ತುಲಕ್ಷ ಅವರ ವಚನಗಳು ಸಿಗುತ್ತವೆ. ಇವರು
ಜಗದ್ಗುರುಗಳಾಗಿದ್ದ ಕಾರಣ ಜಗತ್ತಿನಲ್ಲಿ ಹಿಂದೆ ನಡೆದಿದ್ದ ಮತ್ತು ಮುಂದೆ
ನಡೆಯುವ ವಿಷಯಗಳು ಈಗಲೂ ಆವುಗಳಲ್ಲಿ ಕಂಡುಬರುತ್ತವೆ. ಇದ
ಕ್ಕೋಸ್ಕರವಾಗಿ "ಉಲ್ಲಿಂತೊ ಇಲ್ ಮಲ್ ಅವ್ವಲೀನವಲ್ ಆಖರೀನ"
ಅಂದರೆ, ಪರಮಾತ್ಮನು "ಹಿಂದೆ ಪೂರ್ವಿಕರಿಗೆ ಇದ್ದಂತ ಜ್ಞಾನವು
ಮತ್ತು ಮುಂದೆ ಆಗುವವರಲ್ಲಿರತಕ್ಕಂಥ ಜ್ಞಾನವು ನನಗೆ ಅನುಗ್ರಹಿಸಿರು
ತ್ತಾನೆ". ಅಂದರೆ, "ಪರಮಾತ್ಮನು ಏಳು ಖಂಡಗಳಲ್ಲಿ ಆಗಿರತಕ್ಕಂಥ
ಮಹನೀಯ ಜ್ಞಾನವನ್ನೂ ಮತ್ತು ಮುಂದೆ ಆಗುವವರ ಜ್ಞಾನವನ್ನೂ"
ಕೊಟ್ಟಿರುತ್ತಾನೆಂದು ಹೇಳುತ್ತಿದ್ದರು.

---

ಎಸ್. ಬಿ. ಸುಬ್ಬಯ್ಯ ಅಂಡ್ ಸನ್ಸ್, ಪ್ರಿಂಟರ್ಸ್, ದಂಗಳೂರು. ೩೬.

لَا إِلٰهَ إِلَّا اللّٰهُ مُحَمَّدٌ رَّسُولُ اللّٰهِ

# ಜಗದ್ಗುರು

(ಸರವರಿಲಿಂ)

---

ಒಂದನೆಯ ಭಾಗವು.

---

ಮೌಲಾನಾ ಸಿದ್ದೀಕ್

ದೀರ್ಘದಾರ್ ಚನ್ನಬಸವೇಶ್ವರರಿಂದ

ರಚಿಸಲ್ಪಟ್ಟಿತು.

---

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

---

ಬೆಂಗಳೂರು

**ದೀರ್ಘದಾರ್ ಬಸವಸಮಾಜದಿಂದ**

ಪ್ರಕಟಿಸಲ್ಪಟ್ಟಿತು.

---

ಇದರ ವಿಶಿಷ್ಟ ಅಧಿಕಾರವನ್ನೂ ಗ್ರಂಥಕರ್ತರೆ ಉಳಿಸಿಕೊಂಡಿರುತ್ತಾರೆ.

---

ವಿ. ಬಿ. ಸಬ್ಬಯ್ಯ ಅಂಡ್ ಸನ್ಸ್, ಅವಿನ್ಯೂ ರೋಡ್,

ಬೆಂಗಳೂರು ಸಿಟಿ.

1927

*Regstd. Copy Right.*

ಬೆಲೆ ರೂ. 1-8-0

# ಭಾವಚಿತ್ರಗಳು


| | ಪುಟ. |
|---|---|
| ಶಿಕ್ಕಾ ಮತ್ತು ಶೈಲ .... .... | ೪೩ |
| ಬಾಬಾ ನಾನಕರ ನಿಲುವಂಗಿಯು.... .... | ೫೨ |
| ಜನ್ಮಬಂಧನ ಚಕ್ರವು .... .... | ೧೩೦ |
| ವಾಲ್ಮಿಕಾಶ್ರಮವು .... .... | ೧೩೫ |
| ಪ್ರಾರ್ಥನಾ ವಿಧಾನ .... .... | ೧೬೫ |
| ಮಿಶ್ರಿತ ಲಿಂಗವು .... .... | ೧೯೧ |
| ಶ್ರೀಕೃಷ್ಣನು ಮಾಡಿದ ಯಾಗವು .... .... | ೨೧೨ |
| ಸಪ್ತದ್ವೀಪಗಳು .... .... | ೨೩೪ |
| ಕಲ್ಕಿವಾಹನ .... .... | ೨೩೬ |

# ಪ್ರಸ್ತಾವನೆ.

ಪರಮಾತ್ಮನು ಕಾಲಕಾಲಕ್ಕೆ ತನ್ನ ಸದುದ್ದೇಶ ಪ್ರಸನ್ನರಾದ ಸತ್ಪುರುಷರನ್ನು ಪ್ರಪಂಚದಲ್ಲಿ ಕಳುಹಿಸಿ ಧರ್ಮವನ್ನು ಸ್ಥಾಪಿಸುತ್ತಾನೆ. ಆ ಸಮಯವು ತತ್ಕಾಲದಲ್ಲಿಯಾದರೂ ಹಸ್ತಗೆತವಾಗಿದೆ. ಭಗವಂತನು ದೀನನಾದ ನನ್ನನ್ನು ತನ್ನ ಸಾನ್ನಿಧ್ಯದಲ್ಲಿ ಸೇರಿಸಿ ಪೂರ್ವೀಕರ ಕಾರ್ಯವನ್ನು ಪುನಃ ನನಗೆ ವಹಿಸಿರುತ್ತಾನೆ. ಇದರಿಂದ ತನ್ನ ಸಾಯುಜ್ಯಾನುಭವಿಗಳಾದ ಅವತಾರಿಗಳ ಸನ್ಮಾನವನ್ನು ಸ್ಥಿರಗೊಳಿಸುವುದೇ ಆತನ ಉದ್ದೇಶವು. ಸಧ್ಯದಲ್ಲಿ ಪ್ರಪಂಚದಲ್ಲಿ ಅನೇಕ ಜಗದ್ಗುರುಗಳುಂಟಾಗಿ ಜಗದ್ಗುರುಗಳ ನಿಂದನೆಯಾಗಿರುತ್ತದೆ. ಇದರ ನಿವಾರಣೋದ್ದೇಶವಾಗಿ ಪರಮಾತ್ಮನು ನನ್ನನ್ನು ಪ್ರಪಂಚದಲ್ಲಿ ಕಳುಹಿಸಿರುತ್ತಾನೆ.

ಪ್ರಾಚೀನಕಾಲದಲ್ಲಿ ಪರಮಾತ್ಮನು ಅವತಾರಿಗಳನ್ನು ಒಂದೊಂದು ಜನಾಂಗಕ್ಕೆ ಪ್ರತ್ಯೇಕ ಪ್ರತ್ಯೇಕವಾಗಿ ಕಳುಹಿಸಿ ಅನಾದಿಯಾದ ದೈವಮತದ ಭಾಗಗಳನ್ನುರಕ್ಷಿಸಿದನು. ಅವರು ತಮ್ಮ ತಮ್ಮ ಜನಾಂಗಗಳ ಆತ್ಮಸಂರಕ್ಷಣೆಯನ್ನು ಮಾಡಲು ಪ್ರಸನ್ನರಾಗಿದ್ದುದರಿಂದಲೇ ಇತರರ ಮೇಲೆ ಕೈ ಹಾಕಲಿಲ್ಲ. ಈ ವಿಷಯವು ಸರ್ವ ದೇವೋಕ್ತಗ್ರಂಥಗಳಿಂದಲೂ ಹೊರಪಟ್ಟಿದೆ. ಇವರೆಲ್ಲರೂ ಧರ್ಮದ ಗಿಡದಕೊಂಬೆಗಳಂತೆ ಪ್ರಸನ್ನವಾದರು ; ಆದರೆ ಬೀಜಪ್ರಾಯನಾದ ಮತ್ತು ಸರ್ವಾತ್ಮಪ್ರಕಾಶಕನಾದ ಜಗದ್ಗುರುವನ್ನು ಮಾತ್ರ ನಾನು ಹುಡುಕುತ್ತಲಿದ್ದೆನು. ಆ ಅಂಶವು ಚಿನ್ಮಯ ಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗಂಬರರಲ್ಲಿ ಗೋಚರವಾಯಿತು. ಇವರೇ ಸರ್ವ ಅವತಾರಿಗಳ ಆತ್ಮಗಳಿಗೆ ಬೀಜರೂಪವಾಗಿ ಪ್ರತ್ಯಕ್ಷವಾದರು. ಅನಾದಿಯಾದ ಸರ್ವಮತಸಮ್ಮತವಾದ ಮಾರ್ಗವು ಇವರದಾಗಿರುವುದು. ಇವರು ಹಿಂದಿನ ಮಹಾತ್ಮರ ಹಾಗೆ ಒಂದೊಂದು ಜನಾಂಗಕ್ಕೆ ಬಾರದೆ ಸರ್ವ ಜನಾಂಗಗಳಿಗೂ ಗುರುವಾಗಿ ಅವತರಿಸಿ ಜಗದ್ಗುರುವೆನಿಸಿದರು. ಇವರಲ್ಲಿ ಜಾತಿಭೇದವಿಲ್ಲದೆ ಸರ್ವ ಜಾತಿಗಳೂ ಸಮಾವೇಶವನ್ನು ಹೊಂದಿರುತ್ತವೆ. ಇವರ ದೇವೋಕ್ತ ಗ್ರಂಥವು ಸರ್ವಗ್ರಂಥವ್ಯಾಪವಾಗಿದೆ, ಜಗತ್ತಿನ ಧರ್ಮಗಳು ನದಿಗಳಾದರೆ

ಇವರ ಧರ್ಮವು ಸಮುದ್ರವಾಗಿದೆ. ಜಗತ್ತಿನ ಧರ್ಮಗಳು ಕೊಂಬೆಗಳಾದರೆ, ಇವರ ಧರ್ಮವು ಬೀಜವಾಗಿದೆ. ಜಗತ್ತಿನ ಧರ್ಮಗಳು ಸರ್ವ ಭೂತಗಳಾದರೆ, ಇವರ ಧರ್ಮವು ಸರ್ವಭೂತ ಸಂಯುಕ್ತನಾದ ಮನುಷ್ಯನಂತೆ ಇದೆ. ಕಲ್ಯಾಣಗುಣವಿಶಿಷ್ಟರಾದ ಈ ಮಹಾತ್ಮರ ಸಲುವಾಗಿಯೇ ಪುರಾತನ ಮಹಾತ್ಮರು ಭವಿಷ್ಯೋತ್ತರಪುರಾಣದಲ್ಲಿ

"ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ಮೃಷ್ಟ್ಮತನುರ್ಜಗದ್ವ್ಯಾಪಿ ಜಗದ್ಗುರು ||

ಎಂಬುದಾಗಿ ಸಾರಿರುತ್ತಾರೆ. ಇದೇ ವಿಚಾರವಾಗಿ ಸಾವಿರದ ಒಂಭೈನೂರ ಹದಿನೇಳನೇ ಇಸವಿಯಲ್ಲಿ ಬಿಜಾಪುರದಲ್ಲಿ 'ಜಗದ್ಗುರುವಿನ ಜಗದ್ಧರ್ಮ' ಎಂಬ ಚಿಕ್ಕ ಪುಸ್ತಕವನ್ನು ಕನ್ನಡಭಾಷೆಯಲ್ಲಿ ಪ್ರಕಟಪಡಿಸಿದೆನು.

ಹೀಗೆ ಧರ್ಮಪ್ರಚಾರನಲ್ಲಿ ಕರ್ನಾಟಕದ ಪ್ರಾಂತ್ಯೆಗಳನ್ನೂ ಮತ್ತು ಮೈಸೂರು ದೇಶವನ್ನೂ ಸುತ್ತಿದೆನು. ಇಲ್ಲಿಯಾದರೋ ಅನೇಕ ಜಗದ್ಗುರು ನಾಮಧಾರಿಗಳು ಗೋಚರವಾದರು. ಇದನ್ನು ಕಂಡು ನನಗೆ ಬಹಳ ಆಶ್ಚರ್ಯವಾಯಿತು. ಜಗತ್ತು ಒಂದೇ ಇದ್ದು ಜಗದ್ಗುರುಗಳು ಅನೇಕರಾಗುವುದು ಯಾವ ನ್ಯಾಯವು ? ಹಿಂದೂಗಳಲ್ಲಿಯೇ ಅನೇಕ ಜಗದ್ಗುರುಗಳಿರುತ್ತಾರೆ. ಮುಸಲ್ಮಾನರಲ್ಲಿ ಯಾರೂ ಜಗದ್ಗುರು (ಸರವರೆ ಆಲಂ) ಎಂಬ ನಾಮವನ್ನು ಧರಿಸಿಲ್ಲ. ಕಾರಣವೇನೆಂದರೆ, ಇವರು ಜಗದ್ಗುರುವನ್ನು ತಿಳಿದಿರುತ್ತಾರೆ. ಮತ್ತು ಹಜರತ್ ಮಹಮ್ಮದ್ ಪೈಗಂಬರರ ಹೊರತು ಮತ್ತಾರೂ ಈ ಪದವಿಗೆ ಅರ್ಹರಲ್ಲವೆಂದು ಅವರಿಗೆ ಗೊತ್ತುಂಟು. ಸ್ವಲ್ಪದಿವಸಗಳಿಂದ ಥಿಯಸಾಫಿಕಲ್ ಸಮಾಜದವರು ಜಗದ್ಗುರು (ಸರವರೆ ಆಲಂ) ಜೆ. ಕೃಷ್ಣಮೂರ್ತಿ ಎಂಬ ಒಬ್ಬ ಯುವಕನ ರೂಪದಲ್ಲಿ ಕಾಣಿಸಿಕೊಂಡಿರುತ್ತಾರೆಂದು ಹೊರಪಡಿಸುತ್ತಿದ್ದಾರೆ. ಈ ವಿಷಯವನ್ನು ಕೇಳಿದ ಪ್ರಥಮದಲ್ಲಿ ನನಗೆ ಮತ್ತಷ್ಟು ಆಶ್ಚರ್ಯವು ಹೆಚ್ಚಾಯಿತು. ಆಗ ಈ ಸಮಾಜದವರಿಗೆ ಜಗದ್ಗುರುವಿನ (ಸರವರೆ ಆಲಂ) ಜ್ಞಾನವು ಇಲ್ಲವೆಂದು ನನಗೆಸ್ಪಷ್ಟವಾಗಿ ತಿಳಿಯಿತು. ನಂತರ ಈ ಸಮಾಜದವರ ಒಂದು ಸಮ್ಮೇಳನವು ೧೯೨೫ ರಲ್ಲಿ ಬೊಂಬಾಯಿನಲ್ಲಿ ಸೇರುವುದಾಗಿ ಗೊತ್ತಾಯಿತು. ಅಲ್ಲಿ ಅವರಿಗೆ ಜಗದ್ಗುರುವಿನ (ಸರವರೆ ಆಲಂ) ನಿಜಾಂಶವನ್ನು ತಿಳಿ-

ಸಲು ಕುತೂಹಲಪಟ್ಟ ಸಮಾಜ ರಕ್ಷಕರಾದ ಡಾಕ್ಟರ್ ಆನಿಬೆಸೆಂಟಮ್ಮನವ
ರನ್ನು ಆ ಸಮ್ಮೇಳನದಲ್ಲಿ ಒಂದು ವ್ಯಾಖ್ಯಾನ ಮಾಡಲು ಅವಕಾಶವನ್ನು
ಕೊಡಲು ಕೇಳಿದೆನು. ಆದರೆ ಅವರು ಇದಕ್ಕೆ ಸಮ್ಮತಿಸಲಿಲ್ಲ. ಆದುದರಿಂದ
ನನ್ನ ಸದುದ್ದೇಶವನ್ನು ಈ ಪುಸ್ತಕದ ಮೂಲಕ ಸರ್ವರಿಗೂ ಹೊರಪಡಿಸ
ಬೇಕಾಯಿತು. ಇದನ್ನು ೧೯೨೬ ರಲ್ಲಿ ಬರೆಯಲು ಪ್ರಾರಂಭಿಸಿದೆನು. ಆಗ್ಗೆ
ಜಗದ್ಗುರು ನಿರಂಜನ ಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗೆಂಬರರು
ನಾನು ತುರ್ಯಾವಸ್ಥೆಯಲ್ಲಿರುವಾಗೆ ಬಂದು "ನಿರಂತರವೂ ನನ್ನ ಜೀವನಚರಿತ್ರೆ
ಯನ್ನು ಬರೆಯುತ್ತಿರು" ಎಂದು ಅಪ್ಪಣೆಕೊಡಿಸಿದರು. ಇದರಲ್ಲಿ ತ್ರಿಜಗ
ದೊಲ್ಲಭರಾದ ಜಗದ್ಗುರುಗಳ ಸ್ವರೂಪವು ಸಂಪೂರ್ಣವಾಗಿ ಪ್ರಸನ್ನವಾಗಿ
ರುತ್ತದೆ.

ಈ ಗ್ರಂಥವು ಹಜರತ್ ಮಹಮ್ಮದ್ ಪೈಗಂಬರರ ಜಗತ್ತಿನ ಗುರುತ್ವ
ವನ್ನು ಸಾಧಿಸುವ ಇಪ್ಪತ್ತೈದು ಪ್ರಮಾಣಗಳನ್ನೊಳಗೊಂಡಿದೆ. ಇದರ
ಪ್ರಥಮಭಾಗವು ಮಾತ್ರ ಈಗ ಮುದ್ರಿಸಲ್ಪಟ್ಟಿರುತ್ತದೆ.

---

## ಪ್ರಥಮಭಾಗದ ಮುಖ್ಯ ವಿಷಯಗಳು.

೧. ಆತ್ಮ ರಹಸ್ಯ.
೨. ಜಗದ್ಗುರುವು ಸ್ಥೂಲಸೂಕ್ಷ್ಮವ್ಯಾಪಿಯು.
೩. ಜಗದ್ಗುರುವಿನ ಸ್ವಭಾವಸಿದ್ಧವಾದ ೨೫ ಪ್ರಮಾಣಗಳು.
೪. ನಾಮಧಾರಿ ಜಗದ್ಗುರುಗಳ ವಿಚಾರವು.
೫. ಸ್ವಭಾವಸಂಯುಕ್ತವಾದ ೨೦ ಪ್ರಮಾಣಗಳಿಂದ ಜಗದ್ಗುರು
ನಿರಂಜನ ಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗಂ
ಬರರ ನಿಜತ್ವಸಾಧನೆಯು.

ಈ ಪುಸ್ತಕದ ದ್ವಿತೀಯ ಭಾಗವು ಅಂತ್ಯದ ಐದು ಪ್ರಮಾಣಗಳನ್ನೊಳ
ಗೊಳ್ಳುವುದು.

ಪರಿಚಯಜ್ಞಾನವಿಲ್ಲದೆ ಜಗದ್ಗುರು ನಾಮಾಂಕಿತರಾದ ಮಹನೀಯರು ಈಗಲಾದರೂ ಜಗದ್ಗುರುವಿನ ನಿಜತ್ವವನ್ನು ತಿಳಿದು ಜಗದ್ಗುರುವಿನ ಪದವಿಗೆ ಕುಂದಕವನ್ನು ತರಲಾರರೆಂದು ಭಾವಿಸುತ್ತೇನೆ. ಕೆಲವು ಸಿಂಹಾಸನಾಧಿಪತಿಗಳು ಲೌಕೀಕ ಮರ್ಯಾದೆಗೋಸುಗವೂ, ಪ್ರಪಂಚದಲ್ಲಿ ಘನತೆಯನ್ನು ಹೊಂದಲೋಸುಗವೂ ಜಗದ್ಗುರು (ಸರವರೆ ಆಲಂ) ಎಂಬ ನಾಮವನ್ನು ಧರಿಸಿದ ಹಾಗೆ ವಿದಿತವಾಗುತ್ತದೆ. ಇದರಿಂದ ವಿಚಾರಶಾಲಿಗಳಿಗೂ ಮತ್ತು ಮುಸಲ್ಮಾನರಿಗೂ ದುಃಖವುಂಟಾಗುವುದು. ಇದನ್ನು ತಿಳಿದು ಹಜರತ್ ಮಹಮ್ಮದ್ ಪೈಗಂಬರರ ಪದವಿಗೆ ನ್ಯೂನತೆಯನ್ನುಂಟುಮಾಡದೆ ಸನ್ಮಾರ್ಗಾವಲಂಬಿಗಳಾಗಿ ಆತ್ಮದ್ರೋಹವೆಂಬ ಪಾಪದಿಂದ ದೂರವಾಗುತ್ತಾರೆಂದು ನಂಬಿರುತ್ತೇನೆ.

ಈ ಪುಸ್ತಕವನ್ನು ಸಾಧ್ಯವಾದಮಟ್ಟಿಗೆ ಪ್ರಯತ್ನಪಟ್ಟು ಶುದ್ಧವಾದ ಕನ್ನಡಭಾಷೆಯಲ್ಲಿ ಬರೆದು ತಿದ್ದಿದ ನಮ್ಮ ಶಿಷ್ಯರಾದ ಪಾಲವ್ವನಹಳ್ಳಿ ಸೈಯ್ಯದ್ ಕಾಸಿಂಸಾಹೇಬ್ ಲೆಕ್ಚರಾರ್‌ರವರಿಗೆ ಪರಮಾತ್ಮನು ತನ್ನಸಾಯುಜ್ಯವನ್ನು ದಯಪಾಲಿಸಲೆಂದು ಹಾರೈಸುತ್ತೇನೆ.

ಸಿದ್ದೀಖ್ ದೀರ್ಘದಾರ್ ಚನ್ನಬಸವೇ

# ವಿಷಯಾನುಕ್ರಮಣಿಕೆ.


| ವಿಷಯ. | ಪುಟ. |
|---|---|
| ಆತ್ಮರಹಸ್ಯ .... | ೧ |
| ಸ್ಥೂಲ ಮತ್ತು ಸೂಕ್ಷ್ಮದೇಹಗಳ ಸಂಯುಕ್ತ ಆಧಾರಗಳು | ೧೦ |
| ಜಗದ್ಗುರುವಿನ ಸ್ವಭಾವ ಪ್ರಮಾಣಗಳು .... | ೧೬ |
| ಕರ್ಮವೇ ಲಯ ಧರ್ಮವೇ ಜಯ | |
| ಶ್ರೀರಾಮಾವತಾರ .... | ೨೩ |
| ಶ್ರೀ ಕೃಷ್ಣಾವತಾರ .... | ೨೪ |
| ಬೌದ್ಧಾವತಾರ .... | ೨೫ |
| ಮೂಸಾ ಪೈಗಂಬರರು .... | ೨೬ |
| ಏಸುಕ್ರೈಸ್ತರ ಅವತಾರ | ೨೬ |
| ಸದ್ಯೋಜಾತ ಮುಖದಿಂದ ಜನಿಸಿದ ರೇಣುಕಾರಾಧ್ಯರು | ೨೭ |
| ವಾಮದೇವಮುಖದಿಂದ ಜನಿಸಿದ ಉಜ್ಜಯಿನಿ ಸಿಂಹಾಸನದ ಮರುಳಾರಾಧ್ಯರು | ೨೮ |
| ಕೊಲ್ಲಿಪಾಕಿ ಸಿಂಹಾಸನಾರೂಢರಾದ ತತ್ಪುರುಷಮುಖದಿಂದ ಜನಿಸಿದ ಏಕೋರಾಮಾರಾಧ್ಯರು .... | ೨೯ |
| ಪರ್ವತದ ಅಘೋರಮುಖದಿಂದ ಜನಿಸಿರುವಪಂಡಿತಾರಾಧ್ಯರು | ೩೭ |
| ಹಿಮಾಚಲಪರ್ವತದಲ್ಲಿ ಈಶಾನ್ಯ ಮುಖದಿಂದ ಹುಟ್ಟಿದ ವಿಶ್ವಾರಾಧ್ಯರು .... | ೩೯ |
| ಸಿಕ್ಖ್‌ಮತಸ್ಥಾಪಕರಾದ ಬಾಬಾ ನಾನಕ್‌ಷಾಹ ಇವರ ಸಿಂಹಾಸನಾಧಿಪತಿಗಳು. | ೪೦ |
| ಶ್ರಿಂಗೇರಿ ಸಿಂಹಾಸನ ಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಮತ್ತು ಈ ಸಿಂಹಾಸನಾರೂಢರು .... | ೪೧ |
| ಮೆಲಖೇಡದ ಸಿಂಹಾಸನಸ್ಥಾಪಕರಾದ ಮಧ್ವಾಚಾರ್ಯರು ಮತ್ತು ಇವರ ಸಿಂಹಾಸನಾರೂಢರು .... | ೪೧ |
| ಮೈಸೂರಲ್ಲಿರುವ ಶ್ರೀರಾಮಾನುಜಾಚಾರ್ಯರ ಸಿಂಹಾಸನದವರು .... | ೪೨ |
| ಚಿತ್ರದುರ್ಗದ ಲಿಂಗಾಯಿತ ಶೂನ್ಯ ಸಿಂಹಾಸನಾಧ್ಯಕ್ಷರು | ೪೩ |
| ಗೆದಗಿನಲ್ಲಿರುವ ಜೀವಾಳಸವಯದ ತೋಟದಸ್ವಾಮಿಯ ಸಿಂಹಾಸನಾರೂಢರು | ೪೫ |

| ವಿಷಯ. | ಪುಟ. |
|---|---|
| ಕಾದಿಯಾನ ಸಿಂಹಾಸನದ ಅಧ್ಯಕ್ಷರಾದ ವೀರವಸಂತರಾಯರು | ೩೬ |
| ಥಿಯಸಾಫಿಕಲ್ ಸಮಾಜಕ್ಕೆ ಅಧ್ಯಕ್ಷರಾಗಿರುವ ಜೆ. ಕೃಷ್ಣಮೂರ್ತಿಯವರು | ೩೯ |
| ಜಗದ್ಗುರು | ೩೯ |
| ಜಗದ್ಗುರುವಿನ ಮಹಾವಾಕ್ಯವು ಚಿತ್ರದುರ್ಗದ ಶೂನ್ಯಸಿಂಹಾಸನದಲ್ಲಿ | ೪೩ |
| ಕೊಡೆಕಲ್ಲು ಬಸಪ್ಪನವರ ಮಠದಲ್ಲಿ ..... | ೪೫ |
| ತಿಂತಿಣಿ ಮೌನೇಶ್ವರಸ್ವಾಮಿಯ ಮಠದಲ್ಲಿ .... | ೪೫ |
| ಕೊಪ್ಪಳದ ಸಿರಸಪ್ಪನ ಮಠದಲ್ಲಿ | ೪೬ |
| ಕಡಗಂಚಿ ಮರುಳಾರಾಧ್ಯ ಸಂಪ್ರದಾಯಕರ ಮಠದಲ್ಲಿ | ೪೭ |
| ಶಿರಹಟ್ಟಿ ಫಕೀರಸ್ವಾಮಿಗಳವರ ಮಠದಲ್ಲಿ | ೪೮ |
| ವರವಿ ಮೌನೇಶ್ವರಸ್ವಾಮಿಯವರ ಮಠದಲ್ಲಿ | ೫೧ |
| ಹುಬ್ಬಳ್ಳಿ ಸಿದ್ಧಾರೂಢರ ಮಠದಲ್ಲಿ | ೫೨ |
| ಸಿಂಧು ಇಲಾಖೆಯ ಬಾಬಾ ನಾನಕಷಾಹರ ಮಠದಲ್ಲಿ | ೫೨ |
| ಶ್ರೀ ಶಂಕರಾಚಾರ್ಯರ ಮಠದಲ್ಲಿ | ೫೪ |

| ವಿಷಯ. | ಪುಟ. |
|---|---|
| ಒಂದನೆಯ ಪ್ರಮಾಣವು | ೫೬ |
| ಎರಡನೆಯ ಪ್ರಮಾಣವು | ೬೨ |
| ಹಜರತ್ ಮಹಮ್ಮದ್ ಪೈಗಂಬರರ ಗುಣಸ್ವರೂಪಗಳು | ೮೬ |
| ಭಗವದ್ಗೀತೆ, ಕುರಾನ ಮತ್ತು ಹದೀಸು | ೯೦ |
| ಇಂಜೀಲ ಕುರಾನ ಮತ್ತು ಹದೀಸು | ೯೨ |
| ಪುರಾತನ ಕಾಲಜ್ಞಾನಗಳು ಕುರಾನ ಮತ್ತು ಹದೀಸುಗಳು | ೯೩ |
| ಮೂರನೆಯ ಪ್ರಮಾಣವು (ಮೂರ್ತಿಖಂಡನೆ) | ೯೮ |
| ಶ್ರುತಿಗಳಲ್ಲಿ, ಶಿವಗೀತೆಯಲ್ಲಿ | ೧೦೦ |
| ಅವಧೂತಗೀತೆಯಲ್ಲಿ | ೧೦೧ |
| ಕಶ್ಯಪಸ್ಮೃತಿಯಲ್ಲಿ | ೧೦೨ |
| ಸೂತಸಂಹಿತೆಯಲ್ಲಿ | ೧೦೨ |
| ಚನ್ನಬಸವ ಪುರಾಣದಲ್ಲಿ | ೧೦೪ |
| ಸರ್ವಜ್ಞ ವಚನದಲ್ಲಿ | ೧೦೪ |
| ನ್ಯೂಹಿನ ಗ್ರಂಥದಲ್ಲಿ | ೧೦೫ |
| ಅಬ್ರಾಹಾಮನ ಗ್ರಂಥದಲ್ಲಿ | ೧೦೬ |
| ಇಸ್ರಾಯಿಲ ಗ್ರಂಥದಲ್ಲಿ | ೧೦೬ |
| ಬೈಬಲಿನಲ್ಲಿ | ೧೦೭ |
| ಇಂಜೀಲನಲ್ಲಿ | ೧೦೭ |
| ನಾಲ್ಕನೆಯ ಪ್ರಮಾಣವು | ೧೧೧ |
| ಐದನೆಯ ಪ್ರಮಾಣವು | ೧೧೪ |

| ವಿಷಯ | ಪುಟ |
|---|---|
| ಆರನೆಯ ಪ್ರಮಾಣವು | ೧೨೫ |
| ತ್ರಿಮೂರ್ತಿಗಳ ಸ್ವರೂಪ | ೧೨೬ |
| ಬ್ರಹ್ಮಶಕ್ತಿಗಳು (೪೯) | ೧೨೭ |
| ವಿಷ್ಣುಶಕ್ತಿಗಳು (೪೪) | ೧೨೭ |
| ರುದ್ರಶಕ್ತಿಗಳು (೫೦) | ೧೨೮ |
| ಏಳನೆಯ ಪ್ರಮಾಣವು | ೧೩೯ |
| ಬ್ರಾಹ್ಮಣವರ್ಣವು ಮತ್ತು ಷಟ್ಕರ್ಮ, ಯಜನ ಯಾಜನ | ೧೩೦ |
| ಹಿಂದೂ ಧರ್ಮದಲ್ಲಿ ಮಾಂಸ ಭಕ್ಷಣೆ | ೧೩೧ |
| ಅಧ್ಯಯನ | ೧೩೬ |
| ಅಧ್ಯಾಪನ | ೧೩೮ |
| ದಾನಪ್ರತಿಗ್ರಹ | ೧೩೮ |
| ಕ್ಷತ್ರಿಯವರ್ಣವು | ೧೪೧ |
| ವೈಶ್ಯರ ವರ್ಣವು ಅಧ್ಯಯನ ಮತ್ತು ದಾನ | ೧೪೩ |
| ಶೂದ್ರರವರ್ಣವು | ೧೪೪ |
| ಎಂಟನೆಯ ಪ್ರಮಾಣವು | ೧೪೬ |
| ಒಂಭತ್ತನೆಯ ಪ್ರಮಾಣವು | ೧೪೯ |
| ಹತ್ತನೆಯ ಪ್ರಮಾಣವು | ೧೫೯ |
| ಹನ್ನೊಂದನೆಯ ಪ್ರಮಾಣವು | ೧೬೨ |

| ವಿಷಯ. | ಪುಟ. |
|---|---|
| ಹನ್ನೆರಡನೆಯ ಪ್ರಮಾಣವು | ೧೬೩ |
| ಜಗದ್ಗುರುವಿನ ಪ್ರಾರ್ಥನೆ ವಿಧಾನ | ೧೬೫ |
| ಹದಿಮೂರನೆಯ ಪ್ರಮಾಣವು | ೧೭೦ |
| ದ್ವೈತಮತ ಸಿದ್ಧಾಂತ | ೧೭೧ |
| ಅದ್ವೈತಮತ ಸಿದ್ಧಾಂತ | ೧೭೩ |
| ವಿಶಿಷ್ಟಾದ್ವೈತಮತವು | ೧೭೫ |
| ಹದಿನಾಲ್ಕನೆಯ ಪ್ರಮಾಣವು | ೧೭೯ |
| ಹದಿನೈದನೆಯ ಪ್ರಮಾಣವು | ೧೮೨ |
| ಹದಿನಾರನೆಯ ಪ್ರಮಾಣವು | ೧೮೯ |
| ಹದಿನೇಳನೆಯ ಪ್ರಮಾಣವು | ೧೯೧ |
| ಲಿಂಗಾಯಿತ ಧರ್ಮವು | ೧೯೧ |
| ಶಿವಾದ್ವೈತ ಸಿದ್ಧಾಂತ ಮುಖ್ಯತ್ವವು | ೧೯೯ |
| ಕ್ರೈಸ್ತರ ಧರ್ಮವು | ೨೦೦ |
| ಎಹೂದ್ಯ ಧರ್ಮವು | ೨೦೪ |
| ಕ್ಷತ್ರಿಯ ಧರ್ಮವು | ೨೦೫ |
| ಕುಂಚಿಜ್ಞಾನತರಧರ್ಮವು | ೨೦೯ |
| ಜೈನ ಧರ್ಮವು | ೨೧೦ |

| ವಿಷಯ | ಪುಟ. |
|---|---|
| ಹದಿನೆಂಟನೆಯ ಪ್ರಮಾಣವು | ೨೧೪ |
| ಜಗದ್ಗುರುಗಳ ನಂತರ ಅವತರಿಸಿದ ಕಾರ್ಯ ಕಾರಣ ಗುರುಗಳು | ೨೧೫ |
| ಹತ್ತೊಂಭತ್ತನೆಯ ಪ್ರಮಾಣವು (ಜಗದ್ಗುರು ಪ್ರಸನ್ನತೆ) | ೨೧೯ |
| ಸುಲೇಮಾನ ಪ್ರವಾದಿಯ ಗ್ರಂಥದಲ್ಲಿ | ೨೨೦ |
| ಡೇನಿಯಲ್ ಪ್ರವಾದಿಯ ಗ್ರಂಥದಲ್ಲಿ | ೨೨೧ |
| ಪರ್ಷಿಯಾದೇಶದ ಒಬ್ಬ ಮಹಾತ್ಮರ ಗ್ರಂಥದಲ್ಲಿ | ೨೨೨ |
| "ಜಬ್ಬೂರ" ಗ್ರಂಥದಲ್ಲಿ | ೨೨೩ |
| ಮೂಸ ಪೈಗಂಬರರ "ಖುರೂಜ" ಗ್ರಂಥದಲ್ಲಿ | ೨೨೪ |
| ಅಬ್ರಹಾಮನ ಪತ್ನಿಯಾದ ಸಾರಾರವರು "ತಕ್‌ವೀನ" ಗ್ರಂಥದಲ್ಲಿ | ೨೨೪ |
| ಹೊಸವಡಂಬಡಿಕೆಯಲ್ಲಿ | ೨೨೫ |
| ಈಜಿಪ್ತ್‌ದೇಶದ ಒಂದು ಶಿಲಾಶಾಸನದಲ್ಲಿ | ೨೨೫ |
| ಸೊಕ್ರೆಟಸ್ ಎಂಬ ತತ್ವಜ್ಞಾನಿಯ ಹೇಳಿಕೆ | ೨೨೫ |
| ಚೈನಾದೇಶದ ಒಂದು ಗ್ರಂಥದಲ್ಲಿ | ೨೨೬ |
| ಇಟಲಿದೇಶದ ಆಸ್ಥಾನದ ಒಂದು ಪತ್ರಿಕೆಯಲ್ಲಿ | ೨೨೬ |
| ಸ್ಪೇಯ್ನ್‌ದೇಶದ ಆಸ್ಥಾನದ ಒಂದು ಪತ್ರಿಕೆಯಲ್ಲಿ | ೨೨೭ |
| "ದಸಾತೀರ್" ಗ್ರಂಥದಲ್ಲಿ | ೨೨೭ |
| ಹಿಂದೂದೇಶದ ಪುರಾತನ ಗ್ರಂಥಗಳಲ್ಲಿ | ೨೨೮ |
| ಸಪ್ತದ್ವೀಪಗಳು | ೨೩೪ |
| ಇಪ್ಪತ್ತನೆಯಪ್ರಮಾಣವು | ೨೩ |

# ಕನ್ನಡದ ಶುದ್ಧಾಶುದ್ಧಪತ್ರಿಕೆ.

| ಅಶುದ್ಧ | ಶುದ್ಧ | ಪಂಕ್ತಿ | ಪುಟ |
|---|---|---|---|
| ತೋರಿಕೆಯಲ್ಲಿಯೇ | ರಿಕೆಯಂತೆಯೇ | ೨೭ | ೪ |
| ಆತ್ಮಪ್ರಸನ್ನತೆಗೆ | ಆತ್ಮಪ್ರಸನ್ನತೆಗೆ | ೮ | ೭ |
| ಅಧಾರವಾಗಿ | ಆಧಾರವಾಗಿ | ೨೦ | ೯ |
| ಈಶ್ವರವತಾರಿಯಾದದು | ಈಶ್ವರವತಾರಿಯಾದನು | ೭ | ೧೦ |
| ಆತ್ಮಸ್ವರೂಪವಾಗುತ್ತದೆ | ಆತ್ಮಸ್ವರೂಪವಾಗುತ್ತದೆ | ೭ | ೧೧ |
| ಪ್ರಾಣಿಗೆಳಿಗೆ | ಪ್ರಾಣಿಗಳು | ೩ | ೧೩ |
| ಪರವತ್ಮನೊಬ್ಬನೇ | ಪರಮಾತ್ಮನೊಬ್ಬನೇ | ೧೦ | ೧೫ |
| ಆತನು | ಆತನು | ೮ | ೧೯ |
| ಹಸುವಿಗೆ | ಹಸಿವಿಗೆ | ೨೪ | ೨೧ |
| ಹೆಚ್ಚಿಲು | ಹೆಚ್ಚಿಸಲು | ೮ | ೩೨ |
| ಪ್ರಚಾರವೇ | ಪ್ರಕಾರವೇ | ೫ | ೩೫ |
| ಕೇಶವಾರ್ | ಕೇಶವಾತ್ | ೨೧ | ೩೬ |
| ನಾಭಿಸ್ಥಾನದವಾದ | ನಾಭಿಸ್ಥಾನವಾದ | ೮ | ೪೨ |
| ಅಧಾರಗೆಳೊಂದಿಗೆ | ಆಧಾರಗಳೊಂದಿಗೆ | ೪ | ೪೫ |
| ವಗುವಿಗೆ | ಮಗುವಿಗೆ | ೮ | ೪೮ |
| ಆತ್ಮರಹಸ್ಯಗೆಳನ್ನು | ಆತ್ಮರಹಸ್ಯಗಳನ್ನು | ೬ | ೫೨ |
| ಅಧಾರಕ್ಕೆ | ಆಧಾರಕ್ಕೆ | ೨೮ | ೬೧ |
| ಸಂಕಡ | ಸಂಗಡ | ೨ | ೮೦ |
| ಕರಾನ್ ಕಾಲಜ್ಞಾನಗಳು | ಪುರಾತನಕಾಲಜ್ಞಾನಗಳು | | ೯೪ |

| ಅಶುದ್ಧ | ಶುದ್ಧ | ಪಂಕ್ತಿ | ಪುಟ |
|---|---|---|---|
| ಅಗ | ಆಗ | ೨೦ | ೯೫ |
| ಓಡಿಹೋಗುತ್ತದೆ | ಓಡಿಹೋಗುತ್ತವೆ | ೨೩ | ೧೧೧ |
| ಭೂಮಿಯು | ಭೂಮಿಯ | ೯ | ೧೧೩ |
| ಅಪರಂತೆ | ಅದರಂತೆ | ೧೪ | ೧೧೫ |
| ಧರರ್ಮದಲ್ಲಿಯೂ | ಧರ್ಮದಲ್ಲಿ | ೧೬ | ೧೧೬ |
| ನ್ಯಾಧಿಪತಿ | ನ್ಯಾಯಾಧಿಪತಿ | ೩ | ೧೨೯ |
| ಆಜ್ಞೆಯನ್ನ | ಆಜ್ಞೆಯನ್ನು | ೨ | ೧೩೧ |
| ಅಕಾಲದಲ್ಲಿ | ಅಕಾಲದಲ್ಲಿ | ೮ | ೧೩೧ |
| ಅವುಗಳ | ಅವುಗಳ | ,, | ,, |
| ಅಪಶುವಿನ | ಆ ಪಶುವಿನ | ೧೦ | ೧೩೨ |
| ಪಿತೃಗಳ | ಪಿತೃಗಳು | ೨ | ೧೩೩ |
| ಮಾಂವಂ | ಮಾಂಸಂ | ೧೪ | ೧೩೫ |
| ಅತನು* | ಅತನು | ೯ | ೧೩೭ |
| ಬ್ರಾಹ್ಮಣರು | ಬ್ರಾಹ್ಮಣರ | ೧೮ | ೧೪೪ |
| ಭಾಷೆಯು | ಭಾಷೆಯ | ೧೭ | ೧೪೯ |
| ಇದಕ್ಕೆ | ಇದು | ೩ | ೧೫೨ |
| ಹಿಂದಿನ | ಹಿಂದಿ | ೧ | ೧೫೬ |
| ಅ | ಆ | ೧೫ | ,, |
| ಜನ | ಜನರು | ೯ | ೧೫೮ |
| ತಮ್ಮ | ತಮ್ಮ | ೨೧ | ೧೬೦ |
| ಹಾವುಣೆ | ಹಾವುಗೆ | ೯ | ೧೬೨ |
| ಡಬಡ್ಡಾ | ಡಬಡ್ಡಾ | ೧೨ | ೧೬೩ |
| ಧರ್ಮಗಳು | ಧರ್ಮಗಳವರು | ೧ | ೧೬೪ |

| ಅಶುದ್ಧ | ಶುದ್ಧ | ಪಂಕ್ತಿ | ಪುಟ |
|---|---|---|---|
| ದಿಸಬೇಕು | ಹೊಂದಿಸಬೇಕು | ೮ | ೧೬೬ |
| ಆರುಸಲವಾಗಿ | ಆರುಸಲವಾಗಿ | ೩ | ೧೭೦ |
| ಪುರಾತನದಲ್ಲಿ | ಪುರಾತನರಲ್ಲಿ | ೧೮ | ೧೭೦ |
| ತಪ್ಪದಾದು | ತಪ್ಪಾದುದು | ೧೫ | ೧೭೧ |
| ಆತನೇ | ಆತನೇ | ೨೨ | ೧೭೨ |
| ಪರಮಾತ್ಮನಾದ | ಪರಮಾತ್ಮನಾದರೆ | ೧೯ | ೧೭೭ |
| ಪರಮಾತ್ಮನ | ಪರಮಾತ್ಮನು | ೫ | ೧೮೧ |
| ಂಟಉ | ಉಂಟು | ೨೦ | ,, |
| ತಗಲಿದ | ತಗಲದ | ೭ | ೧೮೨ |
| ಬಿಲಾಲ್‌ರವರನ್ನು | ಬಿಲಾಲ್‌ರವರು | ೧೭ | ೧೮೩ |
| ಆಲೆ ಫಾರೂಬಿ | ಆಲೆ ಫಾರೂಖಿ | ೨೩ | ೨೧೭ |
| ಮುತ್ತು | ಮತ್ತು | ೪ | ೨೨೮ |
| ಇದ | ಇದ | ೮ | ೨೩೦ |

# ಅರಬ್ಬಿ ಶುದ್ಧಾಶುದ್ಧಪತ್ರಿಕೆ

| ಅಶುದ್ಧ | ಶುದ್ಧ | ಪುಟ | ಪಂಕ್ತಿ |
|---|---|---|---|
| ಕ್ | ಅಕ್ | ೫೭ | ೮ |
| ಹೆ | ಯೊಹೆ | ೫೮ | ೧೯ |
| ಖಬಲು | ಕಬ್‌ಲು | ೫೯ | ೪ |
| ಫಿ | ಫೀ | ೫೪ | ೪ |
| ಆಮನ | ಅಮನಾ | ೬೧ | ೫ |
| ಫಿ | ಫೀ | ೬೩ | ೧೪ |
| ಅದಸಿಲ್ | ಅದನೀ | ೬೩ | ೧೫ |
| ಲೈಹೆ | ಅಲೈಹೆ | ೬೪ | ೬ |
| ಷ್ಟಿತಿತೆ | ಷ್ಟಿರಿತಿ | ೬೪ | ೧೪ |
| ಸನ | ಸನಾ | ೬೪ | ೧೭ |
| ಯಜ | ಯಜೀ | ೬೪ | ೨೦ |
| ನಸಃ | ಸಮಾ | ೬೪ | ೨೫ |
| ಆರಡ | ಅರ್ದೊ | ೬೪ | ೨೬ |
| ಯತ | ಕಮಲ | ೬೪ | ೨೭ |
| ತಜಾ | ಕಜಾ | ೬೫ | ೪ |
| ತಿಂಃ | ತಿಂವವ | ೧೦೫ | ೧೧ |
| ಮುಷರಕೀನ | ಮುಷರೆಕೀನ | ೧೦೬ | ೬ |
| ಶುರೆಜನ್ಮನ | ಮುರಜವೂನ | ೧೧೬ | ೪ |
| ಅಲೈಕ | ಅಲೈನಾ | ೧೧೬ | ೧೪ |

| ಆಶುದ್ಧ | ಶುದ್ಧ | ಪುಟ | ಪಂಕ್ತಿ |
|---|---|---|---|
| ನುಫರ್‌ರಿಡೋ | ನುಫರಿಕೋ | ೧೧೬ | ೨೧ |
| ಇಬ್ರಾಹೀವ | ಇಬ್ರಾಹೀಮ | ೧೧೭ | ೧ |
| ಇಸ್‌ಹಾರಕ | ಇಸ್‌ಹಾಕ | ೧೧೭ | ೧ |
| ಹದ್ದೈನ | ಹದ್ದೈನಾ | ೧೧೭ | ೨ |
| ಫತದ | ಫಕದ | ೧೧೭ | ೧೭ |
| ತ್ಯಾಮನ್ | ಕೌಮನ್ | ೧೧೭ | ೧೭ |
| ಮೆಕ್‌ತದೆ | ಮುಕ್‌ತದೆಹ್ | ೧೧೭ | ೧೯ |
| ಅಂಜಲಲಾಹೆ | ಅಂಜಲಲ್ಲಾಹೊ | ೧೧೯ | ೧೨ |
| ತತ್‌ಬೆ | ತತ್ತಬೆ | ೧೧೯ | ೧೩ |
| ವಿನಲ್ | ಮಿನಲ್ | ೧೧೯ | ೧೫ |
| ವತಾಷಾ | ವಲೌಷಾ | ೧೧೯ | ೧೬ |
| ಹೆದ | ಹೆದಾ | ೧೧೯ | ೧೬ |
| ಮೆವ್ವೂನ | ಮವ್ವೂನ | ೧೨೦ | ೧೭ |
| ಲತುಂ | ಲಕುಂ | ೧೨೧ | ೧ |
| ಖಜೆ | ಬಿಜಿ | ೧೨೧ | ೧೯ |
| ಕುಲಿಸ್ಯ | ಕುಲಿಸ್ | ೧೨೧ | ೨೨ |
| ಬತೂನ | ಬುತೂನ | ೧೨೧ | ೨೩ |
| ಲನ್ನಾಸ್ | ಲಿನ್ನಾಸ್ | ೧೨೧ | ೨೫ |
| ಖಲಖಲ್ | ಖಲಕಲ್ | ೧೨೨ | ೧೨ |
| ವಾತೆಲ್ | ವಾತಿಲ್ | ೧೨೨ | ೧೩ |
| ನ್‌ಹು | ನಾಹು | ೧೨೩ | ೧೦ |
| ನುಫರ್ಕೆಖು | ನುಫರ್ಕೆಕೂ | ೧೨೪ | ೭ |
| ಲಿಹ | ಲಹು | ೧೨೪ | ೪ |

| ಅಶುದ್ಧ | ಶುದ್ಧ | ಪುಟ | ಪಂಕ್ತಿ |
|---|---|---|---|
| ಖಾತಿಮುನ್ | ಬಾತಿನುನ್ | ೧೨೭ | ೮ |
| ಮಹವೂದುನ್ | ಮಹಮೂದುನ್ | ೧೨೭ | ೧೪ |
| ತೈಯಬುನ್ | ತೈಯಬುನ್ | ೧೨೭ | ೧೮ |
| ಜಅಲನ್‌ಹಾ | ಜಾಲನಾಹಾ | ೧೩೦ | ೧೬ |
| ಕಪ್ಫಾ | ಕಾಪ್ಫಾ | ೧೩೬ | ೧೭ |
| ಬಿಲಾತೆತ | ಬೆಸೊಲಾತೆಕ | ೧೩೮ | ೧ |
| ತು. ಆ. ೧೮ | ಕು. ಆ. ೧೭ | ೧೩೮ | ೩ |
| ಮಿನ್‌ತ್ | ಮಿನತ್ | ೧೩೯ | ೨೧ |
| ಹಾಪಾ | ಹಾಫಾ | ೧೩೯ | ೨೩ |
| ಫಿ | ಫೀ | ೧೪೦ | ೮ |
| ನೆಬ್‌ನ್‌ಸ್ | ವಬ್‌ನಸ್ | ೧೪೦ | ೯ |
| ಸಕನೂಲ್‌ಹುಂ | ಸಕನುಲ್‌ಲಹುಂ | ೧೪೦ | ೨೦ |
| ಫಿ | ಫೀ | ೧೪೨ | ೭ |
| ವಝಖಾ | ವಯಖಾ | ೧೪೩ | ೯ |
| ಫಿ | ಫೀ | ೧೪೫ | ೯ |
| ರುಲ್ | ರಲ್ | ೧೪೫ | ೧೭ |
| ಅಮನು | ಅಮನು | ೧೪೬ | ೧ |
| ವತಾಲಾ | ವಲೌಲಾ | ೧೫೯ | ೧೯ |
| ಪಂ | ಫಂ | ೧೬೪ | ೧೦ |
| ಕ್‌ಅಲ್ಲಾಹುಮ್ಮ | ಕಲ್ಲಾಹುಮ | ೧೬೬ | ೧ |
| ಇಬಾದುಲ್ಲಾ | ಇಬಾದಿಲ್ಲಾ | ೧೬೪ | ೨೦ |
| ಐದಿಯಮ್ | ಐದಿಯಹಿಮ್ | ೧೭೩ | ೮ |
| ಠಮು | ಠಮಾ | ೧೭೩ | ೧೪ |

| ಅಶುದ್ಧ | ಶುದ್ಧ | ಪುಟ | ಪಂಕ್ತಿ |
|---|---|---|---|
| ಫಿ | ಫೀ | ೧೭೪ | ೧೪ |
| ಅನ್‌ಪುಸೆಕೂ | ಅನ್‌ಪುಸೆಕುಂ | ೧೭೭ | ೬ |
| ಅಫೇರ | ವಅಷೀರ | ೧೪೦ | ೨೧ |
| ತಖ್‌ಖಾ | ತಖ್‌ಖೌನ | ೧೪೦ | ೨೨ |
| ವಮಾಜೌಜುಬ | ವಮಾಜುಬ | ೧೪೫ | ೭ |
| ಕುತುಬೆ | ಕುತುಬ | ೧೯೫ | ೧೪ |
| ಮನ್‌ರ್ | ಮನ್ | ೧೯೯ | ೧೪ |
| ಹತಾ | ಹತ್ತಾ | ೨೦೫ | ೧೨ |
| ಜೇನ್ನಾ | ಜನ್ನಾ | ೨೦೫ | ೧೪ |
| ಅಮ್‌ನಾಲತುಂ | ಅಮ್‌ಸಾಲಕುಂ | ೨೦೬ | ೨ |
| ಲಖೀ | ಲಕೀ | ೨೦೬ | ೪ |
| ಸೋನ | ಸೂನ | ೨೦೬ | ೧೬ |
| ಇನ್ನಾ | ಇನ್ನ | ೨೦೯ | ೧೫ |
| ಸ'ಕಿ | ಕಿಸ್ | ೨೦೯ | ೧೫ |
| ತಿಯಾಮಕ್ | ಕಿಯಾಮಂವ | ೨೦೯ | ೧೪ |
| ಆಲಾ | ವಆಲಾ | ೨೦೯ | ೧೯ |
| ಪತ್ | ಫಕ್ | | |
| ಬಲಕ | ಖಲಕ್ | ೨೦೯ | ೨೦ |
| ಜನ | ಜನ್ | ೨೧೧ | ೧೦ |
| ಇಲ | ಇಲ್ಲಾ | ೧೩೯ | ೧೯ |

# ಜಗದ್ಗುರು

## ಆತ್ಮರಹಸ್ಯ

ಜಗತ್ತಿಗೆಲ್ಲಾ ಜಗದ್ಗುರು ಒಬ್ಬನೇ ಎಂಬ ಸತ್ಯಸಿದ್ಧಾಂತವನ್ನು ಸಾಧಿಸಲು ಪ್ರಕೃತಿಯೇ ಸಾಕ್ಷಿಯಾಗಿದೆ. ಎಲ್ಲಾ ಧರ್ಮಗ್ರಂಥಗಳೂ ಇದರ ಸಲುವಾಗಿ ಅನೇಕ ಪ್ರಮಾಣಗಳನ್ನು ಒದಗಿಸುತ್ತವೆ. ಜಗದ್ಗುರುವನ್ನು ತಿಳಿಯುವ ಪೂರ್ವಕವಾಗಿ ಮನುಷ್ಯನು ತನ್ನ ನಿಜಸ್ಥಿತಿಯನ್ನು ತಿಳಿಯಬೇಕಾಗಿದೆ. ಎಂದರೆ ತನ್ನಲ್ಲಿ ತಾನು ಅಂತರ್ಮುಖನಾಗಿ ಲಕ್ಷಿಸಿದರೆ ಇದರ ನಿಜಸ್ಥಿತಿಯನ್ನು ಗ್ರಹಿಸುವುದರಲ್ಲಿ ಸಂದೇಹವೇನೂ ಇರುವುದಿಲ್ಲ. ಮರ್ತ್ಯದ ಸರ್ವದೇವೋಕ್ತ ಗ್ರಂಥಗಳಿಂದಲೂ ಮನುಷ್ಯನು ಆದಿಯಲ್ಲಿ ನಿರಾಕಾರನಾಗಿದ್ದುದು ಸತ್ಯವೆಂದು ದೃಢೀಕರಿಸಲ್ಪಟ್ಟಿರುತ್ತದೆ. ಈ ಮಾನ್ಯನು ಆಕಾರವನ್ನು ಹೊಂದಿದಮೇಲೆ ಯಾವ ಯಾವ ಆತ್ಮಶಕ್ತಿಗಳು ಪ್ರಜ್ವಲಿಸಿದವೋ ಅವುಗಳೆಲ್ಲಾ ಇವನಲ್ಲಿ ನಿರಾಕಾರನಾಗಿದ್ದಾಗಲೂ ಸಂಪೂರ್ಣವಾಗಿದ್ದವು. ಪರಮಾತ್ಮನು ಪಂಚಭೂತಗಳನ್ನು ತಾನೇ ತನ್ನಿಂದ ಹುಟ್ಟಿಸಿ ಯುಗಾಂತರಗಳಿಂದ ಕ್ರಮವಾಗಿ ಅವುಗಳಲ್ಲಿ ಲೀಲೆಮಾಡುತ್ತ ಉತ್ತರೋತ್ತರ ಪ್ರಮಾಣಗಳಿಂದ ಗೋಚರವಾಗಿರುವ ನಾನಾರೂಪಗಳನ್ನು ಧರಿಸಿದನು. ಇದರಿಂದ ತಾನೇ ಸೃಷ್ಟಿಸಲು ಬ್ರಹ್ಮನಾಗಿಯೂ, ಪಾಲಿಸಲು ವಿಷ್ಣುವಾಗಿಯೂ ಮತ್ತು ಶಿಕ್ಷಿಸಲು ರುದ್ರನೂ ಆದನು. ಈ ಬ್ರಹ್ಮಾಂಡದ ರೂಪದಲ್ಲಿ ಕಾಲಾಂತರಗಳಿಂದ ಭಿನ್ನ ಭಿನ್ನ ರೂಪಗಳನ್ನು ಧರಿಸುತ್ತ ಅಂತ್ಯದಲ್ಲಿ ಸಂಪೂರ್ಣಾತ್ಮನ ಶಕ್ತಿಯನ್ನು ಧರಿಸಿ ಮನುಷ್ಯನು ನಿರಾಕಾರದಿಂದ ಸಾಕಾರವನ್ನು ಹೊಂದಲು ಪಂಚಭೂತಗಳ ರೂಪದಲ್ಲಿಯೂ ಮತ್ತು ಸಸ್ಯರೂಪದಲ್ಲಿಯೂ ಮತ್ತು ಪಂಚಭೂತಮಯವಾದ ಶರೀರಗಳನ್ನೂ ಹೊಂದಿ ನಾನಾ

ಯೋನಿಗಳನ್ನು ದಾಟಿ ಈ ಸ್ಥೂಲದೇಹವನ್ನು ಧರಿಸಿ ನಿಂತನು. ಈತನೇ ಬ್ರಹ್ಮಸ್ವರೂಪಿಯಾದ ಕಾರಣ ಗಂಧರ್ವರಿಗೂ, ಯಮದೂತರಿಗೂ, ದೇವದೂತರಿಗೂ ಮತ್ತು ೩೩ ಕೋಟಿ ದೇವಾದಿದೇವತೆಗಳಿಗೂ ಅಧಿಕಾರಿಯಾದನು. ಬ್ರಹ್ಮಾಂಡವೆಲ್ಲಾ ಈತನ ಸನ್ನಿಧಿಯನ್ನೇ ಸೇರಿತು. ಆಗ್ಯೆ ಈತನು ಎಲ್ಲಾ ಜೀವರಾಶಿಗಳಿಗೂ ಒಡೆಯನಾದನು. ಈತನಲ್ಲಿ ಸ್ಥೂಲ ಸೂಕ್ಷ್ಮರೂಪಗಳಲ್ಲಿ ಬ್ರಹ್ಮಾಂಡವೇ ಗೋಚರವಾಗಿರುವುದರಿಂದ ಈತನೇ ಬ್ರಹ್ಮಾಂಡಕ್ಕೆಲ್ಲಾ ಒಡೆಯನಾಗಿದ್ದಾನೆ.

ಮನುಷ್ಯನಲ್ಲಿ ಬ್ರಹ್ಮಾಂಡದ ಸಂಪೂರ್ಣ ಪ್ರಸನ್ನತೆಯನ್ನು ತೋರಿಸಲು ಪ್ರಕೃತಿಯಲ್ಲಿ ಅನೇಕ ಆಧಾರಗಳು ಸ್ವಭಾವತಹ ಗೋಚರವಾಗುತ್ತವೆ. ನಾವು ಮನುಷ್ಯನ ಸ್ಥೂಲರಚನೆಯಕಡೆ ಗಮನಿಸಿದರೆ ಸ್ಥೂಲರೂಪವಾಗಿ ಇದರಲ್ಲಿ ಜಗತ್ತೆಲ್ಲಾ ಕಂಡುಬರುತ್ತದೆ. ಈತನ ಬಾಯಿಯ ಸವರಣೆಯಿಂದ ಎಂದರೆ ಈತನ ಹಲ್ಲುಗಳ ರಚನೆಯಿಂದ ಸಸ್ಯಾಹಾರಿಗಳಾದ ಪ್ರಾಣಿಗಳೂ ಮತ್ತು ಮಾಂಸಾಹಾರಿಗಳಾದ ಮೃಗಗಳೂ ಗೋಚರವಾಗುತ್ತವೆ. ಈತನಿಗೆ ಇರುವ ಹಲ್ಲುಗಳಲ್ಲಿ ನಾಲ್ಕು ಹಲ್ಲುಗಳು ಮಾತ್ರ ಮಾಂಸವನ್ನು ಅಗೆಯಲು ಅರ್ಹವಾಗಿರುವುವು. ಆದಪ್ರಯುಕ್ತ ಇವು ಛೇದಕ ಹಲ್ಲುಗಳೆಂದು ಹೇಳಲ್ಪಡುವುವು. ಉಳಿದ ೨೮ ಹಲ್ಲುಗಳು ತರಕಾರಿ ಮತ್ತು ಹುಲ್ಲು ಮುಂತಾದುವುಗಳನ್ನು ಅಗಿಯಲು ಆಧಾರವಾಗಿವೆ. ಪರಮಾತ್ಮನು ಹುಲ್ಲು ತಿನ್ನುವ ಪ್ರಾಣಿಗೆಳಿಗೆ ಒಂದುವಿಧವಾದ ಜೀರ್ಣಶಕ್ತಿಯನ್ನೂ ಮತ್ತು ಮಾಂಸಾಹಾರಿಗೆಳಾದ ಮೃಗಗಳಿಗೆ ಮತ್ತೊಂದು ವಿಧವಾದ ಜೀರ್ಣಶಕ್ತಿಯನ್ನೂ ಕರುಣಿಸಿರುತ್ತಾನೆ. ಹಸು, ಕುರಿ ಮುಂತಾದ ಪ್ರಾಣಿಗೆಳ ಉದರದಲ್ಲಿ ಮಾಂಸವು ಜೀರ್ಣಿಸುವುದಿಲ್ಲ ಮತ್ತು ಹುಲಿ, ಚಿರತೆ, ತೋಳ ಮುಂತಾದ ಮೃಗಗಳು ಹುಲ್ಲು ಮುಂತಾದ ಸಸ್ಯಹಾರಗಳನ್ನು ಅರಗಿಸಲಾರವು. ಮನುಷ್ಯನಿಗಾದರೋ ಪರಮಾತ್ಮನು ಕಾಯಿಪಲ್ಯವನ್ನೂ ಮತ್ತು ಮಾಂಸವನ್ನೂ ಜೀರ್ಣಿಸುವ ಉದರ ಶಕ್ತಿಯನ್ನು ಕೊಟ್ಟಿರುತ್ತಾನೆ. ಹಸು, ಕುರಿ ಮುಂತಾದ ಪ್ರಾಣಿಗೆಳು ತಮ್ಮ ಜೀರ್ಣಶಕ್ತಿಯನ್ನು ಮತ್ತು ಹಲ್ಲುಗೆಳನ್ನು ತಾವೇ ನಿರ್ಮಿಸಿಕೊಳ್ಳಲಿಲ್ಲ. ಹುಲಿ ಮುಂತಾದ ಮಾಂಸಾಹಾರಿಗೆಳಾದ ಮೃಗಗಳು ತಮಗೆ ಇರುವ ಹಲ್ಲುಗೆಳನ್ನು ಮತ್ತು ಜೀರ್ಣಶಕ್ತಿಯನ್ನು ತಾವೇ

ಮಾಡಿಕೊಳ್ಳಲಿಲ್ಲ. ಆದರೆ ಇವುಗಳೆಲ್ಲವು ಪರಮಾತ್ಮನಿಂದ ದಯಪಾಲಿಸಲ್ಪಟ್ಟಿರುತ್ತವೆ. ಅದೇರೀತಿಯಲ್ಲಿ ಮನುಷ್ಯನ ಹಲ್ಲುಗಳನ್ನು ಮತ್ತು ಜೀರ್ಣ ಶಕ್ತಿಯನ್ನು ಪರಮಾತ್ಮನೇ ಸೃಷ್ಟಿಸಿರುತ್ತಾನೆ. ಆದಪ್ರಯುಕ್ತ ಮನುಷ್ಯನಲ್ಲಿ ಕಾಯಿಪಲ್ಯ ಮತ್ತು ಹುಲ್ಲನ್ನು ತಿನ್ನುವ ಪ್ರಾಣಿಗಳು ಮತ್ತು ಮಾಂಸಾಹಾರಿಗಳಾದ ಹುಲಿ, ಚಿರತೆ ಮುಂತಾದ ಪ್ರಾಣಿಗಳೂ ಇವೆ ಎಂದು ಸಿದ್ಧವಾಗುತ್ತದೆ. ಇದೇಪ್ರಕಾರವಿರಬೇಕು. ಹೇಗೆಂದರೆ, ಈ ಬ್ರಹ್ಮಾಂಡವು ಈತನಿಂದಲೇ ಉತ್ಪತ್ತಿಯಾಯಿತು. ಈತನಲ್ಲಿಯೇ ಇರಿಸಲ್ಪಟ್ಟಿದೆ ಮತ್ತು ಈತನಲ್ಲಿಯೇ ಇದು ಲೀನವಾಗಬೇಕಾಗಿದೆ.

ಇದಕ್ಕೆ ಮತ್ತೊಂದು ಆಧಾರವ್ಯಾವುದೆಂದರೆ:—ಬ್ರಹ್ಮಾಂಡದಲ್ಲಿನ ಎಲ್ಲಾ ಪ್ರಾಣಿಗಳ ಗುಣಗಳೂ ಮನುಷ್ಯನಲ್ಲಿ ಕಂಡುಬರುತ್ತವೆ. ಪ್ರಾಣಿಗಳಿಂದ ತೆಗೆದುಕೊಳ್ಳಬಹುದಾದ ಎಲ್ಲಾ ಕೆಲಸಗಳನ್ನೂ ಮನುಷ್ಯನು ನಿಸ್ಸಂದೇಹವಾಗಿ ಮಾಡುತ್ತಾನೆ. ಆದರೆ ಒಂದು ಪ್ರಾಣಿಯ ಕೆಲಸವನ್ನು ಮತ್ತೊಂದು ಪ್ರಾಣಿಯು ಮಾಡಲಾರದು. ಕುದುರೆಯ ಕೆಲಸವನ್ನು ಕತ್ತೆಯು ಮಾಡಲಾರದು. ನಾಯಿಯ ಕೆಲಸವನ್ನು ಕುರಿಯು ಮಾಡಲಾರದು. ಹೀಗೆಯೇ ಎಲ್ಲಾ ಪ್ರಾಣಿಗಳಿಗೂ ವಿಶೇಷವಾಗಿ ಒಂದೊಂದು ಗುಣಮಾತ್ರ ಪರಮಾತ್ಮನು ಕೊಟ್ಟು ಇರುತ್ತಾನೆ. ಆದರೆ ಮನುಷ್ಯನು ಸರ್ವ ಜೀವರಾಶಿಗಳನ್ನೂ ಸ್ವಭಾವತಹ ಹೊಂದಿರುತ್ತಾನೆ. ಅದು ಹೇಗೆಂದರೆ, ನಾಯಿಯು ವಿಶೇಷವಾಗಿ ದ್ವಾರಪಾಲಕ ಎಂದರೆ ತನ್ನ ಧಣಿಯ ಬಾಗಿಲನ್ನು ಕಾಯುತ್ತದೆ. ಇದೇ ಕೆಲಸವನ್ನು ಮತ್ತೊಂದು ಪ್ರಾಣಿಯು ಮಾಡಲಾರದು. ಆದರೆ ಮನುಷ್ಯನು ಸ್ವಲ್ಪ ತಲುಬಿನಮೇಲೆ ದ್ವಾರಪಾಲಕನಾಗುತ್ತಾನೆ. ಇದೇರೀತಿಯಲ್ಲಿ ಕುದುರೆಯ ಕೆಲಸವನ್ನು ಬೇರೆ ಯಾವಪ್ರಾಣಿಯೂ ಮಾಡಲಾರದು. ಕುದುರೆಯು ಯುದ್ಧಕಾಲದಲ್ಲಿ ಹಾರಿಸುವ ತುಬಾಕಿಗಳ ಮತ್ತು ಫಿರಂಗಿಗಳ ಧ್ವನಿಗೆ ಅಂಜದೇ ಎದೆಗೊಟ್ಟು ಮುಂದರಿಯುತ್ತದೆ. ಮನುಷ್ಯನೂ ಕೂಡ ಯುದ್ಧಕಾಲದಲ್ಲಿ ಭಯವಿಲ್ಲದೆ ವೈರಿಗೆ ಎದುರುಬೀಳುತ್ತಾನೆ. ಇದೇರೀತಿಯಲ್ಲಿ ಮನುಷ್ಯನು ಜಗತ್ತಿನ ಎಲ್ಲಾ ಪ್ರಾಣಿಗಳ ಕೆಲಸವನ್ನೂ ಅವಿಚ್ಛಿನ್ನವಾಗಿ ಮಾಡುತ್ತಾನೆ. ಮನುಷ್ಯನು ಹೀಗಿರುವುದು ಆಶ್ಚರ್ಯವಲ್ಲ. ಏಕೆಂದರೆ, ಈ ಬ್ರಹ್ಮಾಂಡವು ಈತನಿಂದಲೇ

ಉತ್ಪತ್ತಿಯಾಯಿತು. ಈತನಲ್ಲಿಯೇ ಇದು ಇರಿಸಲ್ಪಡುತ್ತದೆ ಮತ್ತು ಈತನಲ್ಲಿಯೇ ಇದು ಲೀನವಾಗುತ್ತದೆ.

ಈ ಜಗವು ಮನುಷ್ಯನ ಸ್ಥೂಲ ಮತ್ತು ಸೂಕ್ಷ್ಮ ಘಟಗಳಲ್ಲಿ ಅಡಕವಾಗಿದೆಯೆಂದೂ ಮತ್ತು ಈತನೇ ಬ್ರಹ್ಮಾಂಡಕ್ಕೆ ಅಧಿಕಾರಿಯಾಗಿದ್ದಾನೆಂದೂ ತಿಳಿಯಲು ಮತ್ತೊಂದು ಸಿದ್ಧಾಂತವುಂಟು. ನಮ್ಮ ಕಣ್ಣಿಗೆ ಕಂಗೊಳಿಸುವ ಮತ್ತು ಆಧ್ಯಾತ್ಮರೂಪದಲ್ಲಿರುವ ಎಲ್ಲಾ ವಸ್ತುಗಳಲ್ಲಿಯೂ ಕೇಂದ್ರಸ್ಥಾನದಲ್ಲಿರುವ ವಸ್ತುವು ಮಿಕ್ಕ ಎಲ್ಲಾ ವಸ್ತುಗಳನ್ನೂ ತನ್ನಲ್ಲಿನ ಆಕರ್ಷಣದಿಂದ ಧರಿಸಿ ಅವುಗಳೆಲ್ಲಕ್ಕೂ ಅಧಿಕಾರಿಯಾಗಿರುತ್ತದೆ. ಇದಕ್ಕೆ ಸಾಕ್ಷಿಯಾಗಿ ಸೂರ್ಯನು ಅಂತರಿಕ್ಷದಲ್ಲಿ ಸ್ಥಾಯಿಯಾಗಿ ಮಿಕ್ಕ ಎಲ್ಲಾ ಗ್ರಹಗಳನ್ನೂ ತನ್ನ ಆಕರ್ಷಣಶಕ್ತಿಯಿಂದ ಹಿಡಿದು ಸ್ವಾಧೀನಪಡಿಸಿಕೊಂಡು ಬೆಳಕನ್ನು ಬೀರುತ್ತಾನೆ. ಇದೇರೀತಿಯಲ್ಲಿ ಎಲ್ಲಾ ಜೀವರಾಶಿಗಳಿಗೂ ಮನುಷ್ಯನು ಮೂಲಾಧಾರ ಚಕ್ರವಾಗಿದ್ದಾನೆ. ಪ್ರಕೃತಿಯಲ್ಲಿ ನಮಗೆ ಗೋಚರವಾಗುವ ಪ್ರಾಣಿಗಳಲ್ಲಿ ದೊಡ್ಡ ಪ್ರಾಣಿಯು ಆನೆಯಾಗಿರುತ್ತದೆ; ಮತ್ತು ಬಹು ಚಿಕ್ಕಪ್ರಾಣಿಯು ಇರುವೆಯಾಗಿದೆ ಮನುಷ್ಯನಾದರೂ ಇವೆರಡಕ್ಕೂ ಕೇಂದ್ರಸ್ಥಾನವಾಗಿರುತ್ತಾನೆ. ಆನೆ, ಹುಲಿ, ಸಿಂಹ ಮುಂತಾದ ಕ್ರೂರ ಮೃಗೆಗಳ ಸೊಕ್ಕನ್ನು ಮುರಿದು ತನ್ನ ಸ್ವಾಧೀನಪಡಿಸಿಕೊಳ್ಳುತ್ತಾನೆ ಮತ್ತು ಚಿಕ್ಕ ಪ್ರಾಣಿಗಳಾದ ಇರುವೆ ಮುಂತಾದುವುಗಳನ್ನು ಇವನೇ ಅಧಿಕಾರಿಯಾಗಿ ರಕ್ಷಿಸುತ್ತಾನೆ. ಈ ಅದ್ವಿತೀಯವಾದ ಮೂಲಪ್ರಾಣಿಯೆಂದು ಕರೆಯಲ್ಪಡುವ ಮನುಷ್ಯನು ಸರ್ವಭೂತಗಳಲ್ಲಿಯೂ ಆಗೋಚರನಾಗಿ ಸೇರಿ ಸರ್ವ ವ್ಯಾಪಿಯಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಮತ್ತು ಬಹಿರಂಗದಲ್ಲಿ ಸರ್ವ ಭೂತಗಳಿಗೂ ಅಧಿಕಾರಿಯಾಗಿ ಸಾಕ್ಷಿಚೈತನ್ಯನಾಗಿಯೂ, ಕೇವಲ ನಿರ್ಗುಣನಾಗಿಯೂ ತಾನೊಬ್ಬನೇ ಜಗತ್ತಿಗೆ ಬೀಜದಂತೆ ಪ್ರಸನ್ನನಾಗಿರುತ್ತಾನೆ. ಮನುಷ್ಯನೇ ಸರ್ವಾತ್ಮನ ರೂಪನು ಮತ್ತು ಉಳಿದ ಭೂತಗಳು ಅಧ್ಯಾತ್ಮ ರೂಪವುಳ್ಳವುಗಳು. ಮನುಷ್ಯನು ಮಾಯಾಸಂಯುಕ್ತನಾಗಿ ಮಿಕ್ಕ ಪ್ರಾಣಿಗೆಳಂತೆ ಹಸಿವು, ನೀರಡಿಕೆ, ಉಷ್ಣ, ಶೀತ ಸಂಯುಕ್ತವಾದ ಸುಖದುಃಖಗಳನ್ನು ಅನುಭವಿಸುತ್ತಾನೆ. ಆತ್ಮನಿಗೆ ಈ ಸುಖದುಃಖಗಳು ಮುತ್ತಿನಚಿಪ್ಪಿನಲ್ಲಿ ಬೆಳ್ಳಿಯ ತೋರಿಕೆಯಲ್ಲಿಯೇ ಹೊರತು ಜ್ಞಾನದಲ್ಲಿ ಈ ಸುಖದುಃಖಗಳು

ಲಯವೆನ್ನು ಹೊಂದುತ್ತವೆ. ಆದುದರಿಂದಲೇ ಆತ್ಮನಿಗೆ ಇವುಗಳ ವಾಸನೆ ಇಲ್ಲವು ಹೇಗೆ ಅಗ್ನಿಯು ಸರ್ವ ಭೂತಗಳೆಲ್ಲಿಯೂ ಸೇರಿ ಅಗೋಚರವಾಗಿದೆಯೋ ಹಾಗೆಯೇ ಆತ್ಮನು ಸರ್ವಾಂತರ್ಯಾಮಿಯಾಗಿ ಅವುಗಳಲ್ಲಿನ ದೋಷಗಳಿಗೆ ತಗಲದೆ ಹೊರಗಾಗಿರುತ್ತಾನೆ.

ದೃಷ್ಟಾಂತವಾಗಿ ದೂರಪ್ರದೇಶದಲ್ಲಿ ಮನುಷ್ಯನನ್ನು ಕಂಡರೆ ಆತನನ್ನು ಮನುಷ್ಯನೆಂದೇ ಭಾವಿಸುತ್ತೇವೆ. ಆದರೆ ಅದನ್ನೇ ಬೇರೆ ಯಾವ ಪ್ರಾಣಿಗೂ ಹೋಲಿಸಲಾರೆವು. ಆದರೆ ನಾವು ದೂರದಲ್ಲಿ ಬಂದು ಕುದುರೆಯನ್ನು ನೋಡಿ ಸ್ಪಷ್ಟವಾಗಿ ಗೋಚರವಾಗದಿರಲು ಕತ್ತೆಯೊ ಎಮ್ಮೆಯೊ ಅಥವಾ ಎತ್ತೊ ಇರಬಹುದೆಂದು ತಪ್ಪು ಊಹೆಯನ್ನು ಮಾಡುತ್ತೇವೆ. ಇದೇರೀತಿಯಲ್ಲಿ ಮಿಕ್ಕ ಎಲ್ಲಾ ಜೀವಜಂತುಗಳ ಸ್ಥಿತಿಯು ಕಂಡುಬರುತ್ತದೆ. ಇವುಗಳ ವಿಷಯದಲ್ಲಿ ಇದೇ ನಿಶ್ಚಯವೆಂದು ದೂರದಿಂದ ಹೇಳಲು ಸಾಧ್ಯವಿಲ್ಲ. ಆದರೆ ಮನುಷ್ಯನನ್ನು ಮಾತ್ರ ನಾವು ತಪ್ಪಾಗಿ ಊಹಿಸುವುದಿಲ್ಲ. ಏಕೆಂದರೆ, ಈತನು ಸರ್ವ ಭೂತಗಳಲ್ಲಿಯೂ ಸೇರಿದವನಾದಾಗ್ಯೂ ಬೇರೆಯಾಗಿ ಕಾಣುತ್ತಾನೆ. ಯಾವಪ್ರಕಾರ ಕಮಲವು ನೀರಿನಲ್ಲಿಯೇ ಹುಟ್ಟಿ ಮತ್ತು ಬೆಳೆದು, ಅದರಿಂದ ಅಂಟಲ್ಪಡದೆ ಇರುತ್ತದೆಯೋ ಹಾಗೆಯೇ ಮನುಷ್ಯನು ಸರ್ವಭೂತ ಸಂಯುಕ್ತವಾದ ಸ್ಥೂಲದೇಹದೊಡನೆ ಹುಟ್ಟಿ ಪರಮಾತ್ಮನಿಗೆ ಸಾಕ್ಷಿಯಾಗಿ ಒಬ್ಬನಾಗಿದ್ದಾನೆ. ಇದಕ್ಕೆ ಕಾರಣವೇನೆಂದರೆ, ಈತನೇ ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಕ್ಕೆ ಕಾರಣನಾಗಿ ಅಧ್ಯಾತ್ಮರೂಪಕ್ಕೆಲ್ಲಾ ಅಧಿಕಾರಿಯಾಗಿರುತ್ತಾನೆ.

ಆತ್ಮಜ್ಞಾನವಿಲ್ಲದವರು ಮನುಷ್ಯನೂ ಕೂಡ ಮಿಕ್ಕ ಭೂತಗಳಂತೆ ಬಂದು ಭೂತವೆಂದು ತಿಳಿಯುತ್ತಾರೆ. ಇಂಥ ಜನರು ತಮ್ಮನ್ನು ತಾವು ತಿಳಿಯದವರು. ಮನುಷ್ಯನು ಸರ್ವಾಂತರ್ಯಾಮಿಯಾಗಿರುವುದು ಇವರ ತಿಳುವಳಿಕೆಯಿಂದ ದೂರವಾಗಿದೆ. ಇದೇ ವಿಷಯವು ಋಗ್ವೇದದಲ್ಲಿ "ಆತ್ಮ ಸಂಭೂತದಾಕಾಶಂ | ಆಕಾಶದ್ವಾಯುಃ | ವಾಯುರಗ್ನಿಃ | ಅಗ್ನಿರಾಪಃ | ಅದ್ಭ್ಯಃಪೃಥ್ವೀ | ಪೃಥುವ್ಯಾಃ | ಔಷಧಂ | ಔಷಧಾದನ್ನಂ | ಅನ್ನಾದ್ರೇತಃ | ರೇತಸಃಪುರುಷೌಃ ||" ಎಂದು ಸಾರಲ್ಪಟ್ಟಿರುತ್ತದೆ. ಇದರಿಂದ ಆತ್ಮ ಪ್ರಸನ್ನನಾದ ಪುರುಷನೇ ಸರ್ವಭೂತಗಳಿಗೂ ಬೀಜಪ್ರಾಯನೆಂದು ತಿಳಿಯ

ಬರುತ್ತದೆ. ಆತ್ಮನು ಒಂದು ಕಾಲದಲ್ಲಿ ಬೀಜದಂತೆ ಗೋಪ್ಯವಾಗಿದ್ದು ಯುಗಾಂತರಗಳಲ್ಲಿ ಸರ್ವಭೂತಗಳ ಸೃಷ್ಟಿಯಾದನಂತರ ಪುನಹ ಮಾನುಷ ಶರೀರವನ್ನು ಧರಿಸಿ ನಿಂತನು. ಆದುದರಿಂದಲೇ ಮನುಷ್ಯನು ಸರ್ವಭೂತ ಗಳಿಗೂ ಒಡೆಯನಾಗಿರುತ್ತಾನೆ.

ಆತ್ಮವು ಯುಗಾಂತರಗಳಿಂದ ಕ್ರಮವಾಗಿ ಸ್ಥೂಲರೂಪಗಳಲ್ಲಿ ಬೆಳೆಯುತ್ತಾ ಬಂದು ಮಾನುಷ ಶರೀರವನ್ನು ಹೊಂದಿತು. ಅದೇ ಪ್ರಕಾರ ಆತ್ಮನ ಸೂಕ್ಷ್ಮರೂಪವು ಯುಗಾಂತರಗಳಿಂದ ಮನುಷ್ಯರ ಆತ್ಮಸಂರಕ್ಷಣೆ ಗೋಸ್ಕರ ಭಿನ್ನ ಭಿನ್ನ ಸ್ವರೂಪಗಳಲ್ಲಿ ಆಯಾಯ ಕಾಲದ ಅವತಾರಿಗಳಲ್ಲಿ ಪ್ರಸನ್ನವಾಗಿ ಮನುಷ್ಯರ ಧರ್ಮವನ್ನು ಪರಿಪಾಲನೆಮಾಡಿ ಅಂತ್ಯದಲ್ಲಿ ಸರ್ವ ಅವತಾರಿಗಳ ಆತ್ಮನ ಪ್ರಸನ್ನತೆಗೆ ಬೀಜಪ್ರಾಯವಾಗಿ ಜಗದ್ಗುರುವಿನ ರೂಪ ವನ್ನು ಧರಿಸಿತು. ಬಿತ್ತಿದ ಭೂಮಿಯಲ್ಲಿ ಅಗೋಚರವಾಗಿರುವ ಬೀಜವು ಮರದ ಬುಡದರೂಪದಲ್ಲಿಯೂ, ಕೊಂಬೆಗಳ ರೂಪದಲ್ಲಿಯೂ, ಎಲೆ ಮತ್ತು ಪುಷ್ಪಗಳ ರೂಪವನ್ನು ಧರಿಸಿ ಅಂತ್ಯದಲ್ಲಿ ತಾನೇ ಹೊರಬೀಳುವ ಹಾಗೆ ಕೃತ–ತ್ರೇತ ಮತ್ತು ದ್ವಾಪರಯುಗೆಗಳಲ್ಲಿ ಆತ್ಮಶಕ್ತಿಯು ಬೆಳೆಯುತ್ತಾ ಬಂದು ಬೇರೆ ಬೇರೆ ಧರ್ಮ ಗುರುಗಳಲ್ಲಿ ಪ್ರಜ್ವಲಿಸಿ ಕಡೆಯಲ್ಲಿ ಕಲಿಯುಗದಲ್ಲಿ ಸಂಪೂರ್ಣವಾಗಿ ಜಗದ್ಗುರುವಿನ ರೂಪದಲ್ಲಿ ಪ್ರಜ್ವಲಿಸಿತು. ಬ್ರಹ್ಮಾಂಡದಲ್ಲಿನ ಅಧ್ಯಾತ್ಮಸಂಯುಕ್ತವಾದ ಭೂತಗಳು ಜಗತ್ತಿಗೆ ಅಧಿಕಾರಿಗಳಾಗದೆ ಆತ್ಮನ ಸ್ಥೂಲ ಪ್ರಸನ್ನತೆಗೆ ಆಧಾರನಾಗಿರುವ ಮನುಷ್ಯನಿಗೆ ಅಧೀನವಾದಂತೆ ಹಿಂದೆ ಆಯಾಯ ಯುಗಗಳಲ್ಲಿ ಆತ್ಮನ ಸೂಕ್ಷ್ಮ ಪ್ರಸನ್ನತೆಗೋಸ್ಕರ ಅವತರಿಸಿರುವ ಮಹಾತ್ಮರು ಜಗದ್ಗುರುಗಳಾಗಲು ಅರ್ಹರಾಗದೆ ಇದ್ದಾರೆ. ಆದರೆ ಕಲಿಯುಗ ದಲ್ಲಿ ಎಲ್ಲಾ ಕುಲಗಳಿಗೂ ಸನ್ಮಾರ್ಗಪ್ರಸನ್ನರಾಗಿ, ಆತ್ಮನ ಸಂಪೂರ್ಣ ಸೂಕ್ಷ್ಮಶಕ್ತಿಗೆ ಅಧಿಕಾರಿಗಳಾಗಿರುವವರೇ ಜಗದ್ಗುರುಗಳಾಗಬೇಕು.

ಮನುಷ್ಯನ ಶೈಶವಾವಸ್ಥೆಯಲ್ಲಿ ಹಾಲೇ ಉತ್ಕೃಷ್ಟವಾದ ಆಹಾರ ವಾಗಿದೆ. ತದನಂತರ ಸುಮಾರು ನಾಲ್ಕು ವರ್ಷಗಳವರಿವಿಗೂ ಮಿತವಾದ ಆಹಾರವನ್ನು ಉಪಯೋಗಿಸುತ್ತಾನೆ. ಪುನಃ ನಲ್ವತ್ತು ವರ್ಷಗಳು ಮೇಲ್ಪಡು ವವರಿವಿಗೂ ಇವನಿಗೆ ಬೇಕಾದ ಸರ್ವ ಆಹಾರಗಳನ್ನೂ ಬಿಡದೆ ಸೇವಿಸುತ್ತಾನೆ. ನಂತರ ವಿವರ್ದತೆ ಮತ್ತು ಪರಿಣಿಮಿತೆ (ಅಪಕ್ಷತೆ ಮತ್ತು ವಿನಶ್ಯತೆ) ಬಗಗಿದ

ಹಾಗೆಲ್ಲಾ ಪುನಃ ಮೆದುವಾದ ಆಹಾರವನ್ನು ಉಪಯೋಗಿಸುತ್ತಾನೆ. ಆತ್ಮವುಕೂಡ ಕೃತಯುಗದಲ್ಲಿ ಮನುಷ್ಯರ ಧರ್ಮಸಂರಕ್ಷಣೆಗಾಗಿ ತನ್ನ ರೂಪವನ್ನು ಹಾಲಿನಪ್ರಕಾರ ಪ್ರಸನ್ನ ಮಾಡಿ ಮನುಷ್ಯರ ಆತ್ಮಸಂಸ್ಕಾರಕ್ಕೋಸ್ಕರ ಕೆಲವು ದೇವೋಕ್ತ ಗ್ರಂಥಗಳನ್ನು ಹೊರಪಡಿಸಿತು. ಹಾಗೆಯೇ ತ್ರೇತಾಯುಗದಲ್ಲಿ ಮಾನವರ ಆತ್ಮಸಂರಕ್ಷಣೆಯ ಆಹಾರವು ಹೆಚ್ಚಾಗುವ ಸಲುವಾಗಿ ಆತ್ಮ ಪ್ರಸನ್ನರು ಅವತರಿಸಿ ಧರ್ಮಬೋಧನೆಗಳನ್ನು ಹೆಚ್ಚಾಗಿ ತಿಳಿಸಿದರು. ದ್ವಾಪರ ಯುಗದಲ್ಲಿ ಪುನಃ ಮತಬೋಧಕರು ಪ್ರಸನ್ನರಾಗಿ ಮತ್ತಿಷ್ಟು ಹೆಚ್ಚಾಗಿ ಆತ್ಮಪ್ರಸನ್ನತೆಗೆ ಬೇಕಾದ ಮೂಲತತ್ವಗಳನ್ನು ತಿಳಿಸಿದರು. ಕಲಿಯುಗದಲ್ಲಿ ಯಾದರೋ ಮನುಷ್ಯನ ಸಂಪೂರ್ಣಾತ್ಮರಕ್ಷಣೆಗಾಗಿ ಹಿಂದಿನ ಎಲ್ಲಾ ಧರ್ಮರಹಸ್ಯಗಳನ್ನೊಳಗೊಂಡು ಬ್ರಹ್ಮಾಂಡಲೇಖವೆಂಬ ಅಂಕಿತವುಳ್ಳ ದೇವೋಕ್ತ ಗ್ರಂಥವು ಸರ್ವ ಅವತಾರಿಕ ಪ್ರಸನ್ನರಾದ ಜಗದ್ಗುರುಗಳ ಮೂಲಕ ಹೊರಪಟ್ಟಿತು. ಯಾವಪ್ರಕಾರ ಮನುಷ್ಯನಿಗೆ ಹದಿನೆಂಟು ವರ್ಷಗಳಿಂದ ನಲ್ವತ್ತು ವರ್ಷಗಳವರೆಗೂ ಬೇಕಾಗುವ ಆಹಾರದಲ್ಲಿ ಶೈಶವಾವಸ್ಥೆಗೂ ಮತ್ತು ವಿವರ್ಧತೆಗೂ ಬೇಕಾಗುವ ಆಹಾರಗಳು ಅಡಕವಾಗಿವೆಯೋ ಮತ್ತು ಯಾವರೀತಿ ಬೀಜದಲ್ಲಿ ಸಂಪೂರ್ಣವಾಗಿ ವೃಕ್ಷವು ಅಡಕವಾಗಿದೆಯೋ ಅದೇರೀತಿಯಲ್ಲಿ ಕಲಿಯುಗದಲ್ಲಿ ಜಗದ್ಗುರುಗಳ ಮೂಲಕ ಹೊರಪಟ್ಟಿರುವ ದೇವೋಕ್ತಗ್ರಂಥದಲ್ಲಿ ಹಿಂದಿನ ಸರ್ವದೇವೋಕ್ತ ಗ್ರಂಥಗಳೂ ಮತ್ತು ಮುಂದೆ ಸಂಪೂರ್ಣಾತ್ಮಸಂರಕ್ಷಣೆಗೆ ಬೇಕಾಗುವ ಸುಬೋಧನೆಗಳೂ ತುಂಬಿರುತ್ತವೆ. ಇಂಥ ಓಂಕಾರಪ್ರದವಾದ ಗ್ರಂಥವೇ ಜಗದ್ಗುರುವಿನ ಗ್ರಂಥವೆನಿಸುವುದು.

ಇದನ್ನು ಮತ್ತಿಷ್ಟು ವಿಶದವಾಗಿ ಹೇಳಬಹುದು. ಹಾಲು ಕುಡಿಯುವ ಕೂಸಿನ ಅಂಗಿಯು ಓಡಾಡುವ ಹುಡುಗನಿಗೆ ಬರುವುದಿಲ್ಲ. ಈ ಹುಡುಗನ ಅಂಗಿಯು ಯವ್ವನಸ್ಥನ ಅಂಗಕ್ಕೆ ಬರುವುದಿಲ್ಲ. ಆದರೆ ಯವ್ವನ ಕಾಲದಲ್ಲಿ ಹೊಲಿಯಿಸಿದ ಅಂಗಿಯಲ್ಲಿ ಈತನಿಗೆ ಚಿಕ್ಕಂದಿನಿಂದ ಯವ್ವನದವರೆಗೂ ಬೇಕಾಗುವ ಅಂಗಿಗಳ ಪ್ರಮಾಣವು ಮತ್ತು ಯವ್ವನದಿಂದ ವೃದ್ಧಾಪ್ಯದವರೆಗೂ ಬೇಕಾಗುವ ಅಂಗಿಗಳ ಪ್ರಮಾಣವು ಸಮಾವೇಶವಾಗಿರುತ್ತವೆ. ಶಿಶುವಿನ ಅಂಗಿಯು ಓಡಾಡುವ ಹುಡುಗನ ಶರೀರವನ್ನು

ಸಂರಕ್ಷಣೆ ಮಾಡಲಾರದು. ಆದೇರೀತಿಯಲ್ಲಿ ಕೃತಯುಗದ ಧರ್ಮಬೋಧಕ ಗ್ರಂಥವು ತ್ರೇತಾಯುಗದಲ್ಲಿ ಸಂಪೂರ್ಣವಾಗಿ ಆತ್ಮಸಂರಕ್ಷಣೆ ಮಾಡಲಾರದು. ಯಾವರೀತಿಯಲ್ಲಿ ಓಡಾಡುವ ಹುಡುಗನ ಅಂಗಿಯು ದುಡಿಯುವ ಹುಡುಗನ ಅಂಗಕ್ಕೆ ಸರಿಬಾರದೋ ಹಾಗೆಯೇ ತ್ರೇತಾಯುಗದಲ್ಲಿ ಪ್ರಕಟವಾದ ಜ್ಞಾನ ಬೋಧಕ ಗ್ರಂಥಗಳು ದ್ವಾಪರಯುಗದಲ್ಲಿ ಸಂಪೂರ್ಣಾತ್ಮರಕ್ಷಣೆಗೆ ಬರಲಾರವು. ಯಾವ ಪ್ರಕಾರ ದುಡಿಯುವ ಹುಡುಗನ ಅಂಗಿಯು ಯೌವ್ವನಸ್ಥನಿಗೆ ಆಗುವದಿಲ್ಲವೋ ಹಾಗೆಯೇ ದ್ವಾಪಾರಯುಗದ ದೇವೋಕ್ತ ಗ್ರಂಥಗಳು ಕಲಿಯುಗದಲ್ಲಿ ಸಂಪೂರ್ಣಾತ್ಮರಕ್ಷಣೆಯನ್ನು ಮಾಡಲಾರವು. ಆದರೆ ಯೌವ್ವನದಲ್ಲಿ ತೊಡುವ ಅಂಗಿಯು ಮುಪ್ಪಿನಕಾಲದವರಿಗೂ ಶರೀರವನ್ನು ಹೇಗೆ ರಕ್ಷಿಸುತ್ತದೆಯೋ ಅದೇರೀತಿ ಕಲಿಯುಗದಲ್ಲಿ ಜಗದ್ಗುರುವಿನ ಮುಖಾಂತರ ಪ್ರಕಟವಾಗಿರುವ ದೇವೋಕ್ತಗ್ರಂಥವು ಮಾನ್ಯವರು ಭೂಮಿಯ ಮೇಲಿರುವ ಪರಿಯಂತರವೂ ಸಂಪೂರ್ಣಾತ್ಮಸಂರಕ್ಷಣೆಯನ್ನು ಮಾಡುತ್ತದೆ ಇದೇ ರೀತಿಯಲ್ಲಿ ಆತ್ಮನ ಸೂಕ್ಷ್ಮಸಂರಕ್ಷಣೆಯು ಆಯಾಯ ಯುಗಗಳಲ್ಲಿ ಬೇರೆ ಬೇರೆ ಅವತಾರಿಗಳ ಮುಖಾಂತರ ಕ್ರಮವಾಗಿ ಹೆಚ್ಚುತ್ತಾ ಬಂದು ಅಂತ್ಯಕ್ಕೆ ಕಲಿಯುಗದಲ್ಲಿ ಪರಿಪೂರ್ಣಾತ್ಮರೂಪವಾಗಿಯೂ, ಸರ್ವವಸ್ತು ರೂಪವಾಗಿಯೂ, ಊರ್ಧ್ವಲೋಕಗಳನ್ನೂ ಅಧೋಲೋಕಗಳನ್ನೂ ಹೊಂದಿಸುವುದಾಗಿಯೂ, ನಿತ್ಯವಾದದ್ದಾಗಿಯೂ, ಸಂಪೂರ್ಣ ಓಂಕಾರ ರೂಪವಾಗಿಯೂ, ನಾಲ್ಕು ವೇದಗಳನ್ನುಳ್ಳದ್ದಾಗಿಯೂ, ಭಗವದ್ಗೀತಾ, ಶಿವಗೀತ, ತೌರೇತ, ಜಬ್ಬೂರ್, ಇಂಜೀಲ್, ಜಿಂದವಷ್ತಾ, ದಸ್ತೂರ ಮುಂತಾದ ಸರ್ವಮತದ ದೇವೋಕ್ತ ಗ್ರಂಥಗಳನ್ನು ಒಳಗೊಂಡು ಸರ್ವ ಧರ್ಮಗಳಿಗೂ ಮೂಲಮುದ್ರೆಯಾಗಿ ಪೃಥ್ವಿಯ ಮಧ್ಯಭಾಗದಲ್ಲಿ ಸೃಷ್ಟಿ ಸ್ಥಿತಿ ಲಯಗಳಿಗೆ ಈಶ್ವರನಾಗಿ, ಜಗದ್ಗುರುವಿನ ಅಂಶವಾಗಿ ಮೈದೋರಿತು. ಇಂಥಾ ಸಂಪೂರ್ಣಾತ್ಮಶಕ್ತಿಯನ್ನು ಹೊಂದಿದ ಮಹಾತ್ಮನೆ "ಬ್ರಹ್ಮಾಕೃತ ಶಿವಸಹಸ್ರನಾಮ, ಸು | ಮೃತ್ಯುಂಜಯ ಸೂಕ್ಷ್ಮತನುರ್ಜ ಗದ್ವ್ಯಾಪಿ ಜಗದ್ಗುರು"|| ಎನಿಸುವನು. ಈ ಮಹಾತ್ಮನು ಸರ್ವಾತ್ಮರೂಪವಾ ಗಿರುವ ಚತುರ್ವರ್ಣಗಳಲ್ಲಿ ಸೇರಿದವನಾಗಿಯೂ, ಸರ್ವ ನಂಬಿಕೆ ನಡವಳಿಕೆ ಗಳನ್ನು ಹೊಂದಿದವನಾಗಿಯೂ, ಎಲ್ಲಾ ಧರ್ಮಗಳಲ್ಲಿಯೂ ಸಮನಾಗಿಯೂ,

ಸರ್ವಾವತಾರ ಮನೋನ್ಯಾಸಿಯಾಗಿಯೂ; ಸರ್ವಕುಲಾಧಿಕಾರಿಯಾಗಿಯೂ, ಸೃಷ್ಟಿ ಸ್ಥಿತಿ ಲಯಗಳಿಗೆ ಅಧಿಕಾರಿಯಾಗಿಯೂ, ಬ್ರಾಹ್ಮಣರಲ್ಲಿ ಬ್ರಾಹ್ಮಣನಾಗಿಯೂ, ಕ್ಷತ್ರಿಯರಲ್ಲಿ ಕ್ಷತ್ರಿಯನಾಗಿಯೂ, ವೈಶ್ಯರಲ್ಲಿ ವೈಶ್ಯನಾಗಿಯೂ, ಶೂದ್ರರಲ್ಲಿ ಶೂದ್ರನಾಗಿಯೂ, ಲಿಂಗಾಯಿತರಲ್ಲಿ ಲಿಂಗಾಯಿತನಾಗಿಯೂ, ಕ್ರೈಸ್ತರಲ್ಲಿ ಕ್ರೈಸ್ತನಾಗಿಯೂ, ಯಹೂದ್ಯರಲ್ಲಿ ಯಹೂದ್ಯನಾಗಿಯೂ, ಸರ್ವ ಸಾಕ್ಷಿಯಾಗಿಯೂ, ಸರ್ವತೋಮುಖನಾಗಿಯೂ, ಸರ್ವ ಧರ್ಮಾಧಿಕಾರಿಯಾಗಿಯೂ, ಸರ್ವ ಧರ್ಮಪಾಲನೆ ಮಾಡುವವನಾಗಿಯೂ ಇರುವದರಿಂದ ಈತನೇ ಜಗದ್ಗುರುವಾದನು. ಈ ಮಹಾಪುರುಷನೇ ವಿಶ್ವರೂಪನು, ಪರಿಶುದ್ಧನು, ಪುರಾತನನು, ಸುವರ್ಣಮಯನು, ಪುಂಡಿಗಳಸ್ವರೂಪನು ಆದ ಆತ್ಮನು. ಈತನೇ ದೇಶ, ಕಾಲ, ಭಾಷೆ, ತೀರ್ಥ; ಉಡುಪು ಮುಂತಾದುವುಗಳಿಗೆ ನಿರಭಿಮಾನಿಯು ಮತ್ತು ಸರ್ವಪ್ರಾರ್ಥನೆಗಳಿಗೂ ದ್ವೈತ, ಅದ್ವೈತ ವಿಶಿಷ್ಟಾದ್ವೈತ ಮುಂತಾದ ಆತ್ಮಭಾವನೆಗಳಿಗೂ ಸರಿಸಮಾನನು; ಈತನೇ ಪಂಚಮಹಾಪಾತಕಗಳಿಗೆ ದೂರನು. ಈತನೇ ಭಸಿತ, ನಾಮ, ಮುದ್ರೆ ತಿಲಕ ಮುಂತಾದ ಲಲಾಟಲೇಪನಗಳಿಗೆ ಸರಿಸಮಾನನು. ಈತನೇ ಹದಿನೆಂಟುಜಾತಿ ನೂರೊಂದು ಕುಲಗಳನ್ನು ಸಮಾವೇಶಗೊಳಿಸಲು ದಯಾಭರಿತನಾಗಿರುವನು. ಈತನೇ ಎಲ್ಲಾ ಕಾರಣ ಮತ್ತು ಕಾರ್ಯಗುರುಗಳಿಗೆ ಅಧಿಪತಿಯಾದಾತನು. ಆದಪ್ರಯುಕ್ತ ಈತನೇ "ಬ್ರಹ್ಮಾಕೃತೆ ಶಿವಸಹಸ್ರನಾಮ ಸು | ಮೃತ್ಯುಂಜಯ ಸೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ||

ಪಂಬ್ರಹ್ಮನು ಆದಿಯಲ್ಲಿ ಆತ್ಮನ ಸ್ಥೂಲ ಸೂಕ್ಷ್ಮ ಶರೀರಾದಿಗಳನ್ನು ಒಂದೊಂದಕ್ಕೆ ಆಧಾರವಾಗಿ ಅಣುರೇಣು ತೃಣಮಾತ್ರವೂ ವ್ಯತ್ಯಾಸವಿಲ್ಲದಂತೆ ಮಾಡಿ; ಜ್ಞಾನವನ್ನು ಇವೆರಡರ ಸಂರಕ್ಷಣೆಗೂ ಅನುಸಾರವಾಗಿ ಬೋಧಿಸಿರುತ್ತಾನೆ.

# ಜ ಗ ದ್ಗು ರು

## ಸ್ಥೂಲದೇಹ.

೧. ವಿರಾಟಸ್ವರೂಪ ವಿಶ್ವಕರ್ಮ.

೨. ಆಕಾಶ ಭೂಕಾಂತಿಯಲ್ಲಿನ ಸರ್ವಭೂತಗಳೂ ಸೇರಿ ಮನುಷ್ಯ ನಾದನು.

೩. ಮನುಷ್ಯನ ಸೃಷ್ಟಿಗೆ ಮುಂಚೆ ಸರ್ವಭೂತಗಳೂ ಇದ್ದವು.

೪. ಸರ್ವಭೂತಗಳೂ ಮನುಷ್ಯನ ಸೇವೆಗಾಗಿ ಹುಟ್ಟಿದವು.

೫. ಸರ್ವ ಜಗವು ಮನುಷ್ಯನಿಂದಲೇ ಉತ್ಪತ್ತಿಯಾಯಿತು; ಇವನಲ್ಲಿಯೇ ಇದೆ; ಮತ್ತು ಇವನಲ್ಲಿಯೇ ಲಯಿಸುತ್ತದೆ.

೬. ಪಂಚಭೂತ ಸಂಯುಕ್ತವಾದ ಧಾತುವರ್ಗ, ವನಸ್ಪತಿವರ್ಗ ಮತ್ತು ಪ್ರಾಣಿವರ್ಗಗಳಿಗೆ ಮನುಷ್ಯನೇ ಮೂಲಪ್ರಕೃತಿಯು ಮತ್ತು ಇವನಲ್ಲಿಯೇ ಇವುಗಳೆಲ್ಲವೂ ಕಂಡು ಬರುತ್ತವೆ ಮತ್ತು ಇವನ ಕರ್ತವ್ಯ ಕರ್ಮದಿಂದಲೇ ಇವುಗಳೆಲ್ಲವೂ ಹುಟ್ಟುತ್ತಲಿವೆ.

೭. ಸಮಸ್ತ ಭೂತಗಳ ಆಗಮನವನ್ನೂ ಮನುಷ್ಯನು ಬಲ್ಲನು.

## ಸೂಕ್ಷ್ಮದೇಹ.

೧. ಹಿರಣ್ಯಗರ್ಭ, ಆತ್ಮತೇಜಸ್ಸು

೨. ಗಂಧರ್ವರು, ಪ್ರಮಥರು, ಇಂದ್ರಾದಿ ದೇವತೆಗಳು ಇತ್ಯಾದಿ ಸರ್ವ ಶಕ್ತಿಗಳನ್ನೂ ಸ್ವಾಧೀನಪಡಿಸಿಕೊಂಡು ಈಶ್ವರಾವತಾರಿಯಾದದು.

೩. ಈಶ್ವರಾವತಾರಕ್ಕೆ ಪೂರ್ವದಲ್ಲಿ ಸರ್ವ ಅವತಾರಿಗಳು ಹುಟ್ಟಿದರು.

೪. ಸರ್ವ ಅವತಾರಿಗಳು ಈಶ್ವರಾವತಾರದ ಸೇವಕರಾಗಿಯೇ ಪ್ರಸನ್ನರಾದರು.

೫. ಸರ್ವ ಅವತಾರಿಗಳ ಪ್ರಕಾಶ ಶಕ್ತಿಗಳು ಭಿನ್ನಭಿನ್ನವಾಗಿ ಈಶ್ವರಾವತಾರದಿಂದಲೇ ಹುಟ್ಟಿದವು. ಇವೆಲ್ಲವೂ ಇಲ್ಲಿಯೇ ಸ್ಥಿತಿಸುತ್ತವೆ ಮತ್ತು ಇಲ್ಲಿಯೇ ಲಯಿಸುತ್ತವೆ.

೬. ಸರ್ವ ಅವತಾರಿಗಳಿಗೂ ಈಶ್ವರಾವತಾರಿಯೇ ಮೂಲವು. ಈತನಿಂದಲೇ ಇವರೆಲ್ಲರ ಸ್ಥಿತಿಯೂ ಕಾರ್ಯ ಕಾರಣಗಳಿಗೆ ಸಾಧಕವಾಗಿರುವುದು ಮತ್ತು ಇವರೆಲ್ಲರೂ ಈತನ ಅನುಯಾಯಿಗಳಲ್ಲಿಯೇ ಹುಟ್ಟುವರು.

೭. ಸರ್ವ ಅವತಾರಿಕರ ಜ್ಞಾನ ಮಾರ್ಗಗಳನ್ನು ಈಶ್ವರಾವತಾರಿ

| ಸ್ಥೂಲದೇಹ | ಸೂಕ್ಷ್ಮದೇಹ |
| --- | --- |
| | ಯಾದ ಜಗದ್ಗುರುವು ಒಂದೇ ಗ್ರಂಥದಲ್ಲಿ ಅಡಕಮಾಡಿರುತ್ತಾನೆ. |
| ೮. ಎಲ್ಲಾ ಜೀವಜಂತುಗಳ ಶಬ್ದೋಚ್ಚಾರವೂ ಸೇರಿದರೆ ಮನುಷ್ಯನ ಸ್ವಾಭಾವಿಕಭಾಷೆಯಾಗುತ್ತದೆ. | ೮. ಎಲ್ಲಾ ಅವತಾರಿಗಳ ದೇವೋಕ್ತ ಗ್ರಂಥಗಳ ಭಾಷೆಗಳನ್ನು ಕೂಡಿಸಿದರೆ ಈಶ್ವರಾವತಾರದ ದೇವೋಕ್ತ ಭಾಷೆಯಾಗುತ್ತದೆ. |
| ೯. ಸಮಸ್ತ ಜೀವರಾಶಿಗಳ ಗುಣಗಳನ್ನೂ ಒಂದುಗೂಡಿಸಿದರೆ ಮನುಷ್ಯನ ಸ್ವಾಭಾವಿಕವಾದ ಅತ್ಮಸ್ವರೂಪವಾಗುತ್ತದೆ | ೯. ಸರ್ವ ಅವತಾರಿಗಳ ನಂಬಿಕೆ ನಡವಳಿಕೆಗಳ ಸಂಗ್ರಹವೇ ಈಶ್ವರಾವತಾರಿಕರ ನಂಬಿಕೆ, ನಡವಳಿಕೆಗಳ ಅಂಶವಾಗುತ್ತದೆ. |
| ೧೦. ಸರ್ವ ಭೂತಗಳ ಕರ್ತವ್ಯ ಕರ್ಮವೇ ಮನುಷ್ಯನ ಕರ್ತವ್ಯ ಕರ್ಮವು. | ೧೦. ಸರ್ವ ಅವತಾರಿಗಳ ಪ್ರಾರ್ಥನ ಕ್ರಮಗಳ ಸಂಗ್ರಹವೇ ಈಶ್ವರಾವತಾರಿಗಳ ಪ್ರಾರ್ಥನಾಂಶಗಳಾಗಿರುತ್ತವೆ |
| ೧೧. ಸರ್ವ ಭೂತಗಳಲ್ಲಿಯೂ ಭಿನ್ನ ಭಿನ್ನವಾಗಿ ಕಂಡುಬರುವ ರಜಸ್ಸು, ತಮಸ್ಸು ಮತ್ತು ಸಾತ್ವೀಕ ಗುಣಗಳು ಮನುಷ್ಯನಲ್ಲಿ ಒಟ್ಟಾಗಿ ನೆಲಗೊಳಿಸಿವೆ. | ೧೧. ಹಿಂದಿನ ಮಹಾತ್ಮರ ಮೂಲಕ ಪ್ರಕಟವಾಗಿರುವ ಓಂಕಾರೋಕ್ತವಾದ ಗ್ರಂಥಗಳೆಲ್ಲವೂ ಈಶ್ವರಾವತಾರಿಯ ಗ್ರಂಥದಲ್ಲಿ ಅಡಕವಾಗಿವೆ. |
| ೧೨. ಮನುಷ್ಯನು ಸರ್ವ ಜೀವರಾಶಿಗಳಿಗೂ ತಕ್ಕಂತೆ ಸರಿಸಮಾನವಾದ ದಯೆಯನ್ನು ತೋರಿಸಿರುತ್ತಾನೆ. | ೧೨. ಈಶ್ವರಾವತಾರಿಯು ಸರ್ವ ಮತಸ್ಥಾಪಕರನ್ನು ಸಮದೃಷ್ಟಿಯಿಂದ ಗಣಿಸುತ್ತಾನೆ. |
| ೧೩. ಸರ್ವ ಜೀವರಾಶಿಗಳಲ್ಲಿಯೂ ಸ್ವಭಾವತಃ ಭಿನ್ನಭಿನ್ನವಾಗಿ ಕಂಡು | ೧೩. ಈಶ್ವರಾವತಾರಿಯು ವರ್ಣ ಭೇದವಿಲ್ಲದೆ ಅಯಾಯ ವರ್ಣದ |

| ಸ್ಥೂಲದೇಹ | ಸೂಕ್ಷ್ಮದೇಹ |
| --- | --- |
| ಬರುವ ಕರ್ಮಗಳನ್ನು ಮನುಷ್ಯ ನೊಬ್ಬನೇ ಮಾಡುತ್ತಾನೆ. | ಗುಣಕರ್ಮಗಳನ್ನು ಕಾರ್ಯತಃ ತೋರಿಸಿರುತ್ತಾನೆ. |
| ೧೪. ಸರ್ವ ಜೀವರಾಶಿಗಳು ಸ್ವಭಾವತಃ ಪ್ರತ್ಯೇಕ ಪ್ರತ್ಯೇಕವಾಗಿ ಉಪಯೋಗಿಸುವ ಆಹಾರಗಳನ್ನೆಲ್ಲಾ ಮನುಷ್ಯನು ಉಪಯೋಗಿಸುತ್ತಾನೆ. | ೧೪. ಈಶ್ವರಾವತಾರಿಯು ಎಲ್ಲಾ ಧರ್ಮಗಳ ಸುಬೋಧನೆಗಳನ್ನು ತಾನು ಒಪ್ಪಿ ಇತರರಿಗೂ ಬೋಧಿಸುತ್ತಾನೆ. |
| ೧೫. ಎಲ್ಲಾ ಜೀವರಾಶಿಗಳಿಗೂ ಪ್ರತ್ಯೇಕ ಪ್ರತ್ಯೇಕ ಸ್ಥಾನಗಳುಂಟು. ಹಾವು ಮುಂತಾದ ಹುಳಗಳಿಗೆ ಹುತ್ತಗಳೂ, ಕ್ರೂರಮೃಗಗಳಿಗೆ ಗುಡ್ಡ ಗವಿಗಳೂ, ಹುಲ್ಲೆ ಮುಂತಾದುವುಗಳಿಗೆ ಬೈಲುಪ್ರದೇಶಗಳೂ, ಮೀನು ಮುಂತಾದುವುಗಳಿಗೆ ನೀರೂ, ಪಕ್ಷಿಗಳಿಗೆ ಆಕಾಶವೂ ಇತ್ಯಾದಿ ಜೀವರಾಶಿಗಳಿಗೆ ಬೇರೆ ಬೇರೆ ಸ್ಥಾನಗಳುಂಟು ಆದರೆ ಮನುಷ್ಯನಿಗೆ ಈ ಸ್ಥಾನಗಳೆಲ್ಲವೂ ಉಪಯೋಗವಾಗಿರುತ್ತವೆ. | ೧೫. ಕೃತ, ತ್ರೇತ, ದ್ವಾಪರ ಮತ್ತು ಕಲಿಯುಗಗಳಲ್ಲಿ ಅವತರಿಸಿದ ಅವತಾರಿಗಳು ಬೇರೆ ಬೇರೆ ದೇಶಗಳಲ್ಲಿ ಆಯಾಯ ಜನಾಂಗಗಳ ಆತ್ಮರಕ್ಷಣೆಗೋಸ್ಕರ ಭಿನ್ನ ಭಿನ್ನವಾಗಿ ಅವತರಿಸಿದರು. ಆದರೆ ಈಶ್ವರಾವತಾರಿಯು ಸರ್ವಜನಾಂಗಗಳಿಗೂ ಮತ್ತು ಎಲ್ಲಾ ಕುಲಗಳಿಗೂ ಸರಿಸಮವಾದ ಸನ್ಮಾರ್ಗವನ್ನು ತೋರಲು ಅವತರಿಸಿದನು. |
| ೧೬. ಪ್ರಪಂಚದಲ್ಲಿ ಒಂದು ಜಾತಿಯ ಪ್ರಾಣಿಯು ಎರಡನೇ ಜಾತಿಯ ಪ್ರಾಣಿಯಸಂಗಡ ಸ್ವಭಾವತಃ ಸೇರುವುದಿಲ್ಲ. ಆದರೆ ಮನುಷ್ಯನು ಎಲ್ಲಾ ಪ್ರಾಣಿಗಳಲ್ಲಿಯೂ ಬಳಕೆ ಮಾಡುವುದಲ್ಲದೆ ಅವುಗಳೆಲ್ಲವನ್ನೂ ಒಂದು ಗುಂಪಾಗಿ ಸೇರಿಸಲು ಪ್ರಯತ್ನಿಸುತ್ತಾನೆ. | ೧೬. ಈಶ್ವರಾವತಾರಿಯಾದರೋ, ಎಲ್ಲಾ ಜನಾಂಗಗಳನ್ನು ಮತ್ತು ಎಲ್ಲಾ ಕುಲದವರನ್ನು ತನ್ನ ಅನುಯಾಯಿಗಳಲ್ಲಿ ಸಮಾವೇಶಮಾಡಿಕೊಳ್ಳುವನು. ಮತ್ತು ಆಯಾಯ ವರ್ಣಗಳಿಗೆ ತಕ್ಕ ಸ್ಥೂಲ ಮತ್ತು ಸೂಕ್ಷ್ಮವಾದ ಸುರಕ್ಷಣೆಗೆ ಕಟ್ಟಳೆಗಳನ್ನು ತೋರಿಸಿ ಹೊಲೆಯಳ್ಳು |

| ಸ್ಥೂಲದೇಹ | ಸೂಕ್ಷ್ಮದೇಹ |
| --- | --- |
| | ಪಂಚಮರು ಇತ್ಯಾದಿ ಕುಲದವರನ್ನು ತನ್ನ ಪ್ರಮಥರಂತೆ ಎಣಿಸುವನು. |
| ೧೭. ಪ್ರಪಂಚದಲ್ಲಿ ಒಂದೊಂದು ಜಾತಿಯ ಪ್ರಾಣಿಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಹೆಣ್ಣು ಗಂಡಿನ ಸಂಭೋಗಕಾಲವನ್ನು ಹೊಂದಿರುತ್ತವೆ. ಆದರೆ ಮನುಷ್ಯನು ಈ ವಿಷಯದಲ್ಲಿ ವಿಶೇಷವಾಗಿ ಯಾವ ಕಾಲವನ್ನೂ ಹೊಂದಿಲ್ಲ. | ೧೭. ಹಿಂದಿನ ಅವತಾರಿಗಳ ಧರ್ಮಪ್ರವರ್ತಕರು ತಮ್ಮ ತಮ್ಮಲ್ಲಿ ಬಳಕೆಯನ್ನು ಉಂಟುಮಾಡಿಕೊಂಡಿರಲಿಲ್ಲ; ಆದರೆ ಈಶ್ವರಾವತಾರಿಯು ಜಾತಿ ಭೇದಗಳನ್ನು ಅಳುಕಿಸಿ ಉಚ್ಚ ಜಾತಿಯವರಲ್ಲಿಯೂ ಮತ್ತು ಕೀಳು ಜಾತಿಗಳಲ್ಲಿಯೂ ಭೇದವಿಲ್ಲದ ಬಳಕೆಯನ್ನು ಉಂಟುಮಾಡುತ್ತಾನೆ. |
| ೧೮. ಒಂದೊಂದು ವರ್ಗದ ಜೀವಜಂತುಗಳು ಬೇರೆ ಬೇರೆ ರೀತಿಯಾದ ಪುಚ್ಛಗಳನ್ನೂ ಮತ್ತು ಕೋಡುಗಳನ್ನೂ ಉಂಟಾಗಿವೆ; ಆದರೆ ಮನುಷ್ಯನಿಗೆ ಇವುಗಳ್ಯಾವುವೂ ಇಲ್ಲ. | ೧೮. ಜಗತ್ತಿನಲ್ಲಿ ಆಯಾಯ ಜಾತಿಯವರು ತಮ್ಮ ಧರ್ಮದ ಪ್ರಸನ್ನತೆ ಗೋಸ್ಕರ ಬಹಿರಂಗದಲ್ಲಿ ಭಸಿತಗಳನ್ನೂ ನಾಮಗಳನ್ನೂ ಮುದ್ರೆಗಳನ್ನೂ ಮತ್ತು ತಿಲಕವನ್ನೂ ಹಚ್ಚುತ್ತಿದ್ದರು. ಆದರೆ ಈಶ್ವರಾವತಾರಿಯು ಇವೆಲ್ಲಕ್ಕೂ ನಿರಾಭಿಮಾನಿಯಾದ್ದರಿಂದ ವಿಶೇಷವಾದ ಗುರುತನ್ನು ಹಚ್ಚಿಕೊಳ್ಳಲಿಲ್ಲ. |
| ೧೯. ಮನುಷ್ಯನ ಸೃಷ್ಟಿಗೆ ಮುಂಚೆ ಈ ಬ್ರಹ್ಮಾಂಡದಲ್ಲಿ ಸರ್ವ ಜೀವಜಂತುಗಳಲ್ಲಿಯೂ ಶಾಂತಿ ಇಲ್ಲದೆ ಕಿತ್ತಾಟವೇ ಹೆಚ್ಚಾಗಿದ್ದಿತು. ಆದ ಸ್ಪಯುಕ್ತ ಒಂದು ಅಧಿಕಾರಿಯಾದ | ೧೯. ಈಶ್ವರಾವತಾರವಾಗುವುದಕ್ಕೆ ಮುಂಚೆ ಎಲ್ಲಾ ಧರ್ಮದವರೂ ತಮ್ಮ ತಮ್ಮ ಧರ್ಮಗಳು ಹೆಚ್ಚು ಕಡಿಮೆ ಎಂಬ ದುರಭಿಮಾನದಿಂದ ಆತ್ಮಶಾಂತತೆಯನ್ನು ತಪ್ಪಿಸಿದ್ದರು. |

| ಸ್ಥೂಲದೇಹ | ಸೂಕ್ಷ್ಮದೇಹ |
| --- | --- |
| ಪ್ರಾಣಿಯ ಅವಶ್ಯಕತೆಯು ಇದ್ದ ಕಾರಣ ಮನುಷ್ಯನ ಸೃಷ್ಟಿಯಾಯಿತು. ಇದರಿಂದ ಶಾಂತಿಯು ನೆಲೆಗೊಂಡಿತು. | ಆದಗೆ ಈಶ್ವರಾವತಾರವಾದ ಕೂಡಲೆ ಜಗತ್ತಿನಲ್ಲಿ ಬೇರೆ ಬೇರೆ ಕುಲದವರಲ್ಲಿ ಅಸೂಯೆ ಕಡಿಮೆಯಾಗಿ ಒಂದೇ ಭಾವಿಯಲ್ಲಿ ನೀರುಸೇದುತ್ತಾ ಮತ್ತು ಒಂದೇ ಸ್ಥಾನದಲ್ಲಿ ಪ್ರಾರ್ಥನೆ ಮಾಡುತ್ತಾ ಶಾಂತತೆಯನ್ನು ಹೊಂದಿರುತ್ತಾರೆ. |

ಮೇಲೆ ಉದಹರಿಸಿರುವ ಸಿದ್ಧಾಂತಗಳಿಂದ ಪ್ರತಿಯೊಬ್ಬ ಮನುಷ್ಯನು ಕೂಡ ಜಗದ್ಗುರುವಾಗಲು ಅಧಿಕಾರವನ್ನು ಪಡೆದಿರುತ್ತಾನೆಂದು ವಿದಿತವಾಗುತ್ತದೆ. ಇದರಿಂದ ಜಗದ್ಗುರುವು ಒಬ್ಬನೇ ಇರಬೇಕೆಂಬ ಭಾವನೆಯು ತಪ್ಪಾದುದೆಂದು ಸಾಧಾರಣ ಜನರು ಊಹಿಸಬಹುದು. ಆದಿ ಮಾನ್ನವನು ಬ್ರಹ್ಮಾಂಡದ ಸರ್ವಭೂತಗಳಿಗೂ ಸ್ಥೂಲರೂಪದಲ್ಲಿ ಅಧಿಕಾರಿಯಾಗಿದ್ದಾನೆ ; ಮತ್ತು ಈತನಿಂದ ಹುಟ್ಟಿದ ಪ್ರತಿಯೊಬ್ಬ ಮನುಷ್ಯನೂ ಕೂಡ ಸರ್ವಭೂತಗಳಿಗೂ ಅಧಿಕಾರಿಯಾಗುತ್ತಾನೆ. ಇದೇರೀತಿಯಲ್ಲಿ ಸೂಕ್ಷ್ಮರೂಪವಾದ ಆತ್ಮಜ್ಞಾನಕ್ಕೆ ಈಶ್ವರ ಅವತಾರನೇ ಅಧಿಪತಿಯು ; ಮತ್ತು ಈತನ ಅಧೀನತೆಯನ್ನು ಹೊಂದಿದವರು ಮಾತ್ರ ಜಗದ್ಗುರುಗಳೆಂದು ಕರೆಯಲ್ಪಡುವರು. ಇದರಿಂದ ಜಗತ್ತಿಗೆಲ್ಲಾ ಮೂಲನಾದ ಜಗದ್ಗುರುವು ಒಬ್ಬನೆಂದೇ ಭಾವನೆಯಾಗುತ್ತದೆ. ನರನು ಮಿಕ್ಕ ಭೂತಗಳನ್ನು ಯಾವರೀತಿಯಲ್ಲಿ ಸ್ವಾಧೀನ ಮಾಡಿಕೊಳ್ಳುತ್ತಾನೋ ಹಾಗೆಯೇ ಈಶ್ವರಾವತಾರದ ಧರ್ಮವು ಬೇರೆ ಜಗತ್ತಿನ ಎಲ್ಲಾ ಧರ್ಮಗಳನ್ನೂ ಸ್ವಾಧೀನಪಡಿಸಿಕೊಂಡು ಸಮಾವೇಶವನ್ನು ಹೊಂದಿಸುವುದು. ಇದಕ್ಕೆ ಆಧಾರವಾಗಿಯೇ ಇತರ ಧರ್ಮಗಳ ಎಲ್ಲಾ ಕಾರ್ಯಕಾರಣ ಗುರುಗಳೂ ಈಶ್ವರಾವತಾರದ ಸ್ವಭಾವಸಂಯುಕ್ತವಾದ ಧರ್ಮಪ್ರವರ್ತಕರಲ್ಲಿ ಹುಟ್ಟಿ ಇತರ ಧರ್ಮದವರನ್ನು ತಮ್ಮಲ್ಲಿ ಸಮಾವೇಶಗೊಳಿಸುವರು.

ಮತ್ತು ಇವರು ಜಗದ್ಗುರುವಿನ ಅನುಯಾಯಿಗಳಾದ್ದರಿಂದ ಜಗದ್ಗುರುಗಳಾಗಲು ಅರ್ಹರಾಗುತ್ತಾರೆ. ಈ ಕಲಿಯುಗದ ನಾವು ಧಾರಿಗಳಾದ ಜಗದ್ಗುರುಗಳು ಮೂಲಜಗದ್ಗುರುವಾದ ಈಶ್ವರಾವತಾರವನ್ನು ನಂಬದೆ ಯಿದ್ದರೆ ವಿದ್ಯುಚ್ಛಕ್ತಿಯ ಜ್ಞಾನವಿಲ್ಲದ ಹುಡುಗನು ಯಂತ್ರದಲ್ಲಿ ಸಿಕ್ಕಿ ಹೇಗೆ ನಾಶವಾಗುತ್ತಾನೋ ಹಾಗೆಯೇ ಜ್ಞಾನದಲ್ಲಿ ವಿನಾಶವಾಗಿ ನರಳವೆಂಬ ಜನ್ಮಬಂಧನಕ್ಕೆ ಸಿಕ್ಕಿಬಿದ್ದು ನರಳಬೇಕಾಗುವುದು.

ಈಶ್ವರಾವತಾರಿಗಳ ಪ್ರಸನ್ನತೆಯು ಸ್ವಭಾವತಃ ಒಪ್ಪತಕ್ಕ ಅನಾದಿಯಾದ ಮತ್ತು ಮಾನ್ಯವನ ಬುದ್ಧಿಗೆ ಸಮಂಜಸವಾದ, ಜಗದ್ಗುರುವಿನ ಪದವಿಗೆ ಬೇಕಾದ ಆತ್ಮಸಂಯುಕ್ತವಾದ ಎಲ್ಲಾ ಪ್ರಮಾಣಗಳಿಗೂ ದೃಢವಾಗಿ ನಿಲ್ಲಬೇಕಾಗಿರುವುದು. ಈ ಸೃಷ್ಟಿಗೆಲ್ಲಾ ಪರಮಾತ್ಮನೊಬ್ಬನೇ ಯಾವ ರೀತಿ ಇದ್ದಾನೋ ಅದೇರೀತಿಯಲ್ಲಿಯೇ ಜಗದ್ಗುರುವು ಸ್ವಭಾವತಃ ಒಬ್ಬನೇ ಇರಬೇಕೆಂದು ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆತನು "ಗುರೂಣಾಂಗುರುಃ" ಎಂಬ ಬಿರುದಾಂಕಿತವನ್ನು ಪಡೆದು ಸಮಸ್ತ ಸುಬೋಧನೆಗಳಿಗೆ ಮೂಲ ಬೀಜನಾಗಿಯೂ, ನಿತ್ಯನಾಗಿಯೂ, ಪರಿಶುದ್ಧನಾಗಿಯೂ, ಜ್ಞಾನಸ್ವರೂಪನಾಗಿಯೂ, ತೇಜೋಮಯನಾಗಿಯೂ, ಕೃಪಾಸಾಗರನಾಗಿಯೂ, ಅಣುವಿನಲ್ಲಿ ಅಣುವಾಗಿಯೂ, ಮಹತ್ತಿನಲ್ಲಿ ಮಹತ್ತಾಗಿಯೂ, ಅನಾದಿಸ್ವರೂಪನಾಗಿಯೂ ವಿರಾಜಿಸುತ್ತಿರುವುದರಿಂದಲೇ ಜಗದ್ಗುರುವೆನಿಸುವನು. ಉಳಿದ ಅವತಾರಿಗಳೆಲ್ಲರೂ ಈತನ ಸ್ವಾಧೀನದಿಂದಲೇ ಈತನಿಗೆ ಮುಂಚೆ ಕಾರಣಗುರುಗಳಾಗಿಯೂ ನಂತರ ಕಾರ್ಯಗುರುಗಳಾಗಿಯೂ ಅವತರಿಸಿದರು; ಮತ್ತು ಮುಂದೆಯೂ ಅವತರಿಸುವರು. ಕಲಿಯುಗದಲ್ಲಿ ಈಶ್ವರಾವತಾರವಾಗುವುದಕ್ಕೆ ಮುಂಚೆ ಎಲ್ಲಾ ಕಾರಣಗುರುಗಳೂ ಜನರ ಮನೋಮಾಲಿನ್ಯವನ್ನು ಹೋಗಲಾಡಿಸುವ ಸಲುವಾಗಿ ಅಯಾಯ ಕಾಲದಲ್ಲಿಯೂ ಮತ್ತು ದೇಶಗಳಲ್ಲಿಯೂ ಜನಿಸಿದರು. ಈಶ್ವರಾವತಾರದ ನಂತರ ಈ ಕಾರ್ಯವನ್ನು ಸಜೀವಮಾಡಲು ಇವರ ಅನುಯಾಯಿಗಳಲ್ಲಿ ಸ್ಥೂಲ ಶರೀರದಿಂದ ಜನಿಸುತ್ತಲೇ ಇರುವರು. ಇದು ಅಚಂದ್ರಾರ್ಕವಾಗಿ ನಡೆಯುತ್ತಲೇ ಇರುವುದು.

# ಜ ಗ ದ್ಗು ರು ವಿ ನ

## ಸ್ವ ಭಾ ವ ಪ್ರ ಮಾ ಣ ಗ ಳು.

೧. ಪರಮಾತ್ಮನು ಜಗತ್ತಿಗೆ ಒಬ್ಬನಾಗಿ ಈಶ್ವರನೆನಿಸಿ ಉತ್ಪತ್ತಿಗೆ ಬ್ರಹ್ಮನಾಗಿಯು, ಪಾಲಿಸಲು ವಿಷ್ಣುವಾಗಿಯು, ಶಿಕ್ಷಿಸಲು ರುದ್ರನಾಗಿ ತ್ರಿಗುಣಗಳೊಡನೆ ಲೀಲೆಮಾಡಿದನು. ಇದೇ ರೀತಿಯಲ್ಲಿ ಜಗದ್ಗುರುವು ಜಗತ್ತಿಗೆ ಒಬ್ಬನಾದ ಈಶ್ವರಸ್ವರೂಪನಾಗಿ ಬಿನ್ನಬಿನ್ನ ಸ್ವರೂಪಗಳೊಂದಿಗೆ ಲೀಲೆ ಮಾಡುವವನಾಗಿರುತ್ತಾನೆ.

೨. ಪರಮಾತ್ಮನು ಒಬ್ಬನಾಗಿ ಬಿನ್ನಬಿನ್ನ ಸ್ವರೂಪಗಳನ್ನು ಹೊಂದಿ ಕಂಗೊಳಿಸುವ ಸರ್ವಭೂತ ಸಂಯುಕ್ತವಾದಪ್ರಕೃತಿಯನ್ನು ತನ್ನಲ್ಲಿ ಇಟ್ಟುಕೊಂಡಿರುವಂತೆ ಜಗದ್ಗುರುವಿನ ಜೀವಮಾನವು ಸರ್ವಮಾನ್ಯವಿಷ್ಠಿತಿಗಳಿಗೂ, ವರ್ಣಗಳಿಗೂ, ಎಲ್ಲರ ರೀತಿನೀತಿಗಳಿಗೂ, ಎಲ್ಲಾ ಧರ್ಮಗಳಿಗೂ, ರಕ್ಷಣಾಸ್ಥಾನವಾಗಿರಬೇಕು.

೩. ಪರಮಾತ್ಮನು ನಿರಾಕಾರನಾಗಿರುವುದರಿಂದ ಜಗದ್ಗುರುವಾದವನು ಎಲ್ಲಾಧರ್ಮಗಳ ಪೂಜಾವಿಧಾನಗಳನ್ನು ಒಂದರಲ್ಲಿ ಸಮಾವೇಶಗೊಳಿಸಿ, ಎಲ್ಲಾ ಆಕಾರಗಳಿಗೂ ಮಾತೃಸ್ಥಾನವಾದ ನಿರಾಕಾರಸ್ಥಾನದಲ್ಲಿ ಪೂಜೆಯನ್ನು ನೆಲೆಗೊಳಿಸಬೇಕು. ಮತ್ತು ಭಿನ್ನಭಿನ್ನವಾದ ಆಕಾರಗಳ ಪೂಜೆಗಳಿಂದ ಪ್ರಪಂಚಲ್ಲಿ ಉಂಟಾಗಿರುವ ದುಃಖನನ್ನು ದೂರಮಾಡಬೇಕಾಗಿರುವುದು.

೪. ಪುರಾತನರಾದ ಎಲ್ಲಾ ದೇಶಗಳ ಸರ್ವ ಅವತಾರಿಗಳನ್ನು ನಂಬಿ ಅವರ ಧರ್ಮಗಳನ್ನು ಸತ್ಯವಾದುವೆಂದು ತಿಳಿಯುವನನೆ ಜಗದ್ಗುರುವು,

೫. ಪ್ರಾಚೀನ ಧರ್ಮಗ್ರಂಥಗಳೆಲ್ಲವನ್ನು ನಂಬಿ ಅವುಗಳಲ್ಲಿ ಭೇದವನ್ನು ಎಣಿಸದೇ ಸಮದೃಷ್ಟಿಯಿಂದ ಕಂಡು ಜಗತ್ತಿನ ದುಃಖವನ್ನು ದೂರಮಾಡಬೇಕು.

೬. ಜಗದ್ಗುರುವಾದವನು ಶಿವಶಕ್ತಿ, ವಿಷ್ಣುಶಕ್ತಿ, ಬ್ರಹ್ಮಶಕ್ತಿ ಮುಂತಾದ ಸ್ವರೂಪಶಕ್ತಿಗಳಲ್ಲಿ ಭೇದವನ್ನು ಎಣಿಸದೆ ಪ್ರತ್ಯೇಕ ಪ್ರತ್ಯೇಕ ನಂಬಿಕೆಗಳುಳ್ಳ ಎಲ್ಲರನ್ನೂ ಸಮಾವೇಶಗೊಳಿಸಿ ನಡೆಸುವ ಸುಬೋಧನೆಗಳನ್ನುಳ್ಳವನಾಗಿರಬೇಕು.

೭. ಆತನು ಎಲ್ಲಾ ವರ್ಣಗಳಿಗೂ ನಿರಭಿಮಾನಿಯಾಗಿ ವರ್ಣಾಶ್ರಮಗಳನ್ನು ತಾನು ಸ್ವತಹ ಅನುಭವಿಸಿ ತೋರಿಸಿ ಜಗತ್ತಿನ ದುಃಖವನ್ನು ದೂರ ಮಾಡಬೇಕು.

೮. ಆಯಾಯ ಕುಲಗಳ ಜಾತಿಚಿಹ್ನೆಗಳು ಎಂದರೆ ನಾಮ ತಿಲಕ, ಗಂಧ, ಭಸಿತ ಮುಂತಾದುವುಗಳಿಗೆ ಅಭಿಮಾನಿಯಾಗದೆ ಇವುಗಳಿಲ್ಲವನ್ನು ನಿರಾಕಾರಸ್ಥಾನದಲ್ಲಿ ಸಮಾವೇಶಗೊಳಿಸಿ, ಜಗತ್ತಿನ ಮತಾಸೂಯೆಗಳನ್ನು ದೂರಮಾಡಬೇಕು.

೯. ಆತನು ಯಾವ ಭಾಷೆಗೂ ಅಭಿಮಾನಿಯಾಗಿರದೆ ಇರಬೇಕು. ಮತ್ತು ಆತನ ಮೂಲಕ ಪ್ರಕಟವಾಗಿರುವ ಓಂಕಾರ ಗ್ರಂಥವು ಸರ್ವಭಾಷೆಗಳಿಗೂ ಮಾತೃಭಾಷೆಯಾದ ಸ್ವಭಾವಸಂಯುಕ್ತವಾದ ಭಾಷೆಯಲ್ಲಿರಬೇಕು.

೧೦ ಆತನು ಯಾವಾಗಲೂ ವಿಶೇಷವಾಗಿ ಯಾವ ಯಾತ್ರಾಸ್ಥಳಕ್ಕೂ ಅಭಿಮಾನಿಯಾಗಿರದೆ ಪ್ರಪಂಚದ ಸರ್ವ ಅವತಾರಿಗಳ ಜನ್ಮಸ್ಥಳಗಳು ಮತ್ತು ಐಕ್ಯಸ್ಥಳಗಳು ಯಾತ್ರೆಗೆ ಪವಿತ್ರಸ್ಥಾನಗಳೆಂದು ನಂಬಬೇಕು.

೧೧. ಆತನು ಉಡುಪಿಗೆ ಅಭಿಮಾನಿಯಾಗಿರದೆ, ದೇಶ, ಕಾಲ, ವಾಯುಗುಣಕ್ಕೆ ತಕ್ಕಂತೆ ಆಯಾಯ ಉಡುಪುಗಳನ್ನು ಧರಿಸಿ ಉಡುಪುಗಳ ಅಭಿಮಾನದಿಂದುಂಟಾದ ಕೊರತೆಗಳನ್ನು ದೂರಮಾಡಬೇಕು.

೧೨. ಜಗತ್ತಿನ ಸರ್ವ ಧರ್ಮದವರು ತಾರಕಂ, ದಂಡಂ, ಕುಂಡಲಾಕಾರಂ, ಅರ್ಧಚಂದ್ರಕಂ, ಬಿಂದುಸಂಯುಕ್ತಂ, ಮುಂತಾದ ಆತ್ಮಪೂಜಾವಿಧಾನಗಳಲ್ಲಿ ಒಂದೊಂದನ್ನು ಮಾತ್ರ ಅನುಸರಿಸುತ್ತಾರೆ. ಆದರೆ ಜಗದ್ಗುರುವು ಮೇಲಿನ ಸರ್ವ ಪೂಜಾವಿಧಾನಗಳನ್ನು ಒಂದಾಗಿ ಸಮಾವೇಶ

ಗೊಳಿಸಿ ಪರಮಾತ್ಮನನ್ನು ಪೂಜಿಸಬೇಕು. ಮತ್ತು ಇವುಗಳಲ್ಲಿನ ಜನರ ದುರಭಿಮಾನಗಳನ್ನು ತಗ್ಗಿಸಬೇಕು.

೧೩. ಆತನು ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಆತ್ಮಪದಾಂತ ಭಾವಗಳಿಗೆ ನಿರಭಿಮಾನಿಯಾಗಿ ಇವುಗಳ ರಹಸ್ಯಗಳನ್ನು ಜನರಿಗೆ ಸುಲಭರೀತಿಯಿಂದ ತಿಳಿಯಪಡಿಸಿ ಉದ್ಧಾರಮಾಡುವನಾಗಬೇಕು.

೧೪. ಆತನ ಬೋಧನೆಯು ಒಂದು ದೇಶಕ್ಕೆ ಒಂದು ಜನಾಂಗಕ್ಕೆ ಮಾತ್ರವಿರದೆ ಎಲ್ಲಾ ದೇಶಗಳ ಎಲ್ಲಾ ಜನಾಂಗಗಳಿಗೂ ಸರಿಯಾದ ಸುನಡತೆಯನ್ನು ತೋರಿಸಿ ದೇಶಾಭಿಮಾನವೆಂಬ ದುಃಖದಿಂದ ದೂರಮಾಡಬೇಕು.

೧೫. ಆತನು ಪಂಚಮಹಾಪಾತಕಗಳಿಗೆ ದೂರನಾಗಿಯೂ ಮತ್ತು ಯಾವ ಆಹಾರಕ್ಕೂ ಅಭಿಮಾನಿಯಾಗಿರದೆ ಈ ವಿಷಯದಲ್ಲಿ ಒಂದೊಂದು ಪಂಡಗೆಕ್ಕೆ ಇರುವ ಕ್ರೋಧಗಳನ್ನು ದೂರಮಾಡಬೇಕು.

೧೬. ಪ್ರಪಂಚದಲ್ಲಿ ಮರ್ಯಾದೆಗೋಸ್ಕರ ಜನಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮತ್ತು ಎರಡು ಕೈಗಳು ಜೋಡಿಸಿ ನಮಸ್ಕಾರವನ್ನು ಬಗ್ಗಿ ಅರ್ಪಿಸುತ್ತಾರೆ. ಆದರೆ ಮನುಷ್ಯರೆಲ್ಲರು ಸರಿಸಮಾನರಾಗಿರುವುದರಿಂದ ಹೆಚ್ಚು ಕಡಿಮೆ ಎಂಬ ಭಾವನೆಯನ್ನು ಹೋಗಲಾಡಿಸುವ ಮರ್ಯಾದೆ ಸೂಚಕವಾದ ನಮಸ್ಕಾರ ವಿಧಾನವನ್ನು ತೋರಿಸುವವನಾಗಬೇಕು.

೧೭. ಯಾವಪ್ರಕಾರ ಮನುಷ್ಯನಲ್ಲಿ ಸರ್ವಭೂತಗಳು ಮತ್ತು ಮನುಷ್ಯನು ಸರ್ವಭೂತಗಳಲ್ಲಿಯು ಪ್ರಸನ್ನನಾಗಿರುತ್ತಾನೋ ಅದೇರೀತಿಯಲ್ಲಿ ಜಗದ್ಗುರುವು ತನ್ನನ್ನು ಎಲ್ಲಾ ಧರ್ಮಗಳಲ್ಲಿಯೂ ಮತ್ತು ಎಲ್ಲಾ ಧರ್ಮಗಳನ್ನು ತನ್ನಲ್ಲಿಯೂ ತೋರಿಸಬೇಕಾಗಿರುವುದು.

೧೮. ಸರ್ವಕಾರ್ಯ ಮತ್ತು ಕಾರಣಗುರುಗಳು ಈತನಿಂದಲೇ ಹೊರಟು, ಈತನಲ್ಲಿಯೇ ಲೀಲೆಮಾಡಿ, ಈತನಲ್ಲಿಯೇ ಐಕ್ಯವಾಗಬೇಕು. ಈತನ ಮಾರ್ಗಗಳಿಗೆ ಅಣುರೇಣು ತೃಣಮಾತ್ರವು ವ್ಯತ್ಯಾಸವನ್ನುಂಟುಮಾಡಬಾರದು.

೧೯. ಹಿಂದಿನ ಸರ್ವಾವತಾರಿಗಳೂ " ಗುರೂಣಾಂಗುರು " ವಾದ ಈಶ್ವರಾವತಾರನಾದ ಜಗದ್ಗುರುವಿನ ಪ್ರಸನ್ನತೆಗೆ ಭವಿಷ್ಯ ಸೂಚನೆಗಳನ್ನು ತಮ್ಮತಮ್ಮ ಬೋಧನೆಗಳಲ್ಲಿ ಸೂಚಿಸಿರಬೇಕು.

೨೦. ಹಿಂದಿನ ಮಹಾತ್ಮರ ಕಾಲಜ್ಞಾನಗಳ ಪ್ರಕಾರ ಪ್ರಸನ್ನನಾಗಿರುವ ಜಗದ್ಗುರುವು ತಾನೇ ಎಂದು ಓಂಕಾರದಿಂದ ಆತ್ಮಸಾಕ್ಷಾತ್ಕಾರವನ್ನು ಹೊಂದಿ ಪರಮಾತ್ಮನ ಕಡೆಯಿಂದ ಕಳುಹಿಸಲ್ಪಟ್ಟವನೆಂದು ಸಾರಿರಬೇಕು.

೨೧. ಆತನ ಕೈಯಲ್ಲಿ ಓಂಕಾರೋಕ್ತವಾದ ಅಖಿಲ ಬ್ರಹ್ಮಾಂಡ ಲೇಖವಿರಬೇಕು. ಅದರಿಂದಲೇ ಆತನು ಇತರ ಎಲ್ಲಾ ಧರ್ಮಗಳ ಕಟ್ಟಳೆಗಳನ್ನು ತೋರಿಸಬೇಕು.

೨೨. ಆತನ ಆತ್ಮಜ್ಞಾನಬೋಧನೆಗೆ ಬ್ರಹ್ಮಾಂಡದಲ್ಲಿನ ಸರ್ವ ಭೂತಗಳೂ ಸಾಕ್ಷಿಯಾಗಿರಬೇಕು, ಮತ್ತು ಅವರ ಗ್ರಂಥದ ಬೋಧನೆಯು ಮನುಷ್ಯನ ಸ್ವಭಾವಸಂಯುಕ್ತವಾದ ಬುದ್ಧಿಗೆ ಸಮಂಜಸವಾಗಿರಬೇಕು. ಅದು ತನ್ನ ನಿಜತ್ವಕ್ಕೆ ತನ್ನಿಂದಲೇ ಆಧಾರಗಳನ್ನು ಒದಗಿಸಬೇಕು.

೨೩. ಜಗದ್ಗುರುವು ಸರ್ವಜನರಿಗೂ ತಂದೆಯಾಗಿಯೂ ಮತ್ತು ಸರ್ವಜನರನ್ನು ಮಕ್ಕಳಂತೆಯೂ ಭಾವಿಸಬೇಕು. ಆತನ ಭಾರ್ಯೆಯರು ಸರ್ವಜನರಿಗೂ ಮಾತೃಗಳಂತೆ ಗಣನೆಗಳನ್ನು ಹೊಂದಿ ಬೋಧನೆಗಳನ್ನು ಹೇಳಿರಬೇಕು.

೨೪. ಈತನೆ ಜಗದ್ಗುರುವೆಂಬ ದೃಢವಾದ ನಂಬಿಕೆಗೆ ಆಧಾರವಾಗಿ ಆತನ ಅನುಯಾಯಿಗಳಲ್ಲಿ ಆಕಾರ ಪೂಜೆಯು ಬೇರೂರಿರಬಾರದು.

೨೫. ಆತನ ಧರ್ಮವು ಎಲ್ಲಾ ಧರ್ಮಗಳಿಗೂ ಆದಿಯಾದದ್ದಾಗಿಯೂ, ಆತನು ಎಲ್ಲಾ ಅವತಾರಿಗಳ ಆತ್ಮವ್ಯಾಪಿಯಾಗಿಯೂ, ಆತನ ಓಂಕಾರ ಗ್ರಂಥವು ಎಲ್ಲಾ ದೇವೋಕ್ತಗ್ರಂಥಗಳಿಗೆ ಮಾನ್ಯವಾಗಿಯೂ, ಆತನ ಜನ್ಮಸ್ಥಾನವು ಜಗತ್ತಿನ ನಾಭಿಸ್ಥಾನವಾಗಿಯೂ, ಆತನು ಸಾಕ್ಷಾತ್ ಜಗದೀಶ್ವರನ ಅವತಾರವಾಗಿಯೂ, ಮತ್ತು ಆತನ ಭಾಷೆಯು ಎಲ್ಲಾ ಭಾಷೆಗಳಿಗೂ, ಮಾತೃಭಾಷೆಯಾಗಿಯು ಇರಬೇಕು.

ಮೇಲೆ ಉದಹರಿಸಿರುವ ಸ್ವಭಾವಸಂಯುಕ್ತವಾದ ಆತ್ಮಪ್ರಕಾಶ ಗರ್ಭಿತನಾದವನೇ ಜಗದ್ಗುರು. ಇವುಗಳೆಲ್ಲವನ್ನು ಸಂಪೂರ್ಣವಾಗಿ ಹೊಂದದೆ ಇರುವ ಮಹಾತ್ಮರು ಈಶ್ವರಾವತಾರ ಪ್ರಸನ್ನರಾದ ಜಗದ್ಗುರುವಿಗೆ ಅಧೀನರಾದ ಕಾರಣ ಮತ್ತು ಕಾರ್ಯಗುರುಗಳಾಗಿ ಪರಿಣಮಿಸುವರು. ಸದ್ಯದಲ್ಲಿಯಾದರೂ ಅನೇಕರು ಡಾಂಭೀಕತೆ ಎಂಬ ಭ್ರಾಂತಿಯಲ್ಲಿ ಬಿದ್ದು ತಮ್ಮಷ್ಟಕ್ಕೆ ತಾವು ಅಂಕಿತ ನಾಮಧಾರಿಗಳಾದ ಜಗದ್ಗುರುಗಳಾಗಿ ತಮ್ಮ ತಮ್ಮಲ್ಲಿಯೇ ಕಲಹಗಳನ್ನುಂಟು ಮಾಡಿಕೊಂಡು ಸರ್ವಧರ್ಮಗಳ ಶಾಂತತೆಯ ಭಂಗಕ್ಕೆ ಮೂಲಕಾರಣರಾಗಿರುವರು. ಈಗಿನ ಜಗದ್ಗುರು ನಾಮಧಾರಿಗಳು ಈ ಧರ್ಮಕಲಿಯಲ್ಲಿ ಸ್ಥಾಯಿಯಾಗಿರುವುದು ಬಹಳ ಕಠಿಣವು. ಶೃಂಗೇರಿ ಸಿಂಹಾಸನಾರೂಢರೇ ಆಗಲೀ ಚಿತ್ರದುರ್ಗದ ಶೂನ್ಯಸಿಂಹಾಸನರೂಢರೇ ಆಗಲೀ, ಪಂಚಸಿಂಹಾಸನ ರೂಢರೇ ಆಗಲೀ, ಮತ್ತು ಜಗತ್ತಿನ ಇವರ ಹೊರತಾದವರೆಲ್ಲರೂ, ನಾಮಧಾರಿ ಜಗದ್ಗುರುಗಳೇ ಏನಹಧರ್ಮತಹ ಜಗದ್ಗುರುಗಳೆನಿಸಿಕೊಳ್ಳಲಾರರು. ಇವರೆಲ್ಲರು ಶ್ರೀ ಚನ್ನಬಸವೇಶ್ವರರ ಮತ್ತು ಪ್ರಭುಪ್ರಸನ್ನರಾದ ವೀರವಸಂತರಾಯರ ಪ್ರಸನ್ನತೆಯ ಈ ಧರ್ಮಕಲಿಯಲ್ಲಿ ವಿನಾಶಗತಿಯನ್ನು ಹೊಂದದೆ ಇರಲಾರರು. ಭವಿಷ್ಯೋತ್ತರಪುರಾಣದಲ್ಲಿ "ಬ್ರಹ್ಮಾಕೃತ ಶಿವಸಹಸ್ರನಾಮಸು | ವೃತ್ಯುಂಜಯ ಸೂಕ್ಷ್ಮತನುರ್ ಜಗದ್ವ್ಯಾಪಿ ಜಗದ್ಗುರು" ಎಂದು ಸಾರಲ್ಪಟ್ಟಿರುವ ಪ್ರಮಾಣಕ್ಕನುಸಾರವಾಗಿ ಈಶ್ವರವತಾರಿಯು ಮಾತ್ರ ಜಗದ್ಗುರುವೆನಿಸುವನೇ ಹೊರತು ಅಂಕಿತನಾಮಧಾರಿಗಳಾದ ಕಲಿಯುಗದಲ್ಲಿ ಕಂಡುಬರುವ ಸಿಂಹಾಸನಾಧಿಪತಿಗಳು ಜಗದ್ಗುರುಗಳಾಗಲಾರರು. ಹಿಂದಿನ ಎಲ್ಲಾ ಅವತಾರಿಗಳಿಗೂ ಆತ್ಮಸಂಬಂಧೀಕನಾದ ತಂದೆಯು ಜಗದ್ಗುರು ಒಬ್ಬನೇ ಆಗಿರುವುದರಿಂದ ಮಿಕ್ಕ ನಾಮಧಾರಿ ಜಗದ್ಗುರುಗಳು ಆ ಅವತಾರಿಗಳೆಲ್ಲರಿಗೂ ತಂದೆಗಳಾಗಿ ಪರಿಣಮಿಸಿರುವುದು ಬಹಳ ಪಾಪವು. ಈ ಕಾರಣದಿಂದಲೆ ಇವರೆಲ್ಲರು ಆತ್ಮಸಾಕ್ಷಾತ್ಕಾರವನ್ನು ಹೊಂದಿ ದಿವ್ಯಜ್ಞಾನಿಗಳಾಗದೆ ತಮ್ಮ ತಮ್ಮಲ್ಲಿಯೇ ಬುದ್ಧಿಶೂನ್ಯವಾದ ಕಲಹಗಳಿಗೆ ಬೀಜಪ್ರಾಯರಾಗಿದುವರು. ಪಾಪಗರ್ಭಿತವಾದ ಈ ಕಲಿಯಲ್ಲಿ ಕಲಿಪುರುಷನು ತನ್ನ ಮಹಿಮೆಯನ್ನ ಹೆಚ್ಚಾಗಿ ಹರಡಿ ಅಜ್ಞಾನವೆಂಬ ಕಾರ್ಗತ್ತಲೆಯನ್ನುಂಟುಮಾಡಿ, ಪಾಪಪ್ರವರ್ತಕರೆಂಬ ಪಿಶಾಚಿಗಳಿಗೆ ನಾಟ್ಯಸ್ಥಾನವನ್ನು

ಸಜ್ಜುಗೊಳಿಸಿರುತ್ತಾನೆ. ಆದಪ್ರಯುಕ್ತ ಈ ನಾಮಧಾರಿಗಳನ್ನು ವಿಚಾರಿಸುವವರಿಲ್ಲದಹಾಗೆ, ಕಲಿಯು ತನ್ನ ಮಹಿಮೆಯನ್ನು ಹೆಚ್ಚಿಸಿರುವುದು. ಮನುಷ್ಯನಿಗೆ ರಕ್ತಸಂಬಂಧೀಕನಾದ ತಂದೆಯ ಹೊರತು ಮಿಕ್ಕವರು ತಂದೆಗಳೆಂದು ಹೇಳಿದರೆ ಹೇಗೆ, ಕ್ರೋಧವು ಹೆಚ್ಚುತ್ತದೆಯೋ ಅದೇ ರೀತಿಯಲ್ಲಿ ಮನುಷ್ಯವರ್ಗಕ್ಕೆಲ್ಲ ಆತ್ಮಸಾಕ್ಷಾತ್ಕಾರವನ್ನುಂಟುಮಾಡುವ ಸರ್ವ ಅವತಾರಿಗಳಿಗೂ ಆತ್ಮಸಂಬಂಧೀಕನಾದ ತಂದೆಯು ಒಬ್ಬನಲ್ಲದೆ ಹೆಚ್ಚಾಗಿರುವರೆಂದು ಹೇಳುವುದು ಜ್ಞಾನಿಗಳಲ್ಲಿ ಅಪರಿಮಿತವಾದ ಕ್ರೋಧಕ್ಕೂ ಮತ್ತು ಅಪಮಾನಕ್ಕೂ ಆಸ್ಪದವಾಗಿರುವುದು. ಇದಕ್ಕೋಸ್ಕರ ಜ್ಞಾನಿಗಳು ಬಹಳವಾಗಿ ದುಃಖಿಸುವರು, ವಸ್ತು ಯಾವರೀತಿಯಲ್ಲಿ ಜಗತ್ತಿಗೆಲ್ಲ ಪರಮಾತ್ಮನಾದ ಈಶ್ವರನು ಒಬ್ಬನಾಗಿದ್ದಾನೋ, ಅದೇಪ್ರಕಾರ ಆತ್ಮಸಂಬಂಧೀಕನಾದ ತಂದೆ ಎನಿಸುವ ಒಬ್ಬನಾದ ಜಗದ್ಗುರುವಿನ ಕೀರ್ತಿಯನ್ನು ಮತ್ತು ಆತ್ಮಶಕ್ತಿಯನ್ನು ತೋರ್ಪಡಿಸಲು ನಡುಕಟ್ಟಿ ನಿಲ್ಲುವರು.

ಪ್ರಾಚೀನಕಾಲಗಳಲ್ಲಿ ಈಶ್ವರಾವತಾರಕ್ಕಿಂತಲೂ ಮುಂಚೆಯೇ ಪ್ರಸನ್ನರಾಗಿರುವ ಅವತಾರಿಗಳನ್ನು ಮತ್ತು ಈಗಿನ ನಾಮಧಾರಿ ಜಗದ್ಗುರುಗಳನ್ನು ಹಿಂದೆ ನಮೂದಿಸಿರುವ ಇಪ್ಪತ್ತೈದು ಪ್ರಮಾಣಗಳೆಂಬ ವರಿಗಲ್ಲಿಗೆ ತಿಕ್ಕಿನೋಡಬೇಕಾಗಿರುವುದು. ಈ ಪರಾಮರಿಕೆಯಲ್ಲಿ ಬಂದು ಸ್ವರೂಪದಲ್ಲಿಯೂ ಇವರು ತೇರ್ಗಡೆಯನ್ನು ಹೊಂದಲಾರದೆ ಇದ್ದರೆ, ಈ ಘನವಾದ ಪದವಿಗೆ ಅರ್ಹರಲ್ಲವೆಂದು ಮನುಷ್ಯನ ಸಾಧಾರಣಬುದ್ಧಿಗೆ ಒಪ್ಪಿತವಾಗಿ ತೋರುವುದು. ತತ್ಕಾಲದಲ್ಲಿಯಾದರೋ ವಿವಿಧವಾದ ಪಾಪಗಳು ಹಬ್ಬಿ ಜನರನ್ನು ಸನ್ಮಾರ್ಗತಪ್ಪಿಸಿ ಅಜ್ಞಾನವೆಂಬ ಅಂಧಕಾರದಲ್ಲಿ ಆಲೆದಾಡುವ ಹಾಗೆ ಮಾಡಿರುವವು. ಜ್ಞಾನರಹಿತವಾದ ಕಾಲದಲ್ಲಿ ಸನ್ಮಾರ್ಗವೆಂಬ ಜ್ಞಾನತೇಜಸ್ಸನ್ನು ಹೊರಪಡಿಸುವ ಸತ್ಪುರುಷರು ಅತಿವಿರಳವಾಗಿ ತೋರುವರು. ಆಯಾಯ ಕುಲಗಳಲ್ಲಿ ಮತಾನುಸಾರಗಳನ್ನುಂಟುಮಾಡಿ ಸ್ವಾರ್ಥಪರತೆಯೆಂಬ ತಮ್ಮ ಹಸುವಿಗೆ ಆಹಾರವಾಗಿ ಪರಿಣಮಿಸಿರುವ ಲೌಕೀಕ ಮರ್ಯಾದೆಯನ್ನು ಸಂಗ್ರಹಮಾಡಲು ನಾಮಧಾರಿಗಳಾದ ಈ ಹದಿನೆಂಟು ಜನ ಜಗದ್ಗುರುಗಳು ಉಮೇದುವಾರರಾಗಿರುವರು. ಜನರಲ್ಲಿನ ಆತ್ಮಶಾಂತತ ಭಂಗಕ್ಕೆ ಕಾರಣರಾಗಿರುವ ಈ ಅಸತ್ಯಗುರುಗಳನ್ನು ಮೂಲೋತ್ಪಾಟನಮಾಡಿ

ಜನರನ್ನು ಸನ್ಮಾರ್ಗಪ್ರವರ್ತಕರನ್ನಾಗಿ ಮಾಡಿ ಆತ್ಮಸಾಕ್ಷಾತ್ಕಾರವನ್ನು ಹೊಂದಿಸಿ ಜಗದ್ಗುರುವಿನ ಅಂಶವನ್ನು ಪ್ರಸನ್ನಪಡಿಸಿ, ಪ್ರಪಂಚದಲ್ಲಿ ಶಾಂತಿಯನ್ನು ನೆಲೆಗೊಳಿಸುವ ಸಲುವಾಗಿ ಪರಮಾತ್ಮನು ಶ್ರೀಚನ್ನಬಸವೇಶ್ವರರನ್ನು ರುದ್ರಾವತಾರ ಪ್ರಸನ್ನರನ್ನಾಗಿ ಮಾಡಿ, ನಾಗಮುಖ, ಶಂಖ, ಚಕ್ರ, ತ್ರಿಶೂಲ, ಬಿಲ್ಲು, ಬಾಣ, ಪರಶು, ವೃಷಭನನ್ನು ಮುಂತಾದುವುಗಳನ್ನು ನೆಲೆಗೊಳಿಸಿ, ಐವತ್ತಾರು ಅಂತರಂಗ ಬಹಿರಂಗ ಕುರುಹುಗಳೊಂದಿಗೆ ಧರ್ಮಕಲಿಗೆ ಅಧಿಪತಿಯಾದ ರುದ್ರಗೋಪಾಲನ ಪರಮಭಕ್ತನಾದ ನನ್ನ ರೂಪಿನಲ್ಲಿ ಹೊರಪಡಿಸಿರುವನು. ಈ ಕಲಿಯುಗದ ಪಾಪವನ್ನು ತಗ್ಗಿಸಲು ಶ್ರೀ ಚನ್ನಬಸವೇಶ್ವರರು ಮತ್ತು ವೀರವಸಂತರಾಯರು ಜಗದ್ಗುರುವಿನ ಸಾನ್ನಿಧ್ಯವನ್ನು ಸೇರಿ ಕಾರಣ ಕಾರ್ಯಗುರುಗಳಾಗಿ ತೋರಿರುವರು. ಮೌನೇಶ್ವರರು "ಪಟ್ಟಾಪಟ್ಟದವರು ಹೆಟ್ಟ್ಯಾಡಿಸತ್ತಾರು | ಪಟ್ಟಾವು ತಮು ತಮು ಗೆಣ್ಣ || ಪಟ್ಟಕ್ಕೆ ಚನ್ನಬಸವಣ್ಣಾ ಬಂದಾನು | ವೊಟ್ಟ್ಯಾಗಿ ಹಾರು ತೀರಣ್ಣ || ಎಂದು ಸಾರಿರುವ ಕಾಲಜ್ಞಾನದಂತೆ ಈಗಿನ ಸಿಂಹಾಸನಾಧಿಪತಿಗಳೆಲ್ಲರೂ ವಿನಾಶವನ್ನು ಹೊಂದಬೇಕೆಂದು ದೃಢವಾಗಿ ಸಾರಲ್ಪಟ್ಟಿರುತ್ತದೆ.

# "ಕರ್ಮವೆ ಲಯ, ಧರ್ಮವೆ ಜಯ"

ಬ್ರಹ್ಮಾಕೃತಶಿವಸಹಾಸ್ರನಾಮಸು ।।
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವಾಪಿ ಜಗದ್ಗುರು ॥

## ಶ್ರೀ ರಾಮಾವತಾರ.

ಶ್ರೀವಿಷ್ಣುವಿನ ದಶಾವತಾರಗಳಲ್ಲಿ ಶ್ರೀರಾಮಾವತಾರವು ಬಹು ಪ್ರಸಿದ್ಧವಾದುದಾಗಿದೆ. ಈ ಅವತಾರಿಗಳ ವಿಷಯವು ರಾಮಾಯಣವೆಂಬ ಮಹಾಗ್ರಂಥದಲ್ಲಿ ವಿಶದವಾಗಿ ವಿವರಿಸಲ್ಪಟ್ಟಿದೆ. ಇವರ ಸುಬೋಧನೆಗಳು ಶೀತಾರಾಮಾಂಜನೇಯ ಸಂವಾದದಲ್ಲಿಯೂ ಮತ್ತು ಶಿವಗೀತೆಯಲ್ಲಿಯೂ ದೇದೀಪ್ಯಮಾನವಾಗಿ ತುಂಬಿವೆ. ಶ್ರೀರಾಮರು ಸಾಕ್ಷಾತ್ ಶ್ರೀವಿಷ್ಣುವಿನ ಅವತಾರಪ್ರಸನ್ನರಾದ್ದರಿಂದ ಶಿವಭಕ್ತನಾದ ರಾವಣನನ್ನು ಪಾಪಪ್ರವರ್ತಕನಾಗಿದ್ದಾಗ್ಯೂ ನಿಗ್ರಹಿಸಲು ಬೇಕಾದ ರುದ್ರಶಕ್ತಿ ಪ್ರಸನ್ನರಲ್ಲದ್ದರಿಂದ, ತ್ರಿಶಕ್ತಿಗಳಿಗೆ ಮೂಲನಾದ ಈಶ್ವರಸ್ವರೂಪನಾದ ಪರಮಾತ್ಮನಲ್ಲಿ ಐಕ್ಯತೆಯನ್ನು ಹೊಂದಿ ರುದ್ರಶಕ್ತಿಯನ್ನು ವಹಿಸಿ ರಾವಣನನ್ನು ನಿಗ್ರಹಿಸಿದರು. ಪ್ರಯುಕ್ತ ಪರಮಾತ್ಮನ ಸಂಪೂರ್ಣಾತ್ಮಪ್ರಸನ್ನರಾಗದೆ ವಿಷ್ಣುಶಕ್ತಿ ಪ್ರಸನ್ನರಾದ್ದರಿಂದ ಇವರು ಶಿಷ್ಟರನ್ನು ಪರಿಪಾಲಿಸಲು ಶಕ್ತರಾಗಿದ್ದರೆ ವಿನಹ ದುಷ್ಟರನ್ನು ಸ್ವತಹ ನಿಗ್ರಹಿಸಲು ಶಕ್ತರಾಗಿರಲಿಲ್ಲವು. ಆದುದರಿಂದಲೆ ಇವರು ಸಾಕ್ಷಾತ್ ಈಶ್ವರ ಸ್ವರೂಪಿಗಳಾದ ಜಗದ್ಗುರುಗಳೆನಿಸಲಾರರು. ಅದೂ ಅಲ್ಲದೆ ಇವರ ಸುಬೋಧನೆಗಳು ಯಲ್ಲಾ ಜನಾಂಗಗಳ ಸಂರಕ್ಷಣೆಗೋಸ್ಕರ ಬೋಧಿಸಲ್ಪಟ್ಟಿಲ್ಲವು. ವಿಶೇಷವಾಗಿ ಇವರ ಬೋಧನೆಗಳು ಚತುರ್ವರ್ಣಗಳಲ್ಲಿ ಒಂದಾದ ಕ್ಷತ್ರಿಯವರ್ಣಕ್ಕೆಮಾತ್ರ ತಕ್ಕವುಗಳೆಂಬುದು ಇವರ ಕರ್ತವ್ಯ ಕರ್ಮಗಳಿಂದ ವಿದಿತವಾಗುತ್ತದೆ. ಹೇಗೆಂದರೆ ಇವರು ಇತರ ವರ್ಣಗಳಲ್ಲಿ ರಕ್ತಸಂಬಂಧಗಳಾದ ಬಳಕೆಗಳನ್ನು ಉಂಟುಮಾಡಲಿಲ್ಲವು. ಇವರು ಕ್ಷತ್ರಿಯ ವರ್ಣದ ಸ್ಥೂಲಸೂಕ್ಷ್ಮದ ಸಂರಕ್ಷಣೆಗಾಗಿ ಮಾತ್ರ ಅವತರಿಸಿದುದರಿಂದ ಜಗದ್ಗುರುಗಳಾಗಲು ಅರ್ಹರಲ್ಲವು.

# ಶ್ರೀಕೃಷ್ಣಾವತಾರ

ಶ್ರೀಕೃಷ್ಣನು ಹಿಂದೂಸ್ಥಾನದಲ್ಲಿ ಪ್ರಸಿದ್ಧವಾದ ದ್ವಾರಕೆಯೆಂಬ ಪಟ್ಟಣದಲ್ಲಿ ದ್ವಾಪರಯುಗದಂತ್ಯದಲ್ಲಿ ಶ್ರೀವಿಷ್ಣುವಿನಂಶವನ್ನವಲಂಬಿಸಿ ಯದುವಂಶದಲ್ಲಿ ಉದ್ಭವಿಸಿದನು. ಈತನ ಜೀವಮಾನದ ಇತಿಹಾಸವು ಶ್ರೀಮದ್ಭಾಗವತದಲ್ಲಿಯೂ ಮಹಾಭಾರತದಲ್ಲಿಯೂ ಭಗವದ್ಗೀತೆ ಮುಂತಾದ ವುಗಳಲ್ಲಿಯೂ ಸವಿಸ್ತಾರವಾಗಿ ವಿವರಿಸಲ್ಪಟ್ಟಿರುತ್ತದೆ. ಇವರುಕೇವಲ ವಿಷ್ಣು ವಿನ ಅಂಶಪ್ರಸನ್ನರಾದುದರಿಂದ ಜಗದ್ಗುರುಗಳಲ್ಲವು. ಒಂದು ಕಾಲದಲ್ಲಿ ವೇದವ್ಯಾಸನು ಭ್ರಾಂತಿಯಿಂದ ಶ್ರೀಕೃಷ್ಣನ ಎಶಸ್ಸನ್ನು ಪ್ರಚುರಪಡಿಸುವ ಸಲುವಾಗಿ ತೋಳನ್ನೆತ್ತಿ "ಕೇಶವಾತ್‌ಪರಂನಾಸ್ತಿ" ಎಂದು ಹೇಳೋಣ, ಆತನ ತೋಳು ನಿಶ್ಯಕ್ತಿಯಿಂದ ಕಳಚಿಹೋಯಿತು. ಕೂಡಲೆ ಶ್ರೀವಿಷ್ಣು ವಿನ ಅವತಾರನಾದ ಶ್ರೀಕೃಷ್ಣನು ಪ್ರಸನ್ನನಾಗಿ "ಅಹಂಕರ್ತಜಗತ್ಕರ್ತ ನುಹೇಶ್ವರಃ" ಯಂದು ಬೋಧಿಸಿದನು. ಇದರಿಂದ ವಿಷ್ಣುಶಕ್ತಿ ಪ್ರಸನ್ನ ರಾದ ಅವತಾರಿಗಳು ಜಗದ್ಗುರುಗಳಾಗರೆಂದು ಸಿದ್ಧಾಂತವಾಯಿತು. ಆದು ದರಿಂದ ಜಗತ್ಕರ್ತನಾದ ಮಹೇಶ್ವರಾವತಾರಿಯು ಜಗದ್ಗುರುಯಂಬ ಸಿದ್ಧಾಂತವು ಸತ್ಯವಾಯಿತು. ಮಿಕ್ಕ ಭಿನ್ನಭಿನ್ನಸ್ವರೂಪುಗಳನ್ನವಲಂಬಿಸಿ ಅವತರಿಸಿದ ಮತ್ತು ಅವತರಿಸುವ ಮಹಾತ್ಮರೆಲ್ಲರು ಈಶ್ವರವತಾರಿಯಾದ ಜಗದ್ಗುರುವಿಗೆ ಅಧೀನರಾದ ಕಾರಣ ಮತ್ತು ಕಾರ್ಯಗುರುಗಳಾಗಿ ಪರಿಣಮಿ ಸುವರು.

ಇದೂ ಅಲ್ಲದೆ ಶ್ರೀಕೃಷ್ಣನ ಬೋಧನೆಯು ಒಂದು ವರ್ಣದ ಸ್ಥೂಲ ಸೂಕ್ಷ್ಮಸಂರಕ್ಷಣೆಗೆಮಾತ್ರ ಹೊರಪಟ್ಟಿರುವುದೆಂದು ಈತನ ಉಪದೇಶ ದಿಂದಲೆ ತಿಳಿಯಬರುತ್ತದೆ. "ಶ್ರೇಯಾನ್ಸ್ವಧರ್ಮೋವಿಗುಣಹ ಪರಧರ್ಮಾತ್ ಸ್ವನುಷ್ಠಿತಾತ್ | ಸ್ವಧರ್ಮೆನಿಧನಂಶ್ರೇಯಃಪರಧರ್ಮೋಭಯಾವಹಃ || ಎಂದರೆ ಗುಣವಿಲ್ಲದ ತನ್ನ ಕುಲಧರ್ಮವು ಗುಣವುಳ್ಳ ಪರಧರ್ಮಕ್ಕಿಂತಲೂ ಶ್ರೇಷ್ಠವಾ ದುದು. ಸ್ವಧರ್ಮದಲ್ಲಿ ಸತ್ತರೂ ಒಳ್ಳೇಸು, ಅನ್ಯಧರ್ಮವು ಭಯಂಕರವು." ಎಂದು ಬೋಧಿಸಿರುತ್ತಾನೆ. ಇದರಿಂದ ಈತನಿಗೆ ಪ್ರಪಂಚಕ್ಕೆ ಬಂದಾದ

ಅನಾದಿ ಮತವನ್ನು ಸರ್ವರಿಗೂ ಬೋಧಿಸುವ ಅಧಿಕಾರವಿರಲಿಲ್ಲವೆಂದು ಸ್ಪಷ್ಟವಾಗಿ ತಿಳಿಯಬರುತ್ತದೆ. ಆದುದರಿಂದ ಶ್ರೀಕೃಷ್ಣನು ಜಗದ್ಗುರುವಾಗೆಲಾರನು. ಮತ್ತು ತಾನು ಕ್ಷತ್ರಿಯಧರ್ಮಕ್ಕೆಮಾತ್ರ ಅವತರಿಸಿದನೆಂದು ಅನೇಕ ಪ್ರಮಾಣಗಳಿಂದ ಸೂಚಿಸಿರುತ್ತಾನೆ. "ಸ್ವಧರ್ಮಮಪಿ, ಬೌವೇಕ್ಷ್ಯ ನವಿಕಂಪಿತುಮರ್ಹಸಿ | ಧರ್ಮ್ಯಾದ್ಧಿಯುದ್ಧಾಚ್ಛ್ರೇಯೋನ್ಯತ್ಕ್ಷತ್ರಿಯಸ್ಯನವಿದ್ಯತೆ || " ಎಂದರೆ "ಸ್ವಧರ್ಮವನ್ನು ತಿಳಿದು ನೀನು ಹೆದರಿತಕ್ಕವನಲ್ಲ ಕ್ಷತ್ರಿಯರಿಗೆ ಯುದ್ಧಕ್ಕಿಂತಲೂ ಶ್ರೇಷ್ಯವಾದ ಬೇರೊಂದು ಧರ್ಮವಿಲ್ಲಾ" ಎಂದು ಶ್ರೀಕೃಷ್ಣನು ಕ್ಷತ್ರಿಯ ಧರ್ಮ ಬಂದನ್ನುಮಾತ್ರ ಉಪದೇಶಿಸುತ್ತಾನೆ. ಪುನಃ " ಯಥಾಪ್ರಕಾಶಯತ್ಯೇಕಃಕೃತ್ಸ್ನಂಲೋಕಮಿಮಂರವಿಃ | ಕ್ಷೇತ್ರಂಕ್ಷೇತ್ರೀತಥಾಕೃತ್ಸ್ನಂಪ್ರಕಾಶಯತಿಭಾರತ || " ಎಂದರೆ "ಎಲೈ ಭಾರತನೆ, ಒಬ್ಬನಾವ ಸೂರ್ಯನು ಈ ಎಲ್ಲಾ ಲೋಕವನ್ನು ಹೇಗೆ ಪ್ರಕಾಶಿಸುವನೋ ಹಾಗೆಯೇ ಕ್ಷೇತ್ರಿಯು ಎಲ್ಲಾ ಕ್ಷೇತ್ರವನ್ನು ಪ್ರಕಾಶಿಸುವನು" ಎಂಬ ಪ್ರಮಾಣದಿಂದ ತಾನು ಕ್ಷತ್ರಿಯನೆಂದೂ ತನ್ನ ಧರ್ಮಕ್ಷತ್ರಿಯಧರ್ಮವೆಂದೂ ವಿಶದವಾಗಿ ತಿಳಿಸಿರುತ್ತಾನೆ. ಆದ ಪ್ರಯುಕ್ತ ಶ್ರೀಕೃಷ್ಣನು ಜಗದ್ಗುರುವಾಗೆಲಾರನು.

---

## ಬೌದ್ಧಾವತಾರವು.

ಬೌದ್ಧಾವತಾರೀಕರು ಚತುರ್ವರ್ಣಗಳಿಗೆ ವಿರೋಧವಾದ ಉಪದೇಶಗಳನ್ನು ಮಾಡಿರುವರು. ಇವರ ಸುಬೋಧನೆಗಳು ನಾಸ್ತೀಕರಿಗೆ ಮಾತ್ರ ರಕ್ಷಣಾರ್ಥವಾದುವುಗಳೆಂದು ತಿಳಿಯಬರುತ್ತದೆ. ಇವರು ಆಗಿನ ಕಾಲದ ದ್ವೈತ, ಅದ್ವೈತ ಮಾರ್ಗೆಗಳನ್ನು ವಿರೋಧದಿಂದ ಖಂಡನೆಮಾಡಿರುವರು. ಬೌದ್ಧರು ವೇದಗಳಿಗೂ ಕೂಡ ವಿರೋಧವಾಗಿ ಬೋಧಿಸಿರುವರು. ಮಾತ್ತಾವ ಓಂಕಾರ ಪ್ರದವಾದ ಗ್ರಂಥಗಳನ್ನೂ ಕೂಡ ಇವರು ನಂಬುವುದಿಲ್ಲ. ಪ್ರಯುಕ್ತ ಗೌತಮ ಬೌದ್ಧರು ಜಗದ್ಗುರುಗಳೆಂಬ ನಾಮಾಂಕಿತವನ್ನುಹೊಂದಲಾರರು.

---

## ಮೂಸಫೈಗಂಬರರು

ಸುಮಾರು ಮೂರುಸಾವಿರ ವರ್ಷಗಳ ಹಿಂದೆ ಎರಡನೆ ರೆಮಿಸಿಸ್. (ಫೆರೋ) ಎಂಬ ರಾಜನು, ಇಸ್ರಾಯೀಲನಮನೆತನದ ಸನ್ಮಾರ್ಗಪ್ರವರ್ತಕರಾದ ಯಾಹೂದ್ಯರನ್ನು ಬಹಳ ತೊಂದರೆಗಳಿಗೆ ಗುರಿಮಾಡಿ, ಅವರನ್ನು ತಮ್ಮ ಸನ್ಮಾರ್ಗದಿಂದ ದಾರಿತಪ್ಪಿಸಿ ಅವರು ಅಸತ್ಯ ಮುಂತಾದ ಪಾಪಕಾರ್ಯಗಳಲ್ಲಿಪ್ರವರ್ತಿಸುವಂತೆ ಮಾಡಿದನು. ಮತ್ತು ಇವರ ಕುಲನಾಶವನ್ನು ಗೈಯ್ಯುವಸಲುವಾಗಿ ಅವರ ಮಕ್ಕಳನ್ನು ನಾನಾವಿಧವಾದ ತೊಂದರೆಗಳಿಗೆ ಗುರಿಮಾಡಿ ಕೊಲ್ಲಿಸುತ್ತಿದ್ದನು. ಆದುದರಿಂದ ಪರಮಾತ್ಮನು ಇಸ್ರಾಯಿಲನ ಮನೆತನದವರ ಧರ್ಮರಕ್ಷಣೆಗೂ ಮತ್ತು ಪ್ರಾಣರಕ್ಷಣೆಗೂ ಮೂಸಾ ಪೈಗಂಬರರನ್ನು ಅವರಲ್ಲಿಯೇ ಪ್ರಸನ್ನರನ್ನಾಗಿಮಾಡಿ, ಅವರ ಮೂಲಕ ರೆಮಿಸಿಸ್ ಮತ್ತು ಆತನ ಕಡೆಯವರನ್ನು ಇವರ ಕೈಯಿಂದಲೇ ನಾಶಗೊಳಿಸಿದನು. ಮತ್ತು ಯಹೂದಿಯರನ್ನು ಆ ಕಷ್ಟದಿಂದ ಉಳಿಸಿ ರಕ್ಷಿಸಿದನು. ಇವರ ಬೋಧನೆಗಳು ಯಹೂದಿಯರ ಸಲುವಾಗಿ ಮಾತ್ರವೇ ಪ್ರಕಟವಾಗಿವೆ. ಮತ್ತು ಇವರು ಇತರ ಜನಾಂಗದವರಿಗೆ ತಮ್ಮ ಬೋಧನೆಗಳನ್ನು ಪ್ರಸಿದ್ಧಮಾಡಿ ತೋರಿಸಲಿಲ್ಲಾ. ಪ್ರಯುಕ್ತ ಇವರು ಯಹೂದಿಯರಸಲುವಾಗಿ ಮಾತ್ರ ಅವತರಿಸಿದುದರಿಂದ ಜಗದ್ಗುರುಗಳಾಗಲಾರರು.

---

## ಏಸುಕ್ರಿಸ್ತರ ಅವತಾರವು.

ಏಸುಕ್ರೈಸ್ತರಾದರೂ ಕೂಡ ಇಸ್ರಾಯಿಲನ ಮನೆತನದವರಾದ ಯಹೂದಿಯರಸಲುವಾಗಿ ಮಾತ್ರ ಅವತಾರಿಗಳಾಗಿ ಪರಿಣಮಿಸಿದರು. ಅವರು ಯಾವಾಗಲೂ "ನಾನು ಯಹೂದಿಯ ಧರ್ಮಪಾಲಕನಾದ ಧೊರೆ" ಯೆಂದುಹೇಳುತ್ತಿದ್ದರೇ ವಿನಃ ಪ್ರಪಂಚದ ಧರ್ಮಪಾಲನದ ಧೊರೆಯೆಂದು ಎಂದೂಹೇಳಿಲ್ಲಾ. ಇವರು ನ್ಯಾಯಸ್ಥಾನದಲ್ಲಿಯೂ ಕೂಡಿ ನ್ಯಾಯಾಧಿಪತಿಯಾದ, ಪಲಾತೂಸ್ ಎಂಬಾತನ ಮುಂದೆಯು ಕೂಡ ತಾನು ಯಾಹೂದಿಯರ ಧೊರೆಯೆಂದು ಹೇಳಿಯುತ್ತಾರೆ. ಕೆನಾನ್‌ವಂಶದ ಒಬ್ಬ ಸ್ತ್ರೀಯು ಏಸುಕ್ರೈಸ್ತರ ಸಾನ್ನಿಧ್ಯವನ್ನು ಸೇರಿ ತನಗೆ ದೀಕ್ಷೆಯನ್ನನುಗ್ರಹಿಸಬೇಕೆಂದು ಬೇಡಿಕೊಳ್ಳಲು ಇವರು "ನಾನು ಮಕ್ಕಳ ರೊಟ್ಟಿಯನ್ನು ನಾಯಿಗಳಿಗೆ

ಹಾಕುವುದಿಲ್ಲವೆಂದು ಹೇಳಿದರು. ಇದರಿಂದ ಅವರ ಬೋಧನೆಯು ಯಹೂದಿಯರ ವಿನಃ ಬೇರೆ ಜನಾಂಗದವರಿಗೆ ಬೋಧಿಸಕೂಡದೆಂದು ಸೂಚಿಸಿರುತ್ತಾರೆ. ಪುನಃ "ಓ ಸ್ತ್ರೀಯೆ! ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯಿಲನ ಮನೆತನದವರ ಬಳಿಗೆ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ" (೧೫ನೇ ಅಧ್ಯಾಯ, ೨೪ ವಾಕ್ಯ) ಎಂದು ಸ್ಪಷ್ಟವಾಗಿ ಸೂಚಿಸಿರುವರು. ಆದರೆ ಇವರ ಅನುಯಾಯಿಗಳು ಇವರ ಬೋಧನೆಗಳಿಗೆ ವಿರೋಧವಾಗಿ ಇತರ ಜನಾಂಗದ ಧರ್ಮಗಳನ್ನು ಅಲ್ಲಗಳೆದು ತಮ್ಮಲ್ಲಿ ಸ್ವಧರ್ಮಕ್ಕೆ ವಿರೋಧವಾಗಿ ಸಮಾವೇಶಗೊಳಿಸಿ ಪಾಪಕ್ಕೆ ಗುರಿಯಾಗುತ್ತಿರುವರು. ನಂತರ ಮತ್ತಾಯನ ಇಂಜೀಲಿನಲ್ಲಿ "ಓ! ನನ್ನ ಭಕ್ತರೇ, ತಾವು ಜ್ಞಾಪಕದಲ್ಲಿಡಿರಿ. ತಾವು ಯಹೂದಿಯರಿಗೆ ಮಾತ್ರ ಉಪದೇಶಮಾಡಿರಿ, ಇತರ ಕಡೆಗೆ ಹೋಗಬಾರದು" ಎಂದು ಸ್ಪಷ್ಟವಾಗಿ ಆಜ್ಞಾಪಿಸಿರುವರು. ಆದರೂ ಇದಕ್ಕೆ ವಿರೋಧವಾಗಿ ಅವರ ಅನುಯಾಯಿಗಳು ಧರ್ಮದ್ರೋಹಿಗಳಾಗಿ ಪರಿಣಮಿಸಿ ತಮ್ಮ ಧರ್ಮವನ್ನು ನಾಶಮಾಡುವುದಲ್ಲದೆ ಇತರ ಧರ್ಮಗಳನ್ನು ಕೂಡ ಕೆಡಿಸಲು ನಡುಕಟ್ಟಿ ನಿಂತಿರುವರು. ಮೇಲಿನ ಆಧಾರಗಳಿಂದ ಏಸುಕ್ರೈಸ್ತರು ಯಹೂದಿಯರ ಸಲುವಾಗಿ ಮಾತ್ರವೆ ಅವತರಿಸಿರುವುದರಿಂದ ಜಗದ್ಗುರುಗಳಾಗಲು ಅರ್ಹರಲ್ಲವೆಂದು ವಿದಿತವಾಗುವದು.

ಇವರ ನಂತರ ಇವರ ಸಿಂಹಾಸನಾರೂಢರಾದ, ಪೋಪ್, ಜಗದ್ಗುರುಗಳು ಹೇಗೆತಾನೆ ಆದಾರು! ಇವರಾದರೆ ಮತ್ತೊಂದು ವಿಶೇಷ ಸಂಗತಿಯನ್ನು ನಡೆಯಿಸಿರುವರು. ಯಾರಾದರು ಇವರ ಮತಾವಲಂಬಿಗಳಾದರೆ ತ್ರಿಕೋಣಾಕಾರವಾಗಿರುವ ಕಟ್ಟಿಗೆಯ ತುಂಡನ್ನು ಕೊರಳಿನಲ್ಲಿ ಕಟ್ಟಿಕೊಳ್ಳಬೇಕಾಗಿರುವುದು. ಇದಕ್ಕೂ ಮೂರ್ತಿಪೂಜೆಯೆಂದೇ ಒಂದುವಿಧವಾಗಿ ಹೇಳಬಹುದು. ಆದುದರಿಂದ ಈ ಮೂರ್ತಿ ಪೂಜಕರು ಎಂದಿಗೂ ಜಗದ್ಗುರುಗಳಾಗಲಾರರೆಂದು ಧಾರಾಳವಾಗಿ ಹೇಳಬಹುದು.

---

## ಸದ್ಯೋಜಾತಮುಖದಿಂದ ಜನಿಸಿದ ರೇಣುಕಾರಾಧ್ಯರು

ಈ ಸಿಂಹಾಸನದವರು ಪರಮಾತ್ಮನ ತ್ರಿಸ್ವರೂಪಗಳಲ್ಲಿ ಒಂದಾದ ಶಿವಸ್ವರೂಪವನ್ನು ಹೆಚ್ಚಿಸಿ, ಶ್ರೀ ವಿಷ್ಣುಸ್ವರೂಪದ ತಿರಸ್ಕಾರಕ್ಕೆ ಮೂಲ

ಕಾರಣರಾಗಿ ವಿಷ್ಣುಸ್ವರೂಪಿಗಳಾದ ಅವತಾರಿಗಳಿಂದ ಬೋಧಿಸಲ್ಪಟ್ಟಿರುವ ಭಗವದ್ಗೀತ ಮುಂತಾದ ಓಂಕಾರೋಕ್ತ ಗ್ರಂಥಗಳನ್ನು ತಿರಸ್ಕರಿಸುವರು. ವೇದಗಳವಿನಃ ಮತ್ತೊವ ದೇವೋಕ್ತಗ್ರಂಥಗಳನ್ನೂ ಮತ್ತು ಅವತಾರಿಗಳನ್ನೂ ನಂಬುವುದಿಲ್ಲಾ. ಶ್ರೀ ಕಲ್ಯಾಣ ಬಸವೇಶ್ವರ, ಶ್ರೀಚನ್ನಬಸವೇಶ್ವರ ಮತ್ತು ಇವರ ಅನುಯಾಯಿಗಳಾದ ಅರವತ್ತುಮೂರು ಜನ ಪುರಾತನರನ್ನು ತುಚ್ಛೀಕರಿಸಿರುವುದಲ್ಲದೇ ಅವರ ಬೋಧನೆಗಳನ್ನು ತಿರಸ್ಕಾರಭಾವನೆಯಿಂದ ನೋಡುವರು. ಆದರೆ ವೇದಗಳ ಬೋಧನೆಗೆ ವ್ಯತಿರಿಕ್ತವಾಗಿ ಕೊರಳಿನಲ್ಲಿ ಸಿಲಾಮಯ ಲಿಂಗವನ್ನು ಧರಿಸಿ, ದಿನಂಪ್ರತಿ ಅದರ ಪೂಜೆಯನ್ನು ಮಾಡುತ್ತಾರೆ. ಅಲ್ಲದೆ ಇವರು ಗೋವಿನ ಮಲವನ್ನು ಭಸ್ಮಮಾಡಿ, ಲಲಾಟದಲ್ಲಿ ಪೂಸಿಕೊಂಡು, ಡಾಂಭೀಕತನದಿಂದ ಇತರ ಧರ್ಮದವರ ವಿರೋಧಕ್ಕೆ ನಡುಕಟ್ಟಿ ನಿಲ್ಲುವರು. ಆದಪ್ರಯುಕ್ತ ಅಂಥಾ ದಿವ್ಯಪದವಿಗೆ ಇಂಥಾ ದುರಭಿಮಾನವನ್ನು ನೆಲೆಗೊಳಿಸಿ ದ್ವೇಷವನ್ನು ನೆಲಗೊಳಿಸುವವರು ಎಂದಿಗೂ ಜಗದ್ಗುರುಗಳಾಗಲಾರರು. ಜಗದ್ಗುರುವಿನ ಸ್ವಾಭಾವಿಕವಾದ ೨೫ ಪ್ರಕಾಶಗಳಲ್ಲಿನ ಸುಮಾರು ೨೦ ಪ್ರಾಮಾಣಗಳಿಗೆ ವ್ಯತಿರಿಕ್ತವಾಗಿರುವರು. ಇದರಿಂದ ಇವರು ಜಗದ್ಗುರುವಿನ ಪದವಿಗೆ ಅರ್ಹರಲ್ಲವು.

---

## ವಾಮದೇವಮುಖದಿಂದ ಜನಿಸಿದ ಉಜ್ಜಯಿನಿ ಸಿಂಹಾಸನದ ಮರುಳಾರಾಧ್ಯರು

ಈ ಸಿಂಹಾಸನದವರು ಕೂಡ ರೇಣುಕಾರಾಧ್ಯರಂತೆಯೇ "ಶಿವಾಯ ನಮಃ" ಎಂಬ ಪಂಚಾಕ್ಷರಿಮಂತ್ರಪಾಠಕರೇ ವಿನಃ "ವೈಷ್ಣವಾಯನಮಃ" ಎಂದು ಹೇಳುವದು ಧರ್ಮಕ್ಕೆ ವಿರೋಧವೆಂದು ಸ್ವರೂಪದಭೇದವೆಂಬ ಪಾಪಕ್ಕೆ ಗುರಿಯಾಗಿರುವರು. ಇವರು ಸಹ ಶಿಲಾಲಿಂಗವನ್ನು ಕಟ್ಟಿಕೊಂಡು ಗೋವಿನ ಮಲದ ಭಸ್ಮವನ್ನು ಹಣೆಗೆ ಲೇಪಿಸುವರು. ಉಳಿದ ಪ್ರಪಂಚದ ಎಲ್ಲಾ ಧರ್ಮಗಳನ್ನೂ ಮತ್ತು ಆಯಾಯ ಮತಸ್ಥಾಪಕರನ್ನೂ ತುಚ್ಛೀಕರಿಸುವರು. ಲಿಂಗಾಯಿತ ಪುರಾತನರನ್ನು ವಿರೋಧದಿಂದ ಕಾಣುವರು. ಇವರಲ್ಲಿ ಅಸೂಯೆ ವಿನಹ ಮತ್ತೆ ಬೇರೆ ಧರ್ಮವಿಲ್ಲವೆಂದು ವಿದಿತವಾಗುತ್ತದೆ. ಇಂಥಾ ನಾಮ

ಧಾರಿಗಳು ಎಂದಿಗೂ ಜಗದ್ಗುರುಗಳಾಗಲು ಅರ್ಹರಲ್ಲೆಂದು ೨೦ ಪ್ರಮಾಣಗಳು ಸಾಧಿಸುತ್ತವೆ.

---

## ಪರ್ವತದ ಅಘೋರಮುಖದಿಂದ ಜನಿಸಿರುವ ಪಂಡಿತಾರಾಧ್ಯರು

ಈ ಸಿಂಹಾಸನದವರೂ ಕೂಡ ಹಿಂದಿನ ಎರಡು ಸಿಂಹಾಸನದವರಂತೆಯೇ ನಂಬಿಕೆಯನ್ನು ಮತ್ತು ಆಚರಣೆಯನ್ನು ಇಟ್ಟುಕೊಂಡಿರುವರು. ಇಂಥಾ ಭೇದಭಾವಗಳುಳ್ಳ ಗುರುಗಳು ಜಗದ್ಗುರುಗಳೆನಿಸಿ ಎಲ್ಲಾ ವರ್ಣಗಳ ಪರಿಪಾಲನೆಯನ್ನು ಮಾಡಬಲ್ಲರೆ ? ಮತ್ತು ಜ್ಞಾನಿಗಳು ಇವರ ಈಡಬಡ್ಡಾಳಿಕೆಗಳನ್ನು ನೋಡಿ ಧರ್ಮಾಭಿಮಾನದಿಂದ ಇವರಲ್ಲಿರುವ ದುರಭಿಮಾನಗಳನ್ನು ತೆಗೆದು ಹಾಕುವ ಹಾಗೆ ಮಾಡುವ ಕಾಲವು ಈಗ ಸಮಿಾಪಿಸಿರುವುದು. ಈ ನಾಮಧಾರಿಗಳೂ ಕೂಡ ಜಗದ್ಗುರುಗಳಾಗುವುದು ಸ್ವಭಾವಕ್ಕೇನೆ ಅಸಮ್ಮತವಾಗಿರುವುದು ; ಆದುದರಿಂದ ಇವರು ಆ ಪದವಿಗೆ ಅರ್ಹರಲ್ಲವು.

---

## ಕೊಲ್ಲಿಪಾಕಿಸಿಂಹಾಸನಾರೂಢರಾದ ತತ್ಪುರುಷಮುಖದಿಂದ ಜನಿಸಿದ ಏಕೋರಾಮೋರಾಧ್ಯರು

ಹಿಂದೆ ಸೂಚಿಸಲ್ಪಟ್ಟವರ ಪ್ರಕಾರವೇ ಇವರೂ ತಮ್ಮ ಮತವನ್ನು ಹೊರಪಡಿಸುವರು ಮತ್ತು ಇವರುಗಳ ಬೋಧನೆಗಳಿಂದ ಯಾರೂ ಇದುವರಿವಿಗೂ ದೈವಸಾಮಿಾಪ್ಯವನ್ನು ಹೊಂದಿದವರೇ ಇಲ್ಲವು. ಪರಮಾತ್ಮನನ್ನು ಬಿಟ್ಟು ಶಿಲಾಮೂರ್ತಿಗಳನ್ನು ಹಿಡಿಯುವ ಇವರುಗಳು ನೀರನ್ನು ಬಿಟ್ಟು ಬಿಸಿಲ್ಗುದುರೆಯನ್ನು ಹಿಂಬಾಲಿಸುವವರಾಗಿರುವರು. ಇಂಥಾ ಸನ್ಮಾರ್ಗತ್ಯಾಗಿಗಳು ಎಂದಿಗೂ ಜಗದ್ಗುರುಗಳಾಗಲಾರರು.

---

## ಹಿಮಾಚಲಪರ್ವತದಲ್ಲಿ ಈಶಾನ್ಯಮುಖದಿಂದ ಹುಟ್ಟಿದ ವಿಶ್ವಾರಾಧ್ಯರು

ಇವರು ಊರ್ಧ್ವಮುಖದವರಾದುದರಿಂದ ಇವರಲ್ಲಿಯಾದರೂ ಜಗತ್ಪರಿಪಾಲನ ಧರ್ಮದ ಗಂಧವಾದರೂ ಇರಬಹುದಾಗಿತ್ತು. ಆದರೆ ಅದು

ಆರಿಹೋಗಿ ಇವರುಕೂಡ ಮೂರ್ತಿಪೂಜಕರಾಗಿ ಪರಿಣಮಿಸಿ ಪಂಚಸಿಂಹಾಸನಾಧಿಪತಿಗಳಲ್ಲಿ ಇವರೂ ಒಬ್ಬರಾಗಿರುವರು. ಮತ್ತು ಇವರೂಕೂಡ ಎಲ್ಲಾ ವಿಷಯದಲ್ಲಿಯೂ ಅವರ ಅಭಿಪ್ರಾಯವನ್ನೇ ಸೂಚಿಸುವವರಾದಕಾರಣ ಇವರು ಜಗದ್ಗುರುಗಳಾಗಲು ಅರ್ಹರಲ್ಲವು. ಆದರೆ "ಬ್ರಹ್ಮಕೃತ ಶಿವಸಹಸ್ರನಾಮಸು | ಮೃತ್ಯುಂಜಯಸೂಕ್ಷ್ಮತನು ಜಗದ್ವ್ಯಾಪಿ ಜಗದ್ಗುರು" ಎಂಬಂತೆ ಸರ್ವ ವ್ಯಾಪಿಯಾದ ಮಹಾನುಭಾವನು ಜಗದ್ಗುರುವೆ ವಿನಹ ದುರಭಿಮಾನಿಗಳು ಜಗದ್ಗುರುಗಳಾಗಲಾರರು.

---

## ಸಿಕ್‌ಮತಸ್ಥಾಪಕರಾದ ಬಾಬಾ ನಾನಕ್ ಷಹ ಇವರ ಸಿಂಹಾಸನಾಧಿಪತಿಗಳು.

ಬಾಬ ನಾನಕ್ ಷಹ ಎಂಬ ಈ ಮಹನೀಯರು ಸುಮಾರು ಆರುನೂರು ವರ್ಷಗಳ ಹಿಂದೆ ಇದ್ದರೆಂದು ತಿಳಿದುಬಂದಿರುತ್ತದೆ. ಇವರು ಹಜರತ್ ಮಹಮ್ಮದ್ ಪೈಗಂಬರರ ಅನುಯಾಯಿಗೆಳಾಗಿ ಕಾರ್ಯಗೆರುಗಳಾಗಿ ಧರ್ಮಸ್ಥಾಪನಕ್ಕೆ ಹಿಂದೂಸ್ಥಾನದಲ್ಲಿ ಅವತಾರಮಾಡಿದರು. ಈ ಮಹನೀಯರು ಓಂಕಾರೋಕ್ತವಾದ ಕುರಾನಿನ ಕಟ್ಟಳೆಗಳಿಗನುಸಾರವಾಗಿ ನಡೆದು ಈ ಮತವನ್ನೇ ಅವರು ಬೋಧಿಸಿದರು. ಈ ವಿಷಯವು ಅವರ ಗ್ರಂಥಗಳಿಂದ ಬಹಳ ಸ್ಪಷ್ಟವಾಗಿ ತಿಳಿದುಬರುತ್ತದೆ. ಒಂದಾನೊಂದು ಕಾಲದಲ್ಲಿ ಇವರ ಶಿಷ್ಯಮಂಡಲಿಗೂ ಮತ್ತು ಮುಸಲ್ಮಾನರಿಗೂ ಒಂದುತರಹೆಯ ವಿರೋಧವುಂಟಾಗಿ ಕಾಲಕ್ರಮೇಣ ಬೇರೆಯಾಗುತ್ತಾ ಬಂದು ಸಿಕ್‌ಮತದವರೆಂದು ಕರೆಯಲ್ಪಡುತ್ತಾ ಇದ್ದಾರೆ. ಇವರು ಮಾರ್ಗತಪ್ಪಿರುವುದಲ್ಲದೆ ಬೇರೆಯವರನ್ನು ಮಾರ್ಗತಪ್ಪಿಸಲು ಏಸುಕ್ರಿಸ್ತರಂತೆ ಇತರರನ್ನು ತಮ್ಮ ಧರ್ಮಗಳಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಿದರು. ಇವರ ಗ್ರಂಥವು ಕೆಲವು ಜ್ಞಾನಮಾರ್ಗವಿಧಾನಗಳನ್ನೊಳಗೊಂಡಿದೆಯೆ ಹೊರತು ಹೆಚ್ಚು ವಿಷಯಗಳನ್ನು ಬೋಧಿಸುವುದಿಲ್ಲ. ಇವರು ಇತರ ಧರ್ಮಗಳನ್ನು ಮತ್ತು ಅವತಾರಿಗಳನ್ನು ತಿರಸ್ಕರಿಸುವರು. ಮತ್ತು ಈ ಸಿಂಹಾಸನಾಧಿಪತಿಗಳು ತಮಗೆ ತಾವೇ ಜಗದ್ಗುರುಗಳೆಂದು ಹೆಸರಿಟ್ಟುಕೊಂಡಿದ್ದಾರೆ. ಈ ಜನಗಳು ತಾವು ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಆದರೆ ಇವರಲ್ಲಿ ನಾಲ್ಕು ವರ್ಣದವರೂ ಕೂಡ ಇರುತ್ತಾರೆ. ಪೂರ್ವದಲ್ಲಿ ಇವರು

ಒಂದು ತರಹೆಯ ಸಾಧುಮಾರ್ಗವನ್ನನುಸರಿಸಿದ್ದರು. ಈಗ ಬದಲಾಯಿಸಿ ಕೊಂಡಿರುತ್ತಾರೆ. ಪ್ರಪಂಚದ ಅವತಾರಿಗಳನ್ನು ಮತ್ತು ದೇವೋಕ್ತ ಗ್ರಂಥ ಗಳನ್ನು ನಂಬದವರು ಎಂದಿಗೂ ಜಗದ್ಗುರುಗಳಾಗಲಾರರು.

---

## ಶೃಂಗೇರಿ ಸಿಂಹಾಸನಸ್ಥಾಪಕರಾದ ಶ್ರೀ ಶಂಕರಾಚಾರ್ಯರು ಮತ್ತು ಈ ಸಿಂಹಾಸನಾರೂಢರು.

ಶ್ರೀ ಶಂಕರಾಚಾರ್ಯರು ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ಅದ್ವೈತಮತವನ್ನು ಬೋಧಿಸಿದರು. ಇವರ ತತ್ವವು ವಿಗ್ರಹಪೂಜೆಯನ್ನು ಖಂಡನೆ ಮಾಡುವುದಾಗಿದ್ದಿತು. ಈಗಲಾದರೋ ಇವರ ಅನುಯಾಯಿಗಳು ವಿಗ್ರಹಾರಾಧನೆಗಳನ್ನು ಅವಿಚ್ಛಿನ್ನವಾಗಿ ನೆರವೇರಿಸುತ್ತಾರೆ. ಇವರ ಬೋಧನೆ ಗಳು ಅದ್ವೈತಬ್ರಾಹ್ಮಣರಿಗೆ ಮಾತ್ರ ಅರ್ಹವಾಗಿವೆ. ಇವರು ವೇದ ಒಂದನ್ನು ಮಾತ್ರ ದೇವೋಕ್ತಗ್ರಂಥವೆಂದು ನಂಬುತ್ತಾರೆ. ಇಂಜೀಲ್, ಬೈಬಲ್, ಖುರಾ ಮುಂತಾದ ಓಂಕಾರೋಕ್ತ ಗ್ರಂಥಗಳನ್ನು ಇವರು ಎಂದಿಗೂ ನಂಬುವುದಿಲ್ಲಾ. ಪ್ರಪಂಚದ ಇತರ ಮತಸ್ಥಾಪಕರನ್ನು ಇವರು ಭಗವತ್ಪ್ರಸನ್ನರೆಂದು ನಂಬುವುದಿಲ್ಲ. ಇವರ ತತ್ವಗಳು ಬೇರೆ ಪಂಗಡದವರ ಕಿವಿಯಲ್ಲಿ ಬೀಳುವುದು ಬಹು ಪಾಪವೆಂದು ತಿಳಿಯುತ್ತಾರೆ. ಬಾಹ್ಯದಲ್ಲಿ ಇವರು ಜನಿವಾರವೆಂಬ ಒಂದು ಧಾರವನ್ನು ಧರಿಸಿ, ಪವಿತ್ರವಾದ ಹಣೆಗೆ ಭಸಿತ, ಗಂಧ ಮುಂತಾದ ಲೇಪನಗಳನ್ನು ಮಾಡಿಕೊಳ್ಳುವರು. ಇಂಥಾ ದುರಭಿಮಾನಾಸ್ಪದವಾದ ನಡವಳಿಕೆಯನ್ನು ಅನುಸರಿಸುವವರು ಎಂದಿಗೂ ಜಗದ್ಗುರುಗಳಾಗಲಾರರು. ಸ್ವಭಾವಸಂಯುಕ್ತವಾದ ಜಗದ್ಗುರುವಿನ ನಿಜತ್ವ ವನ್ನು ಸಾಧಿಸುವ ಸುಮಾರು ಇಪ್ಪತ್ತು ಪ್ರಮಾಣಗಳಿಗೆ ಇವರ ನಡವಳಿಕೆಯು ವಿರೋಧವಾಗಿರುವುದರಿಂದ ಇವರು ಹೇಗೆತಾನೇ ಜಗದ್ಗುರುಗಳಾಗ ಬಲ್ಲರು ?

---

## ಮಲ್‌ಖೇಡದ ಸಿಂಹಾಸನಸ್ಥಾಪಕರಾದ ಮಧ್ವಾಚಾರ್ಯರು ಮತ್ತು ಇವರ ಸಿಂಹಾಸನಾರೂಢರು.

ಶ್ರೀಮಧ್ವಾಚಾರ್ಯರು ವೈಷ್ಣವಬ್ರಾಹ್ಮಣರಲ್ಲಿ ಖ್ಯಾತಿಯನ್ನುಹೊಂದಿ ರುವ ದ್ವೈತಮತವನ್ನು ಬೋಧಿಸಿದರು. ಇವರ ಬೋಧನೆಯು ಅದ್ವೈತ

ಮತಕ್ಕೆ ವಿರೋಧವಾಗಿರುವದರಿಂದ ಎರಡು ಪಂಗಡದವರಲ್ಲಿ ವಿರೋಧಗಳು ಹುಟ್ಟಿ ಮತಾಸೂಯೆಗೆ ಕಾರಣವಾಗಿ ದುಃಖಪ್ರದವಾಗಿರುವುದು. ಇವರೂ ಸಹ ಮೂರ್ತಿ ಪೂಜಕರು. ಇವರು ಮುದ್ರೆ ಮತ್ತು ತಿಲಕ ಮುಂತಾದ ದುರಭಿಮಾನಾಸ್ಪದವಾದ ಚಿನ್ಹೆಗಳನ್ನು ಧರಿಸುವರು. ವೇದವು ಮಾತ್ರ ಇವರ ಮೋಕ್ಷಕ್ಕೆ ತಕ್ಕ ಸನ್ಮಾರ್ಗವನ್ನು ಬೋಧಿಸುವ ದೈವೀಕ ಗ್ರಂಥವಾಗಿದೆ. ಇತರ ಮತಬೋಧಕರನ್ನು ಮತ್ತು ಅವರ ಸುಬೋಧಕಗ್ರಂಥಗಳನ್ನು ಇವರು ಮರ್ಯಾದಿಸುವುದಿಲ್ಲಾ. ಇವರೂಕೂಡ ಜನಿವಾರವನ್ನು ಧರಿಸಿ ಇತರರಲ್ಲಿ ಅಸೂಯೆಯನ್ನು ಹೆಚ್ಚಿಲು ಕಾರಣರಾಗಿರುತ್ತಾರೆ. ಮತ್ತು ಇವರು ಜಗದ್ಗುರುಗಳಾಗಲು ಸ್ವಾಭಾವಿಕವಾದ ಈ ಪ್ರಮಾಣಗಳಿಗೆ ಅಸಮ್ಮತವಾಗಿರುತ್ತದೆ. ಆದುದರಿಂದ ಇವರು ಜಗದ್ಗುರುಗಳೆನಿಸಲಾರರು.

---

## ಮೈಸೂರಲ್ಲಿರುವ ಶ್ರೀ ರಾಮಾನುಜಾಚಾರ್ಯರ ಸಿಂಹಾಸನದವರು.

ಶ್ರೀರಾಮಾನುಜಾಚಾರ್ಯರು ಬ್ರಾಹ್ಮಣರಲ್ಲಿ ಶ್ರೀ ವೈಷ್ಣವರೆಂದು ಪ್ರಸಿದ್ಧವಾಗಿರುವ ಪಂಗಡಕ್ಕೆ ಮೂಲಗುರುಗಳು. ಇವರು ವಿಶಿಷ್ಟಾದ್ವೈತಮತವನ್ನು ಬೋಧಿಸಿದರು. ಇದರಿಂದ ಇವರ ಬೋಧನೆಗಳು ಉಳಿದ ಎರಡು ಪಂಗಡದವರಿಗೆ ವಿರೋಧವಾದವು ಮತ್ತು ದ್ವೇಷಾಸೂಯೆಗೆ ಕಾರಣಗಳಾದವು. ಇವರೂ ಸಹ ಜನಿವಾರವನ್ನು ಧರಿಸುತ್ತಾರೆ. ಮತ್ತು ಲಲಾಟಕ್ಕೆ ಬಿಳಿಯ ಮತ್ತು ಕೆಂಪು ನಾಮಗಳನ್ನು ಧರಿಸುತ್ತಾರೆ. ಇವರು ಶ್ರೀ ವಿಷ್ಣುವೇ ಹೆಚ್ಚೆಂದು ದೈವಸ್ವರೂಪ ಭೇದವೆಂಬ ದೋಷಕ್ಕೆ ಕಾರಣರಾಗಿರುವರು. ಹೈದರಾಲಿಯ ಕಾಲದಲ್ಲಿ ಈ ಸಿಂಹಾಸನಾಸ್ಥಾನದಲ್ಲಿ ತಿಮ್ಮಪ್ಪದಾಸನೆಂಬ ಒಬ್ಬ ಕವಿಯಿದ್ದನು. ಆತನು "ಕೈವಲ್ಯ" ವೆಂಬ ತನ್ನ ಗ್ರಂಥದಲ್ಲಿ ಶ್ರೀ ವಿಷ್ಣುವಿಗಿಂತಲೂ ದೇವರಿಲ್ಲವೆಂದೂ ಮತ್ತು ಇದರ ಸ್ಮರಣೆಯಿಂದಲೇ ಮುಕ್ತಿಯೆಂತಲೂ ಬರೆದು, ಶಿವಸ್ವರೂಪವನ್ನು ಧಿಕ್ಕರಿಸಿರುತ್ತಾನೆ. ವೇದವು ಮಾತ್ರವೇ ಇವರಿಗೆ ಸುಬೋಧನ ಗ್ರಂಥವು. ಆದುದರಿಂದ ಇಂಥಾ ಪಕ್ಷಪಾತಿಗಳು ಜಗದ್ಗುರುಗಳಾಗಲು ಎಂದಿಗೆ ತಾನೆ ಅರ್ಹರು?

---

## ಚಿತ್ರಕಲ್‌ದುರ್ಗದ ಲಿಂಗಾಯಿತ ಶೂನ್ಯಸಿಂಹಾಸನಾಧ್ಯಕ್ಷರು.

ಈ ಸಿಂಹಾಸನವು ಶೂನ್ಯಸಿಂಹಾಸನವೆಂದೂ ಮತ್ತು ವಿರಕ್ತಸಿಂಹಾಸನವೆಂದೂ ಕರೆಯಲ್ಪಡುತ್ತದೆ. ಇದು ಶ್ರೀಕಲ್ಯಾಣಬಸವೇಶ್ವರರಿಂದ ಸ್ಥಾಪಿಸಲ್ಪಟ್ಟಿತು. ಈ ಸಿಂಹಾಸನದನರಿಗೆ ಈ ಯುಗದಲ್ಲಿ ಅಲ್ಲಮಾ ಪ್ರಭುವೆಂಬ ಅನಾದಿ ಜಂಗಮನೆ ಮೂಲಕಾರಣವು. ಹಿಂದೆ ಎಲ್ಲರೂ ಈ ಸಿಂಹಾಸನಕ್ಕೆ ಅಧೀನರಾದ ಚರಮೂರ್ತಿಗಳೆಂದು ಕರೆದುಕೊಳ್ಳುತ್ತಿದ್ದರು. ಯಾವ ದೋಕಾರಣದಿಂದ ಶೂನ್ಯಸಿಂಹಾಸನವು ಚಿತ್ರಕಲ್‌ದುರ್ಗದಲ್ಲಿ ಸ್ಥಾಪಿತವಾಗಿ ಅದಕ್ಕೆ "ಮುರುಘ" ಎಂಬ ಅನ್ವರ್ಥನಾಮ ಒಂದು ವದಗಿತು.

ಶೂನ್ಯಸಿಂಹಾಸನ ಸ್ಥಾಪಕರಾದ ಶ್ರೀ ಕಲ್ಯಾಣಬಸವೇಶ್ವರರೂ ಮತ್ತು ಶ್ರೀಚನ್ನಬಸವೇಶ್ವರರೂ ಯಾವಾಗಲೂ ದುರಭಿಮಾನರಹಿತವಾದ ಬೋಧನೆಗಳನ್ನೇ ಬೋಧಿಸಿದರು. "ಸಪ್ತಧಾತು ಸಮುಂಪಿಂಡಂ | ಸಮುಯೋನಿ ಸವೋದ್ಭವಂ | ಆತ್ಮಾಜೀವಸವೋತ್ಪನ್ನಃ | ವರ್ಣಾನಾಂಕಿಂಪ್ರಯೋಜನಂ ||" ಎಂಬ ಶ್ರೀಬಸವೇಶ್ವರರ ವಾಕ್ಯದಿಂದ ಈಗಿನವರಹಾಗೆ ಕುಲಭೇದಗಳೆಂಬ ದುರಭಿಮಾನಗಳಿಗೆ ಕಾರಣರಾಗಿರಲಿಲ್ಲವೆಂದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮತ್ತು ಈ ಮಹಾತ್ಮರು "ಕುಲಕಧಿಕ ಬ್ರಾಹ್ಮಣರ ಕುಲದಲ್ಲಿ ಅರುಂಧತಿಯ | ಕುಲವಲ್ಲವೆಂದು ಕುಲಗೆಳದರೆ ಮುನ್ನ | ಕಶ್ಯಪನು ಕೌಂಡಿನ್ಯದೂರ್ವಾಸ ವಾಶಿಷ್ಠ | ರಾದಿ ಮುನಿಗಳವಳಗೆ ಲೇಸುಕುಲ ಉಂಟೆ||" ಎಂದು ಎಂಥಾ ಸ್ಪಷ್ಟವಾದರೀತಿಯಲ್ಲಿ ಉಚ್ಚರಿಸಿರುತ್ತಾರೆಂಬದನ್ನು ಸರ್ವರು ಅವಗಾಹನೆಗೆ ತಂದುಕೊಳ್ಳಬಹುದು. ಈ ಮಾಹಾತ್ಮರಿಬ್ಬರೂ ಕುಲಭೇದಗಳನ್ನೆಣಿಸದೆ ನೂರೊಂದು ಕುಲಗೆಳನ್ನು ತಮ್ಮಲ್ಲಿ ಸಮವೇಶವನ್ನು ಹೊಂದಿಸಿದರು. ಭಾವಲಿಂಗ, ಪ್ರಾಣಲಿಂಗ ಮತ್ತು ಇಷ್ಟಲಿಂಗಗಳೆಂಬ ಲಿಂಗತ್ರಯಗಳ ವಿಚಾರವನ್ನು ಮತ್ತು ತತ್ವಮಸಿ, ಎಂಬ ವೇದವಾಕ್ಯದ ಮರ್ಮವನ್ನು ಜನರಿಗೆ ತಿಳಿಸಿ ಅವರಲ್ಲಿ ಜ್ಞಾನವನ್ನು ಪ್ರಸರಿಸಿ ನಡವಳಿಕೆಗೆ ಬೇಕಾದ ಷಟಸ್ಥಳ ಮಾರ್ಗಗಳನ್ನು ತಿಳಿಸಿ, ಜನರು ದೈವಕುಲಭೇದವೆಂಬ ದೋಷಕ್ಕೆ ಒಳಗಾಗದಹಾಗೆ ಅನ್ಯದೇವತಾರ್ಚನೆಗಳನ್ನು ಮತ್ತು ಶಿಲಾಮಯ ಲಿಂಗಪೂಜೆಯನ್ನು ಬಿಡಿಸಿ, ಶೂನ್ಯಸ್ಥ

ಲದ ಪೂಜೆಯನ್ನು ನೆಲೆಗೊಳಿಸಿ ಜನರನ್ನು ಪಾಪವೆಂಬ ಸಮುದ್ರದಿಂದ ಪಾಟುಸಿ ಮುಕ್ತಿಯನ್ನು ಹೊಂದಿಸಿದರು. ಇವರ ಬೋಧನೆಗಳಿಗೆ ಸಾಕ್ಷಿಯಾಗಿ ಚನ್ನಬಸವ ಪುರಾಣದಲ್ಲಿ ಶ್ರೀಚನ್ನಬಸವೇಶ್ವರರು " ಜಾತಿಸೂತಕ ಜನನಸೂತಕಂಗಳು ಮಹಾ, ಪ್ರೇತಸೂತಕ ನಿತ್ಯಸೂತಕಮುಚ್ಛಿಷ್ಟ | ಸೂತಕವಿವೇಸಂಚಸೂತಕ | ಸ್ಥಾವರಾಧ್ಯನ್ಯಲಿಂಗದ ಭಜನೆಯ || ಓತನ್ಯತೀರ್ಥ ಮನ್ಯಕ್ಷೇತ್ರಯಾತ್ರೆಗಳಿಗಾತುರದೆಪೋವುದೀಗನ್ಯದೇವಾರ್ಚನೆವಿ | ನೀತಭವಿಯಾದವರ ತನ್ನ ತಾಯಿತಂದೆ ಬಂಧುಗಳೆನಲು ಭವಿಸಂಗವು || ". ಎಂಬದಾಗಿ ಸಾರಿ ಹೇಳಿರುತ್ತಾರೆ. ಆಗ್ಗೆ ಇವರ ಅನುಯಾಯಿಗಳು ಲಕ್ಷದ ತೊಂಭತ್ತಾರು ಸಾವಿರ ಜನರಿದ್ದರು. ಅವರೆಲ್ಲರು ಭಿನ್ನಭಿನ್ನ ಜಾತಿಗಳಿಂದ ಬಂದವರಾದರೂ ನಂಬಿಕೆಯಲ್ಲಿಯೂ ನಡವಳಿಕೆಯಲ್ಲಿಯೂ ಬಳಕೆಯನ್ನು ಹೊಂದಿ ಅಸೂಯರೂಪವಾದ, ಭೇದಗಳಿಗೆ ಒಳಪಟ್ಟರಲಿಲ್ಲ. ಅವರ ನಂತರದ ಅನುಯಾಯಿಗಳು ಆ ಶರಣರ ಬೋಧನೆಗಳಿಗೆ ವ್ಯತಿರಿಕ್ತವಾದ ಸಮಸ್ತ ವಿಷಯಗಳನ್ನೂ ಆಚಾರದಲ್ಲಿತಂದರು. ಈ ಸಿಂಹಾಸನವನ್ನು ಸ್ಥಾಪಿಸಿದ ಮಹಾತ್ಮರು ಜಗದ್ಗುರುವಿನ ರಹಸ್ಯವನ್ನು ಬಲ್ಲವರಾದ್ದರಿಂದ ತಾವು ಜಗದ್ಗುರುಗಳೆಂದು ಹೇಳಿಕೊಳ್ಳಲಿಲ್ಲ. ಆದರೆ ಕಾಲಾನಂತರ ಈ ಸಿಂಹಾಸನಾಧಿಪತಿಗಳು ಅಜ್ಞಾನದಿಂದ ಜಗದ್ಗುರುವನ್ನು ತಿಳಿಯದೆ ತಾವೇ ಜಗದ್ಗುರುಗಳೆಂದು ಹೇಳಿಕೊಳ್ಳುತ್ತಾ ಬಂದಿರುತ್ತಾರೆ. ಮತ್ತು ಇವರು ಶ್ರೀವಿಷ್ಣುವಿನ ಸ್ವರೂಪದಧಿಕ್ಕಾರಕ್ಕೂ ಕಾರಣರಾಗಿರುತ್ತಾರೆ. ಆದರೆ ಹಿಂದಿನ ಶರಣರು ಇಂಥಾ ತಪ್ಪಿಗೊಳಗಾಗಿರಲಿಲ್ಲ. ಆ ಮಹಾತ್ಮರ ಬೋಧನೆಗಳಿಗೆ ವ್ಯತಿರಿಕ್ತವಾಗಿ ಶಿಲಾಲಿಂಗವನ್ನು ಕೊರಳಿನಲ್ಲಿ ಧರಿಸಿರುತ್ತಾರೆ. ಉತ್ತಮವಾದ ಲಲಾಟಕ್ಕೆ ಸಗಣಿಯ ಭಸ್ಮವನ್ನು ಹಚ್ಚುತ್ತಾರೆ. ಇವರು ಮುಖ್ಯವಾಗಿ ಕರ್ಮಖಾಂಡವನ್ನು ತ್ಯಜಿಸಿರುತ್ತಾರೆ. ಪ್ರಪಂಚದ ಇತರ ಅವತಾರಿಗಳನ್ನು ಎಂದರೆ ಶ್ರೀ ರಾಮ, ಶ್ರೀ ಕೃಷ್ಣ, ಏಸುಕ್ರಿಸ್ತ, ಬೌದ್ಧ, ಹಜರತ್‌ಮಹಮದ್ ಪೈಗಂಬರರೆ ಮುಂತಾದವರನ್ನು ಇವರು ಸರ್ವಥಾ ನಂಬುವವರಾಗಿಲ್ಲ. ಇವರಿಗೆ ಯಾವ ದೇವೋಕ್ತಗ್ರಂಥವು ಯಿಲ್ಲದೆ, ಕೆಲವು ಪುರಾತನರ ಬೋಧನೆಗಳನ್ನು ಮಾತ್ರ ಅನುಸರಿಸುತ್ತಾರೆ. ಇವರ ಜ್ಞಾನಮಾರ್ಗವು ವಿಶಿಷ್ಟಾದ್ವೈತವಾಗಿದೆ. ಆದಾಗ್ಯೂ ಶ್ರೀವೈಷ್ಣವರಿಗೂ ಇವರಿಗೂ ದ್ವೇಷಾಸೂಯೆಗಳಿವೆ. ಇಂಥಾ

ಮೂಲವಿಲ್ಲದ ಮಾರ್ಗವನ್ನು ಹಿಡಿದು ದುರಭಿಮಾನಭರಿತರಾದವರು ಹೇಗೆ ತಾನೇ ಜಗದ್ಗುರುಗಳಾಗಬಲ್ಲರು !

## ಗದಗಿನಲ್ಲಿರುವ ಜೀವಾಳಸಮಯದ ತೋಟದ ಸ್ವಾಮಿಯ ಸಿಂಹಾಸನಾರೂಢರು.

ಇವರ ಆಚಾರವೂಕೂಡ ಚಿತ್ರದುರ್ಗದ ಶೂನ್ಯಸಿಂಹಾಸದವರ ಪ್ರಚಾರವೇ ಇರುವುದು. ಇವರೂ ಸಹ ಪರಮಾತ್ಮನ ಸ್ವರೂಪಭೇದಕ್ಕೆ ಕಾರಣರಾಗಿ " ಶಿವಾಯನಮಃ " ಎಂಬ ಮಂತ್ರವುಮಾತ್ರ ಮೋಕ್ಷಸಾಧನವೆಂದು ತಿಳಿದು ಒಂದು ಸ್ವರೂಪದ ಸ್ಮರಣೆಯನ್ನುಮಾತ್ರ ಮಾಡುವವರಾಗಿರುತ್ತಾರೆ. ಇವರಾದರೊ ಸಗಣಿಯನ್ನು ಸುಟ್ಟ ಭಸ್ಮವನ್ನು ಹಣೆಗೆ ಲೇಪಮಾಡಿಕೊಳ್ಳುತ್ತಾರೆ. ಶಿಲಾಮಯಲಿಂಗವನ್ನು ಕೊರಳಿನಲ್ಲಿ ಕಟ್ಟಿಕೊಂಡಿರುತ್ತಾರೆ. ಹೀಗೆ ಶಿಲೆಯನ್ನು ಧರಿಸದವರು ಭವಿಗಳೆಂದು ಹೇಳಿ ಜಗತ್ತಿನಲ್ಲಿ ಒಂದು ವಿಧವಾದ ದುಃಖಕ್ಕೆ ಕಾರಣರಾಗಿರುತ್ತಾರೆ. ಅವರು " ನಲಿಂಗಧಾರಿಣಾಪುಂಸಾಂ | ಸ್ವಪ್ನೋಮೋಕ್ಷೋನಜಯತೇಲಿಂಗಂವಿನಾಸಾಯುಜ್ಯಂ | ಸತ್ಯಸತ್ಯಂವದಾವ್ಯಹಂ || " ಎಂದರೆ ಲಿಂಗಧರಿಸದೆ ಇರುವನನು ಸ್ವಪ್ನದಲ್ಲಿಯಾದರೂ ಮೋಕ್ಷವನ್ನು ಹೊಂದುವುದಿಲ್ಲ ಮತ್ತು ಇತರರು ಪರಮಾತ್ಮನ ಸಾಯುಜ್ಯವನ್ನು ಹೊಂದಲಾರರು ಎಂದು ಮೇಲಿನ ಶ್ಲೋಕದ ಅರ್ಥವನ್ನು ಮನಸ್ಸಿಗೆ ಬಂದಹಾಗೆ ಮಾಡಿ; ಶಿಲಾಮಯಲಿಂಗವನ್ನು ಧರಿಸದವರು ದೈವಸಾಯುಜ್ಯವನ್ನು ಹೊಂದಲಾರರೆಂದು ತಿಳಿದಿರುತ್ತಾರೆ. ಇದು ಇತರ ಜನಗಳ ಮತಕ್ಕೆ ವಿರೋಧವಾಗಿರುವುದಲ್ಲದೆ ಅವರಲ್ಲಿ ಅಸೂಯೆಯನ್ನೂ ದುಃಖವನ್ನೂ ನೆಲಗೊಳಿಸಿರುವರು. ಹೀಗೆ ದುಃಖಕ್ಕೆ ಮೂಲರಾಗಿರುವವರು ಜಗದ್ಗುರುಗಳು ಹೇಗೆ ತಾನೆ ಆಗುವರು. ಇವರಿಗಾದರೂ ಶೂನ್ಯಸಿಂಹಾಸನವೇ ಮೂಲಪೀಠವು. ಇವರೆಲ್ಲರು ಒಂದು ಕಾಲದಲ್ಲಿ ಅದಕ್ಕೆ ಚರಮೂರ್ತಿಗಳಾಗಿ ಪರಿಣಮಿಸಿದ್ದರು. ಆ ಸಿಂಹಾಸನಾಧಿಪತಿಗಳಿಗೂ ಮತ್ತು ಇತರ ಚರಮೂರ್ತಿಗಳಿಗೂ ಯಾವುದೋ ಒಂದುಕಾರಣದಿಂದ ವಿರೋಧಸಂಭವಿಸಿ ಚರಮೂರ್ತಿಗಳಲ್ಲಿ ಕೆಲವರು ಅಲ್ಲಿಂದ ಹೊರಟು ಬಳ್ಳಾರಿ, ನಗರ ಮುಂತಾದ ಪ್ರಾಂತ್ಯಗಳಕಡೆ ಹೋದರು. ಇವರಲ್ಲಿ ಒಬ್ಬರು ಜೀವಾಳಸಮಯದೆನ್ನರೆಂದು ಹೆಸರಿಟ್ಟುಕೊಂಡು ಹೊಂಬಳ

ವೆಂಬ ಗ್ರಾಮದಲ್ಲಿ ಮಠವನ್ನು ಕಟ್ಟಿಸಿಕೊಂಡು, ಆ ಮಠದಲ್ಲಿದ್ದ ಅರ್ಧನಾರೀ ಶ್ವರ ತೋಟದಾರ್ಯ ತೋಟದಸ್ವಾಮಿಯೆಂಬ ಅಂಕಿತವನ್ನು ಹೊಂದಿ ಸಿಂಹಾಸನವನ್ನು ಸ್ಥಾಪಿಸಿದರು. ಇವರಿಗೆ ವಿಶೇಷವಾಗಿ ಯಾವ ದೇವೋಕ್ತ ಗ್ರಂಥವೂ ಇಲ್ಲ. ಇತರ ದೇವೋಕ್ತಗ್ರಂಥಗಳನ್ನು ಮತ್ತು ಅವತಾರಿಗಳನ್ನು ಸರ್ವದಾ ನಂಬುವುದಿಲ್ಲ. ಇಂಥಾ ಪಕ್ಷಪಾತಿಗಳಾದವರು ಜಗದ್ಗುರುವಿನ ಪದವಿಗೆ ಎಂದಿಗೂ ಅರ್ಹರಾಗಲಾರರು.

---

## ಕಾದಿಯಾನ ಸಿಂಹಾಸನದ ಅಧ್ಯಕ್ಷರಾದ ವೀರವಸಂತರಾಯರು.

ಕಾಶ್ಮೀರದೇಶದ ಕೆಳಭಾಗದಲ್ಲಿರುವ ಖಾದಿಯಾನ್ ಎಂಬ ಗ್ರಾಮದಲ್ಲಿ ಕಲಿಯುಗದ ಐದುಸಾವಿರ ವರ್ಷದ ಅಂತ್ಯಕಾಲದಲ್ಲಿ ಕಾಲಜ್ಞಾನಾಗಮಗಳಿಗೆ ಸರಿಯಾಗಿ ಶ್ರೀಕೃಷ್ಣಅವತಾರವಾಯಿತು. ಇವರ ಸಿಂಹಾಸನಕ್ಕೆ ಈಗ ವೀರವಸಂತರಾಯನೇ ಅಧ್ಯಕ್ಷನು. ದ್ವಾಪರಯುಗದಲ್ಲಿ ಶ್ರೀಮಹಾವಿಷ್ಣುವು ಶ್ರೀಕೃಷ್ಣನ ರೂಪದಲ್ಲಿ ಕಾಣಿಸಿಕೊಂಡನು. ಈತನು ಹೆಚ್ಚೆಂದು ವ್ಯಾಸ ಮುನಿಯು "ಕೇಶವಾತ್ ಪರಂನಾಸ್ತಿ" ಎಂಬದಾಗಿ ತೋಳುಗಳನ್ನು ಎತ್ತಲು, ಆತನ ತೋಳುಗಳು ಕಳಚಿ ಬಿದ್ದವು. ಆದರೆ ಶ್ರೀಕೃಷ್ಣನು ಮಾತ್ರ "ಅಹಂಕರ್ತಾಜಗತ್‌ಕರ್ತಾ ಮಹೇಶ್ವರಃ" ಎಂದು ವ್ಯಾಸನನ್ನು ಎಚ್ಚರಗೊಳಿಸಿದನು. ದ್ವಾಪರಯುಗದಲ್ಲಿ ಶ್ರೀ ವಿಷ್ಣುವು ಪರಮಗುರುವಾಗಿ ಅವತರಿಸಿಯೂ ಕೂಡ ಜಗದ್ಗುರುವಾಗಲಾರದೆ ಹೋದನು. ಕಲಿಯುಗದಲ್ಲಿ ಕಾರ್ಯಗುರುವಾಗಿ ಅವತರಿಸಿದ ಹನ್ನೊಂದನೇವಿಷ್ಣು ಅವತಾರಿಗಳು ಹೇಗೆ ತಾನೆ ಜಗದ್ಗುರುಗಳಾಗಬಲ್ಲರು. ಇದನ್ನು ತಿಳಿಯದೇ ಹೋದ ಆನಂದನಾಮ ಸಂವತ್ಸರದಲ್ಲಿ ಶುಕ್ರವಾರದ ದಿವಸ ಹದಿನೆಂಟುಗಳಿಗೆಯಮೇಲೆ ಪಟ್ಟಕ್ಕೆ ಬಂದು ವ್ಯಾಸಋಷಿಯಂತೆ ವೀರವಸಂತರಾಯನು "ಕೇಶವಾರ್ ಪರಮ ನಾಸ್ತಿ" ಎಂದ ಕೂಡಲೆ ಈತನ ಸಮಾಜ ವಿಭೇದವಾಗಿ ಜ್ಞಾನಿಗಳೆಲ್ಲರು ಒಂದು ಸತ್ಯಸಮಾಜವಾಗಿ ಪರಿಣಮಿಸಿದರು. ನಂತರ ಇದೇ ಸಮಾಜದಲ್ಲಿ ವೀರವಸಂತನ ಅಜ್ಞಾನವನ್ನು ತಪ್ಪಿಸುವ ಸಲುವಾಗಿ ಶ್ರೀ ಚನ್ನಬಸವೇಶ್ವರರು ಅವತರಿಸಿ "ಅಹಂಕರ್ತಾ ಜಗತ್ಕರ್ತ ಮಹೇಶ್ವರ" ಎಂಬ ವಿಷಯದಲ್ಲಿ ಎಚ್ಚರಗೊಳಿಸಿದರು. ಮುಂದೆ ಬರುವ ಶ್ರೀಮುಖನಾಮಸಂವತ್ಸರದ

ಒಳಗಾಗಿ ಇವರು ತಮ್ಮ ತಪ್ಪು ತಿಳಿವಳಿಕೆಯನ್ನು ಬಿಡುವರೆಂದು ಆಗಮ ಗಳಿಂದ ತಿಳಿದು ಬಂದಿರುತ್ತದೆ. ಹಿಂದಿನ ಪುರಾತನರು "ಧರೆಗೊಬ್ಬ ಧೊರೆಯಾಗೋತನಕ" ಎಂದು ಹಾಡಿರುವುದರಿಂದ ಒಂದು ಭಾಗವು ವೀರ ವಸಂತನ ಬೆಂಬಲವಾಗಿ ಭೂಮಂಡಲದ ಏಕಚಕ್ರಾಧಿಪತ್ಯವನ್ನು ಸಾಧಿಸು ವುದರಲ್ಲಿ ತೊಡಗಿರುವುದೆಂದು ವಿದಿತವಾಗುತ್ತದೆ. ಮತ್ತು "ಕರ್ಮವಳಿದು ಧರ್ಮರಚಿಸುವತನಕ" ಎಂದು ಕಾಲಜ್ಞಾನಿಗಳು ಸಾರಿರುವುದರಿಂದ ಒಂದು ಸಮಾಜವು ಧರ್ಮಸ್ಥಾಪನದ ಕಾರ್ಯದಲ್ಲಿ ತೊಡಗಿರುವುದೆಂದು ತಿಳಿಯ ಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ಜ್ಞಾನಿಗಳಾಗಿ ಪರಿಣಮಿಸಿರುವ ಎರಡನೆ ಸಮಾಜವು ಖಾದಿಯನನ್ನು ಬಿಟ್ಟು ಲಾಹೋರಪಟ್ಟಣದಲ್ಲಿ ಸೇರಿ, ಇಂಗ್ಲೆಂಡ್ ಜರ್ಮನಿ, ಅಮೆರಿಕ, ಆಫ್ರಿಕ, ಮುಂತಾದ ಸ್ಥಳಗಳಲ್ಲಿ ಕರ್ಮವನ್ನು ಲಯ ಗೊಳಿಸಿ ಧರ್ಮಸ್ಥಾಪನವನ್ನು ಮಾಡುತ್ತಿರುವದು. ನಂತರ "ಧರ್ಮಗುರು ಸಂತಾಗೆದನಕ" ಎಂಬದಾಗಿ ಭವಿಷ್ಯನಿರುವದರಿಂದ, ಶ್ರೀ ಚನ್ನಬಸವೇಶ್ವ ರರು ಧರ್ಮಗುರುಗಳಾಗಿ ಹುಟ್ಟಿ ವೀರವಸಂತನ ಅಜ್ಞಾನವನ್ನು ಹೋಗಲಾಡಿಸಿ ಒಂದು ಸಮಾಜವನ್ನು ಸ್ಥಾಪಿಸಿಕೊಂಡು ಎರಡನೆಯ ಸಮಾಜದ ಬೆಂಬಲಕ್ಕೆ ಇರುವರೆಂದು ತಿಳಿದುಬರುತ್ತದೆ. ಇದರಿಂದ ಎರಡನೆ ವರ್ಗವು ಜಗದ್ಗುರು ವನ್ನು ತಿಳಿದಿರುವುದರಿಂದ ಮೂರನೆ ವರ್ಗವು ಇದಕ್ಕೆ ಸಹಾಯವಾಗಿರುವು ದೆಂದು ಶರಣರ ವಚನಗಳಿಂದ ಕಂಡುಬರುತ್ತದೆ.

ವೀರವಸಂತರಾಯನು ಆಗಮಗಳಿಗನುಸಾರವಾಗಿ ಎಂದರೆ "ನಂದ ನದ ಮುಂದೆ ಬಂದಾನು ವಸಂತ" ಎಂಬದಕ್ಕೆ ಸರಿಯಾಗಿ ಈಗ್ಗೆ ಮೂವ್ವ ತ್ತೇಳು ವರ್ಷಗಳ ಹಿಂದೆ ನಂದನಕ್ಕೆ ಮುಂಚೆ ಸರ್ವಧಾರಿನಾಮ ಸಂವತ್ಸ ರದ ಮಾಘ ಮಾಸದಲ್ಲಿ ದೇವಕಿದೇವಿಯ ಸ್ವರೂಪಳಾದ ಪವಿತ್ರಸ್ತ್ರೀಯ ಗರ್ಭದಲ್ಲಿ ಜನಿಸಿದನು, ಮತ್ತು "ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಸಂದೆ ಆನಂದನಾಮ ಸಂವತ್ಸರದಲ್ಲಿ ವೀರವಸಂತರಾಯನು ಹುಟ್ಟುವದು ಸತ್ಯ ನಿಮ್ಮಾಣೆ ನಿಮ್ಮ ಪುರಾತನರ ಪಾದದಾಣೆ" ಎಂಬ ಭವಿಷ್ಯೋಕ್ತಿಗನು ಸಾರವಾಗಿ ಸಾವಿರದೊಂಭೈನೂರ ಹದಿನಾಲ್ಕನೇ ಇಸವಿಯಲ್ಲಿ ಹೋದ ಆನಂದ ನಾಮ ಸಂವತ್ಸರದಲ್ಲಿ ಶುಕ್ರವಾರದ ದಿವಸ ಹದಿನೆಂಟು ಘಳಿಗೆಯಮೇಲೆ ಪಟ್ಟಕ್ಕೆ ಬಂದನು. ಇದರ ಕುರುಹಿಗೆ ಉಳುವಿದಿಕ್ಕಿನ ಗುಡ್ಡದ ಗುಂಡಗಳು

ಪಟ್ಟಕ್ಕೆ ಬಂದ ಏಳನೆ ದಿವಸವೆ ಉರುಳಿ ಬಿದ್ದಿರುವವು. ವೀರವಸಂತರಾಯನಿಗೆ ಸುಮಾರು ಒಂಭತ್ತುಲಕ್ಷ ಜನ ಶಿಷ್ಯರಿರುವರು. "ವಿಷ್ಣುಪಾದದಲ್ಲಿ ಗಂಗೆ ಹುಟ್ಟಿದಳೆಂದು ಹೇಳುವನು" ಎಂಬ ಉಕ್ತಿಗೆ ಸರಿಯಾಗಿ ವೀರವಸಂತರಾಯನು ಕಲಿಯುಗದಲ್ಲಿ ಅವತರಿಸಿದ ಹನ್ನೊಂದನೆಯ ವಿಷ್ಣುವಿನ ಅವತಾರವೆ ಜಗದ್ಗುರುವೆಂದು ಹೇಳಿ ಜನರ ಸನ್ಮಾರ್ಗ ತಪ್ಪಿಸಿಬಿಟ್ಟಿರುತ್ತಾನೆ. ಈ ತಪ್ಪು ನಂಬಿಕೆಯನ್ನು ದೂರಮಾಡಲು ಶ್ರೀ ಚನ್ನಬಸವೇಶ್ವರರು, ಯೂಸೂಫೆಮವೂಪ್ ಆಗಿಯೂ, ನೂರೊಂದು ಕುಲಗಳಿಗೆ ಈಶ್ವರ ಪ್ರಸನ್ನರಾಗಿ ಮೈದೋರಿರುತ್ತಾರೆಂದು ತಿಳಿಯಬೇಕು. "ಪಟ್ಟಪಟ್ಟದವರು ಹೆಟ್ಯಾಡಿಸತ್ತಾರು ಪಟ್ಟಾವು ತಮತಮಗೆಣ್ಣ | ಪಟ್ಟಕ್ಕೆ ಚನ್ನಬಸವಣ್ಣ ಬಂದಾನು ಒಟ್ಯಾಗಿ ಹಾರುತೀರಣ್ಣಾ ||" ಎಂಬ ಕಾಲಜ್ಞಾನೋಕ್ತಿಯಂತೆ ಈಗಿನ ಜಗದ್ಗುರು ನಾಮಧಾರಿಗಳು ತಮ್ಮ ಆಟವನ್ನು ಬಿಟ್ಟು ಈಶ್ವರವತಾರನೊಬ್ಬನೆ ಜಗದ್ಗುರುವೆಂದು ನಂಬಿ ತಾವು ಕಾರ್ಯ ಮತ್ತು ಕಾರಣ ಗುರುಗಳಾಗಿ ಅವರ ಅಧೀನವನ್ನು ಹೊಂದಬೇಕಾಗಿರುವುದು. ಇದರ ಹೊರತು ಇವರಿಗೆ ಸನ್ಮಾರ್ಗವಿಲ್ಲವು.

ಹನ್ನೊಂದನೆ ಕೇಶವಾವತಾರಿಗಳು ಜ್ಞಾನದಮೇಲೆಯು ಮತ್ತು ಭವಿಷ್ಯಗಳಮೇಲೆಯು ಎಂಭತ್ತಾರು ಪುಸ್ತಕಗಳನ್ನು ಬರೆದಿರುತ್ತಾರೆ. ಅವುಗಳಲ್ಲಿ ಎಲ್ಲಿಯೂ ತಾವು ಜಗದ್ಗುರುಗಳೆಂದು ಬರೆದಿಲ್ಲ. ವೀರವಸಂತನು ಮಾತ್ರ ಅವರನ್ನು ಜಗದ್ಗುರುಗಳೆಂದು ಹೇಳಿರುತ್ತಾನೆ. ಆದರೆ ಇವರಲ್ಲಿ ರುದ್ರಶಕ್ತಿಯ ಪ್ರಸನ್ನತೆಯೇ ಇಲ್ಲವಿರಲು ಇವರು ಹೇಗೆ ತಾನೆ ಜಗದ್ಗುರುಗಳಾಗಿ ಪರಿಣಮಿಸುವರು. ಆತ್ಮನ ಸಂಪೂರ್ಣಾಭಿವೃದ್ಧಿಗೆ ಬೇಕಾದ ದೇವೋಕ್ತ ಗ್ರಂಥವು ಇವರ ಮೂಲಕ ಪ್ರಕಟವಾಗಿಲ್ಲ. ಇವರು ಕಾರ್ಯ ಮತ್ತು ಕಾರಣ ಗುರುಗಳಿಗೆ ಅಧಿಪತಿಯಾಗಿ ಅವತರಿಸಿಲ್ಲ. ಆದುದರಿಂದ ಇವರು ಜಗದ್ಗುರುಗಳಾಗಿ ಪರಿಣಮಿಸುವುದು ಹಿಂದಿನ ಪ್ರಮಾಣಗಳಿಗೆ ಸ್ವಲ್ಪವು ಸಮ್ಮತವಾಗಿರುವುದಿಲ್ಲ.

## ಥಿಯಸಾಫಿಕಲ್ ಸಮಾಜಕ್ಕೆ ಅಧ್ಯಕ್ಷರಾಗಿರುವ ಜೆ. ಕೃಷ್ಣಮೂರ್ತಿಯವರು.

ಈ ಸಮಾಜವು ಸುಮಾರು ಐವತ್ತು ವರ್ಷಗಳ ಕೆಳಗೆ ಪಾಶ್ಚಿಮಾತ್ಯ ದೇಶದ "ಆನಿಬೆಸೆಂಟ್" ಎಂಬ ಒಬ್ಬ ಸ್ತ್ರೀಯಿಂದ ಸ್ಥಾಪಿತವಾಯಿತು. ಇದಕ್ಕೆ ಎಲ್ಲಾ ಮತಗಳಿಂದಲೂ ಅನೇಕಜನರು ಸೇರಿದರು. ಯೂರೋಪ್ ದೇಶದಲ್ಲಿಯು ಮತ್ತು ಹಿಂದೂಸ್ಥಾನದಲ್ಲಿಯೂ ಈ ಸಮಾಜದ ಕಾರ್ಯವಿಧಾಯಕ ಸಂಘಗಳಿವೆ. ವಿಶೇಷವಾಗಿ ಇವರ ಸನ್ಮಾರ್ಗಕ್ಕೆ ಯಾವ ದೇವೋಕ್ತ ಗ್ರಂಥವು ಇಲ್ಲ. ಇವರು ಆಯಾಯ ಮತಗಳಿಂದ ತಮಗೆ ಬೇಕಾದ ಜ್ಞಾನ ಮಾರ್ಗ ಸೂಚಕವಾಗಿರುವ ಕೆಲಕೆಲವು ವಿಷಯಗಳನ್ನು ಆರಿಸಿಕೊಂಡು ತಮ್ಮದೊಂದು ಚಿಕ್ಕಗ್ರಂಥವನ್ನು ಮಾಡಿಕೊಂಡಿರುವರು. ಹೀಗೆ ತಾವಾಗಿಯೇ ಮಾಡಿಕೊಂಡಿರುವ ಗ್ರಂಥವು ಎಷ್ಟು ಸನ್ಮಾರ್ಗ ಪ್ರದವಾಗಿರಬಹುದೆಂದು ಊಹಿಸಬಹುದಾಗಿದೆ. ಇತ್ತಿತ್ತ ಈ ಸಮಾಜದಲ್ಲಿ ಯಾವುದೊ ಒಂದು ಕಾರಣದಿಂದ ಪ್ರಪಂಚದ ಐಕಮತ್ಯದ ಉದ್ದೇಶವು ನೆಲಸಿತು. ಇಂಥಾ ಕಾರ್ಯವನ್ನು ಜರಗಿಸಲು ಜಗತ್ತಿಗೆಲ್ಲಾ ಗುರುಪ್ರಾಯನಾದ ಒಬ್ಬನು ಈ ಕಾಲದಲ್ಲಿ ಅವತರಿಸಬೇಕೆಂದು ಬೇರೆ ಬೇರೆ ಮತಗಳ ಕಾಲಜ್ಞಾನದಿಂದ ಸಾಧಿಸುತ್ತಿದ್ದರು. ಹೀಗಿರಲು ಇವರು ಆ ಬರಬೇಕಾದ ಜಗದ್ಗುರುವು ಜೆ. ಕೃಷ್ಣಮೂರ್ತಿ ಎಂಬ ಒಬ್ಬ ಯುವಕನ ರೂಪದಲ್ಲಿ ಕಾಣಿಸಿಕೊಂಡಿರುವನೆಂದು ಪ್ರಸಿದ್ಧಪಡಿಸುತ್ತಾ ಇದ್ದಾರೆ. ಆದರೆ ಜೆ. ಕೃಷ್ಣಮೂರ್ತಿಯು ಮಾತ್ರ ನಾನು ಪರಮಾತ್ಮನಕಡೆಯಿಂದ ಜಗತ್ತಿಗೆಲ್ಲಾ ಗುರುವಾಗಿ ಅವತರಿಸಿದ್ದೇನೆಂದು ಹೇಳಿಲ್ಲ. ಯೌವಾಗಲು ಅವತಾರಿಗಳು ಭಗತ್ಪ್ರಸನ್ನರಾಗಿ ಬಂದು ತಮ್ಮ ಜನಾಂಗಕ್ಕೆ ಒಬ್ಬರಾಗಿ ನಿಂತು ತಾವು ಅವತಾರಿಗಳೆಂದು ಪ್ರಸಿದ್ಧಪಡಿಸುತ್ತಾರೆ. ಇದಕ್ಕೆ ಎಲ್ಲಾ ಆಗಮಗಳು, ಇತಿಹಾಸಗಳು ಸಾಕ್ಷಿಯಾಗಿವೆ. ಹಾಗಲ್ಲದೆ ಭಗವಂತನ ಸಾನ್ನಿಧ್ಯವನ್ನು ಹೊಂದಬೆ ಓಂಕಾರೋಕ್ತಿಯಿಂದ ತಾನು ಅವತಾರಿಯೆಂದು ತಿಳಿದು ಪ್ರಚುರಪಡಿಸುವುದನ್ನು ಬಿಟ್ಟು ಜನರಿಂದ ಮಾಡಲ್ಪಟ್ಟ ಅವತಾರಿಯಾಗಿ ಪರಿಣಮಿಸುವುದು ಎಷ್ಟು ಹಾಸ್ಯಾಸ್ಪದವಾದುದೆಂದು ಜ್ಞಾನಿಗಳು ಸುಲಭವಾಗಿ ತಿಳಿಯುವರು.

ಮನುಷ್ಯನಿಂದ ಮಾಡಲ್ಪಟ್ಟ ವಸ್ತುಗಳು ನಾಶವನ್ನು ಹೊಂದುತ್ತವೆ ಮತ್ತು ಅವುಗಳಿಂದ ಫಲವು ದೊರೆಯುವದಿಲ್ಲವೆಂಬುದನ್ನು ಮಾತ್ರ ಈ ಸಮಾಜದವರು ತಿಳಿದಿದ್ದರೆ ತಾವೇ ಈ ಗುರುವನ್ನು ಸೃಷ್ಟಿಸಿಕೊಳ್ಳುತ್ತಿರಲಿಲ್ಲ. ಪ್ರಕೃತಿಯಲ್ಲಿಯು ಇದಕ್ಕೆ ಅನೇಕ ಸಾಕ್ಷಿಗಳು ದೊರೆಯುತ್ತವೆ. ಮನುಜನು ಒಂದು ಹೆಣ್ಣುಕತ್ತೆಯ ಮತ್ತು ಗಂಡು ಕುದುರೆಯ ಸಂಪರ್ಕದಿಂದ ಹೆಸರಗತ್ತೆ ಎಂಬ ಒಂದು ಪ್ರಾಣಿಯನ್ನು ಹೊಂದುತ್ತಾನೆ ಆದರೆ ಇಂಥಾ ಹೆಸರಗತ್ತೆಗಳ ಸಂಪರ್ಕದಿಂದ ಫಲವು ದೊರೆಯುವುದಿಲ್ಲ. ಹೀಗೆಯೇ ಮನುಷ್ಯನ ಕಾರ್ಯವು ತತ್ಕಾಲಕ್ಕೆಮಾತ್ರ ಫಲಕಾರಿಯಾಗಿದ್ದರೂ ಶಾಶ್ವಿತವಾದ ಫಲವನ್ನು ಕೊಡಲಾರದು. ಅದೂ ಅಲ್ಲದೆ ಪ್ರಕೃತಿಯಲ್ಲಿ ಪರಮಾತ್ಮನಿಂದ ಕಲ್ಪಿತವಾದ ಜೀನುತುಪ್ಪಕ್ಕೆ ಹೇಗೆ ಬೂಜುಹಿಡಿಯುವುದಿಲ್ಲವೊ ಮತ್ತು ಮನುಷ್ಯನಿಂದ ತಯಾರಿಸಲ್ಪಟ್ಟ ತುಪ್ಪವು ಹೇಗೆ ಕೆಟ್ಟುಹೋಗುತ್ತದೆಯೊ ಹಾಗೆಯೇ ದೈವ ನಿರ್ಮಾಣಕ್ಕೂ ಮತ್ತು ನರನ ನಿರ್ಮಾಣಕ್ಕೂ ವ್ಯತ್ಯಾಸವಿದೆ ಎಂದು ಈ ಸಮಾಜದವರು ತಿಳಿದಿದ್ದರೆ ಹಾಸ್ಯಾಸ್ಪದವಾದ ಈ ಕಾರ್ಯದಲ್ಲಿ ಇವರು ಕೈಹಾಕುತ್ತಿರಲಿಲ್ಲ. ಇವರು ಜಗದ್ಗುರುಗಳಾಗುವುದು ಹಾಗಿರಲಿ ಗುರುಗಳಾಗಿ ಪರಿಣಮಿಸುವುದು ಕೂಡ ದುರ್ಲಭವು. ಪೂರ್ವದಲ್ಲಿ ಶ್ರೀಕೃಷ್ಣನನ್ನೇ ಆಗಲಿ ಏಸು ಕ್ರೈಸ್ತರನ್ನೇ ಆಗಲಿ ಮನುಷ್ಯರು ಗುರುಗಳನ್ನಾಗಿ ಮಾಡಲಿಲ್ಲ. ಆದರೆ ಅವರು ದೈವಸಾನ್ನಿಧ್ಯವನ್ನು ಹೊಂದಿ ಓಂಕಾರೋಕ್ತಿಯಿಂದ ದೈವಮತವನ್ನು ತಿಳಿದು ಗುರುಗಳಾಗಿ ಪರಿಣಮಿಸಿದರು. ಇದೇರೀತಿಯಲ್ಲಿ ಹಿಂದಿನ ಪುರಾತನರು ಗುರತ್ವವನ್ನು ವಹಿಸಿದರು. ಜೆ ಕೃಷ್ಣಮೂರ್ತಿಗಳಹಾಗೆ ನರಕಲ್ಪಿತ ಗುರುಗಳಾಗಿ ಹಿಂದಿನವರಾರೂ ಪರಿಣಮಿಸಲಿಲ್ಲ ಮತ್ತು ಇಂಥಾ ವಿಷಯವು ಹಿಂದಿನ ಕಟ್ಟುಕಥೆಗಳಲ್ಲಿಯಾದರೂ ಕಾಣಬರುವುದಿಲ್ಲ. ಆದರೆ ಈಗಿನಕಾಲದ ಸಿಂಹಾಸನಾರೂಢರೂಕೂಡ ಹಿಂದಿನವರಿಂದ ಸಾಕಲ್ಪಟ್ಟು ಗಾದಿಗೆ ಸೃಂಗಾರರೂಪವಾಗಿರಲು ಮನುಷ್ಯ ನಿರ್ಮಿತ ಗುರುಗಳಾಗಿರುವರು. ಇದೆಲ್ಲವು ಚಿಕ್ಕಮಕ್ಕಳ ಆಟಕ್ಕೆ ಸಮಾನವಾದ ಹಾಸ್ಯಕಾರ್ಯಗಳಿಗೆ ಒಳಪಟ್ಟಿರುತ್ತದೆ. ಡಾಕ್ಟರ್ ಆನಿಬೆಸೆಂಟಮ್ಮನವರು ಈ ಮಕ್ಕಳಾಟದ ಕೆಲಸವನ್ನು ಬಿಟ್ಟು ಸನ್ಮಾರ್ಗಪ್ರವರ್ತನಾಕಾರ್ಯದಲ್ಲಿ ಕೈಹಾಕುವರೆಂದು ನಂಬಿರುತ್ತೇನೆ.

ದ್ವಾಪರಯುಗದಲ್ಲಿ ಶ್ರೀ ಕೃಷ್ಣನು "ಯದಾಯದಾಹಿ ಧರ್ಮಸ್ಯಾ ಗ್ಲಾನಿ ರ್ಭವತಿ ಭಾರತ | ಅಭ್ಯುತ್ಥಾನಾಮಧರ್ಮಸ್ಯಾ ತದಾತ್ಮಾನಾಂ ಸೃಜಾಮ್ಯಹಂ ||" ಎಂದು ಸಾರಿಹೇಳಿರುತ್ತಾನೆ. ಮತ್ತು ಜಗದ್ಗುರುವಾಗಲು ಅರ್ಹನಾದನನು ಈಶ್ವರವತಾರಿಯೊಬ್ಬನೆ ಹೊರತು ಮತ್ತೊಬ್ಬನು ಜಗದ್ಗುರುವಾಗಲಾರನೆಂಬು ದಕ್ಕೆ ಆಧಾರವಾಗಿ "ಕೇಶವಾತ್ಪರಂನಾಸ್ತಿ" ಎಂಬ ವ್ಯಾಸನ ವಾಕ್ಯದಿಂದಾದ ವಿಘ್ನವನ್ನು ದೂರಮಾಡಲು "ಅಹಂಕರ್ತಾ ಜಗತ್ಕರ್ತಾ ಮಹೇಶ್ವರಃ ||" ಎಂದು ವ್ಯಾಸನನ್ನು ಎಚ್ಚರಗೊಳಿಸಿದನು. ಆದುದರಿಂದ ಯಾವಗುರುವು ಅವತರಿಸಿದರು ಈಶ್ವರಾವತಾರಿಯ ಅನುಯಾಯಿಯಾಗಿ ಅವತರಿಸಬೇಕೇ ವಿನಹ ಮತ್ತೆ ಬೇರೆಯಿಲ್ಲ. ಇದರಿಂದ ಜೆ. ಕೃಷ್ಣನೂರ್ತಿಯು ಓಂಕಾರ ಪ್ರದವಾದ ಗುರುವಾಗಿ ಪರಿಣಮಿಸಬೇಕಾದರೂ ಈಶ್ವರಾವತಾರಿಯನ್ನು ಮೊದಲು ನಂಬಿ ನಡೆದಿರಬೇಕೆಂದು ತಿಳಿಯಬೇಕು. ಜಗದ್ಗುರುವು ಒಬ್ಬನೆ ಹೊರತು ಹೆಚ್ಚಾಗಿರಲಾರರು. ಆದೂ ಅಲ್ಲದೆ ಮಾನುಷ ನಿರ್ಮಿತ ಗುರುವು ಹೇಗೆತಾನೆ ಜಗದ್ಗುರುವಾಗಬಲ್ಲನು. ಜಗದ್ಗುರುವು "ಬ್ರಹ್ಮಾಕೃತಶಿವಸಹಸ್ರನಾಮಸು | ವೃತ್ಯುಂಜಯಸ್ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು||" ಎಂಬ ವಾಕ್ಯಾನು ಸಾರನಲ್ಲದೆ ಮತ್ತಾರಿರುವರು.

---

## ಜ ಗ ದ್ಗು ರು .

ಜಗದ್ಗುರುವು ಸ್ವಭಾವ ಸಂಯುಕ್ತವಾದ ಇಪ್ಪತ್ತೈದು ಪ್ರಮಾಣಗಳಿಗೆ ಸಮ್ಮತನಾಗಿರಬೇಕು. ಈತನು ಕೃತ, ತ್ರೇತ, ದ್ವಾಪರ ಯುಗದ ಧರ್ಮಭೇದಗಳನ್ನು ತೆಗೆದುಹಾಕಿ ದುಃಖವನ್ನು ತಪ್ಪಿಸಿ ವರ್ಣಸಾಂಕರ್ಯವೆಂಬ ದುರ್ನಾಮವನ್ನು ತಪ್ಪಿಸಿ ಎಲ್ಲರನ್ನೂ ಸ್ವಭಾವಸಂಯುಕ್ತವಾದ ಮತದಲ್ಲಿ ಸಮಾವೇಶಗೊಳಿಸುವವನಾಗಬೇಕು. ಗೌತಮಬೌದ್ಧರು ಮತ್ತು ಏಸು ಕ್ರೈಸ್ತರು ಈ ಕಲಿಯುಗದಲ್ಲಿಯೇ ಅವತರಿಸಿದರೂಕೂಡ "ನಾವು ಜಗತ್ತಿನ ಸರ್ವಜನರ ಧರ್ಮಸಂರಕ್ಷಣೆಗೆ ಅವತರಿಸಿದ್ದೇವೆ" ಎಂದು ಸಾರಲಿಲ್ಲ. ಆದರೂ ಇವರಿಬ್ಬರೂ ಶ್ರೀ ವಿಷ್ಣುವಿನ ಅವತಾರ ಪ್ರಸನ್ನರು. ಜಗದ್ಗುರು ನಾಮಾಂಕಿತನಾದ ಮಹಾಪುರುಷನು ಈ ಯುಗದಲ್ಲಿಯೇ ಸರ್ವಾತ್ಮಪ್ರಕಾಶಕನಾಗಿಯು, ಈಶ್ವರನಾಗಿಯು, ವಿಶ್ವಸ್ವರೂಪಧಾರಣನಾಗಿಯು, ದೇಶ, ಕಾಲ,

ಭಾಷೆ, ತೀರ್ಥ ಮುಂತಾದುವುಗಳಿಗೆ ಅಭಿಮಾನಿಯಾಗಿರದೇಯು, ಸರ್ವ ಪ್ರಾರ್ಥನಾರೀತಿಗಳುಳ್ಳವನಾಗಿಯು, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಮುಂತಾದ ಜ್ಞಾನಮಾರ್ಗ ಭೇದಗಳಿಗೆ ಸಮಾನಸ್ಕಂಧನಾಗಿಯು, ಪಂಚ ಮಹಾಪಾತಕಗಳಿಗೆ ಸಿಕ್ಕದವನಾಗಿಯು, ಸರ್ವಮತದ ಲಲಾಟ ಲೇಪನಗಳಿಗೆ ದುರಭಿಮಾನಿಯಾಗದವನಾಗಿಯು, ಎಲ್ಲಾ ಜನಾಂಗಗಳ ಬಳಕೆಗೆ ಬೇಕಾದ ಸುಬೋಧನೆಗಳನ್ನೊಳಗೊಂಡಿರುವ ಅಖಿಳ ಬ್ರಹ್ಮಾಂಡಲೇಖನವನ್ನು ಕೈಯ್ಯಲ್ಲಿ ಹಿಡಿದು, ದೇವಾಂದೇವತರೊಡಗೂಡಿ ಪ್ರಮಥಗಣ ಸಂದಣಿಯನ್ನು ಹಿಂದಿಟ್ಟುಕೊಂಡು ಈ ಭೂಮಿಗೆ ನಾಭಿಸ್ಥಾನದವಾದ ಮಕ್ಕ ಪಟ್ಟಣದಲ್ಲಿ ಕಲ್ಕಿನಾಮಕನಾದ ಮತ್ತು ಈಶ್ವರಸ್ವರೂಪ ಪ್ರಸನ್ನನಾದ ಜಗದ್ಗುರುವು ಹಜರತ್ ಮಹಮ್ಮದ್ ಪೈಗಂಬರ ಸ್ವಲ್ಲಲ್ಲಾಹು ಅಲೈಹಿವಸ್ಸಲ್ಲಂರವರ ರೂಪದಲ್ಲಿ ಕಾಣಿಸಿಕೊಂಡು ಸ್ವಭಾವಸಂಯುಕ್ತವಾದ ಇಪ್ಪತ್ತೈದು ಪ್ರಮಾಣಗಳನ್ನು ಅವಲಂಬಿಸಿ ಜಗತ್ತಿಗೆ ಪ್ರಜ್ವಲಿಸಿದನು.

ಇವರ ಸುಬೋಧನೆಗಳು ಸಾವಿರದ ಮೂರುನೂರು ವರ್ಷಗಳಹಿಂದೆ ಯಾವರೀತಿಯಲ್ಲಿ ನಿರ್ಮಲವಾಗಿ ರಾರಾಜಿಸುತ್ತಿದ್ದವೋ ಅದೇರೀತಿಯಲ್ಲಿ ಈಗಲೂ ಧೃಡವಾಗಿ ನಿಂತಿವೆ. ಇವರ ಪ್ರಸನ್ನತೆಯಿಂದ ಜಗತ್ತಿಗೆ ಸ್ಥೂಲ, ಸೂಕ್ಷ್ಮರೂಪವಾದ ಲಾಭವು ಏನು ದೊರೆತಿರುವದು ಎಂಬುದನ್ನು ಜ್ಞಾನಿಗಳು ತಿಳಿಯುವರು. ಇತರ ಅವತಾರಿಗಳ ಇತಿಹಾಸಗಳಿಗೂ ಇವರ ಇತಿಹಾಸಕ್ಕೂ ಇರುವ ವ್ಯತ್ಯಾಸವನ್ನು ತಿಳಿದವನು ಅವನು ನಿಜವಾಗಿ ಇವರನ್ನು ತಿಳಿಯುತ್ತಾನೆ. ಬೀಜಸ್ವರೂಪನಾದ ಈ ಜಗದ್ಗುರುವು ಈಶ್ವರವತಾರನು ಮತ್ತು ಓಂಕಾರಸ್ವರೂಪನು. ಇವರ ಅವತರಣಿಕೆಯು ಏಷ್ಯ, ಯೂರೋಪ್, ಆಫ್ರಿಕ ಎಂಬ ಮೂರು ಖಂಡಗಳನ್ನು ಅಲ್ಲೋಲಕಲ್ಲೋಲವಾಗಿಮಾಡಿತು. ಈ ಮಹಾತ್ಮರ ದರ್ಶನಕ್ಕಾಗಿ ಮಲಬಾರ್, ಅಬಿಸೀನಿಯ, ಇಟಲಿ, ಇರಾಕ, ಚೈನ, ಮುಂತಾದ ದೂರದೇಶಗಳಿಂದ ಭಗವದ್ಭಕ್ತರು ತಂಡತಂಡವಾಗಿ ಬರುತ್ತಿದ್ದರು. ಇವರೆಲ್ಲರು "ಲಾ ಇಲಾಹ ಯಿಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹ್" ಎಂಬ ಬೀಜ ಮಂತ್ರದಲ್ಲಿ ತಂಬಿರುವ ಆತ್ಮರಹಸ್ಯವನ್ನು ತಿಳಿದು ಇದರ ಪ್ರಚಾರದಲ್ಲಿ ತನು ಮನ ಧನಗಳನ್ನು ಒಪ್ಪಿಸಿ ನಿಂತು ಇದನ್ನು

كليانى جن پيشوا كا سكّه اور سهلى

ಕಲ್ಯಾಣದ ಶ್ರೀಚನ್ನಬಸವೇಶ್ವರರ

ನಿಕ್ಕಮಕ್ಕಳೆಲ

ಪ್ರಚುರಗೊಳಿಸಿದರು. ಇದಕ್ಕೆ ಆಧಾರವು ಆಯಾಯ ದೇಶಗಳ ಆಸ್ಥಾನಗಳ ಪೂರ್ವಲೇಖನಗಳಲ್ಲಿ ಈಗಲೂ ಸಿಕ್ಕುತ್ತದೆ. ಈ ಮಂತ್ರವು ಲಕ್ಷೋಪಲಕ್ಷ ಜ್ಞಾನಿಗಳ ಮುಕ್ತಿಗೆ ಸಾಧಕವಾಯಿತು. ಮತ್ತು ಇದೇ ಬೀಜಮಂತ್ರವು ಅನೇಕ ಮಠಗಳಲ್ಲಿ ಜ್ಞಾನಕ್ಕೆ ಮೂಲವಾಗಿ ಆಧಾರಗಳೊಂದಿಗೆ ಕಂಡು ಬರುತ್ತಾಯಿದೆ. ಇದೇ ಬೀಜಮಂತ್ರವಾಗಿ ಉಳ್ಳ ಕೆಲವು ಮಠಗಳ ವಿಷಯ ಗಳನ್ನು ವಿವರಿಸುವುದು ಅವಶ್ಯಕವಾಗಿಯಿದೆ.

---

ಚಿತ್ರದುರ್ಗದ ಶೂನ್ಯಸಿಂಹಾಸನ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

"ಲಾ ಇಲಾಹಯಿಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹ"

ಇಲ್ಲಿಗೆ ಎಂಟುನೂರು ವರ್ಷಗಳ ಹಿಂದೆ ಶೂನ್ಯ ಸಿಂಹಾಸನವು ಶ್ರೀ ಕಲ್ಯಾಣಬಸವೇಶ್ವರರಿಂದ ಸ್ಥಾಪಿತವಾಯಿತು. ಈ ಶೂನ್ಯ ಸಿಂಹಾಸನದ ನಿರ್ಮಿತಕ್ಕೆ ಇದೇ ಬೀಜ ಮಂತ್ರವು ಸಾಧಕವಾಗಿರುತ್ತದೆ. ಈ ಮಂತ್ರದ ಸಾಧನಕ್ಕಾಗಿಯೆ ಆ ಮಹಾಪುರುಷರು ಕಲ್ಯಾಣದಲ್ಲಿ ನೂರಾ ಒಂದು ಕೂಲ ಗಳು ಸಮಾವೇಶವಾಗುವ ಸುಬೋಧನೆಗಳನ್ನು ಬೋಧಿಸಿದರು. ಇದಕ್ಕೆ ಸಾಕ್ಷಿಯಾಗಿ "ಶರಣಲೀಲಾಮೃತ" ದ ಹತ್ತನೆಯ ಸಂಧಿಯಲ್ಲಿ "ಅಲ್ಲ ಎಂದರೆ ಪ್ರಭುವು ಎಲ್ಲ ಮಹಮ್ಮದರು ಬಸವ ಸಲ್ಲಾಮಮಾಡಿ ಪೋದರು ವಳ್ಳಿಪುರಿಗೆ" ಎಂದು ಈ ಬೀಜ ಮಂತ್ರದ ಅಭಿಪ್ರಾಯವು ಹೊರಪಟ್ಟಿರುತ್ತದೆ. ಇದನ್ನು ಶ್ರೀ ಚನ್ನಬಸವೇಶ್ವರರೂ ಮತ್ತು ಇವರ ಅನುಯಾಯಿಗಳೂ ಸಹಜವೆಮಾಡಿ ಕೈಲಾಸಕ್ಕೆ ತೆರಳಿದರು.

ಮತ್ತು ಮಳೆಯ ಮಲ್ಲೇಶ್ವರರೆಂಬ ಒಬ್ಬ ಮಹಾತ್ಮರು ಏಳುನೂರು ಜನ ಖಲಂದರರ ಸರಿಗಡ ಮಕ್ಕಾದಯಾತ್ರೆಯನ್ನು ಮಾಡಿ ದಿವ್ಯಜ್ಞಾನ ಭರಿತರಾಗಿ ಬಂದು ಈ ಮಂತ್ರದ ಸಾಧನೆಗಾಗಿಯೇ ನಿಂತರು. ಇದಲ್ಲದೆ

ಪ್ರಭುವಾಂಶೀಭೂತರಾದ ಶ್ರೀ ಚನ್ನಬಸವೇಶ್ವರದೇವರು ಕಲ್ಯಾಣಪಟ್ಟಣ ದಿಂದ ಬಿಜ್ಜಳರಾಜನ ಹೆಂಡರ ಊಪಟಳವನ್ನು ತಾಳಲಾರದೆ ತಪ್ಪಿಸಿಕೊಂಡು ಹೋಗುವಾಗ್ಗೆ ತನ್ನ ಹತ್ತಿರ ಇದ್ದ ಶಿಕ್ಕಾ ಮತ್ತು ಶೈಲಗಳನ್ನು ದಿಲ್ಲಿಯ ಬಾದಶಾಹನಲ್ಲಿಟ್ಟು ಹೋಗಿದ್ದರು. ಹೋಗುವಾಗ್ಯೆ ಬಾದಶಾಹಾನಿಗೆ, ಮುಂದೆ ನನ್ನ ವಂಶದವರು ಬಂದಾಗ್ಗೆ ಇವುಗಳನ್ನು ಅವರಿಗೆ ಕೊಡಬೇಕೆಂದು ಹೇಳಿ, ಒಂದು ಯಾದಿಯನ್ನು ಬರೆದು ಪೆಟ್ಟಿಗೆಯಲ್ಲಿಟ್ಟು ಮೋಲಿಗೆ ಮುದ್ರೆಯನ್ನು ಮಾಡಿದ್ದರು. ಮುಂದೆಅವರು ಘೋರವಾದ ರಾಕ್ಷಸರ ವಾಸಸ್ಥಾನವಾದ ಒಂದು ಅರಣ್ಯವನ್ನು ಪ್ರವೇಶಿಸಿ, ಪ್ರಾಣವನ್ನು ಉಳಿಸಿಕೊಂಡದ್ದಕ್ಕೆ ಉಳಿವಿ ಕ್ಷೇತ್ರವೆಂಬ ಹೆಸರು ಆದಕ್ಕೆ ಆಯಿತು. ಆದರೆ ಮುರ್ತುಜಾಶಾಹ ಅಥವ ಮುರುಘಸ್ವಾಮಿಯೆಂಬ ಒಬ್ಬಮಹನೀಯರು ದಿಲ್ಲಿಪಟ್ಟಣಕ್ಕೆ ಹೋಗಿ ತಾವು ಶ್ರೀಚನ್ನಬಸವೇಶ್ವರರ ವಂಶೀಕರು ಎಂದು ದಿಲ್ಲಿಬಾದಶಾಹನಿಗೆ ಹೇಳಿ ದರ ಬಾರಿನಲ್ಲಿ ಮಹತ್ವವನ್ನು ತೋರಿಸಿ ಆ ಇಟ್ಟಿರುವ ಶಿಕ್ಕಾ ಮತ್ತು ಶೈಲಗ ಳನ್ನು ಚಿತ್ರದುರ್ಗದ ಸಿಂಹಾಸನಕ್ಕೆ ತಂದರು. ಈಗಲಾದರು ಈ ಶಿಕ್ಕಾ ಶೈಲುಗಳು ಆ ಮಠದಲ್ಲಿ ಇರುತ್ತವೆ. ಇದರಮೇಲೆ " ಲಾ ಇಲಾಹಾ ಇಲ್ಲ ಲ್ಲಾಹು ಮೋಹಮ್ಮದರ್ ರಸೂಲುಲ್ಲಾಹ " ಎಂಬ ಜಗದ್ಗುರುವಿನಮಹಾ ವಾಕ್ಯ ಉಂಟು. ಚಿತ್ರದುರ್ಗದಲ್ಲಿ ಇದೆ ಮಂತ್ರವು ಸಿಕ್ಕ ಸ್ಥೆಲ ಮುಂ ತಾದ ಬಿರುದಗಳಮೇಲೆ ಬರೆಯಲ್ಪಟ್ಟಿದೆ. ಈಸಿಂಹಾಸನಾಧಿಪತಿಗಳು ಈ ಶೂನ್ಯ ಸಿಂಹಾಸನವನ್ನು ಏರುವಾಗೆ ಈ ಬಿರುದಾವಳಿಯನ್ನು ಹಸ್ತಗತ ಮಾಡಿಕೊಂಡು ಗಾದಿಯಮೇಲೆ ಕುಳಿತುಕೊಳ್ಳುತ್ತಾರೆ. ಈ ಮಂತ್ರದ ಬೀಜರೂಪರಾದ ಹಜರತ್ ವ.ಹಮ್ಮದ್ ಪೈಗಂಬರರು ಜಗದ್ಗುರುವೆ ವಿನಹ ಇವರು ಆದಕ್ಕೆ ಅಧೀನರಾಗಿರುತ್ತಾರೆ. ಇತ್ತಿತ್ತ ಇವರು ಹಿಂದಿನ ದಾರಿತಪ್ಪಿ ಆ ಮಂತ್ರದ ಮಹತ್ವವನ್ನರಿಯದೆ ತಾವೇ ಜಗದ್ಗುರುಗಳೆಂಬ ಅಹಂಭಾವನೆ ಯನ್ನು ತೋರಿಸಲುಪಕ್ರಮಿಸಿರುತ್ತಾರೆ. ಈಗಲೂಕೂಡ ಇವರು ಈ ರಹ ಸ್ಯವನ್ನು ತಿಳಿದರೆ ನ್ಯಾಯವಾದ ಕಾರ್ಯಗುರುಗಳಾಗಿ ಪರಿಣಮಿಸುವರು.

## ಕೊಡೆಕಲ್ಲು ಬಸಪ್ಪನವರ ಮಠ.

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಲಾ ಇಲಾಹ ಇಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹಿ

ಕೊಡಕಲ್ಲು ಬಸಪ್ಪನವರ ಮಠದಲ್ಲಿಯು ಇದೇ ಮಹಾ ವಾಕ್ಯವು ಮುಕ್ತಿದಾಯಕವೆಂದು ಗಣಿಸಲ್ಪಟ್ಟು ಕಂಡು ಬಂದಿರುತ್ತದೆ. ಕೊಡೆಕಲ್ಲು ಬಸಪ್ಪನವರು ಕರ್ನಾಟಕದಲ್ಲಿ ಅನೇಕ ದಿವಸಗಳು ಸಂಚಾರಮಾಡಿ ಜ್ಞಾನವನ್ನು ಹರಡಿದರು. ಇವರು ವೀರಶೈವ ಶರಣರಲ್ಲಿ ಒಬ್ಬ ಪ್ರಮುಖರು. ಅಂತ್ಯದಲ್ಲಿ ಇವರು ಕೊಡೆಕಲ್ಲು ಎಂಬ ಗ್ರಾಮದಲ್ಲಿ ಸಮಾಧಿಯಲ್ಲಿ ಐಕ್ಯರಾದರು. ಇವರ ಎರಡನೆಯ ಹೆಸರು ಮಹಮ್ಮದ್ ಸರ್ವರ್ ಎಂದು ತಿಳಿಯ ಬಂದಿರುತ್ತದೆ. ಇವರ ಗೋರಿಯು ಮುಸಲ್ಮಾನರ ಗೋರಿಯಂತೆಯು ಮತ್ತು ಇವರ ಪೂಜೆ ಮುಂತಾದವುಗಳು ಮುಸಲ್ಮಾನರ ಧರ್ಮಾನುಸಾರವಾಗಿಯೂ ಕಂಡುಬರುತ್ತವೆ. ಅಲ್ಲಿ ಓಂಕಾರೋಕ್ತವಾದ ಖುರ್ಆ ಮತ್ತು ಕೆಲವು ಕಾಲಜ್ಞಾನ ಗ್ರಂಥಗಳು ಇಡಲ್ಪಟ್ಟಿವೆ. ಇವುಗಳಲ್ಲಿ ವೀರವಸಂತನ ಪ್ರಸನ್ನತೆಯು ಹೆಚ್ಚಾಗಿ ಹೇಳಲ್ಪಟ್ಟಿರುತ್ತದೆ. ಇವರ ಗೋರಿಯ ದರ್ಶನಕ್ಕೆ ಅಕ್ಕಸಾಲಿಗರು ಮುಸಲ್ಮಾನರು ಹೆಚ್ಚಾದ ಭಕ್ತಿಯೊಡನೆ ಬರುತ್ತಾರೆ. ಈ ಮಹಾತ್ಮರು ಮೇಲಿನ ಮಹಾ ಮಂತ್ರದ ಪ್ರಚಾರಕ್ಕೆ ನಿಂತಿದ್ದ ಆಧಾರಕ್ಕೆ ಅದು ಈಗಲೂ ಅಲ್ಲಿ ಕಂಡುಬರುತ್ತದೆ.

---

## ತಿಂತಿಣಿ ಮೌನೇಶ್ವರ ಸ್ವಾಮಿಯ ಮಠವು.

ಲಾಇಲಾಹ ಯಿಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹಿ.

ಈ ಮಠಗಳಲ್ಲಿಯು ಮೇಲಿನ ಮಹಾ ವಾಕ್ಯವು ಸಂಭಾವಿಸಲ್ಪಟ್ಟಿರುತ್ತದೆ. ಈ ಮಹಾತ್ಮರು ಸುಮಾರು ಏಳುನೂರು ವರ್ಷಗಳಹಿಂದೆ ಇದ್ದಂತೆ ಅವರ ಸ್ವದಸ್ಥೂರು ಬರವಣಿಗೆಯಿಂದಲೇ ಕಂಡುಬರುತ್ತದೆ. ಇವರ ಮಠಗಳು

ತಿಂತಿಣಿ, ವರವಿ, ಇನ್ನು ಅನೇಕ ಕಡೆಗಳಲ್ಲಿ ಇವೆ. ಇವರಿಗೆ ಮೈನುದ್ದೀನಎಂಬ ಮತ್ತೊಂದು ಹೆಸರು ಇದ್ದಿತೆಂದು ತಿಳಿಯಬಂದಿರುತ್ತದೆ. ಈ ಪುರಾತನರು ಮೇಲಿನ ಮಹಾವಾಕ್ಯದ ಪ್ರಚಾರಕ್ಕಾಗಿಯೆ ಮರ್ತ್ಯದಲ್ಲಿ ಗೋಚರವಾಗಿದ್ದರು. ಇವರು ಮಕ್ಕ ಮತ್ತು ಮದೀನ ಮುಂತಾದ ಪವಿತ್ರ ಸ್ಥಳಗಳ ಯಾತ್ರೆಯನ್ನು ಮಾಡಿರುತ್ತಾರೆ. ಇವರು ಅಕ್ಕಸಾಲೆಯ ಕಸಬಿನವರೆಂದು ವಿದಿತವಾಗಿರುತ್ತದೆ. ಅಕ್ಕಸಾಲಿಗರು, ಬಡಗಿಯವರು, ಕುಂಬಾರರು, ಕಂಚುಗಾರರು ಮುಂತಾದ ಜನಗಳು ತಮ್ಮ ಗುರುಗಳೆಂದು ಇವರನ್ನು ನಂಬಿಕೊಂಡಿರುತ್ತಾರೆ. ಇವರಿಗೆ ಅನೇಕ ಮುಸಲ್ಮಾನರು ಶಿಷ್ಯರಿದ್ದರೆಂದು ಗೋಚರವಾಗಿದೆ. ಇವರ ಶಿಷ್ಯರಾದ ಅಕ್ಕಸಾಲಿಗರು ಈಗಲೂ ಮೇಲಿನ ಮಹಾವಾಕ್ಯವನ್ನು ಉಚ್ಚರಿಸಿ, ಪೂಜೆಯ ಕಾಲದಲ್ಲಿಯು ಮತ್ತು ಊಟದ ಕಾಲದಲ್ಲಿಯು "ಏಕ್‌ಲಾಕ್ ಅಸ್ಸಿಹಜಾರ್ ಪೀರ್ ಪೈಗಂಬರ್ ಮೈನುದ್ದೀನಕಿ ದೋಸ್ತ್ ಯಾರುದ್ದೀನ್ "ಎಂಬ ಜಯಘೊಷದೊಂದಿಗೆ ಮುಂದಿನ ಕೆಲಸವನ್ನು ಪ್ರಾರಂಭಿಸುತ್ತಾರೆ. ಇವರ ಗೋರಿಯು ತಿಂತಿಣಿಯಲ್ಲಿ ಇದೆ. ಇದು ನೈಜಾಮ ಇಲಾಖೆ ಷೋರಾಪುರದ ತಾಲ್ಲೂಕಿನಿಂದ ಸುಮಾರು ೨೪ ಮೈಲಿಗಳ ದೂರದಲ್ಲಿದೆ. ಈ ಗೋರಿಯು ಮುಸಲ್ಮಾನರ ಗೋರಿಯಂತೆ ಇರುತ್ತದೆ.

---

## ಕೊಪ್ಪಳದ ಸಿರಸಪ್ಪನ ಮಠ.

ಲಾ ಇಲಾಹ ಯಿಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹ.

ಮೇಲಿನ ಮಹಾ ವಾಕ್ಯವು ಕೊಪ್ಪಳದ ಮಠದಲ್ಲಿಯು ಪ್ರಾಧಾನವಾಗಿದೆ. ಈ ಮಹಾತ್ಮರು ಮೌನೇಶ್ವರರ ಶಿಷ್ಯರೆಂದು ತಿಳಿಯ ಬರುತ್ತದೆ. ಈ ಮಹಾತ್ಮರನ್ನು ಹಿಂದುಗಳು, ಸಿರಸಪ್ಪನೆಂದೂ ಮತ್ತು ಮುಸಲ್ಮಾನರು ಸೈಲಾನಿ ಬಾದಷಹ ಎಂದೂ ಕರೆಯುತ್ತಾರೆ. ಇವರ ಗೋರಿಯು ಮುಸಲ್ಮಾನರ ಗೋರಿಯ ಪ್ರಕಾರವೇ ಇರುತ್ತದೆ. ಮತ್ತು ಇವರ ಒಂದು ಕಿರೀಟವನ್ನು ಇಟ್ಟು ಯಿರುತ್ತಾರೆ. ಇಲ್ಲಿಯ ಅರ್ಚಕರು ಅಕ್ಕಸಾಲಿಗರು. ಇವರು ಮುಸಲ್ಮಾನರಂತೆ ಹಸುರು ವಸ್ತ್ರಗಳನ್ನು ಧರಿಸಿ, ಗಡ್ಡವನ್ನು ಬಿಟ್ಟು ಮುಜಾವರರಂತೆ ಕಾಣುತ್ತಾರೆ. ಇವರು ಪೂಜೆಯ ಕಾಲದಲ್ಲಿ 'ಏಕ್‌ಲಾಕ್ ಅಸ್ಸಿ ಹಜಾರ್ ಪೀರ್ ಪೈಗಂಬರ್ ಕಿದೋಸ್ತ್ ಯಾರುದ್ದೀನ್ " ಎಂದು

ಹೊಗೆಳುತ್ತಾರೆ. ಇಲ್ಲಿಯ ವಾರ್ಷಿಕೋತ್ಸವವು ಮೊಹರ್ರಂ ತಿಂಗಳಲ್ಲಿ ಬಹು ವಿಜೃಂಭಣೆಯಿಂದ ನಡೆಯುತ್ತದೆ. ಇಲ್ಲಿಗೆ ಸುತ್ತಲಿನ ಅಕ್ಕಸಾಲಿಗರು ಬಹಳ ಭಕ್ತಿಯಿಂದ ಬಂದು ಶಿಷ್ಯಭಾವನೆಯಿಂದ ನಡೆದುಕೊಳ್ಳುತ್ತಾರೆ. ಇವರ ಮಠವು ಮುಸಲ್ಮಾನರ ಮುಸೂತಿಯಂತೆ ಇದೆ. ಪೂರ್ವದಲ್ಲಿ ಇದು ಮುಸೂತಿ ಎಂದೆ ಹೇಳಬೇಕಾಗಿದೆ.

---

## ಕಡಗಂಚಿ ಮರುಳಾರಾಧ್ಯ ಸಂಪ್ರದಾಯಕ ಮಠ.

ಲಾ ಇಲಾಹ ಯಿಲ್ಲಲ್ಲಾಹು ಮುಹಮ್ಮದರ್ ರಸೂಲುಲ್ಲಾಹ್.

ಕಡಗಂಚಿಯ ಮಠದಲ್ಲಿ ಮೇಲಿನ ಮಹಾ ಮಂತ್ರವು ಅವಿಚ್ಛಿನ್ನವಾಗಿ ರಾರಾಜಿಸುತ್ತಾ ಇದೆ. ಈ ಮಠವು ಮಳೆಯ ಮಲ್ಲೇಶನೆಂಬ ಪುರಾತನರಿಂದ ಸ್ಥಾಪಿತವಾಯಿತು. ಇವರು ತಮ್ಮ ಜೀವಮಾನ ಕಾಲದಲ್ಲಿ ಏಳುನೂರು ಜನ ಖಲಂದರರೊಂದಿಗೆ ಮುಕ್ಕಾ ಮತ್ತು ಮದೀನಾದ ಯಾತ್ರೆಗಳನ್ನು ಮಾಡಿದರು. ಅಲ್ಲಿ ಇವರು ಅನೇಕ ಪವಾಡಗಳನ್ನು ಗೆದ್ದಿರುವರು. ಮೇಲಿನ ಮಹಾವಾಕ್ಯಾಧೀನರಾಗಿ ಗುರುವಿನ ಆಜ್ಞೆಯನ್ನು ಪಡದು, ಅಲ್ಲಿ ಮೇಷಯಾಗವನ್ನು ಮಾಡಿ ತೃಪ್ತಿಯನ್ನುಹೊಂದಿ ಬಂದು ತಮ್ಮ ಮಠದಲ್ಲಿಯು ವರ್ಷಕ್ಕೊಂದು ಸಾರಿ ಯಾಗವನ್ನು ಮಾಡುವ ನೇಮವನ್ನು ನೆಲಗೊಳಿಸಿದರು. ಈಗ ಆಲ್ಲಿ ಇದು ನಡೆಯುತ್ತಾ ಇದೆ. ಈ ಮಹಾತ್ಮರು ಕಡಗಂಚಿಯಲ್ಲಿಯೆ ಲಿಂಗೈಕ್ಯವಾದರು. ಇವರ ಸ್ವಲ್ಪ ವಿಷಯವು ಚನ್ನಬಸವ ಪುರಾಣದಲ್ಲಿಯು ಬಂದಿರುತ್ತದೆ. ಇಲ್ಲಿ ಚರಮೂರ್ತಿ ಶಾಂತವಮಲ್ಲೇಶಪ್ಪ ನೆಂಬುವರು ಅಧಿಪತ್ಯವನ್ನು ವಹಿಸಿರುತ್ತಾರೆ. ಇವರು ಹಿಂದಿನ ನಿಯಮಗಳನ್ನು ಬಿಡದೆ ನಡೆಯಿಸಿಕೊಂಡು ಬಂದಿರುತ್ತಾರೆ.

---

## ಶಿರಹಟ್ಟಿ ಫಕೀರಸ್ವಾಮಿಗಳವರ ಮಠವು.

لَآ إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಲಾಇಲಾಹಾ ಇಲ್ಲಲ್ಲಾಹು ಮೊಹಮ್ಮದರ್ ರಸೂಲುಲ್ಲಾಹಿ.

ಮೇಲಿನ ಮಹಾಮಂತ್ರವು ಶಿರಹಟ್ಟಿಯ ಮಠದಲ್ಲಿಯು ಬೆಳಗುತ್ತಾ ಇದೆ. ಶಿರಹಟ್ಟಿ ಗದಗಿನಿಂದ ಸ್ವಲ್ಪದೂರದಲ್ಲಿ ಇದೆ. ಫಕೀರಸ್ವಾಮಿ ಎಂಬ ಮಹನೀಯರು ಸುಮಾರು ಐದುನೂರು ವರ್ಷಗಳಹಿಂದೆ ಇದ್ದರೆಂದು ವಿದಿತವಾಗುತ್ತದೆ. ಈ ಮಹನೀಯರು ಒಬ್ಬ ವೀರಶೈವ ಗೃಹಸ್ಥನಮನೆಯಲ್ಲಿ ಜನಿಸಿದರು. ಇವರ ತಾಯಿತಂದೆಗೆ ಮಕ್ಕಳು ಆಗದೇ ಇದ್ದಕಾರಣ, ಇವರ ತಾಯಿಯು ಖಾಜಾ ಅವಿಾನದೀನ ಬ್ರಹ್ಮಾನಂದೈಕ್ಯ ಇವರಲ್ಲಿ ಹರಕೆಯನ್ನು ಬೇಡಿಕೊಂಡಿದ್ದಳು. ಮಗು ಹುಟ್ಟಿದಮೇಲೆ ಆ ಬ್ರಹ್ಮಾನಂದರ ಪರೋಪಕಾರವನ್ನು ಮರತು ಬಿಟ್ಟದ್ದಳು. ಒಂದಾನೊಂದುದಿವಸ ಈ ವಗುವಿಗೆ ಎಂಟನೆಯವರ್ಷದ ವಯಸ್ಸಿನಲ್ಲಿ ಜ್ವರಬಂತು. ಈಜ್ವರವು ಪ್ರಾಪ್ತವಾದನಂತರ ಅನೇಕಜನ ವೈದ್ಯರುಗಳಿಂದ ಪರೀಕ್ಷಿಸಿ ವಿಷಮಜ್ವರವೆಂದು ನಿಶ್ಚಯಿಸಿ ಕ್ಲುಪ್ತದಿವಸಗಳವರೆಗೆ ವೈದ್ಯೋಪಚಾರಗಳನ್ನುನಡಸಿದರು. ಆದರೂ ಜ್ವರವು ಶಾಂತವಾಗಲಿಲ್ಲ. ಇದನ್ನು ಕಂಡು ತಾಯಿತಂದೆಗಳು ಚಿಂತಾಕ್ರಾಂತರಾಗಿದ್ದರು. ಅದೇದಿವಸ ರಾತ್ರಿಯಲ್ಲಿ ತಾಯಿಯ ಸ್ವಪ್ನದಲ್ಲಿ ಖಾಜಾ ಅವಿಾನದೀನ್ ಬ್ರಹ್ಮಾನಂದಸ್ವಾಮಿಗಳು ಬಂದು ಪೂರ್ವದಲ್ಲಿ ನೀವು ಮಾಡಿಕೊಂಡ ಹರಿಕೆಯನ್ನು ಮರತುಬಿಟ್ಟಿರುವಿರಿ, ಇನ್ನಾದರು ಪೂರೈಸಬಾರದೇನು? ಎಂದು ಅಂದು ಅದೃಶ್ಯವಾದರು. ಅನಂತರ ತಾಯಿ ಗಬರಮ್ಮನು ಎಚ್ಚರವಾಗಿನೋಡಲು ಅಲ್ಲೇ ತನ್ನಮಗುವಿನ ಸವಿಾಪದಲ್ಲಿ ಆರೈಕೆಯಿಂದ ಚಿಂತಾತುರನಾಗಿ ಕುಳಿತಿರುವ ತನ್ನ ಪತಿಯನ್ನು ಕಂಡು, 'ಈ ಮಗನನ್ನು ಹೆರುವದಕ್ಕಿಂತಾ ಪೂರ್ವದಲ್ಲಿ ನಾನು ಬ್ರಹ್ಮಾನಂದೈಕ್ಯರೆಂಬ ಸಾಧುಗಳ ಆಶ್ರಮಕ್ಕೆ ಹೋಗಿ ವ್ರತೀಯಾಳಾಗಿ ನಡದುಕೊಂಡು ಮೊದಲಿನ ಗರ್ಭದಲ್ಲಿ ಹುಟ್ಟಿದ ಶಿಶುವನ್ನು ನಿಮಗೆ ಕೊಡುತ್ತೇನೆಂದು ಹರಿಕೆಯನ್ನು ಮಾಡಿಕೊಂಡು ಹೆತ್ತೆನು.

ಆ ಹರಿಕೆಯು ಪೂರೈಸಿ ಪುತ್ರ ಪ್ರಾಪ್ತಿಯಲ್ಲಿಯೇ ಮನಸ್ಸು ನುಗ್ಗಾಗಿ ನಿಮಗೆ ಸಹ ನಾನು ಹೇಳಲಿಲ್ಲ. ಈ ಮರವೆಯ ತಪ್ಪನ್ನು ಕ್ಷಮಿಸಬೇಕೆಂದು ಬೇಡಿಕೊಂಡಳು. "ಮತ್ತು ಈಗಲೇ ನನ್ನ ಸ್ವಪ್ನದಲ್ಲಿ ಬ್ರಹ್ಮಾನಂದೈಕ್ಯರು ಬಂದು ನೊದಲು ನೀವು ಪುತ್ರವಾಂಛಿತರಾಗಿ ನಾಡಿಕೊಂಡ ಹರಿಕೆಯನ್ನು ಇನ್ನಾದರೂ ಪೂರೈಸಬಾರದೇನು?" ಅಂದು ಅದೃಶ್ಯರಾದರೆಂದು ಹೇಳಿದ ಸತಿಯ ವಾಕ್ಯಗಳನ್ನು ಶಿವಪ್ಪನು ಕೇಳಿ ವ್ಯಾಕುಲಮನಸ್ಸಿನಿಂದ ಅಂದದ್ದು, "ತೇಜಃಪುಂಜನಾಗಿಯೂ ಆಜಾನುಬಾಹು-ಉಳ್ಳವನಾಗಿಯೂ ಅಗಲವಾದ ಎದೆಯೂ ವಿಶಾಲನೇತ್ರಗಳೂ ದೇಖಾ ರಥಾಂಗ ಸರಸೀರುಹ ಶಂಖ ಚಿನ್ಹೆ ಗಳಿಂದ ಚಿನ್ಹಿತನಾದ ಹಸ್ತಗಳುಳ್ಳೀ ಬಾಲಕನು ನನ್ನ ಗರ್ಭದಲ್ಲಿ ಜನಿಸಬೇಕಾದರೆ ಬ್ರಹ್ಮಾನಂದೈಕ್ಯರವರ ವರಪ್ರಸಾದಬಲದಿಂದಲ್ಲದೇ ಲೋಕವ್ಯವಹಾರ ರೀತಿಯಿಂದ ಜನಿಸಿದ್ದರೆ ಇಂಥಾ ಸದ್ಗುಣಾಲಂಕೃತನು ಜನಿಸುವದು ದುರ್ಲಭ ವಿತ್ತು. ಆದರೇ ಈ ಸತ್ಪುತ್ರನು ನನಗೆ ಹ್ಯಾಗೆ ದಕ್ಕುವನು? ನಾವು ಬ್ರಹ್ಮಾನಂದೈಕ್ಯಸಾಧುಗಳು ಕೊಟ್ಟಿರುವಂಥ ಹರಿಕೆಯನ್ನು ಪೂರೈಸಲಿಲ್ಲ. ಇದು ನಮ್ಮ ತಪ್ಪೆಂದು ತಂದೆತಾಯಿಗಳೀರ್ವರೂ ಬಂದು ವಿಶಾಲವಾದ ತೊಟ್ಟಿಲಲ್ಲಿ ಮಗುವನ್ನು ಹಾಕಿಕೊಂಡು ಸಾಧುಗಳ ಆಶ್ರಮಕ್ಕೆ ಬಂದು ಮಗುವಿನ ತೊಟ್ಟಿಲನ್ನು ಬ್ರಹ್ಮಾನಂದ ಸಾಧುಗಳವರ ಪರ್ಣಕುಟೀರದಲ್ಲಿ ಇಳಿಸಿದರು. ಆಗ ಮಗನ ರುಜೀಯ ಚಿನ್ಹೆಗಳನ್ನು ತಿಳಿದು ತಂದೆತಾಯಿ ಗಳೀರ್ವರು ತೆರಿಯಲ್ಪಟ್ಟ ಕವಾಟದಿಂದ ಯುಕ್ತವಾದ ಋಷ್ಯಾಶ್ರಮದಲ್ಲಿ ಪ್ರವೇಶಿಸಿ ತಮ್ಮ ಮುಂಭಾಗದಲ್ಲಿಯೆ ಸಾಹ್ಷಾತ್ ಪರಬ್ರಹ್ಮನಂತೆ ವಿಜ್ಞಾನಮುದ್ರೆ ಯಿಂದ ಕುಳಿತಿರುವ ಎತಿಕುಲೋತ್ತಮರನ್ನು ಕಂಡು ಸಾಷ್ಟಾಂಗ ಪ್ರಣಾಮ ಗಳಿಂದ ನಮಸ್ಕರಿಸಿ ಭಯಾನ್ವಿತರಾಗಿ ನಿಂದಿರಲು, ತ್ರಿಕಾಲ ಜ್ಞಾನಿಗಳಾದ ತಪಸ್ವಿಗಳು ಆ ತಂದೆತಾಯಿಗಳನ್ನು ಕುರಿತು ನೀವು ಬಂದಸಂಗತಿಯು ಗೋಚರವಾಯಿತು. ನಿಮ್ಮ ವಚನೋದ್ಧಾರ ನಿಮಿತ್ತವಾಗಿ ತಂದ ನಮ್ಮ ಮಗುವಿನ ತೊಟ್ಟಿಲನ್ನು ಇಲ್ಲೇ ಸಮೀಪದಲ್ಲಿಯೇ ಇರಿಸಬೇಕೆಂದು ಅಪ್ಪಣೆ ಯನ್ನೀಯಲು ಆಗ ಸತಿಪತಿಗಳೀರ್ವರು ತಮ್ಮ ಮಗುವನ್ನು ಸಾಧುಗಳ ಬಲ ಭಾಗದಲ್ಲಿ ಇರಿಸಿ ಪುನಃ ವಂದನೆಯನ್ನುಮಾಡಿದರು. ಸಾಧುಗಳು ನಿಶ್ಚಿತ ನಾದ ಮಗುವಿನ ಸರ್ವಾಂಗಗಳಲ್ಲಿ ತಮ್ಮ ಹಸ್ತಗಳಿಂದ ಸ್ಪರ್ಶಿಸಲು ಆ ಬಾಲ ಕನಿಗೆ ಚೇತನಬಂದು ರಾಹುವಿನಿಂದ ಬಿಡಲ್ಪಟ್ಟ ಚಂದ್ರನಂತೆ ರುಜೆಯಿಂದ

ಬಿಡಲ್ಪಟ್ಟು ಸುಖದಿಂದ ನಲಗಿದವರು ನೈನುರಿದು ಏಳುವಂತೆ ಎದ್ದು, ತೊಟ್ಟಿಲಿನಿಂದಿಳಿದು ಮುಂದಿರ್ದ ಸಾಧುಗಳಿಗೆ ನಮಸ್ಕರಿಸಿ ಕರಾಂಜಲಿಬದ್ಧತೆಯಿಂದ ಏನು ಅಪ್ಪಣೆ ಎಂದು ನಿಂದಿರಲು ಅವನನ್ನು ಋಷಿಗಳು ಸಂಪೂರ್ಣ ಕೃಪಾದೃಷ್ಟಿಯಿಂದ ನೋಡಿ ನುಗುವಿನ ಮಸ್ತಕವನ್ನು ಬೋಳ್ಯೆಸಿ ನುಂದಲೆ ಕಂಪನಾಘ್ರಾಣಿಸಿ ಮುಸಲ್ಮಾನಿಯಿಂದ ಆಶೀರ್ವಾದಗಳನ್ನಿತ್ತು ಅಂದದ್ದು "ಅಬ್ ಸೊಬ್ ದುನ್‌ಯಾಕಿ ಫಿಕರ್ ಚೋಡಕರ್ ತುಮ್ ಫಕೀರ ಹೋಗಯೆ" ಎಂದು ಅಂದರು. ಅದು ಏನಂದರೆ, ಈಗ ನೀವು ಜಗತ್ತಿನ ಜಂಜಡವನ್ನು ಬಿಟ್ಟು ಸನ್ಯಾಸಿಗಳಾಗಿದ್ದೀರಿ. ತುಮ ಫಕೀರ್ ಹೋಗೈ ಅಂದದ್ದರಿಂದ ಅವರಿಗೆ ಅಂದಿನಿಂದ ಫಕೀರ್ ಸ್ವಾಮಿಗಳೆಂಬ ನಾಮ ಪ್ರಾಪ್ತವಾಯಿತು. ಎಲ್ಲಾ ಜನರು ಅದರಂತೆ ಫಕೀರ್‌ಸ್ವಾಮಿಗಳೆಂದು ಕರಿಯಲಿಕ್ಕೆ ಪ್ರಾರಂಭಿಸಿದರು. ಇನ್ನೂ ಇವರಿಗೆ ಅದೇ ನಾಮವು ಶಾಶ್ವತವಾಗಿ ಉಳಿಯಿತು.

ಬ್ರಹ್ಮಾನಂದ ಸಾಧುಗಳು ಫಕೀರಸ್ವಾಮಿಗಳಿಗೆ ನಿರಾಕಾರ ಪ್ರಾರ್ಥನೆಯನ್ನು ಕಲಿಸಿ ಶ್ರವಣ ಮನನ ನಿಧಿ ಧ್ಯಾಸಾದಿಗಳ ಸಾಧನಗಳನ್ನು ಮಾಡಿಸಿ ಅಷ್ಟಾಂಗಯೋಗಗಳನ್ನು ತಿಳಿಸಿ ರಾಜಯೋಗ ಜ್ಞಾನಮಾರ್ಗ ಅನುವರ್ತಿಗಳನ್ನು ಚನ್ನಾಗಿ ತೋರಿಸಿ ಉದ್ಧಾರಮಾಡಿದರು. ಫಕೀರಸ್ವಾಮಿ ಇವರು ಕೆಲವು ದಿವಸ ಸಾಧುಗಳ ಆಶ್ರಮದಲ್ಲಿ ಇದ್ದು ಲೋಕಸಂಚಾರಕ್ಕೊಸ್ಕರ ಉತ್ತರ ಹಿಂದುಸ್ಥಾನಕ್ಕೆ ಹೋದರು. ಅಲ್ಲಿ ನುಖ್ಯ ಮುಖ್ಯವಾದ ಸಾಧುಗಳ ದರ್ಶನವನ್ನು ಮಾಡುತ್ತ ನುತ್ತು ಕುರುಹು ತೋರುತ್ತ ಡೆಲ್ಲಿ ಪಟ್ಟಣಕ್ಕೆ ಬಂದು ಬಾದಶಾಹನ ದರಬಾರಿನಲ್ಲಿ ಕೆಲವು ಮಹತ್ವಗಳನ್ನು ತೋರಿಸಿ ದಕ್ಷಿಣಕ್ಕೆ ಬಂದರು. ಇಲ್ಲಿ ಸಂಚಾರಮಾಡುವ ಕಾಲಕ್ಕೆ ಶಿರಹಟ್ಟಿ ಎಂಬ ಗ್ರಾನುದಲ್ಲಿ ಜಗತ್ತುದ್ಧಾರನಾಡುವ ಕೆಲವು ಕುರುಹುಗಳನ್ನು ಕಂಡು ಅಲ್ಲೇ ತಮ್ಮ ಪೀಠವನ್ನು ಸ್ಥಾಪಿಸಿದರು. ತಾವು ಲಿಂಗೈಕ್ಯವಾಗುವ ಕಾಲದಲ್ಲಿ ಈ ಗುರುಣಾಂಗುರುವಿನ ವಾಕ್ಯ "ಲಾ ಇಲಾಹಾ ಇಲ್ಲಲ್ಲಾಹು ಮೊಹಮ್ಮದುರ್ ರಸೂಲುಲ್ಲಾಹ" ಉಚ್ಚರಿಸಿ ಇದೇ ತಮ್ಮ ಮುಕ್ತಿಗೆ ಮುಖ್ಯವಾದಮಂತ್ರ ಶಿಕ್ಷಾಶೈಲ ಅಂದರೆ ಇದೇ ಮಹಾವಾಕ್ಯ ತಮ್ಮ ಮಠದಲ್ಲಿ ಇಟ್ಟೇ ಇದೆಯೆಂದು ಹೇಳಿ ಸ್ವರ್ಗಸ್ಥರಾದರು. ಈಗಾದರು, ಅಲ್ಲಿ ಪಟ್ಟಾಧಿಕಾರಿ ಉತ್ಸವವೇಳೆಯಲ್ಲಿ ಸಿಂಹಾಸನದಮೇಲೆ ಕೂಡುವಾಗ ಇದೇ ಮಹಾವಾಕ್ಯ " ಲಾ

ಇಲಾಹಾ ಇಲ್ಲಲ್ಲಾಹು ಮೊಹಮ್ಮದುರ್ ರಸೂಲುಲ್ಲಾಹ್ " ಉಚ್ಚರಿಸುವ ರೂಢಿ ಉಂಟು. ಮತ್ತು ಈ ಪಟ್ಟದವರು ಲಿಂಗೈಕ್ಯವಾದ ನಂತರ ಮುಸಲ್ಮಾನರ ಧರ್ಮಪ್ರಕಾರ ನಿಯಮಗಳನ್ನು ತೀರಿಸಿ ಸಮಾಧಿಮಾಡುತ್ತಾರೆ. ಮತ್ತು ಈ ಮಠದ ವಾರ್ಷಿಕ ಮಹೋತ್ಸವದಲ್ಲಿ ಅಮಿನದೀನ್ ಅಲಾ ಬ್ರಹ್ಮಾನಂದರ ಗಾದಿ ಅಧಿಕಾರಿಗಳಿಂದ ಕೆಲವು ಫಕೀರರು ಬಂದು ದೀನ ಜಗಾಸುವರೂಢಿ ಉಂಟು. ಇಸ್ಲಾಮಧರ್ಮದಂತೆ ಯಜ್ಞವನ್ನು ಇಲ್ಲಿಸಹ ಮಾಡುತ್ತಾರೆ.

---

## ವರವಿ ಮೌನೇಶ್ವರ ಸ್ವಾಮಿಯಮಠ

ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ್.

ಈ ಮಠವು ಗದಗಿನಿಂದ ಸುಮಾರು ಹದಿನೇಳುಮೈಲಿಯಾಗುತ್ತದೆ. ಮೌನೇಶ್ವರರಿಂದ ಇದು ಸ್ಥಾಪಿತವಾಯಿತು. ಈ ಮಠದ ಸಮೀಪದಲ್ಲಿ ಒಂದು ಚಿಕ್ಕ ಹೊಳೆಯು ಹರಿಯುತ್ತದೆ. ಅಲ್ಲಿ ವಿವಿಧಭಾಷೆಯ ಶಿಲಾಶಾಸನಗಳು ಸಿಕ್ಕುತ್ತವೆ. ಇಲ್ಲಿ ಮೌನೇಶ್ವರಸ್ವಾಮಿಯವರು ಒಂದು ಮಠವನ್ನು ಕಟ್ಟಿಸಿರುತ್ತಾರೆ. ಇದು ಮುಸಲ್ಮಾನರ ಮಸೀತಿಯೆ ಹೊರತು ಮತ್ತೆ ಬೇರೆಯಲ್ಲ. ಈಚೆಗೆ ಅಲ್ಲಿ ಜನರು ಅಲ್ಲಿ ಲಿಂಗವನ್ನು ನಿರ್ಮಿಸಿರುತ್ತಾರೆ. ಆದರೆ ಮೌನಪ್ಪಯ್ಯನವರು " ಆಕಾಶಭೂಕಾಂತಿ ಏಕಲಿಂಗವಿರಲಿಕ್ಕೆ ನನಗಾಕೊಪ್ಪತಿ ಲಿಂಗ" ಎಂದು ಶಿಲಾಪೂಜೆಯನ್ನು ಖಂಡಿಸಿರುತ್ತಾರೆ. ಆದರೆ ಜನರು ಅಜ್ಞಾನದಿಂದ ಮತ್ತರಾಗಿ ಆವರ ನಂತರ ಅಲ್ಲಿ ಲಿಂಗಸ್ಥಾಪ್ಯವನ್ನು ಮಾಡಿರುತ್ತಾರೆ. ಇವರು ಜಗದ್ಗುರುವಿನ ಮಹಾಮಂತ್ರಕ್ಕೆ ಆಧೀನರಾದ್ದರಿಂದಲೇ ಈಗಲು ಅಲ್ಲಿಯ ಪೂಜೆಯ ಕಾಲದಲ್ಲಿ " ಏಕ್‌ಲಾಕ್ ಅಸ್ಸಿ ಹಜಾರ್ ಫೀರ್ ಪೈಗಂಬರ್‌ಕಿ ದೋಸ್ತ್ ಯಾರುದ್ದೀನ್" ಎಂಬ ಜಯಘೋಷವನ್ನು ಮಾಡುತ್ತಾರೆ.

## ಹುಬ್ಬಳ್ಳಿ ಸಿದ್ಧಾರೂಢರ ಮಠ




"ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ"

ಈ ಮಠದ ಸ್ಥಾಪನೆಗೂ ಈ ಮಹಾಮಂತ್ರವೇ ಸಾಧಕವಾಗಿರುತ್ತದೆ. ಇದನ್ನು ಸಿದ್ಧಾರೂಢ ಸ್ವಾಮಿಯೆಂಬ ಒಬ್ಬ ಸಾಧುಗಳು ಸ್ಥಾಪಿಸಿದರು. ಇವರು ಸೈಯ್ಯದ್ ಅಮಿರ್ ಹುಸೇನ್ ಎಂಬ ಒಬ್ಬ ಮಹಮ್ಮದೀಯ ಜ್ಞಾನಿಗಳಿಂದ ಆತ್ಮರಹಸ್ಯಗಳನ್ನು ತಕ್ಕಮಟ್ಟಿಗೆ ಗ್ರಹಣಮಾಡಿ ಜನರಿಗೆ ಸಾಧ್ಯವಾದಷ್ಟರಮಟ್ಟಿಗೆ ಮಾರ್ಗವನ್ನು ತೋರಿಸುತ್ತಿದ್ದರು. ಆ ಮಹಮ್ಮದೀಯ ಜ್ಞಾನಿಗಳಿಗೆ ಇತ್ತಿತ್ತ ಕಬೀರ್‌ದಾಸ್ ಎಂಬ ಹೆಸರು ಬಂದಿತ್ತು. ಆರೂಢಸ್ವಾಮಿಗಳು ಜಗದ್ಗುರುವಿನ ಈ ಮಹಾವಾಕ್ಯವನ್ನು ತಮ್ಮ ತೇರಿನಮೇಲೆ ನಿರ್ಮಿಸಿರುತ್ತಾರೆ. ಇವರು ವಿಗ್ರಹಾರಾಧನೆಗಳಿಗೂ, ಪಂಚಮಹಾಸೂತಕಗಳಿಗೂ, ದುರಾಭಿಮಾನಗಳಿಗೂ ದೂರರಾಗಿ ಅಖಂಡಮೂರ್ತಿ ಎಂದೆನಿಸಿಕೊಂಡಿರುತ್ತಾರೆ. ಆದರೆ ಇವರು ಮೇಲಿನ ಮೂಲಮಂತ್ರದ ರಹಸ್ಯವನ್ನು ತಿಳಿಯದಾದಕಾರಣ ಜನರಿಗೆ ಆತ್ಮಸಾಕ್ಷಾತ್ಕಾರಗೊಳಿಸದವರಾಗಿರುತ್ತಾರೆಯೇ ಹೊರತ, ಮಿಕ್ಕ ವಿಷಯಗಳಲ್ಲಿ ನಿಸ್ಸೃಹರಾಗಿರುತ್ತಾರೆ.

---

## ಸಿಂಧು ಇಲಾಖೆಯ ಬಾಬಾ ನಾನಕ್‌ಷಹರ ಮಠ.




"ಲಾ ಇಲಾಹ ಇಲ್ಲಲ್ಲಾಹು ಮಹಮ್ಮದರ್ ರಸೂಲುಲ್ಲಾಹ"

ಈ ಮಹೋತ್ಕರ ಪೀಠವೂ ಕೂಡ ಈ ಮಹಾ ಮಂತ್ರವನ್ನೇ ತನ್ನ ಮೂಲವಾಗಿ ಸೂಚಿಸುತ್ತದೆ. ಬಾಬಾ ನಾನಕ್‌ಷಹರವರು ದೈವಸಾನ್ನಿಧ್ಯ

# بابا نانک کا چولہ

## ಬಾಬಾನಾನಕರನಿಲುವಂಗಿ.



ವನ್ನು ಹೊಂದಲು ಸರಿಯಾದ ಮಾರ್ಗಾಪೇಕ್ಷೆಗಳಾಗಿ ಮಕ್ಕಾದ ಯಾತ್ರೆ ಯನ್ನು ಮಾಡಿ ಅಲ್ಲಿ ಗುರುಸಾನ್ನಿಧ್ಯವನ್ನು ಪಡದು ಹಿಂದಿರುಗಿ ಮೇಲಿನ ಮಹಾಮಂತ್ರದ ರಹಸ್ಯವನ್ನು ಪಂಜಾಬಿನ ಜನಗಳಿಗೆ ತಿಳಿಸಿ ಅನೇಕರನ್ನು ಬಂಧನಗಳಿಂದ ಬಿಡಿಸಿಕೊಂಡರು. ಇದಕ್ಕೆ ಸಾಕ್ಷಿಯಾಗಿ ಈ ಮಹಾತ್ಮರು ಪಂಜಾಬಿಭಾಷೆಯಲ್ಲಿ "ಅವ್ವಲ್‌ನಾಮು ಖುದಾಕಲೆ, ದೂಜಾನಾಮು ರಸೂಲ್" ಎಂದರೆ "ಲಾಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾ" ಎಂಬದಾಗಿ ತಮ್ಮ ಮತಾಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈಗ ಇವರ ಅನುಯಾಯಿಗಳು ಸುಮಾರು ೧೮ ಲಕ್ಷಕ್ಕಿಂತಲೂ ಹೆಚ್ಚಾಗಿರು ತ್ತಾರೆ. ಇವರಿಗೆ "ಸಿಕ್ಖ" ರೆಂದು ಕರೆಯುವ ವಾಡಿಕೆಯುಂಟು. ಇವರು ಬಹು ಪರಾಕ್ರಮಶಾಲಿಗಳಾದ ಯೋಧರು. ಈಗ ತಮ್ಮನ್ನು ಕ್ಷತ್ರಿಯರೆಂದು ಕರೆದುಕೊಳ್ಳುತ್ತಾರೆ. ಮೊದಲು ಇವರು ಯಜ್ಞ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಮತ್ತು ಪ್ರತಿಗ್ರಹ, ಎಂಬ ಷಡ್ಕರ್ಮಗಳನ್ನು ಆಚರಿಸು ತ್ತಿದ್ದರು. ಇತ್ತಿತ್ತ ಇವುಗಳೆಲ್ಲಾ ಹೋಗಿ ಕ್ಷತ್ರಿಯವರ್ಣದ ಕರ್ಮವನ್ನು ಮಾತ್ರ ಇವರು ಆಚರಿಸುವಂತೆ ಕಾಣುತ್ತಾರೆ. ಆ ಮಹಾತ್ಮರು ತೊಟ್ಟಿದ್ದ ಕಾವಿಯ ನಿಲುವಂಗಿಯು ಈಗಲೂ ಇದೆ. ಅದರ ಮೇಲೆ ಕುರಾನಿನ ಪವಿತ್ರ ವಾದ ವಾಕ್ಯಗಳು ಬರೆಯಲ್ಪಟ್ಟಿವೆ. ಮತ್ತು ಮೇಲಿನ ಮೂಲಮಂತ್ರವು ಕೂಡ ಅದರಮೇಲೆ ಬರೆಯಲ್ಪಟ್ಟಿರುತ್ತದೆ. ಅಲ್ಲಿಯ ಅರ್ಚಕರು ಈಗಲೂ ಆ ನಿಲುವಂಗಿಯ ಒಂದು ಕೊನೆಯನ್ನು ಮಾತ್ರ ತೋರಿಸುತ್ತಾರೆ. ಆ ನಿಲುವಂಗಿಯ ಚಿತ್ರವನ್ನು ಚಿತ್ರಪಟದಲ್ಲಿ ನೋಡಬಹುದು. ಕಂಠದಲ್ಲಿಯು, ಹೃದಯ ಸ್ಥಳದಲ್ಲಿಯು ಮತ್ತು ಎರಡು ಭುಜಗಳ ಮೇಲೆಯೂ ಈ ಮಹಾ ಮಂತ್ರವೇ ಬರೆಯಲ್ಪಟ್ಟಿರುತ್ತದೆ. ಕಂಠ ಮತ್ತು ಭುಜಗಳಮೇಲೆ "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ್" ಎಂಬದಾಗಿಯು ಮತ್ತು ಹೃದಯ ಸ್ಥಳದಲ್ಲಿ" ಆ ಷಹದು ಅನ್ನ ಲಾ ಇಲಾಹ ಇಲ್ಲಲ್ಲಾಹು, ನಅಷಹದು ಅನ್ನ ಮಹಮ್ಮದನ್ನ ಅಬ್ದುಹುವ ರಸೂಲುಹು" ಎಂದು ಬರೆ ಯಲ್ಪಟ್ಟಿರುತ್ತದೆ. ಇದರಿಂದ ಈ ಮಹಾತ್ಮರು ಈ ಮೂಲ ಮಂತ್ರಾಧೀನ ರಾಗಿಯೇ ಗುರುತ್ವವನ್ನು ಪಡೆದಿರೆಂದು ಸ್ಪಷ್ಟವಾಗಿ ತಿಳಿಯಬರುತ್ತದೆ.

## ಶೃಂಗೇರಿ ಶ್ರೀ ಶಂಕರಾಚಾರ್ಯರ ಮಠ

"ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ"

ಮೇಲಣ ಮೂಲಮಂತ್ರವು ಪ್ರಸಿದ್ಧಿಯನ್ನು ಹೊಂದಿದ ಶ್ರೀ ಶಂಕರಾಚಾರ್ಯರ ಪೀಠದಲ್ಲಿಯು ಕೂಡ ಮರ್ಯಾದಿಸಲ್ಪಟ್ಟಿದೆ. ಈ ಸಿಂಹಾಸನ ಸ್ಥಾಪಕರ ವಿಷಯವು ಸ್ವಲ್ಪಮಟ್ಟಿಗೆ ಹಿಂದೆಯೇ ಬಂದಿರುತ್ತದೆ. ಶ್ರೀ ಶಂಕರಾಚಾರ್ಯರು ಜಗದ್ಗುರುವಿನ ಈ ಮಹಾಮಂತ್ರದ ಮಹಿಮೆಯನ್ನು ತಿಳಿದು ಆತ್ಮಸಾನ್ನಿಧ್ಯವನ್ನು ಪಡೆದಿದ್ದರು. ಆದುದರಿಂದಲೇ ಇವರು ವಿಗ್ರಹಾರಾಧನೆಯನ್ನು ಖಂಡನೆಮಾಡಿ ನಿರಾಕಾರಮೂರ್ತಿಯಾದ ಪರಮಾತ್ಮನ ಪೂಜೆಯನ್ನು ಸೂನ್ಯಸ್ಥಲದಲ್ಲಿ ನೆರವೇರಿಸುವ ಸುಬೋಧನೆಗಳನ್ನು ತಿಳಿಸಿ ಜಗತ್ತಿನ ದುರಭಿಮಾನದಿಂದ ತುಂಬಿದ್ದ ದುಃಖವನ್ನು ದೂರಮಾಡಿದರು. ಈಗಲಾದರೊ ಅವರ ಅನುಯಾಯಿಗಳು ಆ ಮಹಾತ್ಮರದಾರಿಗೆ ವ್ಯತಿರಿಕ್ತವಾಗಿ ಆಚರಿಸುವರು. ಆ ಮಹನೀಯರು ಮುಂದೆಯಾದರೊ ಈ ಬೀಜ ಮಂತ್ರವೇ ಮುಕ್ತಿಗೆ ಮೂಲಕಾರಣವೆಂದು ತಿಳಿದು ಅದನ್ನು ಸನ್ಮಾನಿಸಿರುತ್ತಾರೆ.

ಹಿಂದೆ ಉದಾಹರಿಸಿರುವ ಸ್ಥಳಗಳಲ್ಲಿಯಲ್ಲದೆ ಈ ಮಹಾಮಂತ್ರವು ಏಷ್ಯ, ಯೂರೋಪ್, ಅಮೆರಿಕ, ಆಫ್ರಿಕ, ಓಷಿಯಾನಿಯ ಮುಂತಾದ ಖಂಡಗಳಲ್ಲಿಯು ಕೂಡ ಅವಿಚ್ಛಿನ್ನವಾಗಿ ಬೆಳಗುತ್ತಿರುವುದು. ಈ ಮಹಾವಾಕ್ಯವೇ ಜಲನಿಧಿಗಳಲ್ಲಿಯು ಎಂದರೆ ಮತ್ಸ್ಯ ಮುಂತಾದ ಜಲಚರಗಳ ಮೇಲೆಯು ಸ್ವಭಾವತಃ ಬರೆಯಲ್ಪಟ್ಟಿರುವುದನ್ನು ಅನೇಕಜನ ಮಹನೀಯರು ಈ ಸ್ಥೂಲ ಕಣ್ಣುಗಳಿಂದಲೇ ನೋಡಿರುತ್ತಾರೆ. ಸ್ವರ್ಗದ ಬಾಗಿಲಮೇಲೆಯು ಮತ್ತು ಆದಿಮಾನ್ನವನಹೆಬ್ಬೆರಳುಗಳ ಮೇಲೆಯು ಇದೇ ಮಹಾವಾಕ್ಯವು ಬರೆಯಲ್ಪಟ್ಟಿರುವುದೆಂದು ಆಗಮಗಳಿಂದ ತಿಳಿದು ಬಂದಿರುತ್ತದೆ. ವಿವಿಧ ರೀತಿಗಳಿಂದ ನೋಡಿದರೂ ಈ ಮಹಾಮಂತ್ರವು ಸರ್ವಾಂತರ್ಯಾಮಿಯಾಗಿರುವುದು.

ಈ ದೇವೋಕ್ತಮಂತ್ರವು ಜಗತ್ಪರಿತವಾಗಲು ಅನೇಕ ಕಾರಣಗಳುಂಟು. ಹಿಂದಿನ ಯುಗಗಳಲ್ಲಿ ಆಯಾಯ ದೇಶಗಳಲ್ಲಿ ಒಂದೊಂದು ಜನಾಂಗದ ಆತ್ಮೋನ್ನತಿಗೆ ಅನೇಕಾವತಾರಿಗಳು ಬಂದು ಬೇರೆ ಬೇರೆ ಧರ್ಮವನ್ನು

ಸ್ಥಾಪಿಸಿದರು. ಅವರ ಧರ್ಮಗಳು ಒಂದೊಂದು ಜನಾಂಗದ ಪರಿಪಾಲನೆಗೆ ಮಾತ್ರ ಬಂದಿದ್ದರಿಂದ ಜಗತ್ತಿನ ದುಃಖವನ್ನು ದೂರಮಾಡುವುದಕ್ಕೆ ಬದಲಾಗಿ ಒಬ್ಬೊಬ್ಬರಲ್ಲಿ ದ್ವೇಷಾಸೂಯೆಗಳನ್ನು ಹೆಚ್ಚಿಸಿದವು. ಆಲ್ಲದೆ, ಧರ್ಮಕ್ಕೆ ವ್ಯತಿರಿಕ್ತವಾದ ವರ್ಣಸಂಕರಗಳು ಇವರಲ್ಲಿ ತೋರಿದವು. ಆದುದರಿಂದ ಪರಮಾತ್ಮನು ಪ್ರಪಂಚಕ್ಕೆ ಒಂದಾಗೆ ಬೇಕಾದಂಥ ಸ್ವಭಾವಾನುಗುಣವಾದ ಅನಾದಿ ಧರ್ಮವನ್ನೂ ಮತ್ತು ಪ್ರಪಂಚದ ನಾಭಿಸ್ಥಾನದಲ್ಲಿ ಜಗದ್ಗುರುವಿನ ಅವತಾರವನ್ನು ಜಗತ್ತಿಗೆ ಪ್ರಸನ್ನಪಡಿಸಿ ಭೇದಭಾವಗಳನ್ನು ದೂರ ಮಾಡುವ ರಹಸ್ಯವನ್ನು ಬೋಧಿಸುವ ಈ ಮಹಾಮಂತ್ರವನ್ನೂ ಜಗತ್ತಿಗೆ ತೋರ್ಪಡಿಸಿದನು. ಜಗದ್ಗುರು ನಾಮಾಂಕಿತರಾದ ಹಜರತ್ ಮಹಮ್ಮದ್ ಪೈಗಂಬರರ ಹೊರತು ಹಿಂದಿನ ಯಾವ ಅವತಾರಿಯು "ನಾನು ಜಗತ್ತಿನ ಎಲ್ಲಾ ಜನಗಳ ಧರ್ಮಪಾಲನೆಗಾಗಿ ಅವತರಿಸಿರುತ್ತೇನೆ" ಎಂದು ಹೇಳಿಲ್ಲ. ಅವರಿಗೆ ಆ ಅಧಿಕಾರವು ಇರಲಿಲ್ಲ. ಮುಂದೆಯೂ ಇವರ ಧರ್ಮವೇ ಜಗದ್ಬರಿತವಾಗೆ ಬೇಕಾಗಿರುವುದರಿಂದ ಈ ಬೀಜಮಂತ್ರವು ಸರ್ವಮಯವಾಗಿ ತೋರುತ್ತದೆ. ಪರಮಾತ್ಮನು ಓಂಕಾರೋಕ್ತವಾದ ಕುರಾನಿನಲ್ಲಿ "ಇನ್ನದ್ದೀನಯಿಂದಲ್ಲಾಹಿಲ್ ಇಸ್ಲಾಂ" ಎಂದರೆ ಪ್ರಪಂಚದಲ್ಲಿ "ಪರಮಾತ್ಮನ ಸ್ವಭಾವಾನುಗುಣವಾದ ಮತವು ಇಸ್ಲಾಂಹೊರತು ಮತ್ತೊಂದಿಲ್ಲ" ಎಂದು ಸಾರಲ್ಪಟ್ಟಿರುತ್ತದೆ. ಮತ್ತು "ಲಹು ಆಸಲಮಾಮ್ಅಫಿಸ್ ಸಮಾವಾತೇವಲ್ ಅರ್ದೆ" ಎಂದರೆ ಇದರಿಂದಲೆ ಪ್ರಪಂಚದಲ್ಲಿ ಶಾಂತಿಯು ನೆಲೆಗೊಳ್ಳುವುದು" ಎಂದು ಸರ್ವಶಕ್ತನಾದ ಪರಮಾತ್ಮನು ತಿಳಿಸಿರುತ್ತಾನೆ. ಇಂಥಾ ದೈವಮತವನ್ನು ಎಲ್ಲರಿಗೂ ಬೋಧಿಸಿ ಸರ್ವಜನಿಕ ಶಾಂತತೆಯನ್ನು ಉಂಟುಮಾಡುವ ಹಜರತ್ ಮಹಮ್ಮದರೆ "ಬ್ರಹ್ಮಾಕೃತ ಶಿವಸಹಸ್ರನಾಮಸು । ವೃತ್ಯುಂಜಯ ಸ್ಮೃಷ್ಟ್ಯ ತನು ರ್ಜಗದ್ವ್ಯಾಪಿ ಜಗದ್ಗುರು" ಎಂಬ ಬಿರುದನ್ನು ಹೊಂದಿ ರಾರಾಜಿಸುತ್ತಿರುವರು. ಈ ವಿಷಯವು ಮುಂದೆ ವಿಶದವಾಗಿ ತಿಳಿಯಬರುವುದು.

# ಹಜರತ್ ಮಹಮ್ಮದ್ ಪೈಗಂಬರರು.

ಬ್ರಹ್ಮಾಗೃತ ಶಿವಸಹಸ್ರನಾಮ ಸು |
ವ್ಯತ್ಯುಂಜಯ ಸ್ಸೂಕ್ಷ್ಮತನುರ್ಜಗದ್ವ್ಯಾ ಪಿ ಜಗದ್ಗುರು ||

## ಒಂದನೆಯ ಪ್ರಮಾಣವು.

ಬ್ರಹ್ಮಾಂಡಗಳ ಸೃಷ್ಟಿ, ಸ್ಥಿತಿ, ಲಯಗಳಿಗೆ ಈಶ್ವರನೊಬ್ಬನೆ ಕರ್ತನು. ಆತನೆ ರಜೋಗುಣದಲ್ಲಿ ಸೇರಿ ಉತ್ಪತ್ತಿಗೆ ಬ್ರಹ್ಮನೆನಿಸಿದನು. ಸಾತ್ವಿಕ ಗುಣದಲ್ಲಿ ಸೇರಿ ರಕ್ಷಿಸಲು ವಿಷ್ಣುವೆನಿಸಿ ಮೆರೆದನು. ತಮೋಗುಣದಲ್ಲಿ ಸೇರಿ ಸಂಹಾರಕ್ಕೆ ರುದ್ರನೆಂದು ಕರೆಯಲ್ಪಟ್ಟನು. ಪರಮಾತ್ಮನು ಒಬ್ಬನಾಗಿ ಬೇರೆ ಬೇರೆ ಸ್ವರೂಪಗಳಿಂದ ಕಾರ್ಯಕಾರಣ ಲೀಲೆಗಳನ್ನು ವಹಿಸಿದನು. ಮತ್ತು ಕಾಲಕಾಲಕ್ಕೆ ಅವತರಿಸಿದ ಮಹಾತ್ಮರಲ್ಲಿ ಭಿನ್ನ ಭಿನ್ನ ಸ್ವರೂಪಗಳಿಂದ ಮೆರೆದಿರುತ್ತಾನೆ. ಜಗದ್ಗುರುವಾದವನಾದರೊ ಪ್ರಪಂಚದಲ್ಲಿ ಸಾಕ್ಷಾತ್ ಈಶ್ವರನ ತ್ರಿಗುಣಲೀಲೆಗಳನ್ನು ತೋರಿ, ಭಿನ್ನಭಿನ್ನ ಸ್ವರೂಪಗಳನ್ನು ಧರಿಸಿದ ಅವತಾರಿಗಳಿಗೆ ಅಧಿಕಾರಿಯಾಗಿ ಸರ್ವಜಗತ್ತಿನ ಆತ್ಮಸಾಕ್ಷಾತ್ಕಾರಕ್ಕೆ ಅವತರಿಸಿರುತ್ತಾನೆ. ಪರಮಾತ್ಮನು ಇದರ ಸಲುವಾಗಿ ದೇವೋಕ್ತವಾದ ಕುರಾಣನಲ್ಲಿ ಬಹು ಸ್ಪಷ್ಟವಾದ ರೀತಿಯಲ್ಲಿ ಧೃಢಪಡಿಸಿರುತ್ತಾನೆ.

"ಕುಲ್, ಯಾ ಅಯ್ಯುಹನ್ನಾಸೊ ಇನ್ನೀರಸೂಲುಲ್ಲಾ
ಹಿ ಇಲೈಕೂಂಜಮಿಯಾ, ನಿಲ್‌ಲಜಿಲಹುಮು
ಲ್ಮುಸ್ಸಮಾವಾತೆವಲ್ ಅರ್ದ್"

(ಕುರಾನ್ ಅಧ್ಯಾಯ ೭೨, ೨೦ನೇ ಸಂಧಿ)

ಅರ್ಥ:—ಓ ! ಮಹಮ್ಮದ್, ಸಾರಿ ಹೇಳಿ "ಎಲ್ಲೆ ಮನುಜರೆ ! ನಾನು ಸ್ವರ್ಗ, ಮರ್ತ್ಯಗಳ ಒಡೆಯನಾದ ಪರಮಾತ್ಮನಿಂದ ನಿಮ್ಮೆಲ್ಲರ ಸಲುವಾಗಿ ಕಳುಹಿಸಲ್ಪಟ್ಟಿರುವುದು ವಾಸ್ತವ್ಯವು".

ಈ ಮೇಲಿನ ನುಡಿಗಳನ್ನು ಈಶ್ವರ ಪ್ರಸನ್ನರಾದ ಹಜರತ್ ಮುಹಮ್ಮದ್ ಪೈಗಂಬರರಹೊರತು ಮತ್ತಾವ ಅವತಾರಿಗಳೂ ಆವಕಾಲದಲ್ಲಿಯೂ ಆವದೇಶದಲ್ಲಿಯೂ ಹೊರಪಡಿಸಿಲ್ಲ. ಇಂಥಾ ಜಗದ್ರಕ್ಷಕನಾದ ಮುಹಾನು ಭಾವನು "ಬ್ರಹ್ಮಾಕೃತ ಶಿವಸಹಸ್ರನಾಮ ಸು | ಮೃತ್ಯುಂಜಯಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||" ವಲ್ಲದೆ ಇತರನು ಆಗಬಲ್ಲನೆ? ಎಂದಿಗೂ

ಇಲ್ಲಾ – ಮತ್ತು ಇದಕ್ಕೆ ಪರಮಾತ್ಮನ ಪ್ರಮಾಣವುಂಟು.

ವಮಾ ಆರ್‌ಸಲ್‌ನಾಕ ಇಲ್ಲಾ ಕಾಫ್ಫತಲ್ಲಿನ್ನಾಸೆ |
ಬಷೀರಂವನನಜೀರಂವನಲಾಕಿನ್ನಕ್‌ಸರನ್ನಾಸೆ
ಲಾಯಾ ಲಮೂನ್ ||

(ಕುರಾನ್ ಅಧ್ಯಾಯ ೩೪, ಸಂಧಿ ೩, ವಾಕ್ಯ ೨೮)

ಅರ್ಥ:—ಎಲೈ ಪ್ರವಾದಿಯೆ! ನಾವು ನಿನ್ನನ್ನು ಸರ್ವಜನರಿಗೂ ಸುವಾರ್ತೆಯನ್ನು ಮತ್ತು ಎಚ್ಚರಿಕೆಯನ್ನು ಕೊಡುವಸಲುವಾಗಿಯೇ ಹೊರತು ಕಳುಹಿಸಲಿಲ್ಲ. ಆದರೆ ಬಹುಜನರು ಇದನ್ನು ತಿಳಿಯದವರಾಗಿರುತ್ತಾರೆ.

ಮೇಲಿನ ವಾಕ್ಯದಿಂದ ಹಜರತ್ ಮುಹಮ್ಮದ್ ಪೈಗಂಬರರನ್ನು ಪರಮಾತ್ಮನು ಸರ್ವಜನರ ಸ್ಥೂಲಸೂಕ್ಷ್ಮಾಭಿವೃದ್ಧಿಗೆ ತಕ್ಕ ಬೋಧನೆಗಳೊಡನೆ ಕಳುಹಿಸಿರುತ್ತಾನೆಂದು ವಿಶದವಾಗಿ ತಿಳಿಯಬರುತ್ತದೆ. ಆದುದರಿಂದಲೆ ಈತನು "ಬ್ರಹ್ಮಾಕೃತ ಶಿವಸಹಸ್ರನಾಮ ಸು | ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು||" ಎಂಬ ಬಿರುದಾವಳಿಗೆ ಅರ್ಹನಾಗಿರುತ್ತಾನೆ. ಇದಕ್ಕೆ ಆಧಾರವಾಗಿ ಮತ್ತೊಂದು ಪ್ರಮಾಣ ಉಂಟು.

"ವಮಾ ಆರ್‌ಸಲ್‌ನಾಕ ಇಲ್ಲಾ ರಹಮತಲ್ಲಿಲ್ ಆಲಮಿನ"

(ಕುರಾನ್ ಅಧ್ಯಾಯ ೨೧, ಸಂಧಿ ೭, ವಾಕ್ಯ ೧೦೭)

ಅರ್ಥ:—ಓ! ಪ್ರವಾದಿಯೆ! ನಾವು ನಿನ್ನನ್ನು ತ್ರಿಲೋಕಗಳಿಗೂ ದಯಾಸಮುದ್ರನನ್ನಾಗಿಮಾಡಿಯೇ ಹೊರತು ಕಳುಹಿಸಲಿಲ್ಲ.

ಮೇಲಿನ ಆಧಾರದಿಂದಲೂ ಪರಮಾತ್ಮನು ಹಜರತ್ ಮುಹಮ್ಮದ್ ಪೈಗಂಬರರನ್ನು ಪ್ರಪಂಚಕ್ಕೆಲ್ಲಾ ಒಬ್ಬರನ್ನಾಗಿ ಮಾಡಿ ಕಳುಹಿಸಿರುತ್ತಾನೆಂದು ಸ್ಪಷ್ಟವಾಗಿ ವಿದಿತವಾಗಿರುತ್ತದೆ.

ಓಂಕಾರೋಕ್ತದ ಆಧಾರಗಳಲ್ಲದೆ ಹಜರತ್ ಮಹಮ್ಮದ್ ಪೈಗಂಬರರು ಸ್ವತಹ ತಮ್ಮ ಬಾಯಿಯಿಂದ ತಮ್ಮ ಪದಾಂತದ ಘನತೆಗಳನ್ನು ಬಿಚ್ಚಿಹೇಳಿರುವುದಕ್ಕೆ ಬೇಕಾದಷ್ಟು ಸುನುಡಿಗಳನ್ನು ನಾವು ಉದಹರಿಸುತ್ತೇವೆ.

ಅನಾ ನಬೀಯುನ್ ಲಿಲ್ ಅಸವದವ ಲಿಲ್ |
ಅಹಮರ ಅನಾಖಾತಿಮುನ್ ನಬಿಯಿನ ಅಲಾ ಅನ್ನ
ಹು ಲಾನಬಿಯಬಾದಿ ॥ (ಹದೀಸ್)

ಅರ್ಥ:—ನಾನು ಸರ್ವಮಾನವರ ಆತ್ಮಾಭಿವೃದ್ಧಿಗೆ ಬಂದಿರುತ್ತೇನೆ, ಕೆಂಪುವರ್ಣದವರಾಗಲಿ ಅಥವ ಕಪ್ಪುವರ್ಣದವರಾಗಲಿ, ನಾನು ಸರ್ವ ಅವತಾರಿಗಳ ಮುದ್ರೆಯಾಗಿ ಬಂದಿರುತ್ತೇನೆ. ನನ್ನ ರಾಜ್ಯವು ಸ್ವರ್ಗ, ಮರ್ತ್ಯಗಳನ್ನು ಆವರಿಸುತ್ತದೆ. ಇದರ ಹೊರತು ಮತ್ತಾವುದೂ ಇಲ್ಲಾ.

" ಯೋಹಷರುನ್ನಾಸೋ ಅಲಾಖದಮಿ " (ಹದೀಸ್)

ಅರ್ಥ:—ಕುಲ ಹದಿನೆಂಟು ಜಾತಿಗಳು ನನ್ನ ಪಾದಗಳಮೇಲೆ ಬೀಳುವರು. ಪ್ರಳಯಕ್ಕೆ ನಾನೇ ಅಧಿಪತಿ, ಮತ್ತಾರಿಲ್ಲವು.

ಇದಲ್ಲದೆ ಜಗದ್ಗುರುವಿನ ಆಜ್ಞೆಗೆ ಒಳಪಟ್ಟು ಅನುಯಾಯಿಯಾದವರೆ ಪುನಃ ಕಾರಣ ಮತ್ತು ಕಾರ್ಯಗುರುಗಳಾಗಿ ಪರಿಣಮಿಸಬೇಕು. ಇದೂ ಕೂಡ ಜಗದ್ಗುರುವಿನ ಘನತೆಗೆ ಸಾಧಕವಾದುದು. ಇದರ ಸಲುವಾಗಿಯೂ ದೇವೋಕ್ತಪ್ರಮಾಣಗಳು ಅವಿಚ್ಛಿನ್ನವಾಗಿ ತುಂಬಿರುವುವು.

ಕುಲ್ ಇನ್‌ಕುಂ ತುಂತೊಹಿಬ್ಬೂನಲ್ಲಾಹ |
ಫತ್ ತಬಿವೂನೀ ಹೆಬೆಬ್‌ಕು ಮುಲ್ಲಾಹ ॥

(ಕುರಾನ್ ಅಧ್ಯಾಯ ೩, ಸಂಧಿ ೪, ವಾ. ೩೦).

ಅರ್ಥ:—ಓ! ಪ್ರವಾದಿಯೇ ! ಸಾರಿ ಹೇಳು. " ಎಲ್ಲೆ ಮನುಜರೆ ! ನೀವು ಪರಮಾತ್ಮನ ಪ್ರೀತಿಗೆ ಪಾತ್ರರಾಗಬೇಕಾದರೆ ನನ್ನ ಸಾನ್ನಿಧ್ಯವನ್ನು ಪಡೆಯಿರಿ. ಆಗ ಪರಮಾತ್ಮನು ನಿಮ್ಮನ್ನು ಪ್ರೀತಿಸುವನು. ಮತ್ತು

ಹುವಲ್ಲಜೀಬಅಸಫಿಲ್ ಉಮ್ಮಿ ಈನ |
ರಸೂಲಂ ಮಿನ್‌ಹುಂ ಯತ್‌ಲೂ ಅಲೈಹಿಂ ಆಯಾತಿಹಿ !
ವಯುಜಕ್ಕೀಹಿಂ ವಯು ಅಲ್ಲಿ ಮುಹಮುಲ್‌ಕಿತಾಬವಲ್ |
ಹಿಕಮು, ವಯಿನ್‌ಕಾನು ಮಿನ್‌ಖಬಲುಲಫಿಜಲಾಲಿಮ್ಮುಬೀನ್ ||
ವ ಆಖರೀನ ಮಿನ್‌ಹುಮ್‌ಲಮ್ಮಾಯಲ್‌ಹಕೂ ಬಿಹಿಂ |
ವಹುವಲ್ ಅಜೀಜುಲ್ ಹಕೀಮ್ ||

(ಕುರಾನ್, ೬೨ನೆ ಅಧ್ಯಾಯ, ೧ ನೆಯ ಸಂಧಿ)

ಅರ್ಥ:—ಪರಮಾತ್ಮನೆ ! ಅವಿದ್ಯಾವಂತರಾದ ಜನರಲ್ಲಿ ಅವರಲ್ಲಿಯೆ ಒಬ್ಬಪ್ರವಾದಿಯನ್ನು ಕಳುಹಿಸಿರುತ್ತಾನೆ. ಆತನು ಅವರಿಗೆ ಓಂಕಾರೋಕ್ತಿಗಳನ್ನು ತಿಳಿಸಿ, ನಿರ್ಮಲರನ್ನಾಗಿ ಮಾಡಿ, ಜ್ಞಾನವನ್ನು, ಕಟ್ಟಳೆಗಳನ್ನು ಬೋಧಿಸುತ್ತಾನೆ. ಇದಕ್ಕೆ ಮೊದಲು ಆ ಜನರು ದುರ್ಮಾರ್ಗರಾಗಿದ್ದುದು ವಾಸ್ತವ್ಯವು. ಮತ್ತು ಮುಂದೆ ಅವತರಿಸುವ ಮಹನೀಯರಿಗೆಲ್ಲಾ ಈತನೆ ದಾರಿಯನ್ನು ತೋರುವನು, ಇವೆಲ್ಲವು ಜ್ಞಾನಿಯು ಮತ್ತು ಶಕ್ತನು ಆದ ಪರಮಾತ್ಮನಿಂದಲೆ ಇವೆ.

ಮೇಲೆ ಬರೆಯಲ್ಪಟ್ಟಿರುವ ದೇವೋಕ್ತಿಗಳಿಂದ ಹಜರತ್ ಮಹಮ್ಮದ್ ಪೈಗಂಬರರೆ ಹಿಂದಿನವರಿಗೂ ಮುಂದಿನವರಿಗೂ ಸನ್ಮಾರ್ಗದಾಯಿಗಳೆಂದು ಸ್ಪಷ್ಟವಾಯಿತು. ಆದುದರಿಂದ ಭೂತ, ಭವಿಷ್ಯದ್ವರ್ತಮಾನಕಾಲಗಳಿಗೆ ಇವರೇ ಆತ್ಮಸಂರಕ್ಷಣಾಧಿಕಾರಿಗಳೆಂದು ತಿಳಿದುಬರುತ್ತದೆ. ಆದರೆ ಇದೇ ವಿಷಯಗಳು ಅವರ ಸ್ವಂತ ನುಡಿಗಳಿಂದಲೂ ಹೊರಪಡುತ್ತವೆ.

ಅನಾಮಿನ್ ನೂರಿಲ್ಲಾಹಿ |
ವಕುಲ್ಲೂಷಯನ್‌ಮಿನ್ ನೂರಿ || ( ಹದೀಸ್ )

ಅರ್ಥ:—ನಾನು ಪರಮಾತ್ಮನ ತೇಜಸ್ಸಿನಿಂದ ಹುಟ್ಟಿದ್ದೇನೆ ಮತ್ತು ನನ್ನ ತೇಜಸ್ಸಿನಿಂದ ಸರ್ವ ಜಗತ್ತು ಹುಟ್ಟಿರುತ್ತದೆ.

ಲೌಕಾನ ಮೂಸಾವ ಈಸಾಹೈಯ್ಯೆನ |
ಲಮಾವಸೆಯಹುಮ್ಮಾ ಇಲ್ಲೆತ್ತೆಬಾಯಿ || (ಹದೀಸ್)

(ಇಬನೆ ಕಸೀರ ಭಾಗ ೨, ಪುಟ ೨೪೬)

ಅರ್ಥ:—ನನ್ನ ಕಾಲದಲ್ಲಿ ಮೂಸಾಪೈಗಂಬರರು ಮತ್ತು ಈಸಾಪೈಗಂಬರರು ಬದುಕಿದ್ದರೆ ನನ್ನಲ್ಲಿಯೇ ಅವರು ದೀಕ್ಷೆಯನ್ನು ಹೊಂದಿ ನನ್ನ ಭಕ್ತರಾಗಿಯೇ ಆಚರಿಸುತ್ತಿದ್ದರು.

ಮತ್ತು

ಮಾ ಮಿನ್ ನಬೀಯುನ್ ಇಲ್ಲಾಲಹು |
ನಜೀರುನ್ ಮಿನ್ ವುಮ್ಮತಿ ||  (ಹದೀಸ್)

(ಕನ್‌ಜುಲ್ ಉಮ್ಮಾಲ ಭಾಗ ೬, ಪುಟ ೧೯೩)

ಅರ್ಥ:—ಹಿಂದೆ ಹೋದ ಅವತಾರಿಗಳೆಲ್ಲರು ಪುನಃ ನನ್ನ ಅನುಯಾಯಿಗಳಾಗಿಯೇ ಹುಟ್ಟುವರು. ಇದಲ್ಲದೆ

ಉಲ್‌ಮಾವೊ ಹಾಜಿಹಿಲ್ ವುಮ್ಮತಿ |
ಕ ಅಂಬಿಯಾಯೆ ಸಾಯರಿಲ್ ವುಮಮ್ ||  (ಹದೀಸ್)

(ಪುತುಹಾತೆ ಮಕ್ಕಿ ೧ನೇ ಭಾಗ, ಪುಟ ೫೭೦)

ಅರ್ಥ:—ಕೃತಾ, ತ್ರೇತಾ, ದ್ವಾಪರ ಮತ್ತು ಸಂಧಿ ಕಲಿಯಲ್ಲಿ ಹುಟ್ಟಿರುವ ಅವತಾರಿಗಳು, ಮುನಿಗಳು, ಶರಣರು, ಇವರೆಲ್ಲರು ನನ್ನ ಅನುಯಾಯಿಗಳ ಸ್ವರೂಪವನ್ನೆ ಧರಿಸುತ್ತಾರೆ.

ಪುನಃ

ಯಾ ಅಬಾಬಕರಿನ್ ಮಿಸ್‌ಲಕಫಿಲ್
ಅಂಬಿಯಾಯೆ ಕಮಿಸ್‌ಲೆ ಇಬ್ರಾಹೀಮು |
ಯಾವುಮುರೋ ಮಿಸ್‌ಲಕಫಿಲ್‌ಅಂಬಿ |
ಯಾಯೆ ಕಮಿಸ್ ಲೆನ್ನೂಹಿನ್.  (ಹದೀಸ್)

(ಕಂಜೂಲ್‌ವುಮ್ಮಾಲ ೬ನೇ ಭಾಗ, ಪುಟ ೧೪೪)

ಅರ್ಥ:—ನನ್ನ ಅನುಯಾಯಿಗಳಲ್ಲಿ ಇಬ್ರಾಹಿಂ ಪೈಗಂಬರರನ್ನು ನೋಡಬೇಕಾದರೆ ಅಬೂಬಕರಸಿದ್ದೀಖ್‌ರವರನ್ನು ನೋಡಿರಿ, ನೂಹು ಪೈಗಂ

ಬರರನ್ನು ನೋಡಬೇಕಾದರೆ ಉಮರ್‌ರವರನ್ನು ನೋಡಿರಿ, ಎಂದು ಹೇಳಿರುವುದಲ್ಲದೆ, ಒಟ್ಟಿಗೆ ಮುಸಲ್ಮಾನರಿಗೆ ಪರಮಾತ್ಮನು ವಹಿಸಿಕೊಟ್ಟಿರುವುದೇನೆಂದರೆ.—

ವಕಜಾಲಿಕ ಜಅಲ್‌ನಾಕುಂ ವುಮ್ಮತಂವವಸತಲ್‌ಲ್ಲಿ
ತಕೂನೂ ಷೊಹದಾ ಅಲನ್ನಾಸೆ ವಯಕೂನ
ರ್ರಸೂಲೊ ಅಲ್ಲೈಕುಮ್ ಷಹೀದಾ (ಕು. ಅಧ್ಯಾಯ ೨, ಸಂಧಿ ೧೭)

ಅರ್ಥ:—ಪರಮಾತ್ಮನು ಹೇಳುತ್ತಾನೆ " ಓ ಮುಸ್‌ಲಿಮರೆ ನಿಮ್ಮನ್ನು (ಪೃಥ್ವಿಯ ನಾಭಿಯಲ್ಲಿ ಹುಟ್ಟಿಸಿ) ಎಲ್ಲಾ ಜನಾಂಗಗಳಿಗೂ, ಕುಲಗಳಿಗೂ ಉತ್ತಮರನ್ನಾಗಿ ಮಾಡಿರುತ್ತೇನೆ. ಕಾರಣವೇನೆಂದರೆ, ಗೋಳಾಕಾರವುಳ್ಳ ವಸ್ತುವಿಗೆ ಕೇಂದ್ರಸ್ಥಾನವೇ ಆಧಾರಸ್ಥಾನವು. ಅದೇಪ್ರಕಾರ ಮಿಕ್ಕ ಕುಲಗಳಿಗೆಲ್ಲಾ ಸುಬೋಧನೆಗಳನ್ನು ಬೋಧಿಸಲು ಅಧಿಕಾರಿಗಳಾಗಿರಬೇಕು. ತನ್ಮಲ್ಲಿಯೆ, ಮುಂದೆ ಪ್ರಪಂಚದಲ್ಲಿ ಕಾರಣಗುರುಗಳಾಗಿಯು, ಕಾರ್ಯಗುರುಗಳಾಗಿಯು ಅವತಾರಿಗಳು ಜನಿಸುವರು. ನಿಮಗಾದರೊ ಹಜರತ್ ಮಹಮ್ಮದ್ ಪೈಗಂಬರರೊಬ್ಬರೇ ಅಧಿಪತಿ ಇದ್ದಾರೆ.

ಮೇಲಿನ ಆಧಾರಗಳ ಸಾಧನೆಗೆ ಜಗತ್ತಿನಲ್ಲಿ ಸಾಕ್ಷಿಗಳು ಕಂಡು ಬರುತ್ತಾ ಇವೆ. ಹಜರತ್ ಮಹನ್ಮದ್ ಪೈಗಂಬರರ ಕಾಲದಿಂದ ಇದುವರೆಗೂ ಅವರನ್ನು ನಂಬಿರುವವರಿಗೆಮಾತ್ರ ಆತ್ಮಪ್ರಕಾಶ ಉಂಟಾಗಿದೆಯೇ ವಿನಹ ಮತ್ತೆ ಬೇರೆ ಇಲ್ಲ. ಮತ್ತು ಕಾಲಜ್ಞಾನಾಗಮಗಳ ಆಧಾರಕ್ಕೆ ಸರಿಯಾಗಿ ಬಂದಿರುವ ಅವತಾರಿಗಳೆಲ್ಲರು ಅವರ ಭಕ್ತರಾಗಿ ಅವತರಿಸಿ ಪ್ರಪಂಚದಲ್ಲಿ ಜನಗಳಿಗೆ ಸನ್ಮಾರ್ಗವನ್ನು ತೋರಿಸಿರುತ್ತಾರೆ. ಆದುದರಿಂದಲೆ ಈ ಮಹಾಪುರುಷರಾದ ಹಜರತ್ ಮಹಮ್ಮದ್ ಪೈಗಂಬರರು " ಬ್ರಹ್ಮಾಕೃತ ಶಿವಸಹಸ್ರ ನಾಮಸು | ಮೃತ್ಯುಂಜಯ ಸೂಕ್ಷ್ಮಾನುರ್ಜಗದ್ವ್ಯಾಪಿ ಜಗದ್ಗುರು " ॥ ಎಂಬ ಬಿರುದನ್ನು ಪಡೆದು ಈಶ್ವರ ಪ್ರಸನ್ನರಾಗಿರುವರು.

## ಎರಡನೆಯ ಪ್ರಮಾಣವು.

ಈತನ ಜೀವನ ಚರಿತ್ರೆಯಲ್ಲಿ
ಮಾನವನ ಸರ್ವ ನಂಬಿಕೆ, ನಡವಳಿಕೆಗಳು, ಸರ್ವಾವತಾರೀಕ ಶಕ್ತಿಗಳು ಮತ್ತು ಬೋಧಗಳು ಸಂಪೂರ್ಣವಾಗಿರುವುವು.

ಈ ಪ್ರಮಾಣದ ಪ್ರಕಾರ ಹಜರತ್ ಮಹಮ್ಮದ್ ಪೈಗಂಬರರೇ ಈ ಪದವಿಗೆ ಅರ್ಹರೆಂದು ಅವರ ಚರಿತಾಮೃತದಿಂದ ಸ್ಪಷ್ಟವಾಗಿ ತಿಳಿಯಬರುವುದು. ಇವರಲ್ಲಿ ಮನುಷ್ಯನ ಪ್ರತಿಯೊಂದು ಗುಣಕರ್ಮದ ಪ್ರಸನ್ನತೆಯು ಸಿದ್ಧವಾಗಿ ವಿದಿತವಾಗುವುದು. ಅನಾದಿ ಅಖಂಡಸ್ವರೂಪಿಗಳಾದ ಈ ಮಹಾತ್ಮರು ಯೋಧರಲ್ಲಿ ಯೋಧನಂತೆಯೂ, ಸೈನ್ಯಾಧಿಪತಿಗಳಲ್ಲಿ ಸೇನಾಧಿಪತಿಯಾಗಿಯು, ಕೂಲಿಗಾರರಲ್ಲಿ ಕೂಲಿಗಾರನಂತೆಯೂ, ರಾಜರಲ್ಲಿ ರಾಜನಂತೆಯೂ, ಮಹಾರಾಜರಲ್ಲಿ ಮಹಾರಾಜನಂತೆಯೂ, ವಕ್ಕಲಿಗರಲ್ಲಿ ವಕ್ಕಲಿಗನಂತೆಯೂ, ವ್ಯವಹಾರಿಗಳಲ್ಲಿ ವ್ಯವಹಾರಿಯಾಗಿಯೂ, ಶ್ರೀಮಂತರಲ್ಲಿ ಶ್ರೀಮಂತನಂತೆಯೂ, ಭಕ್ತರಲ್ಲಿ ಭಕ್ತನಂತೆಯೂ, ಗುರುಗಳಲ್ಲಿ ಮಹಾಗುರುವಿನಂತೆಯೂ, ಬ್ರಾಹ್ಮಣರಲ್ಲಿ ಬ್ರಾಹ್ಮಣನಾಗಿಯೂ, ಕ್ಷತ್ರಿಯರಲ್ಲಿ ಕ್ಷತ್ರಿಯನಂತೆಯೂ, ವೈಶ್ಯರಲ್ಲಿ ವೈಶ್ಯನಂತೆಯೂ, ಶೂದ್ರರಲ್ಲಿ ಶೂದ್ರನಂತೆಯೂ, ಒಪ್ಪುತ್ತಿದ್ದರು. ಅನಾಥರು, ಅಶಕ್ತರು, ಬಡವರು ಮತ್ತು ಕುರೂಪಿಗಳೆ ಮುಂತಾದವರಲ್ಲಿ ಅತಿ ಪ್ರೀತಿಯನ್ನೂ, ಭಕ್ತರು ಮತ್ತು ಸೇವಕರಲ್ಲಿ ಪ್ರೇಮವನ್ನೂ, ವಿದ್ವಾಂಸರಲ್ಲಿ ಮರ್ಯಾದೆಯನ್ನೂ, ದುಷ್ಟರಲ್ಲಿ ಕೋಪವನ್ನೂ, ಶತ್ರೆಗಳಲ್ಲಿ ದರ್ಪವನ್ನೂ ಇಟ್ಟುಕೊಂಡಿದ್ದರು. ಪೂರ್ವೀಕರಾದ ಅವತಾರಿಗಳ ವಿಶೇಷವಾದ ಗುಣಕರ್ಮಗಳು ಈ ಮಹಾಪುರುಷರಲ್ಲಿ ಅವಿಚ್ಛಿನ್ನವಾಗಿ ಪ್ರಜ್ವಲಿಸುತ್ತಿದ್ದವು. ಪರಮಗುರುಗಳಾದ ಹಜರತ್ ಮಹಮ್ಮದ್ ಪೈಗಂಬರರು ಶ್ರೀಕೃಷ್ಣ ಮತ್ತು ದಾವೂದ್ ಪೈಗಂಬರರಿಗಿಂತಲೂ ಪರಾಕ್ರಮಶಾಲಿಗಳಾಗಿಯೂ, ಸತ್ಯದಲ್ಲಿ ಹರಿಶ್ಚಂದ್ರ ಮತ್ತು ಅಯೂಬ್ ಪೈಗಂಬರರನ್ನು ಮೀರುವವರಾಗಿಯೂ, ತ್ಯಾಗದಲ್ಲಿ ಕರ್ಣ ಮತ್ತು ಇಬ್ರಾಹಿಂ ಪೈಗಂಬರರನ್ನು ಮರೆಸುವವರಾಗಿಯೂ, ತಾಳ್ಮೆಯಲ್ಲಿ ಗೌತಮಬುದ್ಧ ಮತ್ತು ನಿಸುಕ್ರಿಸ್ತರನ್ನು ನಾಚಿಸುವವರಾಗಿಯೂ, ಇಂದ್ರಿಯ ನಿಗ್ರಹದಲ್ಲಿ ಶ್ರೀರಾಮ

ಮತ್ತು ಯೂಸೂಫ್ ಪೈಗಂಬರರನ್ನು ಕಳೆಗುಂದಿಸುವವರಾಗಿಯೂ, ಮತ್ತು ಜಗತ್ತಿನ ಸರ್ವಾವತಾರಿಗಳನ್ನು ಮತ್ತು ಸತ್ಪುರುಷರನ್ನು ಮರೆಯಿಸುವ ಗುಣಕರ್ಮಗಳೊಂದಿಗೆ ಕಂಗೊಳಿಸುತ್ತಿದ್ದರು. ಪುರಾತನ ಮಹಾ ಪುರುಷರೆಲ್ಲರಿಗೂ ಇವರು ಬೀಜಪ್ರಾಯರಾಗಿ ಅವತರಿಸಿದರು. ಈ ಅದ್ವಿತೀಯರಾದ ಮಹಾತ್ಮರ ಜೀವನಚರಿತೆಯನ್ನು ವಿಶದವಾಗಿ ತಿಳಿಯಲಪೇಕ್ಷಿಸುವವರು "ಷಿಬ್ಲಿನೋಮಾನಿ" ಎಂಬ ಮಹನೀಯರಿಂದ ಬರೆಯಲ್ಪಟ್ಟಿರುವ ಇವರ ಚರಿತಾಮೃತವನ್ನು ಓದಿ ಗ್ರಹಿಸಬಹುದು.

ಸದ್ಯದಲ್ಲಿ ಇವರ ಜೀವನಾನದ ಕೆಲವು ಮುಖ್ಯ ವಿಷಯಗಳನ್ನು ಬರೆಯುವುದು ಅವಶ್ಯಕವಾಗಿ ತೋರುತ್ತದೆ. ಹಜರತ್ ಮಹಮ್ಮದ್ ಪೈಗಂಬರರ ಮಾತಾಪಿತೃಗಳು ಬಹಳ ಬಡವರಾಗಿದ್ದರು. ಇವರ ಮಾತಾಪಿತೃಗಳು ಅರಾಬ್ಯದೇಶದ ಮುಖ್ಯಪಟ್ಟಣವಾಗಿಯು ಮತ್ತು ಭೂಮಿಗೆ ನಾಭಿಯಾಗಿಯು ಇರುವ ಮಕ್ಕಾ ಪಟ್ಟಣದ ಉತ್ತಮ ವಂಶದಲ್ಲಿ ಖ್ಯಾತಿಯನ್ನು ಹೊಂದಿದ "ಖುರೇಯೇಷ್" ಎಂಬ ಮನೆತನಕ್ಕೆ ಸೇರಿದವರು. ಚಿನ್ಮಯ ಸ್ವರೂಪಿಗಳಾದ ಹಜರತ್ ಮಹಮ್ಮದರು ಜನ್ಮಗ್ರಹಣಮಾಡುವ ಆರುತಿಂಗಳ ತತ್ಪೂರ್ವದಲ್ಲಿಯೇ ಪಿತೃವಿಯೋಗವನ್ನು ಹೊಂದಿದರು ಮತ್ತು ಇವರು ಆರುವರ್ಷ ವಯಸ್ಸಿನವರಾಗಲು ಮಾತೆಯು ಚಿಕ್ಕವಯಸ್ಸಿನ ಈ ಬಾಲ ಮಹಾತ್ಮರನ್ನು ಶೈಶವಾವಸ್ಥೆಯಿಂದಲೂ ಸಲಹಿದ್ದ ಹಲೀಮು ಎಂಬ ದಾದಿಯ ವಶಮಾಡಿ, ಸ್ವರ್ಗಾರೋಹಣಮಾಡಿದರು. ಮಾತಾಪಿತೃವಿಯೋಗವನ್ನು ಹೊಂದಿದ ಕಲ್ಯಾಣಗುಣವಿಶಿಷ್ಟರಾದ ಈ ಬಾಲಸತ್ಪುರುಷರು ತಮ್ಮ ರಕ್ಷಣಾಕರ್ತೃವಾದ ಆ ದಾದಿಯ ಮನೆಯಲ್ಲಿ ಕುರಿಗಳನ್ನು ಕಾಯುತ್ತಿದ್ದರು. ಆ ಕಾಲದಲ್ಲಿ ತಮ್ಮ ಬಾಲ್ಯ ಸಹವಾಸಿಗಳಾದ ಬಾಲಕರಿಗೆ ಅನೇಕ ಪವಾಡಗಳನ್ನು ತೋರುತ್ತಿದ್ದರು. ಇದೇರೀತಿಯಲ್ಲಿ ಇವರ ಬಾಲಲೀಲೆಯು ಕೆಲವು ದಿವಸಗಳನ್ನು ಕೊನೆಗೆಂಡಿತು. ಬಹು ಚಿಕ್ಕ ವಯಸ್ಸಿನಿಂದಲೂ, ಇವರು ವಿಗ್ರಹಾರಾಧನೆಯನ್ನು ಒಪ್ಪುತ್ತಿರಲಿಲ್ಲ. ಬ್ರಹ್ಮಸ್ವರೂಪಿಯಾದ ಈ ಬಾಲನು ಅನೇಕವೇಳೆ ಮಕ್ಕಾಪಟ್ಟಣದ ದೇವಸ್ಥಾನಗಳಿಗೆ ಹೋಗಿ ಅಲ್ಲಿ ಪೂಜಿಸಲ್ಪಡುವ ಮೂರ್ತಿಗಳನ್ನು ನೋಡಿ ಅರ್ಚಕರಿಗೆ ಬಹು ನಮ್ರಭಾವದಿಂದ "ಎಲ್ಲೆ ಹುಚ್ಚರೆ! ಈ ವಿಧವಾಗಿ ನೀವು ಪರಮಾತ್ಮಸಾನ್ನಿಧ್ಯವನ್ನು

ಹೊಂದಲಾರಿರಿ. ಕಲ್ಲು, ಮಣ್ಣು ಮುಂತಾದವುಗಳಿಂದ ಮಾಡಲ್ಪಟ್ಟ ಬೊಂಬೆಗಳಲ್ಲಿ ದೈವ ನಿಜತ್ವವು ಗೊತ್ತಾಗುವುದಿಲ್ಲ. ಸರ್ವಾಂತರ್ಯಾಮಿಯಾದ ಆ ಪರಮಾತ್ಮನನ್ನು ಹೊಂದಬೇಕಾದರೆ,- ಭಕ್ತಿಯಿಂದಲೂ, ಭಯದಿಂದಲೂ, ವಿಚಾರದಿಂದಲೂ, ತನ್ನನ್ನು ತಾನೇ ಅರಿಯಬೇಕಾಗಿದೆ," ಎಂದು ಬೋಧಿಸುತ್ತಿದ್ದರು. ಆ ಕಾಲದಲ್ಲಿ ಜನರು ಅಜ್ಞಾನವೆಂಬ ಕತ್ತಲೆಯಲ್ಲಿ ಮಗ್ನರಾಗಿದ್ದರು. ಮತ್ತು ಪಾಪವೆಂಬದು ಅವರನ್ನು ಸರ್ವವ್ಯಾಪಿಯಾಗಿ ಆವರಿಸಿ ಇದ್ದಿತು. ಇಂಥಾ ಆತ್ಮಾಂಧಕಾರವೆಂಬ ಕತ್ತಲೆಯಲ್ಲಿ ಜ್ಞಾನ ಭರಿತವಾದ ಈ ಮಾತುಗಳನ್ನು ಕೇಳಿ ವಿಚಾರಿಸುವವರುತಾನೆ ಯಾರು ? ಆಗ ಹಜರತ್ ಮಹಮ್ಮದರು ಈ ಜನರನ್ನು ನಿರ್ಮಲ ಮನಸ್ಕರನ್ನಾಗಿ ಮಾಡಲು ಪರಮಾತ್ಮನೊಬ್ಬನಲ್ಲದೆ ಮತ್ತಾರಿಂದಲೂ ಇದು ಸಾಧ್ಯವಲ್ಲವೆಂದು ತಿಳಿದು, ಗುಡ್ಡ ಗುಹೆಗಳನ್ನು ಪ್ರವೇಶಿಸಿ ನಿರಂತರವು ಧ್ಯಾನದಲ್ಲಿ ಕುಳಿತು ,, ಈ ಜನರ ಮೌಢ್ಯತೆಯನ್ನು ಹೋಗಲಾಡಿಸಿ ಸುಜ್ಞಾನ ಸ್ವರೂಪವಾದ ನಿನ್ನ ಜ್ಯೋತಿಯನ್ನು ಅನುಗ್ರಹಿಸಿ, ಈ ಅನಾಥರನ್ನು ಕಾಪಾಡು " ಎಂದು ಪರಮಾತ್ಮನ ಸಾಮಿಪ್ಯದಲ್ಲಿ ವಾರಿಧಾರೆಯನ್ನು ಸುರಿಸುತ್ತಿದ್ದರು. ಚಿಕ್ಕವಯಸ್ಸಿನಲ್ಲಿ ಪರಮಾತ್ಮನು ಇವರಲ್ಲಿ ಅಪರಿಮಿತವಾದ ಭೂತದಯೆಯನ್ನು ನೆಲೆಗೊಳಿಸಿದ್ದನು.

ಯೌವ್ವನಾವಸ್ಥೆಯನ್ನು ಹೊಂದಿದಾಗ ಈ ಮಹಾಪುರುಷರು ದೇಶ ಸಂಚಾರ ಮಾಡತೊಡಗಿದರು. ವ್ಯಾಪಾರವೇ ಇವರ ಆಗಿನ ಜೀವನೋಪಾಯವಾಗಿತ್ತು. ತಾವು ಸಂಚಾರಮಾಡಿದ ದೇಶಗಳೆಲ್ಲೆಲ್ಲಾ ತಮ್ಮ ದೇಶದ ಸ್ಥಿತಿಯನ್ನೇ ನೋಡಿ ಬೆರಗಾಗಿ ಯೋಚಿಸುತ್ತಿದ್ದರು. ಕ್ರೈಸ್ತಮತವು ತಲೆದೋರಿದ ಜೀರೂಸಲಂ ಎಂಬ ಖ್ಯಾತಿಯನ್ನು ಹೊಂದಿದ ಪುಣ್ಯ ಸ್ಥಳದಲ್ಲಿಯೂ, ಪ್ರಸಿದ್ಧವಾದ ಸ್ಪೇನ್‌ದೇಶದ ಚರ್ಚಿನಲ್ಲಿಯೂ, ಅಗಣಿತವಾದ ಪಾಪಕಾರ್ಯಗಳು ನಡೆಯುತ್ತಿದ್ದವು. ಹಿಂದೂದೇಶಕ್ಕೆ ಪುಣ್ಯಸ್ಥಾನವೆಂದು ಗಣಿಸಲ್ಪಡುವ ಕಾಶಿಯಲ್ಲಿಯೂ ಅನೇಕ ಲಜ್ಜಾಹೀನವಾದ ಕಾರ್ಯಗಳು ಪವಿತ್ರವಾದವುಗಳೆಂದು ಗಣಿಸಲ್ಪಡುತ್ತಿದ್ದವು. ಕಾಶಿಯಲ್ಲಿ ಈಗ ನೇಪಲ ಮಂದಿರದಲ್ಲಿ ಗೋಚರವಾಗಿರುವ ಕೋಕಶಾಸ್ತ್ರ ಚಿತ್ರಗಳು ಅದೇ ಕಾಲದಲ್ಲಿ ಚಿತ್ರಿಸಲ್ಪಟ್ಟವೆಂದು ವಿದಿತವಾಗುತ್ತದೆ. ಒಂದೆರಡು ದೇಶಗಳು ಮಾತ್ರವಲ್ಲದೆ ಜಗತ್ತೆಲ್ಲವು ಪಾಪವೆಂಬ ವ್ಯಾಧಿಗೆ ಸಿಕ್ಕಿದ್ದಿತು. ಆ ಶೋಚನೀಯವಾದ ಕಾಲದಲ್ಲಿ

ಈ ಪರಮ ಪುರುಷರ ಸುವಾರ್ತೆಯನ್ನು ಕೇಳಿನವರಾರು ? ತಮ್ಮ ಸ್ವದೇಶದ ವರೆ ತಮ್ಮ ಮಾರ್ಗಕ್ಕೆ ವಿರೋಧಿಗಳಾದೆರು. ಆದರೂ ಇವರ ನಡವಳಿಕೆ ಯನ್ನೂ, ವ್ಯವಹಾರವನ್ನೂ ನೋಡಿ ಇವರಿಗೆ "ಅಮಿಾನ್" ಎಂದರೆ "ಪ್ರಾಮಾಣಿಕ" ಎಂಬ ಬಿರುದಿನೊಂದಿಗೆ ಸಂಬೋಧಿಸುತ್ತಿದ್ದರು. ಅಲ್ಲಿಯ ಶುಭ ಕಾರ್ಯಗಳೆಲ್ಲವನ್ನು ಇವರಿಂದ ಆ ಜನರು ಪ್ರಾರಂಭಮಾಡಿ ಸುತ್ತಿದ್ದರು. ಸದ್ಗುಣಸಂಪನ್ನರಾದ ಮಹಮ್ಮದರ ಸ್ವಾರ್ಥತ್ಯಾಗವನ್ನೂ, ಪ್ರಾಮಾಣಿಕತೆಯನ್ನೂ, ನ್ಯಾಯಪರತೆಯನ್ನೂ ನೋಡಿ ಅರಬ್ಬಿದೇಶದವರು ಮಾತ್ರವಲ್ಲದೆ ಇತರ ದೇಶಗಳವರೂ ಕೂಡ ಶ್ಲಾಘಿಸಿ ಮರ್ಯಾದಿಸುತ್ತಿದ್ದರು. ಹೀಗಿರಲು ಮಕ್ಕಾ ಪಟ್ಟಣದಲ್ಲಿ ಶ್ರೀಮಂತಳಾಗಿದ್ದ "ಖದೀಜ" ಎಂಬ ಒಬ್ಬ ವಿಧವೆಯು ಯೌವ್ವನ ವಯಸ್ಕರಾದ ಈ ಮಹಾತ್ಮರ ಪ್ರಖ್ಯಾತಿಯನ್ನು ಕೇಳಿಯು ಮತ್ತು ಸುನಡತೆಯನ್ನು ಕಣ್ಣಾರೆ ನೋಡಿಯು ಇದ್ದಳು. ಆ ಶ್ರೀಮಂತೆಯು ಈ ಮಹಾತ್ಮರನ್ನು ವರಿಸಬೇಕೆಂದು ಇಚ್ಛೈಸಿ ಹಜರತ್ ಮಹಮ್ಮದ್ ಪೈಗಂಬರರ ಚಿಕ್ಕಪ್ಪನವರಾದ ಅಬೂತಾಲಿಬ್‌ರವರಿಗೆ ತನ್ನ ಮನೋಗತವನ್ನು ಹೊರಪಡಿಸಿ ಹೇಳಿದಳು ಆಗ ಯೌವ್ವನವಯಸ್ಕರಾದ ಸುಜ್ಞಾನ ವಿಶಿಷ್ಯರನ್ನು ಕರೆದು ಅವರ ಚಿಕ್ಕಪ್ಪನವರು ಆಕೆಯ ಮನೋಗತವನ್ನು ಹೊರಪಡಿಸಿದರು. ಆಕೆಯ ನಿಸ್ಪೃಹತೆಯನ್ನು ತಿಳಿದಿದ್ದ ಆ ಮಹಾಪುರುಷರು ಚಿಕ್ಕಪ್ಪನವರ ಮಾತಿನಂತೆ ಆಕೆಯನ್ನು ವರಿಸಲು ಆತ್ಮಸಂತೋಷದಿಂದ ಒಪ್ಪಿದರು. ಅಂತು ಸಕಾಲದಲ್ಲಿ ವಿವಾಹಮಹೋತ್ಸವವು ನಡೆಯಿತು. ಆಗ ಹಜರತ್ ಮಹಮ್ಮದ್ ಪೈಗಂಬರರ ವಯಸ್ಸು ಇಪ್ಪತ್ತೈದು ವರ್ಷಗಳು ಮತ್ತು ಆ ಶ್ರೀಮಂತೆಯ ವಯಸ್ಸು ನಲವತ್ತುವರ್ಷಗಳು. ಪ್ರಾಪ್ತ ವಯಸ್ಕನಾದ ಯೌವ್ವನಸ್ಥನು ವಿಷಯಾಸಕ್ತಿಯ ಪ್ರಾಯವನ್ನು ಮೀರಿದ ಸ್ತ್ರೀಯನ್ನು ಲಗ್ನಮಾಡಿಕೊಳ್ಳುವುದು ಯಾರಿಂದ ತಾನೆ ಸಾಧ್ಯವು ? ಅಪವಿತ್ರ ವಾದ ಕಾಮನ ಭಸ್ಮವನ್ನು ಧಾರಣಮಾಡಿದ ಮಹಾಪುರುಷನಿಂದಲ್ಲದೆ ಮರ್ತ್ಯದ ವಿಷಯಾಸಕ್ತಿಯಲ್ಲಿ ಬಿದ್ದು ಹೊರಳಾಡುವ ನರರಿಂದ ಸಾಧ್ಯವೆ ? ಮಂಗಳ ಸ್ವರೂಪಿಯಾದ ಆ ಮಹಾತ್ಮನು ಪ್ರಪಂಚದ ಸುಖವನ್ನು ಬಯ ಸದೆ ಕರ್ಮವೆಂಬ ಬಿಸಿಲಿನಿಂದ ಬಾಯಿಬಿಡುತ್ತಿದ್ದ ಪಾಪಿಷ್ಠರನ್ನು ನಿರ್ಮಲ ಮನಸ್ಕರನ್ನಾಗಿ ಮಾಡಲು ತನು ಮನ ಧನಗಳನ್ನು ಭಸ್ಮಮಾಡಿ ಪವಿತ್ರವಾದ ವಿಭೂತಿಯನ್ನು ಧರಿಸಿದನು. ವಿವಾಹವಾದ ಕೂಡಲೆ ಇವರ ಸ್ವಾರ್ಥತ್ಯಾಗ

ವನ್ನು ನೋಡಿದ್ದ ಆ ಭಾರ್ಯೆಯು ತನ್ನ ವಿಶಿಷ್ಟ ಐಶ್ವರ್ಯವನ್ನೂ ತನ್ನ ಪತಿಯಪಾದಪದ್ಮಗಳ ಮೇಲೆ ಸುರಿದುಬಿಟ್ಟಳು. ಸಾಕಾದಷ್ಟು ಐಶ್ವರ್ಯಕ್ಕೆ ಒಡೆಯರಾದರೂ ಹಜರತ್ ಮಹಮ್ಮದ್ ಪೈಗೆಂಬರರಿಗೆ ಈ ಪ್ರಪಂಚದ ಐಶ್ವರ್ಯ ಸ್ವಲ್ಪವೂ ರುಚಿಸಲಿಲ್ಲ. ಅವರು ತಮ್ಮ ಸಮಸ್ತ ಕಾಲವನ್ನು ನಿರ್ಜನ ಪ್ರದೇಶಗಳಲ್ಲಿಯೂ ಮತ್ತು ಗುಡ್ಡ ಗುಹೆಗಳಲ್ಲಿಯೂ ದೈವಪ್ರಾರ್ಥನೆಯಲ್ಲಿ ಕಳೆಯುತ್ತಿದ್ದರು. ಹೀಗೆಯೆ ಇವರಿಗೆ ಹದಿನೈದು ವರ್ಷಗಳು ಜರುಗಿದವು.

ಒಂದಾನೊಂದು ದಿವಸ ಹಜರತ್ ಮಹಮ್ಮದ್ ಪೈಗೆಂಬರರು ಮಕ್ಕಾ ಪಟ್ಟಣದ ಸಮೀಪದ "ಹಿರಾ" ಎಂಬ ಗುಹೆಯಲ್ಲಿ ಪರಮಾತ್ಮನ ಪ್ರಾರ್ಥನೆಯಲ್ಲಿ ಮಗ್ನರಾಗಿದ್ದರು. ಆಗ್ಗೆ ಅಕಸ್ಮಾತ್ತಾಗಿ ದಿಕ್ಕಟಗಳನ್ನು ಸೀಳುವಂತೆ ಗಂಭೀರರವದಿಂದ ಭೂಮಿಯು ನಡುಗಿದಂತೆ ತೋರಿತು. ತತ್‌ಕ್ಷಣದಲ್ಲಿಯೇ ಜಿಬ್ರಯಿಲ್ (ಇಂದ್ರದೇವನು) ಪ್ರಸನ್ನನಾಗಿ "ಇಕ್‌ರಾಬೆ ಸ್ಮೆರಬ್ಬಿ ಕಲ್ಲಜಿಖಲಕ್" ಎಂದರೆ "ಯಾವ ಪ್ರಭುವು ನಿನ್ನನ್ನು ಸೃಷ್ಟಿಸಿರುತ್ತಾನೊ ಆ ಪರಮಾತ್ಮನ ಸುನಾಮದಿಂದ ನೀನು ಓದು" ಎಂದು ಓಂಕಾರೋಕ್ತಿಯಲ್ಲಿ ಬೋಧಿಸಿದನು. ಇದಕ್ಕೆ ಪ್ರತ್ಯುತ್ತರವಾಗಿ ದಿವ್ಯಜ್ಞಾನಿಗೆಳಾದ ಪರಮ ಗುರುಗಳು "ನನಗೆ ಓದಲು ಬಾರದು" ಎಂದು ಹೇಳಿದರು. ಪುನಃ ಜಿಬ್ರಯಿಲನು "ಆದೇ ವಾಕ್ಯವನ್ನು ಉಚ್ಚರಿಸು" ಎಂದು ವಿಜ್ಞಾಪಿಸಲು, ಆ ಮಹಾತ್ಮರು ಮೊದಲಿನ ಉತ್ತರವನ್ನೆ ದಯಪಾಲಿಸಿದರು. ನಂತರ ನಿಶ್ಶಬ್ದವಾದುದನ್ನು ಕಂಡು ಹಜರತ್ ಮಹಮ್ಮದ್ ಪೈಗೆಂಬರರು ಅಗಾಧವಾದ ತಮ್ಮ ಮುಂದಣಕೆಲಸದ ಸೂಚನೆಯೇ ಇದೆಂದು ತಿಳಿದರು. ಮತ್ತು ಇದರ ಸಲುವಾಗಿ ಬಹಳ ಹೆದರಿದವರಾಗಿ ನಡುಗುತ್ತಾ ಮನೆಯನ್ನು ಸೇರಿ ತಮ್ಮ ಪ್ರಿಯಸತಿಯೊಡನೆ ತಮಗೆ ಆದ ವಿಷಯವನ್ನು ತಿಳಿಸಿದರು. ಆಗ ಸತ್ಕಾರ್ಯ ಸಹಾಯಕಳಾದ ಆ ಸತಿಯು ಪತಿಯೊಡನೆ "ತಾವು ಯಾರನ್ನೂ ತೊಂದರೆಗೆ ಗುರಿಮಾಡಿಲ್ಲ. ತಮ್ಮನ್ನು ಪರಮಾತ್ಮನು ರಕ್ಷಿಸುವನು. ಹೆದರುವ ಅಶ್ಯಕತೆಯಿಲ್ಲ" ಎಂದು ಸಮಾಧಾನ ಪಡಿಸಿದಳು. ಆದರೂ ಹಜರತ್ ಮಹಮ್ಮದ್‌ರವರು ತಾಳಲಾರದೆ "ನನಗೆ ಕಂಬಳಿಯನ್ನು ಹೊದಿಸು" ಎಂದು ಹೇಳಲು ಆಗ ಭಕ್ತಮಾತೆಯು ಕಂಬಳಿಯನ್ನು ಹೊದಿಸಿ ಮಲಗಿಸಿದಳು. ತದ

ನಂತರ ವಿಶಿಷ್ಟ ಸಂಗತಿಯನ್ನು ಕೇಳಿದ್ದ ಆ ಸತಿಯು ಇದರ ರಹಸ್ಯವನ್ನು ತಿಳಿಯಲು ತನ್ನ ಪತಿಯನ್ನು ಕರೆದುಕೊಂಡು ತಮ್ಮ ಬಂಧುವಾದ "ವರಖಾರ್ಜಿನೌಫೀಲ್" ಎಂಬ ಪ್ರಸಿದ್ಧ ಪುರುಷರಬಳಿಗೆ ಬಂದು ನಡೆದ ವಿಷಯವನ್ನೆಲ್ಲಾ ಸಾಂಗವಾಗಿ ಹೇಳಲು, ಅದಕ್ಕೆ ಅವರು, ಪ್ರಸನ್ನನಾದವನು ಜಿಬ್ರಯಿಲ್ (ದೇವೇಂದ್ರ) ಎಂದೂ ಈತನೆ ಮೂಸಾಪೈಗಂಬರರಿಗೆ ಇದೇರೀತಿಯಲ್ಲಿ ಪ್ರಸನ್ನನಾಗಿದ್ದನೆಂದೂ ಮತ್ತು ಮುಂದೆ ಹಜರತ್‌ರವರು ಸರ್ವಾತ್ಮಪ್ರಕಾಶ ಕರಾಫ ಅವತಾರಿಗಳಾಗಿ ಪರಿಣಮಿಸುವರು, ಎಂದು ಹೇಳಿ "ಮುಂದೆ ಜನಗಳು ನಿಮಗೆ ಮಂದಬುದ್ಧಿಯಿಂದ ಬಹಳಕಷ್ಟಕ್ಕೆ ಗುರಿಮಾಡುವರು. ನಾನು ಜೀವಿಸಿದ್ದರೆ ನಿಮಗೆ ಬಹುಮಟ್ಟಿಗೆ ಸಹಾಯಮಾಡುತ್ತಿದ್ದೆ" ಎಂದು ಹೇಳಿ ಸುಮ್ಮನಾದರು

ಆದಿವಸ ಮೊದಲುಗೊಂಡು ಈಶ್ವರಪ್ರಸನ್ನನಾದ ಮಹಾಪುರುಷನು ಕಷ್ಟಸಮುದ್ರದಲ್ಲಿ ಪದಾರ್ಪಣ ಮಾಡಿದುದಾಯಿತು. ಇವರ ಸ್ವಜನರೆ ಇವರಿಗೆ ವೈರಿಗಳಾಗಿ ಕಷ್ಟವನ್ನು ಕೊಡಲುದ್ಯುಕ್ತರಾಗಿಸಿದರು. ಇವರ ಭಕ್ತರಾಗಿದ್ದ ಅಲ್ಪಸ್ವಲ್ಪ ಜನರಿಗೆ ವಿಚಿತ್ರವಿಚಿತ್ರ ಹಿಂಸೆಗಳನ್ನು ಕೊಡುತ್ತಿದ್ದರು. ಆದರೂ ಹಜರತ್ ಮಹಮ್ಮದರವರು ತಮ್ಮ ವಜ್ರಸ್ವರೂಪವಾದ ಮನಸ್ಸಿನ ತಾಳ್ಮೆಯಿಂದ ಎಲ್ಲವನ್ನೂ ಸಹಿಸುತ್ತಾ ತಮ್ಮ ಕೆಲಸವನ್ನು ಅವಿಚ್ಛಿನ್ನವಾಗಿ ನಡೆಯಿಸುತ್ತಾ ಬಂದರು. ಒಂದು ದಿವಸ ಇವರ ಸುಕಾರ್ಯ ಪ್ರಚಾರವನ್ನು ಕಂಡು ವೈರಿಗಳು ಬಹು ಕೋಪಾಕ್ರಾಂತರಾಗಿ ಒಂದು ದೊಡ್ಡ ಸಭೆಯನ್ನು ಕೂಡಿಸಿ, ನೂತನ ಮತವನ್ನು ಹರಡಿಸುತ್ತಿರುವ ತಮ್ಮ ಮತದ್ವೇಷಿಯನ್ನು ಯಾವರೀತಿಯಿಂದಲಾದರೂ ನಾಶಪಡಿಸಬೇಕೆಂಬ ವಿಧಿಯನ್ನು ಮಾಡಿಕೊಂಡರು. ದೈವಸ್ವರೂಪಿಯಾದ ಈ ಪ್ರವಾದಿಯನ್ನು ಕೊಲ್ಲಲೋಸುಗ "ಉಮರ್" ಎಂಬೊಬ್ಬ ಮುಖಂಡನನ್ನುನೇಮಿಸಿ ಹಜರತ್ ಮಹಮ್ಮದ್‌ರವರ ಗೃಹಕ್ಕೆ ಕಳುಹಿಸಿಕೊಟ್ಟರು. ಪ್ರಚಂಡನಾದ ಈ ಮುಖಂಡನು ತನ್ನವಾಗ್ದಾನವನ್ನು ಪೂರೈಸುವ ಭರವಸೆಯಿಂದ ಕರದಲ್ಲಿ ಕತ್ತಿಯನ್ನು ಝಳುಪಿಸುತ್ತಾ ಇವರ ಮನೆಯ ದಾರಿಯನ್ನು ಕುರಿತು ಹೊರಟನು. ಕಾಳ್‌ಗತ್ತಲೆಯಲ್ಲಿ ಕೊಲ್ಲಲು ಬಂದ "ಉಮರ್" ರವರು ಇವರ ಮನೆಯಸಮೀಪಕ್ಕೆ ಬಂದು ನಿಂತರು. ಆಗ ಹಜರತ್‌ರವರು ಪ್ರಾರ್ಥನೆ ಮಾಡುತ್ತಿದ್ದ ಶಬ್ದಗಳು ಈ

ಕೊಲೆಯನ್ನು ಮಾಡಲು ಬಂದಿದ್ದ ಪುರುಷನ ಕಿವಿಯಲ್ಲಿ ಬಿದ್ದವು. ಹಜರತ್ ರವರು ಪರಮಾತ್ಮನಿಗೆ ಸಾಷ್ಟಾಂಗವನ್ನುಮಾಡಿ "ಸಜಧಾಲಕರೂಹಿ ವ ಖುಲ್ ಬಿ" ಎಂದರೆ "ಓ! ಪರಮಾತ್ಮನೆ! ನನ್ನ ಸ್ಥೂಲದೇಹವು ಮತ್ತು ಸೂಕ್ಷ್ಮ ದೇಹವು ನಿನಗೆ ನಮಸ್ಕಾರಮಾಡುತ್ತವೆ" ಎಂದು ಹೇಳುತ್ತಿರಲು, ವೈರಿಯು ಈ ಜ್ಞಾನಸ್ವರೂಪವಾದ ವಾಕ್ಯವನ್ನುಕೇಳಿ ಮನಸ್ಸಿನಲ್ಲಿ ಅಂಜಿ ಆ! ಹಾ! ಇಂಥಾ ಸಾಧುವನ್ನು ನಾನು ಹೇಗೆ ಕೊಲ್ಲಲಿ? ಎಂದು ವ್ಯಸನಪಡುತ್ತಾ ನಿಂತಿದ್ದನು. ಪ್ರಾರ್ಥನೆಯಾದ ನಂತರ ಹಜರತ್‌ರವರು ಹೊರಗೆಬಂದು ನೋಡಲು, ಕತ್ತಲೆಯಾಗಿದ್ದುದರಿಂದ "ಉಮರ್" ರವರು ಕಾಣಿಸಲಿಲ್ಲ. ಆದರೂ ಅವರ ಕಾಲಿನ ಸಪ್ಪಳೆಯು ಕೇಳಿಸಿತು. ಹಜರತ್‌ರವರು, ಯಾರು? ಎಂದು ಪ್ರಶ್ನಿಸಿದರು. ಅದಕ್ಕೆ "ನಾನು ಉಮರ್" ಎಂದು ಗಂಭೀರವಾಗಿ ಹೇಳಿದನು. ಹಜರತ್‌ರವರು ಇದನ್ನು ಕೇಳಿ "ಓ! ಉಮರ್! ನೀನು ಹಗಲೂ ನನ್ನನ್ನು ಬಿಡುವುದಿಲ್ಲ ರಾತ್ರಿಯಲ್ಲಿಯೂ ಬಿಡುವುದಿಲ್ಲವೆ?" ಎಂದರು. ಆದಕ್ಕೆ ಉಮರ್ ರವರು "ಎಲ್ಲೆ ಮಹಾಪುರುಷರೆ! ತಾವು ನನಗೋಸ್ಕರ ದೇವರಲ್ಲಿ ಪ್ರಾರ್ಥಿಸಿರಿ, ನಾನು ಒಡಪಾಪಿಯು" ಎಂದು ಹೇಳಿ ಹೊರಟುಹೋದರು.

ಹಜರತ್‌ರವರು ತಮ್ಮ ಸತ್ಯವನ್ನು ಪ್ರಸರಿಸುವುದಕ್ಕೆ ಅನೇಕ ಕಷ್ಟ ಪರಂಪರೆಗಳನ್ನು ಅನುಭವಿಸಬೇಕಾಯಿತು. ಈ ಕಷ್ಟಕಾಲದಲ್ಲಿ ಅನೇಕ ದಿವಸ ಗಳು ಗತಿಸಿಹೋದವು. ಶತ್ರುಗಳು ಇವರ ಧರ್ಮಕಾರ್ಯವನ್ನು ನಾಶಮಾ ಡಲು ಎಷ್ಟುಪ್ರಯತ್ನಿಸಿದರೂ ಅಷ್ಟು ಹೆಚ್ಚು ಹೆಚ್ಚಾಗಿ ಸಮಾಜದಲ್ಲಿ ಜನರ ವಿಳಿಗೆಯು ಅಭಿವೃದ್ಧಿಯಾಗುತ್ತಾ ಬಂದಿತು. ಒಂದುದಿವಸ ಇವರ ಭಕ್ತ ಮಂಡಲಿಯು ಪ್ರಾರ್ಥನೆಗೋಸುಗ ಸೇರಿದ್ದಾಗ ಶತ್ರುಗಳು ಹೆಚ್ಚುತ್ತಿದ್ದ ಮಂಡಲಿಯನ್ನು ಕಂಡು ಇದರ ಅಭಿವೃದ್ಧಿಯಿಂದ ತಮಗಾಗುವ ಸಂಕಟ ವನ್ನು ಸಹಿಸಲಾರದೆ ಮತ್ತೊಂದು ಸಮಾಜವನ್ನು ಕೂಡಿಸಿ, ಅದರ ಮೂಲ ಕವಾಗಿ ಈ ನವೀನ ಮತಸ್ಥಾಪಕರನ್ನು ಹೇಗಾದರೂ ಸಂಹರಿಸಬೇಕೆಂದು ಪ್ರಯತ್ನಮಾಡಿದರು. ಈ ಕೆಲಸದ ನಿರ್ವಾಹಕ್ಕಾಗಿ ಪುನಃ "ಉಮರ್" ರವರೆ ಮುಖಂಡರಾಗಿ ನಿಂತುಕೊಂಡರು. ಇದೇ ವಿಷಯವಾಗಿ ಪಟ್ಟಣದಲ್ಲಿ ಭಯಂಕರವಾದ ಗಲಭೆಯು ನಡೆದಿದ್ದಿತು. ಹಗಲು ಸಮಯ "ಉಮರ್"

ರವರು ಕರದಲ್ಲಿ ಕತ್ತಿಯನ್ನು ಝಳಪಿಸುತ್ತಾ ಕೋಪಾಕ್ರಾಂತರಾಗಿ ದೈವಪ್ರವಾದಿಗಳ ಸಂಹಾರಕ್ಕಾಗಿ ಹಾದಿಯಲ್ಲಿ ಬರುತ್ತಾ ಇದ್ದಾಗ ಒಬ್ಬ ಗೃಹಸ್ಥನು ನೋಡಿ ಉಮರ್ ರವರನ್ನು ಕುರಿತು ಎಲ್ಲಿಗೆ ಹೋಗುತ್ತಿರುವಿರಿ ? " ಎಂದು ಪ್ರಶ್ನಿಸಿದನು. ಉಮರ್‌ರವರು " ಹಜರತ್ ಮಹಮ್ಮದ್‌ರವರನ್ನು ನಾಶ ಮಾಡಲು ಹೋಗುತ್ತಿರುವೆನೆಂದು ಉತ್ತರ ಕೊಟ್ಟರು." ಅವನ್ನು ಕೇಳಿ ಆ ಗೃಹಸ್ಥನು " ನೀವು ಆ ಮಹಾತ್ಮರನ್ನು ಕೊಲ್ಲುವುದಕ್ಕೆ ಮುಂಚೆ ನಿಮ್ಮ ಭಾವ ವ.ತ್ತು ಸಹೋದರಿಯನ್ನು ನೋಡೋಣಾಗಲಿ, ಅವರಿಬ್ಬರು ಮುಸಲ್ಮಾನರಾಗಿರುತ್ತಾರೆ " ಎಂದು ಹೇಳಿದನು. ಮೊದಲೆ ಉರಿಯುತ್ತಿದ್ದ ಬೆಂಕಿಯಲ್ಲಿ ಘೃತವನ್ನು ಬಿಟ್ಟಹಾಗೆ ಉಮರ್‌ರವರು ಮತ್ತಷ್ಟು ಕ್ರೋಧಾನ್ವಿತರಾಗಿ ತಮ್ಮ ಸಹೋದರಿಯ ಮನೆಯ ಹಾದಿಯನ್ನು ಕುರಿತು ಹೊರಟರು. ಆ ಸನ್ನಯದಲ್ಲಿಯೇ ತಮ್ಮ ಸಹೋದರಿಯು ಪತಿಗೆ ದೇವೋಕ್ತವಾದ ಕುರಾನ್‌ನನ್ನು ಬೋಧಿಸುತ್ತಿದ್ದರು. ಕೂಡಲೆ ಒಳಗೆ ನುಗ್ಗಿ ತಮ್ಮ ತಂಗಿಯನ್ನು ಕುರಿತು " ಏನು ಓದುತ್ತಲಿರುವೆ " ? ಎಂದು ಪ್ರಶ್ನಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಅವರು " ಕುರಾನ್ " (ಈಶ್ವರಗೀತೆ) ನನ್ನು ಪಠಿಸುತ್ತಿದ್ದೇನೆಂದು ಹೇಳಲು, ಕೋಪಾಗ್ನಿಯಿಂದ ದಗ್ಧರಾಗಿ ದಂಪತಿಗಳಿಬ್ಬರನ್ನೂ ಹೊಡೆಯಲುಪಕ್ರಮಿಸಿದರು. ಕಡೆಗೆ ಅಂಗಾಂಗವೆಲ್ಲವು ರಕ್ತಮಯವಾಗುವವರೆಗು ಹೊಡೆದರೂ, ಅವರ ತಂಗಿಯು " ನಮ್ಮ ಪ್ರಾಣಗಳನ್ನಾದರೂ ತೆಗೆಯಬಹುದು. ಆದರೆ ನಾವು ಹಿಡಿದಿರುವ ಹಾದಿಯು ಪವಿತ್ರವಾದುದು. ಇದನ್ನು ಬಿಟ್ಟು ನಾವು ಭವಿಗೆಳಾಗಲಾರೆವು. ಮತ್ತು ನಮ್ಮ ಕೈಯಿಂದಲೇ ಮಾಡಲ್ಪಟ್ಟು ಪೂಜಿಸಲ್ಪಡುವ ಮೂರ್ತಿಗಳನ್ನು ಎಂದಿಗೂ ಪೂಜಿಸಲಾರೆವು " ಎಂದು ಮುಕ್ತಕಂಠವಾಗಿ ಹೇಳಿದಳು. ಇದನ್ನು ಕೇಳಿದ ಸಹೋದರನು ತಾನು ಹೊಡೆದು ಸೋತಿದ್ದದ್ದರಿಂದ ನಿಂತು ತಂಗಿಯನ್ನು ಕುರಿತು " ಓ ! ಸಹೋದರಿಯೆ ! ಈ ಕುರಾನ್ ಎಂಥಾದ್ದು ನೋಡೋಣ ? ಸ್ವಲ್ಪ ಓದು ಕೇಳುವೆನು " ಎಂದು ಹೇಳಲು, ಅದನ್ನು ಕೇಳಿ ತಂಗಿಯು ಸಂತೋಷಪಟ್ಟು ಅಣ್ಣನ ಕೈಕಾಲುಗಳನ್ನು ತೊಳೆಯಿಸಿ ಸಮಾಧಾನಪಡಿಸಿ ಕುರಾನಿನಲ್ಲಿ " ತಾಹಾ " ಎಂಬ ಅಧ್ಯಾಯವನ್ನು ಪ್ರಾರಂಭಿಸಿ ಮುಂದೆ ಬರೆಯಲ್ಪಟ್ಟಿರುವುದನ್ನು ಓದಿದಳು.

# ಕುರಾನ

ತಹ:—ತಾಹಾಮಾಲ್ ಅಂಜಲ್ ನಾ ಅಲೈಕಲ್ ಕುರ್ ಆನಲೆ ತಷ್'ಕಾ ಇಲ್ಲಾ ತಜಕಿರತಲ್'ಲೆ ಮೈಯಖ್'ಷಾ, ತಂ ಜೀಲಂ ಮಿಮ್ಮನ್'ಖಲ ಕಲ್' ಅರ್ದ ವಸ್ಸಮಾವಾತಿಲ್ ಉಲಾ-ಅರ್ರಹಮಾನೊ ಅಲಲ್ ಅರ್'ಷಿಸ್ ತವಾ, ಲಹು ಮಾಫಿಸ್ ಸಮಾವಾತೆ ವ ಮಾಫಿಲ್ ಅರ್ದೆ ವ ಮಾಬೈನ ಹುಮಾವಮಾತಹ್' ತಸ್ಸರಾ—ವ ಇತಜಹರ್' ಬಿಲ್ ಕೌಲಿಫ ಇನ್ನ ಹುಯಾಲಮುಸ್ಸರ್ರವ ಅಖ್' ಫಾ ಅಲ್ಲಾ ಹುಲಾ ಇಲಾಹ ಇಲ್ಲಾಹು, ಲಹುಲ್ ಅಸ್ಮಾವುಲ್'ಹುಸ್'ನಾ"

ಅರ್ಥ:—ಎಲೈ ! ಮನುಜನೆ ! ಈ ಕುರಾನನ್ನು ಜನರಿಗೆ ದುಃಖ ವನ್ನುಂಟುಮಾಡಲೋಸುಗ ಪ್ರಕಟಪಡಿಸಿಲ್ಲಾ. ಆದರೆ ಭಕ್ತಿಯುಳ್ಳವರಿಗೆ ತಮ್ಮ ನಿಜತ್ವವನ್ನು ತಿಳಿಸುವ ಸಲುವಾಗಿ ಉಂಟುಮಾಡಿದ್ದಾಗಿರುತ್ತದೆ. ಯಾವನು ಅಂತರಿಕ್ಷವನ್ನೂ ಮತ್ತು ಪೃಥ್ವಿಯನ್ನೂ ಸೃಷ್ಟಿಸಿ ಇರುತ್ತಾನೋ ಆತನೇ ಇದನ್ನು ಪ್ರಕಟಪಡಿಸಿರುತ್ತಾನೆ. ಸೃಷ್ಟಿಕರ್ತನಾದ ಪರಮಾತ್ಮನು ಬಹು ಶಕ್ತಿವಂತನು. ಸ್ವರ್ಗವು ಮತ್ತು ಅದರಲ್ಲಿನ ಸಮಸ್ತ ವಸ್ತುಗಳು, ಮರ್ತ್ಯವು ಮತ್ತು ಅದರಲ್ಲಿನ ವಿಶಿಷ್ಯವು, ಪಾತಾಳವು ಮತ್ತು ಅದರಲ್ಲಿನ ಸಮಸ್ತವು ಪರಮಾತ್ಮನದು. ಮತ್ತು ನೀವು ಘಟ್ಟಯಾಗಿ ಹೇಳುವುದನ್ನೂ ರಹಸ್ಯವಾದ ಮಾತುಗಳ ನಿಶ್ಶಬ್ದ ನುಡಿಗಳನ್ನಾದರೂ ಆತನು ಸುಲಭವಾಗಿ ಕೇಳುತ್ತಾನೆ. ಅಲ್ಲಾಹನೆ ಸರ್ವಮಯನು. ಆತನ ಪ್ರಕಾಶಗಳು ಬಹು ಪವಿತ್ರವಾದುವು. "

"ಉಮರ್" ರವರು ಈ ದೇವೋಕ್ತಿಗಳನ್ನು ಕೇಳಿ "ಇದರಲ್ಲಿ ನನಗೆ ಯಾವುದೂ ವ್ಯತಿರಿಕ್ತವಾಗಿ ಕಾಣುವುದಿಲ್ಲಾ. ಇದೇ ಶ್ರೇಷ್ಯವಾದ ಧರ್ಮ ವಾಗಿದೆ" ಎಂದು ಹೇಳಿ, ಅಲ್ಲಿಂದ ಹೊರಟು ಹಜರತ್ ಮಹಮ್ಮದ್ ಪೈಗಂ ಬರರು ಇದ್ದ ಸ್ಥಳವನ್ನು ಕುರಿತು ಹೊರಟರು. ಸತ್ಯಸಂಧರಾದ ಗುರುಗಳು ಮತ್ತು ಅವರ ಶಿಷ್ಯಮಂಡಲಿಯು ತಮ್ಮ ಸಾಮಾಜಿಕ ಕಾರ್ಯಗಳನ್ನು ಯಾವತ್ತೂ ಗೋಪ್ಯವಾಗಿಯೇ ನಡೆಯಿಸುತ್ತಿದ್ದರು. ತಮ್ಮ ಭಕ್ತರಿಗೆ ಉಪ

ದೇಶಮಾಡುವ ಸಲುವಾಗಿ ಒಂದು ಮನೆಯಲ್ಲಿ ತಮ್ಮ ಶಿಷ್ಯರೊಂದಿಗೆ ಹಜರತ್ ಮಹಮ್ಮದ್ ಪೈಗಂಬರರು ಕುಳಿತಿದ್ದ ಕಾಲದಲ್ಲಿ "ಉಮರ್" ರವರು ಮುಚ್ಚಿದ್ದ ಮನೆಯ ಬಾಗಿಲಬಳಿಯಲ್ಲಿ ನಿಂತು ಬಾಗಿಲು ತೆರೆಯುವಂತೆ ಹೇಳಿದರು. ಶಿಷ್ಯಮಂಡಲಿಯಲ್ಲಿ ಒಬ್ಬನು ನಿಂತು ಬಾಗಿಲ ಕಂಡಿಯಿಂದ ನೋಡಲು, ಉಮರ್‌ರವರು ಖಡ್ಗಧಾರಿಯಾಗಿ ಬಂದಿರುವುದನ್ನು ನೋಡಿ ಏನೋ ಕೆಟ್ಟ ಉದ್ದೇಶದಿಂದ ಈತನು ಬಂದಿರುವನೆಂದು ಹಜರತ್ ಮಹಮ್ಮದ್ ಪೈಗಂಬರರಿಗೆ ನೋಡಿದ ವಿಷಯವನ್ನು ಬಿತ್ತರಿಸಿದನು. ದಿವ್ಯ ಜ್ಞಾನಿಗಳಾದ ಆ ಮಹಾಪುರುಷರು ಅನ್ಯರ ಮನೋರಹಸ್ಯಗಳನ್ನು ತಿಳಿಯುವರಾದ್ದರಿಂದ ಸ್ವಲ್ಪವೂ ಭಯಪಡದೆ ಬಾಗಿಲನ್ನು ತೆರೆಯಲು ಅಪ್ಪಣೆಯನ್ನು ಕೊಟ್ಟರು. ಅಪ್ಪಣೆಯಂತೆ ಬಾಗಿಲು ತೆರೆಯಲು "ಉಮರ್" ರವರು ಒಳಗೆ ಪ್ರವೇಶಿಸಿ, ಗಂಭೀರರವದಿಂದ "ಲಾ ಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ್" ಎಂಬ ಬೀಜ ಮಂತ್ರವನ್ನು ಪಠಣೆಮಾಡಿ ಭಕ್ತರಲ್ಲಿ ಸಮಾವೇಶವನ್ನು ಹೊಂದಿದರು. ಅಕಸ್ಮಾತ್ತಾದ ಈ ವಿಷಯವನ್ನು ಶಿಷ್ಯಮಂಡಲಿಯು ಕೇಳಿ ಬೆರಗಾಗಿ ಏಕಧ್ವನಿಯಿಂದ ಪರಮಾತ್ಮ ಧ್ಯಾನವನ್ನು ಮಾಡಿದರು. ಇದು ಅವರಿಗೆ ಎಂಥಾ ಸುದಿವಸ! ಯಾವ ಪುರುಷನು ಬದ್ಧ ದ್ವೇಷಿಯಾಗಿ ಹಜರತ್ ಮಹಮ್ಮದ್‌ರವರನ್ನು ನಾಶಮಾಡಲು ಪ್ರಯತ್ನಿಸಿ ಹಿಂಬಾಲಿಸಿದ್ದನೋ ಈಗ ಆತನೇ ಸಾತ್ವಿಕಭಾವದಿಂದ ಆ ಮಹಾ ಪುರುಷರ ಭಕ್ತಮಂಡಲಿಯಲ್ಲಿ ಒಬ್ಬನಾಗಿರುವನಲ್ಲಾ! ಇದೊಂದು ಪರಮಾತ್ಮನ ಲೀಲಾ ಜಾಲವಲ್ಲವೇ? ಇದು ಮೊದಲುಗೊಂಡು ಭಕ್ತಮಂಡಲಿಯು ಮತ್ತಷ್ಟು ಹೆಚ್ಚಿ ಬಹಿರಂಗವಾಗಿ ತಮ್ಮ ಪ್ರಾರ್ಥನೆಗಳನ್ನು ಮತ್ತು ಸಾಮಾಜಿಕ ಕಾರ್ಯಗಳನ್ನು ನಡೆಯಿಸುತ್ತಿದ್ದರು.

ಈ ಸತ್ಸಮಾಜಾಭಿವೃದ್ಧಿಯನ್ನು ಕಂಡು ಇವರ ಶತೃಗಳು ಅಸೂಯಾಭರಿತರಾದರು. ಹಜರತ್ ಮಹಮ್ಮದ್ ಪೈಗಂಬರರ ಉಪನ್ಯಾಸಗಳನ್ನು ಜರುಗದರೀತಿ ಮಾಡಿಸಿದರು. ಇದನ್ನು ನೋಡಿ ಶಾಂತಸ್ವರೂಪಿಗಳಾದ ಭಗವತ್ಪ್ರೇಮಿಗಳು ಮಕ್ಕಾಪಟ್ಟಣವನ್ನು ಬಿಟ್ಟು ಅದರ ಸಮೀಪದಲ್ಲಿರುವ "ತಾಯಿಫ್" ಎಂಬ ಪಟ್ಟಣಕ್ಕೆ ಹೋಗಿ ಉಪನ್ಯಾಸಗಳನ್ನು ಮಾಡತೊಡಗಿದರು. ಆಗ ಇವರ ಚಿಕ್ಕಪ್ಪನಾದ "ಅಬೂಲಹಬ್" ಎಂಬಾತನು ಇವರ ಹಿಂದುಗಡೆಯೇ ಹೋಗಿ ಉಪನ್ಯಾಸಕಾಲದಲ್ಲಿ ನೆರೆದ ಜನರನ್ನು ಕುರಿತು

" ಎಲ್ಲೆ ! ಜನರೆ ! ಇವನು ನನ್ನ ಅಣ್ಣನ ಮಗನು. ಇವನಿಗೆ ಮೆದಳು ಕೆಟ್ಟು ಹುಚ್ಚು ಹಿಡಿದಿರುತ್ತದೆ. ಆದುದರಿಂದ ಇವನ ಮಾತುಗಳನ್ನು ಕೇಳಬೇಡಿರಿ " ಎಂದು ಘಟ್ಟಯಾಗಿ ಸಾರುತ್ತಿದ್ದನು. ಹಜರತ್ ಮಹಮ್ಮದರವರು ಅಸೂಯಾಭರಿತನಾದ ಖರ್ಮಿಯ ಮಾತುಗಳನ್ನು ಲಕ್ಷ್ಯಮಾಡದೆ ಜನರಿಗೆ ಬೋಧಿಸುತ್ತಿದ್ದರು. ಅಜ್ಞಾನವೆಂಬ ಅಂಧಕಾರದಲ್ಲಿ ಮುಳುಗಿ ಜ್ಞಾನತೇಜರಹಿತರಾಗಿ ಪಾಪದಿಂದಾವೃತರಾದ ಭವಿಗಳು ತೇಜಭರಿತರಾದ ಪರಗುರುಗಳ ಸುನುಡಿಗಳನ್ನು ಕೇಳಿ ಸಹಿಸಲಾರದೆ ವ್ಯಾಖ್ಯಾನ ಕಾಲಗಳಲ್ಲಿ ಗಲಭೆಯನ್ನು ಮಾಡಿ ಕಲ್ಲು, ಮಣ್ಣುಗಳಿಂದ ಹೊಡೆದು ಅವರನ್ನು ನಿಲ್ಲಗೊಡದೆ ಊರಿನ ಹೊರಗೆ ಓಡಿಸಿಬಿಟ್ಟರು. ಆ ಮಹಾತ್ಮರು ಓಡಿಬರುತ್ತಿದ್ದುದನ್ನು ಕಂಡು ವೈರಿಗಳು ಅವರ ಕಾಲುಗಳಮೇಲೆ ಕೋಲುಗಳನ್ನು ಬೀರಿದರು. ಇದರ ಯಾತನೆಯನ್ನು ತಾಳಲಾರದೆ ನೆಲದಮೇಲೆ ಕುಳಿತುಕೊಳ್ಳಲು ಅಲ್ಲಿಗೂ ಶತ್ರುಗಳು ತೃಪ್ತಿ ಹೊಂದದೆ ಬಂದು ಕಂಕುಳಲ್ಲಿ ಕೈಗಳನ್ನು ಹಾಕಿ ಮೇಲಕ್ಕೆ ಎತ್ತಿ " ನಮ್ಮ ಊರನ್ನು ಬಿಟ್ಟು ಹೊರಗೆ ಹೋಗಬೇಕು " ಎಂದು ಬಲೋದ್ಬಂಧದಿಂದ ಹೊರಗೆ ಅಟ್ಟಬಿಟ್ಟರು. ತಾಳ್ಮೆಯಿಂದ ತುಂಬಿ ತುಳುಕಿದವರಾದ ಆ ಮಹಾತ್ಮರು ಅನೇಕ ಕಷ್ಟಗಳನ್ನನುಭವಿಸಿ ಊರಿನ ಹೊರಗೆ ಬಂದು ಸಾಕ್ಷಾತ್ ಪರಮಾತ್ಮನ ಸಾನ್ನಿಧ್ಯದಲ್ಲಿ ಸಾಷ್ಟಾಂಗ ಪ್ರಣಾಮದಿಂದ ವೊರೆಯಿಟ್ಟು " ಹೆ ! ಭಕ್ತಪಾಲಕ ! ಹೇ ಸಜ್ಜನೋದ್ಧಾರಕ ! ಈ ಜನರು ನನ್ನನ್ನು ತಿಳಿಯಲಾರರು. ಇವರಿಗೆ ಅಜ್ಞಾನವು ಮುಚ್ಚಿಕೊಂಡಿದೆ. ಇವರಿಗೆ ಜ್ಞಾನತೇಜಸ್ಸನ್ನಿತ್ತು ರಕ್ಷಿಸು " ಎಂದು ಪ್ರಾರ್ಥಿಸಿದರು. ಪ್ರಾರ್ಥನಾ ತರುವಾಯ ದೇವದೂತನು ಬಂದು " ತಾವು ಅಪ್ಪಣೆಯನ್ನು ಕೊಟ್ಟಲ್ಲಿ ಈ ಪಟ್ಟಣವನ್ನೇ ಕಿತ್ತು ನಾಶಪಡಿಸುವೆನು " ಎಂದು ಹೇಳಲು, ಅದಕ್ಕೆ ದಯಾಭರಿತರಾದ ಹಜರತ್‌ರವರು " ಹಾಗೆ ಮಾಡಬಾರದು, ಇವರು ಸರಿಯಾದ ಮಾರ್ಗವನ್ನು ಹಿಡಿಯಲಾರದೆಹೋದರೆ ಇವರ ಪುತ್ರರಾದರೂ ಕೂಡ ಒಳ್ಳೇ ಹಾದಿಗೆ ಬಂದಾರು " ಎಂದು ಅಪ್ಪಣೆ ಮಾಡಿದರು.

ಆ ದಿವಸ ಆ ಸ್ಥಳವನ್ನು ಬಿಟ್ಟು ಪುನಃ ಮುಕ್ಕಾಪಟ್ಟಣಕ್ಕೆ ದಯಮಾಡಿಸಿ ಪುನಃ ಧರ್ಮಪ್ರಚಾರವನ್ನು ಮಾಡತೊಡಗಿದರು. ಇವರ ವೈರಿಗಳಲ್ಲಿ ಕೆಲಜನ ಮುಖ್ಯಸ್ಥರು ಬಂದು ಹಜರತ್‌ರವರನ್ನು ಕುರಿತು " ತಾವು ತಮ್ಮ

ನವೀನ ಧರ್ಮಪ್ರಚಾರವನ್ನು ಮಾಡಬಾರದು" ಎಂದು ಹೇಳಲು, ಇದಕ್ಕೆ ಪ್ರತ್ಯುತ್ತರವಾಗಿ ಹಜರತ್‌ರವರು "ತಾವು ಬೇಕಾದುದನ್ನು ಮಾಡಬಹುದು. ನಾನು ಯಾವಕಾರ್ಯವನ್ನು ಮಾಡಲು ನೇಮಿಸಲ್ಪಟ್ಟಿರುವೆನೋ ಅದನ್ನು ಎಂದೆಂದಿಗೂ ಬಿಡಲಾರೆನು. ಇದರ ಪರಿಣಾಮವನ್ನು ನೀನೇ ನೋಡುವಿರಿ, ಭಗವಂತನು ನನಗೆ ತೊಂದರೆ ಕೊಡುವವರನ್ನು ಒಂದು ದಿವಸ ನನ್ನ ಮುಂದೆ ಎಡನುರಿಗೆಯೊಂದಿಗೆ ಕರೆಸುವನು. ಕಡೆಗೆ ನನಗೆ ಜಯಪತಾಕೆಯು ಕೊಡಲ್ಪಟ್ಟಿರುವುದು" ಎಂದು ಸೂಚಿಸಿದರು. ಈ ಉತ್ತರವನ್ನು ಕೇಳಿ ಮುಕ್ಕಾಪಟ್ಟಣವೆಲ್ಲಾ ಅಲ್ಲೋಲ ಕಲ್ಲೋಲವಾಯಿತು. ವೈರಿಗಳೆಲ್ಲರು ಇವರ ಮಾತುಗಳು ನಮ್ಮೆಲ್ಲರಿಗೂ ನಿಂದ್ಯಾಸ್ಪದವಾದುವೆಂದು ತಿಳಿದು ಹೇಗಾದರು ಇವರ ಕಾರ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಬೇಕೆಂದು ಯೋಚಿಸಿ, ಹಜರತ್ ಮಹಮ್ಮದರವರ ರಕ್ಷಣಾಕರ್ತೃವಾದ ಮತ್ತು ಇವರ ಚಿಕ್ಕಪ್ಪನವರಾದ "ಅಬೂತಾಲಿಬ್" ರವರ ಸನ್ನಿಧಿಯನ್ನು ಸೇರಿ "ನಾವು ನಿಮ್ಮ ಗೌರವಕ್ಕೂ ಮತ್ತು ವೃದ್ಧಾಪ್ಯಕ್ಕೂ ತಕ್ಕ ಮರ್ಯಾದೆಯನ್ನು ಮಾಡುವುದು ನಮ್ಮ ಕರ್ತವ್ಯವು. ಆದರೆ ನಿಮ್ಮ ಪುತ್ರನಾದ ಮಹಮ್ಮದನು ನಮ್ಮ ವಿಗ್ರಹಗಳನ್ನು ಧಿಕ್ಕರಿಸಿ ವಿರೋಧಿಸುತ್ತಾನೆ. ಇದರಸಲುವಾಗಿ ತಾವು ಆತನನ್ನು ಕರೆದು ನಮ್ಮ ಮೂರ್ತಿಗಳ ಖಂಡನೆಯನ್ನು ಮಾಡದ ಹಾಗೆ ಆಜ್ಞಾಪಿಸಿದ್ದೇ ಆದರೆ, ಆತನು ಐಶ್ವರ್ಯವನ್ನು ಅಪೇಕ್ಷಿಸಿದರೆ ಹೆಚ್ಚಾದ ಐಶ್ವರ್ಯವನ್ನೂ ಮತ್ತು ಧೊರೆಯಾಗುವ ಇಷ್ಟವಿದ್ದಲ್ಲಿ ಈ ದೇಶದ ಧೊರೆತನವನ್ನೂ ಮತ್ತು ಸ್ತ್ರೀಯು ಬೇಕಾದರೆ ಈ ದೇಶದ ಸುಂದರಿಯರಲ್ಲಿ ಉತ್ತಮ ಸೌಂದರ್ಯವುಳ್ಳ ಕನ್ಯೆಯನ್ನಾದರೂ ಕೊಡುವೆವು. ಹಾಗೆ ಇವುಗಳಿಗೆ ಒಪ್ಪದಿದ್ದಲ್ಲಿ ಯುದ್ಧವನ್ನು ಮಾಡಲು ಸಿದ್ಧವಾಗಿರಬೇಕು" ಎಂದು ಮುಕ್ತಕಂಠವಾಗಿ ಹೇಳಿದರು. ಈ ವಿಚಾರವನ್ನು ಹಜರತ್‌ರವರ ಚಿಕ್ಕಪ್ಪನವರು ಅವರ ಸಂಗಡ ಹೇಳತೊಡಗಿ "ಎಲೈ ಬಾಲಕನೆ! ಅವರ ಮೂರ್ತಿಗಳನ್ನು ನಿಂದಿಸಬೇಡ. ಅವರು ನಿನಗೆ ಐಶ್ವರ್ಯವನ್ನೂ, ರಾಜ್ಯವನ್ನೂ ಮತ್ತು ಈ ದೇಶದ ಸುಂದರಿಯರಲ್ಲಿ ಸುಂದರ ಯುವತಿಯನ್ನೂ ಕೊಡುವರು. ಆದರಿಂದ ನೀನು ಹಿಡಿದಕಾರ್ಯವನ್ನು ಬಿಟ್ಟು ಭೋಗವನ್ನು ಅನುಭವಿಸು" ಎಂದು ಬೋಧಿಸಿದರು. ಪ್ರಪಂಚದ ಭಾಗ್ಯ

ವೆಂಬ ನಶ್ವರವಾದ ವಸ್ತುವಿನ ವಿಷಯಾಸಕ್ತಿಯನ್ನು ಭಸ್ಮಮಾಡಿದ್ದ ನಿಸ್ಪೃಹ ಮೂರ್ತಿಯು ಚಿಕ್ಕಪ್ಪನ ನುಡಿಗಳನ್ನು ಕೇಳಿ ತಳವುಳಿಗೊಂಡು "ಓ! ಕಾಕ! ನನ್ನನ್ನು ನೀವು ಗ್ರಹಿಸಲಿಲ್ಲಾ. ನಾನು ಜಗತ್ತಿನ ದುಃಖವನ್ನು ದೂರಮಾಡಲು ಅವತರಿಸಿರುತ್ತೇನೆಯೆ ಹೊರತು ಧೊರೆತನವನ್ನೂ ಐಶ್ವರ್ಯವನ್ನೂ ಮತ್ತು ಸುಂದರ ಸ್ತ್ರೀಯಭೋಗವನ್ನೂ ಅನುಭವಿಸುವ ಸಲುವಾಗಿ ಬಂದಿಲ್ಲಾ. ಈ ಮೂಢಜನರು ನನ್ನ ಬಲಗೈಯ್ಯಲ್ಲಿ ಜಾಜ್ವಲ್ಯಮಾನನಾದ ಸೂರ್ಯನನ್ನೂ ಮತ್ತು ಎಡಗೈಯ್ಯಲ್ಲಿ ಸಾವಿರಾರು ಮೈಲಿಗಳ ದೂರದಲ್ಲಿರುವ ಚಂದ್ರನನ್ನೂ ತಂದಿಟ್ಟರೂ, ಭಗವಂತನಿಂದ ನಾನು ವಿತಕ್ಕೆ ಕಳುಹಿಸಲ್ಪಟ್ಟಿರುತ್ತೇನೆಯೊ ಅದಕ್ಕೋಸ್ಕರ ಒಂದು ಹೆಜ್ಜೆಯಾದರೂ ಹಿಂದೆಗೆಯುವನಲ್ಲ. ಇದು ಖಂಡಿತವು" ಎಂದು ಧೃಢವಾಗಿ ಹೇಳಿದರು. ಈ ಮಾತುಗಳನ್ನು ಕೇಳಿ ಅವರ ಚಿಕ್ಕಪ್ಪನವರು ಬೆರಗಾಗಿ ಕುಳಿತರು.

ಹೀಗೆ ಶತ್ರುಮಂಡಲಿಯವರು ಪರಂಪರೆಯಾಗಿ ಕಷ್ಟಗಳನ್ನು ಕೊಡುತ್ತಲೆ ಇದ್ದರು. ಆದರೂ ಧೃಡಸಂಕಲ್ಪವುಳ್ಳ ಆ ಮಹಾತ್ಮರು ತಮ್ಮ ಧರ್ಮಕಾರ್ಯವನ್ನು ಎಂದಿಗೂ ಬಿಡುತ್ತಿರಲಿಲ್ಲ. ಒಂದು ದಿವಸ ಹಜರತ್‌ರವರು ಪ್ರಾರ್ಥನೆ ಮಾಡುತ್ತಿರಲು, ದುಷ್ಟರು ಒಂಟೆಯ ಕರುಳುಗಳನ್ನು ತಂದು ಅವರ ಕತ್ತಿನಲ್ಲಿ ಹಾಕಿದರು. ದಾರಿಯಲ್ಲಿ ಹೋಗುತ್ತಿರುವಾಗ ಮುಳ್ಳುಗಳನ್ನು ಹಾಸುತ್ತಿದ್ದರು. ಇಸ್ಲಾಮ್ ಧರ್ಮಕ್ಕೆ ಸೇರಿದವರನ್ನು ಕಾಯುತ್ತಿದ್ದ ಬಿಸಿಲಿನಲ್ಲಿ ಕಟ್ಟಹಾಕಿ ಹೊಡೆಯುತ್ತಿದ್ದರು. ಮತ್ತು ಕೆಲವರನ್ನು ಅತ್ಯಧಿಕವಾದ ಶಿಕ್ಷೆಗಳಿಗೆ ಗುರಿಮಾಡುತ್ತಿದ್ದರು. ಇದೇರೀತಿಯಲ್ಲಿ ಹದಿಮೂರು ವರ್ಷಗಳ ವರೆಗೂ ವರ್ಣಿಸಲಸದಳವಾದ ಕಷ್ಟಗಳನ್ನು ಅನುಭವಿಸಿ, ಕಡೆಗೆ ತಮ್ಮ ಭಕ್ತರಿಗೆ ಪರದೇಶಗಳಿಗೆ ಪ್ರಯಾಣ ಬೆಳಸಿ ಹೋಗಿ ಅಲ್ಲಿ ನಿಲ್ಲಬಹುದೆಂದು ಅಪ್ಪಣೆಯನ್ನಿತ್ತರು. ಇದರಂತೆ ಕೆಲವರು ಅಬಿಸೀನಿಯಾ ದೇಶಕ್ಕೂ ಮತ್ತು ಕೆಲವರು ಈಜಿಪ್ಟ್, ಮದೀನ ಮುಂತಾದ ಪ್ರದೇಶಗಳಿಗೂ ಪ್ರಯಾಣ ಬೆಳಸಿದರು.

ಮಕ್ಕಾದ ಪ್ರಮುಖ ವೈರಿಗಳೆಲ್ಲರು ಹಜರತ್ ಮಹಮ್ಮದ್ ಪೈಗಂಬರರನ್ನು ಕೊಲ್ಲಬೇಕೆಂದು ಪ್ರಯತ್ನಿಸಿದರು. ಆಗ ಭಕ್ತವತ್ಸಲನಾದ ಪರಮಾತ್ಮನು ಹಜರತ್ ಮಹಮ್ಮದರಿಗೆ ಈ ವಿಷಯವನ್ನು ಓಂಕಾರೋಕ್ತಿ

ಯಿಂದ ತಿಳಿಯಪಡಿಸಿದನು. ಆಗ ಈ ವಿಷಯವನ್ನು ತಮ್ಮ ಪರಮಭಕ್ತರಾದ ಹಜರತ್ ಅಬೂಬಕರ್ ಸಿದ್ದೀಖ್‌ರವರಿಗೆ ತಿಳಿಯಪಡಿಸಿ, ಈ ಪಟ್ಟಣವನ್ನು ಬಿಟ್ಟು ತೆರಳಲು ಪರಮಾತ್ಮನು ಆಜ್ಞೆ ಮಾಡಿರುತ್ತಾನೆಂದೂ ಅದರಂತೆ ಈ ಸ್ಥಳವನ್ನು ಬಿಟ್ಟುಹೋಗಬೇಕೆಂದು ಸೂಚಿಸಿದರು. ಆದರೆ ಯಾವಸ್ಥಳಕ್ಕೆ ಹೋಗಬೇಕೆಂಬುದು ಮಾತ್ರ ಇವರಿಗೆ ತಿಳಿದಿರಲಿಲ್ಲವಾದ್ದರಿಂದ ಪುನಃ ಭಗವತ್ಸಮಾಧಿಯಲ್ಲಿ ಹೊಕ್ಕು ಈ ವಿಷಯವನ್ನು ತಿಳಿದರು. ಆಗ ಅವರು ಆ ಅವಸ್ಥೆಯಲ್ಲಿ ಬಂದು ವನವನ್ನು ಹೊಂದಿರುವ ಒಂದು ಪಟ್ಟಣವನ್ನು ಕಂಡು ಅದು ಮದೀನ ಅಥವ ಯಮಾಮ ಪಟ್ಟಣಗಳ ಹಾಗೆ ಕಂಡು ಬಂದದ್ದರಿಂದ, ಮದೀನ ಪಟ್ಟಣವು ತಮಗೆ ನಿಲ್ಲಲು ಉತ್ತಮಸ್ಥಾನವೆಂದು ತಿಳಿದು, ಆ ದಿವಸ ರಾತ್ರಿಯೇ ಅಲ್ಲಿಗೆ ಪ್ರಯಾಣ ಬೆಳಸಲು ಸನ್ನಾಹಗಳನ್ನು ಸಿದ್ಧಪಡಿಸಿದರು. ಸ್ವಲ್ಪ ರಾತ್ರಿಯಾಗುತ್ತಲೆ ಸ್ಥೈರ್ಯಸ್ವರೂಪಿಗಳಾದ ಪರಮಗುರುಗಳು ತಮ್ಮ ಹಾಸಿಗೆಯಮೇಲೆ ತಮ್ಮ ಪರಮಭಕ್ತರೂ ಮತ್ತು ಸ್ವಂತ ಆಳಿಯಂದಿರೂ ಆದ ಹಜರತ್ ಅಲಿಯವರನ್ನು ಮಲಗಿಸಿ, ತಾವು ಮತ್ತು ಹಜರತ್ ಅಬೂಬಕರ್ ಸಿದ್ದೀಖ್‌ರವರು ಒಂಟೆಯನ್ನು ಮೇಯಿಸುವ ವೇಷವನ್ನು ಹಾಕಿಕೊಂಡು ಬುತ್ತಿ ಮುಂತಾದುವುಗಳೊಡನೆ ಮದೀನಾ ಪಟ್ಟಣದ ಮಾರ್ಗವನ್ನು ಕುರಿತು ಪ್ರಯಾಣ ಬೆಳಸಿ ಬೆಳಗಾಗುವದರ ಒಳಗಾಗಿ ದಾರಿಯ ಸಮೀಪದ ಒಂದು ಗುಹೆಯನ್ನು ಕಂಡು ಒಂಟೆಯನ್ನು ಮೇಯಲು ಬಿಟ್ಟು ಆಗುಹೆಯ ಒಳಹೊಕ್ಕು ಅಡಗಿಕೊಂಡರು. ತರುವಾಯ ಶತ್ರುಗಳು ಮನೆಯಲ್ಲಿ ಹಜರತ್‌ರವರನ್ನು ಕಾಣದೆ ಬೆಳಗಾದ ನಂತರ ಒಂಟೆಯ ಹೆಜ್ಜೆಯನ್ನು ಹಿಡಿದು ನಡೆದು ಬಹುಜಾಗ್ರತೆಯಾಗಿ ಗುಹೆಯ ಸಮೀಪವನ್ನು ಸೇರಿ ನೋಡಿದರು. ಆದರೆ ಆ ಗವಿಯ ದ್ವಾರದಲ್ಲಿ ಬಂದು ಜೇಡಂಹುಳವು ತನ್ನ ನಿವಾಸಸ್ಥಾನವನ್ನು ಕಟ್ಟಿಕೊಂಡೂ ಮತ್ತು ಬಂದು ಪಾರಿವಾಳವು ತನ್ನ ಗೂಡಿನಲ್ಲಿ ಮೊಟ್ಟೆಗಳನ್ನು ಇಟ್ಟುಕೊಂಡೂ ಕುಳಿತಿದ್ದುವು. ಇವರು ಸಮೀಪಿಸಿದ ಕೂಡಲೆ ಪಾರಿವಾಳವು ಹಾರಿಹೋಯಿತು. ಇದರಿಂದ ಶತ್ರುಗಳು ಅಲ್ಲಿ ಹಜರತ್‌ರವರು ಅಡಗಿಲ್ಲವೆಂದು ತಿಳಿದು ಹಿಂದಿರುಗಿದರು. ಆದರೆ ಗವಿಯ ಬಾಗಿಲು ಭೂಮಿಗೆ ತಗುಲಿ ಇರಲು ಬಂದ ಶತ್ರುಗಳು ಒಳಗಿದ್ದವರನ್ನು ನೋಡಲಾರದೆ ಹೋದರು. ಆದರೆ ಶತ್ರುಗಳ ಕಾಲುಗಳು ಮಾತ್ರ ಒಳ

ಗಿದ್ದ ಗುರುಭಕ್ತರ ಕಣ್ಣಿಗೆ ಬಿದ್ದವು. ಆಗ ಹಜರತ್ ಅಬೂಬಕರ್ ಸಿದ್ದೀಖ್ ರವರು ಪರಮ ಗುರುಗಳನ್ನು ಕೂರಿತು "ಓ ! ಗುರುಗಳೆ! ಶತ್ರುಗಳು ಬಂದರು. ಮುಂದೆ ಗತಿ ಏನು" ಎಂದು ಹೇಳಲು ದೈವಸಂಕಲ್ಪವನ್ನು ತಿಳಿದ ಆ ಮಹಾತ್ಮರು "ಹೆದರಬೇಡ, ನಾವಿಬ್ಬರಿರುವೆನೆಂದು ತಿಳಿಯಬೇಡ, ಪರಮಾತ್ಮನು ನಮ್ಮ ಸಂಗಡಲೆ ಇದ್ದಾನೆ" ಎಂದು ಉತ್ತರವನ್ನಿತ್ತರು.

ಶತ್ರುಗಳು ತಮ್ಮಕೋರಿಕೆಯು ನೆರವೇರದಿರುವುದರಿಂದ ಬಹು ನಾಚಿ ಕೊಂಡು ಕೋಪವನ್ನು ತಾಳಿ ಯಾರು ಮಹಮ್ಮದರನ್ನು ಹಿಡಿದು ತರುವರೊ ಅಂಥವರಿಗೆ ಒಂದುನೂರು ಒಂಟೆಗಳನ್ನು ಬಹುಮಾನವಾಗಿ ಕೊಡುತ್ತೇವೆಂದು ಪ್ರಸಿದ್ಧಪತ್ರಿಕೆಯನ್ನು ಪ್ರಕಟಿಸಿದರು. ಒಂಟೆಗಳ ಆಸೆಗೋಸುಗ ಅನೇಕಜನರು ಇವರನ್ನು ಹಿಡಿತರಲು ದಿಕ್ಕು ದಿಕ್ಕುಗಳಿಗೆ ಹೊರಟರು. ಆದರೆ "ಸುರೇಖ" ಎಂಬಾತನು ಹಜರತ್‌ರವರು ಹೋದದಾರಿಯನ್ನು ಹಿಡಿದು ಕುದುರೆಯನ್ನೇರಿ ಸೆಳೆದ ಬಿಲ್ಲು-ಬಾಣವುಳ್ಳವನಾಗಿ ವಾಯುವೇಗದಿಂದ ಕುದುರೆಯನ್ನು ಬಿಟ್ಟನು. ಆದರೆ ಮಧ್ಯದಲ್ಲಿ ಕುದುರೆಯು ಮುಗ್ಗರಿಸಿದುದರಿಂದ ಇದು ಅಪಶಕುನವೆಂದು ಸ್ವಲ್ಪಹೊತ್ತು ಯೋಚಿಸಿ, ಪುನಃ ಕುದುರೆಯನ್ನು ವೇಗವಾಗಿ ಹೊಡೆದನು. ಸ್ವಲ್ಪದೂರಹೋದಮೇಲೆ ಎರಡು ಕಾಲುಗಳು ಭೂಮಿಯಲ್ಲಿ ಸಿಕ್ಕಿಕೊಂಡವು. ಆಗ ಇದೂಕೂಡ ಅಪಶಕುನವೆಂದು ತಿಳಿದು ಮುಂದೆ ಹೋಗದೆ ಹಿಂದಿರುಗಿದನು. ಹೇಗೋ ದಯಾಸಮುದ್ರನಾದ ಪರಮಾತ್ಮನು ತನ್ನ ಸತ್ಯಪ್ರವಾದಿಯನ್ನು ಸಮಸ್ತ ಜೀವ ಸಂಗಟಗಳಿಂದ ಉಳಿಸಿ ಸುಖವಾಗಿ ಮದೀನಾ ಪಟ್ಟಣಕ್ಕೆ ಸೇರಿಸಿದನು.

ಮದೀನಾಪಟ್ಟಣದಲ್ಲಿಯೂ ಕೆಲವು ದಿವಸಗಳು ಕಳೆದುಹೋದವು. ಇವರ ಸುಬೋಧೆಯು ಬಹುಜನ ಸತ್ಯವಾದಿಗಳನ್ನು ಇಸ್ಲಾಂಮತವೆಂಬ ಸಮುದ್ರ ಪ್ರವೇಶವನ್ನು ಮಾಡಿಸಿತು. ಈ ಸಮಾಜಾಭಿವೃದ್ಧಿಯನ್ನು ಮಕ್ಕಾ ಪಟ್ಟಣದ ವೈರಿಗಳು ಕೇಳಿ ಬಹು ಕೋಪೋದ್ರೇಕವುಳ್ಳವರಾಗಿ ಒಂದು ಸಭೆಯನ್ನು ಸೇರಿಸಿ, ಹೇಗಾದರೂ ಈ ಸಮಾಜವನ್ನು ಮೂಲೋತ್ಪಾಟನಮಾಡಬೇಕೆಂಬ ಠರಾವನ್ನು ಮಾಡಿಕೊಂಡರು. ಶತ್ರುಪ್ರಮುಖರೆಲ್ಲರೂ ಒಂದು ಸಾವಿರಜನಉಳ್ಳ ಸೈನ್ಯವನ್ನು ಯುದ್ಧಸನ್ನಾಹಗಳೊಡನೆ ಸಿದ್ಧಮಾಡಿ ಮದೀನಾ ಪಟ್ಟಣದ ಸಮೀಪದಲ್ಲಿ "ಬದರ್" ಎಂಬ ಮೈದಾನದಲ್ಲಿ ಬಂದು ಇಳಿದರು.

ಈ ಸಮಾಚಾರವು ಹೇಗೋ ಹಜರತ್ ಮಹಮ್ಮದ್‌ರವರಿಗೆ ಗೊತ್ತಾಗಿ ಇವರೂಕೂಡ ಯುದ್ಧಸನ್ನಾಹದೊಂದಿಗೆ ಸಿದ್ಧರಾಗಿ ಗೊತ್ತಾದ ಮೈದಾನಕ್ಕೆ ಬಂದು ಪಾಳೆಯವನ್ನು ಹಾಕಿದರು. ಹಜರತ್‌ರವರಕಡೆಯಲ್ಲಿ ಮಾತ್ರ ಮೂರುನೂರ ಹದಿಮೂರು ಜನಗಳುಮಾತ್ರ ಇದ್ದರು. ಶತ್ರುಸೈನ್ಯದಲ್ಲಿ ಒಂದು ಸಾವಿರದವರಿಗೂ ಜನಸಂಖ್ಯೆಯಿದ್ದಿತು. ಕಾಳಗವು ಪ್ರಾರಂಭಿಸುವುದಕ್ಕೆ ಮುಂಚೆ ಹಜರತ್ ಮಹಮ್ಮದ್ ಪೈಗಂಬರರು ಒಂದು ಗುಡಿಸಲಿನಲ್ಲಿ ಹೋಗಿ ಪರಮಾತ್ಮನ ಸಾನ್ನಿಧ್ಯದಲ್ಲಿ ಸಾಷ್ಟಾಂಗಪ್ರಣಾಮವನ್ನು ಮಾಡಿ "ಓ! ಭಕ್ತ ವತ್ಸಲನಾದ ಪರಮಾತ್ಮನ! ನಿನ್ನ ಸಮಾಜವು ನಿರ್ನಾಮಹೋದಮೇಲೆ ನಿನ್ನ ಸಾಮ್ರಾಜ್ಯವನ್ನು ಪರಿಪಾಲಿಸುವವರಾರು? ಎಲ್ಲ ಮೃತ್ಯುಂಜಯನೇ, ನಿನ್ನನ್ನು ನಂಬಿರುವ ಸಮಾಜವನ್ನು ನೀನು ಉಳಿಸದೆ ಇದ್ದರೆ ಮತ್ತಾರು ಕಾಪಾಡುವರು" ಎಂದು ಪ್ರಾರ್ಥಿಸುತ್ತಾ ಹೊರಗೆಬಂದು ಬಂದು ಹಿಡಿ ಮರಳನ್ನು ಕೈಯ್ಯಲ್ಲಿ ತಗೆದುಕೊಂಡು ತಮ್ಮ ಶತ್ರುಸೈನಿಕರ ಕಡೆ ಎಸೆದರು. ತತ್‌ಕ್ಷಣದಲ್ಲಿಯ ಆದಿಕ್ಕಿನಿಂದ ಬಿರುಗಾಳಿ ಬೀಸುವುದಕ್ಕೆ ಪ್ರಾರಂಭವಾಗಿ ಧೂಳಿಲ್ಲವು ಚದರಿ ಶತ್ರುಗಳ ಕಣ್ಣಿನಲ್ಲಿ ಬೀಳಲಾರಂಭಿಸಿತು. ಇದಾದ ಸ್ವಲ್ಪಹೊತ್ತಿನ ಮೇಲೆ ವೃಷ್ಟಿಧಾರೆಯು ಪ್ರಾರಂಭಿಸಿ ಹಜರತ್‌ರವರಕಡೆ ಇದ್ದ ಸ್ಥಳಗಳು ನೀರಿನಿಂದಾವೃತವಾದವು. ಆದ್ದರಿಂದ ಇವರ ಕುದುರೆಗಳಿಗೂ ಮತ್ತು ಜನರಿಗೂ ಕುಡಿಯಲು ನೀರು ಸಿಕ್ಕಿತು. ಆದರೆ ಶತ್ರುಗಳಕಡೆ ಯಾವ ನೀರೆಯೂ ಬೀಳಲಿಲ್ಲ. ಶತ್ರುವರ್ಗದವರು ನೀರಿಲ್ಲದೆ ಬಹಳ ಕಷ್ಟವನ್ನು ಅನುಭವಿಸಬೇಕಾಯಿತು. ಯುದ್ಧಪ್ರಾರಂಭವಾದ ಸ್ವಲ್ಪಹೊತ್ತಿನಲ್ಲೇ ಮಕ್ಕಾಪಟ್ಟಣದವರು ಪಲಾಯನಮಾಡಿದರು. ಮೈದಾನದಲ್ಲಿಮಾತ್ರ ಎಂಟುಮಂದಿ ಸೈನ್ಯಾಧಿಪತಿಗಳೂ ಮತ್ತು ಅನೇಕ ಯೋಧರೂ ಭೂಮಿಯಮೇಲೆ ಬಿದ್ದು ಗತಪ್ರಾಣರಾಗಿದ್ದರು. ಇದೇ ಮೊದಲನೆಯುದ್ಧವು. ಇದರಲ್ಲಯೇ ದೈವ ಸಂಕಲ್ಪಗಳಿಗೆ ಮಿತವಿಲ್ಲದ ಜಯವಾಯಿತು.

ಪ್ರಥಮಯುದ್ಧದಲ್ಲಿ ಭವಿಗಳು ತಮಗಾದ ಅಪಜಯಕ್ಕಾಗಿ ಬಹು ಕೋಪಾವೇಶಿತರಾಗಿ ಮಾರನೆಯವರ್ಷ ಮೂರುಸಾವಿರ ಜನಸಂಖ್ಯೆಯುಳ್ಳ ಬಲವಾದ ಸೈನ್ಯದೊಡನೆ ಮದೀನಾಪಟ್ಟಣದಮೇಲೆ ಪ್ರಯಾಣಬೆಳೆಯಿಸಿದರು. ಪುನಃ ಮುಸಲ್ಮಾನರು ಯುದ್ಧಸನ್ನದ್ಧರಾದರು, ಆಗ ಇವರ ಸೈನ್ಯವು ಒಂದು

ಸಾವಿರದವರೆಗಿತ್ತು. ಆದರೆ ಈ ಸಮಯದಲ್ಲಿ ಮೂರುನೂರುಜನ ಗುರು ದ್ರೋಹಿಗಳು ಯುದ್ಧಕ್ಕೆ ಬರುವ ವಾಗ್ದಾನಮಾಡಿ ತಲತಪ್ಪಿಸಿಕೊಂಡರು. ಆದುದರಿಂದ ಮೂವತ್ತಾವಿರ ಬಲವುಳ್ಳ ಸೈನ್ಯದಮೇಲೆ ಏಳುನೂರು ಜನ ಸಂಖ್ಯೆಯುಳ್ಳ ಸೈನ್ಯವು ಯುದ್ಧಮಾಡಬೇಕಾಯಿತು. ಯುದ್ಧವು ಪ್ರಾರಂಭವಾಗುವುದಕ್ಕೆ ಮುಂಚೆ ಹಜರತ್‌ರವರು ಒಂದುತರಹೆಯ ಸೈನ್ಯವನ್ನು ಗೊತ್ತಾದ ಸ್ಥಳಗಳಲ್ಲಿ ಸ್ಥಾಯಿಯಾಗಿ ಇದ್ದು ಯುದ್ಧಮಾಡುವಂತ ಆಜ್ಞಾಪಿಸಿದ್ದರು. ಆದರ ಮುಸಲ್ಮಾನ ಸೈನ್ಯದಲ್ಲಿ ಕೆಲವರು ಗುರುವಾಗ್ನೆಯನ್ನು ಮೀರಿ ಸ್ಥಳವನ್ನು ಬದಲಾಯಿಸಿದರು ಇದನ್ನು ನೋಡುತ್ತಲಿದ್ದ ವೈರಿಗಳು ಸೋತಂತೆ ನಟಿಸಿ ಹಿಮ್ಮೆಟ್ಟಿದರು. ಇದನ್ನು ಅರಿಯದ ಹಜರತ್‌ರವರು ಗೊತ್ತಾದ ಸ್ಥಳದಲ್ಲಿ ನಿಲ್ಲಿಸಿದ್ದ ಬಿಲ್ಲಾಳುಗಳು ತಾವಿದ್ದ ಸ್ಥಳವನ್ನು ಬಿಟ್ಟು ಗುರುಗಳ ಆಜ್ಞೆಯನ್ನು ಮರತು ಶತ್ರುಸೈನ್ಯದಮೇಲೆ ಬಿದ್ದರು. ಇದನ್ನು ವೈರಿಗಳು ಕಂಡು ಆ ಸ್ಥಳವನ್ನು ತಾವು ಆಕ್ರಮಿಸಿಕೊಂಡು ಬಾಣಪ್ರವಾಹದಿಂದ ಮುಸಲ್ಮಾನ ಸೈನ್ಯವನ್ನು ತುಂಬಿಬಿಟ್ಟರು. ಈ ಯುದ್ಧದಲ್ಲಿ ಮುಸಲ್ಮಾನವರ್ಗದಲ್ಲಿ ಬಹುಜನರು ವೀರಸ್ವರ್ಗವನ್ನು ಹೊಂದಿದರು. ಹಜರತ್‌ರವರಿಗೂಕೂಡ ಮೈ ಘಾಯಗಳಿಂದ ತುಂಬಿ ರುಧಿರವು ಸೋರುತ್ತಿದ್ದಿತು ಮತ್ತು ಒಂದು ದಂತವೂಕೂಡ ಸಡಿಲವಾಯಿತು. ಈ ನೋವನ್ನು ತಾಳಲಾರದೆ ಮೂರ್ಛೆಯನ್ನುಹೊಂದಿ ಹಳ್ಳದಲ್ಲಿ ಬಿದ್ದುಬಿಟ್ಟರು. ಅವರ ಅನುಯಾಯಿಗಳು ಇವರನ್ನು ಕಾಣದೆ ಸಂಕಟದಿಂದ ಪೇಚಾಡುತ್ತಿದ್ದರು. ಅಷ್ಟರಲ್ಲಿಯೆ ಶತ್ರುಗಳಲ್ಲಿ ಕೆಲವರು ಹಜರತ್‌ರವರು ಕಾಲವಾದರೆಂದು ಸುಳ್ಳುವರ್ತಮಾನವನ್ನು ಹಬ್ಬಿಸಿದರು. ಇದನ್ನು ಕೇಳಿ ಭಕ್ತರು ಮತ್ತಷ್ಟು ಶಕ್ತಿಗುಂದಿ ಸಂಕಟಪಡಲಾರಂಭಿಸಿ ಓಡಲುಪಕ್ರಮಿಸಿದರು. ಆಗ ಹಜರತ್‌ರವರ ಪರಮ ಭಕ್ತರಾದ ಹಜರತ್ ಅಬೂಬಕರ್ ಸಿದ್ದೀಖ್‌ರವರು ಹಿಮ್ಮೆಟ್ಟುತ್ತಿದ್ದ ಸೈನ್ಯವನ್ನು ಕಂಡು " ಎಲ್ಲಿ ! ಭಕ್ತಪ್ರಮುಖರೆ ! ನಾವು ಹಜರತ್‌ರವರಿಗೋಸ್ಕರ ಯುದ್ಧ ಮಾಡಲಿಲ್ಲ. ಯಾವ ದೈವಮತವನ್ನು ನೆಲಗೊಳಿಸಲೋಸುಗ ಹಜರತ್‌ರವರು ಅವತರಿಸಿದ್ದರೋ ಆ ಮತೋಜ್ವಲಕ್ಕಾಗಿ ಸ್ಥಿರಮನಸ್ಸುಗಳಿಂದ ಯುದ್ಧಮಾಡಿರಿ, ಪರಮಾತ್ಮನು ನಿಮಗೆ ಜಯವನ್ನು ದಯಪಾಲಿಸುವನು " ಎಂದು ಸಾರಿಹೇಳುತ್ತಾ ಜನರಲ್ಲಿ ಉತ್ತೇಜನವನ್ನು ಹುಟ್ಟಿಸುತ್ತಿ

ದ್ದರು. ಕೆಲವರು ಹಜರತ್‌ರವರನ್ನು ಹುಡುಕುತ್ತಾ ಹೊರಟು ಮೂರ್ಛಾವಸ್ಥೆಯಲ್ಲಿ ಬಿದ್ದಿರುವುದನ್ನು ಕಂಡು ವೈದಡವಿ ತಂಗಾಳಿಯನ್ನು ಬೀಸಿ ವ್ರಣಗಳಿಗೆ ಬಟ್ಟೆಯನ್ನು ಸುತ್ತಿ ಎಚ್ಚರಗೊಳಿಸಿದರು. ಇವ್ವರಲ್ಲಿ ಶತೃಗಳು ತಮಗೆ ಜಯವಾಯಿತೆಂದು ತಿಳಿದು ಸಂತೋಷದಿಂದ ಉಬ್ಬಿಹೋದರು. ಶತೃಗಳಲ್ಲಿ ಪ್ರಮುಖನಾದ ಅಬೂಸುಫಿಯಾನ್‌ನು ಮುಸಲ್ಮಾನರನ್ನು ಕುರಿತು, "ಮಹಮ್ಮದರು ಇದ್ದಾರೆಯೇ?" ಎಂದು ಕೇಳಿದನು. ಆಗ ಹಜರತ್‌ರವರು ಉತ್ತರವನ್ನು ಕೊಡದೆ ಮೌನವಾಗಿರಲು ಆಜ್ಞಾಪಿಸಿದರು. ಮತ್ತೊಮ್ಮೆ "ಅಬೂಬಕರ್ ಸಿದ್ದೀಖ್ ಇದ್ದಾರೆಯೇ?" ಎಂದು ಪ್ರಶ್ನಿಸಿದನು. ಅದಕ್ಕೂ ಸುಮ್ಮನಿರುವಂತೆ ಆಜ್ಞೆಯಾಯಿತು. ಪುನಃ "ನಿಮ್ಮಲ್ಲಿ ಉಮರ್‌ರವರು ಇದ್ದಾರೆಯೇ?" ಎಂದು ಕೇಳಿದನು. ಅದಕ್ಕೂ ಮೌನವಾಗಿದ್ದರು. ಕಡೆಗೆ ಅಬೂಸುಫಿಯಾನನು ಎದುರು ಪಕ್ಷದಲ್ಲಿ ಪ್ರಮುಖರೆಲ್ಲರು ಸತ್ತರೆಂದು ತಿಳಿದು "ಎಯಿಲಿ, ಎಯಿಲಿ, ಹುಬುಲ್" ಎಂದರೆ "ಹುಬುಲ್ (ದೇವತೆ)ಗೆ ಜಯವಾಗಲಿ" ಎಂದು ಹೇಳಿದನು. ಆಗ ಹಜರತ್‌ರವರು ಪರಮಾತ್ಮನ ಕುಲಘಾತಕವಾದ ಈ ಮಾತನ್ನು ತಾಳಲಾರದೆ ಈಗ ಉತ್ತರವನ್ನು ಕೊಡುವುದು ತಮ್ಮ ಕರ್ತವ್ಯವೆಂದು ತಿಳಿದು, "ಅಲ್ಲಾಹು ಆಲ ವೊ ಅಜಲ್" ಎಂದರೆ "ಪರಮಾತ್ಮನು ಘನತೆಯುಳ್ಳವನು ಮತ್ತು ದುಷ್ಟಶಿಕ್ಷಕನು" ಎಂದು ಸಾರಿ, ಕರದಲ್ಲಿ ಕತ್ತಿಯನ್ನು ಹಿಡಿದು ಕುದುರೆಯನ್ನು ಏರಿ ಭಗವಂತ ನಿಗೋಸ್ಕರ ಯುದ್ಧ ಮಾಡಲುಪಕ್ರಮಿಸಿದರು. ನಂತರ ದೊಡ್ಡ ಯುದ್ಧವು ಕ್ಷಣಮಾತ್ರದಲ್ಲಿಯೇ ಪ್ರಾರಂಭವಾಗಿ ಅದ್ಭುತವಾದ ಜಯವನ್ನು ಹೊಂದಿ ಗುರುಭಕ್ತರು ವೈರಿಗಳನ್ನು ಹಿಂದಕ್ಕೆ ಓಡಿಸಿಬಿಟ್ಟರು.

ಮೂರನೆಯ ವರ್ಷ ಮಕ್ಕಾದವರು ಪುನಃ ಯುದ್ಧಕ್ಕನುವಾಗಿ ಬಂದರು. ಅದೇ ಕಾಲದಲ್ಲಿ ಮದೀನಪಟ್ಟಣದ ಸುತ್ತಮುತ್ತಲಿದ್ದ ಇತರ ಕುಲದವರು ಕೂಡ ಹಜರತ್‌ರವರ ಮೇಲೆಬೀಳುವಹಾಗೆ ಕಂಡುಬಂದಿತು. ಈ ಒಳಸಂಚು ಮೊದಲೆ ಗೊತ್ತಾದ್ದರಿಂದ ಹಜರತ್‌ರವರು ಮದೀನಾಪಟ್ಟಣದ ಸುತ್ತಲು ಒಂದು ಕಂದಕವನ್ನು ಅಗೆಯಿಸಿದರು. ಇದನ್ನು ಅಗೆಯುತ್ತಿದ್ದಾಗ ಇತರ ಕೂಲಿಗಳಂತೆ ತಾವೂ ಕೂಡ ಅಗೆಯುತ್ತಾ ಸ್ವಲ್ಪವೂ ಬೇಸರವಿಲ್ಲದೆ ಕೆಲಸಮಾಡುತ್ತಿದರು. ತಾವು ಒಂದು ಕಲ್ಲನ್ನು ಹೊಡೆಯುತ್ತಿದ್ದಾಗ,

ಈರಾಕ್ ಮತ್ತು ರೂಮದೇಶಗಳ ಅರಮನೆಗಳನ್ನು ನೋಡಿ, ಈ ವಿಷಯವನ್ನು ಎಲ್ಲರಿಗೂ ತಿಳಿಸಿ ತಮ್ಮ ಅನುಯಾಯಿಗಳನ್ನು ಕರಿತು, "ಪರಮಾತ್ಮನು ನಮಗೆ ಈರಾಕ್ ಮತ್ತು ರೂಮದೇಶಗಳ ಅರಮನೆಗಳನ್ನು ಕೊಡುವುದಕ್ಕೆ ಇಚ್ಛಿಸಿದ್ದಾನೆ" ಎಂದು ತಿಳಿಸಿದರು. ಇದೇ ಪ್ರಕಾರ ಕೆಲವು ದಿನಗಳಲ್ಲಿ ಈರಾಕ್ ಮತ್ತು ರೂಮ ರಾಜ್ಯಗಳು ಮುಸಲ್ಮಾನರ ಕೈವಶವಾದುವು.

ಒಂದು ದಿನಸ ಹಜರತ್ ಮಹಮ್ಮದ್ ಪೈಗಂಬರರು ತಮ್ಮ ಭಕ್ತರೊಂದಿಗೆ ಮಕ್ಕಾಯಾತ್ರೆಯನ್ನು ಮಾಡಿದಂತೆ ಕನಸಿನಲ್ಲಿ ಕಂಡರು. ಕೂಡಲೆ ಹಜರತ್‌ರವರು ಒಂದು ಸಾವಿರದ ನಾಲ್ಕುನೂರು ಜನ ಶಿಷ್ಯರೊಂದಿಗೆ ಆಯುಧರಹಿತರಾಗಿ ಮಕ್ಕಾಕ್ಕೆ ಯಾತ್ರೆಗೋಸುಗ ಹೊರಟರು. ಮುಸಲ್ಮಾನರು ಶಸ್ತ್ರರಹಿತರಾಗಿ ಬಂದಿರುವುದನ್ನು ಕಂಡು ಶತ್ರುಗಳು ಇವರ ಬಲಾಬಲಗಳನ್ನು ತಿಳಿಯಲೋಸುಗ ಒಬ್ಬ ಸರದಾರನನ್ನು ಕಳುಹಿಸಿದರು. ಆ ಸರದಾರನು ಬಂದಾಗ ಪ್ರಾರ್ಥನಾಕಾಲವಾದ್ದರಿಂದ ಹಜರತ್‌ರವರು ಸವಿಾಪದ ಗುಂಡಿನನೀಲೇರಿ ಕರಚರಣಗಳನ್ನು ತೊಳೆದುಕೊಳ್ಳುತ್ತಿದ್ದರು. ಅವರ ಅನುಯಾಯಿಗಳು ಆ ವೇಳೆಯಲ್ಲಿ ಸುತ್ತಲೂ ಕುಳಿತುಕೊಂಡು ಅವರು ತೊಳೆದ ನೀರು ಸ್ವಲ್ಪವೂ ನೆಲಕ್ಕೆ ಬೀಳಗೊಡಿಸದೆ ತಮ್ಮ ಕೈಕಾಲು ಮುಖಗಳನ್ನು ತೊಳೆದುಕೊಳ್ಳುತ್ತಿದ್ದರು. ತನು ಮನ ಧನಗಳನ್ನು ಒಪ್ಪಿಸಿದ್ದ ಆ ಭಕ್ತರಿಗೆ ತಮ್ಮ ಗುರುಗಳವೆಲಿದ್ದ ನಂಬಿಕೆ ಮತ್ತು ಭಕ್ತಿಯನ್ನು ಕಂಡು ಆ ಸರದಾರನು ಬೆರಗಾಗಿ ಕುಳಿತನು ಮತ್ತು ಈ ಭಕ್ತರು ತಮ್ಮ ಗುರುವಿಗೋಸುಗ ಪ್ರಾಣಭಯದಿಂದ ಬೇರೆಯಾಗಿ ಯುದ್ಧಮಾಡಿ ಜೈಸುವರೆಂದು ಊಹಿಸಿ, ಇಂಥಾವರ ಸಂಗಡ ಕಾಳಗ ಮಾಡಿ ಜೈಸುವುದು ಅಸಾಧ್ಯವೆಂದು ತಿಳಿದು, ಆದರೂ ಇವರ ಧರ್ಮಕಾರ್ಯವು ಸಾಗದಹಾಗೆ ಇವರಿಂದ ಒಂದು ಕರಾರು ಮಾಡಿಕೊಳ್ಳುವುದು ಉತ್ತಮವೆಂದು ಗ್ರಹಿಸಿ, ಹಿಂದಿರುಗಿ ಹೋಗಿ ತಾನು ನೋಡಿದ ವಿಷಯವನ್ನೂ ಮತ್ತು ತನ್ನ ಆಯೋಚನೆಯನ್ನೂ ಮಕ್ಕಾ ಪಟ್ಟಣದ ಪ್ರಮುಖರೆಲ್ಲರಿಗೂ ತಿಳಿಸಿದನು. ಆ ಸರದಾರನು ಮಾಡಿದ ಆಲೋಚನೆಗೆ ಎಲ್ಲರೂ ಒಪ್ಪಿದರು ವೈರಿಸಮೂಹದವರೆಲ್ಲರೂ ತಮ್ಮ ಸಂಗಡ ಸೋಹೇಲ್ ಎಂಬೊಬ್ಬ ವಿದ್ವಾಂಸನನ್ನ ಸಂಕಡ ಕರೆದುಕೊಂಡು ಮುಸಲ್ಮಾನರು ಇಳಿದಿದ್ದ ಸ್ಥಳವನ್ನು ಕರಿತು ಹೊರಟರು. ಕರಾರುಮಾಡಿಕೊಳ್ಳುವ ಆಲೋ

ಚನೆಗೆ ಹಜರತ್ ಮುಹಮ್ಮದ್‌ರವರು ಒಪ್ಪಿದರು. ವೈರಿಗಳು ಮಾತ್ರ ತಮ್ಮ ಇಷ್ಟದ ಪ್ರಕಾರ ತಮಗೆ ಬೇಕಾದ ಎಲ್ಲಾನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಿದರು. ಆ ಒಪ್ಪಂದವು ಆರು ನಿಬಂಧನೆಗಳನ್ನು ಮಾತ್ರ ಒಳಗೊಂಡಿದ್ದಿತು. ಅವುಗಳಲ್ಲಿ ಒಂದು ಮಾತ್ರ " ಯಾವ ಮುಸಲ್ಮಾನನೇ ಆಗಲಿ ಮಕ್ಕಾದಿಂದ ಮದೀನಾಕ್ಕೆ ಹೋದರೆ ಅಂಥವನನ್ನು ಅಲ್ಲಿ ಇಟ್ಟುಕೊಳ್ಳದೆ ಪುನಃ ಅವನನ್ನು ಮಕ್ಕಾಕ್ಕೆ ಕಳುಹಿಸಿಕೊಡಬೇಕು " ಈ ನಿಬಂಧನೆಯು ತತ್ಕಾಲಕ್ಕೆ ಸಂಕಟಗಳನ್ನುಉಂಟುಮಾಡುವುದಾಗಿದ್ದರೂ ಕಾಲಾನುಸಾರಕೆಗೋಸ್ಕರ ಒಪ್ಪಿಕೊಳ್ಳಬೇಕಾಯಿತು. ಅಲ್ಲಿ ನೆರೆದಿದ್ದ ಮುಸಲ್ಮಾನರೆಲ್ಲರು ಈ ನಿಬಂಧನೆಗೆ ವಿರೋಧ ಭಾವವನ್ನು ಸೂಚಿಸಿದರು. ಆದರೆ ಕ್ಷಿಪ್ರದಲ್ಲಿ ಅಬೂಬಕರ್ ಸಿದ್ದೀಖ್‌ರವರು ಎಲ್ಲರನ್ನೂ ಕುರಿತು " ಎಲ್ಲೆ ! ಸಹೋದರರೆ ! ಮಹಮ್ಮದರು ಯಾವುದನ್ನು ಮಾಡಿದರೂ ಪರಮಾತ್ಮನ ಅಪ್ಪಣೆಯಿಲ್ಲದೆ ಮಾಡಲಾರರು " ಎಂದು ಎಲ್ಲರನ್ನೂ ಸಂತೈಸಿದರು. ಈ ಒಪ್ಪಂದವನ್ನು ಪೂರೈಸಿಕೊಂಡು ಮದೀನಾಕ್ಕೆ ಹಿಂದಿರುಗುವಷ್ಟರಲ್ಲಿಯೆ ಮಕ್ಕಾದಿಂದ ಒಬ್ಬ ಮುಸಲ್ಮಾನನು ತನ್ನ ದೇಶದವರು ಕೊಡುತ್ತಿದ್ದ ಕಷ್ಟವನ್ನು ಸಹಿಸಲಾರದೆ ಓಡಿಬಂದು ಹಜರತ್‌ರವರಿಗೆ ನಮಸ್ಕಾರ ಮಾಡಿ ತನ್ನನ್ನು ಉಳಿಸಿಕೊಳ್ಳಬೇಕೆಂದು ಮೊರೆಯಿಟ್ಟನು. ಆದರೆ ಕರಾರು ಪೂರೈಸಿದ್ದಿತು. ಅದನ್ನು ಉಲ್ಲಂಘಿಸಲು ಹಜರತ್‌ರವರು ಒಪ್ಪಲಿಲ್ಲ. ಆದರೂ ಆ ಭಕ್ತನನ್ನು ನನ್ಮುಭಾವದಿಂದ " ನಿನಗೆ ದೇವರು ಸಹಾಯ ಮಾಡುವನು. ನಾನಾದರೊ ಒಪ್ಪಂದಕ್ಕೆ ಒಪ್ಪಿರುತ್ತೇನೆ. ಸಧ್ಯಕ್ಕೆ ನಿನ್ನ ಇಷ್ಟಾರ್ಥವು ಪೂರೈಸಲಾರದು " ಎಂದು ಉತ್ತರವನ್ನಿತ್ತರು. ಹಜರತ್‌ರವರ ಅನುಯಾಯಿಗಳೂ ಕೂಡ ಗುರುಗಳ ಮಾತಿಗೆ ಪ್ರತ್ಯುತ್ತರವನ್ನೀಯದೆ ಬೊಂಬೆಗಳಂತೆ ಸುಮ್ಮನೆ ಕುಳಿತರು. ಆಗ ಆತನು ಅಲ್ಲಿಂದ ಹೊರಟು ಮಕ್ಕಾವನ್ನು ಬಿಟ್ಟು ಸಮುದ್ರದ ದಡದ ಪ್ರದೇಶವನ್ನು ಸೇರಿ ಅಲ್ಲಿ ನಾಸವಾಡಲಾರಂಭಿಸಿದನು. ತದನಂತರ ಹಜರತ್‌ರವರು ತಮ್ಮ ಅನುಯಾಯಿಗಳ ಸಂಗಡ ಹಿಂದಿರುಗಿ ಮದೀನಾಕ್ಕೆ ಹೊರಟುಹೋದರು. ಆ ಕಾಲದಲ್ಲಿ ಪರಮಾತ್ಮನು ಜಯಸೂಚನೆಗಾಗಿ ' ಫತ್ಹಾ ' ಎಂದರೆ ' ವಿಜಯ ' ಎಂಬ ಅಧ್ಯಾಯವನ್ನು ಓಂಕಾರದಿಂದ ಪ್ರಕಟಪಡಿಸಿದನು. ನಂತರ ಈ ಸೇವೋಕ್ತಿಯಂತೆ ದಿನೇ ದಿನೇ ಭಕ್ತಮಂಡಲಿಯು ಹೆಚ್ಚುತ್ತಾ ಬಂದಿತು. ಸ್ವಲ್ಪ ದಿನಸಗಳಲ್ಲಿಯೆ ಮಕ್ಕಾದ ಅನೇಕ ಜನರು ಇಸ್ಲಾಂ ಮತಕ್ಕೆ ಸೇರಿ

ಸಮುದ್ರದ ತೀರದಲ್ಲಿ ಇರಲಾರಂಭಿಸಿದರು. ಇವರ ಈ ವಿಧವಾದ ಪ್ರವರ್ತನೆಯು ಮಕ್ಕಾ ಪಟ್ಟಣದ ವಿಜಯಯಾತ್ರೆಗೆ ಮೂಲಕಾರಣವಾಯಿತು.

ಹಜರತ್‌ರವರು ಸಮಸ್ತ ಅವತಾರಿಗಳ ಆತ್ಮವ್ಯಾಪಿಯಾಗಿ ಅವತರಿಸಿದ್ದರಿಂದ ಎಲ್ಲಾ ಕುಲಗಳ ಅಧಿಪತಿಗಳಿಗೂ ಮತ್ತು ರಾಜರುಗಳಿಗೂ ಇಸ್ಲಾಂ ಮತಾವಲಂಬನೆಗಾಗಿ ಪ್ರಸಿದ್ಧಪತ್ರಿಕೆಗಳನ್ನು ಕಳುಹಿಸಿದ್ದರು. .ಅದರಲ್ಲಿ ಈರ್ಾಕ್‌ದೇಶದ ರಾಜನು ಇದನ್ನು ನೋಡಿ ಅತಿಕೋಪದಿಂದ ಆ ಪತ್ರಿಕೆಯನ್ನು ಹರಿದು ಪುಡಿಮಾಡಿದನು. ಮತ್ತು ತನ್ನ ಭಟರನ್ನು ಕುರಿತು "ಅರಬ್ಬೀ ದೇಶದವನು ತಾನು ಅವತಾರಿಯೆಂದು ಹೇಳಿಕೊಳ್ಳುತ್ತಾ ಇರುವನು. ಅವನು ನನ್ನ ದಾಸಾನುದಾಸರಿಗಿಂತಲೂ ಕನಿಷ್ಟನೆಂದು ತಿಳಿದು, ನೀವು ಹೋಗಿ ಅವನನ್ನು ಸೆರೆ ಹಿಡಿದು ತರಬೇಕು. ಹಾಗೆ ಬರಲು ಒಪ್ಪದ ಪಕ್ಷದಲ್ಲಿ ಯುದ್ಧಮಾಡಲು ಸೈನ್ಯವು ಹಿಂಬಾಲಿಸುತ್ತಾ ಇದೆ ಎಂದು ವಿಜ್ಞಾಪಿಸಬೇಕು" ಎಂದು ಆಜ್ಞೆಮಾಡಿದನು. ಭಟರುಗಳು ಮದೀನಾ ಪಟ್ಟಣವನ್ನು ಸೇರಿ, ಹಜರತ್‌ರವರನ್ನು ಕಂಡು ತಮ್ಮ ರಾಜನು ಬಿತ್ತರಿಸಿದ ವಿಷಯವನ್ನು ಸವಿಸ್ತಾರವಾಗಿ ಹೇಳಿದರು. ಆಗ ಸತ್ಯಸಂಧರಾದ ಪ್ರಭುಪ್ರಸನ್ನರು ಆ ಭಟರನ್ನು ಕುರಿತು "ನಿಮ್ಮ ರಾಜನು ನನ್ನ ಪತ್ರಿಕೆಯನ್ನು ಯಾವರೀತಿ ಹರಿದು ಬಿಸಾಡಿದನೋ ಅದೇರೀತಿಯಲ್ಲಿ ಅವನೂ ಹರಿದು ಬಿಸಾಡಲ್ಪಡುವನು. ಮತ್ತು ನಿಮ್ಮ ರಾಜ್ಯವು ಕ್ಷಿಪ್ರದಲ್ಲಿಯೇ ನಮ್ಮ ವಶವಾಗುವುದು" ಎಂದು ಹೇಳಿ ಕಳುಹಿಸಿಕೊಟ್ಟರು. ಆದರಂತೆ ಆ ಚರರು ತಮ್ಮ ದೇಶದ ರಾಜಧಾನಿಯನ್ನು ಹೊಕ್ಕು ನೋಡಿದಾಗ ರಾಜನು ಕತ್ತರಿಸಲ್ಪಟ್ಟು ತುಂಡಾಗಿ ಬಿದ್ದಿದ್ದನು. ಈ ಮಹತ್ವವನ್ನು ಕಂಡು ಮತ್ತು ಕೇಳಿ ಆ ದೇಶದ ಜನರೆಲ್ಲರು ಇಸ್ಲಾಂ ಮತವನ್ನವಲಂಬಿಸಿದರು. ಏಷ್ಯಾಮೈನರಿನ ಒಬ್ಬ ರಾಜನು ಇದೇರೀತಿಯಲ್ಲಿ ವಿರೋಧವಾಗಿ ನಡೆದುದರಿಂದ ಅವನ ರಾಜ್ಯವೂ ಮತ್ತು ರಾಜನೂ ಹೀಗೆಯೆ ನಾಶವಾಗಿ ಹೋದರು. ಮಿಕ್ಕ ಅನೇಕ ರಾಜರು ಇಸ್ಲಾಂ ಮತವನ್ನು ಸತ್ಯವೆಂದು ನಂಬಿ ಮುಸಲ್ಮಾನರಾದರು. ಹೀಗೆ ದೈವಮತಾವಲಂಬಿಗಳ ಶಕ್ತಿಯು ದಿನದಿನಕ್ಕೆ ಪ್ರಜ್ವಲಿಸುತ್ತಾ ಬಂದಿತು.

ಇದೇರೀತಿಯಲ್ಲಿ ಮದೀನಾ ಪಟ್ಟಣದಲ್ಲಿ ಎಂಟು ವರ್ಷಗಳು ಕಳದು ಹೋದವು. ಕಡೆಗೆ ಹಜರತ್‌ರವರು ಮಕ್ಕಾಪಟ್ಟಣದ ವಿಜಯಯಾತ್ರೆಗಾಗಿ

ಪರಮಾತ್ಮನ ಆಜ್ಞೆಯ ಪ್ರಕಾರ ಸನ್ನಿದ್ಧರಾದರು. ತಮ್ಮ ಸಂಗಡ ಹತ್ತು ಸಾವಿರ ಜನ ಶಿಷ್ಯರನ್ನು ಕರೆದುಕೊಂಡು ಮಕ್ಕಾಪಟ್ಟಣವನ್ನು ಹೊಕ್ಕರು. ಹೊಕ್ಕಕೂಡಲೆ ಪವಿತ್ರಸ್ಥಳಗಳಲ್ಲಿದ್ದ ವಿಗ್ರಹಗಳೆಲ್ಲವನ್ನೂ ಒಡೆದು ಪುಡಿಮಾಡಿ ಒಳ್ಳೇ ಜ್ಞಾನದಿಂದ ಜನರಿಗೆ ಬೋಧಿಸಿದರು. ಯಾವ ಶತ್ರುಗಳು ಒಂದು ಕಾಲದಲ್ಲಿ ಹಜರತ್‌ರವರನ್ನು ಚಿತ್ರಹಿಂಸೆಮಾಡಿ ಊರಿನಿಂದ ಹೊರಡಿಸಿದ್ದರೋ, ಈಗ ಅದೇ ಶತ್ರುಗಳು ತಮ್ಮ ಎದುರಿನಲ್ಲಿ ಕರಚರಣಗಳು ಒಂಧಿಸಲ್ಪಟ್ಟು ನಿಂತಿದ್ದರು. ಆಗ ಹಜರತ್‌ರವರು ಅವರನ್ನು ಯಾವ ಶಿಕ್ಷೆಗೆ ಗುರಿಮಾಡಿದ್ದರೂ ಈಗಿನ ಕಾಲದ ಕಟ್ಟಳೆಗಳಿಗೆ ವಿರೋಧವಾಗಿ ಕಾಣುತ್ತಿರಲಿಲ್ಲ. ಆದರೆ ದಯಾಸ್ವರೂಪರಾದ ಹಜರತ್ ಮಹಮ್ಮದ್‌ರವರು "ಯಾರೇ ಆಗಲಿ ವಿಸ್ಪಿತಸೂಚನೆಗಾಗಿ, ಅಬೂಸುಪಿಯಾನನ ಮನೆಯಲ್ಲಿ ಸೇರುವರೊ ಅಂಥವರು ನಮ್ಮಿಂದಾಗುವ ಎಲ್ಲಾ ಶಿಕ್ಷೆಗಳಿಂದಲೂ ಬಿಡಲ್ಪಡುವರು" ಎಂದು ಹೇಳಿದರು. ಮತ್ತೂ ಕೈಬೇಡಿಗಳೊಡನೆ ಎದುರಿಗೆ ನಿಂತಿದ್ದ ವೈರಿಗಳನ್ನು ಕುರಿತು "ನಾನು ನಿಮ್ಮ ವಿಷಯದಲ್ಲಿ ಯಾವರೀತಿ ಪ್ರವರ್ತಿಸಬೇಕು?" ಎಂದು ಪ್ರಶ್ನಿಸಲು, ಅದಕ್ಕೆ ಅವರು "ತಾವು ದಯಾಸಮುದ್ರರು ಮತ್ತು ದಯೆಯಲ್ಲಿಯೇ ಹುಟ್ಟಿದವರು" ಎಂದು ಹೇಳಿದರು. ಆಗ ಕರುಣಾಸಮುದ್ರರಾದ ಮತ್ತು ಕಲ್ಯಾಣಗುಣವಿಶಿಷ್ಟರಾದ ಈಶ್ವರಸ್ವರೂಪ ಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರು ಅವರನ್ನು ಕುರಿತು "ನಿಮ್ಮೆಲ್ಲರನ್ನೂ ಬಿಡುಗಡೆ ಮಾಡಿರುತ್ತೇನೆ" ಎಂದು ಹೇಳಿದರು. ಈ ನುಡಿಗಳನ್ನು ಕೇಳುತ್ತಲೆ ವೈರಿಗಳೆಲ್ಲರೂ ಇಸ್ಲಾಂಮತವನ್ನವಲಂಬಿಸಿ "ಲಾಇಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ್" ಎಂದು ಉಚ್ಚಕಂಠವಾಗಿ ಹೇಳಿದರು. ಒಂದು ಮೂಲೆಯಲ್ಲಿ "ಹಿಂದಾ" ಎಂಬ ಸ್ತ್ರೀಯು ನರರಾಕ್ಷಸಿಯಂತೆ ನಿಂತಿದ್ದಳು ಮತ್ತು ಹಜರತ್‌ರವರನ್ನು ಅನೇಕ ಕಷ್ಟಗಳಿಗೆ ಗುರಿಮಾಡಿದ್ದಲ್ಲದೆ, ಅವರ ಚಿಕ್ಕಪ್ಪನವರಾದ "ಹಂಜ" ರವರ ಈರಿಯನ್ನು ಯುದ್ಧಭೂಮಿಯಲ್ಲಿ ಅಗೆದು ನುಂಗಿದ್ದಳು. ಹಜರತ್‌ರವರು ಅವಳ ಕಡೆಗೆ ಮುಖಮಾಡಿ "ಎಲೈ! ಸ್ತ್ರೀಯೆ! ನಿನ್ನ ಮುನ್ನೂರ ಮುವ್ವತ್ತುಮೂರು ವಿಗ್ರಹಗಳು ಶಕ್ತಿಯುಳ್ಳವುಗಳೋ ಸರ್ವಶಕ್ತನಾದ ಅಲ್ಲಾಹನು ಶಕ್ತಿವಂತನೋ" ಎಂದು ಕೇಳಲು, ಅವಳು "ಸ್ವಾಮಿಗಳೆ! ನೀವು ಮಕ್ಕಾಕ್ಕೆ ಬಾರದೆ ಇರುವಹಾಗೆ ಈ ಮುನ್ನೂರ ಮುವ್ವತ್ತುಮೂರು ದೇವತೆಗಳನ್ನು ಬಹುವಾಗಿ ಬೇಡಿಕೊಂಡಿದ್ದೆನು. ಆದರೆ

ಈ ಲೆಸವ್ವಮಾತ್ರ ಅವುಗಳಿಂದ ಸಾಗದೇಹೋಯಿತು. ಈಗ ನನಗೆ ಜ್ಞಾನೋದಯವಾಯಿತು. ಜನರು ವಿಗ್ರಹಗಳನ್ನು ಮೂಢತನದಿಂದ ಪೂಜಿಸುತ್ತಾರೆ. ಅವುದರಿಂದ ಎಲ್ಲಿ ಮಹಾನುಭಾವನೇ! ಶರಣಾಗತರಲ್ಲಿ ಪ್ರೀತಿಯುಳ್ಳವನೇ? ಮಾತ್ಸರ್ಯದಿಂದ ಕುರುಡಾಗಿದ್ದ ನನ್ನನ್ನು ಕ್ಷಮಿಸು" ಎಂದು ಹೇಳಿ, " ಲಾ ಯಿಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾಹ " ಎಂಬ ಮಂತ್ರವನ್ನು ಉಚ್ಚರಿಸಿದಳು. ಆಗ ದಯಾಭರಿತರಾದ ಪರಮಾತ್ಮ ಪ್ರಸನ್ನರಾದ ಪರಮಗುರುಗಳು ತಕೆಯನ್ನು ಕೂಡ ಕ್ಷಮಿಸಿದರು. ಇದಾದಮೇಲೆ ಮಕ್ಕಾದಲ್ಲಿ ಎಲ್ಲೆನೋಡಿದರೂ ಶಾಂತಿಯೇ ನೆಲೆಗೊಂಡಿತು. ಮಕ್ಕಾ ಪಟ್ಟಣದ ವಿಜಯದನಂತರ ಎರಡು ವರ್ಷಗಳ ಪರಿಯಂತರ ಹಜರತ್‌ರವರು ರುದ್ರ ಶಕ್ತಿಯನ್ನವಲಂಬಿಸಿ ದುಷ್ಟಶಿಕ್ಷಣ ಮತ್ತು ಶಿಷ್ಟಪರಿಪಾಲನೆಯನ್ನು ಮಾಡಿದರು. ಮತ್ತು ಧರ್ಮರಾಜ್ಯಸ್ಥಾಪನೆಯನ್ನೂ ಮಾಡಿದರು.

ಯಾವ ಮಹಾಪುರುಷನು ತನ್ನ ಶೈಶವಾವಸ್ಥೆಯಲ್ಲಿ ಮಾತಾಪಿತೃಗಳನ್ನು ಹೋಗಲಾಡಿಸಿಕೊಂಡು ಅಗಾಧವಾದ ಮರಳು ಪ್ರದೇಶದಲ್ಲಿ ಶೂನ್ಯ ಸ್ವರೂಪದಿಂದ ಜನ್ಮಿಸಿ, ತನ್ನ ನೆರೆಹೊರೆಯವರಿಂದ ಕೊಡಲ್ಪಟ್ಟ ಕಷ್ಟ ಸಮುದ್ರವನ್ನು ಪರಮಾತ್ಮನಲ್ಲಿನ ಭಕ್ತಿಯೆಂಬ ದೋಣಿಯಲ್ಲಿ, ತಾಳ್ಮೆಯೆಂಬ ಕಾಷ್ಟದಿಂದ ಹೇಗೆ ನೂಕಿದನೋ ಆದೇ ಮಹಾಪುರುಷನು ಈಗ ಅರಬ್ಬೀ ದೇಶದ ಚಕ್ರವರ್ತಿಯಾಗಿ ವಿರಾಜಮಾನವಾಗಿ ಕುಳಿತಿರುವನು. ಇದೆಲ್ಲಾ ಪರಮಾತ್ಮನ ಲೀಲಾಜಾಲವಲ್ಲವೇ! ಪರಮಾತ್ಮನಿಂದ ಕಳುಹಿಸಲ್ಪಟ್ಟ ಯಾವ ಅವತಾರೀಕ ಪುರುಷನು ಪ್ರಥಮದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿಯೂ ಕಡೆಗೆ ಜಯವನ್ನು ಹೊಂದುತ್ತಾನೆಂದು ಗೊತ್ತಾಗುವುದಿಲ್ಲವೇ? ನಶ್ವರವಾದ ಸುಖವನ್ನು ನಂಬಿ ಪ್ರಪಂಚವನ್ನು ನಂಬಿರುವ ಜನರು ಸಸಿಯಂತೆ ಮೂಡುವ ಯಾವ ಅವತಾರಿಕನನ್ನು ಮೊದಲು ತೊಂದರೆಗೆ ಗುರಿಮಾಡಿದರೊ ಕಡೆಗೆ ಆ ಮಹಾಪುರುಷನು ತನ್ನ ಜಯಪತಾಕೆಯನ್ನು ನೆಡುತ್ತಾನೆಂಬ ವಿಷಯವು ಇದರಿಂದ ಗೊತ್ತಾಗುವುದಿಲ್ಲವೇ!

ಹಜರತ್ ಮಹಮದ್‌ರವರು ತಮ್ಮ ಜೀವಮಾನಕಾಲದಲ್ಲಿ ಶತ್ರುಗಳ ಸಂಗಡ ಇಪ್ಪತ್ತೇಳು ಯುದ್ಧಗಳನ್ನು ಮಾಡಬೇಕಾಯಿತು. ಅವುಗಳಲ್ಲಿ

ಅನೇಕ ಯುದ್ಧಗಳು ಪ್ರಸಿದ್ಧವಾಗಿವೆ. ಇವರ ಯುದ್ಧಗಳು ಪ್ರಾಪಂಚಿಕರ ಯುದ್ಧಗಳಪ್ರಕಾರ ದುಃಖಪ್ರದವಾದುವುಗಳಾಗಿರಲಿಲ್ಲ. ಇವರು ಇತರ ಯೋಧರಂತೆ ಯಾವಾಗಲೂ ಮುಂದಾಳುಗಳಾಗಿರುತ್ತಿದ್ದರು. ಮುಂದಾಳಾಗಿರುವುದು ಮಾತ್ರವಲ್ಲದೆ ಸ್ವಯಂ ಯುದ್ಧಮಾಡುತ್ತಿದ್ದರು. ಕೆಲವುವೇಳೆ ಸೇನಾಧಿಪತ್ಯವನ್ನು ವಹಿಸುತ್ತಿದ್ದರು. ಹುನೇನ್ ಯುದ್ಧದಲ್ಲಿ ತಾವೆ ಮುಂದೆ ಬಂದು ಉಚ್ಚಕಂಠದಿಂದ ತಮ್ಮ ಜನರಿಗೆ ಯುದ್ಧಮಾಡಲು ಪ್ರೇರೇಪಿಸುತ್ತಿದ್ದರು. ಜನರಿಗೆ ತಮ್ಮ ವಿಷಯವನ್ನು ವಿಶದವಾಗಿ ತಿಳಿಸಿ ತಾವು ಮನುಷ್ಯ ಮಾತ್ರದವನೆಂದೇ ಈ ರೀತಿಯಲ್ಲಿ ತಿಳಿಸುತ್ತಿದ್ದರು. "ಅನ್ನ ಬೀಯೆಲಾ ಕಜಿಬ ಅನಾ ಇಬ್‌ನೆ ಅಬ್ದುಲ್ ಮುತ್ತಲ್ಲಿಬ್" ಎಂದರೆ "ನಾನು ಅವತಾರಿಯಾಗಿರುವುದು ಸತ್ಯವಾದರೂ ನಾನು ಅಬ್ದುಲ್ ಮುತ್ತಲ್ಲಿಬ್‌ನ ಮಗನು." ಹಜರತ್‌ರವರು ಯುದ್ಧದಲ್ಲಿ ಯುಕ್ತಿಸಂಯುಕ್ತವಾದ ಕಾರ್ಯಗಳನ್ನು ಧೈರ್ಯದೊಂದಿಗೆ ನೆರವೇರಿಸುತ್ತಿದ್ದರು. ಒಂದು ದಿವಸ ಜನರ ಗಲಭೆಯು ಮದೀನಾಪಟ್ಟಣದ ಹೊರಗೆ ಹೆಚ್ಚಾಗಿ ಕೇಳಿಬಂದಿತು. ಇದನ್ನು ನೋಡಲು ಜನರು ಹೊರಗೆ ಬರಲು, ಹಜರತ್‌ರವರು ಜನಗಳ ಮುಂದೆ ಎದುರಾಗಿ ಕುದುರೆಯಮೇಲೆ ಬಂದು "ಏನೂ ಇಲ್ಲ, ಹಿಂದಿರುಗಬಹುದು" ಎಂದು ಅಪ್ಪಣೆ ಕೊಡಿಸಿದರು. ಇವರಲ್ಲಿ ಇದೊಂದಲ್ಲದೆ ಅನೇಕ ವಿಶೇಷ ಸಂಗತಿಗಳು ಇವರ ಚರಿತ್ರೆಯಿಂದ ಕಾಣಬರುತ್ತವೆ. ಮಾನವಜಾತಿಯಲ್ಲಿ ಯಾವ ಯಾವ ಗುಣಗಳು ಇರಬೇಕೊ, ಅವುಗಳೆಲ್ಲವೂ ಇವರಲ್ಲಿ ಮುದ್ರೆಯಂತೆ ಕಾಣಬರುತ್ತವೆ. ವೀರರೂ ಮತ್ತು ಶೂರರೂ ಆದಾಗ್ಯೂ ಇವರಲ್ಲಿ ಮತ್ತೊಂದು ಗುಣವೇನೆಂದರೆ, ಎಂಥಾ ಘೋರಯುದ್ಧಗಳಲ್ಲಿಯೂ ಈ ಮಹಾಪುರುಷರ ಕೈಯಿಂದ ಒಬ್ಬನಾದರೂ ಲಯವನ್ನು ಹೊಂದಲಿಲ್ಲಾ. ಇದೊಂದು ಗುಣವೇ ಇವರಲ್ಲಿ ಸಂಪೂರ್ಣವಾಗಿ ಈಶ್ವರಪ್ರಸನ್ನತೆಯನ್ನು ತೋರಿಸುತ್ತದೆ. ಕೊಲ್ಲುವವರು ಬೇರೆ, ಕೊಲ್ಲಲ್ಪಟ್ಟವರೂ ಬೇರೆ. ಈತನು ಕೊಲ್ಲುವವನೂ ಅಲ್ಲ, ಕೊಲ್ಲಲ್ಪಡುವವನೂ ಅಲ್ಲ. ಈ ಮಹಾತ್ಮನೇ! ಜಗದೀಶ್ವರ ರೂಪನು. ಈತನೆ ಮಾಯೆಯನ್ನು ಸ್ವಾಧೀನಮಾಡಿಕೊಂಡು ನಾನಾರೂಪಗಳನ್ನು ಧರಿಸಿ ಕಡೆಗೆ ಗುರೂಣಾಂಗುರುವಾಗಿ ನೆರೆದನು. ಈತನೆ ಜಗತ್ತಿಗೆ ಬೀಜಸ್ವರೂಪನಾದ ಮೂಲಪ್ರಕಾಶನು. ಭಿನ್ನ ಭಿನ್ನ ರೂಪಗಳನ್ನು ಧರಿಸಿ ಜಗತ್ತಿನ ಸಂರಕ್ಷಣೆಗೆ

ಒಬ್ಬನಾಗಿ ಸರ್ವ ಪ್ರಕಾಶಮಾನನಾಗಿ ಜಗದ್ಗುರುವೆಂಬ ಬಿರುದಾಂಕಿತನಾಗಿ ಪ್ರಜ್ವಲಿಸಿದನು. ಯಾವ ಗುಣಸ್ವರೂಪಗಳಿಂದ ಜಗತ್ತಿನ ಸರ್ವಜನರಿಗೂ ಮೇಲ್ಪಂಗ್ತಿಯಾಗಿ ಉಜ್ವಲಿಸಿದನೋ ಅಂಥಾ ಮಹಾನುಭಾವನ ರೀತಿ ನೀತಿಗಳನ್ನು ವಿವರಿಸುವುದು ಅವಶ್ಯಕವು.

---

## ಈ ಮಹಾತ್ಮರ ಗುಣಸ್ವರೂಪಗಳು.

ಹಜರತ್‌ರವರು ಯಾವ ಕೆಲಸವನ್ನು ಪ್ರಾರಂಭಮಾಡುತ್ತಿದ್ದರೂ ಆ ಕೆಲಸವನ್ನು ಸ್ಥಿರಮನಸ್ಸಿನಿಂದ ಮಾಡುತ್ತಿದ್ದರು. ದಾರಿಯಲ್ಲಿ ಎದುರುಗೊಂಡವರಿಗೆ ಪ್ರಥಮದಲ್ಲಿಯೇ ಸಲ್ಲಾಂ ಮನ್ನು ಮಾಡಿ ಹರಸುತ್ತಿದ್ದರು. ಯಾರಾದರು ಪ್ರೀತಿಗೋಸ್ಕರ ಕೈಯ್ಯಲ್ಲಿ ಕೈಕೊಟ್ಟರೆ ಅವರು ಬಿಡುವವರೆಗೂ ತಾವು ಕೈ ಬಿಡುತ್ತಿರಲಿಲ್ಲ. ಪ್ರಯಾಣಕಾಲದಲ್ಲಿ ಒಂದೇ ವಾಹನವನ್ನು ತೆಗೆದುಕೊಂಡು ಹೋದರೆ ತಮ್ಮ ಸೇವಕನು ಅರ್ಧದಾರಿಯನ್ನೂ ಮತ್ತು ತಾವು ಅರ್ಧದಾರಿಯನ್ನೂ ಅದಲುಬದಲು ಕುಳಿತು ಸಾಗಿಸುತ್ತಿದ್ದರು. ದಾರಿಗಳಲ್ಲಿ ಚಿಕ್ಕಮಕ್ಕಳು ಸಿಕ್ಕಿದರೆ ಅವರನ್ನು ಒಹಳ ಪ್ರೀತಿಯಿಂದ ಹರಸುತ್ತಿದ್ದರು. ದಾನದಲ್ಲಿ ಅದ್ವಿತೀಯರಾಗಿದ್ದರು. ರಂಜಾನ್ ಎಂಬ ಪವಿತ್ರಮಾಸದಲ್ಲಿ ವಿಶೇಷವಾಗಿ ದಾನಮಾಡುತ್ತಿದ್ದರು. ಇವರು ಮೃತಪಟ್ಟವರ ಸಾಲವನ್ನು ತಾವೇ ತೀರಿಸಿ ಸಾಲವೆಂಬ ದೋಷದಿಂದ ಅವರನ್ನು ಬಿಡಿಸುತ್ತಿದ್ದರು. ಹಜರತ್‌ರವರು "ನನಗೆ ಒಂದು ಗುಡ್ಡದಷ್ಟು ದ್ರವ್ಯಸಿಕ್ಕಿದರೂ ಮಾರನೆಯ ದಿನ ನನ್ನ ಹತ್ತಿರ ಒಂದು ಕಾಸೂ ಇರುವುದಿಲ್ಲ" ಎಂದು ಹೇಳುತ್ತಿದ್ದರು. ದ್ರವ್ಯವು ಮನೆಯಲ್ಲಿದ್ದರೆ ಒಂದು ದಿನವಾದರೂ ಅವರು ನಿರ್ಮಲವಾಗಿ ಮಲಗುತ್ತಿರಲಿಲ್ಲ. ಹುನೈನ್ ಯುದ್ಧವಾದನಂತರ ಹಜರತ್‌ರವರಿಗೆ ಬಹು ದ್ರವ್ಯವು ಕರಗತವಾಯಿತು. ಆದರೆ ಅದನ್ನೆಲ್ಲ ತನ್ನ ಅನುಯಾಯಿಗಳಿಗೆ ಹಂಚಿಕೊಡುತ್ತಾ "ನನ್ನ ಹತ್ತಿರ ಅರಣ್ಯದಲ್ಲಿರುವಷ್ಟು ಒಂಟೆಗಳಿದ್ದರೆ ಅವುಗಳೆಲ್ಲವನ್ನೂ ಹಂಚಿಕೊಡುತ್ತಿದ್ದೆನು" ಎಂದು ಹೇಳಿದರು. ತಮ್ಮ ಮನೆಯಕಲಸಕ್ಕೆ ಸೇವಕರು ಇರಲೇ ಇಲ್ಲವು. ಮನೆಯಲ್ಲಿ ಭಾರ್ಯೆಯರು ಬೀಸಿ ಬೀಸಿ ಕೈಗಳು ನೋವಾಗುತ್ತಿದ್ದವು. ದಾನಮಾಡುವುದರಲ್ಲಿ ಭೇದವನ್ನು ಎಣಿಸುತ್ತಿರಲಿಲ್ಲ. ಸತ್ಪಾತ್ರವನ್ನು ನೋಡಿ ಸರಿಯಾದ ದಾನವನ್ನು ಮಾಡುತ್ತಿದ್ದರು. ಭಿಕ್ಷಬೇಡುವುದು ಬಳ್ಳಿಯ

ದಲ್ಲವೆಂದು ಹೇಳುತ್ತಿದ್ದರು. ಸತ್ಪಾತ್ರರಲ್ಲದವರಿಗೆ ಉತ್ತಮರೀತಿಯಿಂದ ಹೇಳುತ್ತಿದ್ದರು. ಮೇಲಿರುವ ಕೈ ಕೆಳಗಿರುವಕ್ಕೆಗಿಂತಲೂ ಉತ್ತಮವಾದು ದೆಂದು ಅವರು ಹೇಳುವ ಗಾದೆಯು. ಯಾವಾತನು ಮೂರುದಿವಸ ಉಪವಾಸಮಾಡುತ್ತಾನೋ ಮತ್ತು ಇದಕ್ಕೋಸ್ಕರ ಶ್ರೇಷ್ಠರಾದ ಮೂರು ಜನರು ಸಾಕ್ಷಿಯಾದರೆ ಅಂಥವನು ಭಿಕ್ಷವನ್ನು ಬೇಡಬಹುದು ಎಂದು ಹೇಳುತ್ತಿದ್ದರು. ಇದರ ಹೊರತು ಯಾವನು ಭಿಕ್ಷಾಟನೆ ಮಾಡುತ್ತಾನೋ ಅವನು ಅಶುಚಿಯಾದುದನ್ನು ತಿನ್ನುತ್ತಾನೆಂದು ಹೇಳುತ್ತಿದ್ದರು. ತನ್ನ ವಂಶೀಕರು ಅಪೇಕ್ಷೆಯಿಂದ ದ್ರವ್ಯಗಳನ್ನು ತೆಗೆದುಕೊಳ್ಳಕೂಡದೆಂದು ಹೇಳುತ್ತಿದ್ದರು. ಒಂದು ದಿವಸ ಹಜರತ್‌ರವರ ದೌಹಿತ್ರರಾದ ಹಜರತ್ ಇಮಾಮು ಹುಸೇನರವರು ಇತರರಿಗೆ ದಾನ ಕೊಟ್ಟ ವಸ್ತುವಿನಲ್ಲಿ ಸ್ವಲ್ಪವನ್ನು ಬಾಯಲ್ಲಿ ಹಾಕಿಕೊಳ್ಳಲು ಅವರ ಬಾಯಿಗೆ ಬೆರಳನ್ನು ಹಾಕಿ ಅದನ್ನು ತೆಗೆದುಹಾಕಿದರು. ಯಾರು ಏನುತಂದುಕೊಟ್ಟರೂ "ಇದು ಏನು ದಾನವೋ ಅಥವ ದಕ್ಷಿಣೆಯೋ" ಎಂದು ಕೇಳುತ್ತಿದ್ದರು. ಕೆಲವು ಜನ ಭಕ್ತರು ಬಂದು "ನಾವು ಬ್ರಹ್ಮಚರ್ಯವನ್ನೇ ವಹಿಸಿ ಜೀವನವನ್ನು ಹೊರಿಯುತ್ತೇವೆ" ಮತ್ತು ಕೆಲವರು "ನಾವು ಜೀವವಿರುವವರೆಗೂ ಒಪ್ಪತ್ತಿನ ಉಪವಾಸವನ್ನು ಆಚರಿಸುತ್ತೇವೆ" ಎಂದು ಹೇಳಿದರು. ಇವುಗಳನ್ನು ಕೇಳಿ ಹಜರತ್‌ರವರು "ದೈವ ಧ್ಯಾನವನ್ನು ನಿರಂತರವಾಗಿ ನಾನು ನೆರವೇರಿಸುತ್ತೇನೆ. ಗೊತ್ತಾದ ಕಾಲಗಳಲ್ಲಿ ಉಪವಾಸಗಳನ್ನು ಅನುಸರಿಸುತ್ತೇನೆ. ನಾನು ಲಗ್ನವನ್ನು ಕೂಡ ಮಾಡಿಕೊಂಡಿರುತ್ತೇನೆ. ಯಾವನು ನನ್ನ ಈ ಮಾರ್ಗದಮೇಲೆ ನಡೆಯುವದಿಲ್ಲವೋ ಅಂಥವನು ನನ್ನವನಲ್ಲ" ಎಂದು ಉತ್ತರವನ್ನಿತ್ತರು. ಊಟ, ಬಟ್ಟೆ, ಹಾಸಿಗೆ ಮುಂತಾದವುಗಳಲ್ಲಿ ಎಣಿಕೆಯನ್ನು ಮಾಡುತ್ತಿರಲಿಲ್ಲ. ಕಾಲಕ್ಕೆ ಒದಗಿಬವುಗಳನ್ನು ಉಪಯೋಗಿಸುತ್ತಿದ್ದರು. ಮನೆಯಲ್ಲಿ ತನಗೋಸ್ಕರ ಒಂದು ಹಾಸಿಗೆಯೂ ತನ್ನ ಹೆಂಡತಿಗೋಸುಗ ಒಂದು ಹಾಸಿಗೆಯೂ ಮತ್ತು ಬಂಧುಗಳಿಗೋಸುಗ ಒಂದು ಹಾಸಿಗೆಯೂ ಇದ್ದರೆ ಸಾಕು. ನಾಲ್ಕನೆ ಹಾಸಿಗೆಯು ಇದ್ದರೆ ಪಿಶಾಚಿಯ ಹಾಸಿಗೆ ಎಂದು ಹೇಳುತ್ತಿದ್ದರು. ಪುರುಷನಿಗೆ ರೇಷ್ಮೆ, ಬೆಳ್ಳಿ, ಭಂಗಾರ ಮುಂತಾದುವುಗಳು ಯೋಗ್ಯವಾದವುಗಳಲ್ಲವೆಂದು ಹೇಳುತ್ತಿದ್ದರು. ತಮ್ಮ ಪುತ್ರಿಯಾದ "ಬೀಬಿ ಫಾತಿಮ" ಇವರ ಕೊರಳಿಗೆ

ಸಭೆಯನ್ನು ಮಾಡಿಸಿ ಜನರು ಬಹುಮಾನವಾಗಿ ಕೊಟ್ಟರು. ಹಜರತ್ ರವರು ಇದನ್ನ ಕಂಡು ಇಂಥಾ ಆಭರಣಗಳು ನನ್ನ ವಂಶೀಕರಿಗೆ ತಕ್ಕ ವುಗಳಲ್ಲವೆಂದು ಹೇಳುತ್ತಿದ್ದರು. ಹಜರತ್‌ರವರು ಯಾವಾಗಲೂ ಸಾಧಾರಣ ಉಡುಪನ್ನು ಹಾಕುತ್ತಿದ್ದರು ಮತ್ತು ಬಂದು ಕರೆ ಕಂಬಳಿಯನ್ನು ಹೊದಿಯುತ್ತಿದ್ದರು. ಯಾವಾಗಲೂ ಮಿತವಾದ ಬೆಲೆಯುಳ್ಳ ಹಾಸಿಗೆಯನ್ನು ಉಪಯೋಗಿಸುತ್ತಿದ್ದರು. ಹಾಸಿಗೆಯು ಚರ್ಮದಿಂದ ಮಾಡಲ್ಪಟ್ಟಿದ್ದಿತು. ಇತರರು ಕೂಡ್ರುವುದಕ್ಕೂ ಚರ್ಮದ ಹಾಸಿಗೆಗಳಿರುತ್ತಿದ್ದವು. ಹಜರತ್ ರವರ ಸನ್ನಿಧಿಯಲ್ಲಿ ದೊಡ್ಡವರು, ಚಿಕ್ಕವರು, ಪ್ರಜೆಗಳು, ರಾಜರು, ಸೇವಕರು, ವಡೆಯರು, ಬಂದೇಸನುನಾಗಿದ್ದರು. ತನ್ನ ಕೆಲಸಗಳನ್ನೆಲ್ಲ ತಾವೇ ಮಾಡುತ್ತಿದ್ದರು. ಅಂಗಡಿಯಿಂದ ಸಾಮಾನು ಬೇಕಾದರೆ ತಾವೇ ಹೋಗಿ ತರುತ್ತಿದ್ದರು. ತಮ್ಮ ಬಟ್ಟೆಗಳನ್ನು ತಾವೇ ಹೊಲಿಯುತ್ತಿದ್ದರು. ತಮ್ಮ ಪಾದರಕ್ಷೆಯನ್ನು ತಾವೇ ಮಾಡಿಕೊಳ್ಳುತ್ತಿದ್ದರು. ತಮ್ಮ ಮನೆಯ ಕಸವನ್ನು ಸಂದರ್ಭಾನುಸಾರವಾಗಿ ತಾವೇ ಗುಡಿಸಿಕೊಳ್ಳುತ್ತಿದ್ದರು. ಜನರಲ್ಲಿ ಕುಳಿತಿದ್ದರೆ ಯಾರಿಗೂ ಗರುತು ಸಿಕ್ಕುತ್ತಿರಲಿಲ್ಲ. ಒಬ್ಬರನ್ನೊಬ್ಬರು ಹರಸುವಾಗ, "ಅಸ್ಸಲಾಮೊವ ಅಲೇಕುಂ" ಎಂದು ಕೈ ಎತ್ತುವ ಅಥವ ಕೈ ಎತ್ತದೆ ಇರುವ ಪದ್ಧತಿ ವಿನಹ ಮತ್ತೆ ಬೇರೆ ಯಾವುದನ್ನೂ ಅನುಸರಿಸಲಿಲ್ಲ. ಬಂದ್ದು ದಿವಸ ಒಬ್ಬ ಹುಡುಗಿಯು ಬಂದು ಸಾಷ್ಟಾಂಗನಮಸ್ಕಾರ ಮಾಡಲು ಹಜರತ್‌ರವರು "ಈರೀತಿಯಾವ ನಮಸ್ಕಾರವು ಮನುಷ್ಯನಿಗೆ ಸಲ್ಲದು ಇಸ್ಲಾಂ ಮತವು ಇದನ್ನು ಒಪ್ಪುವುದಿಲ್ಲಾ" ಎಂದು ತಿಳಿಸಿದರು. ಬಡವರನ್ನು ಅತ್ಯಂತ ಪ್ರೀತಿಯಿಂದ ಕಾಣುತ್ತಿದ್ದರು. ಅವರು ಯಾವಾಗಲೂ ಪರಮಾತ್ಮನನ್ನು ಕುರಿತು, "ಓ! ಪರಮಾತ್ಮನೇ! ನೀನು ನನ್ನನ್ನ ಬಡವರ ಮನೆಯಲ್ಲಿಯೇ ಈಗ ಜನ್ಮಗ್ರಹಣಮಾಡಿಸಿದೆ. ಈಗಲೂ ಬಡತನದಲ್ಲಿಯೇ ಜೀವಿಸುತ್ತೇನೆ. ಪ್ರಳಯಕಾಲದಲ್ಲಿ ಪುನಃ ನನ್ನನ್ನು ಬಡವರನುನೆಯಲ್ಲಿಯೇ ಹುಟ್ಟುವಹಾಗೆ ಮಾಡು" ಎಂದು ಪ್ರಾರ್ಥಿಸುತ್ತಿದ್ದರು. ಚಿಕ್ಕಮಕ್ಕಳ ಮೇಲೆ ಬಹು ಮಮತೆಯುಳ್ಳವರಾಗಿದ್ದರು. ಪ್ರಾರ್ಥನಾವೇಳೆಯಲ್ಲಿ ಯಾದರೂ ಮಗುವು ಅತ್ತರೆ ಕೂಡಲೆ ಪ್ರಾರ್ಥನೆಯನ್ನ ಮುಗಿಸಿ ಮಮತೆಯಿಂದ ಆದರಿಸುತ್ತಿದ್ದರು. ಯುದ್ಧದಿಂದ ಜಯವನ್ನು ಹೊಂದಿದಾಗ ಬಂದ ಚಿಕ್ಕಮಕ್ಕಳನ್ನು ಸಾಕಲು ಅನೇಕ ಸಲಕರಣೆಗಳನ್ನು ಒದಗಿಸಿ

ಸಾಕುವಂತೆ ಬೋಧಿಸುತ್ತಿದ್ದರು. ಯಾವ ಕೂಸು ಹುಟ್ಟಿದರೂ ಪ್ರಕೃತಿ ಸ್ವಭಾವಕ್ಕೆ ಅನುಸಾರವಾದ ಇಸ್ಲಾಂಮತಾನುಸಾರವಾಗಿಯೇ ಹುಟ್ಟುತ್ತದೆ ಎಂದು ಹೇಳುತ್ತಿದ್ದರು. ಮತ್ತು ಯಾವ ದೇಶದವರಮೇಲೆ ಜಯವನ್ನು ಹೊಂದಿದರೂ ಪ್ರಪಂಚದ ರಾಜರಂತೆ ಜನರನ್ನೂ ಅವರ ವಸ್ತುಗಳನ್ನೂ ನಾಶಮಾಡಬಾರದೆಂದೂ ಮತ್ತು ಅಂಥಾ ಸ್ಥಳದಲ್ಲಿ ಪವಿತ್ರವಾದ "ಲಾಯಿಲಾಹ ಇಲ್ಲಲ್ಲಾಹು ಮುಹಮ್ಮದುರ್ ರಸೂಲುಲ್ಲಾಹ್" ಎಂಬ ಬೀಜಮಂತ್ರವನ್ನು ಪಠಿಸಿದರೆ ಅಂಥವನನ್ನು ಕ್ಷಮಿಸಿ ಆದರಿಸಬೇಕೆಂದೂ ಆಜ್ಞಾಪಿಸುತ್ತಿದ್ದರು. ಸೇವಕರಲ್ಲಿಯೂ ಮತ್ತು ದಾಸಿಯರಲ್ಲಿಯೂ ಒಳ್ಳೆಯ ರೀತಿಯಲ್ಲಿ ನಡವಳಿಕೆಯನ್ನು ಇಟ್ಟುಕೊಂಡಿರಬೇಕು. ತಾವು ಉಡುವುದನ್ನೇ ಅವರಿಗೂ ಉಡಿಸಬೇಕು. ತಾವು ಊಟಮಾಡುವುದನ್ನೇ ಅವರಿಗೆ ನೀಡಬೇಕು. ಅವರಲ್ಲಿ ಬಾಂಧವ್ಯಭಾವದಿಂದ ನಡೆಯಬೇಕು. ದಾಸಿಯರನ್ನು ದಾಸಿಯೆಂದು ಕರೆಯದೆ ತನ್ನ ಮಕ್ಕಳಂತೆಯೆ ಸಂಬೋಧಿಸಬೇಕು. ಯಾವುದನ್ನು ಮಾಡಿದರೂ ಅವರೊಂದಿಗೆ ಕೂಡಿ ಮಾಡಬೇಕು. ಇವೆ ಮುಂತಾದ ಭೇದರಹಿತವಾದ ನಡವಳಿಕೆಗಳನ್ನು ಬೋಧಿಸಿದರು. ಯಾರಾದರೂ ಮೃತಪಟ್ಟ ಶವವನ್ನು ತೆಗೆದುಕೊಂಡುಬಂದರೆ, ತಾವೂ ಸ್ಮಶಾನಕ್ಕೆ ಹೋಗುತ್ತಿದ್ದರು.

ಹಜರತ್‌ರವರು, ಜ್ಞಾನ ಮತ್ತು ಧ್ಯಾನ ಶಕ್ತಿಗಳಲ್ಲಿ ಸರ್ವ ಅವತಾರಿಗಳನ್ನೂ ಮೀರುವವರಾಗಿದ್ದರು. ಒಂದೊಂದು ದಿವಸ ಪ್ರಾರ್ಥನೆಗೆ ಪ್ರಾತಃಕಾಲ ನಿಂತಲ್ಲಿ ಸಾಯಿಂಕಾಲದವರೆಗೂ ನಿಲ್ಲುತ್ತಿದ್ದರು. ನಿಂತು ನಿಂತು ಕಾಲುಗಳು ಬಾವು ಬರುತ್ತಿದ್ದವು. ಪ್ರತಿನಿತ್ಯವು ಐದು ವೇಳೆ ಪ್ರಾರ್ಥಿಸುವದಲ್ಲದೆ, ರಾತ್ರೆ ಕಾಲದಲ್ಲೂ ಮಧ್ಯ ರಾತ್ರೆಯಲ್ಲಿ ಎದ್ದು ಪ್ರಾರ್ಥನೆಯನ್ನು ಅನುಸರಿಸುತ್ತಿದ್ದರು. ಉಪನ್ಯಾಸವನ್ನು ಮಾಡಲು ನಿಂತಲ್ಲಿ ಸುಮಾರು ಹನ್ನೆರಡು ತಾಸುಗಳವರೆಗೂ ಅವಿಚ್ಛಿನ್ನವಾಗಿ ವ್ಯಾಖ್ಯಾನ ಮಾಡುತ್ತಿದ್ದರು. ಒಂದು ದಿವಸ ಪ್ರಾತಃಕಾಲದ ಪ್ರಾರ್ಥನೆಯನ್ನು ಮುಗಿಸಿಗೊಂಡು ಕಾಲಜ್ಞಾನೋಪನ್ಯಾಸವನ್ನು ಮಾಡುತ್ತಿದ್ದರು. ಮಧ್ಯಾನ್ಹದ ಪ್ರಾರ್ಥನಾಕಾಲದವರೆಗೂ ಎಡಬಿಡದೆ ಹೇಳಿ ಪ್ರಾರ್ಥನೆಯಾದ ನಂತರ ಪ್ರಾರಂಭಿಸಿ, ಸಾಯಿಂಕಾಲದವರೆಗೂ ಮತ್ತು ರಾತ್ರೆಯಲ್ಲಿ ಬಹಳ ಹೊತ್ತಿನವರೆಗೂ ವ್ಯಾಖ್ಯಾನ ಮಾಡಿದರು. ಈ ಸ್ಥಿತಿಯು ಹಜರತ್‌ರವರ ಜೀವಮಾನ ಕಾಲದಲ್ಲಿ ಅನೇಕ

ವೇಳೆ ಒಪಗಿರುತ್ತದೆ. ಆ ಕಾಲಜ್ಞಾನ ಭಾಗವೆಲ್ಲ ಇವರು ಮುಖಾಂತರ ಹೊರಪಟ್ಟಿರುವ ಒಂಭತ್ತು ಲಕ್ಷ ವಚನಗಳನ್ನೊಳಗೊಂಡಿರುವ ಹದೀಸ್ ಎಂಬ ಗ್ರಂಥಗಳಲ್ಲಿ ತುಂಬಿರುತ್ತದೆ. ಇವರು ಜಗದ್ಗುರುಗಳಾದ ಕಾರಣ ಜಗತ್ತಿನಲ್ಲಿ ಹಿಂದೆ ನಡೆದ ಮತ್ತು ಮುಂದೆ ನಡೆಯುವ ಪ್ರತಿಯೊಂದು ವಿಷಯವೂ ಅವುಗಳಲ್ಲಿ ತುಂಬಿ ತುಳುಕುತ್ತಾಯಿದೆ. ಇದಕ್ಕೋಸ್ಕರವಾಗಿ " ಉಲ್ಲಿಂತೊ ಇಲ್‌ಮಲ್ ಅವ್ವಲೀನ್‌ವಲ್ ಆಖಿರೀನ್ " ಎಂದರೆ "ಪರಮಾತ್ಮನು ನನಗೆ ಪೂರ್ವೀಕರಜ್ಞಾನವನ್ನು ಮತ್ತು ಮುಂದಿನವರ ಆಗಮಾನವನ್ನೂ ಸಂಪೂರ್ಣವಾಗಿ ಕೊಟ್ಟಿರುತ್ತಾನೆ" ಅಂದರೆ "ಪರಮಾತ್ಮನು ಸಪ್ತಖಾಂಡಗಳಲ್ಲಿ ಹಿಂದೆ ಆಗಿರುವವರ ಜ್ಞಾನವನ್ನೂ ಮತ್ತು ಮುಂದೆ ಆಗುವವರ ಜ್ಞಾನವನ್ನು ಮುದ್ರೆಯಂತೆ ನನಗೆ ಅನುಗ್ರಹಿಸಿರುತ್ತಾನೆ" ಎಂದು ಹೇಳುತ್ತಿದ್ದರು.

ಪರಮಾತ್ಮಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರ ಮೇಲಿನ ಹೇಳಿಕೆಯು ಎಷ್ಟು ನಿಶ್ಚಯಭರಿತವಾಗಿರುವದೆಂಬ ವಿಷಯವನ್ನು ಪರಿಶೀಲಿಸಿ ನೋಡಬೇಕಾದರೆ ಓಂಕಾರೋಕ್ತವಾದ ಕುರಾನನ್ನೂ ಮತ್ತು ಇವರ ಮುಖಾಂತರ ಹೊರಪಟ್ಟಿರುವ ಹದೀಸ್‌ಯೆಂಬ ಗ್ರಂಥಗಳನ್ನೂ ಚನ್ನಾಗಿ ಓದಿ ಗ್ರಹಿಸಬೇಕಾಗಿರುವುದು. ಪ್ರಪಂಚದ ಸರ್ವದೇವೋಕ್ತ ಗ್ರಂಥಗಳೂ ಓಂಕಾರೋಕ್ತವಾದ ಕುರಾನಲ್ಲಿ ಸಂಪೂರ್ಣವಾಗಿ ತುಂಬಿ ತುಳುಕುತ್ತಾ ಇವೆ. ಇದನ್ನು ಮುಂದಿನ ಭಾಗಗಳಲ್ಲಿ ವಿಶದವಾಗಿ ತಿಳಿಯಪಡಿಸುವುದಾಗುತ್ತೆ. ಆದರೆ ಪ್ರಪಂಚದ ಸಮಸ್ತ ಭವಿಷ್ಯೋಕ್ತವಾದ ಆಗಮಗಳು ಕುರಾನಲ್ಲಿಯೂ ಮತ್ತು ಹದೀಸ್‌ಗಳಲ್ಲಿಯೂ ಪೂರ್ತಿಯಾಗಿ ಕಂಡುಬರುತ್ತವೆ. ಇವುಗಳನ್ನು ಮುಂದೆ ಸಾಂಗವಾಗಿ ತಿಳಿಸುವೆವು.

| ಭಗವದ್ಗೀತೆ | ಕುರಾನ ಮತ್ತು ಹದೀಸ್ |
|---|---|
| ೧. ಯದಾಯದಾಹಿಧರ್ಮಸ್ಯ ಗ್ಲಾನಿರ್ಭವತಿಭಾರತ \| ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಾಂ ಸೃಜಾಮ್ಯಹಂ ॥ (ಅ. ೪. ಶ್ಲೋ. ೭.) | ೧. ವಾದಲ್ಲಾ ಹುಲ್ ಲಜೀನ ಆಮನು ಮಿನ್‌ಕುಂವ ಅಮೆಲುಸ್ ಸಾಲೆಹಾ ತೆಲೆಯಿಸ್‌ತ ಖ್‌ಲಿ ಫನ್ನ ಹುಂ ಫಿಲ್‌ಅರ್ದೆ ಕಮಸ್‌ತಖ್‌ಲಫಲ್ |

| ಭಗವದ್ಗೀತೆ | ಕುರಾನ್ ಮತ್ತು ಹದೀಸ್ |
|---|---|
| | ಲಜೀನ ಮಿನ್‌ಕಬ್‌ಲಿಹಿಂ: ವಲೆಯು ಮಕ್ಕಿನನ್ನಲಹುಂ ದೀನಹುಮುಲ್‌ಲ ಜಿರ್ತಜಾಲಹುಂ ವಲಯುಬದ್ದಲನ್ ಹುಂಮಿನ್‌ಬಾದೆ ಖೌಫಿಹಿಂ ಆಮನ. (ಕು. ಅ. ೨೪. ಸಂ. ೭.) |
| ೨. ಪರಿತ್ರಾಣಾಯಸಾಧೂನಾಂ ವಿನಾಶಾಯಚದುಷ್ಕೃತಾಂ| ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೆ ಯುಗೆ ||(ಅ. ೪. ಶ್ಲೋ೮||ಲ) | ೨. ಇನ್ನಲ್ಲಾಹ್ಯಬ ಅಸೋಲೆ ಹಾಜಿಹಿಲ್ ವುಮ್ಮತೆ ಆಲಾರಾಸೆಕು ಲ್ಲೊಮಯತೆ ಸನತಿಂವ್ಯೆಂಯ ಜದ ದೊಲಹಾದೀನಹಾ(ಅಬು ದಾವೂದ್. |
| ಅರ್ಥ. | ಅರ್ಥ. |
| ೧. ಎಲ್ಲೆ ! ಭಾರತನೆ! ಯಾವ ಯಾವ ವೇಳೆಯಲ್ಲಿ ಧರ್ಮ ಕಡಿಮೆ ಯಾಗಿ ಅಧರ್ಮ ಹೆಚ್ಚುವುದೋ ಆಗೆಲೂ ನಾನು ನನ್ನ ಸ್ವರೂಪವನ್ನು ತೋರಿಸುವೆನು. | ೧. ಪರಮಾತ್ಮನು ಅಪ್ಪಣೆ ಕೊಡಿಸುತ್ತಾನೆ. ಎಲ್ಲೆ ಭಕ್ತಿಯುಳ್ಳವರೆ ! ಮತ್ತು ಸುನಡತೆಯುಳ್ಳವರೆ! ಸತ್ಯವಾಗಿಯು ಪರಮಾತ್ಮನು ಪೂರ್ವೀಕ್ಕರನ್ನು ಯಾವ ರೀತಿಯಲ್ಲಿ ಆವತಾರಿಗಳಾಗಿ ಮಾಡಿದನೋ ಅದೇ ರೀತಿಯಲ್ಲಿ ಭಕ್ತಿಯುಳ್ಳವರನ್ನುಕಾರಣಗುರುಗಳನ್ನಾಗಿ ಮಾಡಿ ಅವರ ಧರ್ಮವನ್ನು ಅವರಿಗೋಸುಗ ಸ್ಥಾಪಿಸುತ್ತಾನೆ. ಮತ್ತು ಅವರಲ್ಲಿ ಶಾಂತಿಯನ್ನುಂಟುಮಾಡುತ್ತಾನೆ. |
| ೨. ಸಜ್ಜನರನ್ನು ರಕ್ಷಿಸುವುದಕ್ಕೋಸ್ಕರವು, ದುರ್ಜನರನ್ನು ಶಿಕ್ಷಿಸುವುದಕ್ಕೋಸ್ಕರವು ಪ್ರತಿಯುಗದಲ್ಲಿಯೂ ನಾನು ಹುಟ್ಟುವೆನು. | ೨. ಸತ್ಯವಾಗಿ ಪರಮಾತ್ಮನು ಈ ನನ್ನ ಭಕ್ತರಿಗೋಸುಗ ಪ್ರತಿಶತಮಾನದಲ್ಲಿಯು ಒಬ್ಬ ಧರ್ಮಪಾಲಕನನ್ನು ಕಳುಹಿಸಿ ಕ್ಷೀಣವಾಗುವ ಧರ್ಮವನ್ನು ರಕ್ಷಿಸುತ್ತಾನೆ. |

ಕುರಾನ್ ಮತ್ತು ಹದೀಸ್‌ಗಳಿಂದ ತಿಳಿಯಬರುವುದೇನೆಂದರೆ:— ಪ್ರಾಚೀನಕಾಲದ ಸರ್ವ ಅವತಾರಿಗಳೂ ಹಜರತ್‌ಮಹಮ್ಮದ್ ಪೈಗಂಬರರ ಭಕ್ತರಾಗಿಯೆ ಬಂದರು. ಅವರು ಇಸ್ಲಾಂ ಮತದ ಬಿಂದೊಂದು ಭಾಗದ ಸಂರಕ್ಷಣಾರ್ಥವಾಗಿ ಬೇರೆ ಬೇರೆ ದೇಶಗಳಲ್ಲಿ ಆಯಾಯ ಜನಾಂಗಗಳಲ್ಲಿ ಆಯಾಯ ಭಾಷೆಗಳೊಂದಿಗೆ ಅವತರಿಸಿದರು. ಪುನಃ ಇದರ ಎಂದರೆ ಇಸ್ಲಾಂಮತದ ಕ್ಷೀಣತೆಯನ್ನು ಹೋಗಲಾಡಿಸಲು ಹಿಂದಿನ ಸರ್ವ ಅವತಾರಿಗಳೂ ಹಜರತ್‌ಮಹಮ್ಮದ್ ಪೈಗಂಬರರ ಅನುಯಾಯಿಗಳಾಗಿ ಜನಿಸಿ ಧರ್ಮ ರಕ್ಷಣವನ್ನು ಮಾಡುವರು. "ನಾನು ಜಗದ್ಗುರುವಾದಕಾರಣ ನಾನು ಪೌರ್ಣಿಮಿಯ ಚಂದ್ರನಂತೆ ಇದ್ದೇನೆ. ಇತರ ಅವತಾರಿಗಳು ಪೌರ್ಣಿಮೆಯ ಮುಂದೆಯು ನಂತರವು ತಿರುಗಿ ಬರುವ ಶುಕ್ಲ ಮತ್ತು ಕೃಷ್ಣ ಪಕ್ಷಗಳ ಚಂದ್ರರಂತೆ ಇದ್ದಾರೆ. ನಾನಾದರೋ ಎಲ್ಲರಿಗೂ ಸಂಪೂರ್ಣನಾಗಿ ನನ್ನಲ್ಲಿ ಎಲ್ಲರನ್ನೂ ಒಳಗೊಂಡಿರುತ್ತೇನೆ. ಶುಕ್ಲ ಪಕ್ಷ ಮತ್ತು ಕೃಷ್ಣ ಪಕ್ಷಗಳು ತಿರುಗುವಂತೆ ಸರ್ವ ಅವತಾರಿಗಳ ಸ್ವರೂಪಗಳು ನನ್ನ ಭಕ್ತರುಗಳಲ್ಲಿ ಧರ್ಮ ಸ್ಥಾಪನಕ್ಕೆ ಅವಿಚ್ಛಿನ್ನವಾಗಿ ತಿರುಗುವವು" ಎಂದು ಹಜರತ್‌ಮಹಮ್ಮದ್ ಪೈಗಂಬರರು ಸಾರಿರುತ್ತಾರೆ.

| ಇಂಜೀಲ (ಹೊಸ ಒಡಂಬಡಿಕೆ) | ಕೂರಾನ್ ಮತ್ತು ಹದೀಸ್. |
|---|---|
| ೧. ನ್ಹೋವಿನ ದಿವಸಗಳು ಹ್ಯಾಗಿದ್ದವೊ ಹಾಗೆಯೆ ಮನುಷ್ಯ ಕುಮಾರನ (ಕ್ರೈಸ್ತನ) ಪ್ರತ್ಯಕ್ಷತೆಯು (ಪ್ರಾಳಯಕಾಲದಲ್ಲಿ) ಇರುವುದು. (ಮತ್ತಾಯ, ಭಾ ೨೪) | ೧. ವಯಿನ್ನಹು ಲ ಇಲ್ಮು ಲ್ಲಿಸ್ಸಾ. (ಕುರ್ಆ. ಆ. ೪೩. ಸಂ. ೬೧.) |
| | ೨. ಕೈಫಅಂತುಂ ಇಜಾನಜಲಾ ಫೀಕುಂ ಈಸಬ್‌ನೊಮರಿಯಮುವ ಇಮಾಮಕುಂಮಿನ್‌ಕುಂ. (ಬೊಖಾರಿ) |
| ವಿಚಾರ | ಅರ್ಥ. |
| ಏಸುಕ್ರೈಸ್ತರು ಪುನಃ ಕಂಡು ಬರುವ ಕಾಲಕ್ಕೆ ಬಹು ಪಾಪಗಳು | ೧. (ಕ್ರೈಸ್ತನು) ಅವನು ಪ್ರಳಯಕಾಲದ ಸೂಚನೆಯಾಗಿರುತ್ತಾನೆ. |

ಇಂಜೀಲ (ಹೊಸ ಒಡಂಬಡಿಕೆ)

ಹಬ್ಬಿ ಜನರು ಬಹು ಕೆಟ್ಟು ಹೋಗಿ, ನ್ಹೂವಿನ ಕಾಲದಲ್ಲಿ ಬಂದ ಪ್ರಳಯ ಸಂಕಟವು ಪುನಃ ಪ್ರಪಂಚಕ್ಕೆ ಒದಗುವುದೆಂದು ತಿಳಿಸಲ್ಪಟ್ಟಿರುತ್ತದೆ. ಇದೇ ಪ್ರಳಯದ ಸೂಚನೆಯು.

ಕುರಾನ್ ಮತ್ತು ಹದೀಸ್

ಯಾವಾಗ ನಿಮ್ಮಲ್ಲಿ ಮೆರಿಯಳ ಮಗನಾದ ಕ್ರೈಸ್ತನು ಪ್ರತ್ಯಕ್ಷನಾಗುವನೊ ಆಗ ನಿಮ್ಮವೇಲೆ ಒದಗುವ ಪ್ರಳಯಕಾಲದ ಕಷ್ಟವನ್ನು ವಿವರಿಸುವುದಸಾಧ್ಯವು.

ಇದೇರೀತಿಯಲ್ಲಿ ಕ್ರೈಸ್ತಧರ್ಮದವರಲ್ಲಿರುವ ಕಾಲಜ್ಞಾನಗಳೆಲ್ಲವು ಕುರಾ ಮತ್ತು ಹದೀಸುಗಳಲ್ಲಿ ಸಂಪೂರ್ಣವಾಗಿ ಕಂಡುಬರುತ್ತವೆ. ಮತ್ತು ಮೇಲೆ ಹಜರತ್‌ರವರು ಸೂಕ್ಷ್ಮರೀತಿಯಲ್ಲಿ "ಎಲ್ಲಾ ಅವತಾರಿಗೆಳು ಬರುವುದಾದರೆ, ನನ್ನ ಅನುಯಾಯಿಗಳಲ್ಲಿ ಬರುತ್ತಾರೆ" ಎಂದು ಹೇಳಿರುತ್ತಾರೆ. ಮತ್ತು ಇದೇಪ್ರಕಾರ ಲಿಂಗಾಯಿತ ಧರ್ಮದ ೬೩ ಜನ ಪುರಾತನರ ಕಾಲಜ್ಞಾನಾಗಮಗೆಳೂ ಕುರಾ ಮತ್ತು ಹದೀಸುಗಳಲ್ಲಿ ಸಂಪೂರ್ಣವಾಗಿ ಕಂಡುಬರುತ್ತವೆ.

**ಪುರಾತನ ಕಾಲಜ್ಞಾನಗಳು.**

೧. ತುರುಕರಪಟ್ಟ ನಾಶವಾಗುವತನಕ.

೨. ಒಂದು ವರ್ಷ ಬಹಳನೊಂದೀತು ಜಗವೆಲ್ಲ ಮುಂದಕ್ಕೆ ನಾವು ಬರೆಚಂದವಾದೀತು.

(ಚನ್ನಬಸವೇಶ್ವರ)

೩. ಚನ್ನಬಸವೇಶ್ವರರು ವಾಲಿ ಭಂಡಾರಕ್ಕೆ ಒಂದು ಭಂಡಾರದೊಳಗಿನ ಭಾಗ್ಯವೆಲ್ಲವನ್ನು ತೆಗೆದು ಕೊಂಡಾರು. ತಿರುಪತಿಯಲ್ಲಿ ಎಂಭತ್ತು ಕೋಟಿ ದ್ರವ್ಯವನ್ನು ತೆಗೆದು

**ಕುರಾನ್ ಮತ್ತು ಹದೀಸ್.**

೧. ಗುಲೆಬತರ್ರೂಮಿಫಿ ಅದಸಿಲ್ ಅರ್ದಿವ ಹುಂಮಿಂಬಾದೆಗಲಬೆ ಹಿಮ್‌ಸಯಗೆಲೆ ಭೂನ ಪೀಬಿಜಯ ಸಿನೀನ (ಕು. ಅ. ೩೦. ಸಂ. ೧).

೨. ಅನ್‌ಅಬಿವುಮಾಮಾ ಕಾಲತಿ ಬರಾನಿ ಕಾಲರಸೂಲುಲ್ಲಾ ಸೊಲ್‌ಲಲ್ಲಾಹು ಅಲೈಹಿವಸ್ವಲ್ಲಂ, ಸತಕೂನುಬೈನಕುಂ ವಬೈನರ್ರೂಮ ಆರ ಬಾಹುದನಿನ್ ವಯೌ ಮಾರ್ರಾಬೆ

ಕುರಾನ್ ಕಾಲಜ್ಞಾನಗಳು

ಕೊಂಡಾರು. ಉಮಾವುರದ ಗಣೇಶ್ವರನಂ ಕಿತ್ತು ಅಲ್ಲಿ ಮೂರುಕೋಟ ನ್ರವ್ಯವನ್ನು ತೆಗೆದಾರು. ಚಂದ್ರ ಗುಪ್ತರಾಜನು ಬಯಲಿಗೆ ಬಿದ್ದಾನು. ತನ್ನ ಬಸವೇಶ್ವರರು ಕರೆಕಂಬಳಿ ಕಂತೆ ಯನ್ನೂ ಕಾಮನ ಭಸ್ಮವನ್ನೂ ಧರಿ ಸುವರು. ಚಿನ್ನ ವರ್ಣನೆ ಬಂದ ಬಸವಣ್ಣನೆ ಬಂದ. ೨೮ ನೆ ಅವತಾರ ಈಶ್ವರನು ಹುಟ್ಟಿದನೆಂದು ಹೇಳು ವರು. (ಕಿನ್ನರಿ ಬ್ರಹ್ಮಯ್ಯ, ರುದ್ರ ಮುನಿ, ಬಸವೇಶ್ವರ, ಮೌನೇಶ್ವರ, ತನ್ನ ಬಸವೇಶ್ವರ).

ಪುರಾತನ ಕಾಲಜ್ಞಾನಗಳು.

ಯತೆ ಅಲಾಯದೆ ರಜುಲುನ್‌ಮಿನ್ ಆಲಿಹಾರೂನಯದೂವೋ, ಸಬಾಸಿ ನೀನಕೀಲಯಾ ರಸೂಲುಲ್ಲಾ, ಮನ್ ಇಮಾಮನ್ ನಾಸಯಿಯೌಮ್ಮೈಜಿನ್, ಕಾಲ ಮಿನ್‌ವಲದಿಬ್ನೊ, ಅರಬಯಾ ನಸನತೊ ಕಾನವಜಹು ಕೌಕಬುನ್ ದುರ್ರಿಯುನ್‌ಫೀ ಖುದ್ದೇಹಿಲ್‌ಅಯ ಮನೆಖಾಲುನ್ ಅಸವದುನ್‌ಲೈಹೆಲ ಬಾಯೇ ತಾನ ಕಿತವಾನಿಯ್ಯತಾನೆಕ ಅನ್ನಹುಮಿರ್ ರಿಜಾಲೆಬನಿ ಯಿಸ್ರಾ ಯಿಲ್, ಯಮುಲಿಕೊ ಅಷರಸಿನೀನ್ ಯಸ್ತ ಖ್‌ರಿಜುಲ್ ಕುನೂಜ ವ ಯು ಫತಹೋಮುದಾಯ ನಿಷ್ಟಿತಿಕೆ. (ಕಂಜುಲ್ ಉಮ್ಮಾಲ್ ಭಾಗ ೭. ಪುಟ ೧೮೭).

ಹದ್ದಸನ ಅಬುವಾಸೆಲೋ ಅಬದುಲ್ ಹಮಿದಬಿನ್‌ವಾಸೆಲ್ ಅನಾ ಅಬಿ ಸಿದ್ದೀಖಿನ್ನಾಜಿ ಅನಿಲ್ ಹಸನೆಬಿನ್‌ಯ ಜದುಸ್ತಾದಿ. ಅನ್ ಅಬಿಸಯಿದುಲ್ ಖುದರಿ ಕಾಲಕಾಲ ರಸುಲುಲ್ಲಹಿವ ಸ್ವಲ್ಲಮ್. ಯಖ್‌ರು ಜೋರಜು ಲುನ್‌ಮಿನ್ ವುಮ್ಮತಿಯಕೂಲುಬೆ ಮಿನ್ನತಿ, ಯುನಜ್ಜಲುಲ್ಲಾಹಿಅಜ್ಜೊ ಅಜಲ್‌ಲಹುಲ್ ಕಿತರಮಿನಸ್‌ನಸ ಮಾಯೆವ ತುಖರಜುಲ್ ಅರದಬರಕಾ ತಹುವಯತುಮು ವುಲ್ ಅರ್ದೆಮಿನ್

ಪುರಾತನಕಾಲಜ್ಞಾನಗಳು

ಕುರಾನ್ ಮತ್ತು ಹದೀಸ್.

ಹುಕಿಸ್‌ತನನಅದಲನ್ ಕಮಾಮುಲ ಯತ ಜುಲಮನ್ ವಜುರಾಯಮಲಿ ಕೊಸಬಸಿನೀನ (ರವಾಹು ಅಬುದಾವೂದವಹಾತಜಾಫಿಲ್ ಮಿಷ್‌ಕಾತ). (ನಜಮುಸಾಖ್ಬ್, ಭಾ ೭ಮಿಷ್‌ಕಾತ್ ಪುಟ ೪೭೦. ಅಬುದಾವೂದ್ ಪುಟ ೫೫೮)

ವಿಚಾರ.

" ತುರುಕರ ಪಟ್ಟ ನಾಶವಾಗುವ ತನಕ " ಎಂದು ಕಿನ್ನರಿ ಬ್ರಹ್ಮಯ್ಯ ಹಾಡಿರುವುದರಿಂದ ೧೯೨೪ನೇ ಇಸವಿಯಲ್ಲಿ ತುರುಕಸ್ಥಾನದ ಪಟ್ಟ ನಾಶವಾಗಿಹೋಯಿತು. ಇದೇ ವರ್ಷದ ಮುಂದೆ ಮಳೆ ಇಲ್ಲದೆ ಬಹಳ ಕಷ್ಟ ವಿದ್ದಿತು ನಾನು ಅವತರಿಸಿದಕೂಡಲೆ ಮಳೆಯಾಗಿ ಉತ್ತಮ ತೋರಿತು. ಇದಲ್ಲದೆ ಅನೇಕ ಕಡೆಗಳಲ್ಲಿ ಮಳೆಯ ಕುರುಹನ್ನು ನಾನು ತೋರಿಸಿರುತ್ತೇನೆ, ತಾಳಿಕೋಟೆ, ಕೊಪ್ಪಳ, ಡಾವಣಗೆರೆ ಈ ಸ್ಥಳಗಳು ಇದಕ್ಕೆ ಸಾಕ್ಷಿಯಾಗಿವೆ. " ನೀವು ನಿಕ್ಷೇಪದಲಿ ತೀವಿಕೊಂಡಿಹುದು " ಎಂದಿರುವುದರಿಂದ ಭೂಮಿಯಲ್ಲಿರುವ ದ್ರವ್ಯಗಳು ಹೊರಬಿದ್ದಾವು. ಮತ್ತು ಇದರ ಹೊರತು ವಾಲಿ ಭಂಡಾರ, ಮತ್ತು ತಿರುಪತಿ ಉಮಾಪುರ, ಮುಂತಾದ ಜಾಗಗಳ

ಅರ್ಥ.

೧. ಉಮಾಮರವರು ತಿಬ್ರಾನಿಗೆ ಹೇಳಿದ್ದೇನೆಂದರೆ " ಹಜರತ್ ಮಹಮ್ಮದ್ ಪೈಗೆಂಬರರು ಹೇಳಿದರು, "ನಿಮ್ಮ ಮತ್ತು ರೂಮ (ಕ್ರೈಸ್ತರು) ನವರಲ್ಲಿ ನಾಲ್ಕು ಯುದ್ಧಗಳಾಗುವವು. ನಾಲ್ಕನೆ ಯುದ್ಧವು ಒಬ್ಬ ಹಾರೂನ್ ವಂಶದವನಿಂದ ಜರುಗುವುದು. ಈ ಯುದ್ಧವು ಏಳುವರ್ಷ ನಡೆಯುವುದು " ಆಗ ಭಕ್ತರು, " ಸ್ವಾಮಿ ಆಕಾಲದಲ್ಲಿ ಕಾರಣ ಗುರುವುಯಾರು" ಎಂದು ಕೇಳಲು, ಅದಕ್ಕೆ ಹಜರತ್ ರವರು " ನನ್ನ ವಂಶದಿಂದ ನಲವತ್ತುವರ್ಷ ವಯಸ್ಸಿನವನು ಇರುತ್ತಾನೆ. ಆತನ ಮುಖವು ಚಂದ್ರಕಳೆಯನ್ನು ಹೋಲುವುದು. ಆತನ ಬಲಗೆನ್ನೆಯಮೇಲೆ ಕರಿಯ ಚುಕ್ಕೆ ಇರುವುದ. ಆತನು ಎರಡು ತರಹೆಯ ಬಟ್ಟೆಗಳನ್ನು ಉಡಬೇಕು "

ಪುರಾತನ ಕಾಲಜ್ಞಾನಗಳು ಕುರಾನ್ ಮತ್ತು ಹದೀಸ್.

ಲ್ಲಿನ ದ್ರವ್ಯಗಳು ಹೊರಬಿದ್ದಾವು. ಚಂದ್ರಗುಪ್ತ ರಾಜ್ಯಸ್ಥಾಪನೆಯಾಗುವುದೆಂದರೆ, ಈದೇಶದಲ್ಲಿ ಧರ್ಮರಾಜ್ಯ ಸ್ಥಾಪನವಾಗುವುದು. ವಿಶೇಷವಾಗಿ ಎರಡು ತರಹೆ ಉಡುಪನ್ನು ನಾನು ಧರಿಸಬೇಕೆಂದು ಹೇಳಿರುತ್ತಾರೆ. ಅವು ಕರೆಕಂಬಳಿ, ಕಾವಿ. ಇದನ್ನು ಹಜರತ ಮಹಮ್ಮದರು ಹೇಳಿರುತ್ತಾರೆ. ಈಶ್ವರವತಾರಿಯ ಪ್ರಖ್ಯಾತಿಗೋಸುಗ ನಾನು ಅವತರಿಸಿರುತ್ತೇನೆ.

ಯೆಂದರೆ ಯಹೂದಿಯರಹಾಗೆ ಇರುವನು. ಆತನು ಭೂಮಿಯಲ್ಲಿನ ದ್ರವ್ಯಗಳನ್ನು ತೆಗೆಯುವನು. ಮೂರ್ತಿಪೂಜಕರ ದೇಶವನ್ನು ಜೈಸುವನು. ಅವನು ಹತ್ತು ವರ್ಷ ರಾಜ್ಯವಾಳುವನು.

೨. ಅಬುವಾಸಿಲ್ ಅಬುದುಲ್ ಹಮಿದ್‌ಬಿನ್ ವಾಸೆಲ್‌ರವರು ಅಬಿಸಿದ್ದಿಕಿನ್ನಾಜಿಯವರಿಂದಲೂ ಇವರು ಹಸನ್ ಬಿನ್‌ಯ ಜೀದುಸ್ಸಾದಿಯಿಂದಲೂ ಇವರು ಅಬಿಸ ಈದಿಲ್ ಖುದರಿಯಿಂದಲೂ ಇವರು ಹಜರತ್‌ಮಹಮ್ಮದ್ ಪೈಗಂಬರರಿಂದಲೂ ಕೇಳಿ ಹೇಳಿದ್ದೇನೆಂದರೆ, ಹಜರತ್‌ರವರು ಹೇಳಿರುವರು " ಒಬ್ಬನು ನನ್ನ ಅನುಯಾಯಿಗಳಲ್ಲಿ ಹುಟ್ಟುವನು. ಆತನು ನನ್ನ ಖ್ಯಾತಿಯನ್ನು ಜಗತ್ತಿನಲ್ಲಿ ಸಾರುವನು. ಅವನಿಗೋಸುಗ ಪರಮಾತ್ಮನು ಮಳೆಯನ್ನು ಸುರಿಸುವನು. ಜಗತ್ತು ಧರ್ಮದಿಂದ ತುಂಬಿತುಳುಕುವುದು. ಆತನಿಂದ ರಾಜ್ಯಸ್ಥಾಪನೆಯಾದೀತು. ಆತನು ಏಳ್ವತ್ತು ವರ್ಷಗಳಾಳುವನು."

ಹೀಗೆಯೆ ಜಗತ್ತಿನ ಸರ್ವ ಅವತಾರಿಗಳೂ ಶರಣರೂ ಮತ್ತು ಮಹಾತ್ಮರೂ ಹೇಳಿರುವ ಕಾಲಜ್ಞಾನಾಗಮಗಳು ಸಂಪೂರ್ಣವಾಗಿ ಕುರಾನ್ ಮತ್ತು

ಹದೀಸುಗಳಲ್ಲಿ ಸ್ವಲ್ಪವೂ ಬಿಡದೆ ಕಂಡುಬಂದಿರುತ್ತವೆ. ಇದರ ರಹಸ್ಯವು ಬಹಳವಾಗಿರುವುದು. ಹಜರತ್ ಮುಹಮ್ಮದ್ ಪೈಗಂಬರರು ಇದೇ ವಿಷಯವಾಗಿ "ನಾನೇ ಜಗದ್ಗುರುವು, ಕಾರಣ ಪರಮಾತ್ಮನು ಸರ್ವ ಅವತಾರಿಗಳ, ಶರಣರ ಮತ್ತು ಮಹನೀಯರ ಜ್ಞಾನವನ್ನು ಎಂದರೆ ಪೂರ್ವೀಕರದೆ ಆಗಲಿ ಮುಂದಿನವರದೆ ಆಗಲಿ ಸಂಪೂರ್ಣವಾಗಿ ಕೊಟ್ಟಿರುತ್ತಾನೆ" ಎಂದುಹೇಳಿದರು. ಇದೇ ವಿಷಯವು ಹಿಂದೆ ಹೊರಪಟ್ಟಿರುತ್ತದೆ. ಮತ್ತು ಹಜರತ್‌ರವರು ಜ್ಞಾನಸಮಾಧಿಯಲ್ಲಿದ್ದಾಗ ಪರಮಾತ್ಮನು ಪ್ರತ್ಯಕ್ಷನಾಗಿ ಅವರ ಬೆನ್ನಮೇಲೆ ಕೈ ಇಟ್ಟಕೂಡಲೆ ಇವರಿಗೆ ಭವಿಷ್ಯೋಕ್ತ ಜ್ಞಾನವು ಉತ್ಪನ್ನವಾಗಿ ಸಮಸ್ತ ಭೂಮಂಡಲವು ಅಂಗೈ ಅಗಲದಲ್ಲಿ ಅವರಿಗೆ ಪ್ರತ್ಯಕ್ಷವಾಯಿತು. ಇದರಲ್ಲಿ ಸರ್ವದೇಶಗಳೂ ಪ್ರಜೆಗಳೂ ಸರ್ವ ಅವತಾರಿಗಳೂ ಹಿಂದಿನವರೂ ಮತ್ತು ಮುಂದಿನವರೂ ಸಂಪೂರ್ಣವಾಗಿ ಕಂಡರು. ಆಗ ಹಜರತ್‌ರವರ ದರ್ಶನದಿಂದ ಸರ್ವ ಅವತಾರಿಗಳು ಸಂತುಷ್ಟರಾಗಿ "ನಾವುಗಳೆಲ್ಲರೂ ಪುನಃ ಇವರ ಅನುಯಾಯಿಗಳ ರೂಪದಲ್ಲಿ ಇವರ ಸೇವೆಯನ್ನು ಮಾಡುತ್ತೇವೆ" ಎಂದು ಪರಮಾತ್ಮನನ್ನು ಕೇಳಿಕೊಂಡರು. ಇದನ್ನು ಪೂರ್ತಿಗೊಳಿಸಲೋಸುಗವೆ ಪರಮಾತ್ಮನ ತ್ರಿಸ್ವರೂಪಗಳು ಭಿನ್ನಭಿನ್ನವಾಗಿ ಹಿಂದಿನ ಅವತಾರಿಗಳಲ್ಲಿ ಬಂದವು. ಪುನಃ ಇವೆ ಭಿನ್ನಸ್ವರೂಪಗಳಿಂದ ಹಿಂದಿನ ಅವತಾರಿಗಳೆಲ್ಲರೂ ತ್ರಿಮೂರ್ತಿಸ್ವರೂಪ ಸಂಯುಕ್ತರಾದ ಈಶ್ವರಸ್ವರೂಪ ಪ್ರಸನ್ನರಾದ "ಬ್ರಹ್ಮಾಕೃತ ಶಿವಸಹಸ್ರನಾಮ ಸು | ವೃತ್ಯುಂಜಯ ಸೂಕ್ಷ್ಮತನುರ್ಜಗದ್ವಾಪಿ ಜಗದ್ಗುರು ||" ಎಂಬ ಬಿರುದಾಂಕಿತರಾದ ಹಜರತ್ ಮಹಮ್ಮದ್ ಪೈಗಂಬರರ ಭಕ್ತರಾಗಿ ಅವತರಿಸಿ ಧರ್ಮವನ್ನು ಸಜೀವಮಾಡುವರು. ಹಿಂದೆಯೂ ಹೀಗೆಯೆ ನಡೆದಿರುತ್ತದೆ ಮುಂದೆಯಾದರೂ ಹೀಗೆಯೆ ನಡೆಯುವುದು. ಹೇಗೆ ಈಶ್ವರ ಸ್ವರೂಪಿಯಾದ ಪರಮಾತ್ಮನು ತ್ರಿಸ್ವರೂಪಗಳಾದ ಬ್ರಹ್ಮ, ವಿಷ್ಣು, ರುದ್ರರೆಂಬ ಭಿನ್ನಸ್ವರೂಪಗಳಿಗೆ ಅಧಿಪತಿ ಮತ್ತು ಮಾತೃಸ್ಥಾನವೊ ಅದೇರೀತಿಯಲ್ಲಿ, ಭಿನ್ನಸ್ವರೂಪಗಳನ್ನು ಧರಿಸಿ ಅವತರಿಸಿರುವ ಅವತಾರಿಗಳೂ ಮತ್ತು ಅವತರಿಸುವ ಮಹಾತ್ಮರೂ ಈಶ್ವರವತಾರಿಗೆ ಆದ ಹಜರತ್ ಮಹಮ್ಮದ್ ಪೈಗಂಬರರ ಅಧೀನತೆಗೊ ಮತ್ತು ಮೂಲಕ್ಕೂ ಒಳಪಟ್ಟಿರುವರು.

ಈ ಮಹಾತ್ಮರ ಸ್ವರೂಪವರ್ಣನೆಯು ಬಹು ಅಸದಳವಾಗಿರುವುದು. ಇವರ ಜೀವನ ಚರಿತ್ರೆಯಿಂದಲೂ ಮತ್ತು ಹೇಳಿಕೆಗಳಿಂದಲೂ ಇವರ ಓಂಕಾರೋಕ್ತ ಗ್ರಂಥದಿಂದಲೂ ಈ ಪ್ರಮಾಣದ ಸಾಧನೆಯು ತುಂಬಿರುವುದು. ಆದರೆ ಮುಂದಿನ ಪ್ರಮಾಣಗಳಿಂದ ಈ ಮಹಾತ್ಮರ ಜಗತ್ಪ್ರಸನ್ನಗುಣಗಳೂ ಮತ್ತು ಇವರ ದೈವಮತವೂ ಸರ್ವಮಯವಾಗಿಯೂ ಮತ್ತು ಸ್ವಭಾವಸಂಯುಕ್ತವಾಗಿಯೂ ಮನುಷ್ಯನ ಸ್ಥೂಲಸೂಕ್ಷ್ಮ ಸಂರಕ್ಷಣೆಗೆ ತಕ್ಕುವಾಗಿರುವ ವೆಂದು ಸಂಪೂರ್ಣವಾಗಿ ತಿಳಿಯುವುದು.

## ಮೂರನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವಾಪಿ ಜಗದ್ಗುರು ||

ಈಶ್ವರಾವತಾರಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರು ಎಲ್ಲಾ ಮತಗಳಲ್ಲಿ ಆಚಾರದಲ್ಲಿರುವ ಆಕಾರಪೂಜೆಗಳನ್ನು ಸರ್ವದೋಷ ರಹಿತವಾದ ಮತ್ತು ಸರ್ವ ಆಕಾರಗಳಿಗೂ ಮಾತೃಸ್ಥಾನವಾದ ನಿರಾಕಾರಸ್ಥಾನದಲ್ಲಿ ಆತ್ಮಪೂಜೆಯನ್ನು ನೆಲೆಗೊಳಿಸಿ ಸರ್ವ ಆಕಾರಗಳಿಗೂ ಅವಿಚ್ಛಿನ್ನವಾಗಿ ಪೂಜೆಯು ಸಲ್ಲುವಂತೆಮಾಡುವ ಸುಬೋಧನೆಗಳನ್ನು ಬೋಧಿಸಿ ಸರ್ವ ಮತಸ್ಥರ ದುಃಖವನ್ನು ದೂರಮಾಡಿರುತ್ತಾರೆ.

ಮೇಲಿನ ಪ್ರಮಾಣಸಾಧನೆಗಾಗಿ ಹಜರತ್ ಮಹಮ್ಮದ್ ಪೈಗಂಬರರ ಜೀವಮಾನ ಸ್ಥಿತಿಯೂ ಮತ್ತು ಬೋಧನೆಗಳೂ ತುಂಬಿ ತುಳುಕುತ್ತಿರುವವು. ಹಜರತ್‌ರವರು ಮೂರ್ತಿಖಂಡನಮಾಡಿರುವ ವಿಚಾರವು ಸರ್ವರ ಪ್ರಕೃತಿಗೂ ಸನ್ಮತವಾಗಿರುತ್ತದೆ. ಇತರರು ಮಾಡಿರುವಹಾಗೆ ದ್ವೇಷಾಸೂಯೆಗಳನ್ನು ಹೆಚ್ಚಿಸುವ ರೀತಿಯಲ್ಲಿ ಮಾಡಿಲ್ಲ. ಆದರೆ ಇವರು ಬಹು ಉತ್ತಮವಾದ ಆಧಾರಗಳಿಂದ ತೋರಿಸಿ ವಿಗ್ರಹಪೂಜೆಯನ್ನು ನಿಲ್ಲಿಸಿ ಸರ್ವರ ಆತ್ಮಪ್ರಕಾಶಕ್ಕೆ ಮೂಲಕಾರಣರಾದರು. ವ್ಯಾಕ್ಯದಲ್ಲಿದ್ದಾಗ ಹಜರತ್‌ರವರು ಬಹು ಚಿಕ್ಕವಯಸ್ಸಿನಲ್ಲಿಯೇ ಆಕಾರಪೂಜೆಯನ್ನು ಒಪ್ಪುತ್ತಿರಲಿಲ್ಲ. ಮತ್ತು ಇವರಿಗೆ ಜಗದ್ಗುರುವಿನ ಬಿರುದು ಸಿಕ್ಕಿದಾಗಲೂ ಅವಿಚ್ಛಿನ್ನವಾಗಿ ವಿಗ್ರಹಾರಾ

ಧನೆಯನ್ನು ಖಂಡಿಸಿದರು. ಸರ್ವ ಆಧಾರಗಳೊಂದಿಗೆ ತೋರಿಸಿದರೂ ಅಜ್ಞಾನಿಗಳು ತಮ್ಮ ಮೂರ್ಖತೆಯನ್ನು ಬಿಡದೆ ಈ ಮಹಾತ್ಮರನ್ನು ಬಹು ಕಷ್ಟಗಳಿಗೆ ಹೊಣೆಮಾಡಿದರು. ಕಡೆಗೆ ಈ ಮಹಾಪುರುಷರು ಮಕ್ಕಾವನ್ನು ಬಿಟ್ಟು ಮದೀನಾವನ್ನು ಸೇರಿ ಅಲ್ಲಿ ತಮ್ಮ ಮತಕ್ಕೆ ಅನೇಕ ಸತ್ಪುರುಷರನ್ನು ಸೇರಿಸಿಕೊಂಡು ಸುಮಾರು ಹತ್ತು ಸಾವಿರಜನ ಸದ್ಭಕ್ತರೊಂದಿಗೆ ಮಕ್ಕಾಕ್ಕೆ ಬಂದು ಪವಿತ್ರಸ್ಥಾನದಲ್ಲಿದ್ದುಕೊಂಡು ದೈವಪೀಠವನ್ನು ಮಾನುಷಹೃದಯಗಳಿಂದ ಕಿತ್ತುಕೊಂಡಿದ್ದ ಶಿಲಾವಿಗ್ರಹಗಳನ್ನು ಒಂದೂ ಉಳಿಯದಹಾಗೆ ಹಿಡಿದು ಚೂರು ಚೂರು ಮಾಡಿದರು. ಇವುಗಳನ್ನು ಒಡೆಯುವಾಗ ಹಜರತ್ ಮಹಮ್ಮದ್ ಪೈಗಂಬರರು "ಸತ್ಯಬಂದಿತು ಅಸತ್ಯವು ಪಲಾಯನವಾಯತು. ವಾಸ್ತವ್ಯವಾಗಿ ಅಸತ್ಯವು ನಾಶವಾಗುವುದು" ಮತ್ತು "ಅನಲ್‌ಮಾಹಿಯಮ್ ಹುಲ್ಲಾ ಹುಬಿಯಲ್ ಕುಫರ" ಎಂದರೆ "ನಾನು ಮೂರ್ತಿಪೂಜೆಯನ್ನು ನಾಶಪಡಿಸುವವನಿದ್ದೇನೆ. ಪರಮಾತ್ಮನು ಅಧರ್ಮವನ್ನು ನನ್ನ ಮುಖಾಂತರವಾಗಿಯೇ ಲಯಗೊಳಿಸುವನು" ಎಂದು ಹೇಳಿದರು. ಇದಕ್ಕೆ ಸಾಧನವಾಗಿಯೇ ಪರಮಾತ್ಮನು ಓಂಕಾರೋಕ್ತಿಯಲ್ಲಿ ಕುಲ್‌ಜಾ ಅಲ್‌ಹಕ್ಕೊವ ಮಾಯುಬ್‌ದೀಯುಲ್ ಬಾತಿಲೆವಮಾಯುಯಿಾದ್" ಎಂದರೆ."ಎಲ್ಲೆ ಪ್ರವಾದಿಯೇ ! ಪ್ರಸಿದ್ಧಪಡಿಸು ಸತ್ಯಬಂದಿದೆ ಮತ್ತು ಹಳೆಯದಾಗಲಿ, ಹೊಸದಾಗಲಿ ಈ ಸ್ಥಳದಲ್ಲಿ ಯಾವ ಮೂರ್ತಿಯೂ ಪೂಜಿಸಲ್ಪಡುವುದಿಲ್ಲಾ" ಎಂದು ಸಾರಿರುತ್ತಾನೆ. ಇದಕ್ಕೆ ಸಾಕ್ಷಿಯಾಗಿ ಸಾವಿರದ ಮೂರುನೂರ ನಾಲ್ವತ್ತು ವರ್ಷಗಳಿಂದಲೂ ಮೂರ್ತಿಪೂಜೆಯು ಮಕ್ಕಾಪಟ್ಟಣದಲ್ಲಿ ತಲೆದೋರಿಲ್ಲಾ. ಆದರೂ ಈಕಾಲದಲ್ಲಿಯಾದರೋ ಮಹಮ್ಮದೀಯರು ಜಗತ್ತಿನ ತುಂಬ ವ್ಯಾಪಿಸಿರುತ್ತಾರೆ ಮತ್ತೂ ಅವರ ಪ್ರಾರ್ಥನಾ ಮಂದಿರಗಳು ಎಲ್ಲೆಲ್ಲಿಯೂ ವ್ಯಾಪಿಸಿರುತ್ತವೆ. ಅವುಗಳಲ್ಲಿಯಾದರೂ ಹೋಗಿ ನೋಡಬಹುದು. ಅಲ್ಲೆಲ್ಲಿಯೂ ಒಂದು ಮೂರ್ತಿಯೂ ಕಂಡುಬರುವುದಿಲ್ಲ. ಮೇಲಿನ ಓಂಕಾರೋಕ್ತಾಗಮವು ಇದುವರೆಗೂ ಎಷ್ಟು ಸಾಧನವನ್ನೂ ಮತ್ತು ಸತ್ಯವನ್ನೂ ಒಳಗೊಂಡು ಧೃಡೀಕರಿಸಲ್ಪಟ್ಟಿದೆಯೆಂಬ ವಿಚಾರವನ್ನು ಜ್ಞಾನಿಗಳಾದವರು ತಮ್ಮ ಆತ್ಮದೃಷ್ಟಿಯಿಂದ ತಿಳಿದು ಆ ಮಹಾತ್ಮರ ಆತ್ಮಶಕ್ತಿಯನ್ನು ಹೊಗಳಬೇಕಾಗಿರುವುದು.

ಪ್ರಪಂಚದಲ್ಲಿ ಇದುವರೆಗೂ ಅನೇಕ ಜನ ಅವತಾರಿಗಳು ಅವತರಿಸಿ ಧರ್ಮೋಪದೇಶವನ್ನು ಮಾಡಿ ಮೂರ್ತಿಪೂಜೆಯನ್ನು ಬಿಡಿಸಿ ಒಬ್ಬನಾದ ಪರಮಾತ್ಮ ಧ್ಯಾನವನ್ನು ತಿಳಿಸಿಹೋದರು. ಆದರೆ ಅವರ ನಂತರ ಅವರ ಅನುಯಾಯಿಗಳು ಪುನಃ ವಿಗ್ರಹಾರಾಧನೆಗಳನ್ನು ಪ್ರಾರಂಭಿಸಿದರು. ವೇದಗಳು ಇದಕ್ಕೆ ಸಾಕ್ಷಿಯಾಗಿ ಮೂರ್ತಿಖಂಡನೆಯನ್ನು ಮಾಡುತ್ತವೆ. ಆದರೆ ಅವುಗಳನ್ನು ನಂಬುವ ವೈದೀಕರು ವಿಗ್ರಹಾರಾಧನೆಗಳನ್ನು ಮಾಡುತ್ತಾರೆ. ಮತ್ತು ಇವರ ದೇವಾಲಯಗಳು ಅನೇಕ ವಿಗ್ರಹಗಳಿಂದ ತುಂಬಿರುತ್ತವೆ. ಆದರೆ ಹಜರತ್ ಮಹಮ್ಮದರ ಅನುಯಾಯಿಗಳಲ್ಲಿಯೇ ಆಗಲಿ ಮತ್ತು ಪ್ರಾರ್ಥನಾಸ್ಥಳಗಳಲ್ಲಿಯೇ ಆಗಲಿ ಮೂರ್ತಿಯ ನೆಲೆಯೇ ಇಲ್ಲದಹಾಗೆ ಇರುತ್ತದೆ. ಇದರಿಂದಲೇ ಹಜರತ್ ಮಹಮ್ಮದರ ಶಕ್ತಿಯು ಸರ್ವ ಅವತಾರಿಗಳ ಶಕ್ತಿಸ್ವರೂಪಗಳನ್ನು ವಿಾರಿತ್ತೆಂದು ತಿಳಿಯಬರುತ್ತದೆ. ಮೂರ್ತಿಖಂಡನೆಯು ಎಲ್ಲಾ ಮತಬೋಧನೆಗಳಲ್ಲಿಯೂ ತುಂಬಿರುತ್ತದೆ.

## ಶ್ರುತಿಗಳಲ್ಲಿ.

"ಏಕವಿವೋ ನದ್ವಿತಿಯೋ ಯತಸ್ತೇನಬ್ರಹ್ಮಾನ |
ವಿಷ್ಣುರ್ನಸೂರ್ಯೋನಾಗ್ನಿಚಂದ್ರತಾರಕಾಃ||"

ಅರ್ಥ:—ನಿರಾಕಾರ ನಿರಂಜನನಾದ ಪರಮಾತ್ಮನು ಒಬ್ಬನೇ ಇದ್ದಾನೆ. ಆತನಿಗೆ ಸಮಾನವಾದ ವಸ್ತುವೇ ಇಲ್ಲ ".

" ಬ್ರಹ್ಮವಿದ್ಬ್ರಹ್ಮೈವ ಭವತಿ "

ಅರ್ಥ:—ಬ್ರಹ್ಮನನ್ನು ತಿಳಿದವನು ಬ್ರಹ್ಮನೇ ಆಗುತ್ತಾನೆ.

---

## ಶ್ರೀರಾಮರಿಗೆ ಓಂಕಾರೋಕ್ತವಾದ ಶಿವಗೀತೆಯಲ್ಲಿ.

ಆತ್ಮಪೂಜಾಸಮಾನಾಸ್ತಿ ಪೂಜಾರಘುಕುಲೋತ್ತಮ |
ಮತ್ಸಾಯುಜ್ಯ ಮವಾಪ್ನೋತಿ ಚಂಡಾಲೋಪ್ಯಾತ್ಮಪೂಜಯ ||

(೧೬ ನೇ ಅಧ್ಯಾಯ)

ಅರ್ಥ:—ಎಲ್ಲೆ ರಾಮನೆ ! ಲೋಕದಲ್ಲಿ ಆತ್ಮಪೂಜೆಗೆ ಸಮಾನವಾದ ಪೂಜೆಯೇ ಇಲ್ಲವು. ಈ ಆತ್ಮಪೂಜೆಯಿಂದ ಚಂಡಾಲನಾದರೂ ನನ್ನ ಸಾಯುಜ್ಯವನ್ನು ಹೊಂದುತ್ತಾನೆ. ಮತ್ತು

ಅಪಿಚೇತ್ಸುದುರಾಚಾರೊ ಭಜತೇ ಮಾಮನನ್ಯಭಾಕ್ |
ಸಾಧುರೇವಸಮಂತವ್ಯಸ್ಸಮ್ಯಗ್ವ್ಯವಸಿತೋ ಹಿಸಃ ||
(೧೨ ನೇ ಅಧ್ಯಾಯ)

ಅರ್ಥ:—ಮೊದಲು ಸುತರಾಂ ದುರಾಚಾರನಾದವನಾಗಿದ್ದರೂ ಒಂದುವೇಳೆ ಪಶ್ಚಾತ್ತಾಪವುಳ್ಳವನಾಗಿ ಇತರ ದೇವತೆಗಳನ್ನು ಬಿಟ್ಟು ನನ್ನನ್ನೇ ಭಜಿಸಿದರೆ ಕೃತಕೃತ್ಯನಾದುದರಿಂದ ಅವನನ್ನು ಸಾಧುವೆಂದೇ ಎಣಿಸಬೇಕು. ಪುನಃ

ವೇದವಾರ್ಕಿ ಲಭೋಹಂ ನಶಾಸ್ತ್ರೈರ್ನಾಪಿಚೇತಸಾ |
ಧ್ಯಾನೇನವರ್ಣಂತೇಯೋಮಾಂ ಸರ್ವದಾಹಂ ವೃಣೋಮಿತಂ ||
(೧೨ ನೇ ಅಧ್ಯಾಯ)

ಅರ್ಥ:—ನನ್ನನ್ನು ವೇದವಾಕ್ಯಗಳಿಂದಲೂ, ಶಾಸ್ತ್ರಗಳಿಂದಲೂ, ಮನಸ್ಸಿನಿಂದಲೂ ತಿಳಿಯುವುದಕ್ಕಾಗುವುದಿಲ್ಲ. ಯಾವನು ಧ್ಯಾನದಿಂದ ನನ್ನಂ ಭಜಿಸುತ್ತಾನೋ ಅವನನ್ನೇ ನಾನಪೇಕ್ಷಿಸುತ್ತೇನೆ. (೧೨ನೇ ಅಧ್ಯಾಯ)

---

## ಅವಧೂತ ಗೀತೆಯಲ್ಲಿ

ಪಂಚಭೂತಾತ್ಮಕಂವಿಶ್ವಂ ಮರೀಚಿ ಜಲಸನ್ನಿಭಂ |
ಕಸ್ಯೇಹಾಭೂನ್ನಮಸ್ಕಾರೋ ಹ್ಯಹಮಏಕೋನಿರಂಜನಃ ||

ಅರ್ಥ:—ಪಂಚಭೂತಾತ್ಮಕವಾದ ಜಗತ್ತು ಮರುಮರೀಚಿಕಾ ಜಲ ಸಮಾನವಾಗಿದೆ. ಅಂದರೆ ಬಿಸಿಲ್ಗುದುರೆಯಲ್ಲಿ ಜಲವು ಹೇಗೆ ಸುಳ್ಳೋ ಜ್ಞಾನದಲ್ಲಿ ಈ ಜಗತ್ತು ಸುಳ್ಳಾಗಿದೆ. ನಾನಿದ್ದೇನೆ ಜಗತ್ತಿಲ್ಲ. ಇದರಲ್ಲಿ ಯಾರಿಗೂ ನಮಸ್ಕಾರ ಸಲ್ಲದು. ನಿರಂಜನನಾದ ನನಗೆ ಮಾತ್ರ ಸಲ್ಲುವುದು.

---

## ಕಶ್ಯಪಸ್ಮೃತಿಯಲ್ಲಿ.

ನಕಾಷ್ಠೇವಿದ್ಯತೇದೇವ ನಪಾಷಾಣೆ ನಮೃಣ್ಮಯೇ |
ಭಾವೇನ ವಿದ್ಯತೇದೇವಃ ಯದ್ಯಾವಂತದ್ಭವತಿ ||

ಅರ್ಥ:—ದೇವರು ಕಟ್ಟಿಗೆಯಿಂದ ಮಾಡಿರುವ ಗೊಂಬೆಗಳೊಳಗೆ ಮತ್ತು ಕಲ್ಲಿನ ಮೂರ್ತಿಗಳೊಳಗೆ ಸಿಗುವುದಿಲ್ಲ; ಆದರೆ ಭಾವದಿಂ ದೇವರು ಸಿಕ್ಕುತ್ತಾನೆ. ಯಾವನು ಯಾವಪ್ರಕಾರವಾಗಿ ಭಾವನೆಮಾಡುತ್ತಾನೋ ಆದೇ ಪ್ರಕಾರ ಅವನಿಗೆ ಸಿಗುತ್ತಾನೆ.

---

## ಸೂತಸಂಹಿತೆಯಲ್ಲಿ.

ತೀರ್ಥೇದಾನೇ ತಪೋಯಜ್ಞೇ ಕಾಷ್ಠೆ ಪಾಷಾಣಕೇಸದಾ |
ಶಿವೋದೇಪಶ್ಯತಿ ಮೂಢಾತ್ಮ ಶಿವೋದೇಹೆ ಪ್ರತಿಷ್ಠಿತಃ ||

ಅರ್ಥ:—ತೀರ್ಥದಲ್ಲೂ, ದಾನದಲ್ಲೂ, ತಪಸ್ಸಿನಲ್ಲೂ, ಯಜ್ಞದಲ್ಲೂ, ಮರದಲ್ಲೂ, ಕಲ್ಲಿನಲ್ಲೂ, ಮೂಢರು ಶಿವನಂ ನೋಡುತ್ತಾರೆ. ಶಿವನು ದೇಹದಲ್ಲೇ ಇದ್ದಾನೆ.

ಇದೇ ರೀತಿಯಲ್ಲಿ ಸರ್ವಮತದ ದೇವೋಕ್ತ ಗ್ರಂಥಗಳೂ ಮೂರ್ತಿ ಪೂಜೆಯಿನ್ನು ಖಂಡನೆ ಮಾಡುತ್ತವೆ; ಆದರೆ ಅವರ ಅನುಯಾಯಿಗಳು ಆ ಅವತಾರಿಗಳ ನಂತರ ಪುನಃ ಪ್ರಾರಂಭಿಸಿರುತ್ತಾರೆ. ಆದರೆ ಜಗದ್ಗುರು ಬಿರುದಾಂಕಿತರಾದ ಹಜರತ್ ಮಹಮ್ಮದ್‌ರವರ ಅನುಯಾಯಿಗಳಲ್ಲಿ ಮಾತ್ರ ಮೂರ್ತಿ ಪೂಜೆಯು ನಿಂತಿರುತ್ತದೆ.

ದ್ವಾಪರಯುಗದ ಅಂತ್ಯದಲ್ಲಿ ಹಿಂದೂಸ್ಥಾನದಲ್ಲಿ ಅವತರಿಸಿದ ಮತ್ತು ಶ್ರೀ ವಿಷ್ಣುಸ್ವರೂಪಿಯಾದ ಶ್ರೀ ಕೃಷ್ಣನೂ ಕೂಡ ಮೂರ್ತಿ ಪೂಜೆಯನ್ನು ಖಂಡನೆ ಮಾಡಿರುತ್ತಾನೆ. ಇದಕ್ಕೆ ಅನೇಕ ಆಧಾರಗಳು ಭಗವದ್ಗೀತೆಯಲ್ಲಿ ಹುದಗುತ್ತವೆ.—

ಸಕ್ಯಯಾಶ್ರದ್ಧಯಾಯುಕ್ತ ಸ್ತಸ್ಯಾರಾಧನಮೀಹತೆ |
ಲಭತೇಚತತಃ ಕರ್ಮಾ ನುಯೈವ ವಿಹಿತಾರ್ಹಿತಾರ್ಹಾ||
ಅಂತುನತ್ತು ಫಲಂತೇಷಾಂತದ್ಭವತ್ಯಲ್ಪ ಚೇತಸಾವ್ |
ದೇವಾರ್ದೇವಯಜೋಯಾಂತಿ ಮದ್ಭಕ್ತಾಯಾಂತಿ ಮಾಮಪಿ ||
(೭ನೇ ಅಧ್ಯಾಯ)

ಅರ್ಥ:—ಯವನು ಆ ವಿಶ್ವಾಸದಿಂದ ಕೂಡಿದವನಾಗಿ ಆ ದೇವತೆಯ ಪೂಜೆಯನ್ನು ಮಾಡುವನೊ, ಆಗಲೂ ತಕ್ಕವುಗೆಳಾಗಿಯೂ ಹಿತಗೆಳಾಗಿಯೂ ಇರುವ ಬಯಕೆಗಳನ್ನು ನನ್ನಿಂದಲೇ ಹೊಂದುವನು. ಆದಕಾರಣ ಆ ಬುದ್ಧಿಹೀನರಿಗೆ ಆ ಫಲವು ನಾಶವಾಗುವದು. ದೇವತೆಗಳನ್ನು ಪೂಜಿಸಿದವರು ದೇವತೆಗಳನ್ನೇ ಸೇರುವರು. ನನ್ನ ಭಕ್ತರು ನನ್ನನ್ನೇ ಸೇರುವರು.

ಯಾಂತಿದೇವಾವ್ರತಾದೇವಾರ್ ಪ್ರತ್ಯಾರ್ ಯಾಂತಿಪ್ರತವ್ರತಾಃ |
ಭೂತಾನಿಯಾಂತಿಭೂತೇಜ್ಯಾ ಯಾಂತಿ ಮದ್ಯಾಜಿ ನೋಪಿಮಾಂ||
(೭ನೇ ಅಧ್ಯಾಯ)

ಅರ್ಥ:—ದೇವತೆಗೆಳನ್ನು ಭಜಿಸುವವರು ದೇವತೆಗೆಳನ್ನು ಹೊಂದುವರು. ಪಿತೃಗೆಳನ್ನು ಪೂಜಿಸುವವರು ಪಿತೃಗೆಳನ್ನು ಹೊಂದುವರು. ಭೂತಗೆಳನ್ನು ಪೂಜಿಸುವವರು ಭೂತಗೆಳನ್ನು ಹೊಂದುವರು. ನನ್ನನ್ನು ಭಜಿಸುವವರು ನನ್ನನ್ನೇ ಹೊಂದುವರು.

ಇಂತಿಷ್ಟು ಶುದ್ಧವಾದ ಪ್ರಮಾಣಗಳು ಶ್ರೀಕೃಷ್ಣಭಗವಾನರ ಬೋಧನೆಗೆಳಲ್ಲಿ ಕಂಡು ಬಂದರೂ ಅವರ ಅನುಯಾಯಿಗೆಳು ಮೂರ್ತಿ ಪೂಜೆಯನ್ನು ಬಿಡಲಿಲ್ಲಾ. ಇವರ ದೇವಾಲಯಗೆಳಲ್ಲೆಲ್ಲಾ ವಿಗ್ರಹಗೆಳು ತುಂಬಿರುತ್ತವೆ.

ಸುಮಾರು ಎಂಟುನೂರು ವರ್ಷಗೆಳ ಹಿಂದೆ ದಕ್ಷಿಣಭಾಗದ ನೂರಾ ಒಂದು ಕುಲಗೆಳ ಆತ್ಮಾಭಿವೃದ್ಧಿಗಾಗಿ ಅವತರಿಸಿದ ಶಿವಶರಣರೂ, ಪುರಾತನರೂ ಮೂರ್ತಿಪೂಜೆಯನ್ನು ಅವಿಚ್ಛಿನ್ನವಾಗಿ ಖಂಡನೆಮಾಡಿರುತ್ತಾರೆ. ಆದರೆ ಅವರ ಅನುಯಾಯಿಗೆಳು ಅವರ ಬೋಧನೆಗೆಳನ್ನು ಅನುಸರಿಸಲಿಲ್ಲಾ.

## ಚನ್ನಬಸವಪುರಾಣದಲ್ಲಿ

ಜಾತಿಸೂತಕ ಜನನ ಸೂತಕಂಗಳು ಮಹಾ ।
ಪ್ರೇತಸೂತಕ ನಿತ್ಯಸೂತಕ ಮದುಚ್ಛಿಷ್ಟ ।
ಸೂತಕಮಿದೇ ಪಂಚಸೂತಕಂ ಸ್ಥಾವರಾದನ್ಯ ಲಿಂಗದ ಭಜನೆಯ॥
ಓ ತನ್ಯ ತೀರ್ಥಮನ್ಯ ಕ್ಷೇತ್ರ ಯಾತ್ರೆಗಳಿಗಾ ।
ತುರದೆ ಪೋವು ದೀಗನ್ಯ ದೇವಾರ್ಚನೆವಿ ।
ನೀತಭವಿಯಾದವರನ್ನ ತಾಯಿತಂದೆ ಬಂಧುಗಳೆನಲುಭವಿಸಂಗವು॥
(೫ ಕಾಂಡ. ಸಂ. ೬)

ಅರ್ಥ:—ಶ್ರೀ ಚನ್ನಬಸವೇಶ್ವರರು ಸಿದ್ದರಾಮೇಶ್ವರನಿಗೆ ಬೋಧಿಸಿದರು:—ನೀನು ಲಿಂಗಾಯಿತನಾದಮೇಲೆ ಜಾತಿಭೇದವನ್ನು ಎಣಿಸಕೂಡದು. ಜನನ ಭೇದವನ್ನು ಎಣಿಸಕೂಡದು. ಸಾವಿನಕ್ರಿಯೆಯಲ್ಲಿ ಭೇದವನ್ನೆಣಿಸ ಕೂಡದು. ಪ್ರತಿನಿತ್ಯವೂ ಮಾಡುವ ಇತರ ದೇವರ ಪೂಜೆಯನ್ನು ಬಿಡ ಬೇಕು ಊಟದ ಭೇದವನ್ನು ಎಣಿಸಕೂಡದು, ಮತ್ತು ಸಿಲಾಮಯ ಲಿಂಗದ ಪೂಜೆಯನ್ನು ಬಿಡಬೇಕು. ಯಾರು ಇಂಥಾ ಮಾರ್ಗದಲ್ಲಿ ಸೇರುವ ದಿಲ್ಲವೋ ಅಂಥಾವರು ತಾಯಿ ತಂದೆಗಳಾದರೂ ಅವರನ್ನು ಭವಿಗಳೆಂದೇ ಎಣಿಸಬೇಕು.

ಹೀಗೆ ಲಿಂಗಾಯಿತರ ಧರ್ಮದ ಸಜೀವಾವತಾರಿಯಾದ ಶ್ರೀಚನ್ನಬಸ ವೇಶ್ವರರು ಎಷ್ಟು ಸ್ಪಷ್ಟವಾದರೀತಿಯಲ್ಲಿ ಮೂರ್ತಿಪೂಜೆಯನ್ನು ಖಂಡನೆಮಾ ಡಿದ್ದರೂ ಅವರ ಅನುಯಾಯಿಗಳು ಪುನಃ ಶಿಲಾಮಯಲಿಂಗವನ್ನು ಕೊರಳಿ ನಲ್ಲಿ ಧರಿಸಿ ಪ್ರತಿದಿನವೂ ಪೂಜಿಸಿ ಕರ್ಮಕ್ಕೆ ಸಿಕ್ಕಿರುತ್ತಾರೆ.

---

## ಸರ್ವಜ್ಞನವಚನದಲ್ಲಿ.

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ ತಾಗಿಲ್ಲ ।
ತಪ್ಪತಡೆಯಿಲ್ಲಲಿಂಗಕ್ಕೆದೇಗುಲವೆ ಇಲ್ಲ ॥ ಸರ್ವ ॥
ದೇವತನ್ನಲ್ಲಿರಲುಮನ್ನಿಸಾಲರಿಯದೆ ।
ಕಟ್ಟಿದಾಕಲ್ಲಿಗೆ ಕೈಮುಗಿವ ಕುನ್ನಿನೋಡೆಂದ ॥ಸರ್ವ॥

ಈರೀತಿಯಲ್ಲಿ ಹಿಂದೂಸ್ಥಾನದ ಮಹಾತ್ಮರೆಲ್ಲರೂ ಮೂರ್ತಿ ಪೂಜೆಯನ್ನು ನಿಲ್ಲಿಸಲು ಪ್ರಯತ್ನಪಟ್ಟಿರುತ್ತಾರೆ. ಆದರೆ ಅವರ ಅನುಯಾಯಿಗಳು ಅದನ್ನು ಸಫಲಗೊಳಿಸಲಿಲ್ಲ. ಪ್ರಯುಕ್ತ ಈ ಕೆಲಸವು ಜಗದ್ಗುರುಗಳಿಗೆ ಮಾತ್ರವೇ ಹೊಂದಿದ್ದಿತು.

## ನ್ಹೂವಿನ ಗ್ರಂಥದಲ್ಲಿ.

ಯಾಕೌಮಿಇನ್ನಿಲಕುಮ್ ನಜೀರುನ್ ಮುಬೀನ್
ಅನ್ ಯ್ಯಬುದುಲ್ಲಾಹ, ವತ್ತಕೂಹುವ ಅತೀಯೂನಿ
ಫಕುಲ್ ತುಸ್‌ತಗ್ ಫಿರುರಬ್ಬಕುಮ್ ಇನ್ನಹು
ಕಾನಗಫ್ಫಾರಾ |ಯುರ್‌ಸೆಲಿಸ್‌ಸಮಾ ಅಲೈಕುಂಮಿ
ದ್‌ರಾರಾವಯುಮ್‌ದಿದ್‌ಕುಂಬೆ ಅವಾಲಿಂವ
ವಬನೀನ ವಯಜ್‌ಅಲ್ಲಕುಂ ಜನ್ನಾತಿಂವಯಜ್
ಆಲ್‌ಲ ಕುಂ ಅನಹಾರಾ ||  (ಕು. ೭೧ನೇ ಅಧ್ಯಾಯ).

ಅರ್ಥ:—ಓ ನನ್ನಕುಲದವರೆ! ನಾನು ನಿಜವಾಗಿ ನಿಮ್ಮನ್ನು ಸ್ಪಷ್ಟರೀತಿಯಿಂದ ಎಚ್ಚರಗೊಳಿಸುವವನಿದ್ದೇನೆ. ನೀವು ನಿರಾಕಾರ ಪರಮಾತ್ಮನನ್ನೇ ಪೂಜಿಸಿರಿ ಮತ್ತು ಆತನ ಸೇವೆಯನ್ನೇ ಅವಲಂಬಿಸಿರಿ ಮತ್ತು ನನ್ನನ್ನೂ ಅನುಸರಿಸಿರಿ. ನಿಮ್ಮ ಪ್ರಭುವಿನಲ್ಲಿ (ನಿಮ್ಮ) ಪಾಪಕ್ಕೋಸ್ಕರ ಕ್ಷಮೆಯನ್ನು ಬೇಡಿರಿ. ಆತನು ಮಹಾ ಕ್ಷಮ ಇರುವದೇ ಸತ್ಯವು. ಆತನು ನಿಮ್ಮಮೇಲೆ ವಿಪರೀತವಾದ ಮಳೆಯನ್ನು ಸುರಿಸುವ ಮೋಡಗಳನ್ನು ಕಳುಹಿಸುವನು. ಮತ್ತು ನಿಮಗಾಗಿ ತೋಟಗಳನ್ನು ನಿರ್ಮಿಸುವನು. ನಿಮಗೋಸ್ಕರ ಕಾಲುವೆಗಳನ್ನು ಉಂಟುಮಾಡುವನು! ಎಂದು ಹೇಳಿದನು.

ನ್ಹೂ ಪೈಗಂಬರರ ಗ್ರಂಥದಲ್ಲಿಯೂಕೂಡ ಸ್ಪಷ್ಟವಾಗಿ ಮೂರ್ತಿಪೂಜೆಯ ಖಂಡನೆಯೇ ವಿವರಿಸಲ್ಪಟ್ಟಿರುತ್ತದೆ. ಆದರೆ ಅವರ ಅನುಯಾಯಿಗಳು ಮಾತ್ರ ಅವರ ಬೋಧೆಗೆ ವ್ಯತಿರಿಕ್ತವಾಗಿ ವಿಗ್ರಹಪೂಜೆಯನ್ನು ಮಾಡುತ್ತಾ ಬಂದಿರುತ್ತಾರೆ. ಏಕೆಂದರೆ, ನ್ಹೂವು ಜಗದ್ಗುರುವಲ್ಲವಾದ್ದರಿಂದ ಇವರ ಅನುಯಾಯಿಗಳು ಮೂರ್ತಿಪೂಜೆಗೆ ಹೊಂದಿಕೊಂಡರು.

## ಅಬ್ರಾಹಾಮನ ಗ್ರಂಥದಲ್ಲಿ.

ಯಾಬುನಯ್ಯಾ ಇನ್ನಲ್ಲಾಹಸ್ತಫಾಲಕು
ಮುದ್ದೀನಪಲಾತಮೂತುನ್ನಇಲ್ಲಾವ ಅಂತುಂ
ಮುಸ್ಲೆಮೂನ, ಇನ್ನಿವಜ್‌ಜಿ ಹತೊವಜಹಿಯಾ
ಲಿಲ್‌ಲಜಿಫತರಸ್‌ಸಮಾವಾತೆವಲ್‌ಅರ್ದ
ಹನೀಫಂವಮಾಅನಾಮಿನಲ್‌ಮುಷರಕೀನ|| (ಕು. ೨೬ ಅ)

ಅರ್ಥ:—ಅಬ್ರಾಹಾಮನು ಹೇಳುತ್ತಾನೆ. "ಓ ! ನನ್ನ ವಂಶದವರೆ ! ಸತ್ಯವಾಗಿ ಪರಮಾತ್ಮನು ನಿಮಗೋಸ್ಕರ ಧರ್ಮವನ್ನು ಉಂಟುಮಾಡಿರುತ್ತಾನೆ. ತಾವು ಒಬ್ಬನಾದ ಪರಮಾತ್ಮನ ಧ್ಯಾನದಿಂದಲೆ ಜೀವತ್ಯಾಗ ಮಾಡಬೇಕು. ನಾನು ಸ್ಥಿರವಾಗಿ ಆಕಾಶ ಮತ್ತು ಭೂಕಾಂತಿಯ ಸೃಷ್ಟಿಗೆ ಕರ್ತೃವಾದವನಕಡೆ ಗಮನಮಾಡಿರುತ್ತೇನೆ. ನನ್ನಲ್ಲಿ ಆತನ ಪ್ರಥಿಮೆಯಿಲ್ಲಾ.

ಇಂಥಾ ಸಾಧನಾಸ್ಪದವಾದ ಪ್ರಮಾಣಗರ್ಭಿತವಾದ ಬೋಧನೆ ಇದ್ದಾಗ್ಯೂ ಇವರ ಅನುಯಾಯಿಗಳು ಅವರ ನಂತರ ವಿಗ್ರಹಾರಾಧನೆಯನ್ನು ಪ್ರಾರಂಭಿಸಿದರು. ಏತಕ್ಕೆಂದರೆ, ಅಬ್ರಾಹಾಮನು ಜಗುದ್ಗುರುವಲ್ಲವು.

---

## ಇಸ್ರಾಯಿಲ ಗ್ರಂಥದಲ್ಲಿ.

ಇಜಕಾಲಲೆ ಬನೀಹಿ ಮಾತಾಬುದೂ ನಮಿನ್‌ಬಾದಿಕಾಲು ನಾಬುದು ಇಲಾಹುಕುಂವ ಇಲಾಹ ಆಬಾಯಕುಂ ಇಬ್ರಾಹೀಮವ ಇಸ್ಮಾಯಿಲವ ಇಸಹಾಕ, ಇಲಾಹುಂ ವಾಹೆದ್, ವನಹ ನೊಲಹು ಮುಸಲೆ ಮೂನ (ಕು. ಅ ೨)

ಅರ್ಥ:—ಇಸ್ರಾಯಿಲನು ತನ್ನ ಅನುಯಾಯಿಗಳನ್ನು ಕುರಿತು ಪ್ರಶ್ನಿಸಿದನು, "ನನ್ನ ನಂತರ ನೀವು ಯಾರ ಬೋಧನೆಯನ್ನು ಅನುಸರಿಸುವಿರಿ ಮತ್ತು ಯಾರನ್ನು ಪೂಜಿಸುವಿರಿ ? ಅದಕ್ಕೆ "ನಾವು ನಿನ್ನ ಪರಮಾತ್ಮನ ಮತ್ತು ನಿನ್ನ ತಂದೆ ಅಬ್ರಹಾಮನ, ಇಸ್ಮಾಯಿಲನ ಮತ್ತು ಇಸಹಾಕನ (ಇವರೆಲ್ಲರ) ಒಬ್ಬನಾದ ಪರಮಾತ್ಮನ ಪೂಜೆಯನ್ನೆ ಮಾಡುವೆವು." ಎಂದು ಉತ್ತರ ಕೊಟ್ಟರು.

ಪೂರ್ವದಲ್ಲಿ ಇವರ ಅನುಯಾಯಿಗಳು ಇಂಥಾ ವಾಗ್ದಾನವನ್ನು ಕೊಟ್ಟೂಕೂಡ ಪುನಃ ಅದಕ್ಕೆ ತಪ್ಪಿ ಮೂರ್ತಿ ಪೂಜೆಯನ್ನು ಅವಿಚ್ಛಿನ್ನವಾಗಿ ಅವಲಂಬಿಸಿದರು. ಕಾರಣವೇನೆಂದರೆ; ಇಸ್ರಾಯಿಲರು ಜಗದ್ಗುರುವಲ್ಲವು.

---

## ಬೈಬಲಿನಲ್ಲಿ (ಹಳೆ ವಡಂಬಡಿಕೆ)

ವ್ಯಭಿಚಾರ ಮಾಡುವನನ್ನೂ ಮತ್ತು ಮೂರ್ತಿ ಪೂಜಕನನ್ನೂ ಎಂದರೆ ಇವರಿಬ್ಬರನ್ನೂ ಕೊಲ್ಲಿಬಿಡಬೇಕು. (ಮೋಸಸ್ ಗ್ರಂಥ).

ಮೂಸ ಪೈಗೆಂಬರರೂ ಕೂಡ ಮೂರ್ತಿ ಪೂಜೆಯ ಖಂಡನೆಯನ್ನು ಮಾಡಿರುತ್ತಾರೆ. ಆದರೂ ಅವರ ಅನುಯಾಯಿಗಳು ಮೂರ್ತಿ ಪೂಜೆಯನ್ನು ಅವರಿರುವಾಗಲೆ ಪ್ರಾರಂಭಿಸಿದರು. ಇವರು ಜಗದ್ಗುರುವಲ್ಲದ್ದರಿಂದ ಇವರ ಅನುಯಾಯಿಗಳಲ್ಲಿ ಮೂರ್ತಿ ಪೂಜೆಯು ಮೈದೋರಿತು.

---

## ಇಂಜೀಲಿನಲ್ಲಿ (ಹೊಸ ವಡಂಬಡಿಕೆ)

ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಗೆ ಹೋಗಿ ಬಾಗಿಲನ್ನು ಮುಚ್ಚಿಕ್ಕೊಂಡು ಅಂತರಂಗದಲ್ಲಿ ನಿನ್ನ ತಂದೆಗೆ ನಮಸ್ಕಾರ ಮಾಡು ಆತನು ನಿನಗೆ ಫಲ ಕೊಡುವನು.

(ಮತ್ತಾಯ ೬)

ಕ್ರೈಸ್ತರಿಗೂ ಅವರ ಗುರುಗಳಾದ ಏಸುಕ್ರೈಸ್ತರು ಒಬ್ಬನಾದ ಪರಮಾತ್ಮನಪೂಜೆಯನ್ನೇ ನೆಲೆಗೊಳಿಸಿ ಹೋದರು. ಆದರೆ ಅವರ ಅನುಯಾಯಿಗಳು ತಮ್ಮ ಹಿಂದಿನ ವಾಸನೆಯನ್ನು ಬಿಡದೆ ಪುನಃ ಮೂರ್ತಿ ಪೂಜೆಗೆ ನಿಂತರು. ಹೀಗೆಯೇ ಸರ್ವ ವಚನಗಳೂ ಮೂರ್ತಿ ಪೂಜೆಯ ಖಂಡನೆ ಮಾಡುತ್ತವೆ. ಆದರೂ ಸಫಲವಾಗಲಿಲ್ಲಾ. ಏಕೆಂದರೆ! ಏಸುಕ್ರೈಸ್ತರು ಜಗದ್ಗುರುಗಳಾಗಿರಲಿಲ್ಲವು.

ಇದೇರೀತಿಯಲ್ಲಿ ಒಂದು ಲಕ್ಷದ ಎಂಭತ್ತು ಸಾವಿರ ಜನ ಅವತಾರಿಗಳು ಈ ಪ್ರಪಂಚದಲ್ಲಿ ಮೈದೋರಿ ಧರ್ಮವನ್ನು ಸ್ಥಾಪಿಸಿ ಸಕರ್ಮವನ್ನು ನೆಲೆಗೊಳಿಸಿ ಕಲ್ಲು ಮುಂತಾದ ಮೂರ್ತಿ ಪೂಜೆಯನ್ನು ನಿಲ್ಲಿಸಿ ಒಬ್ಬನಾದ ಪರಮಾತ್ಮನ ಪೂಜೆಯನ್ನು ಸ್ಥಿರಗೊಳಿಸಿದರು. ಆದರೆ ಅವರ ನಂತರ ಅವರ ಬೋಧನಕ್ಕೆ ವ್ಯತಿರಿಕ್ತವಾಗಿ ಅವರವರ ಅನುಯಾಯಿಗಳ ದೇವ ಮಂದಿರಗಳಲ್ಲಿ ವಿವಿಧವಾದ ವಿಗ್ರಹಗಳು ಬಂದು ಕುಳಿತವು. ಆದರೆ ಮಹಮ್ಮದರಿಂದ ಸ್ಥಾಪಿಸಲ್ಪಟ್ಟ ಮಸೂತಿಯಲ್ಲಿ ಮಾತ್ರ ಇದುವರೆಗೂ ಒಂದು ಮೂರ್ತಿಗೂ ಜಾಗ ಸಿಕ್ಕದಹಾಗೆ ಆಯಿತು. ಇಲ್ಲಿಗೆ ಹಜರತ್ ಮಹಮ್ಮದ್ ಪೈಗಂಬರರ ಆಗಮನವಾಗಿ ಸಾವಿರದ ಮೂರುನೂರು ನಲ್ವತ್ತು ವರ್ಷಗಳಾದರೂ ಒಂದು ಹಳ್ಳಿಯ ಮಸೂತಿಯಲ್ಲಿಯೂ ಆಕಾರದ ನೆಲೆಯು ಕಾಣುವುದಿಲ್ಲ. ಇದಲ್ಲದೆ ಹಜರತ್ ಮಹಮ್ಮದ್ ಪೈಗಂಬರರ ಅನುಯಾಯಿಗಳು ಮೂರ್ತಿಗಳ ಪೂಜೆಯನ್ನು ಬಿಡುವುದುಮಾತ್ರವಲ್ಲ ಇತರರಿಂದ ಮೂರ್ತಿ ಬಿಡಿಸಿದರು ಮತ್ತು ಅನ್ಯಾಯದಿಂದ ದೈವಧ್ಯಾನ ಮಂದಿರಗಳಲ್ಲಿ ಆತ್ಮಸಮಾನವಾಗಿ ಕುಳಿತಿದ್ದ ಆಕಾರಗಳನ್ನೆಲ್ಲಾ ಹಿಂದಿನ ಆಯಾಯ ಅವತಾರಿಗಳ ರೂಪನ್ನು ಧರಿಸಿ ತೆಗೆದುಹಾಕಿ ಧರ್ಮವನ್ನು ಸಜೀವಗೊಳಿಸಿದರು. ಸೋಮನಾಥ ದೇವಾಲಯ ನಾಶಕನಾದ ಮಹಮೂದನು ರುದ್ರರೂಪವನ್ನ ವಲಂಬಿಸಿ ಮೂರ್ತಿಗಳನ್ನು ನಾಶಪಡಿಸಿದನು. ಶ್ರೀಚನ್ನಬಸವೇಶ್ವರರ ಕಾಲಜ್ಞಾನಪ್ರಕಾರ ದೆಹಲಿಯ ಅರಸನಾದ ಅವರಂಗಜೇಬನು ಭಗೀರಥಾವತಾರನಾಗಿ ಬಂದು ಮೂರ್ತಿ ಖಂಡನೆಯನ್ನು ಮಾಡಿ ಧರ್ಮವನ್ನು ಉದ್ಧರಿಸಿದನು. ಶ್ರೀಚನ್ನಬಸವೇಶ್ವರರು ಇಲ್ಲಿಗೆ ಎಂಟುನೂರು ವರ್ಷಗಳ ಹಿಂದೆ "ಪುನಃ ಹಿಂದೂ ತುರುಕರು ಒಂದಾಗಿ ನಡೆಯುವ ಕಾಲದಲ್ಲಿ ಅವತರಿಸಿ ಆಗ ಶಿಲಮಯಪೂಜೆಯನ್ನು ನಾಶಮಾಡುವೆವು. ಇಷ್ಟಲಿಂಗ ಮುರಿದು ಮಿಶ್ರಿತ ಲಿಂಗವಾಗುವುದು. ಆಕಾರಪೂಜೆಯು ಒಕುಹೋಗುವುದು. ಸ್ಥಾವರಾದಿ ಲಿಂಗಗಳು ಮತ್ತು ದೇವರುಗಳು ಲಯವಾಗುವವು. ಶೂನ್ಯಸ್ಥಳದಲ್ಲಿಯೆ ಪೂಜೆಯು ನೆಲೆಗೊಳ್ಳುವುದು" ಎಂಬದಾಗಿ ಸಾರಿ ಹೇಳಿರುತ್ತಾರೆ. ಜಗತ್ತೆಲ್ಲಾ ಅಜ್ಞಾನದಿಂದ ಮತ ವೈಷಮ್ಯಗಳನ್ನು ಹೆಚ್ಚಿಸಿಕೊಂಡು, ಆತ್ಮವನ್ನು ಮರತು, ಆಕಾರಗಳನ್ನು ಹಿಡಿದುಕೊಂಡು, ಜಾತಿವರ್ಣಾಭಿಮಾನಿಗಳಾಗಿ ಲಯವಾಗುವುದರಲ್ಲಿರುವರೆ. ಆದುದರಿಂದ ಆತ್ಮಶಾಂತಿಯನ್ನು

ಬಯಸುವ ಪಕ್ಷದಲ್ಲಿ ಕಾಲಕ್ಕೆ ಸಾರಿಯಾಗಿ "ಸಿದ್ಧೀಕ್" ರೂಪದಲ್ಲಿ ಪ್ರತ್ಯಕ್ಷವಾಗಿರುವ ಶ್ರೀಚನ್ನಬಸವೇಶ್ವರನನ್ನು ಜ್ಞಾನದಿಂದ ತಿಳಿಯಬೇಕಾಗಿರುವುದು. ಮುಂದೆ ನಿರಾಕಾರಸ್ಥಾನದಲ್ಲಿಯೇ ಪೂಜೆಯು ನೆಲೆಗೊಳ್ಳುವುದು. ಹೀಗೆಯೆ ಹಜರತ್ ಮಹಮ್ಮದರು ಜಗದ್ಗುರುವಿನ ಬಿರುದಾಂಕಿತರಾಗಿ ಮೂರ್ತಿಪೂಜೆಯನ್ನು ನಿಲ್ಲಿಸಿರುವುದಲ್ಲದೆ ಅವರ ಅನುಯಾಯಿಗಳಲ್ಲಿ ಎಲ್ಲಾ ಅವತಾರಿಗಳು ಅವತರಿಸಿ ಮತ್ತೂ ಅವತರಿಸಿಯೂ ಮೂರ್ತಿಗಳನ್ನು ಖಂಡಿಸುವರು. ಇದುವರೆಗೂ ಹಜರತ್‌ರವರ ಅನುಯಾಯಿಗಳಲ್ಲಿ ಹಿಂದಿನ ಅವತಾರಿಗಳು ಕಾಣಬಂದಿರುವರು.

ಶ್ರೀಭಗೀರಥಾವತಾರಿಯು ಹಜರತ್‌ರವರ ಅನು ಯಾಯಿಗಳಲ್ಲಿಬಂದರು

ಶ್ರೀಕೇಶವಾವತಾರಿಗಳು ಹಜರತ್‌ರ ಅನುಯಾಯಿಯಾಗಿ ಬಂದರು.

ಶ್ರೀಏಸುಕ್ರೈಸ್ತರು ಹಜರತ್‌ರವರ ಅನುಯಾಯಿಗಳಲ್ಲಿ ಬಂದರು.

ಶ್ರೀಚನ್ನಬಸವೇಶ್ವರರು ಹಜರತ್‌ರವರ ಅನುಯಾಯಿಯಾಗಿ ಬಂದರು.

ಶ್ರೀವೀರವಸಂತರಾಯರು ಹಜರತ್‌ರವರಅನುಯಾಯಿಯಾಗಿಬಂದರು.

ಮುಂದೆಯೂ ಕೂಡ ಹಿಂದಿನ ಅವತಾರಿಗಳೆಲ್ಲರೂ ಹಜರತ್‌ರವರ ಅನುಯಾಯಿಗಳೆಂಬ ಸಮುದ್ರದಲ್ಲಿಯೇ ಧುಮಿಕಿ ಗೋಚರವಾಗುವರು. ಏಕೆಂದರೆ ಮೂರ್ತಿಗಳಿಂದ ಜಗತ್ತಿಗೆ ಬಹುದುಃಖವಾಗಿರುವುದು. ಈ ದುಃಖವನ್ನು ದೂರಮಾಡಲು ಹಿಂದಿನ ಅವತಾರಿಗಳು ತಮ್ಮ ತಮ್ಮ ವರ್ಣದವರಲ್ಲಿ ಮೂರ್ತಿಪೂಜೆಯನ್ನು ಪುನಃ ಬಿಡಿಸಲು, ವಿಗ್ರಹ ವಿಭೇದಕರಾದ ಜಗದ್ಗುರುಗಳಾದ ಹಜರತ್ ಮಹಮ್ಮದರ ಅನುಯಾಯಿಗಳ ರೂಪದಲ್ಲಿ ಕಾಣಿಸಿಕೊಂಡು ಈಗಲೂ ಮತ್ತು ಮುಂದೆಯೂ ಜಗತ್ತಿನ ದುಃಖವನ್ನು ದೂರಮಾಡುವರು. ಹಜರತ್‌ರವರ ಅನುಯಾಯಿಗಳಿಗೆ ಮಾತ್ರ ಈ ಸಾಮರ್ಥ್ಯವಿರುವುದು. ಇದರ ಸಲುವಾಗಿ ಪರಮಾತ್ಮನು:—

ವಾದಲ್ಲಾಹ ಹುಲ್ಲಜೀನ ಆ ಮನು ಮಿನ್‌ಕುಂವ ಆಮೆಲುಸ್‌ಸ್ವಾಲೆಹಾ ತೆಲೆಯಸ್ ತಖ್‌ಲಿಫನ್ನಹುಂ ಫಿಲ್ ಅರ್ಧಕಮಸ್ ತಖ್‌ಲಫಲ್ ಲಜೀನ

ಮಿನ್‌ಕಬ್‌ಲೆತುಂ. ವಲೆಯು ವ.ಕ್ಕೆ ನನ್ನ ಲಹುಂದೀನ ಹುನುಲ್ ಲಜೀರ್ತ ಜಾಲ ಹುಂವಲೆಯು ಬದ್ದಲನ್ನುಹುಂ ಮಿನ್‌ಬಾದೆ ಖೌಫೆಹಿಂ, ಅಮನಾ

(ಕು. ೨೪ ನೇ ಆ. ಸಂ. ೭)

ಅರ್ಥ:—ಪರಮಾತ್ಮನು ಹಜರತ್‌ರವರ ಅನುಯಾಯಿಗಳಿಗೆ ವಚನ ಕೊಟ್ಟಿರುತ್ತಾನೆ "ಯಾರು ಭಕ್ತಿಯುಳ್ಳವರಾಗಿ ಸರಿಯಾಗಿ ನಡೆಯುತ್ತಾರೊ ಅಂಥವರನ್ನು ಹಿಂದಿನವರಹಾಗೆ ಗುರುವಿನ ಅಧಿಕಾರವನ್ನು ಕೊಟ್ಟು ಪ್ರಪಂಚದಲ್ಲಿ ಕಳುಹಿಸುವೆವು ಮತ್ತು ಅವರ ಧರ್ಮವನ್ನು ಅವರಿಗೋಸ್ಕರ ಸ್ಥಾಪಿಸುತ್ತೇವೆ. ಮತ್ತು ಅವರಿಗೆ ಶಾಂತಿಯನ್ನುಂಟು ಮಾಡುತ್ತೇವೆ"

## ಇದೇ ವಿಚಾರವಾಗಿ ಹಜರತ್ ಮಹಮ್ಮದರು.

ವಮಾಮಿನ್ ನಬೀಯಿನ್ ಇಲ್ಲಾ |
ಲಹುನಜೀರುನ್ ಮಿನ್ ಉಮ್ಮತಿ ||

(ಕನ್ ಜುಲ್ ಉಮ್ಮಾಲ್)

ಅರ್ಥ:—ಮುಂದೆ ಹಿಂದಿನ ಅವತಾರಿಗಳೆಲ್ಲರು ನನ್ನ ಅನುಯಾಯಿಗಳಾಗಿ ಬರುವರು. ಆದರೆ ಸರ್ವ ಅವತಾರಿಗಳೂ ನನ್ನ ಭಕ್ತರು" ಎಂದು ಹೇಳಿದರು. ಹಜರತ್‌ರ ಈ ವಾಕ್ಯವನ್ನು ಧೃಡೀಕರಿಸಲಿಕ್ಕೆ ಪರಮಾತ್ಮನು ಹಿಂದಿನ ಸರ್ವ ಅವತಾರಿಗಳನ್ನು ಇವರ ಭಕ್ತರಲ್ಲಿಯೇ ಕಳುಹಿಸುತ್ತಾ ಇದ್ದಾನೆ. ಮೌಲಾನರೂಮ್ ಎಂಬ ಮಹಾತ್ಮರು:—ನಾನು ಏಶುವು ಇದ್ದೇನೆ. ಮತ್ತು ಹಜರತ್ ಫಕರುದ್ದೀನ ರಾಜಿ ಎಂಬವರು "ನಾನು ಮೂಸಾ ಇದ್ದೇನೆ" ಎಂದು ಹೇಳಿದರು. ಹಜರತ್ ಮಿರ್‌ಜಾ ಗುಲಾಮೆ ಅಹಮ್ಮದ್‌ರವರು "ನಾನು ಹನ್ನೊಂದನೆ ವಿಷ್ಣು ಅವತಾರ" ವೆಂದು ಹೇಳಿದರು. ಆದುದರಿಂದಲೇ ಶ್ರೀಚನ್ನಬಸವೇಶ್ವರರೂ ಕೂಡ ಹಜರತ್ ಮಹಮ್ಮದರ ಅನುಯಾಯಿಗಳಾಗಿ ಕಾಣಬಂದಿರುತ್ತಾರೆ.

ಇವುಗಳನ್ನು ಧೃಡೀಕರಿಸಲು ರುದ್ರ ಮುನಿಗಳು ತಮ್ಮ ಕಾಲಜ್ಞಾನದಲ್ಲಿ ಈಶ್ವರಾವತಾರವೆ ಮೂಲವೆಂದು ಹೇಳಿದ್ದಾರೆ. ಇದರ ಸಲುವಾಗಿ

ಹಿಂದಿನ ಅವತಾರಿಗಳೆಲ್ಲರು ಇವರ ಭಕ್ತರಲ್ಲಿ ಕಾರಣ ಗುರುಗಳಾಗಿ ಹುಟ್ಟಿದರು. ಹಜರತ್‌ರವರೆ ಸರ್ವ ಅವತಾರಿಗಳ ಸ್ವರೂಪಗಳಿಂದ ಭಿನ್ನ ಭಿನ್ನವಾಗಿ ಬಂದು ಮೂರ್ತಿ ಖಂಡನೆಗಳನ್ನು ಮಾಡಿ ಜಗತ್ತಿನ ದುಃಖವನ್ನು ದೂರ ಮಾಡಿ ಸಂರಕ್ಷಿಸಿರುತ್ತಾರೆ. ಆದುದರಿಂದಲೇ ಇವರಿಗೆ "ಬ್ರಹ್ಮಾಕೃತ ಶಿವಸಹಸ್ರ ನಾಮಸು | ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು" ಎಂಬ ಬಿರುದು ಬಂದಿರುತ್ತದೆ.

---

## ನಾಲ್ಕನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||

ಜಗದ್ಗುರುವು ಸರ್ವ ಖಾಂಡಗಳಲ್ಲಿಯು ಅವತರಿಸಿರುವ ಸರ್ವ ಅವತಾರಿಗಳನ್ನೂ ಮತ್ತು ಅವರು ತೋರಿಸಿರುವ ಸನ್ಮಾರ್ಗ ವಿಧಾನಗಳನ್ನೂ ಒಪ್ಪತಕ್ಕವನಾಗಿರಬೇಕು.

ಈ ಪ್ರಮಾಣದ ತೀರ್ಮಡೆಯು ಬಹು ಕಠಿಣವಾದುದು. ಹಜರತ್ ಮಹಮ್ಮದ್ ಪೈಗೆಂಬರರ ವಿನಃ ಉಳಿದ ಮಹಾತ್ಮರು ಈ ಪರೀಕ್ಷೆಯಲ್ಲಿ ಎಂದಿಗೂ ಉತ್ತೀರ್ಣರಾಗಲಾರರು. ಕಾರಣವೇನಂದರೆ, ಇವರೆಲ್ಲರೂ ಜಗತ್ತಿಗೆ ಒಬ್ಬರಾದ ಜಗದ್ಗುರುಗಳಾಗಿ ಪ್ರಸಿದ್ಧರಾಗಿಲ್ಲ. ಆದರೆ ಈ ಪರಮಪದವಿಯು ನವಖಾಂಡ ಪೃಥ್ವಿಯಲ್ಲಿ ಒಬ್ಬ ಮಹಾಪುರುಷರಿಗೆಮಾತ್ರ ಸಲ್ಲುವುದಾಗಿತ್ತು.

ಇವರಹೊರತಾದ ಮಹನೀಯರು ಇದರಲ್ಲಿ ಕಾಲಿಟ್ಟು ಜಯಿಸುವುದು ಅಸಾಧ್ಯವು. ಅದು ಹೇಗೆಂದರೆ, ಚಂದ್ರನು ಸೂರ್ಯನಿಗೆ ಅಡ್ಡವಾದರೆ ಸೂರ್ಯಗ್ರಹಣವಾಗುತ್ತದೆ. ಭೂಮಿಯು ಚಂದ್ರನಿಗೆ ಅಡ್ಡಲಾದರೆ ಚಂದ್ರಗ್ರಹಣವಾಗುತ್ತದೆ. ಕರಿಯು ಹುಲಿಯನ್ನು ನೋಡಿ ಓಡಿಹೋಗುತ್ತದೆ. ಕ್ರಿಮಿಗಳು ಗುಬ್ಬಿಯನ್ನು ಕಂಡು ಓಡಿಹೋಗುತ್ತದೆ. ಗುಬ್ಬಿಯು ಬೆಕ್ಕನ್ನು ನೋಡಿ ಪಲಾಯನವಾಗುತ್ತದೆ. ಬೆಕ್ಕು ನಾಯಿಗೆ ಹೆದರುತ್ತದೆ. ನಾಯಿಯು

ತೋಳವನ್ನು ಕಂಡು ಓಡುವುದು. ಮಣ್ಣಿನಗೊಂಬೆಗಳು ಕಲ್ಲಿನಿಂದ ನಾಶವಾಗುತ್ತವೆ. ಕಲ್ಲು ಕಬ್ಬಿಣದಿಂದ ಚೂರು ಚೂರಾಗುತ್ತದೆ. ಕಬ್ಬಿಣಕ್ಕೆ ಉಕ್ಕಿನಿಂದ ಪ್ರಳಯವು. ಉಕ್ಕು ಬೆಂಕಿಗೆ ತುತ್ತಾಗಿ ಕರಗುತ್ತದೆ. ಬೆಂಕಿಯು ನೀರಿನಿಂದ ಆರಿಹೋಗುತ್ತದೆ. ನೀರು ವಾಯುವಿನಿಂದ ಬಯಲಾಗುವುದು. ವಾಯುವು ಆಕಾಶದಲ್ಲಿ ಲಯಿಸುವುದು. ಆಕಾಶವು ಸರ್ವಮಯವಾಗಿರುವುದು. ಇದೇರೀತಿಯಾಗಿ ಸಮಸ್ತ ಅವತಾರಿಗಳ ಸ್ಥಿತಿಯಿಂಟು. ಐದು ಸಾವಿರ ವರ್ಷಗಳ ಹಿಂದೆ ಶ್ರೀ ಕೃಷ್ಣನು ಶ್ರೀ ವಿಷ್ಣುವಿನ ಅವತಾರವಾಗಿ ಪ್ರಸನ್ನವಾದನು. ಶ್ರೀ ವಿಷ್ಣುಪ್ರಕಾಶವು ಆತ್ಮದ ಒಂದುಭಾಗವು. ಆದುದರಿಂದ ಇವರು ಧರ್ಮದ ಒಂದು ಭಾಗವನ್ನು ಒಂದು ದೇಶದಲ್ಲಿಮಾತ್ರ ಪರಿಪಾಲನೆಮಾಡಬೇಕಾಗಿತ್ತು. ಇದರ ಸಲುವಾಗಿ ಅವರು ಹೇಳಿರುತ್ತಾರೆ.

" ಶ್ರೇಯಾನ್ಸ್ವಧರ್ಮೋವಿಗುಣಃ ಪರಧರ್ಮಾತ್ಸ್ವನುಷ್ಠಿತಾತ್ |
ಸ್ವಧರ್ಮೇನಿಧನಂಶ್ರೇಯಃ ಪರಧರ್ಮೋಭಯಾವಹಃ ||

ಅರ್ಥ—ಗುಣವಿಲ್ಲದ ತನ್ನ ಕುಲಧರ್ಮವು ಗುಣವುಳ್ಳ ಪರಧರ್ಮಕ್ಕಿಂತಲೂ ಶ್ರೇಷ್ಠವು. ಸ್ವಧರ್ಮದಲ್ಲಿ ಸತ್ತರೂ ಒಳ್ಳೇದು ಪರಧರ್ಮವು ಭಯಂಕರವು.

ಯಾವ ಪ್ರಕಾರ ಬ್ರಹ್ಮಾಂಡದ ಜೀವಜಂತುಗಳೂ ಮತ್ತು ವಸ್ತುಗಳೂ ಒಂದಕ್ಕೊಂದು ಭಯಪಡುತ್ತವೆಯೋ ಅದೇರೀತಿಯಲ್ಲಿ ಕೃತ, ತ್ರೇತ, ದ್ವಾಪರ, ಮತ್ತು ಕಲಿಯುಗದ ಒಂದನೆ ಪಾದದಲ್ಲಿ ಒಂದು ಮತದವರು ಮತ್ತೊಂದು ಮತದವರಿಂದ ಭಯಪಡುತ್ತಿದ್ದರು. ಪ್ರಪಂಚದ ಪಂಚಭೂತಾತ್ಮಕವಾದ ಸಮಸ್ತ ವಸ್ತುಗಳೂ ಜೀವರಾಸಿಗಳೂ ತಮ್ಮ ತಮ್ಮಲ್ಲಿ ಅಭಿಮಾನ ಉಳ್ಳವುಗಳಾಗಿರುವುದರಿಂದ, ಒಂದೊಂದರಲ್ಲಿ ದ್ವೇಷವು ಭಯವೂ ನೆಲೆಗೊಂಡಿರುವವು. ಹೀಗಿಲ್ಲದಿದ್ದರೆ ಒಂದೊಂದು ವರ್ಗದ ಕ್ರಮವು ತಪ್ಪಿ ಕೆಟ್ಟುಹೋಗುತ್ತಿದ್ದವು. ಹಾಗೆಯೇ ಹಿಂದಿನ ಮತಗಳೂ ಕೂಡ ಸಂಕರವೆಂಬ ದೋಷಕ್ಕೆ ಸಿಕ್ಕಿ ನಾಶವಾಗುತ್ತಿದ್ದವು. ಒಂದು ಬೀಜವು ಹೊರಗೆ ಬರಬೇಕಾದರೆ, ವೃಕ್ಷವು, ಕೊಂಬೆಗಳು, ಎಲೆಗಳು, ಪುಷ್ಪಗಳು, ಕಾಯಿಗಳು ಕ್ರಮವಾಗಿ ಹೊರಬೀಳುತ್ತವೆ. ಮತ್ತು ಸಮಸ್ತ ವೃಕ್ಷ

ಭಿನ್ನಸ್ವರೂಪಗಳನ್ನು ಸಂಪೂರ್ಣವಾಗಿ ಹೊಂದಿ ಕಡೆಯಲ್ಲಿ ಬೀಜವು ಹೊರ ಬೀಳುತ್ತದೆ. ಆ ಬೀಜವು ಹೊರಬೀಳುವ ಮೊದಲು ವೃಕ್ಷದ ಭಾಗಗಳನ್ನು ನಾಶಮಾಡಲು ಪ್ರಯತ್ನಪಟ್ಟರೆ, ಬೀಜವು ಹೊರಬೀಳಲಿಕ್ಕೆ ಅಡ್ಡಿಯಾಗಿ ಲಯವಾಗುತ್ತಿದ್ದಿತು. ಇದೇಪ್ರಕಾರ ಆತ್ಮಸ್ಥಿತಿಯೂ ಉಂಟು. ಆತ್ಮವೆಂಬ ಬೀಜವು ಅನಾದಿಕಾಲದಲ್ಲಿ ಬೀಜದ ಪ್ರಕಾರ ಗೋಪ್ಯವಾಗಿದ್ದು ಕಾಲಾಂತರದಿಂದ ಪ್ರತಿಯುಗದಲ್ಲಿಯೂ ಬೆಳೆಯುತ್ತಾ ಬಂದು ಧರ್ಮದ ಪ್ರತಿಯೊಂದುಭಾಗದ ಸಂರಕ್ಷಣೆಯನ್ನೂ ಮಾಡುತ್ತಾ ಬಂದು ಕಡೆಯಲ್ಲಿ ಬೀಜದಂತೆ ಸಂಪೂರ್ಣಾತ್ಮವು ರೂಪವನ್ನು ಧರಿಸಿ ಕಲಿಯುಗದ ಮೊದಲನೆಯ ಪಾದದಲ್ಲಿ ಭೂಮಿಯು ನಾಭಿಸ್ಥಾನದಲ್ಲಿ ದೇದೀಪ್ಯಮಾನವಾಗಿ ಕಂಗೊಳಿಸುತ್ತಾ ಪ್ರಸನ್ನವಾಯಿತು. ಮನುಷ್ಯನ ಸ್ಥೂಲಪ್ರಕೃತಿಯ ಉತ್ಪತ್ತಿಯ ನಂತರ ಅಲ್ಪೋಲಕಲ್ಲೋಲವಾಗಿದ್ದ ಜಂತುವರ್ಗಗಳು ಕ್ರಮವನ್ನು ಹೊಂದಿ ಮನುಷ್ಯಾಧೀನವನ್ನು ಹೊಂದಿ ಶಾಂತಿಯನ್ನು ಹೊಂದಿದವು. ತದ್ರೀತಿಯಲ್ಲಿಯೇ ಪರಮಾತ್ಮಭಾಗಿಗಳಾದ ಅವತಾರಿಗಳಿಗೆ ಎಂದರೆ ಗುರುಗಳಿಗೆ ಮೂಲನಾದ ಮತ್ತು ಸಂಪೂರ್ಣಾತ್ಮಧಾರಿಯಾದ ಜಗದ್ಗುರುವು ತನ್ನ ಆಂತರ್ಯದಿಂದ ಹೊರಗಾಗಿ ಎಲ್ಲಾ ಧರ್ಮಗಳನ್ನೂ ಕ್ರಮವಾಗಿ ನಡೆಯಿಸಿ ಎಲ್ಲಕ್ಕೂ ಅಧಿಕಾರಿಯಾಗಿ ಶಾಂತಿಯನ್ನು ನೆಲಗೊಳಿಸುವವನಾಗಿರುತ್ತಾನೆ. ಈ ಕಾರ್ಯವು ಹಜರತ್ ಮಹಮ್ಮದ್ ಪೈಗಂಬರರ ಭಾಗಕ್ಕೇನೆ ಪರಮಾತ್ಮನಿಂದ ವಹಿಸಲ್ಪಟ್ಟಿದ್ದಿತು. ಪಂಚಭೂತಗಳಿಂದ ಉತ್ಪತ್ತಿಯನ್ನು ಪಡೆದಿರುವ ಸಮಸ್ತ ಚರಾಚರ ವಸ್ತುಗಳು ತಮ್ಮ ಗುಣಾನುಸಾರವಾಗಿ ಸ್ವಾಭಾವಿಕವಾಗಿ ಮನುಷ್ಯನ ಸ್ಥೂಲೋತ್ಪತ್ತಿಯನ್ನೆದುರುನೋಡುತ್ತಿದ್ದವು. ಇವುಗಳ ಸ್ವಭಾವಾನುಸಾರವಾಗಿ ತತ್ಕಾಲದಲ್ಲಿ ಪರಮಾತ್ಮನು ಮನುಷ್ಯನನ್ನು ಪ್ರಪಂಚಕ್ಕೆ ಕಳುಹಿದನು. ಅದೇಪ್ರಕಾರ ಹಿಂದಿನ ಅವತಾರಿಗಳು ಧರ್ಮಾನುಸಾರವಾಗಿ ಜಗದ್ಗುರುವಿನ ದಾರಿಯನ್ನು ನೋಡುತ್ತಲೇ ಬಂದಿರುತ್ತಾರೆ. ಇದೇ ವಿಷಯವನ್ನು ಸಾಮವೇದವು ಮತ್ತು ಇಂಜೀಲ ಮುಂತಾದ ಎಲ್ಲಾ ದೇವೋಕ್ತಗ್ರಂಥಗಳೂ ಉಚ್ಚರಿಸುತ್ತವೆ. ಮೂಸಾ ಪೈಗಂಬರರು "ನನ್ನಹಾಗೆಯೇ ಧರ್ಮಶಾಸ್ತ್ರವನ್ನು ತೆಗೆದುಕೊಂಡುಬರುತ್ತಾನೆ" ಎಂದೂ ಮತ್ತು ದಾವೂದ್ ಪೈಗಂಬರರು "ಯುದ್ಧಮಾಡಿ ಧರ್ಮವನ್ನು ಬೆಳೆಸುವ ಮಹಾತ್ಮನು ಬರು

ತ್ತಾನೆ" ಎಂದೂ ಮತ್ತು ಏಸುಕ್ರಿಸ್ತರು "ವನದ ಧಣಿಯು ಸ್ವತಃ ಬರುತ್ತಾನೆ" ಎಂದೂ ಹೇಳಿದ್ದಾರೆ. ಇವೇ ಪ್ರಮಾಣಗಳು ಕುರ್ಆನಿಂದಲೇ ಕಂಡುಬರುತ್ತವೆ.

ವ ಇಜ ಅಖಜಲ್ಲಾ ಹು ಮಿಸಾಖನ್ ನಬೀಯಾನ
ಲಮಾಆತೈತಕುಮ ಮಿನ್ ಕಿತಾಬಿನ್ ವಹಿಕಮಾ
ಸುಮ್ಮಾಜಾಕುಮ್ ರಸೂಲುಂಮುಸದ್ದೆಕುನ್ ಲಿಮಾ
ಮಾಕುಂ ಲತೊಮಿನುನ್ನಬೆಹಿ ವಲತನ್ ಸುರುನ್ನಹು.

(ಕು. ೩ನೇ ಅ. ಸಂ. ೯)

ಅರ್ಥ:—ಪರಮಾತ್ಮನು ಸರ್ವ ಅವತಾರಿಕ ಪುರುಷರಿಂದ ವಾಗ್ದಾನ ಪಡೆದಿರುತ್ತಾನೆ ಮತ್ತು ಪ್ರಕಟಮಾಡಿರುತ್ತಾನೆ. "ನಾನು ಒಬ್ಬ ಜಗದ್ಗುರುಣಾಂ ಗುರುವನ್ನು ಮೂಲಪುರುಷನನ್ನಾಗಿ ಉತ್ಪತ್ತಿಮಾಡುತ್ತೇನೆ. ಅವನಿಗೆ ನಿಮ್ಮ ಪ್ರಕಾರ ಜ್ಞಾನವನ್ನೂ ಮತ್ತು ಸರ್ವ ಓಂಕಾರೋಕ್ತಗ್ರಂಥಗಳ ಸಾರವನ್ನುಳ್ಳ ಗ್ರಂಥವನ್ನೂ ಕೊಡುತ್ತೇನೆ." ಮನುಷ್ಯನಿಗೆ ಸರ್ವ ಜೀವರಾಶಿಗಳು ಭಾಗಿಗಳಾಗಿದ್ದೂಕೂಡ ಮನುಷ್ಯನು ಅವುಗಳಂತೆ ಕಣ್ಣು, ಕಿವಿ, ಕಾಲು ಮುಂತಾದ ಅವಯವಗಳಿದ್ದೂ ಪ್ರಕೃತಿಯಲ್ಲಿ ಸರ್ವವ್ಯಾಪಿಯಾಗಿರುವಂತೆ, ಹಜರತ್ ಮಹಮ್ಮದರು ಸರ್ವ ಅವತಾರಿಗಳ ಆತ್ಮವ್ಯಾಪಿಗಳಾಗಿಯೂ ಮತ್ತು ಇವರ ದೇವೋಕ್ತಗ್ರಂಥವಾದ ಕುರ್ಆ ಸರ್ವ ಗ್ರಂಥಗಳ ಸಾರಾಂಶವನ್ನೊಳಗೊಂಡೂ ಇರುತ್ತದೆ. ಈ ವಿಷಯವು ಮುಂದಿನ ಪ್ರಮಾಣಗಳಲ್ಲಿ ವಿಶದವಾಗಿ ಬರುವುದು. ಈ ವಿಷಯವನ್ನು ಕಂಡು ಮಹತ್ವದಂತೆ ಪ್ರಜ್ವಲಿಸುವ ಈ ಗ್ರಂಥವನ್ನು ಅನೇಕರು ನಂಬಿ ಇದರ ಪ್ರಚಾರಕ್ಕಾಗಿ ಸಹಾಯಮಾಡುತ್ತಾ ಇದ್ದಾರೆ. ಪ್ರಪಂಚದಲ್ಲೆಲ್ಲಾ ಹಜರತ್ ಮಹಮ್ಮದರ ಅನುಯಾಯಿಗಳು ಹರಡುವರು ಎಂದು ಪರಮಾತ್ಮನ ವಾಗ್ದಾನವು ಉಂಟು.

ಫಮನ್ ತವಲ್ಲಾ ಬಾದ ಜಾಲಿಕ ಫವುಲಾಯಕ.
ಹುಮುಲ್ ಫಾಸೇಕೂನ. (ಕು. ೩. ಅ. ೯ ಸಂ.)

ಅರ್ಥ:—ಯಾವನು ಈಮಾತಿಗೆ ಒಪ್ಪುವುದಿಲ್ಲವೋ ಅವನು ಮೂರ್ಖನು. ಪುನಃ ಪರಮಾತ್ಮನು ಹೇಳುತ್ತಾನೆ:—

ಅಫ ಗ್ಯೆರೆ ದೀನಿಲ್ಲಾಹೆ ಯಬಗೂನವಲಹು ಅಸ್‌ಲಮು ಮನ್ ಫಿಸ್ಸ ಮಾವಾತೆ ವಲ್ ಆರ್ದೆತವ ಅನ್ ವಕರಹನ್‌ವ ಇಲೇಹ ತುರಜವೂನ.

ಅರ್ಥ:—ಇಂಥಾ ಸರ್ವವ್ಯಾಪಕ ಧರ್ಮವನ್ನು ಬಿಟ್ಟು ಓಡುತ್ತೀಯೆ. ಈ ಧರ್ಮವು ಎಂಥಾದ್ದು? ಯಾವಪ್ರಕಾರ ಪರಮಾತ್ಮನು ಸರ್ವವ್ಯಾಪಿಯಾಗಿದ್ದಾನೊ ಅದೇಪ್ರಕಾರ ಇಸ್ಲಾಮು ಧರ್ಮವುಂಟು. ಜಗತ್ತಿನ ಎಲ್ಲಾ ಧರ್ಮಗಳೂ ಈ ಒಂದು ಧರ್ಮದಲ್ಲಿ ಕಂಡುಬರುತ್ತವೆ. ಈ ವಿಷಯವುಕೂಡ ಮುಂದಿನ ಪ್ರಮಾಣಗಳಲ್ಲಿ ಬರುವುದು." ಮನುಷ್ಯನು ಸ್ಥೂಲರೂಪದಲ್ಲಿ ಜಗತ್ತಿನ ಎಲ್ಲಾ ಭಾಗಗಳನ್ನೂ ತನ್ನ ಕೈವಶ ಮಾಡಿಕೊಳ್ಳುತ್ತಾ ಬಂದು ಜಗತ್ತಿನ ಸರ್ವ ಭಾಗಗಳನ್ನೂ ವಶಪಡಿಸಿಕೊಳ್ಳುತ್ತಾನೋ ಅದೇರೀತಿ ಈ ಧರ್ಮವನ್ನು ಈಗ ಬಿಟ್ಟು ಓಡುವವರು ಒಂದು ದಿವಸ ಇದರಲ್ಲಿಯೇ ಸಮಾವೇಶವನ್ನು ಮಾಡಲಾದೀತು. ಸರ್ವವ್ಯಾಪಿಯಾದ ಪರಮಾತ್ಮನಲ್ಲಿ ಎಲ್ಲರೂ ಐಕ್ಯವಾಗುತ್ತಾರೆ. ಅವರಂತೆ ದೈವನುತವಾದ ಇಸ್ಲಾಂ ಮತದಲ್ಲಿ ಎಲ್ಲಾ ಕುಲದವರು ಸೇರಬೇಕಾಗಿರುವುದು. ಇದರಿಂದಲೇ ಪ್ರಪಂಚದಲ್ಲಿ ಶಾಂತಿಯು ಉತ್ಪನ್ನವಾಗುವುದು. ಮತ್ತು ಪರಮಾತ್ಮನು ಹೇಳುತ್ತಾನೆ:—

ಕುಲ್ ಆಮನ್ನಾಬಿಲ್ಲಾಹೆ ವಮಾ ವುಂಜಿಲಾ,
ಅಲೈಕಾವಮಾವುಂಜಿಲಾ ಅಲಾ ಇಬ್ರಾಹೀಮ,
ವ ಇಸ್ಮಾಯಿಲ ವ ಇಸ್‌ಹಾಕವ ಯಾಕೂಬವಲ್,
ಅಸ್‌ಬಾತೆವಮಾವೂ ತಿಯಾಮೂಸಾವ ಈಸಾವಮಾಉತಿಯನ್,
ನಬೀಯೂನ ಮಿರಬ್ಬೆ ಹಿಮ್‌ಲಾನು ಫರ್‌ರಿತೊಬೈನ,
ಅಹದಿಮ್ ಮಿನ್‌ಹುಂ ವನಹನೊಲಹು ಮುಸ್‌ಲಿಮೂನ.

(ಕುರ ೩. ಅ. ಸಂ. ೯)

ಅರ್ಥ:—ಪ್ರಸಿದ್ಧಮಾಡು ! ನಾನು ಒಬ್ಬನಾದ ಪರಮಾತ್ಮನ ಪೂಜೆಯನ್ನು ಮಾಡುವವನಿದ್ದೇನೆ. ಸರ್ವಗ್ರಂಥವ್ಯಾಪಕವಾದ ದೇವೋಕ್ತ

ಗ್ರಂಥವು ನನಗೆ ಕೊಡಲ್ಪಟ್ಟಿರುತ್ತದೆ. ಇದರಲ್ಲಿ ನನ್ನ ನಂಬಿಕೆಯು. ಇದರ ಭಾಗಗಳೇ ಹಿಂದಿನ ಕಾಲಗಳಲ್ಲಿ ಪ್ರಕಟವಾಗಿದ್ದವು. ಅವುಗಳೆಲ್ಲವೂ ಸೇರಿ ಈ ಗ್ರಂಥವಾಗಿರುತ್ತದೆ ಇಬ್ರಾಹೀಮನಮೇಲೆ ಪ್ರಕಟವಾದದ್ದಾಗಲಿ, ಇಸ್ಮಾಯಿಲನಿಗೆ ಪ್ರಕಟವಾದದ್ದಾಗಲಿ, ಯಾಕೂಬನಮೇಲೆ ಪ್ರಕಟವಾದ ದ್ದಾಗಲಿ, ಹೊಸ ಒಡಂಬಡಿಕೆಯಾಗಲಿ ಮತ್ತು ಹಳೇ ಒಡಂಬಡಿಕೆಯಾಗಲಿ ಮತ್ತು ಜಗತ್ತಿನ ಸರ್ವಮತ ಗ್ರಂಥಗಳಾಗಲಿ, ಇವುಗಳೆಲ್ಲವನ್ನೂ ಸಂಪೂ ರ್ಣವಾಗಿ ನಂಬುತ್ತೇನೆ. ಇವುಗಳಲ್ಲಿ ಭೇದವನ್ನೆಣಿಸುವುದಿಲ್ಲಾ." ಇದು ಎಂಥಾ ನಿರಭಿಮಾನವಾದ ಪ್ರಮಾಣವೆಂಬುದನ್ನು ಜ್ಞಾನಿಗಳಾದವರು ತಿಳಿ ಯುವರು. ಇದರಿಂದಲೇ ಜಗತ್ತಿನಲ್ಲಿ ಶಾಂತಿಯು ನೆಲೆಗೊಳ್ಳುವದು. ಇದೇ ಜಗದ್ಗುರುವಿನ ಕರ್ತವ್ಯವು. ಇವರೇ ಸರ್ವ ಧರ್ಮಪಾಲಕರು. ಇದರ ಸಲುವಾಗಿ ಪರಮಾತ್ಮನು ತಿಳಿಸುತ್ತಾನೆ.—

"ವ ಮ್ಯೆಂ ಯಬ್‌ತಗೆ ಗೈರಲ್ ಇಸ್ಲಾಮೆ ದೀನನ್,
ಫಲ್ಯೆಂಯುಕಬೆಲಾಮಿನಹು ವ ಹುವ,
ಫಿಲ್ ಆಖಿರತೆ ಮಿನಲ್ ಖಾಸೆರೀನ್". (ಕು. ೩. ಆ|| ಸಂ. ೯)

ಅರ್ಥ:—ಕಲಿಯುಗದ ಪ್ರಥಮಪಾದದಲ್ಲಿಯೂ ಕೃತ, ತ್ರೇತ, ದ್ವಾಪರದಲ್ಲಿ ಬಂದಿರತಕ್ಕ ಸರ್ವ ಧರ್ಮಗಳು ಈ ಧರ್ಮದಲ್ಲಿಯೂ ಕೂಡಿ ಬಂದಾಗಿರುವುದರಿಂದ ಇದನ್ನು ಬಿಟ್ಟು ನಡೆದವನು ನಷ್ಟಹೊಂದಿದವರಲ್ಲಿ ಸೇರುವನು.

ಗಿಡದಲ್ಲಿ ಫಲವನ್ನು ಪಡೆಯಬೇಕಾದರೆ, ಗಿಡವನ್ನು ಬಿಟ್ಟು, ಎಂದರೆ ಮೂಲವಾದ ಬೀಜವನ್ನು ಬಿಟ್ಟು, ಭಿನ್ನಭಿನ್ನವಾಗಿ ಎಲೆಯನ್ನೂ ಕೊಂಬೆ ಯನ್ನೂ ಹೂವನ್ನೂ ತೆಗೆದುಕೊಂಡರೆ ಫಲವು ದೊರಿಯಲಾರದು. ಬೀಜವನ್ನು ತೆಗೆದುಕೊಂಡವರಿಗೆನಾತ್ರ ಫಲ ದೊರಿಯುವದು. ಇದರಂತೆಯೇ ಬೀಜ ಪ್ರಾಯರಾದ ಜಗದ್ಗುರುವನ್ನೂ ಮತ್ತು ಅವರ ಅನಾದಿಮತವನ್ನೂ ಬಿಟ್ಟ ವರು ಲಯಹೊಂದುವರು. ಪರಮಾತ್ಮನು ಜಗದ್ಗುರುಗಳಿಗೆ ಸರ್ವ ಅವತಾರಿ ಗಳ ಧರ್ಮವಾರ್ಗಗಳಿಗೂ ಸರಿಯಾಗಿ ನಡೆಯಬೇಕೆಂಬ ಆಜ್ಞೆಯನ್ನು ಸೂಚಿಸಿರುವನು:—

ವ ವಹ ಬನಾಲಹು (ಇಬ್ರಾಹೀವ) ಇಸ್‌ಹಾರಕ
ವ ಯಾಕೂಬ ಕುಲ್ಲನ್‌ಹ ದೈನವನೂಹನ್ ಹದೈನ
ವಿನ್‌ಕಬ್ಲೋವ ಮಿನ್‌ಜುರ್ರಿಯತೇಹಿ ದಾವೂದ
ವಸುಲೈಮಾನವ ಅಯ್ಯು ಬವ ಯೂಸೂಫ್ ವಮೂಸಾ
ವಹಾರೂನ, ವಕಜಾಲಿಕನಜ್ ಜಿಯಲ್ ಮೊಹ ಸೆನೀನ
ವ ಜಕ್‌ರಿಯ್ಯಾ ವಯಹ್ ಯಾವ ಇಸಾವ ಇಲ್‌ಯಾಸ
ಕ್‌ಲ್ಲುನ್ ಮಿನಸ್‌ಸ್ವಾಲೆಹೀನ ವ ಇಸ್‌ಮಾಯಿಲ ವಲ್
ಯಸಾವ, ಯೂನೂಸ, ವಲೂತ, ವ ಕ್‌ಲ್ಲನ್ ಫಜ್ಜಲ್
ನಾ ಅಲಲ್ ಆಲ ಮಾನ, ವಮಿನ್ ಆಬಾಯೇಹಿಮ್)
ವಜುರ್ರಿ ಯಾತೆ ಹಿಮ್ ವ ಇಖವಾನೆ ಹಿಮ್ ವಜತ
ಬೈನಾಹುಂ ವಹದೈನಾ ಹುಂ ಇಲಾಸಿರಾತಿ ಮ್ಮುಸ್‌ತ
ಕೀಮ, ಜಾಲಿಕಾಹು ದಲ್ಲಹು ಯಹದಿಬೆಹಿ ಮೈಂಯ
ಷಾಮಿನ್ ಇಬಾದೆಹಿವಲೌ ಅಷರಕು ಲಕಬಿತ
ಅನ್ ಹುಂ ಮಾಕಾನು ಯಾಮು ಲೂನ ವ್ಲಾಯಕಲ್
ಲಜೀನ ಆತೈನಾ ಹುಮುಲ್ ಕಿತಾಬವಲ್‌ಹುಕ್‌ಮ
ವನ್ನ ನುಬುವ್ವತಾ ಫಯಿಕ ಯಕಫುರ್‌ಬೆಹಾಹಾ ವುಲಾಯೆ
ಫತದ್ ವಕ್ಕಲ್ ನಾ, ಬೆಹಾತ್ಮಾಮನ್ ಲೈಸುಬೆಹಾಬೆಕಾ
ಪರೀನ, ಉಲಾಯಕಲ್ ಲಜೀನಹದಲ್ಲಾಹು ಫಬೆ ಹುದಾಹುಂ
ಮೆಕ್‌ತದೆ. (ಕು. ೬ ಅ. ೧೦. ಸಂ.)

ಅರ್ಥ:—ಇಬ್ರಾಹೀಮನಿಗೆ ನಾವು (ಪರಮಾತ್ಮ) ಇಸಹಾಕ್, ಯಾಕೂಬ್ ಎಂಬ ಎರಡು ಮಕ್ಕಳನ್ನು ಕೊಟ್ಟೆವು ಮತ್ತು ಅವರಿಗೆ ಸರಿಯಾದ ಮಾರ್ಗವನ್ನು ತೋರಿಸಿದೆವು. ಇಬ್ರಾಹಿಮನಿಗಿಂತ ಮುಂಚೆ ನಾವು ನೂಹ್‌ವಿಗೆ ಸನ್ಮಾರ್ಗವನ್ನು ತೋರಿಸಿದ್ದೇವೆ. ಇವರ ವಂಶದಲ್ಲಿ ದಾವೂದರು ಹುಟ್ಟಿದರು. ನಂತರ ಸುಲೈಮಾನ, ಅಯ್ಯೂಬ, ಯೂಸೂಫ್, ಮೂಸ, ಹಾರೂನ, ಇವರೆಲ್ಲರೂ ಅವತಾರಿಗಳಿದ್ದರು. ಯಾವಾಗಲೂ ಪರೋಪಕಾರ ಮಾಡುವವರಿಗೆ ಈ ಪದವಿಗಳನ್ನು ಕೊಡುತ್ತೇವೆ. ಮತ್ತು ಜಕರಿಯ್ಯ, ಯಹಿಯ, ಈಸಾ ಇಲ್‌ಯಾಸ, ಇವರೆಲ್ಲರೂ ಮಹಾತ್ಮರಾದರು. ಮತ್ತು ಇಸ್‌ಮಾಯಿಲಾ, ಇಲ್

ಯಾಸ ಮತ್ತು ಯೂನುಸ್, ಲೂತ್ ಮುಂತಾದುವರೆಲ್ಲರನ್ನೂ ಜಗತ್ತಿನಲ್ಲಿ ಶ್ರೇಷ್ಠರನ್ನಾಗಿ ಮಾಡಿದೆವು. ಇವರ ತಂದೆ ತಾಯಿಗಳಿಗೂ, ಮಕ್ಕಳಿಗೂ ನಾವು ಪ್ರತ್ಯೇಕವಾಗಿ ಆರಿಸಿಕೊಂಡಿರುತ್ತೇವೆ. ಮತ್ತು ಇವರಿಗೆ ಒಳ್ಳೇದಾರಿ ಯನ್ನು ತೋರಿಸಿದ್ದೇವೆ. ಇದೇಪ್ರಕಾರ ತನ್ನ ಭಕ್ತರಲ್ಲಿ ಬೇಕಾದವರಿಗೆ ಓಂಕಾರದಿಂದ ಪವಿತ್ರಪಡಿಸಿ ಬೋಧಿಸುತ್ತಾನೆ. ಇವರು ಮೂರ್ತಿ ಪೂಜಕ ರಾಗಿದ್ದರೆ ಇವರ ಕರ್ಮಫಲ ಸಫಲವಾಗುತ್ತಿರಲಿಲ್ಲ. ಇವರಿಗೆ ಗ್ರಂಥಗಳನ್ನು, ಜ್ಞಾನವನ್ನು ಮತ್ತು ಪ್ರವಾದಿತನವನ್ನು ಕೊಟ್ಟಿರುತ್ತೇವೆ. ಇವರು ಇದಕ್ಕೆ ವಿರೋಧವಾಗಿ ನಡೆದಿದ್ದರೆ, ನಾವು ಮತ್ತೊಬ್ಬರಮೇಲೆ ದಯೆದೋರಿ ಈ ಕೆಲ ಸಕ್ಕೆ ನೇಮಿಸುತ್ತಿದ್ದೆವು. ಇವರೆಲ್ಲರಿಗೂ ಪರಮಾತ್ಮನು " ಸನ್ಮಾರ್ಗವನ್ನು " ಕೊಟ್ಟಿರುತ್ತಾನೆ. ನೀವು ಅವರ ಸನ್ಮಾರ್ಗಕ್ಕೆ ಸರಿಯಾಗಿ ನಡೆಯಿರಿ. ಇವರಲ್ಲಿ ಪರಮಾತ್ಮನು ಉದಾಹರಣೆಗಾಗಿ ಕೆಲವು ಜನ ಪ್ರವಾದಿಗಳ ಹೆಸರು ಗಳನ್ನು ತಿಳಿಸಿ ಹಜರತ್ ಮಹಮ್ಮದ್ ಪೈಗಂಬರರಿಗೆ ಆಜ್ಞಾಪಿಸಿರುತ್ತಾನೆ.

ಆದರೆ ಈ ರೀತಿಯಾದ ಸರ್ವ ಮತಾನುಕೂಲವಾದ ನಂಬಿಕೆಯನ್ನು ಹಜರತ್ ಮಹಮ್ಮದರ ಹೊರತು ಮತ್ತಾವ ಅವತಾರಿಗಳೂ ಅವಲಂಬಿಸಿಲ್ಲ. ಇದು ಅವರವರ ಗ್ರಂಥಗಳಿಂದಲೇ ತಿಳಿಯಬಂದಿರುತ್ತದೆ. ಇಂಥಾ ಭಾರವು "ಬ್ರಹ್ಮಾಕೃತ ಶಿವಸಹಸ್ರನಾಮ ಸು | ಮೃತ್ಯುಂಜಯ ಸೂಕ್ಷ್ಮತನುರ್ಜಗ ದ್ವ್ಯಾಪಿ ಜಗದ್ಗುರು ||" ಎಂಬ ಬಿರುದಾಂಕಿತರಾದ ಹಜರತ್ ಮಹಮ್ಮದ್ ಪೈಗಂಬರರ ಮೇಲೆ ಇಡಲ್ಪಟ್ಟಿತ್ತು.

## ಐದನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ||

ಈಶ್ವರಪ್ರಸನ್ನನಾದ ಜಗದ್ಗುರುವು ಸರ್ವಮತ ಗ್ರಂಥಗಳನ್ನೂ ನಂಬಿ ಅವುಗಳಲ್ಲಿ ವ್ಯತ್ಯಾಸವನ್ನು ಮಾಡದೆ, ಅವುಗಳೆಲ್ಲಕ್ಕೂ ಸರಿಯಾಗಿನಡೆದು ಜಗತ್ತಿನ ಈರೀತಿಯಾದ ದುಃಖವನ್ನು ದೂರಮಾಡಬೇಕು.

ಈ ಪ್ರಮಾಣದ ಸಾಧನೆಯುಕೂಡ ಪರಮಾತ್ಮಸ್ವರೂಪಿಗಳಾದ ಹಜರತ್ ಮುಹಮ್ಮದ್ ಪೈಗಂಬರರ ಪಾಲಿಗೆ ಸೇರುವದಾಗಿತ್ತು. ಆದಪ್ರಯುಕ್ತ ದೈವವು ಸರ್ವಮತ ಗ್ರಂಥಗಳ ಸಾರಾಂಶವನ್ನೂ ಬೀಜಪ್ರಾಯವಾಗಿ ಇವರ ಕೈಯ್ಯಲ್ಲಿ ಕೊಟ್ಟು ಕಳುಹಿಸಿದನು. ಬೀಜಸನಾತನವಾದ ಈ ದೇವೋಕ್ತ ಗ್ರಂಥವು ಕಲಿಯುಗದ ಪ್ರಥಮಪಾದದಲ್ಲಿ ಪ್ರಕಟವಾಗಿ ನೂರಾ ಒಂದು ಕುಲಗಳ ದುರಭಿಮಾನವನ್ನು ತೆಗೆದುಹಾಕಿ ಒಂದಾದ ದೈವಮತವನ್ನು ಬೋಧಿಸುವ ಸುಬೋಧನೆಗಳನ್ನು ತಿಳಿಸುತ್ತದೆ. ಇದರ ಸಲುವಾಗಿಯೇ ಪರಮಾತ್ಮನು ಜಗದ್ಗುರುಗಳಿಗೆ ಆಜ್ಞಾಪಿಸಿರುತ್ತಾನೆ :—

ವ ಅಂಜಲ್‌ನಾ ಇಲೈಕಲ್ ಕಿ ತಾಬಬಿಲ್
ಹಕ್ಕೆಮುಸದ್ದೆ ಕಲ್‌ಲೆಮಾಬೈನ ಯದೈಹೆ
ಮಿನಲ್ ಕಿತಾಬ ವ ಮೊಹೈಮೆನನ್ ಅಲೈಹೆ
ಫಹ್‌ಕುಮ್ ಬೈನಹುಂಬೆಮಾ ಅಂಜಲಲಾಹೊ
ವಲಾತತ್‌ಬೆ ಅಹವಾಹುಂ ಅಮ್ಮಾಜಾತ
ವಿ.ನಲ್‌ಹಕ್ಕೆ ಲೆಕುಲ್ಲಿನ್ ಜಾಲ್‌ನಾ
ಮಿನ್‌ಕುಮ್ ಶ್ಷಿರಅತಂವ, ವಮಿನ್ ಹಾಜಾ
ವತಾಷಾ ಅಲ್ಲಾಹುಲಜಾಲಕಂ ವುಮ್ಮತಂ ವವಾಹೆದ.

(ಕು. ಶ ಅ. ಸ. ೭.)

ಅರ್ಥ:—ಪರಮಾತ್ಮನು ಹೇಳುತ್ತಾನೆ—'ನಾವು ನಿಮಗೋಸ್ಕರವಾಗಿ ಒಂದು ಸ್ಥಿರವಾದ ಗ್ರಂಥವನ್ನು ಕಳುಹಿಸಿರುತ್ತೇವೆ. ಇದು ಉಳಿದ ಗ್ರಂಥಗಳ ಸತ್ಯವನ್ನು ಧೃಢೀಕರಿಸುತ್ತದೆ. ಮತ್ತು ಅವುಗಳನ್ನು ಪಾಲಿಸುತ್ತವೆ. ನೀನು ಈ ದೇವೋಕ್ತವಾದ ಗ್ರಂಥದ ಪ್ರಕಾರವೇ ಆಜ್ಞಾಪಿಸುತ್ತಿರು. ಸತ್ಯ ಬಂದಿದೆ ಅವರ (ಜನಗಳ) ಇಚ್ಛೆಯಪ್ರಕಾರ ನಡಿಯಬೇಡ. ನಾವು ಪ್ರಪಂಚದಲ್ಲಿ ವೇಳೆವೇಳೆಗೆ ಅಯಾಯ ಸ್ಥಳದಲ್ಲಿ ಧರ್ಮಶಾಸ್ತ್ರಗಳನ್ನು ಕಳುಹಿಸಿದ್ದೇವೆ. ಪರಮಾತ್ಮನನು ಇಚ್ಛೈಸಿದರೆ ಎಲ್ಲಾ ಕುಲಗಳನ್ನೂ ಒಂದು ಮಾಡ್ಯಾನು.'

ಈ ಮಾತುಗಳಿಂದ ಎಲ್ಲಾ ಮತಗಳಲ್ಲಿಯೂ ಪರಮಾತ್ಮನು ವೇಳೆವೇಳೆಗೆ ಗ್ರಂಥಗಳನ್ನು ಕಳುಹಿಸಿರುತ್ತಾನೆ. ಇದರ ಆಧಾರಕ್ಕೆ ಪರಮಾತ್ಮನು ಸಾರುತ್ತಾನೆ.—

ತಲ್ಲಾಹೆ ಲಕದ ಆರ್‌ಸಲ್ ನಾ ಇಲಾ
ವು ಮಮಿಂಮಿನ್‌ಕಬಲೆಕ ಫಜ್ಜೈ
ಯನಾಲಹು ಮುಸ್‌ಷ್ಯೈತಾನೊ ಆ ಮಾಲಹ:ಂ.

(ಕು. ೧೬ ಆ. ೮ ಸಂ.)

ಅರ್ಥ:—ನನ್ನ ತತ್ವದಾಣೆಯಾಗಿ, ಓ! ಪ್ರವಾದಿಯೆ, ನಾನು ನಿನಗಿಂತ ಮುಂಚೆ ಬಂದ ಅವತಾರಿಗಳ ಮೇಲೆ ಪವಿತ್ರ ಗ್ರಂಥಗಳನ್ನು ಪ್ರಕಟಿಸಿ ಮಾಡಿದ್ದೇನೆ. ಆದರೆ ವಿಧಿದೂತನು ಅವರ ಕೆಟ್ಟ ಕರ್ತವ್ಯಗಳನ್ನೇ ಅವರಿಗೆ ಸುಂದರ ರೂಪದಲ್ಲಿ ತೋರಿ ಅವರ ಸನ್ಮಾರ್ಗವನ್ನು ತಪ್ಪಿಸಿಬಿಟ್ಟನು.

ಯಾವಪ್ರಕಾರ ಹಜರತ್‌ರು ಸರ್ವವ್ಯಾಪಿಗಳಾಗಿ ಜಗದ್ಗುರುಗಳ ರೂಪದಲ್ಲಿರುತ್ತಾರೋ ಅದೇರೀತಿಯಲ್ಲಿ ಅವರ ಗ್ರಂಥವಾದ ಕುರಾನ್ ಸರ್ವ ಗ್ರಂಥ ವ್ಯಾಪಕವಾಗಿದೆ ಎಂಬದನ್ನು ಪರಮಾತ್ಮನು ಹೇಳುತ್ತಾನೆ:—

ವಲ್ಲಾಹು ಅಂಜಲಮಿನಸ್ ಸಮಾಯೆ,
ಮಾ ಅನ್‌ಫ ಆಹಯಾಬೆ ಹಿಲ್ ಆರ್ದ,
ಭಾ ಧಾ ಮೌತೆಹಾ ಇನ್ನಫಿ ಜಾಲೆಕಾಲ ಆ
ಯಾತಿಲ್ ಲೇಕೌಮಿಂಯಸ್‌ಮೆವೂನ. (ಕೂ. ೧೬, ಆ. ೮ ಸಂ.)

ಅರ್ಥ :—ಪರಮಾತ್ಮನು ಆಕಾಶದಿಂದ ಮಳೆಯನ್ನು ಸುರಿಸಿ ಭೂಮಿಯನ್ನು ಸಜೀವಮಾಡುತ್ತಾನೆ. ಮೊದಲು ಆ ನೀರು ಸಮುದ್ರದಿಂದ ಮೇಲಕ್ಕೇನಿ, ಮೋಡವಾಗಿ, ಪುನಃ ಮಳೆಯಾಗಿಬಿದ್ದು ನದಿಯರೂಪದಲ್ಲಿ ಪುನಃ ಸಮುದ್ರವನ್ನು ಸೇರುವದು.

ತದ್‌ರೀತಿಯಲ್ಲಿಯೆ ಜಗದ್ಗುರುವಿನ ಗ್ರಂಥವು ಹಿಂದಿನ ಎಲ್ಲಾ ಧರ್ಮ ಗ್ರಂಥಗಳ ಮೂಲಸ್ಥಾನವಾಗಿ ಕಡೆಯಲ್ಲಿ ಸರ್ವವನ್ನೊಳಗೊಂಡು ಕುರಾನಿನ ರೂಪದಲ್ಲಿ ಕಾಣಬರುತ್ತದೆ. ಇದಕ್ಕೋಸುಗ ಮತ್ತೊಂದು ಪ್ರಮಾಣವುಂಟು—

ವ ಇನ್ನಾಲತುಂ ಫಿಲ್ ಅನ್‌ಅಮೆಲ ಇಬ್‌ರಾ
ಸುಸ್‌ಕೀಕುಂ ಮಿಮ್ಮಾಫಿಬಾತೂನೆಹಿವಿನ್ ಬ್ಯೈಸ ಫರ್
ಖಿಂವವದ ಮಿನ್ ಲಬ್ ನನ್‌ಖಾಲಿಸನ್ ಸಾ
ಯ ಗೆನ್ ಲಿಷ್ಷಾರೆಬೀನ.

ಅರ್ಥ:—ಜೀವರಾಶಿಗಳಲ್ಲಿಯೂ ಒಂದು ತತ್ವವಿಚಾರವಿದೆ. ಬೇರೆಬೇರೆ ಪ್ರಾಣಿಗಳು ವಿಧವಿಧವಾದ ವನಸ್ಪತಿಗಳ ಸೇವನೆಯಿಂದ ಹಾಲನ್ನು ಕೊಡುತ್ತವೆ. ಎಲ್ಲವುಗಳ ಹಾಲಿನಬಣ್ಣವೂ ಬಿಳಿಯದಾಗಿರುತ್ತದೆ. ಆದರೆ ಪ್ರಕೃತಿಯು ಬೇರೆಬೇರೆಯಾಗಿರುತ್ತದೆ. ಮನುಷ್ಯನ ಹಾಲಾದರೂ ಬಿಳಿಯದಾಗಿರುತ್ತದೆ, ಆದರೂ ಅದರಲ್ಲಿ ಸರ್ವ ಜೀವರಾಶಿಗಳ ಹಾಲಿನ ಪ್ರಕೃತಿಯು ಉಂಟಾಗಿರುತ್ತದೆ. ಇದೇರೀತಿಯಲ್ಲಿ ಜಗದ್ಗುರುವಿನ ಗ್ರಂಥವು ಸರ್ವ ಗ್ರಂಥಗಳಲ್ಲಿಯೂ ಕಂಡುಬಂದು ಪುನಃ ಸರ್ವಗ್ರಂಥಗಳನ್ನೂ ಒಳಗೊಂಡು ಸಮಸ್ತ ಬೋಧೆಗಳನ್ನೂ ಒಳಪಡಿಸಿಕೊಂಡಿರುತ್ತದೆ. ಮನುಷ್ಯನು ಹೊಸದಾದ ಬೇರೆ ಪ್ರಾಣಿಯಲ್ಲದೆ ಸರ್ವಮಯವಾದ ಬೀಜಪ್ರಾಣಿಯಾಗಿರುವಂತೆ ಕುರ್‌ಆ ಸರ್ವಶಾಸ್ತ್ರಮಯವಾದ ಬೀಜಗ್ರಂಥವಾಗಿರುತ್ತದೆ. ಈ ಜಗತ್ತಿನ ಸೃಷ್ಟಿಯನಂತರ ಸರ್ವಮಯನಾದ ಮನುಷ್ಯನ ಉತ್ಪತ್ತಿಯು ಹೇಗೆ ಆಯಿತೋ ಅದೇರೀತಿಯಲ್ಲಿ ಎಲ್ಲಾ ಮತಗ್ರಂಥಗಳೂ ಪ್ರಕಟವಾದ ನಂತರ ಬೀಜಪ್ರಾಯವಾದ ಕುರ್‌ಆ ಪ್ರಕಟವಾಗಿರುತ್ತದೆ. ಮುಂದೆ ಇದರ ಒತ್ತಾಸೆಗಾಗಿ ಪರಮಾತ್ಮನು—

ವ ಅವಹಾರಬ್ಬೈಕ ಇಲನಃನಹ್‌ಲಿಅನಿತ್ತಖಜಿ
ಮಿನಲಃಜಿಬಾಲೆಬುಯೂ ತಂವವಮಿನಷ್ಟಜರಿ
ವ ಮಿಮ್ಮಯಾರೆಷೂನ ಸುಮ್ಮಕುಲೀಮಿನ್
ಕುಲ್ಲಿಸ್ಯಸಮರಾತೆ ಫಸಲು ಕೀಸುಬುಲರಬ್ಬಿಕೆ
ಜುಲಲಾಯಖರುಜುಮಿನ್‌ಬ ತೂನಹಾಷಿರಾಬುನ್
ಮಖತಲಿಪ್ಪುನಃ ಅಲ್‌ವಾನಹು ಹೀಹೆಷಿಫಾ
ಉನ್‌ಲನ್ನಾಸ. (ಕು. ೧೬. ಅ. ೬ ಸಂ.)

ಅರ್ಥ:—ಓ ! ನನ್ನ ಪ್ರವಾದಿಯೇ ! ನಾವು ಜೀನುಹುಳಕ್ಕೆ ಪ್ರಕಟ ಪಡಿಸುವುದೇನಂದರೆ, ದೊಡ್ಡದೊಡ್ಡ ಗವಿಗಳಲ್ಲಿಯೂ ಮತ್ತು ಎತ್ತರವಾದ ಸ್ಥಳಗಳಲ್ಲಿಯೂ ನೀನು ಮನೆಗಳನ್ನು ಕಟ್ಟು ಮತ್ತು ಸರ್ವ ಪುಷ್ಪಗಳ ಮಧುರವನ್ನೂ ಅದರಲ್ಲಿ ಕೂಡಿಡು ಮತ್ತು ಇದಕ್ಕೋಸುಗ ಪ್ರಭುವನ್ನು ಅತಿ ವಿನೋದದಿಂದ ಧ್ಯಾನಿಸು. ಇದರಿಂದ ಬಹು ಮಾಧುರ್ಯವಾದ ರಸವು ಹೊರಡುತ್ತದೆ. ಇದೇರೀತಿಯಲ್ಲಿ ಪರಮಾತ್ಮನು ಓಂಕಾರ ಗ್ರಂಥವಾದ ಕುರ್ಆನಲ್ಲಿ ಸರ್ವ ಹಿಂದಿನ ದೇವೋಕ್ತಗ್ರಂಥಗಳನ್ನು ಸೇರಿಸಿರುತ್ತಾನೆ. ಇದೇ ದೈವೋಕ್ತಿಗಳ ಸಾರಾಂಶವು. ಇದರ ಸಲುವಾಗಿ ಪರಮಾತ್ಮನು ಹೇಳಿರುತ್ತಾನೆ.—

ತಾಹಾಮಾ ಅಂಜಲ್‌ನಾ ಅಲೈಕಲ್ ಕಿತಾಬ
ಲೆ ತಕ್ಷಕಾ ಇಲ್ಲಾ ತಜಕರತಲ್‌ಲೆ ಮ್ಯೆಂ
ಯಖಷಾ ತಂಜೀಲಮ್ ಮಿಂಮನ್ ಖಲಖಲ್
ಅರ್ದವಸ್ಸ ಮಾವಾತೆಲ್‌ವುಲಾ ಅರ್ರಹಮಾನ್
ಅಲಲ್ ಅರ್ಷ ಇಸ್‌ತವಾ. (ಕು. ೨೦ ನೇ ಅಧ್ಯಾ ಸಂ. ೧)

ಅರ್ಥ:—ಓ ! ನರನೇ ! ನಾನು ನಿನಗೆ ತೊಂದರೆ ಕೊಡುವ ಸಲುವಾಗಿ ಧರ್ಮೋಕ್ತವಾದ ಕುರ್ಆನನ್ನು ಪ್ರಕಟಮಾಡಲಿಲ್ಲಾ. ಇದು ಯಾವುದೊಂದು ಹೊಸ ಗ್ರಂಥವಲ್ಲ. ಇದು ಪೂರ್ವಗ್ರಂಥಗಳ ಸಾರಾಂಶವಾಗಿದೆ. ಮನುಷ್ಯನು ಯಾವರೀತಿಯಲ್ಲಿ ತನ್ನ ಪೂರ್ವಕವಾಗಿ ಉದಿಸಿದ ಸರ್ವ ಜೀವಿಗಳನ್ನು ತನ್ನಲ್ಲಿ ಒಳಗೊಂಡು ಬಹಿರಂಗವಾದನೊ ಅದರಂತೆಯೇ ಕುರಾನ್ ಹಿಂದಿನ ಗ್ರಂಥಗಳನ್ನು ಒಳಗೊಂಡು ಪ್ರಕಟವಾಗಿರುತ್ತದೆ. ಈ ವಿಷಯದಲ್ಲಿ ಮತ್ತೊಂದು ಪ್ರಮಾಣವುಂಟು:—

ವಕಾಲುಯಾ ಅಯ್ಯೊಹಲ್ ಲಜೀನೊಜ್ಜಲ
ಅಲೈಹಿಜ್ಜಿಕರೊ ಇನ್ನಕಲ ಮಜ್‌ನೂನ
(ಕು. ಅ. ೧೫. ಸಂ. ೧)

ಅರ್ಥ:—ಪರಮಾತ್ಮನು ಹೇಳುತ್ತಾನೆ, "ಓ ! ಪ್ರವಾದಿಯೇ ! ಎಲ್ಲಾ ಗ್ರಂಥಗಳ ಸಾರಾಂಶವನ್ನೂ ನಿಮ್ಮ ಮೇಲೆ ಪ್ರಕಟಮಾಡಿರುವುದನ್ನು ಕಂಡು ಜನರು ಆಶ್ಚರ್ಯಚಕಿತರಾಗಿ ನಿನ್ನನ್ನು ಹುಚ್ಚನೆಂದು ಹೇಳುತ್ತಾ ಇದ್ದಾರೆ. ಈ ಮಾತು ಯಾವಾಗಲೂ ಈ ನರರ ಕಿವಿಯಲ್ಲಿ ಬಿದ್ದಿರಲಿಲ್ಲಾ. ಮನುಷ್ಯನ ಉತ್ಪತ್ತಿಯಾದ ಕೂಡಲೆ ಸರ್ವ ಜೀವರಾಶಿಗಳೂ ಆಶ್ಚರ್ಯವನ್ನು ಹೊಂದಿದವು. ಇದೇರೀತಿಯಲ್ಲಿ ಜ್ಞಾನವಿಲ್ಲದ ಜನರು ಸರ್ವವ್ಯಾಪಿಯಾದ ಕುರಾನಿನ ಬೋಧನೆಯನ್ನು ಕಂಡು ಆಶ್ಚರ್ಯಚಕಿತರಾಗಿ ಇವರನ್ನು ಹುಚ್ಚನೆಂದು ಹೇಳುತ್ತಿದ್ದರು. ಪುನಃ ಪರಮಾತ್ಮನು ಹೇಳುವುದೇನೆಂದರೆ:—

ವಹಾಜಾಜಿಕರುನ್ ಮುಬಾರಕುನ್
ಅಂಜಲ್‌ನ್‌ಹು ಅಫ ಅಂತುಮ್
ಲಹು ಮುನ್ ಕೆರೂನ. (ಕು. ೨೧ ಅ. ಸಂ. ೪)

ಅರ್ಥ:—ಓ ! ಪ್ರವಾದಿಯೇ ! ಈ ಗ್ರಂಥವು ಹೊಸ ಗ್ರಂಥವಲ್ಲ; ಹಳೇ ಗ್ರಂಥಗಳ ಸಾರಾಂಶವಾಗಿದೆ. ಇದರಲ್ಲಿ ಒಂದು ವಿಶೇಷಗುಣವುಂಟು. ಮನುಷ್ಯನು ಯುಗ ಯುಗಾಂತರಗಳಿಂದ ಜ್ಞಾನದಲ್ಲಿ ಹೆಚ್ಚುತ್ತಾ ಬಂದಿರುತ್ತಾನೆ. ಅದೇರೀತಿಯಾಗಿ ಈ ಗ್ರಂಥದ ಮರ್ಮವು ಕಾಲ ಬದಲಾವಣೆಯಿಂದ ಆ ಕಾಲಕ್ಕೆ ತಕ್ಕಂತೆ ಹೊರಬೀಳುವುದು. ಇದೇ ಈ ಗ್ರಂಥದ ಮಹತ್ವವು. ಸರ್ವ ಜೀವರಾಶಿಗಳ ವಿಶೇಷಗುಣಗಳು ಮನುಷ್ಯನಲ್ಲಿ ಕಂಡು ಬರುತ್ತವೆ. ಇದರಂತೆಯೇ ಪೂರ್ವಗ್ರಂಥಗಳ ವಿಶೇಷಗಳನ್ನು ಕುರ್ಆ ಸಂಪೂರ್ಣವಾಗಿ ಹೊಂದಿರುತ್ತದೆ. ಇಂಜೀಲಿನಲ್ಲಿ ಒಂದು ವಿಶೇಷ ಬೋಧನೆ ಉಂಟು. ಅದೇನೆಂದರೆ—"ಯಾವನಾದರು ಒಂದು ಕೆನ್ನೆಯಮೇಲೆ ಹೊಡದರೆ ಮತ್ತೊಂದು ಕೆನ್ನೆಯನ್ನು ಚಾಚು"; ಆದರೆ ಶ್ರೀ ಕೃಷ್ಣೋಕ್ತವಾದ ಭಗವದ್ಗೀತೆಯಲ್ಲಿ ಕೊಲ್ಲಲ್ಪಟ್ಟರೆ ಸ್ವರ್ಗವನ್ನು ಹೊಂದುವಿ; ಜಯಿಸಿದರೆ ರಾಜ್ಯಭೋಗವನ್ನು ಅನುಭವಿಸುವಿ; ಆದಕಾರಣ ಧೃಡಮನಸ್ಸುಳ್ಳವನಾಗಿ ಯುದ್ಧಕ್ಕೆ ಏಳು" ಎಂದು ಹೇಳಲ್ಪಟ್ಟಿರುತ್ತದೆ. ಈ ಎರಡು ಗ್ರಂಥಗಳ ಬೋಧನೆಗಳೂ ಒಂದಕ್ಕೊಂದು ವಿರೋಧವಾಗಿ ಕಾಣುತ್ತವೆ. ಆದರೆ ಕುರ್ಆ ಈ ಎರಡಕ್ಕೂ ಅನುಸಾರವಾಗಿ ಉತ್ತಮರೀತಿಯಿಂದ ಬೋಧಿಸುತ್ತದೆ. ಇದಕ್ಕಾಗಿಯೇ ಒಂದು ಪ್ರಮಾಣವುಂಟು.—

ಕೂಲು ಆಮನ್ನಾ ಬಿಲ್ಲಾಹೆ ವಮಾ
ಊಜಲಾ ಇಲೈನಾವ ಮಾವುಂಜಲಾ
ಇಲಾ ಇಬ್ರಾಹೀಮ ವ ಇಸ್ಮಾಯಿಲ ವ ಇಸ್‌ಹಾಕ
ವಯಾಕೂಬವಲ್ ಅಸ್‌ಬಾತೇವಮಾ
ಊತಿಯಾ ಮೂಸಾವ ಈಸಾವಮಾವು
ತಿಯನ್ನಬೀಯೂನ ಮಿರ್ರಬ್ಬಿಹಿಂಲಾ
ನುಫರ್ರೆಖು ಬೈನ್ ಅಹದಿಂಮಮಿನ್ ಹುಂ
ವ ನಹನೊಲಿಹ ಮುಸ್‌ಲೆ ಮೂನ. (ಕು. ೨. ಅ. ೧೬. ಸಂ.)

ಅರ್ಥ:—ಪರಮಾತ್ಮನು ಹೇಳುತ್ತಾನೆ—"ಓ ! ಭಕ್ತಿಯುಳ್ಳವರೇ, ಪ್ರಸಿದ್ಧಮಾಡಿ ಜನರಿಗೆ ಹೇಳಿರಿ. "ನಮ್ಮಸಲುವಾಗಿ ಪ್ರಕಟವಾಗಿರುವುದನ್ನೂ ಮತ್ತು ಇಬ್ರಾಹೀಮನಮೇಲೆ ಪ್ರಕಟವಾಗಿರುವುದನ್ನೂ, ಇಸ್ಮಾಯಿಲ್ ಮತ್ತು ಇಸ್‌ಹಾಕನಮೇಲೆ ಪ್ರಕಟವಾಗಿರುವುದನ್ನೂ ಯಾಕೂಬನಮೇಲೆಯೂ ಅವರ ವಂಶೆತನದವರಮೇಲೆಯೂ ಮೂಸಾ ಪೈಗಂಬರರಮೇಲೆಯೂ ಏಸು ಕ್ರೈಸ್ತಮೇಲೆಯೂ ಮತ್ತು ಸಮಸ್ತ ಅವತಾರಿಗಳಮೇಲೆಯೂ ಪ್ರಕಟವಾಗಿರುವ ಸರ್ವ ಗ್ರಂಥಗಳನ್ನೂ ನಂಬುತ್ತೇವೆ. ಮತ್ತು ಇವುಗಳಲ್ಲಿ ಎಂದಿಗೂ ಭೇದವನ್ನೆಣಿಸುವುದಿಲ್ಲ". ಈ ಪ್ರಮಾಣದಿಂದ ಮುಸಲ್ಮಾನರಾದವರು ಸರ್ವ ಮತಾವಲಂಬಿಗಳೆಂತಲೂ ಮತ್ತು ಸರ್ವ ಅವತಾರಿಗಳ ಭಕ್ತರೆಂತಲೂ ತಿಳಿದು ಬರುತ್ತದೆ. ಇದರಿಂದ ಇವರ ಗ್ರಂಥವು ಮೇಲೆ ಉದಹರಿಸಿರುವ ಸರ್ವ ಗ್ರಂಥಗಳ ಬೋಧನೆಗಳನ್ನೂ ಬೋಧಿಸುತ್ತದೆ. ಅದೇ ಬೋಧನೆಯನ್ನು ಹಜರತ್ ಮಹಮ್ಮದ್ ಪೈಗಂಬರರು ಪ್ರಚುರಪಡಿಸಿದ್ದರು. ಈರೀತಿಯಲ್ಲಿ ಮತಭೇದವೆಂಬ ದುರಭಿಮಾನವನ್ನು ತಗ್ಗಿಸುವ ಸುಬೋಧನೆಗಳನ್ನು ಹೇಳಿ ಜನರನ್ನು ಈ ವಿಧವಾದ ದುಃಖದಿಂದ ದೂರಮಾಡಿ ಅವರಲ್ಲಿ ಶಾಂತಿಯನ್ನು ನೆಲಗೊಳಿಸಿದುದರಿಂದ ಈ ಮಹಾತ್ಮರೇ "ಬ್ರಹ್ಮಾಕೃತ ಶಿವಸಹಸ್ರನಾಮಸು | ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||" ಎಂಬ ಬಿರುದಿಗೆ ಅಲಂಕಾರಭೂಷಣರಂತೆ ಇದ್ದಾರೆ. ಈ ವಿಷಯವನ್ನು ತಿಳಿಯದ ಕೆಲವು ಮುಸಲ್ಮಾನರು ಮತಜ್ಞಾನವಿಲ್ಲದೆ ಹಿಯ್ಯಾಳಿಸುತ್ತಾರೆ. ಇದು ಇವರ ಶಪ್ಪಾಗಿಯೇ ಇದೆ.

## ಆರನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿಜಗದ್ಗುರು ||

ಜಗದ್ಗುರುನಾಮಾಂಕಿತನಾದ ಮಹಾಪುರುಷನು ಪರಮಾತ್ಮನ ಪ್ರಕಾಶ ಶಕ್ತಿಗಳಲ್ಲಿ ಎಂದರೆ ವಿಷ್ಣುಶಕ್ತಿ, ಶಿವಶಕ್ತಿ ಇವುಗಳಲ್ಲಿ ಭೇದವನ್ನು ಎಣಿಸದೆ ಸರ್ವವನ್ನೂ ಒಂದಾಗಿ ಭಾವಿಸಿ ನಡೆದು ಸರ್ವಶಕ್ತಿ ಪ್ರಸನ್ನನಾಗಿರಬೇಕು.

ಈ ಪ್ರಮಾಣದಲ್ಲಿ ಹಜರತ್ ಮಹಮ್ಮದ್ ಪೈಗೆಂಬರರ ಹೊರತು ಮಿಕ್ಕ ಅವತಾರಿಗಳೇ ಆಗಲೀ, ಗುರುಗಳೇ ಆಗಲಿ ಸರ್ವಥಾ ತೇರ್ಗಡೆಯನ್ನು ಹೊಂದಲಾರರು. ಕಾರಣವೇನೆಂದರೆ, ಹಿಂದಿನ ಅವತಾರಿಗಳು ಭಿನ್ನಭಿನ್ನ ಸ್ವರೂಪ ಪ್ರಸನ್ನರಾಗಿ ಬಂದಿದ್ದರೆಂದು ಅವರವರ ಗ್ರಂಥಗಳಿಂದಲೇ ತಿಳಿಯ ಬರುತ್ತದೆ. ಆದರೆ ಹಜರತ್ ಮಹಮ್ಮದ್ ಪೈಗೆಂಬರರಲ್ಲಿಮಾತ್ರ ಎಲ್ಲಾ ಪ್ರಕಾಶ ಶಕ್ತಿಗಳೂ ಅವಿಚ್ಛಿನ್ನವಾಗಿ ಪ್ರಸನ್ನವಾಗಿ ಕಾರ್ಯಕರ್ಮಗಳಲ್ಲಿ ಗೋಚರವಾಗಿರುವವು. ಈ ಮಹಾತ್ಮರು

(೧) ತಮ್ಮ ಉಪದೇಶವನ್ನು ಸರ್ವರಿಗೂ ಅನುಕೂಲಪಡಿಸಿದರು,
(೨) ಸರ್ವ ಪರಮಾತ್ಮ ಪ್ರಕಾಶಶಕ್ತಿಗಳನ್ನೂ ಸ್ಮರಿಸುತ್ತಾರೆ,
(೩) ಪರಮಾತ್ಮನ ಸರ್ವಪ್ರಕಾಶರೂಪಗಳಲ್ಲಿ ಕಂಡುಬಂದರು.

(೧) ಮೇಲಿನ ಈ ಮಹಾತ್ಮರ ಗುಣಪ್ರಸನ್ನತೆಗಾಗಿ ಪರಮಾತ್ಮನು ಓಂಕಾರೋಕ್ತವಾದ ಕುರಾನಲ್ಲಿ ತಿಳಿಸಿರುತ್ತಾನೆ:—

ತಬಾರಕಲ್ ಲಜಿನಜ್ಜಲಲ್ ಫುರ್‌ಕಾನ
ಅಲಾ ಅಬ್ ದೆಹಿಲೆಯ ಕೂನಲಿಲ್
ಆಲಮಿನ ನಜೀರಾ. (ಕು. ಅ. ೨೫. ಸಂ. ೧)

ಅರ್ಥ:—ಮಂಗಳಮಯನಾದ ಪರಮಾತ್ಮನು ಈ ಕುರಾನನ್ನು ಸರ್ವ ಜಗತ್ತಿನ ಆತ್ಮಸಂರಕ್ಷಣೆಗಾಗಿ ತನ್ನ ಭಕ್ತರಾದ (ಪೈಗೆಂಬರರ) ವರ ಮೇಲೆ

ಪ್ರಕಟಪಡಿಸಿರುತ್ತಾನೆ." ಈ ಪ್ರಮಾಣಕ್ಕನುಸಾರವಾಗಿ ಕುರ್ಆನಲ್ಲಿ ಪ್ರಪಂಚದ ಸರ್ವ ಕುಲಗಳಿಗೂ ದುರಭಿಮಾನರಹಿತವಾದ ಬೋಧನೆಗಳು ತುಂಬಿರುತ್ತವೆ. ಇದು ಮುಂದಿನ ಪ್ರಮಾಣಗಳಲ್ಲಿ ಗೋಚರವಾಗುವುದು.

೨. ಇವರು ಪರಮಾತ್ಮನ ಸರ್ವಪ್ರಕಾಶಗಳನ್ನೂ ಸ್ಮರಿಸುತ್ತಾರೆ. ಇದರಸಲುವಾಗಿ ಪರಮಾತ್ಮನು ಓಂಕಾರದಿಂದ ತಿಳಿಸಿರುತ್ತಾನೆ:—

ಅಲ್‌ಹಂದು ಲಿಲ್ಲಾಹೆ ರಬ್ಬಿಲ್ ಆಲಮಿನ,
ಅರ್ರಹಮಾನಿರ್ರಹೀಮ ಮಾಲಿಕಿಯೌಮಿದ್ದೀನ.

(ಕು. ಅ. ೧. ಸಂ. ೧)

ಅರ್ಥ:—ಅಲ್ಲಾಹನು ಸದಾಶಿವನಾಗಿ ಜಗತ್ತಿಗೆ ತನ್ನ ಪದವಿಗಳನ್ನು ತಿಳಿಸಿ ಬೋಧಿಸುತ್ತಾನೆ. ಈಶ್ವರನಾಗಿ ಶಾಶ್ವತವಾದ ಸೌಶಖ್ಯಂಗಳಂ ಕೊಡುತ್ತಾ ಭಜಿಸಲ್ಪಡುತ್ತಾನೆ. ಬ್ರಹ್ಮನೆನಿಸಿ ಅನಾದಿಯಾಗಿ ಲೋಕವನ್ನು ಸೃಜಿಸುತ್ತಾನೆ. ವಿಷ್ಣುವೆನಿಸಿ ವೈಷ್ಣವಜನರನ್ನು ಲಾಲಿಸುತ್ತಾ ಜಗವನ್ನು ಪಾಲಿಸುತ್ತಾನೆ. ರುದ್ರನೆನಿಸಿ ದುಷ್ಟರನ್ನು ಸಂಹಾರಮಾಡುತ್ತಾ ಓಲೈಸಿಕೊಳ್ಳುತ್ತಾನೆ."

ಇದಲ್ಲದೆ ಕುರಾನಿನಲ್ಲಿ ಸದಾಶಿವನಿಂದ ಹಿಡಿದು ರುದ್ರನವರೆವಿಗೂ ಒಂಬತ್ತು ಲಕ್ಷ ಪರಮಾತ್ಮನ ಪ್ರಕಾಶಗಳಿವೆ. ಇವುಗಳನ್ನು ಪೈಗಂಬರರು ಒಂದೇವಿಧವಾದ ಭಾವನೆಯಿಂದ ಸ್ಮರಿಸಿರುತ್ತಾರೆ.

೩. ಇವರಲ್ಲಿ ಸರ್ವ ಆತ್ಮಪ್ರಕಾಶಗಳೆಲ್ಲಿವೂ ಪ್ರಸನ್ನವಾದವು. ಅವುಗಳೆಲ್ಲವೂ ದೈವ ಪ್ರಕಾಶರೂಪದಲ್ಲಿ ಬರಿಯಲ್ಪಟ್ಟಿರುತ್ತವೆ:—



## ಬ್ರಹ್ಮಶಕ್ತಿಗಳು (೪೯)

ಸಲಾಮುನ್ (ಶಾಂತಿಮಯ) ವಾಸೆವುನ್ (ವಸುವೆ) ಬಾರಿ (ಪ್ರಾಣದ) ಕೈಯ್ಯುಮುನ್ (ಸರ್ವದ) ಕುದ್ದೂಸುನ್ (ಪವಿತ್ರ) ಹೈಯ್ಯುನ್ (ಅಚ್ಯುತ) ಅಹದುನ್ (ನಿರಂಶ) ಅಲಿ ಮುಲ್‌ಗೈಬ (ತ್ರಿಕಾಲಜ್ಞಾನಿ) ಕಬೀರುನ್ (ವಿಸ್ತಾರ) ಮೊವಖ್ಖರುನ್ (ಅನಂತ) ಮುಸವ್ವರುನ್ (ಚಿತ್ರಕರ್ತ) ವಾಹೆದುನ್ (ಏಕ) ಮಜೀದುನ್ (ಪರಮೇಶ್ವರ) ಅಲೀಮುನ್ (ಸರ್ವಜ್ಞ) ಅಜೀಮುನ್ (ಶ್ರೇಷ್ಠ) ಮಾಜೆದುನ್ (ವಂಗಳ) ಮೊಕದ್ದಮುನ್ (ಜಗದಾದಿಜ) ಅಲಿಯ್ಯುನ್ (ಈಶಾನ) ಸಮದುನ್ (ಸರ್ವತ್ರ) ಬಾತಿಮುನ್ (ಅನಯ) ಹಮಿಾದುನ್ (ನಿರ್ಜರ) ಷಾಹೆದುನ್ (ಶುಚಯ) ಮುತೀನುನ್ (ಚಾರುಚರಿತ್ರ) ಮೊಹೀತುನ್ (ಸರ್ವವ್ಯಾಪಿ) ಕದೀಮುನ್ (ಅನಾದಿ) ಅವ್ವಲುನ್ (ಆದಿ) ರಬ್ಬುನ್ (ಪ್ರಭು) ಆಖೆರುನ್ (ಶಾಶ್ವಿತ) ತಾಹೆರುನ್ (ಪವಿತ್ರ) ಲತೀಪುನ್ (ಸೂಕ್ಷ್ಮ) ಬಾಸೆರುನ್ (ನೇತೈ) ಮುಲವ್ವನುನ್ (ಸರ್ವವರ್ಣ) ನೂರುನ್ (ಜ್ಯೋತಿ) ಬಾಕೀಯುನ್ (ಸರ್ವಮಯ) ಸಾನೆಯುನ್ (ಸರ್ವಕರ್ತೃ) ಮಹಮಾದುನ್ (ಸ್ತುತ) ಷಹೀದುನ್ (ಸಾಕ್ಷಾತ್) ಜಿತ್ತಾಲುನ್ (ವ್ಯಾಪ್ತಾಯ) ಫಾತೆರುನ್ (ಸರ್ವತಂತ್ರ) ಷುಹೂದುನ್ (ನಿಗಮಗೋಚರ) ಮುತಹ್ಹರುನ್ (ಮುಕುಂದ) ಖಾಲೆಕುನ್ (ಭೂತಕರ್ತ) ಕಾಫಿ (ಸಂಪೂರ್ಣ) ಬಾಯಸುನ್ (ಹೇತುತೆ) ಬದೀಯುನ್ (ಜನೇಶ್ವರ) ಹಕ್ಕುನ್ (ನಿರಾಕಾರ) ಮುಬತದೀಯುನ್ (ಪ್ರಭಾವ) ತೈಯಬುನ್ (ಶುದ್ಧ) ಮುಬೀನುನ್ (ಸರ್ವದರ್ಶನ).

---

## ಶ್ರೀ ವಿಷ್ಣುಶಕ್ತಿಗಳು (೪೪)

ಮೋಮಿನುನ್ (ಶಾಶ್ವತೈಮ್ಯ) ಮುತ ಆಲಿಯುನ್ (ಲೋಕಾಧಿಷ್ಠ) ಕರೀಮುನ್(ದಯ) ಜುಲ್‌ಮ ಆರಿಜುನ್(ಮಹೇಶ್ವರ)ಹಲೀಮುನ್ (ಸಹಿಷ್ಣು) ಮಾಬುದುನ್ (ಸುರೇಶ್ವರ) ಹಕೀಮುನ್ (ನಾರಾಯಣ) ದಯ್ಯಾನುನ್ (ದಯವಾದ) ಸಮಿಾಯುನ್ (ಶ್ರಾವಣ) ನೊಯಿಾನುನ್ (ಸರ್ವ ಸಹಾಯ)

ಬಸೀರುನ್ (ಉಪಾಯಶಾಲಿ) ಗಫೂರುನ್ (ಪಾಪವಿನಾಶಕ) ಮುಜೀಬುನ್ (ಸರ್ವದೃಶೇನ) ಪಿಕೂರುನ್ (ಕೊಂಡಾಡುವನು) ವಾಲಿಯುನ್ (ಲೋಕಾಧ್ಯಕ್ಷ) ಗಫ್ಫಾರುನ್ (ಮಹಕ್ಷನು) ಕಾಜೀಯುನ್ (ನ್ಯಾಯಸ್ಥ) ವಹ್ಹಾಬುನ್ (ಸಿದ್ಧಾರ) ಸರೀಯುನ್ (ಲಿಕ್ಷಿತ್ವ) ಸತ್ತಾರುನ್ (ಮರೆಮಾಡುವನು) ರವೂಫುನ್ (ಶಂಕರ) ಸಾದೆಖುನ್ (ಸತ್ಯರೂಪ) ಸೈಯ್ಯದ-ಸ್ಸಾದಾತ್ (ಅತೀಂದ್ರ) ಮುನೆಯಮುನ್ (ಶುಭೇಕ್ಷಣ) ವದೂದುನ್ (ಭೂತದಯ) ವಕೀಲುನ್ (ಕಾರ್ಯಕರ್ತ) ನಫ್ಫಾವುನ್ (ಲಾಭಕೃತ) ಮೊಹಿಸಿಯುನ್ (ದಮನ) ಜಮಾಲುನ್ (ಸುಪರ್ಣ) ವಾಜೆದುನ್ (ಲಜ್ಜೆ ಮಾನ) ಮೊತೀಯುನ್ (ಶ್ರೀಕರ) ಬರ್‌ರುನ್ (ಸರ್ವೋತ್ತಮ) ನಯಿಮುನ್ (ವರದ) ನವ್ವಾಬುನ್ (ಮಹಾಮಯ) ಮೊಹಸಿನುನ್ (ಪರೋಪಕಾರಿ) ಅಫುವ್ವನ್ (ಕ್ಷಮ) ಮುಫೀದುನ್ (ಪುಣ್ಯಾತ್ಯ) ರಫೀದುನ್ (ನಿರಂಜನ) ಹಾದೀಯುನ್ (ಮಾರ್ಗ) ಸುಭೂರೂನ್ (ಸೈರಿಸುವ) ಮನ್ನಾನುನ್ (ದಯಾಳು) ಮುಸ್ತಾನುನ್ (ಸಹಾಯಕ) ಮುರೀದುನ್ (ಇಷ್ಟಾಯ).

---

## ರುದ್ರಶಕ್ತಿಗಳು (೫೦)

ಮುತಕಬ್ಬಿರುನ್ (ಗರ್ವಿಷ್ಠ) ಜುಲ್‌ಕಿರಾಮ (ಅತಿಪ್ರೀತಿ) ಜಬ್ಬಾರುನ್ (ರೌದ್ರ) ಫ ಆಲುನ್ (ಮಹಾಕರ್ತ) ಜವ್ವಾದುನ್ (ಸ್ವಸ್ತಿದಕ್ಷಿಣೆ) ಕಾದೆರುನ್ (ಸರ್ವ ಅಧಿಕಾರಿ) ವಲಿಯುನ್ (ಆಧಿಪತಿ) ಖೈರುಲ್ ಘಾತೆಹೀನ (ಶ್ರೀನಿವಾಸ) ಷದೀದುನ್ (ದಂಡಾ) ಆಮೆರುನ್ (ಆಜ್ಞಾಪತಿ) ನಾಸೆರುನ್ (ಸಹಾಯಕ) ಮೊಹೆಮೆನುನ್ (ಕಾಪಾಡುವನು) ವಾರಿಸುನ್ (ಪತಿ) ಖಾಫೆಜುನ್ (ಮರ್ಯಾದೆವುಳ್ಳ) ಕಹ್ಹಾರುನ್ (ಭೀಮಪರಾಕ್ರಮ) ಹಫೀಜುನ್ (ರಕ್ಷಣ) ಧಾಫೆಯುನ್ (ಪಾಪನಾಶ) ಕದೀರುನ್ (ಸರ್ವಶಕ್ತ) ಕಾಹೆರುನ್ (ಉಗ್ರ) ಫತ್ತಾಹುನ್ (ವಿಜಯ) ಹಾಕಿಮುಲ್ ಹಾಕಿಮಿನಾ (ಸರ್ವೇಶ್ವರ) ಮೊಯ್ಯುದುನ್ (ನಿರ್ವಂಚಕ) ಸಾನೆಯುನ್ (ಸತ್ಕೃತ) ಮೊಕನೆತುನ್ (ಕಾಪಾಡುವ ಪಹಸ್ತನು) ಮೌಲಾ (ದುಷಕೃತಿಘ್ನೇ) ಮೊಯಿಜ್ಜುನ್ (ಮಾನ್ಯ) ಘಾಖಿರುನ್ (ಅಹಂಕಾರವುಳ್ಳ) ಮುಜಿಲ್ಲುನ್ (ಶತ್ರುಹರ) ಘಾತೆಹುನ್ (ವಿಜಯ) ಜಾಮೆಯುನ್ (ಸರ್ವಗತ) ರಕೀಬುನ್ (ಭಕ್ತವತ್ಸಲ) ಜಾಹೆ

ರುನ್ (ಸರ್ವತ್ರ) ಜಲೀಲುನ್ (ಪ್ರಜ್ವಲಿತ) ಹಬೀಬುನ್ (ಸರ್ವ ಬಂಧು) ಆದೆಲುನ್ (ನ್ಯಾಧಿಪತಿ) ಹಾಕಿಮುನ್ (ದರಪದ) ಮುಘಜ್ಜೆಲುನ್, (ಪರಾಕ್ರಮ) ಮುಂತಕೆ ಮುನ್ (ಭಜಕ) ಹಸೀಬುನ್ (ಲೆಕ್ಕಸ್ತ) ಅಜೀಜುನ್ (ಪ್ರತಾಪ) ಮೊಕತದೆರುನ್ (ಸುವೀರ) ಕವೀಯುನ್ (ಮಹಾಬಲ) ಕಾಬೆಜುನ್ (ವರನಾಥ) ಗನೀಯನ್ (ನಿರಾಲಂಭ) ಮುಮಿತುನ್ (ಲಯಕರ್ತ) ಜಾರ್‌ರುನ್ (ವಿಘ್ನೇಶ್ವರ) ಜುಲ್ ಜಲಾಲ (ಮೋಧಾವಿಗೆ).

ಈ ರೀತಿಯಾದ ಸಮಸ್ತ ಪರಮಾತ್ಮನ ಪ್ರಕಾಶಗಳೂ ಹಜರತ್ ಮಹಮ್ಮದರಲ್ಲಿ ಪ್ರಸನ್ನವಾಗಿ ನಲ್ವತ್ತು ವರ್ಷದಿಂದ ಅರವತ್ತುಮೂರು ವರ್ಷ ವಯಸ್ಸಿನಲ್ಲಿ ಈ ಸಮಸ್ತ ವಸ್ತುಗಳೂ ಸಂಪೂರ್ಣವಾಗಿ ಪ್ರಜ್ವಲಿಸಿದುವು.

---

## ಏಳನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿಜಗದ್ಗುರು ||

ಜಗದ್ಗುರುಬಿರುದಾಂಕಿತನಾದ ಮಹಾತ್ಮನು ಗುಣಕರ್ಮಾನುಸಾರವಾಗಿ ವಿಭಾಗಿಸಲ್ಪಟ್ಟಿರುವ ಚತುರ್ವರ್ಣಗಳಿಗೆ ಅನುಸಾರವಾಗಿ ನಡದು ಎಲ್ಲವನ್ನೂ ಸಮಾವೇಶಮಾಡುವ ಬೋಧನೆಯನ್ನು ಬೋಧಿಸಬೇಕು. ಇವುಗಳೆಲ್ಲವನ್ನೂ ಸರಿಯಾಗಿ ನಡೆಯಿಸಿ ಭೇದದಿಂದುಂಟಾದ ದುಃಖವನ್ನು ದೂರ ಮಾಡಬೇಕು.

ಈ ಸಾಧನೆಯಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಹೊರತು ಮತ್ತಾರೂ ಈ ವಿಧವಾದ ಬೋಧನೆಯನ್ನೂ ಮತ್ತು ನಡವಳಿಕೆಯನ್ನೂ ಪ್ರತ್ಯೇಕವಾಗಿ ಅನುಸರಿಸಿಲ್ಲ. ಈ ವಿಷಯವು ಹಿಂದಿನ ಪ್ರಮಾಣಗಳಲ್ಲಿ ತಿಳಿದುಬಂದಿರುತ್ತದೆ. ಇದಕ್ಕೆ ಆಧಾರವಾಗಿ ಸಕಲ ವರ್ಣಗಳ ಬೋಧನೆಗಳನ್ನು ಕುರ್‌ಆನಿಂದ ತಿಳಿಸುವುದು ಅವಶ್ಯಕವಾಗಿದೆ.

---

## ಬ್ರಾಹ್ಮಣ ವರ್ಣವು.

## ಷಟ್ಕರ್ಮಗಳು.

### ಯಜನ-ಯಾಜನ.

ವ ಯಜಕುರಿ ಸ್ಮಲ್ಲಾಹಿಪೀ ಐಯ್ಯಾಮಿನ್
ಮಾಲುಮಾತಿನ್ ಅಲಾ ಮಾರ ಜಕಹುಂಮಿನ್
ಬಹೀಮತಿಲ್ ಅನಾಮಿಪಕುಲು ಮಿನ್‌ಹಾವ
ಅತ್‌ಯೆಮುಲ್ ಬಾಯಸೆವಲ್ ಫಕೀರ (ಕು. ೨೨. ಆ. ಸ. ೪).

ಅರ್ಥ:—ಓ ! ಭಕ್ತಿಯುಳ್ಳವರೇ ! ತಾವು ಯಜ್ಞಮಾಡುವ ಪಶುಗಳ ಮೇಲೆ ಅಲ್ಲಾಹನ ಹೆಸರನ್ನು ಉಚ್ಚರಿಸಬೇಕು. ಮತ್ತು ಅದರ ಮಾಂಸವನ್ನು ತಾವು ತಿನ್ನಬೇಕು ಮತ್ತು ಬಡವರಿಗೂ ಬ್ರಾಹ್ಮಣರಿಗೂ ಸತ್ಪುರುಷರಿಗೂ ಅದರಿಂದ ತೃಪ್ತಿಪಡಿಸಬೇಕು."

ಪುನಃ ಇದೇ ವಿಷಯವು ಇನ್ನು ವಿಶದವಾಗಿ ಹೇಳಲ್ಪಟ್ಟಿರುತ್ತದೆ.—
ವಲೆಕುಲ್ಲೆ ವುಮ್ಮತಿನ್ ಜಾಲನಾಮನ್ ಸೆಕನ್
ಲೆ ಯಜಕುರುಸ್‌ಮಲ್ಲಾಹೆ ಅಲಾಮಾರಜಕ
ಹುಂ ಮಿನ್ ಬಹೀಮತಿಲ್ ಅನಾಮೆ. ವಲ್
ಬುದನಜ ಅಲನ್‌ಹಾ ಲಕುಮ್‌ಮಿನ್‌ಷಾಯಿರಿಲ್ಲಾಹೆ
ಲಕುಮ್ ಫೀಹಾಖೈರಫಜ್‌ಕುರುಸ್ ಮಲ್ಲಾಹೆ
ಅಲೈಹಾಸವಾಪ್ಪಾ ಫ ಇಜಾವಜಬತಜುನೊಬೊಹಾ
ಫಕುಲುಮಿನ್‌ಹಾವ ಅತಯೆಮುಲ್ ಕಾನೆ
ವಲ್ ಮೊ ಅತರ, ಕಜಾಲಿಕಾ ಸಖ್ಖರ್ ನಾಹಾಲಕುಮ್
ಲ ಅಲ್ ಲಕುಮ್‌ತಷ್‌ಕುರೂನ. ಕು. ೨೨. ಆ. ಸಂ. ೫)


بموجب مذہبی قانون کے مطابق
قربانی کرکے گوشت نہیں کھاتا وہ مرنے
بعد کیس گوشت خوار جانوروں میں جنم لیتا ہے
ಧರ್ಮೈಕಯೂಗಿ ಯಜ್ಞಮಾಡಲ್ಕಲ್ಲ
ಪರುವಿನ ಮಾಂಸವನು ಯಾವನೆ
ತಿನ್ನವದಿಲ್ಲವೋ ಅವನು ಮಾಂಸಾ
ಹಾರಿಗಳಾದ ಇಪ್ಪತ್ತೊಂದು
ಮೃಗಗಳಲ್ಲಿ ಜನ್ಮವನು
ಹೊಂದುವನು

ಜನ್ಮಬಂಧನ ಚಕ್ರವು.

ಅರ್ಥ:—ಓ ! ಭಕ್ತಿಯುಳ್ಳವರೇ ! ನಾವು ನಿಮಗೋಸ್ಕರವೇ ಯಜನ ಯಾಜನದ ಆಜ್ಞೆಯನ್ನು ಮಾಡಿಲ್ಲ. ನಿಮಗಿಂತಲೂ ಮುಂಚೆ ಯಾವ ಯಾವ ಕುಲಗಳಿದ್ದವೋ ಅವುಗಳಿಗೂ ನಾವು ಈ ಕರ್ಮಗಳನ್ನು ನೇಮಕ ಮಾಡಿರುತ್ತೇವೆ. ಅದು ಹೇಗೆಂದರೆ, ತಮಗೆ ಕೊಟ್ಟಿರುವ ಪಶುಗಳಮೇಲೆ ಅಲ್ಲಾಹನ ಹೆಸರನ್ನು ಹೇಳಿ ನಿಮಗೋಸ್ಕರ ಯಜ್ಞಮಾಡಬೇಕು. ನಿಮಗೋಸ್ಕರವಾಗಿ ಒಂಟೆಯನ್ನುಕೂಡ ಬಂದು ಕುರುಹನ್ನಾಗಿ ಮಾಡಿರುತ್ತೇವೆ. ತಾವು ಇವುಗಳನ್ನು ಯಾಗಮಾಡುವಾಗ ಪರಮಾತ್ಮನ ಹೆಸರಿನಮೇಲೆಯೇ ಮಾಡಬೇಕು. ಅವು ಅಕ್ಕಾಲದಲ್ಲಿ ಬಂದು ಪಕ್ಕವಾಗಿ ಬಿದ್ದರೆ ಆಗ ಅವುಗಳ ಮಾಂಸವನ್ನು ತಿನ್ನಿರಿ. ಇದರಲ್ಲಿ ನಿಮಗೆ ಬಹು ಲಾಭವುಂಟು.. ಇವುಗಳನ್ನು ನಿರ್ಭೀಗಳಿಗೂ ಬ್ರಾಹ್ಮಣರಿಗೂ ಊಟಮಾಡಿಸಬೇಕು. ಈಪ್ರಕಾರ ಇವುಗಳನ್ನು ನಿಮ್ಮಗಳ ಸ್ವಾಧೀನ ಮಾಡಿರುತ್ತೇವೆ.

ಇದೇ ವಿಷಯವು ಹಿಂದಿನ ಸರ್ವಧರ್ಮಗಳಲ್ಲಿಯೂ ಕಂಡುಬರುತ್ತದೆ. ಹಿಂದಿನ ವೈದೀಕ ಋಷಿಗಳೂ ಅವತಾರಿಗಳೂ ಧರ್ಮರಾಜರೂ ಯಜ್ಞವನ್ನು ಮಾಡಿ ಮಾಂಸಭಕ್ಷಣೆಯನ್ನು ಮಾಡಿರುತ್ತಾರೆ. ಇದಕ್ಕೆ ಅನೇಕ ಆಧಾರಗಳು ಹಿಂದೂಧರ್ಮದಲ್ಲಿಯೂ ಕಂಡುಬರುತ್ತವೆ.

## ಹಿಂದೂಧರ್ಮದಲ್ಲಿ ಮಾಂಸಭಕ್ಷಣೆ.

೧. ಶ್ರಾದ್ಧ ಮತ್ತು ಯಜ್ಞದಲ್ಲಿ ಕರೆಸಲ್ಪಟ್ಟ ಬ್ರಾಹ್ಮಣನು ಮಾಂಸಭಕ್ಷಣೆಯನ್ನು ಮಾಡದಿದ್ದರೆ ಭ್ರಷ್ಟನಾಗುತ್ತಾನೆ.

(ವ್ಯಾಸಸ್ಮೃತಿ ೩-೫೬).

೨. ಶ್ರಾದ್ಧ ಮತ್ತು ಯಜ್ಞದಲ್ಲಿ ಕರೆಸಲ್ಪಟ್ಟ ಬ್ರಾಹ್ಮಣನು ಮಾಂಸಭಕ್ಷಣೆಯನ್ನು ಮಾಡದೆ ಇದ್ದರೆ ಯಜ್ಞಮಾಡಲ್ಪಟ್ಟ ಪಶುವಿನ ಶರೀರದಲ್ಲಿ ಎಷ್ಟು ರೋಮಗಳವೆಯೋ ಅಷ್ಟು ವರ್ಷಗಳು ಇವನು ನರಕದಲ್ಲಿ ಬೀಳುವನು. (ವಸಿಷ್ಠಸ್ಮೃತಿ, ೧೩-೩೧.)

೩. ಗೋವು ಮತ್ತು ಎತ್ತಿನ ಮಾಂಸವು ಭಕ್ಷಣೆಮಾಡುವದಿರುತ್ತದೆ. (ಆಪಸ್ತಂಬ ಗೃಹ ೧೦ನೇ ಸೂತ್ರ, ೫೦ನೇ ಪುಟ, ಲ. ೧೭ ಕಾಂ.)

೪. ಅತಿಥಿಪೂಜೆಯ ವೇಳೆಯಲ್ಲಿ ಮೇಧಮಾಡುವುದಕ್ಕೂ ಮತ್ತು ಶ್ರಾದ್ಧವಾಡುವುದಕ್ಕೂ ಗೋಹತ್ಯ ಮಾಡಬೇಕು.

(ಆಪಸ್ತಂಬಗೃಹ ೩ನೇ ಕಾಂಡ)

೫. ಶ್ರಾದ್ಧದಲ್ಲಿ ಗೋಮಾಂಸವನ್ನು ಭಕ್ಷಿಸಿದರೆ ಒಂದು ವರ್ಷದ ವರೆಗೂ ಪಿತೃಗಳು ತೃಪ್ತಿಯನ್ನು ಹೊಂದುವರು.

(ಆಪಸ್ತಂಬಗೃಹ ೨ನೇ ಸೂತ್ರ, ೭ನೇ ಪುಟ ೧೬–೧೭ ಕಾಂಡ).

೬. ಶ್ರಾದ್ಧ ಮತ್ತು ಯಜ್ಞಸ್ಥಳದಲ್ಲಿ ಕರೆಸಲ್ಪಟ್ಟ ಬ್ರಾಹ್ಮಣನು ಮಾಂಸಭಕ್ಷಣಮಾಡದೆ ಇದ್ದರೆ ಆ ಪಶುವಿನ ಶರೀರದಲ್ಲಿ ಎಷ್ಟು ಕೂದಲು ಗಳಿವೆಯೋ ಅಷ್ಟು ವರ್ಷಗಳು ಇವನು ನರಕದಲ್ಲಿರುವನು.

(ಕೂರ್ಮಪುರಾಣ ೧೭ನೇ ಅಧ್ಯಾಯ ೪೦ನೇ ಶ್ಲೋಕ)

೭. ಶ್ರಾದ್ಧಕಾಲದಲ್ಲಿ ವಿವಿಧ ಭೋಜನದಿಂದ ವಿವಿಧರೀತಿಯಲ್ಲಿ ಪಿತೃಗಳು ತೃಪ್ತಿಯನ್ನು ಹೊಂದುವರು. ಬ್ರಾಹ್ಮಣರಿಗೆ ಶ್ರಾದ್ಧಕಾಲ ದಲ್ಲಿ ಹಾಲನ್ನು ಕುಡಿಸಿದರೆ ಒಂದು ತಿಂಗಳುವರೆಗೆ ಪಿತೃಗಳು ತೃಪ್ತಿ ಯನ್ನು ಹೊಂದುವರು. ಮಾನುಗಳಿಂದ ಎರಡು ತಿಂಗಳು. ಚಿಗರಿಗಳಿಂದ ಮೂರುತಿಂಗಳು. ಕುರಿಮಾಂಸದಿಂದ ನಾಲ್ಕು ತಿಂಗಳು. ಪಕ್ಷಿಗಳಮಾಂಸ ದಿಂದ ಐದು ತಿಂಗಳು. ಹೋತನಮಾಂಸದಿಂದ ಆರು ತಿಂಗಳು. ಸಾರಂಗೆದ ಮಾಂಸದಿಂದ ಏಳು ತಿಂಗಳು. ಆರಣ್ಯಮೃಗೆದ ಮಾಂಸದಿಂದ ಎಂಟು ತಿಂಗಳು. ಕುರುಮೃಗೆದ ಮಾಂಸದಿಂದ ಒಂಭತ್ತು ತಿಂಗಳು. ವರಹದ ಮಾಂಸದಿಂದ ಹತ್ತು ತಿಂಗಳು. ಮೊಲದ ಮಾಂಸದಿಂದ ಹನ್ನೊಂದು ತಿಂಗಳು. ಈರೀತಿಯಾಗಿ ಪಿತೃಗಳು ತೃಪ್ತಿಯನ್ನು ಹೊಂದುವರು.

(ಗರುಡಪುರಾಣ ೯೯, ಅ.)

೮. ಕೂರ್ಮನ ಮಾಂಸದಿಂದ ಹನ್ನೊಂದು ತಿಂಗಳು ಮತ್ತು ಗೇಂಡಾವಮಾಂಸದಿಂದ ಹನ್ನೆರಡುವರ್ಷಗಳತನಕ ಪಿತೃಗಳು ತೃಪ್ತಿಯನ್ನು ಹೊಂದುವರು. (ಕೂರ್ಮಪುರಾಣ ೨೦, ಅ.

೯. ಶ್ರಾದ್ಧದಲ್ಲಿ ಮಾನಿನ ಮತ್ತು ಚಿಗರಿಯ ಮಾಂಸದಿಂದ ಪಿತೃಗಳ ಅಗಣಿತವರ್ಷಗಳವರೆಗೂ ತೃಪ್ತಿಯನ್ನು ಹೊಂದುವರು.
(ಮತ್ಸ್ಯಪುರಾಣ ೧೬, ಅ. ೩೦-೩೫.)

೧೦. ಅಗ್ನಿಪುರಾಣದ ೧೬೩ನೇ ಅಧ್ಯಾಯ ೩೦-೩೨ನೇ ಶ್ಲೋಕದಲ್ಲಿ ಗರುಡಪುರಾಣ ಮತ್ತು ಕೂರ್ಮಪುರಾಣಗಳಂತೆಯೇ ಇದೆ. ಆದರೆ ಸ್ವಲ್ಪ ವ್ಯತ್ಯಾಸವಿದೆ. ಯಾವನು ಗಯಕ್ಕೆ ಹೋಗಿ ಅಲ್ಲಿ ಶ್ರಾದ್ಧಕಾಲದಲ್ಲಿ ಗೇಂಡಾದಮಾಂಸವನ್ನು ಬ್ರಾಹ್ಮಣರಿಗೆ ಭೋಜನಮಾಡಿಸುವನೋ ಅವನ ಪಿತೃಗಳು ಅಗಣಿತವರ್ಷಗಳು ತೃಪ್ತಿಯನ್ನು ಹೊಂದುವರು.

೧೧. ವಾಯುಪುರಾಣದ ೨೧ನೇ ಅಧ್ಯಾಯ ೬-೯ನೇ ಶ್ಲೋಕಗಳಲ್ಲಿ ಮತ್ಸ್ಯಪುರಾಣದ ಪ್ರಕಾರವೇ ಬರೆಯಲ್ಪಟ್ಟಿರುತ್ತದೆ. ಅಲ್ಲಿ ಹೆಚ್ಚಿನ ವಿಷಯವೇನೆಂದರೆ;—ಶ್ರಾದ್ಧಕಾಲದಲ್ಲಿ ಗೇಂಡಾದ ಮಾಂಸವನ್ನು ಭಕ್ಷಿಸಿದರೆ ಹನ್ನೆರಡು ವರ್ಷಗಳೂ ಮತ್ತು ಕಾಡು ಚಿಗರಿಯ ಮಾಂಸದಿಂದಲೂ ಕರಿಯ ಹೋತನ ಮಾಂಸದಿಂದಲೂ ಮತ್ತು ಗೋವಿನಮಾಂಸದಿಂದಲೂ ಪಿತೃಗಳು ಅಗಣಿತ ವರ್ಷಗಳೂ ತೃಪ್ತಿಯನ್ನು ಹೊಂದುವರು.

೧೨. ಗೇಂಡಾದ ಮಾಂಸದಿಂದ ಪಿತೃಗಳು ತೃಪ್ತಿ ಹೊಂದುವರು.
(ವಿಷ್ಣುಪುರಾಣ ೩ನೇ ವಂಶ, ೧೬ ಅಧ್ಯಾಯ).

೧೩. ಶ್ರಾದ್ಧಕಾಲದಲ್ಲಿ ಉದ್ದವಾದ ಕೊಂಬುಗಳುಳ್ಳ ಗೇಂಡಾದ ಮಾಂಸವನ್ನು ಬ್ರಾಹ್ಮಣರಿಗೆ ತಿನಿಸಿದರೆ ಸೂರ್ಯನಿರುವವರೆಗೂ ಪಿತೃಗಳು ತೃಪ್ತಿಹೊಂದುತ್ತಾರೆ. (ಮಾರ್ಕಂಡೇಯ ಪುರಾಣ ೩೨ ಅ. ೩೩ನೇ ಶ್ಲೋಕ)

ಮೇಲಿನ ಗ್ರಂಥಾಧಾರಗಳಲ್ಲದೆ ಹಿಂದಿನ ಅವತಾರಿಗಳ ಮತ್ತು ಮುನಿಗಳ, ಋಷಿಗಳ ಕರ್ತವ್ಯಕರ್ಮಗಳಿಂದಲೂ ಈ ವಿಷಯವು ವಿಶದವಾಗಿ ತಿಳಿಯಬರುತ್ತದೆ.

೧. ಗಾರ್ಗ್ಯಋಷಿಯು ಮತ್ತು ಇವರ ಶಿಷ್ಯಮಂಡಲಿಯು ಶ್ರಾದ್ಧದಲ್ಲಿ ಗೋವಧೆಯನ್ನು ಮಾಡಿ ಅದರ ಮಾಂಸವನ್ನು ತಿಂದಿರುತ್ತಾರೆ.
(ಶಿವಪುರಾಣ ಧರ್ಮಸಂಹಿತೆ ೬೩ ಆ ॥)

೨. ಇದೇ ವಿಷಯವು ಮತ್ಸ್ಯಪುರಾಣದ ೨೦ನೇ ಅಧ್ಯಾಯದಲ್ಲಿಯೂ ಬರೆಯಲ್ಪಟ್ಟಿರುತ್ತದೆ.

೩. ಋಷ್ಯಶೃಂಗ ದೇವರಾಜನು ಒಂದು ದಿವಸ ಅನೇಕ ಪಶುಗಳ ಯಜ್ಞಮಾಡಿಸಿದನು. ಅವುಗಳ ರಕ್ತದಿಂದ ಚರಂಡಿ ಹಳ್ಳದ ನೀರು ಕೆಂಪಾಗಿ ಹರಿಯುತ್ತಿದ್ದಿತು.

(ಶಾಂತಿಪರ್ವ, ಮಹಾಭಾರತ ೨೯ ಅ. ಶ್ಲೋಕ ೧೨೨—೧೨೩.)

೪. ಬ್ರಹ್ಮಾದಿವರ್ತ ಪುರಾಣದಲ್ಲಿ ಬರೆದಿರುವದೇನೆಂದರೆ.—ಮನು ಮುನಿಸ್ವಾಮಿಯವರು ನರ್ಬದಾಹೊಳೆಯ ದಂಡಿಯಲ್ಲಿ ಸಾವಿರಾರು ಪಶುಗಳನ್ನು ಯಜ್ಞಮಾಡಿಸಿದರು. ಅದರಲ್ಲಿ ೫ ಲಕ್ಷ ಹಸುಗಳ ವಧೆಯನ್ನು ಮಾಡಿಸಿ ಮೂರುಕೋಟಿ ಜನರಿಗೆ ಭೋಜನ ಮಾಡಿಸಿದರು.

೫. ಮಹಾಭಾರತ ವನವರ್ಪದ ೨೦೭ನೇ ಅಧ್ಯಾಯದ ೮—೯ ನೇ ಶ್ಲೋಕಗಳಲ್ಲಿ ಇರುವದೇನೆಂದರೆ—ರಾಜನಾದ ವದಂತಿಯ ಪಾಕಶಾಲೆಯಲ್ಲಿ ದಿನಂಪ್ರತಿ ಎರಡುಸಾವಿರ ಪಶುಗಳು ಮತ್ತು ಎರಡುಸಾವಿರ ಹಸುಗಳು ವಧೆ ಮಾಡಲ್ಪಡುತ್ತಿದ್ದವು.

೬. ಸೀತಾದೇವಿಯು ಶ್ರೀರಾಮನೊಂದಿಗೆ ವನವಾಸಕ್ಕೆ ದಕ್ಷಿಣಕ್ಕೆ ಹೊರಟ ಕಾಲದಲ್ಲಿ ಗಂಗಾ ಹೊಳೆಯಮೇಲೆ ಬಂದು "ಎಲ್ಲೆ ಗಂಗೆಯೆ, ನಾವು ಈ ವನವಾಸದಿಂದ ಪುನಃ ಬಂದರೆ ಒಂದು ಸಾವಿರ ಗೋವುಗಳನ್ನು ವಧೆಮಾಡಿಸಿ ಔತಣ ಮಾಡಿಸುತ್ತೇನೆ. (ವಾಲ್ಮೀಕ ಪುರಾಣ, ಅಯೋಧ್ಯಾ ಖಾಂಡ ೫—೨೦ ಶ್ಲೋಕ)

ಯಜುರ್ವೇದದ ೨೪ ನೇ ಅಧ್ಯಾಯದ ಟೀಕೆಯಲ್ಲಿಯೂ ಇದು ಕಂಡು ಬರುತ್ತದೆ. ಮತ್ತು ಪ್ರಾಚೀನಕಾಲದ ಪುರಾಣಗಳಿಂದಲೂ ಇದಲ್ಲದೆ ವಶಿಷ್ಠ, ವಿಶ್ವಾಮಿತ್ರ ಮುಂತಾದ ಋಷಿಗಳಿಂದಲೂ ಈ ವಿಷಯವು ಕರ್ಕ ರೂಪಗಳಲ್ಲಿ ಕಂಡುಬಂದಿರುತ್ತದೆ. ಇದಕ್ಕೆ ವರ್ತಮಾನಕಾಲದಲ್ಲಿಯೂ ಅನೇಕ ದೊಡ್ಡ ಮನುಷ್ಯರುಗಳು ಹೇಳಿರುತ್ತಾರೆ.




ಹಿಂದೂಧರ್ಮದಲ್ಲಿ ಗೋವಧೆ

೧. ಲೋಕಮಾನ್ಯ ತಿಲಕರವರು ಬರೋಡೆಯ ಕಾಂಫರೆನ್ಸಿನಲ್ಲಿ, "ಎರಡುಸಾವಿರ ವರ್ಷಗಳ ಹಿಂದೆ ಹಿಂದೂಜನರು ತಮ್ಮ ಧರ್ಮಾನುಸಾರವಾಗಿ ಪಶುವಧೆಯನ್ನು ಮಾಡಿ ಭಕ್ಷಿಸುತ್ತಿದ್ದರು. ಅವುಗಳ ರಕ್ತದಿಂದ ನದಿಗಳು ಕೆಂಪಾಗುತ್ತಿದ್ದವು" ಎಂದು ಹೇಳಿದರು.

(ಕೇಸರಿ ಪತ್ರ, ಪೂನೆ, ತಾ|| ೧೩-೧೨-೧೯೦೪).

೨. ಪಂಡಿತ ಗಿರಿಧರಶರ್ಮ ಚತುರ್ವೇದಿಗಳು "ಯಜ್ಞದಲ್ಲಿ ಪಶುವಧೆ ಮತ್ತು ಮಾಂಸಭಕ್ಷಣ ಇಲ್ಲವೆಂದು ಹೇಳುವರು ಯಾರು? ಇದರ ಸಲುವಾಗಿಯೇ ಜೈನ ಮತ್ತು ಬೌದ್ಧಧರ್ಮದವರು ಸನಾತನ ಧರ್ಮಿಗಳಿಂದ ಏಕೆ ಬೇರೆಯಾಗುತ್ತಿದ್ದರು.

(ಸ್ಮೃತಿವೃತ ಪ್ರಭಾಕರ ಪ್ರಕಾಶಿಕೆ, ಸರಸ್ವತಿ ಭಂಡಾರ, ಕಾಶಿ, ಪುಟ ೫೭.)

ವಾಲ್ಮೀಕಿಋಷಿ ಇವರು ವಾಸಿಷ್ಠಮುನಿಗೆ ಔತಣಕೊಟ್ಟಾಗ ಎರಡು ಎತ್ತುಗಳು ವಧಮಾಡಿದ್ದರು. (ಉತ್ತಾಮಚರಿತ್ರ) ಮನುಜಿ ತನ್ನ ಸ್ಮೃತಿಯ ೫ನೇ ಅಧ್ಯಾಯದಲ್ಲಿ ಬರೆದಿರುತ್ತಾರೇನಂದರೆ,—ನಿಯುತ್ತಾಸ್ತೊ ಯಥಾ ನ್ಯಾಯಂಯೋಮಾಂವಂನಾತ್ತಿಮಾನವಃ ಸಪ್ರೇತ್ಯಪಶುತಾಂಯಾತಿ ಸಂಭವಾನೇಕವಿಂಶತಿಂ || ಅಂದರೆ ಯಾವನು ಧರ್ಮಕ್ಕೆ ಸರಿಯಾಗಿ ಯಜ್ಞವನ್ನು ಮಾಡಿ ಮಾಂಸವನ್ನು ತಿನ್ನುವದಿಲ್ಲವೋ ಅವನು ಇಪ್ಪತ್ತೊಂದು ಮಾಂಸಹಾರಿಕ ಪಶುಗಳಲ್ಲಿ ಜನ್ಮನ್ನು ಹೊಂದುತ್ತಾನೆ.

ಈ ಮೇಲಿನ ವಿಷಯಗಳನ್ನು ಸಕಲಾಧಾರದೊಂದಿಗೆ ನೋಡಿಯೂ ಹಿಂದೂ ಧರ್ಮದಲ್ಲಿ ಪಶುವಧೆ ಇಲ್ಲವೆಂದು ಹೇಳಿದರೆ ಧರ್ಮಜ್ಞಾನವಿಲ್ಲವೆಂದು ಹೇಳಬಹುದು. ಇದೇಪ್ರಕಾರ ಸಕಲ ಧರ್ಮಗಳಲ್ಲಿಯೂ ಕ್ರೈಸ್ತರ ಧರ್ಮದಲ್ಲಿಯೂ ಯಹೂದ್ಯರ ಧರ್ಮದಲ್ಲಿಯೂ ಪ್ರಪಂಚದ ಪ್ರಾಚೀನ ಧರ್ಮಗಳಲ್ಲೆಲ್ಲಾ ಯಜನ ಯಾಜನ ನಡೆಯುತ್ತಾ ಬಂದಿರುತ್ತದೆ. ಇದೇ ವಿಷಯಕ್ಕೆ ಕುರಾನಲ್ಲಿ ಓ ಭಕ್ತಿಯುಳ್ಳವರೆ! ನಾವು ನಿಮಗೋಸ್ಕರವೇ ಯಜನ ಯಾಜನವನ್ನು ನೇಮಿಸಿಲ್ಲಾ; ಆದರೆ ಹಿಂದಿನವರಿಗೂ ನೇಮಕ ಮಾಡಿರುತ್ತೇವೆ. ಪರಮಾತ್ಮನು ಯಜನದ ತತ್ವವನ್ನು ಬಹು ರಹಸ್ಯವಾಗಿ ತಿಳಿಸಿರುತ್ತಾನೆ.

ಲೈಂಯಾನಾಲಲ್ಲಾಹಲುಹೂವೊಹಾವಲಾದಿ ಮಾವ
ಹಾವಲಾ ಕಿಂಯನಾಲಹುತ್ತಕವಾಮಿನ್ ಕುಮ್
ಕಜಾಲಿಕ ಸಖ್ಖರ ಹಾಲಕು ಮ್ ಲೆ ತುಕಬ್ಬೈರು
ಲ್ಲಾಹ ಅಲಾ ಮಾಹದಾಕುಮ್.

ಅರ್ಥ:—ಯಜ್ಞದಿಂದ ಪಶುಗಳ ಮಾಂಸವು ಮತ್ತು ರಕ್ತವು ಪರಮಾತ್ಮನಿಗೆ ಸೇರುವುದಿಲ್ಲ; ಆದರೆ ಆತನಿಗೆ ತಮ್ಮ ಭಕ್ತಿಯು ಮಾತ್ರ ಸೇರುತ್ತದೆ. ಯಾಗ ಮಾಡಲ್ಪಡುವ ಪಶುವು ನಿಮಗೋಸ್ಕರ ಹೇಗೆ ಪ್ರಾಣವನ್ನುಕೊಡುತ್ತದೆಯೋ ಹಾಗೆಯೇ ತಾವೂ ಕೂಡ ಪರಮಾತ್ಮನ ಕಾರ್ಯದಲ್ಲಿ ಪ್ರಾಣವನ್ನು ಯಾಗಮಾಡುವುದಕ್ಕೆ ಸಿದ್ಧವಾಗಿರಬೇಕು.

ಯಜನ ಯಾಜನ ಸಂಬಂಧವಾದ ಅನೇಕ ವಿಷಯಗಳು ಮುಂದೆ ಬರುವುವು. ಯಾಗಮಾಡಲ್ಪಡುವ ಪಶುಗಳ ಸ್ವರೂಪಗಳು ಅಲ್ಲಿ ವಿವರಿಸಲ್ಪಡುವವು. ಯಜುರ್ವೇದದ ೨೪ನೇ ಅಧ್ಯಾಯದಲ್ಲಿ ಸಂಪೂರ್ಣವಾಗಿ ಕುರಾನಿನ ಬೋಧನೆಯೇ ಕಂಡುಬರುತ್ತದೆ.

---

## ೩. ಅಧ್ಯಾಯನ—೪. ಅಧ್ಯಾಪನ.

ಈಮೇಲಿನ ಕರ್ಮಗಳ ವಿಚಾರವಾಗಿ ಕುರಾನಿನಲ್ಲಿ ಅನೇಕ ಪ್ರಮಾಣಗಳುಂಟು–

ವಮಾಕಾನಲ್ ಮೋಮಿನೂನಲೆಯನ್ ಫೆರುಕ
ಪ್ಪಾ—ಫತಾಲಾನಫರಂಮಿನ್ ಕುಲ್ಲಿಫಿರ್ ಕಲೈನ್ಮಿ
ನ್ ಹೂತಾಯ ಫಶುಲ್ ಲಿಯತಫಕ್ಕ ಹೋಫಿದ್ದೀನೆ
ವಲೆಯುಂಜಿರು ಕೌಮಹೂ ಇಜಾರ ಜವು ಇಲೈ ಹಿಂ
ಲಾ ಅಲ್ಲಹುಂ ಯಹಜರೂನ್ (ಕು. ೯ನೇ ಅ. ೨೫. ಸಂ.)

ಅರ್ಥ:—ಓ ! ಭಕ್ತಿಯುಳ್ಳವರೆ ! ನೀವು ಕ್ಷತ್ರಿಯರಾಗಿಯೂ, ವೈಶ್ಯರಾಗಿಯೂ, ಶೂದ್ರರಾಗಿಯೂ ಇರಬಾರದು. ಕೆಲವು ಬ್ರಹ್ಮಜ್ಞಾನ ಬೋಧನೆಗೂ ನಿಂತು ಧರ್ಮವನ್ನು ಹರಡಬೇಕು. ಅಧ್ಯಯನ ಮಾಡುವ ಸಲುವಾಗಿಯೂ ನೇಮಗಳಿವೆ.

ಫಇಚಾಕರ ಅತಲ್ ಕುರಾನ, ಫಸತ
ಇಜಬಿಲ್ಲಾಹಿ ಮಿನಷ್‌ಷೈತಾನಿರ್ರಜೀಮ. (ಕು. ೧೨. ಅ. ೧೩. ಪ)

ಅರ್ಥ:—ಯಾವಾಗೆಲೂ ಅಧ್ಯಯನಮಾಡುವ ಕಾಲದಲ್ಲಿ ವಿಧಿದೂತನಿಂದ ದೂರವಾಗಲು ಪರಮಾತ್ಮನ ಸಾಯುಜ್ಯವನ್ನು ಬೇಡುತ್ತಾ ಪ್ರಾರಂಭ ಮಾಡಬೇಕು.

ಇಕರಾಬಿಸ್ ಮೆರಬ್ಬಿಕಲ್ಲಜಿ ಖಲಕ್
ಬಿಸ್ಮಿಲ್ಲಾಹಿರ್ರಹಮು ನಿರ್ರಹೀಮು. (ಕು. ೯೬. ಅ. ಸಂ, ೧.)

ಅರ್ಥ:—ಸರ್ವಕರ್ತನಾದ ನಿಮ್ಮ ಪ್ರಭುವಿನ ಸುನಾಮದಿಂದ ಪ್ರಾರಂಭಿಸು. ಅತನು ನಿನ್ನನ್ನು ಸೃಷ್ಟಿಸಿರುತ್ತಾನೆ. ಬ್ರಹ್ಮನಾಗಿ ಲೋಕವನ್ನು ಸೃಜಿಸುತ್ತಾ ಇದ್ದಾನೆ, ಮತ್ತು ಪಾಲಿಸುತ್ತಲೂ ಇದ್ದಾನೆ.
(ಅಧ್ಯಯನ ರೀತಿ.)

ಫಕರವುಮಾತಯಸ್ಯರಾವಿನಲ್‌ಕುರಾನ. (ಕು. ೭೩.ಅ. ೨. ಸಂ.)

ಅರ್ಥ:—ಕುರಾನಿನಲ್ಲಿ ನಿನಗೆ ಎಷ್ಟು ಭಾಗವು ಸಾಧ್ಯವೋ ಅಷ್ಟನ್ನೇ ಅಧ್ಯಯನ ಮಾಡು. ಅಧ್ಯಯನವೇಳೆ.—

ಯಾ ಅಯ್ಯೊಹಲ್ ಮುಜ್ಜಮ್ಮಿಲೊ
ಕುಮಿಲ್‌ಲೈಲಾ ಇಲ್ಲಾಕಲೀಲಾನಿಸ್
ಫಹು ಅವಿನ್‌ಕುಸ್‌ಮಿನ್‌ಹುಕಲೀಲಂ
ಅವಜಿದ್ ಅಲೈಹಿ ವರತ್ತಿಲಿಲ್‌ಕುರಾನ
ತಿರತೀಲಾ. (ಕು. ೭೩ನೇ ಅ. ೧. ಸಂ.)

ಅರ್ಥ:—ಎಲೈ ! ಕಂಬಳಿಯನ್ನು ಹೊದ್ದೆದಿರುವನೆ ! ರಾತ್ರಿ, ಸರು ರಾತ್ರೆಯಲ್ಲಿ ತಾರಕಪ್ರಾರ್ಥನೆಯನ್ನು ಮಾಡು. ಅರ್ಧರಾತ್ರೆಯವರೆಗೊ ನಿಂತು ನನ್ನನ್ನು ಜಪಿಸು. ಆಗೆ ಸನ್ನಾಧಾನ ಮನಸ್ಸಿನಿಂದ ಕುರಾನನ್ನು ಅಧ್ಯಯನ ಮಾಡು. ಪುನಃ—

ಲಾತಜಹರಬಿಲಾತಕವಲಾ
ತೊಖಾಫಿತಬಿಹಾವಬ'ತಗೆಬೈನಜಾಲಿ
ಕಸಬೀಲಾ. (ಕು. ಆ. ೧೮. ಸಂ. ೧೨.)

ಅರ್ಥ:—ಅಧ್ಯಯನದಲ್ಲಿಯೇ ಆಗಲಿ, ಪ್ರಾರ್ಥನೆಯಲ್ಲಿಯೇ ಆಗಲಿ ಕುರಾನನ್ನು ಅತಿ ಉಚ್ಚಕಂಠದಿಂದಲೂ ಮತ್ತು ಬಹು ತಗ್ಗಿದ ಧ್ವನಿಯಿಂದಲೂ ಓದಬೇಡ, ಆದರೆ ಮಧ್ಯಧ್ವನಿಯಿಂದ ಓದುವವನಾಗು.

ಅಕಿ ಮುಸ್ ಸೊಲಾ ತಲೆದು ಲುಕಿಕ್ಷಂಸೆ
ಇಲಾಗೆ ಸಕಿಲ್ ಲೈಲೆ ವ ಕುರಾನಲ್ ಫ
ಜರೆ ಇನ್ನ ಕುರಾನಲ್ ಫಜರೆ ಕಾನಮಷ್'ಹೂದಾ (ಕು. ೧೭. ಸ. ೯)

ಅರ್ಥ:—ಸೂರ್ಯನು ಹೊರಳಿದ ಲಾಗಾಯ್ತು ಕತ್ತಲೆಯಾಗುವವರೆಗೂ ಪ್ರಾರ್ಥನೆ ಮಾಡು. ಮತ್ತು ಮುಂಜಾನೆ ಕುರಾನನ್ನು ಅಧ್ಯಯನ ಮಾಡು. ಏಕೆಂದರೆ, ಪ್ರಾತಃಕಾಲದಲ್ಲಿ ಸರ್ವಶಕ್ತಿಗಳೂ ಸಾಕ್ಷಿಯಾಗಿರುವುವು.

ಇದೇರೀತಿಯಲ್ಲಿ ಅಧ್ಯಯನ ಅಧ್ಯಾಪನ ಸಲುವಾಗಿ ಅನೇಕ ಕಟ್ಟಳೆಗಳುಂಟು. ಅವುಗಳು ಎರಡನೆಯ ಭಾಗದಲ್ಲಿ ಬರುವುವು.

## ೪. ಅಧ್ಯಾಪನ.

ವಜಕ್ಕಿರ್ ಬಿಲ್ ಕುರಾನೆ ಮೈಂಯಖಾಫೊವಯಿದ.

ಅರ್ಥ:—ಯಾವನು ಪ್ರಳಯಕ್ಕೆ ಅಂಜುತ್ತಾನೋ ಅವನಿಗೆ ಕುರಾನಿನಿಂದ ಪರಮಾತ್ಮನ ಸ್ತೋತ್ರವನ್ನು ಬೋಧಿಸು.

## ೫. ದಾನ. ೬. ಪ್ರತಿಗ್ರಹ.

ಬ್ರಾಹ್ಮಣರ ಈ ಕರ್ಮಗಳು ಕುರಾನಿನಲ್ಲಿ ಸ್ಪಷ್ಟವಾಗಿ ವಿವರಿಸಲ್ಪಟ್ಟಿವೆ.—

ಲನ್ ತನಾಲುಲ್ ಬಿಠ್ರಹತ್ತಾ
ತುನ್ ಫೆಕು ಮಿಮ್ಮಾತೊಹಿಬ್ಬುನ. (ಕು. ಅ. ೩. ಸಂ. ೧೦).

ಅರ್ಥ:—ಯಾವವರೆಗೂ ತಮಗೆ ಅತಿಪ್ರೀತಿಯುಳ್ಳ ವಸ್ತುವನ್ನು ಪರಮಾತ್ಮನಿಗೆ ಒಪ್ಪಿಸುವುದಿಲ್ಲವೋ ಅಲ್ಲಿಯವರೆಗೆ ಪರಮಾತ್ಮನ ಪದವಿಗಳು ದೊರೆಯಲಾರವು.

ಅಲ್ಲ ಜೀನಯುನ್ ಫೆ ಕೂನ ಅಮ್
ವಾಲಹುಂ ಫೀಸಬೀಲಿಲ್ಲಾಹೆ ಕಮಸಲೆ
ಹಬ್ಬತಿನ್ ತನಬತತ್ ಸಬಾಸನಾ ಬಿಲಾ
ಫೀ ಕುಲ್ಲೆ ಸಂ ಬುಲತಿನ್ ಮೆಯ ತೊ
ಹಬ್ಬತಿನ್ ವಲ್ಲಾಹು ಯುಜಾಯಸ್ಪೊ
ಲೆ ಮ್ಯೆಂಯಷಾ. (ಕು. ಅ. ೨. ಸಂ. ೩೬)

ಅರ್ಥ:—ಯಾರು ಪರಮಾತ್ಮನ ಮಾರ್ಗದಲ್ಲಿ ದಾನಮಾಡುತ್ತಾರೋ ಅವರ ಫಲದ ಉದಾಹರಣೆ ಈರೀತಿಯುಂಟು.—ಒಂದು ಬೀಜದಿಂದ ಎಪ್ಪತ್ತು ತೆನೆಗಳು ಹೊರಟವು ಮತ್ತು ಒಂದೊಂದು ತೆನೆಯಲ್ಲಿಯೂ ನೂರು ನೂರು ಬೀಜಗಳು ಇವೆ. ಇಷ್ಟೇ ಅಲ್ಲ; ಪರಮಾತ್ಮನು ಇದಕ್ಕಿಂತಲೂ ಹೆಚ್ಚಾದ ಫಲವನ್ನು ಕೊಡುವನು. ಇದೇ ವಿಷಯವಾಗಿ ಅನೇಕ ಆಜ್ಞೆಗಳುಂಟು. ಪ್ರತಿಗ್ರಹದ ಸಲುವಾಗಿಯೂ ಪರಮಾತ್ಮನು ಹೇಳುತ್ತಾನೆ.—

ಲಿಲ್ ಫುಕರಾಯಿಲ್ ಲಜೀನವೊಹೆಸೆರು
ಫೀಸಬೀಲಿಲ್ಲಾಹೆ ಲಾಯಸ್ ತತಿಯೂನ
ಜರ್ಬನ್ ಫಿಲ್ ಅರ್ದಿಯಹಸಬೊಹುಮು
ಲ್ ಜಾಹೆಲೊ ಅಗನೀಯಾ ಮಿನ್ತ್ ತಾಪ್ಫುಪೆ.
ತಾರಿಫಹುಂಬಿಸೀಮಾಹುಂ ಲಾಯಸ್ ಅಲೂನ್
ನಾಸ ಇಲ್ಹಾಫಾ. (ಕು. ೨.ನೇ ಅಧ್ಯಾಯ ೨೭೩ನೇ ಸಂ.)

ಅರ್ಥ:—ಸಾಧುಗಳು ಪರಮಾತ್ಮನ ಕಾರ್ಯದಲ್ಲಿ ನಿರತರಾಗಿ ತೊಂದರೆಪಡುತ್ತಾ ಇರುತ್ತಾರೆ. ಮತ್ತು ಅವರು ಬೇಡದೆ ಇದ್ದಕಾರಣ ಮೂಢರು ಅವರನ್ನು ಶ್ರೀಮಂತರೆಂದು ತಿಳಿಯುತ್ತಾರೆ. ಆದರೆ ಇದನ್ನು ಅವರ ಮುಖಲಕ್ಷಣದಿಂದ ತಿಳಿಯಬಹುದು. ಇವರು ಜನರಲ್ಲಿ ಬೇಡುವದಿಲ್ಲಾ.

ಮತ್ತು

ಇನ್ನಮಸ್ ಸದ್‌ಕಾತೆ ಲಿಲ್ ಫುಕರಾಯೆ
ವಲ್ ಮಸಾಕೀನವಲ್ ಆಮೇಲೀನ ಅಲೈಹಾ
ವಲ್‌ಮುವಲ್ಲಿ ಫತೆಕುಲೂಬಹುಂ ವಫಿರ್
ರಿಕಾಬೆ ವಲ್‌ಗಾರಿಮಿಾನ ವಫಿಸಬೀಲಿಲ್ಲಾಹೆವ
ಬ್‌ನ್‌ಸ್ ಸಬೀಲ. (ಕು ೯ನೇ ಅಧ್ಯಾಯ ೮೦ನೇ ಸಂ.)

ಅರ್ಥ:—ನಿಜವಾಗಿ ದಾನವನ್ನು ಕೊಡುವುದು ಯಾರಿಗೆಂದರೆ, ಸಾಧುಗಳಿಗೆ, ನಿತ್ರಾಣವಾಗಿ ಕುಳಿತವರಿಗೆ, ದಾನ ಸಂಪಾದನೆಯವರಿಗೆ, ಹೊಸದಾಗಿ ಧರ್ಮದಲ್ಲಿ ಸೇರಿದವರಿಗೆ, ಬಂದೀಖಾನೆಯಿಂದ ಬಿಡಿಸುವಸಲುವಾಗಿ ಸಾಲಗಾರರಿಗೆ ಮತ್ತು ಧರ್ಮೋದ್ಧಾರಿಗಳಿಗೆ ಯಾವತ್ತೂ ದಾನವನ್ನು ಮಾಡಬೇಕು. ಮೇಲಿನ ಜನರೇ ಪ್ರತಿಗ್ರಹಕ್ಕೆ ಹಕ್ಕುದಾರರಾಗಿರುತ್ತಾರೆ. ನಂತರ

ಖುಜ್ ಮಿನ್ ಅಮವಾಲೆಹಿಂ
ಸದಕತನ್, ತುತಹ್ಹೆರುಹುಂವತು
ಜಕ್ಕೀಹಿಮ್ ಬೆಹಾ ವಸೊಲ್ಲಿ
ಅಲೈಹಿಮ್ ಇನ್ನ ಸೋಲಾತಕ
ಸಕನೂಲ್ ಹುಮ್. (ಕು. ಅ. ೯. ಸಂ. ೧೩)

ಅರ್ಥ:—ಜನರ ದ್ರವ್ಯದಿಂದ ದಾನವನ್ನು ತೆಗೆದುಕೋ. ಇದರಿಂದ ಅವರ ಮನೋಮಾಲಿನ್ಯವು ತೊಳೆದುಹೋದೀತು. ಆತ್ಮ ಪವಿತ್ರವಾದೀತು. ನೀನು ಅವರಿಗೋಸ್ಕರ ಪ್ರಾರ್ಥನೆಮಾಡು. ನಿನ್ನ ಪ್ರಾರ್ಥನೆಯಿಂದ ಅವರಿಗೆ ಶಾಂತಿಯು ಉಂಟಾದೀತು.

ದಾನ ಮತ್ತು ಪ್ರತಿಗ್ರಹದ ವಿಷಯಗಳನ್ನು ಇನ್ನೂ ಅನೇಕ ಪ್ರಮಾಣಗಳಲ್ಲಿ ಬರೆದಿದೆ. ಇನಲ್ಲದೆ ಕುರಾನಿನಲ್ಲಿಯೇ, ಮೇಲಿನ ಸಮಸ್ತ ಕರ್ಮಗಳನ್ನೂ ಒಂದೇ ವಾಕ್ಯದಲ್ಲಿ ಪರಮಾತ್ಮನು ಅಪ್ಪಣೆ ಕೊಡಿಸಿರುತ್ತಾನೆ.—

ಐನ್ಸೈಂಯಷ್ರ ಬೊಬೆಹಾ ಇಬಾ
ದುಲ್ಲಾಹಿ ಯುಫಜ್ಜೆರೂನಹಾ ತಫಃ
ಜೀರಾ ಯೂಪೂನ ಬಿನ್ನಜರಿ ವಯಕಾ
ಪೂನ ಯೌಮನ್ಕಾನ ಷರ್ರಹು ಮುಸ
ತತೀರಾ ವಯುತ'ಯೆಮುತ್ತಾ
ಮಾ ಆಲ್ಲಾಹುಬ್ಬೆಹಿ ಮಿಸ್ಕೀನಂವ
ವಯತೀ ಮಂವನ ಅಸೀರಾ. (ಕು. ಅ. ೭೬ ೧ನೇ ಸಂ.)

ಅರ್ಥ:—ಬ್ರಹ್ಮಜ್ಞಾನಿಗಳು ಯಾವ ಜಲಾಧಾರದಿಂದ ಜ್ಞಾನದಜಲವನ್ನು ಪಾನಮಾಡುತ್ತಾರೋ ಅದರಿಂದಲೇ ಪುನಃ ಕಾಲುವೆಗಳನ್ನು ತೆಗೆದು ಅಜ್ಞಾನದ ಜಲವನ್ನು ಕುಡಿಸುತ್ತಾರೆ. ಇವರು ತಮ್ಮ ಕಾರ್ಯವನ್ನು ಪೂರೈಸುತ್ತಾರೆ. ಮತ್ತು ಪುನರ್ಜನ್ಮದ ದಿವಸವನ್ನು ನೆನಪುಮಾಡಿ ಅಂಜುತ್ತಾರೆ. ಇದರ ರಹಸ್ಯತತ್ವವು ದೇದೀಪ್ಯಮಾನವಾಗಿರುತ್ತದೆ. ಅವರು ಅತಿಪ್ರೀತಿಯಿಂದ ನಿತ್ರಾಣಿಗಳಿಗೆ ಮತ್ತು ಶತೃಗಳ ಕೈಯ್ಯಲ್ಲಿ ಸಿಕ್ಕಿದವರಿಗೆ ಊಟವನ್ನು ಕೊಡುತ್ತಾರೆ.

ಬ್ರಾಹ್ಮಣರು ಆರು ಕರ್ಮಗಳ ಸಲುವಾಗಿ ಕುರಾನಿನಲ್ಲಿ ಮೂರು ನೂರ ಮುನ್ನೂತ್ತು ಕಟ್ಟಳೆಗಳುಂಟು. ಇವು ಮುಂದಿನ ಭಾಗದಲ್ಲಿ ವಿವರಿಸಲ್ಪಡುವವು.

## ಕ್ಷತ್ರಿಯ ವರ್ಣವು.

ಕ್ಷತ್ರಿಯರಿಗೆ—ಯಜನ, ಅಧ್ಯಯನ, ದಾನವೆಂಬ ಮೂರು ಕರ್ಮಗಳಿರುತ್ತವೆ. ಈ ಕರ್ಮಗಳ ಸಲುವಾಗಿ ಕುರಾನಿನಲ್ಲಿ ಐದುನೂರು ಕಟ್ಟಳೆಗಳುಂಟು. ಅವುಗಳಿಂದ ಕೆಲವು ಕಟ್ಟಳೆಗಳನ್ನು ಬರೆಯುತ್ತೇನೆ.

ಕುತೆಬಾ ಅಲ್ಲೆ ಕಮುಲ್ ಕಿತಾಲ.

(ಕು. ೨ ಅ. ೨೬ ಸಂ.)

ಅರ್ಥ:—ತಮ್ಮ ಮೇಲೆ ನಾನು ಯುದ್ಧವನ್ನು ನೇಮಿಸಿರುತ್ತೇನೆ. ಆದಪ್ರಯುಕ್ತ ನೀವು ಯುದ್ಧವನ್ನು ಮಾಡಲೇಬೇಕು.

ಪುನಃ

ಇನ್ನಲ್ಲಾಹಯು ಹಿಬ್ಬುಲ್ ಲಜೀನಯು
ಕಾತಿಲೂನ ಫಿಸಬೀಲಿಲ್ಲಾಹೆ ಸಫ್ಫನ್‌ಕ ಅನ್ನ
ಹುಂಬುನಯಾನುಂ ಮರಸೂಸ.

(ಕು. ಅ. ೬೨ ಸಂ. ೧)

ಅರ್ಥ:—ಪರಮಾತ್ಮನ ಧರ್ಮ ಸಲುವಾಗಿ ಯಾರು ಯುದ್ಧ ಮಾಡುತ್ತಾರೋ ಅಂಥವರನ್ನು ಪರಮಾತ್ಮನು ಅತಿಪ್ರೀತಿಯಿಂದ ನೋಡುತ್ತಾನೆ. ಇವರು ಯುದ್ಧಕ್ಷೇತ್ರದಲ್ಲಿ (ಭಕ್ತರು) ಸೀಸಾ ಕಾಯಿಸಿಬಿಟ್ಟು ಕಟ್ಟಿದ ಗೋಡೆಯಪ್ರಕಾರ ನಿಲ್ಲುತ್ತಾರೆ.

ವಲ್ ಲಜೀನ ಆ ಮನುವಹಾಜರು
ವ ಜಾಹಿದು ಫೀಸ ಬೀಲಿಲ್ಲಾ ಹೆವಲ್
ಲಜೀನ ಆವು ವನಸ್ರು ವುಲಾಯಕ
ಹುಮುಲ್ ಮೋಮಿನೂ ನಹಕ್ಕಾಲಹೂ
ಮಗ ಫೆರತಂವವರಿಜ್ ಕುನ್ ಕರೀಮ (ಕು. ಅ. ೪ ಸಂ. ೧೦)

ಅರ್ಥ:—ಯಾರು ಭವಿಗಳಿಂದ ತೊಂದರೆಪಟ್ಟವರಾಗಿ ಆ ಸ್ಥಳವನ್ನು ಬಿಟ್ಟುಹೋಗುತ್ತಾರೋ ಮತ್ತು ಯಾರು ಪರಮಾತ್ಮನ ಮಾರ್ಗದಲ್ಲಿ ಯುದ್ಧ ಮಾಡುತ್ತಾರೋ ಮತ್ತು ಯಾರು ತಮ್ಮ ಪಂಗಡದ ಜನರಿಗೆ ಸ್ಥಳವನ್ನೂ ಒತ್ತಾಸೆಯನ್ನೂ ಕೊಡುತ್ತಾರೋ ಅವರೇ ನಿಜ ಭಕ್ತರು. ಇವರ ಸಲುವಾಗಿ ಕ್ಷಮೆಯುಂಟು ಮತ್ತು ಉತ್ತಮವಾದ ಆಹಾರವು ಉಂಟು.

ಈ ರೀತಿಯಲ್ಲಿ ಕ್ಷತ್ರಿಯರಿಗೆ ಕುರಾನಿನಲ್ಲಿ ಐದುನೂರು ಕಟ್ಟಳೆಗಳುಂಟು.

## ವೈಶ್ಯವರ್ಣವು.

ವೈಶ್ಯರ ಸಲುವಾಗಿ ಪರಮಾತ್ಮನು ಕುರಾನಿನಲ್ಲಿ ನೂರಾಯಿಪ್ಪತ್ತು ಕಟ್ಟಳೆಗಳನ್ನು ವಿವರಿಸಿರುತ್ತಾನೆ. ಅವುಗಳಲ್ಲಿ ಕೆಲವನ್ನು ಮಾತ್ರ ಕೆಳಗೆ ವಿವರಿಸುವುದು ಅವಶ್ಯಕವಾಗಿ ಇರುತ್ತದೆ.

### ಅಧ್ಯಯನ ಮತ್ತು ದಾನ.

ರಿಜಾಲುನ್ ಲಾತುಲ್‌ಹೀಹಿಮ್ ತಿಜಾರತುನ್
ವಲಾಬಯ ಅಂಜಿಕ್‌ರಿಲ್ಲಾಹಿವ ಇಕಾಮಿ
ಸ್‌ಸಲಾತಿವ ಈತಾಯಿಜ್‌ಜಕಾತಿ
ವಮುಖಾಫೂನಯೌಮನ್ ತತಕಲ್ಲಬೊ
ಫೀಹಿಲ್ ಕುಲೂಬಿವಲ್ ಅಬಸಾರಲಿಯ
ಜಿಯಹುಮುಲ್ಲಾಹು ಅಹಸನಮಾಅಮಿಲುವಯಜೀದಹುಂ
ಮಿನ್ ಫಜಲಿಹಿವಲ್ಲಾಹು ಯರ್‌ಜಕೊಮ
ಯ್ಶೆಂ ಯಹ್ಷಾಬಿಗೈರಿಹಿಸಾಬ್ (ಕು. ಆ. ೨೪. ಸಂ. ೫.)

ಅರ್ಥ:—ನಿಜವೈಶ್ಯರ ವ್ಯವಹಾರವು ಯಾವಾಗಲೂ ಭಕ್ತಿಮಾರ್ಗವನ್ನು ತಪ್ಪಿಸುವದಿಲ್ಲಾ. ನಿಜ ವೈಶ್ಯರು ಯಾವಾಗಲೂ ಪರಮಾತ್ಮನನ್ನು ತಮ್ಮ ವ್ಯವಹಾರದಲ್ಲಿ ಜ್ಞಾನಧ್ಯಾನದಿಂದ ಹೊಂದಿ ಇರುತ್ತಾರೆ. ಇವರು ಅಧ್ಯಯನ ಮಾಡುತ್ತಾರೆ. ಮತ್ತು ದಾನವನ್ನು ಕೊಡುತ್ತಾರೆ. ಇವರು ತಮ್ಮ ಅಂತ್ಯವನ್ನು ತಿಳಿದು ಪರಮಾತ್ಮನಿಗೆ ಅಂಜುತ್ತಾರೆ. ಆ ಕಾಲದಲ್ಲಿ ಇವರ ಕಣ್ಣುಗಳು ತಿರುಗುತ್ತವೆ. ಹೃದಯವು ಕಂಪಿಸುತ್ತದೆ. ಆ ದಿವಸ ಇವರು ತಮ್ಮ ನ್ಯಾಯವಾದ ವ್ಯವಹಾರದ ಉತ್ತಮಫಲವನ್ನು ಹೊಂದುತ್ತಾರೆ. ಪರಮಾತ್ಮನು ಯಾರಮೇಲೆ ಕರುಣೆಯನ್ನು ಇಡುತ್ತಾನೋ ಅಂಥವರಿಗೆ ಲೆಕ್ಕವಿಲ್ಲದಷ್ಟನ್ನು ಕೊಡುತ್ತಾನೆ ಮತ್ತು ಘನತೆಯನ್ನು ದಯಪಾಲಿಸುತ್ತಾನೆ.

ಕುರಾನು ಈವಿಧದಲ್ಲಿ ಇವರಸಲುವಾಗಿ ಅನೇಕ ಪ್ರಮಾಣಗಳನ್ನು ವದಗಿಸುತ್ತದೆ. ಇದಲ್ಲದೆ.

ವ ಅವಫುಲ್ ಕೈಲ ಇಜಾಕಿಲ್‌ತುಮ್
ವಜಿನುಬಿಲ್‌ಕಿಸ್ತಾಸಿಲ್ ಮುಸ್ತಕೀಮ. (ಕು. ಅ. ೧೭. ಸಂ. ೪.)

ಅರ್ಥ:—ಅಳತೆಮಾಡುವಕಾಲದಲ್ಲಿ ಚನ್ನಾಗಿ ನ್ಯಾಯರೀತಿಯಲ್ಲಿ ಅಳತೆಮಾಡು. ದಂಡಿಗೆಯನ್ನು ನೇರವಾಗಿ ಹಿಡಿದು ತೂಕಮಾಡು.

ಲಾತಾಕುಲು ಅಮ್ ವಾಲಕುಮ್.
ಬೈನಕಮ್ ಬಿಲ್‌ಬಾತಿಲೆ. (ಕು. ಅ. ೨. ಸಂಧಿ ೨೩.)

ಅರ್ಥ:—ಮೋಸಮಾಡಿ ಹೊಟ್ಟೆಯನ್ನು ಹೊರೆಯಬೇಡಿ.

ಅಲ್ಲಜೀನಯಾಕುಲೂನರ್ರಿಬಾಲಾ
ಯಕೂಮೂನಇಲ್ಲಾಕಮಾಯಕೂಮುಲ್
ಲಜಿಯತಖಬ್ಬತಹುಷ್‌ಷೈತಾನು
ಮಿನಲ್ ಮಸ್ ಜಾಲೆಕಾಬೆಅನ್ನ
ಹುಂಕಾಲು ಇನ್ನಮುಲ್ ಬಯೆಮಿಸ್
ಲುರ್ರಿಬಾವ ಅಹಲ್‌ಲಲ್ಲಾಹುಲ್‌ಬಯ
ವಹರ್ರಮುರ್ರಿಬಾ. (ಕು. ಅ. ೨. ಸಂ. ೩೮.)

ಅರ್ಥ:—ಬಡ್ಡಿಯನ್ನು ತಿನ್ನುವರ ಸ್ಥಿತಿಯು ಪಿಶಾಚಿ ಹಿಡಿದವರಹಾಗಿರುತ್ತದೆ. ಇದಕ್ಕೆ ಕಾರಣವೇನಂದರೆ, ಅವರು "ವ್ಯಾಪಾರವು ಈಪ್ರಕಾರವು" ಎಂದು ಹೇಳುತ್ತಾರೆ. ಅವರಿಗೆ ತಿಳಿದಿರಲಿ. ಪರಮಾತ್ಮನು ವ್ಯಾಪಾರವನ್ನು ಉತ್ತಮ ಮಾಡಿರುತ್ತಾನೆ. ಮತ್ತು ಬಡ್ಡಿಯನ್ನು ನಿಷೇಧಮಾಡಿರುತ್ತಾನೆ.

ವ ಇಜಾಕುಲ್‌ತುಮ್‌ಘಾದಿಲು
ವಲೌಕಾನಜಾಕುರ್‌ಬ. (ಕು. ೬ನೇ ಅ. ಸಂ. ೧೯.)

ಅರ್ಥ:—ಯಾವಾಗಲೂ ನ್ಯಾಯಪಕ್ಷಪಾತಿಯಾಗಿಯೇ ಮಾತಾಡಬೇಕು. ತಮ್ಮ ಅಣ್ಣತಮ್ಮಂದಿರೇ ಆಗಲಿ ನ್ಯಾಯವನ್ನು ಬಿಡಬಾರದು.

ಇದೇರೀತಿಯಲ್ಲಿ ವೈಶರಸಲುವಾಗಿ ಬಹು ಪ್ರಮಾಣಗಳಿವೆ. ಇವು ಗಳೆಲ್ಲವೂ ಎರಡನೇ ಭಾಗದಲ್ಲಿ ಬಂದಾವು.

## ಶೂದ್ರರ ವರ್ಣವು.

ಶೂದ್ರರಿಗೆ ಕುರಾನಿನಲ್ಲಿ ಅನೇಕ ಪ್ರಮಾಣಗಳುಂಟು. ಅವುಗಳಲ್ಲಿ ದಾನವೇ ಮುಖ್ಯವಾದ ಕರ್ಮವಾಗಿದೆ.

ಯಾ ಅಯ್ಯುಹಲ್ ಲಜೀನ ಆಮನೂ
ಅತಿಯುಲ್ಲಾ ವ ಅತಿಯುರ್ರಸೂಲ
ವವುಲಿಲ್ ಅಮರೆ ಮಿನ್‌ಕುಮ್
ಫಿಇನ್ ತನಾಜೈತುಮ್‌ಫಿಷಯ್ಯ
ನ್‌ಪರುದ್ದೂಹು ಇಲಲ್ಲಾಹೆವರ್ರಸೂಲ. (ಕು. ೪. ೮. ಸಂಧಿ)

ಅರ್ಥ:—ಎಲೈ ಭಕ್ತಿಯುಳ್ಳವರೆ, ಪರಮಾತ್ಮನ ಮತ್ತು ಅವತಾರೀಕ ಪುರುಷನ ಆಜ್ಞೆಯಪ್ರಕಾರವೂ ಮತ್ತು ತಮಗೆ ಒಡೆಯನಾದವನ ಆಜ್ಞೆ ಯಪ್ರಕಾರವೂ ನಡೆದು, ತಮ್ಮ ಯಾವ ನ್ಯಾಯವನ್ನೇ ಆಗಲಿ ಪರಮಾತ್ಮನ ಮತ್ತು ಅವತಾರೀಕಪುರುಷನ ಆಪ್ಪಣೆಯಂತೆ ತೀರಿಸಿರಿ.

ಪಂತೆಷರುಪಿಲ್ ಆರ್ದೆವಬ್ ತಗು
ಮಿನ್ ಫಜಲಿಲ್ಲಾಹವಜ್‌ಕುರುಲ್ಲಾಹ
ಕಸೀರುಲ್‌ಲಾಲ್ಲಕುಮ್‌ತುಫ್‌ಲೆಹೂನ (ಕು. ೬೩. ಅ. ಸಂ. ೨)

ಅರ್ಥ:—ಭೂಮಿಯಮೇಲೆ ಬೇಕಾದಹಾಗೆ ಸಂಚಾರಮಾಡಿರಿ ಮತ್ತು ಬೇಕಾದ ಕಾರ್ಯಗಳನ್ನು ಮಾಡಿರಿ. ಆದರೆ ಪರಮಾತ್ಮನ ಜ್ಞಾನಧ್ಯಾನದಲ್ಲಿ ಸದಾ ಇರಬೇಕು. ಇದರಿಂದ ನಿಮಗೆ ಮುಕ್ತಿ ದೊರೆಯುವುದು.

ಯಾ ಅಯ್ಯೊಹಲ್ ಲಜೀನ ಅಮನು
ಅನ್ ಫೆಕುಮಿನ್ ತೈಯಬಾತೆ
ಮಾಕಸಬ್ ತುಮ್ ನಮಿನ್
ಮಾ ಅಖ್ರ ಜ್ನಾಲಕುಮ ಮಿ
ನಲ್ ಅರ್ದ್. (ಕು. ೨ ಅ. ಸಂ. ೩೭).

ಅರ್ಥ:—ಎಲೈ ಭಕ್ತಿಯುಳ್ಳವರೇ ! ತಮ್ಮ ಪವಿತ್ರವಾದ ಸಂಬಳ ದಲ್ಲಿ ದಾನಮಾಡಿರಿ. ಮತ್ತು ಏನೇನು ನಾವು ನಿಮಗೋಸ್ಕರ ಭೂಮಿಯ ಮೇಲೆ ಹುಟ್ಟಿಸಿರುತ್ತೇವೆಯೋ ಅವುಗಳಿಂದ ದಾನಮಾಡಿರಿ.

ಇದೇರೀತಿಯಲ್ಲಿ ಶೂದ್ರರಿಗೆ ಬೇಕಾದ ಸರ್ವ ಕಟ್ಟಳೆಗಳೂ ಕುರಾನಿನಲ್ಲಿ ಸಂಪೂರ್ಣವಾಗಿ ಕಂಡುಬರುತ್ತವೆ.

ಈ ಪ್ರಮಾಣದ ಸಾಧನೆಯಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಬೋಧನೆಗಳು ಅವಿಚ್ಛಿನ್ನವಾಗಿ ತೇರ್ಗಡೆಯನ್ನು ಹೊಂದಿರುತ್ತವೆ. ಈ ನಾಲ್ಕು ವರ್ಣಗಳಿಗೂ ಸರಿಯಾಗಿ ನಡೆದಿರುವವರು ಹಜರತ್ ಮಹಮ್ಮದರ ಹೊರತು ಬೇರೆಯವರಿಲ್ಲವು. ಕಾರಣವೇನೆಂದರೆ, ಇವರೇ ಪೂರ್ವದಿಂದಲೂ ತಾವೆ ಅವತರಿಸುತ್ತಾ ಬಂದು ಬೇರೆ ಬೇರೆ ಜನಾಂಗಗಳಲ್ಲಿ ಬೇರೇ ಬೇರೆ ಧರ್ಮಗಳನ್ನು ಬೋಧಿಸಿ ಕಡೆಗೆ ಅವುಗಳೆಲ್ಲವನ್ನೂ ಒಂದಾಗಿ ಕೂಡಿಸುವ ಸಲುವಾಗಿ ಜಗದ್ಗುರುವಿನ ರೂಪದಲ್ಲಿ ಕಾಣಿಸಿಕೊಂಡಿರುತ್ತಾರೆ. ಮತ್ತು ಸರ್ವವರ್ಣಗಳಿಗೂ ಬೋಧಿಸಿ ಸರ್ವವರ್ಣಗಳ ಧರ್ಮಗಳನ್ನೂ ತಾವೇ ಅನುಸರಿಸಿ ಮೇಲ್ಪಂಗ್ತಿಯಾಗಿರುತ್ತಾರೆ.

---

## ಎಂಟನೆಯ ಪ್ರಮಾಣವು

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||

ಜಗದ್ಗುರುವು ವಿಶೇಷವಾಗಿ ಇತರ ಮತಗಳಲ್ಲಿರುವ ಲಲಾಟ ಲೇಪನ

ಚಿನ್ಹೆಗಳನ್ನು ಹಚ್ಚದೆ, ಲಲಾಟ ಲೇಪನಗಳಿಂದುಂಟಾಗಿರುವ ದುಃಖಗಳಿಂದ ಜನರನ್ನು ದೂರಮಾಡಿ ಶಾಂತಿಯನ್ನುಂಟು ಮಾಡಬೇಕು.

ಈ ಪ್ರಮಾಣವನ್ನು ಪೂರ್ತಿಗೊಳಿಸಿದವರು ಹಜರತ್ ಮಹಮ್ಮದ್ ಪೈಗಂಬರರೇ ಆಗಿರುತ್ತಾರೆ. ಈ ಗುಹೇಶ್ವರನು ತಪವಂಗೈಯ್ಯುತ್ತಿದ್ದ ಹಿರಾಗುಹೆಯಲ್ಲಿ ಓಂಕಾರೋಕ್ತಿಯಿಂದ ದೈವಾಜ್ಞೆಯನ್ನು ತಿಳಿದಕೂಡಲೆ ಹೊರಗೆ ಬಂದು ಮಧ್ಯಪಟ್ಟಣದಲ್ಲಿ ನಿಂತು ಸಾರಿದ್ದೇನೆಂದರೆ–" ಎಲೈ ಜನರೆ, ನಾನು ಹಿಂದಿನ ಪುರಾತರಪ್ರಕಾರ ಅಥವ ಅವತಾರಿಗಳಪ್ರಕಾರ ವಿಶೇಷವಾಗಿ ಯಾವಜನಾಂಗದ ಕಡೆಗೂ ಬಂದಿಲ್ಲಾ ; ಆದರೆ ಪರಮಾತ್ಮನು ನನ್ನನ್ನು ಪ್ರಪಂಚದ ಸರ್ವಜನಾಂಗಗಳ ಆತ್ಮರಕ್ಷಣೆಗೆ ಕಳುಹಿಸಿರುತ್ತಾನೆ. ಮತ್ತು ನನಗೆ ವಿಶೇಷವಾಗಿ ಯಾವ ಧರ್ಮವೂ, ಯಾವ ಗ್ರಂಥವೂ, ಯಾವ ಪ್ರಾರ್ಥನೆಯೂ, ಯಾವ ಲಲಾಟ ಚಿನ್ಹೆಯೂ ಇಲ್ಲದೆ, ನಾನು ಸರ್ವ ಧರ್ಮಗಳ ಬೀಜವನ್ನೂ, ಸರ್ವ ದೇವೋಕ್ತ ಗ್ರಂಥಗಳ ಸಾರಾಂಶಗಳನ್ನೂ, ಸರ್ವ ಮೂರ್ತಿಗಳ ಪೂಜಸ್ಥಾನವಾದ ನಿರಾಕಾರಸ್ಥಾನವನ್ನೂ, ಸರ್ವ ಅವತಾರಿಗಳ ಆತ್ಮಪದಾಂತಗಳನ್ನೂ ವಿಶೇಷವಾಗಿ ಹೊಂದಿ ಅವರೆಲ್ಲರಿಗೂ ಬೀಜಪ್ರಾಯನಾಗಿ ಬಂದಿರುತ್ತೇನೆ. ಮಾನವಜಾತಿಗೆ ಮೂಲಪುರುಷನಾದ ಆದಿ ಮಾನವನು ನನಗಿಂತಲೂ ಮೊದಲು ಇದ್ದಾಗ್ಯೂ ಮತ್ತು ನನಗೆ ತಂದೆಯಾಗಿ ಪರಿಣಮಿಸಿ ಇದ್ದರೂ ಪೂರ್ವದಲ್ಲಿ ನನ್ನ ಆತ್ಮದ ಅಂಶವೇ ಆಗಿರುತ್ತಾನೆ. ನ್ಯಾಯತಃ ನಾನೇ ಆತನಿಗೆ ತಂದೆಯಾಗಿರುತ್ತೇನೆ. ಇದರ ಸಲುವಾಗಿಯೇ

ಲೌಕಾನಮೂಸಾವ ಈಸಾಹೈಯೈಯನೆ
ಲಮಾವಸಯ ಹುಮಾ ಇಲ್‌ಲೆತ್ತೆಬಾಯಿ.

(ಹ. ಇಬ್ನೆಕಸೀರ್ ಭಾಗ ೩, ಪು ೨೪೬)

ಅರ್ಥ:—ಮೂಸಪೈಗಂಬರರೆ, ಆಗಲಿ, ಈಸ ಪೈಗಂಬರರೆ ಆಗಲಿ, ನನ್ನ ಕಾಲದಲ್ಲಿ ಇದ್ದಿದ್ದರೆ ನನ್ನ ಭಕ್ತರಾಗಿಯೇ ದುಡಿಯುತ್ತಿದ್ದರು ಎಂದು ಹಜರತ್ ಮಹಮ್ಮದರು ಹೇಳಿದರು. ಮತ್ತು ' ನಾನು ಪ್ರಪಂಚಕ್ಕೆಲ್ಲಾ ಬಬ್ಬನಾಗಿ ಸರ್ವರ ದುಃಖಾಸೂಯೆಗಳನ್ನು ದೂರಮಾಡಲು ಬೇಕಾದ ಸಲ

ಕರಣಗಳೊಂದಿಗೆ ಸಕಲ ಧರ್ಮಾಭಿಮಾನಿಯಾಗಿ, ದುರಭಿಮಾನರಹಿತನಾಗಿ, ಒಬ್ಬನಾದ ಪರಮಾತ್ಮನಿಗೆ ಸಾಕ್ಷಿಯಾಗಿ ಅವತರಿಸಿ ಬಂದು ಇರುತ್ತೇನೆ. ಹಿಂದೆ ಭಿನ್ನಭಿನ್ನ ಸ್ವರೂಪಗಳೊಂದಿಗೆ ಅವತರಿಸಿದ ಅವತಾರಿಗಳ ಭಕ್ತರ ಗುರುತಿಗಾಗಿ ಲಲಾಟಲೇಪನಗಳು ಇದ್ದುವು. ವಿಷ್ಣುಶಕ್ತಿಪ್ರಸನ್ನರಾದ ಅವತಾರಿಗಳ ಭಕ್ತಸಮೂಹದ ಪ್ರಸನ್ನತೆಗಾಗಿ ತಿರುವಳಿ, ಚಕ್ರ, ಶಂಖ, ಗಧಾ, ಮುದ್ರೆಗಳು ಗೋಚರವಾದವು. ಲಕ್ಷ್ಮೀಶಕ್ತಿಯ ಯಶಸ್ಸಿಗಾಗಿ ತಿಲಕ, ಕುಂಕುಮವ ಚಿನ್ಹೆಗಳು ತೋರಿದವು. ಶಿವಶಕ್ತಿಯ ಪ್ರಸನ್ನತೆಗಾಗಿ ವಿಭೂತಿ, ಗಂಧ, ಅಕ್ಷತೆ, ಕಾಪಾಲಿಕ ಮುಂತಾದ ಚಿನ್ಹೆಗಳು ಬಂದವು. ನಾನಾದರೋ ಸರ್ವ ಅವತಾರಿಗಳ ಸರ್ವಶಕ್ತಿಗಳ ಪ್ರಸನ್ನತೆಗಾಗಿ ಅವತರಿಸಿರುವುದರಿಂದ ನನಗೆ ಯಾವ ಲಲಾಟಚಿನ್ಹೆಯೂ ಇಲ್ಲದೆ ನಿರಾಕಾರಸ್ವರೂಪನಾದ ಪರಮಾತ್ಮನಿಗೆ ಸಾಕ್ಷಿಭೂತನಂತೆ ಅವತರಿಸಿ ಇರುತ್ತೇನೆ" ಎಂದು ಸಾರಿ ಹೇಳಿರುತ್ತಾರೆ. ಇದರ ಸಲುವಾಗಿಯೇ ಹಜರತ್ ಮಹಮ್ಮದ್ ಪೈಗಂಬರರ ಭಕ್ತರ ಹಣೆಗಳು ಲೇಪನರಹಿತವಾಗಿ ನಿರಾಕಾರಸ್ಥಾನಕ್ಕೆ ಸ್ವಾಭಾವಿಕವಾದ ಸಾಕ್ಷಿಯನ್ನು ಒದಗಿಸುತ್ತವೆ. ಈವಿಧವಾದ ಲಲಾಟಲೇಪನಗಳಿಂದ ಪ್ರಪಂಚದಲ್ಲಿ ಭೇದಗಳುಂಟಾಗಿ ಅಸೂಯೆಗಳು ಹೆಚ್ಚಿನಾಶಕ್ಕೆ ಕಾರಣವಾಗಿದೆ. ಇಂಥಾ ದುಃಖವನ್ನು ಹಜರತ್ ಮಹಮ್ಮದರು ಜಗದ್ಗುರುವಿನ ರೂಪದಲ್ಲಿ ಪ್ರಸನ್ನರಾಗಿ ದೂರಮಾಡಿ ಶಾಂತಿಯನ್ನುಂಟುಮಾಡಿರುತ್ತಾರೆ. ಕನ್ಯೆಯು ಹೇಗೆ ಋತುಮತಿಯಾಗುವುದಕ್ಕೆ ಮುಂಚೆ ಗೊಂಬೆಯಾಟಗಳನ್ನು ಆಡುತ್ತಿದ್ದು ಋತುಮತಿಯಾದನಂತರ ಗೊಂಬೆಯಾಟವನ್ನು ಬಿಟ್ಟು ತನ್ನ ನಿಜತ್ವವನ್ನು ತಿಳಿಯುತ್ತಾಳೊ, ಹಾಗೆಯೇ ಈ ಲಲಾಟಲೇಪಕರು ತಿಳುವಳಿಕೆಯಿಲ್ಲದೆ ಸಾಧಿಸುತ್ತಿರುವ ಈ ಚಿನ್ಹೆಗಳನ್ನು ಬಿಟ್ಟು ನ್ಯಾಯವಾದುದನ್ನು ಅನುಸರಿಸಿ ಅಸೂಯೆಗೆ ಕಾರಣರಾಗಿಬಾರದು. ಇದರಿಂದ ಮುಕ್ತಿಯು ಸರ್ವಥಾ ದೊರೆಯುವದಿಲ್ಲ. ಚಿಕ್ಕಂದಿನಲ್ಲಿ ಧರಿಸಿದ ಅಂಗಿಯು ಯೌವ್ವನಕಾಲದಲ್ಲಿ ಹೇಗೆ ಧರಿಸಲಿಕ್ಕಾಗದೆ ಹೊಸ ಅಂಗಿಯನ್ನು ಹೊಲಿಸಬೇಕೋ ಹಾಗೆಯೇ ಹಿಂದಿನ ಯುಗೆಗಳಲ್ಲಿನ ಧರ್ಮಗಳು ಮತ್ತು ಧರ್ಮಚಿನ್ಹೆಗಳು ಕಲಿಯುಗದಲ್ಲಿ ಸುಖಿಸಲಾರವು. ಈಗ ಇವುಗಳನ್ನು ಬಿಟ್ಟು ಒಬ್ಬನಾದ ಮತ್ತು ಈಶ್ವರಸ್ವರೂಪನಾದ ಮಹಾತ್ಮನನ್ನು ಮನಸ್ಸಿನಿಂದ ನಂಬಿ ನಡವಳಿಕೆಯಿಂದ ಅನುಭವಿಸಿದವರಿಗೆಮಾತ್ರ ಮುಕ್ತಿಯೆಂದು

ಓಂಕಾರೋಕ್ತಿಯಂಟು. ಈ ಕೆಲಸದ ಸಜೀವಾರ್ಥವಾಗಿ ಶ್ರೀಚನ್ನಬಸವೇಶ್ವರರು ಜಗದ್ಗುರುಗಳ ಅನುಯಾಯಿಗೆಳಾಗಿ ಅವತರಿಸಿ ಇರುತ್ತಾರೆ. ಈರೀತಿಯಲ್ಲಿ ಪ್ರಪಂಚದ ದುಃಖವನ್ನು ದೂರಮಾಡಿದ ಹಜರತ್ ಮಹಮ್ಮದ್ ಪೈಗೆಂಬರರ ಹೊರತು ಜಗದ್ಗುರುಗಳು ಮತ್ತಾರಿರುವರು ? ಇದರಸಲುವಾಗಿಯೇ ಈತನು "ಬ್ರಹ್ಮಾಕೃತ ಶಿವಸಹಸ್ರನಾಮ ಸು| ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿಜಗದ್ಗುರು||" ಎಂಬ ಬಿರುದನ್ನು ವಹಿಸಿದವನಾಗಿರುತ್ತಾನೆ.

---

## ಬಂಭತ್ತನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವ್ಯಾಪಿಜಗದ್ಗುರು ||

ಜಗದ್ಗುರುವು ವಿಶೇಷವಾಗಿ ಯಾವಭಾಷೆಗೂ ಅಭಿಮಾನಿಯಾಗಿರದೆ ಎಲ್ಲಾ ಭಾಷೆಗಳನ್ನೂ ಪ್ರೀತಿಸಬೇಕು ; ಮತ್ತು ಈತನ ಓಂಕಾರೋಕ್ತ ಗ್ರಂಥವು ಜಗತ್ತಿನ ಸರ್ವಭಾಷೆಗಳ ಮಾತೃಭಾಷೆಯೆಂದು ಗಣಿಸಲ್ಪಡುವ ಸ್ವಭಾವ ಸಂಯುಕ್ತಭಾಷೆಯಲ್ಲಿ ಇರಬೇಕು.

ಈ ಪ್ರಮಾಣದಲ್ಲಿಯೂ ಹಜರತ್ ಮಹಮ್ಮದ್ ಪೈಗೆಂಬರರ ಹೊರತು ಮತ್ತಾರಿಗೂ ಕಾಲ್ಚೂರಲು ಸ್ಥಳನೇ ದೊರೆಯಲಾರದು. ಜಗತ್ತಿನಲ್ಲಿ ಅಗಣಿತ ಭಾಷೆಗಳುಂಟು. ಅವುಗಳಲ್ಲಿ ಒಂದೊಂದಕ್ಕೆ ವ್ಯತ್ಯಾಸವಾಗಿ ಕಂಡುಬರುವ ಭಾಷೆಗಳು ಎಂಟುನೂರು ಮೂವತ್ತೈದು ಇವೆ. ಈ ಭಾಷೆಯು ಭೇದಗಳುಂಟಾಗಲು ಕಾರಣವೇನು ? ಮತ್ತು ಇವುಗಳೆಲ್ಲಕ್ಕೂ ಮಾತೃಭಾಷೆಯಾವುದು ? ಈ ಎರಡು ಪ್ರಶ್ನೆಗಳ ಉತ್ತರವೂ ಸಾಮಾನ್ಯಜನರಿಂದ ಹೊರಪಡಲಾರದು. ಇದರ ಸಲುವಾಗಿ ವಿದ್ಯಾಬಲವು ಮತ್ತು ಆತ್ಮಜ್ಞಾನಬಲವು ಬೇಕಾಗಿರುತ್ತದೆ.

ಮೊದಲನೆ ಪ್ರಶ್ನೆಯ ಉತ್ತರವನ್ನು ಒದಗಿಸಲು ಬಹು ಪ್ರಾಚೀನ ಕಾಲವನ್ನು ಕುರಿತು ವಿಚಾರಿಸಬೇಕಾಗುವುದು. ಹಿಂದೆಯಾದರೊ ಮನುಷ್ಯರ ಜನ್ಮಸ್ಥಾನದಿಂದ ಅವರ ಭಾಷೆಯು ಬಂದೇಇತ್ತೆಂದೂ ತಿಳಿಯಬರುತ್ತದೆ. ಕೆಲವರು ಮನುಷ್ಯನ ಪ್ರಥಮಜನ್ಮಸ್ಥಾನವು ಮಧ್ಯ ಏಷ್ಯಾ.

ಎಂದೂ ಮತ್ತು ಕೆಲವರು ಅದು ಭೂಮಿಯ ನಾಭಿಯೆಂದೂ ಭಾವಿಸುತ್ತಾರೆ. ಮನುಷ್ಯನ ಮೊದಲನೆಯ ಜನ್ಮಸ್ಥಾನವು ಪೃಥ್ವಿಯನಾಭಿಯಂದೆ ಅನೇಕ ಮತಗ್ರಂಥಗಳಿಂದ ತಿಳಿದುಬರುತ್ತದೆ. ಇದಕ್ಕೆ ಧರ್ಮಗ್ರಂಥಗಳೇ ಉತ್ತಮ ಆಧಾರಗಳು. ಇದಕ್ಕೆ ಸರಿಯಾಗಿಕುರಾನಿನಲ್ಲಿ, ಅರಬ್ಬಿ ದೇಶವೇ ಭೂಮಿಯ ನಾಭಿಯೆಂದೂ ಮತ್ತು ಇದೇಸ್ಥಾನವು ಮನುಷ್ಯನ ಮೊದಲನೆಯ ಜನ್ಮಸ್ಥಳವೆಂದೂ ಸಾಧಿಸಿ ಇರುತ್ತದೆ. ಅದು ಹೇಗೆಂದರೆ, "ಇನ್ನಾ ಅವ್ವಲಾ ಬೈತಿನ್ ವುಜಿಯಾಲಿನ್ನಾಸಿ ಲಿಲ್ಲಜಿಬೆಬಕ್ಕ ತಾಮು ಬಾರಕನ್ವ ಹುದಲ್ಲಿಲ್ ಆಲಮೀನ". ಎಂದರೆ "ನಿಜವಾಗಿ ಮಾನವಜಾತಿಯ ಪ್ರಥಮ ಜನ್ಮಸ್ಥಳವು ಈ ಪೃಥ್ವಿಯಮೇಲೆ ಮಕ್ಕಾಪಟ್ಟಣವು". ಇದರ ಸಲುವಾಗಿಯೇ ಪರಮಾತ್ಮನು ಇದರ ಅಭಿವೃದ್ಧಿಯನ್ನು ಕಾಲಕಾಲಕ್ಕೆ ಮಾಡಿರುತ್ತಾನೆ. ಪುನಃ ಇದೇ ಕಡೆಯಲ್ಲಿ ಜಗದ್ಗುರುವಿನ ಜನ್ಮಸ್ಥಾನವಾಗಿ ಸಮಸ್ತ ಜನರಿಗೂ ಭಕ್ತಿಯ ಸ್ಥಾನವಾಯಿತು. ಇವೇ ನಿಜಾಧಾರಗಳು. ಮನುಷ್ಯನ ಕಲ್ಪಣೆಯಲ್ಲಿ ಅನೇಕ ಸಂಶಯಗಳು ಮತ್ತು ತಪ್ಪುಗಳು ಸಿಗುತ್ತವೆ. ಮತಕ್ಕೆ ಸಂಬಂಧಪಡುವ ಈ ತತ್ವಗಳು ಮತಗ್ರಂಥಗಳಿಂದಲೇ ಸರಿಯಾದ ರೀತಿಯಲ್ಲಿ ಹೊರಬೀಳುವವು. ಇದೇರೀತಿಯಲ್ಲಿಯೇ ಮನುಷ್ಯನ ಸ್ಥೂಲದ ಉತ್ಪತ್ತಿಯ ಮತ್ತು ಅಭಿವೃದ್ಧಿಯ ವಿಚಾರವಾಗಿ ಒಂದು ತತ್ವ ಉಂಟು. ಇದರ ರಹಸ್ಯವನ್ನು ಡಾರ್ವಿನ್ ಎಂಬೊಬ್ಬ ಪಾಶ್ಚಿಮಾತ್ಯನು ಅನೇಕ ಅನುಭವಸಿದ್ಧಾಂತಗಳಿಂದ ಸಾಧಿಸಿ ಇರುತ್ತಾನೆ. ಆತನು ಮನುಷ್ಯನ ಉತ್ಪತ್ತಿಯು ಕೋತಿಯಿಂದ ಪ್ರಾರಂಭವಾಗಿ ವಿವಿಧ ರೂಪುಗಳಿಂದ ಕೋತಿಗಳ ರೂಪದಲ್ಲಿ ಕಂಡು ಕಡೆಗೆ ಮನುಷ್ಯನಾಗಿ ನಿಂತನೆಂದು ಸಾಧಿಸುತ್ತಾನೆ. ಆದರೆ ಇದೇ ತತ್ವವಿಚಾರವು ಮತಗ್ರಂಥಗಳಿಂದ ಸ್ವಲ್ಪವೂ ತಪ್ಪಿಲ್ಲದೆ ಸ್ವಭಾವಸಂಯುಕ್ತವಾಗಿ ಹೊರಬಿದ್ದಿರುತ್ತದೆ. ಮೊದಲು ನಿರಾಕಾರನಾದ ಆತ್ಮನೇ ಇದ್ದು, ನಂತರ ಪಂಚಭೂತಗಳ ರೂಪದಲ್ಲಿ ಬೆಳೆಯುತ್ತಾ ಬಂದು ಕಡೆಗೆ ಸಸ್ಯವರ್ಗವಾಗಿಯೂ ಪುನಃ ಪ್ರಾಣಿವರ್ಗವಾಗಿಯೂ ಬೆಳೆಯುತ್ತಾಬಂದು ಕಡೆಯಲ್ಲಿ ಮನುಷ್ಯನಾಗಿ ನಿಂತನು. ಆದುದರಿಂದ ಕೋತಿಯು ಸ್ಥೂಲದ ಬೆಳವಣಿಗೆಯ ಅಂತಸ್ತುಗಳಲ್ಲಿ ಒಂದಾಗಿದೆಯೇ ಹೊರತು, ಅದೇ ಮನುಷ್ಯನಿಗೆ ಮೂಲಸ್ಥಾನವೆಂದು ಹೇಳುವುದು ತಪ್ಪು. ಕಣ್ಣಿಗೆ ಕಾಣಿಸುವ ಪಂಚಭೂತಗಳಲ್ಲಿ ಮೊದಲನೇ ಭೂತವು ಜಲವು.

ಇದರಲ್ಲಿ ಆತ್ಮಾಭಿವೃದ್ಧಿಯಲ್ಲಿ ಮೊದಲು ಕಂಡ ಪ್ರಾಣಿಯು ಮೀನು; ಎರಡನೆ ಪ್ರಾಣಿಯು ಕೂರ್ಮ, ಮತ್ತು ಭೂಮಿಯಲ್ಲಿ ಪ್ರಥಮಪ್ರಾಣಿಯು ವರಹ. ಇದರ ನಂತರ ಸಮಸ್ತಪ್ರಾಣಿಗಳ ಉತ್ಪತ್ತಿಯಾಯಿತು. ಕಡೆಯಲ್ಲಿ ಪ್ರಾಣಿಗಳಿಗೂ ರಾಜನಾಗಿ ಸಿಂಹವು ನರಸಿಂಹನಾಗಿ ಕಂಡುಬಂದಿತು. ಇದರನಂತರವೇ ಮನುಷ್ಯನು ತನ್ನ ಸ್ವಶರೀರದೊಂದಿಗೆ ನಿಂತನು. ಇದೆ ವಿಷಯವನ್ನು ಮತಗ್ರಂಥಗಳು ಪರಮಾತ್ಮನ ಲೀಲೆಗಳೆಂದು ತಿಳಿಸುತ್ತವೆ. ಆ ಲೀಲೆಗಳೇ ಮತ್ಸ್ಯಾವತಾರ, ಕೂರ್ಮಾವತಾರ, ವರಹಾವತಾರ, ನರಸಿಂಹಾವತಾರ, ವಾಮನನವತಾರ ಎಂಬ ಅವತಾರಗಳ ರೂಪದಲ್ಲಿ ಸ್ಥೂಲಶರೀರದೊಂದಿಗೆ ಕಂಡುಬರುತ್ತವೆ. ಹೀಗೆಯೇ ಪ್ರಪಂಚದ ಸ್ಥೂಲಾಭಿವೃದ್ಧಿಯು ಕ್ರಮವಾಗಿ ನಡೆಯುತ್ತಾ ಬಂದು ಮನುಷ್ಯನ ರೂಪದಲ್ಲಿ ನಿಂತಿರುತ್ತದೆ. ಆದರೆ ಡಾರ್ವಿನ್ನಿನ ಥಿಯರಿಗಿಂತಲೂ ಇದೇ ನಿಜವಾಗಿ ತೋರುತ್ತದೆ. ಏಕೆಂದರೆ ಇದು ದೈವಿಕಗ್ರಂಥಗಳಿಂದ ಕಂಡುಬಂದಿರುತ್ತದೆ. ಮನುಷ್ಯರು ತಪ್ಪಿಗೊಳಗಾಗುತ್ತಾರೆ; ಆದರೆ ಪರಮಾತ್ಮನು ತಪ್ಪಿಗೊಳಗಾಗುವನಲ್ಲವು. ಇದೇರೀತಿಯಲ್ಲಿ ಜನರು ಮನುಷ್ಯನ ಪ್ರಥಮಜನ್ಮಸ್ಥಾನವು ಮಧ್ಯಾ ಏಷ್ಯಾ ಎಂದು ಹೇಳಿರುವುದು ಸುಳ್ಳಾಗಿದೆ. ಆದರೆ ಮತಗ್ರಂಥಗಳು ನಿಜವಾಗಿ ಮೊದಲನೆಯ ಸ್ಥಾನವು ಅರಬಸ್ಥಾನವೆಂದೂ ಮತ್ತು ಮಕ್ಕಾಪಟ್ಟಣವು ಜಗತ್ತಿನ ನಾಭಿಯೆಂದೂ ಸಾಧಿಸುತ್ತವೆ. ಮನುಷ್ಯರು ಮೊದಲು ಮಧ್ಯ ಪೃಥ್ವಿಯಾದ ಅರಬಿದೇಶದಲ್ಲಿ ಜನ್ಮಿಸಿ ಬೇರೆ ಬೇರೆ ದೇಶಗಳಿಗೆ ಹೋದರು. ಇದರಿಂದಲೇ ಮನುಷ್ಯನ ಮೂಲಭಾಷೆಯು ಅರಬ್ಬಿಯೆಂದು ಧೃಡವಾಯಿತು. ಇದರಿಂದಲೂ ಈ ಭಾಷೆಯೇ ಸಕಲ ಭಾಷೆಗಳಿಗೂ ಮಾತೃಭಾಷೆಯೆಂದು ತಿಳಿಯಬರುತ್ತದೆ. ಇದೇ ಮನುಷ್ಯನ ಸ್ವಭಾವಸಂಯುಕ್ತವಾದ ಭಾಷೆಯು. ಇದರ ರೂಪಾಂತರದಿಂದಲೇ ಸಮಸ್ತ ಭಾಷೆಗಳುಂಟಾಗಿರುತ್ತವೆ. ಈ ವಿಷಯವನ್ನು ಸಂಪೂರ್ಣರೀತಿಯಿಂದ ತಿಳಿಯಬೇಕಾದರೆ "ವುಮ್ಮುಲ್ ಅಲ್‌ಸನ" ಎಂಬ ಪುಸ್ತಕವನ್ನು ಓದಿ ತಿಳಿಯಬಹುದು. ಇದು ಲಾಹೋರ್ ಪಟ್ಟಣದ ಅಜೀಜಮಂಜೀಲಿನ ಪುಸ್ತಕಾಲಯದಲ್ಲಿ ಸಿಕ್ಕುತ್ತದೆ. ಅರಬ್ಬಿ ಭಾಷೆಯೇ ಸರ್ವಭಾಷೆಗಳಿಗೂ ಮಾತೃಭಾಷೆಯಾಗಿರಲು ಮತ್ತೊಂದು ಸಾಕ್ಷಿಯುಂಟು. ಅದು ಯಾವುದೆಂದರೆ, ಮನುಷ್ಯನು ಸಮಸ್ತ ಪಂಚಭೂತದ ನಿರ್ಮಿತವಾದ ಸರ್ವ ಪಕ್ಷಿಪ್ರಾಣಿಗಳಲ್ಲಿಯೂ ಸರ್ವಾಂತರ್ಯಾಮಿಯನಾಗಿರುವು

ರಿಂದ, ಸಂಭಾಷಣೆಗೆ ಯಾವಪ್ರಕಾರ ಅರ್ಹನಾಗಿದ್ದಾನೋ ಅದೇರೀತಿ "ಕುರಾನ್" ಇರುತ್ತದೆ. ಸರ್ವಧರ್ಮಗ್ರಂಥಗಳಲ್ಲಿಯೂ ಕುರಾನೇ ವ್ಯಾಪಿಸಿರುವುದರಿಂದ ಇದಕ್ಕೆ ಸಂಭಾಷಣ ಶಕ್ತಿಯನ್ನು ಪಡೆದಿದೆ. ಅದು ಹೇಗೆಂದರೆ, ಯಾರಾದರೂ ಸಂಸ್ಕೃತದಲ್ಲಿ ಪ್ರಕಟವಾಗಿರುವ ಸರ್ವ ದೇವೋಕ್ತಗ್ರಂಥಗಳನ್ನು ಪ್ರಶ್ನೆಮಾಡಿ ಮಾತನಾಡಿಸಿದರೆ ಉತ್ತರವು ದೊರೆಯುವುದಿಲ್ಲ. ಮತ್ತು ಲ್ಯಾಟಿನ್, ಇಂಗ್ಲಿಷ್, ಪಾರ್ಸಿ ಇತ್ಯಾದಿ ಭಾಷೆಗಳಲ್ಲಿರುವ ಧರ್ಮಗ್ರಂಥಗಳನ್ನು ಕೂಡ ಪ್ರಶ್ನೆಯೊಡನೆ ಮಾತನಾಡಿ ನೋಡಿದರೆ, ಇವುಗಳಲ್ಲಿ ಯಾವೂ ಮಾತನ್ನಾಡುವುದಿಲ್ಲ ಮತ್ತು ನಮಗೆ ಉತ್ತರವನ್ನು ಕೊಡಲು ಅವು ಸ್ವಭಾವತಃ ಅರ್ಹವಾಗಿಲ್ಲ. ಆದರೆ ಕುರಾನ್ ಒಂದೇ ಸಂಭಾಷಣಾಶಕ್ತಿಯನ್ನು ಹೊಂದಿರುತ್ತದೆ. ಅದು ಹೇಗೆಂದರೆ, ತಾವು ಪರಸ್ಥಳದಿಂದ ತಮ್ಮ ಪಟ್ಟಣಕ್ಕೆ ಬಂದ ಮನುಷ್ಯನನ್ನು ಯಾವ ಯಾವ ಪ್ರಶ್ನೆಗಳೊಡನೆ ಸಂಬೋಧಿಸುತ್ತೀರೋ ಆ ಪ್ರಶ್ನೆಗಳಿಂದಲೇ ಕುರಾನನ್ನು ಮಾತನಾಡಿಸಿದರೆ, ಸರಿಯಾಗಿ ಮನುಷ್ಯನಂತೆಯೇ ಉತ್ತರನನ್ನು ಕೊಡುತ್ತದೆ. ಸ್ವಾಭಾವಿಕವಾಗಿ ತಮ್ಮ ಪಟ್ಟಣಕ್ಕೆ ಬಂದ ಪರದೇಶಸ್ಥನನ್ನು ಮುಂದೆ ನಮೂದಿಸಿರುವ ಪ್ರಶ್ನೆಗಳನ್ನು ಮಾಡುವುದ ಂಟು:—

ಸ್ವಾಮಿ ! ತಾವು ಎಲ್ಲಿಂದ ಬಂದಿರಿ? ತಮ್ಮ ಹೆಸರೇನು? ತಾವು ಯಾವ ಸ್ಥಳದಲ್ಲಿ ಇಳಿದಿರುವಿರಿ? ತಾವು ಇಲ್ಲಿಗೆ ಬರಲು ಕಾರಣವೇನು? ತಮ್ಮ ದರ್ಶನವನ್ನು ಯಾವವೇಳೆಯಲ್ಲಿ ಮಾಡಬಹುದು? ತಮ್ಮ ದರ್ಶನಕ್ಕೆ ಬರಲು ಬೇಕಾಗುವ ನಿಬಂಧನೆಗಳಾವುವು? ಮತ್ತು ನಾವು ತಮ್ಮೊಂದಿಗೆ ಎಷ್ಟುಹೊತ್ತಿನವರೆಗೂ ಮಾತನಾಡಬಹುದು? ಇವೇ ಮುಂತಾದ ಪ್ರಶ್ನೆಗಳನ್ನು ಒಬ್ಬ ಪರಸ್ಥಳೀಕನಲ್ಲಿ ಮಾಡುವುದು ಸ್ವಭಾವಿಕವಾಗಿದೆ. ಇದೇ ಪ್ರಶ್ನೆಗಳಿಂದ ನಾವು ಕುರಾನ್‌ನನ್ನು ಸಂಬೋಧಿಸಿದರೆ ಅದು ನವಿಗೆ ಬಹು ಸನ್ಮಾನಭರಿತವಾದ ಸದುತ್ತರಗಳನ್ನು ಕೊಡುತ್ತದೆ.

(೧) ತಾವು ಎಲ್ಲಿಂದ ಬಂದಿರಿ?

ಉತ್ತರ:—"ತಂಜೀಲುಂ ಮಿರ್ ರಬ್ಬಿಲ್ ಆಲಮಿನ" ಎಂದರೆ "ನಾನು ಜಗತ್ಕರ್ತನಾದ ಈಶ್ವರನ ಕಡೆಯಿಂದ ಒಂದಿರುತ್ತೇನೆ". (ಅಧ್ಯಾಯ ೩೨, ವಾಕ್ಯ ೧.)

(೨) ತಮ್ಮ ಹೆಸರೇನು ?

ಉತ್ತರ:—"ವಇನ್ನಹುಕುರಾನುನ್ ಕರೀಮುನ್" (ಅ. ೫೬, ವಾ. ೭೬) ಎಂದರೆ 'ನನ್ನ ಹೆಸರು ಕುರಾನೆ ಕರೀಮ್".

(೩) ತಾವು ಇಲ್ಲಿ ಎಲ್ಲಿಳಿದಿರುವಿರಿ ?

ಉತ್ತರ:—" ವ ಅಮನು ಬೆಮಾನುಜ್ಜಿಲಾ ಅಲಾಮೊಹಮ್ಮದಿನ್ " (ಅ. ೪೭, ವಾ. ೨.) ಎಂದರೆ "ನಾನು ಮೊಹಮ್ಮದರ ಹೃದಯದಲ್ಲಿ ಇಳಿದಿರುತ್ತೇನೆ."

(೪) ತಾವು ಇಲ್ಲಿಗೆ ಬರಲು ಕಾರಣವೇನು ?

ಉತ್ತರ:—"ಯಹದಿಬೆಹಿಲ್ಲಾಹುಮನಿತ್ತಬಾರಿಜ್ವ್‌ನಹುಸುಬ್ ಲಸ್ ಸಲಾಮು, ವಯುಖರಜ್ ಹುಂಮಿನಜ್ ಜುಲ್‌ಮಾತೆ ಇಲನ್ನೂರಬೆ ಇಜ್ಜಿಹಿ, ವಯಹದೀಹಿಂ ಇಲಾಸಿರಾ ತಿಂ ಮುಸ್ತಖೀಮ್. (ಅ. ೫, ವಾ. ೧೮) ಎಂದರೆ "ಯಾವನು ಪರಮಾತ್ಮನ ಅನುಜ್ಞೆಯಂತೆ ನಡೆಯುತ್ತಾನೋ ಅವನನ್ನು ಪರಮಾತ್ಮನು (ನನ್ನಿಂದ) ಇದರಿಂದ ಶಾಂತಿಯನ್ನು ತೋರುತ್ತಾನೆ. ಮತ್ತು ತನ್ನ ಅನುಜ್ಞೆಯಂತೆ ಅಜ್ಞಾನದ ಕಾರ್ಗತ್ತಲಿನಿಂದ ತೆಗೆದು ಜ್ಯೋತಿರ್ಮಯವಾದ ಪ್ರಕಾಶದಲ್ಲಿ ಬಿಡುತ್ತಾನೆ ಮತ್ತು (ನನ್ನಿಂದ) ಸನ್ಮಾರ್ಗವನ್ನು ತೋರಿಸುತ್ತಾನೆ.

(೫) ತಮ್ಮ ದರ್ಶನವನ್ನು ಯಾವ ವೇಳೆಯಲ್ಲಿ ಮಾಡಬಹುದು ?

ಉತ್ತರ:—" ಇನ್ನ ಕುರಾನಲ್ ಫಜರೆಕಾನಮಷ್‌ಹೂದಾ " (ಅ. ೧೭ ವಾ. ೮೦) ಎಂದರೆ " ವಾಸ್ತವ್ಯವಾಗಿ ತಮ್ಮ ಪಂಚಕೋಶಗಳ ಶಾಂತಿಯುಕ್ತವಾದ ಸಾಕ್ಷಿಯಿಂದ ಪ್ರಾತಃಕಾಲದಲ್ಲಿ ಕುರಾನಿನ (ನನ್ನ) ಅಧ್ಯಯನಕ್ಕೆ ಬರಬೇಕು (ದರ್ಶನ ಮಾಡಬೇಕು).

(೬) ತಮ್ಮ ದರ್ಶನಕ್ಕೆ ಬರಲು ಇರುವ ನಿಬಂಧನೆಗಳಾವುವು ?

ಉತ್ತರ:—"ಫ ಇಜಾಕರ ಅತಲ್ ಕುರಾನ ಫಜ್‌ತ ಇಜ್‌ಬಿಲ್ಲಾಹೆ

ಮಿನಶ್ ಶೈತಾನಿರ್‌ರಜೀಮ್ " (ಅ. ೧೬, ವಾ. ೧೦೦) ಎಂದರೆ " ಕುರಾನಿನ" (ನನ್ನ) ಅಧ್ಯಯನಕ್ಕೆ (ದರ್ಶನಕ್ಕೆ) ಬರುವಾಗ, ಪೈಶಾಚನನ್ನು ದೂರಮಾಡಿ ಬರಬೇಕು.

(೭) ನಾವು ತಮ್ಮೊಂದಿಗೆ ಎಷ್ಟುಹೊತ್ತಿನವರೆಗೆ ಮಾತನಾಡ ಬಹುದು ?

ಉತ್ತರ:—" ಫಕ್‌ರವುಮಾತ ಯಸ್ ಸರಾ ಮಿನಲ್ ಕುರಾನ್ " (ಅ.೭೩, ವಾ. ೩೦) ಎಂದರೆ "ತನುಗೆ ಸಾಕಾಗುವವರೆಗೂ ಕುರಾನಿನ (ನನ್ನ ಕೂಡ) ಅಧ್ಯಯನ ಮಾಡಬಹುದು (ಸಂಭಾಷಣೆ ಮಾಡಬಹುದು) "

ಇದೇರೀತಿಯಲ್ಲಿ ಓಂಕಾರೋಕ್ತವಾದ ಕುರಾನ್ ಪ್ರತಿಯೊಂದು ವಿಧವಾದ ಪ್ರಶ್ನೆಗೂ ಸದುತ್ತರವನ್ನು ಕೊಡುತ್ತದೆ. ಆದರೆ ಜಗತ್ತಿನ ಇತರ ಓಂಕಾರಗ್ರಂಥಗಳು ಹಾಗೆ ಮಾಡಲಾರವು. ಇದನ್ನು ಪರಿಶೀಲಿಸಿ ನೋಡ ಬಹುದು. ಮನುಷ್ಯನು ಜಗತ್ತಿನ ಸಮಸ್ತಕ್ಕೂ ಆಂತರ್ಯಯನಾಗಿ ಸಂಭಾ ಷಣಾಶಕ್ತಿಗೆ ಮೂಲನಾಗಿರುತ್ತಾನೆ. ಅರಬ್ಬಿಭಾಷೆಯು ಸರ್ವ ಭಾಷಾಮು ಯನಾಗಿ ಸರ್ವಕ್ಕೂ ಮೂಲಭಾಷೆಯಾದಕಾರಣದಿಂದಲೇ, ಸರ್ವ ದೇವೋಕ್ತ ಗ್ರಂಥಮಯವಾದ ಕುರಾನ್ ಸರ್ವಕ್ಕೂ ಮೂಲವಾಗಿ ಸಂಭಾಷ್ಣಾಶಕ್ತಿ ಯನ್ನು ಹೊಂದಿರುತ್ತದೆ.

ಸ್ವಾಭಾವಿಕವಾದ ಮತ್ತು ಶಾಶ್ವಿತವಾದ ಭಾಷೆಯ ಮತ್ತೊಂದು ವಿಶೇಷ ಲಕ್ಷಣವುಂಟು. ಏನೆಂದರೆ, ಅದು ಯಾವಾಗಲೂ ಬದಲಾಯಿಸು ವುದಿಲ್ಲ. ಮನುಷ್ಯನಿರ್ಮಿತ ವಸ್ತುಗಳ ಸ್ವಭಾವವು ವ್ಯತ್ಯಾಸವಾಗುವುದಿಲ್ಲ. ಪ್ರಾಣಿಗಳೂ ಮತ್ತು ಪಕ್ಷಿಗಳಿಂದ ಹೊರಬೀಳುವ ಧ್ವನಿಗಳೂ ಎಂದರೆ ಶಬ್ದ ಗಳು ಯಾವಾಗಲೂ ವ್ಯತ್ಯಾಸವಾಗುವುದಿಲ್ಲ. ಆದರೂ ಒಂದು ಪ್ರಾಣಿಯ ಭಾಷೆಯು ಮತ್ತೊಂದರಭಾಷೆಗೆ ವ್ಯತ್ಯಾಸವಿದೆ. ಇವು ದೇಶ ಕಾಲ ಭೇದ ದಿಂದ ವ್ಯತ್ಯಾಸವನ್ನು ಹೊಂದುವುದಿಲ್ಲ. ಹಿಂದೂದೇಶದ ಕಾಗೆಯು ಯಾವರೀತಿಯಲ್ಲಿ ಅರಚುತ್ತದೆಯೋ ಹಾಗೆಯೆ ಆಫ್ರಿಕಾದ ಕಾಗೆಯು ಅರಚು ತ್ತದೆ. ಇದೇರೀತಿಯಲ್ಲಿ ಸಮಸ್ತ ಪ್ರಾಣಿಗಳ ಮತ್ತು ಜೀವರಾಶಿಗಳ

ಸ್ಥಿತಿಯೂ ಉಂಟು. ಆದರೆ ಹಿಂದೂದೇಶದ ಮನುಷ್ಯನು ಇಂಗ್ಲೆಂಡಿಗೆ ಹೋದರೆ ತನ್ನ ಭಾಷೆಯನ್ನು ಬಿಡಬೇಕಾಗುತ್ತದೆ. ಇದಲ್ಲದೆ ನಮ್ಮ ಹಿಂದೂಸ್ಥಾನದಲ್ಲಿಯೆ ಬೇರೆಬೇರೆ ಭಾಷೆಗಳು ಕಂಡುಬರುತ್ತವೆ. ಒಂದು ಕಡೆಯ ಭಾಷೆಯು ಮತ್ತೊಂದುಕಡೆಯವರಿಂದ ಗ್ರಹಿಸಲ್ಪಡುವುದಿಲ್ಲ. ಮತ್ತು ಒಂದು ದೇಶದವರು ಮತ್ತೊಂದು ದೇಶಕ್ಕೆ ಹೋದರೆ ಅಲ್ಲಿ ಬಹು ದಿವಸ ಇದ್ದದ್ದೇ ಆದರೆ ತನ್ನ ಪೂರ್ವಭಾಷೆಯನ್ನು ಮರೆಯುತ್ತಾನೆ. ಆದರೆ ಪಶು ಪಕ್ಷಿಗಳ ಕೂಗುವಿಕೆ, ಆರಚುವಿಕೆ, ಇವುಗಳಲ್ಲಿ ಆಂಥಾ ವ್ಯತ್ಯಾಸಗಳಾಗುವುದೇ ಇಲ್ಲ. ಇದಕ್ಕೆ ಕಾರಣವೇನು? ಪರಮಾತ್ಮನು ಇದರ ಮೂಲಕ ಆತ್ಮಜ್ಞಾನರಹಸ್ಯವನ್ನು ಹೊರಪಡಿಸುವ ನಿಮಿತ್ತ ಈ ವ್ಯತ್ಯಾಸಗಳನ್ನಿಟ್ಟಿರುತ್ತಾನೆ. ಮನುಷ್ಯನಿಗೆ ಜೀವರಾಶಿಗಳಪ್ರಕಾರ ಸ್ವಭಾವಿಕಭಾಷೆಯುಂಟು. ಆದರೆ ಇದರಲ್ಲಿ ವ್ಯತ್ಯಾಸವನ್ನು ಕಲ್ಪಿಸಿಕೊಳ್ಳುವ ಶಕ್ತಿಯು ಉಂಟು. ಹೇಗೆಂದರೆ, ಇವನು ತನ್ನ ಒಪ್ಪಿಕೆಯಂತೆ ಬೇಕಾದ ದಾರಿಯನ್ನು ತನ್ನ ಮತವಾಗಿ ಹಿಡಿಯಬಹುದು. ಹೀಗೆ ಕೆಟ್ಟ ಮಾರ್ಗವನ್ನವಲಂಬಿಸಿ ತನ್ನ ನಿಜತ್ವವನ್ನು ಕೆಡಿಸಿಕೊಳ್ಳುತ್ತಾನೆ. ಆ ಕಾಲದಲ್ಲಿ ಪುನಃ ಪರಮಾತ್ಮನಿಂದ ಅವತಾರಿಯು ಬಂದು ಧರ್ಮಪಥವನ್ನು ಪುನಃ ತೋರಿಸುತ್ತಾನೆ. ಇದು ಹಾಗಿರಲಿ; ಯಾವ ಭಾಷೆಯು ಬದಲಾಯಿಸದೆ ಶಾಶ್ವತವಾಗಿ ಇರುತ್ತದೆಯೋ ಅದೇ ಸ್ವಭಾವಿಕವಾದ ಭಾಷೆಯು, ಮತ್ತು ಎಲ್ಲಾ ಭಾಷೆಗಳ ಮಾತೃಭಾಷೆಯು. ಇಲ್ಲಿ ಕೆಲವು ಪ್ರಸಿದ್ಧವಾದ ಭಾಷೆಗಳನ್ನು ತೆಗೆದುಕೊಂಡು ನೋಡಿದರೆ ಯಾವಭಾಷೆಗಳು ಕಾಲಕಾಲಕ್ಕೆ ಬದಲಾವಣೆಯನ್ನು ಹೊಂದಿರುತ್ತವೆ? ಮತ್ತು ಯಾವ ಭಾಷೆಯು ಶಾಶ್ವಿತವಾಗಿ ಇದೆಯೆಂಬದು ಸ್ಪಷ್ಟವಾಗಿ ವಿದಿತವಾಗುವುದು.

---

## ಸಂಸ್ಕೃತ.

ಇದು ಬಹು ಪ್ರಾಚೀನಭಾಷೆಯು. ನಾಲ್ಕು ವೇದಗಳು ಈ ಭಾಷೆಯಲ್ಲಿಯೇ ಹೊರಪಟ್ಟವೆ. ಇದು ಶ್ರೀರಾಮನ ಕಾಲಕ್ಕಿಂತಲೂ ಮುಂಚಿನದೆಂದು ವಿದಿತವಾಗುತ್ತದೆ. ವೇದಗಳ ಸಂಸ್ಕೃತಕ್ಕೂ ಮತ್ತು ಈಗಿನ ಸಂಸ್ಕೃತಕ್ಕೂ ಬಹು ವ್ಯತ್ಯಾಸವಾಗಿ ಕಂಡುಬರುತ್ತದೆ. ಇದೇ ಸಂಸ್ಕೃತ

ತವು ಕಾಲಭೇದದಿಂದ ಅವಸ್ಥಾಭೇದ ಹೊಂದಿ ಹಿಂದಿನಭಾಷೆಯೆಂದೆನಿಸಿ ಕೊಂಡಿರುತ್ತದೆ. ಇದರಿಂದಲೆ ಉರ್ದುಭಾಷೆಯು ಹೊರಪಟ್ಟಿರುತ್ತದೆ. ಹಿಂದಿಯು ಮತ್ತು ಉರ್ದುಭಾಷೆಯು ಸಾವಿರವರ್ಷಗಳ ಹಿಂದೆ ಹೇಗೆ ಇದ್ದುವೋ ಈಗ ಹಾಗಿಲ್ಲದೆ ಬಹು ಬದಲಾವಣೆಯನ್ನು ಹೊಂದಿರುತ್ತದೆ. ಕಾರಣ ಸಂಸ್ಕೃತವು ಮನುಷ್ಯನ ಸ್ವಾಭಾವಿಕವಾದ ಮೂಲಭಾಷೆಯಲ್ಲವು.

---

## ಪಂಜಾಬಿ ಭಾಷೆ.

ಇದೂಕೂಡ ಕಾಲಕಾಲಕ್ಕೆ ವ್ಯತ್ಯಾಸವನ್ನು ಹೊಂದಿರುತ್ತದೆ. ಬಾಬ ನಾನಕ್‌ಷಹರು ಇಲ್ಲಿಗೆ ಐದುನೂರು ವರ್ಷಗಳ ಹಿಂದೆ ಇದ್ದರು. ಅವರು ಒಂದು ಗ್ರಂಥವನ್ನು ಬರೆದಿರುತ್ತಾರೆ. ಆಗಿನ ಭಾಷೆಗೂ ಮತ್ತು ಈಗ ಪ್ರಚಾರದಲ್ಲಿರುವ ಭಾಷೆಗೂ ಬಹು ವ್ಯತ್ಯಾಸವು ಕಂಡುಬರುತ್ತದೆ. ಆದುದ ರಿಂದ ಪಂಜಾಬಿಭಾಷೆಯು ಮನುಷ್ಯನ ಮೂಲಭಾಷೆಯಲ್ಲವು.

---

## ಇಂಗ್ಲೀಷ್ ಭಾಷೆ.

ಈ ಭಾಷೆಯುಕೂಡ ಕಾಲಕಾಲಕ್ಕೆ ವ್ಯತ್ಯಾಸವನ್ನು ಹೊಂದುತ್ತಲೇ ಬಂದಿರುತ್ತದೆ. ಇಲ್ಲಿಗೆ ಐದುನೂರು ವರ್ಷಗಳ ಹಿಂದೆ, "ಫೈರಿ" ಇಂಗ್ಲೀಷ್ ಎಂಬ ಭಾಷೆ ಇತ್ತು. ಆ ಭಾಷೆಯು ಈಗಿನ ಇಂಗ್ಲೀಷ್ ಬಲ್ಲವರಿಗೆ ತಿಳಿಯು ವುದಿಲ್ಲ. ಇದರಿಂದ ಈ ಭಾಷೆಯುಕೂಡ ಮನುಷ್ಯನ ಸ್ವಾಭಾವಿಕವಾದ ಭಾಷೆಯೆಂದು ವಿದಿತವಾಗುವುದಿಲ್ಲ.

---

## ಕನ್ನಡ ಭಾಷೆ.

ಇದಕ್ಕೆ ಕರ್ನಾಟಕಭಾಷೆಯೆಂದು ಹೆಸರಿದೆ. ಇದರಲ್ಲಿ ಪ್ರಾಚೀನ ಕರ್ನಾಟಕ, ಹಳೆಗನ್ನಡ ಮತ್ತು ಹೊಸಗನ್ನಡವೆಂದು ಈಗಲೂ ವಾಡಿಕೆ ಯಲ್ಲಿ ಕಂಡುಬರುತ್ತವೆ. ಕ್ರಿಸ್ತಶಕ ಎನೇ ಶತಮಾನದಲ್ಲಿ ನೃಪತುಂಗನೆಂಬ ರಾಜನು ಮಲಖೇಡಸಂಸ್ಥಾನವನ್ನು ಆಳುತ್ತಿದ್ದನು. ಈತನು ಕನ್ನಡಭಾಷೆ ಯಲ್ಲಿ ಆದಿಪುರಾಣವೆಂಬ ಪುಸ್ತಕವನ್ನು ಬರದಿರುತ್ತಾನೆ. ಆದರಲ್ಲಿ ತನ್ನ

ಕಾಲಕ್ಕಿಂತಲೂ ಹಿಂದೆಯೂ ಹಳೆಗನ್ನಡವು ಇತ್ತೆಂದು ಹೇಳಿರುತ್ತಾನೆ. ಆದರೆ ಆ ಗ್ರಂಥದ ಕನ್ನಡಕ್ಕೂ ಈಗಿನ ಹಳೆಗನ್ನಡಕ್ಕೂ ಬಹು ವ್ಯತ್ಯಾಸವಿದೆ. ಪ್ರಾಚೀನ ಹಳೆಗನ್ನಡವು ಕದಂಬರರ ರಾಜಧಾನಿಯಾದ ಬನವಾಸಿಯಲ್ಲಿ ಲನೇ ಶತಮಾನದವರೆಗೂ ಇತ್ತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರ ನಂತರದ ಕನ್ನಡವು ೧೪ನೇ ಶತಮಾನದವರೆಗೂ ಪ್ರಚಾರದಲ್ಲಿದ್ದಂತೆ ತಿಳಿಯ ಬಂದಿರುತ್ತದೆ. ಅಲ್ಲಿಂದೀಚೆಗೆ ಹೊಸಗನ್ನಡವು ಬಳಕೆಗೆ ಬಂದಿತು. ಹಿಂದಿನ ಗ್ರಂಥಗಳನ್ನು ಕ್ರಮವಾಗಿ ನೋಡುತ್ತಾ ಬಂದರೆ ಈ ವ್ಯತ್ಯಾಸವು ಸ್ಪಷ್ಟವಾಗಿ ಕಾಣಬರುತ್ತವೆ. ಇದರಿಂದ ಇದು ಸ್ವಭಾವಿಕವಾದ ಭಾಷೆಯಿಲ್ಲವೆಂದು ತಿಳಿಯಬರುತ್ತದೆ.

---

## ಫಾರ್ಸಿಭಾಷೆಯು.

ಈ ಭಾಷೆಯಾದರೂ ಕೂಡ ಬದಲಾವಣೆಗಳಿಗೆ ಸಿಕ್ಕಿರುತ್ತದೆ. ಜರದಷ್ತ್ ಎಂಬ ಅವತಾರಿಗಳ ಓಂಕಾರೋಕ್ತಗ್ರಂಥವು ಈ ಭಾಷೆಯಲ್ಲಿಯೇ ಇದೆ. ಮತ್ತು ಸುಮಾರು ಎಂಟುನೂರು ವರ್ಷಗಳಹಿಂದೆ ಬರದಿರುವ "ಗುಲಿಸ್ತಾನ್, ಬೋಸ್ತಾನ್" ಎಂಬ ಗ್ರಂಥಗಳಭಾಷೆಗೂ ಮತ್ತು ಓಂಕಾರೋಕ್ತ ಗ್ರಂಥದ ಭಾಷೆಗೂ ಬಹು ವ್ಯತ್ಯಾಸಗಳು ಕಂಡುಬರುತ್ತವೆ. ಜರದಷ್ತ್ರಗ್ರಂಥವು ಸುಮಾರು ಎರಡುಸಾವಿರ ವರ್ಷಗಳ ಹಿಂದಿನದಾಗಿ ಕಂಡು ಬರುತ್ತದೆ. ಈ ಎರಡು ಸಾವಿರ ವರ್ಷಗಳಲ್ಲಿ ಮೂಂಾವರ್ತಿ ಬದಲಾವಣೆಗಳನ್ನು ಹೊಂದಿರುವ ಈ ಭಾಷೆಯು ಮುಂದೆ ಎಷ್ಟು ಸಲ ಬದಲಾವಣೆಗೆ ಒಳಪಡಬೇಕಾಗಿದೆಯೋ ತಿಳಿಯದು. ಏಕೆಂದರೆ, ಇದು ಮನುಷ್ಯನ ಸ್ವಾಭಾವಿಕ ಭಾಷೆಯಲ್ಲ.

ಆದರೆ ಜಗತ್ತಿನ ಭಾಷೆಗಳೆಲ್ಲಾ ಈ ರೀತಿಯಾದ ಅವಸ್ಥಾ ವ್ಯತ್ಯಾಸಗಳಿಗೆ ಸಿಕ್ಕಿರುತ್ತವೆ. ಈ ಸೈಕಿ ಅರಬ್ಬಿಭಾಷೆಯು ಮಾತ್ರ ಈ ವ್ಯತ್ಯಾಸಕ್ಕೆ ಒಳಗಾಗದೆ ಶಾಶ್ವತವಾಗಿ ನಿಂತಿರುತ್ತದೆ. ಮನುಷ್ಯನ ಉತ್ಪತ್ತಿಯಾದ ಕೂಡಲೆ ಸ್ವಾಭಾವಿಕವಾಗಿ ಬಂದದ್ದು. ಆದುದರಿಂದ ಎಲ್ಲಾ ಭಾಷೆಗಳಿಗೂ ಮಾತೃಭಾಷೆಯಾಯಿತು. ನಾಲ್ಕುಸಾವಿರ ವರ್ಷಗಳ ಹಿಂದೆ ಈ ಭಾಷೆಯು ಯಾವಪ್ರಕಾರವಿತ್ತೋ ಅದೇರೀತಿಯಲ್ಲಿ ಈಗಲೂ ಇದೆ. ಹಿಂದು ಸಾವಿರ

ವರ್ಷಗಳ ಹಿಂದೆ ಹೇಗಿತ್ತೋ ಈಗಲೂ ಹಾಗೆಯೇ ಇರುತ್ತದೆ. ವಿವಿಧ ಕಾಲಗಳ ಬೇರೆಬೇರೆ ಗ್ರಂಥಗಳು ಈಗಲೂ ಸಿಕ್ಕುತ್ತವೆ. ಇವುಗಳಲ್ಲಿ ಸ್ವಲ್ಪವೂ ವ್ಯತ್ಯಾಸವಿರುವುದಿಲ್ಲ. ಆದುದರಿಂದ ಇದೇ ಮನುಷ್ಯನ ಸ್ವಭಾವಸಂಯುಕ್ತವಾದ ಭಾಷೆಯೆಂದು ತಿಳಿಯಬೇಕಾಗುತ್ತದೆ.

ಹಜರತ್ ಮಹಮ್ಮದ್ ಪೈಗಂಬರರು ಈ ಭಾಷೆಯಲ್ಲಿಯೇ ಬೋಧಿಸಿದರು. ಇದರಲ್ಲಿ ಓಂಕಾರೋಕ್ತವಾದ ಕುರಾನ್ ಪ್ರಕಟವಾಯಿತು. ಇದರಿಂದ ಹಜರತ್‌ರವರು ಭಾಷಾಭಿಮಾನಿಯಾಗದೆ ಜಗತ್ತಿನ ಮಾತೃಭಾಷೆಯಲ್ಲಿಯೇ ತಮ್ಮ ಸುಬೋಧನೆಗಳನ್ನು ಹೊರಪಡಿಸಿದರು. ಮತ್ತು ಈ ವಿಧವಾದ ದುಃಖವನ್ನು ಪ್ರಪಂಚದಿಂದ ದೂರಮಾಡಿದರು. ಜನ ತಲಾಂತರದಿಂದ ತಮ್ಮ ಜನ್ಮಸ್ಥಾನವನ್ನು ಬಿಟ್ಟು ಮತ್ತು ತಮ್ಮ ಮಾತೃಭಾಷೆಯನ್ನು ಬಿಟ್ಟು ಬೇರೆಬೇರೆಯಾಗಿದ್ದರು. ಇದರಿಂದ ಪರಮಾತ್ಮನು ಇವರೆಲ್ಲರನ್ನೂ ಒಂದು ಮಾಡಲೋಸುಗ ಜಗದ್ಗುರುವನ್ನು ಪೃಥ್ವಿಯ ನಾಭಿಯಲ್ಲಿ ಹುಟ್ಟಿಸಿ ಸರ್ವ ಗ್ರಂಥಗಳ ಮಾತೆಯಾದ ಕುರ್‌ಆನನ್ನು ಸರ್ವರ ಮಾತೃಭಾಷೆಯಲ್ಲಿ ಕಳುಹಿಸಿ ಜಗತ್ತನ್ನು ಕಾಪಾಡಿರುತ್ತಾನೆ. ಇದರಿಂದಲೇ ಹಜರತ್ ಮಹಮ್ಮದರು "ಬ್ರಹ್ಮಾಕೃತ ಶಿವಸಹಸ್ರನಾಮ ಸು | ಮೃತ್ಯುಂಜಯ ಸ್ನೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು" ಎಂಬ ಬಿರುದನ್ನು ಹೊಂದಿದರು.

## ಹತ್ತನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ಮೃಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ||

**ಜಗದ್ಗುರುವು ತೀರ್ಥಗಳಿಗೆ ಅಭಿಮಾನಿಯಾಗಿರದೆ, ಪ್ರಪಂಚದ ಸರ್ವ ಮಹಾತ್ಮರ ಜನ್ಮಸ್ಥಾನಗಳು ಮತ್ತು ಐಕ್ಯಸ್ಥಾನಗಳು ಯಾತ್ರೆಗೆ ಪವಿತ್ರವೆಂದು ಎಣಿಸಬೇಕು.**

ಈ ಪ್ರಮಾಣದಂತೆ ಹಜರತ್ ಮಹಮ್ಮದರ ಹೊರತು ಮತ್ತಾರೂ ಈ ಕಾರ್ಯವನ್ನು ಅನುಸರಿಸಿಲ್ಲ. ಈ ವಿಷಯವನ್ನು ಹಜರತ್ ಮಹಮ್ಮದರು ವಾಚಾಮಾತ್ರ ಅನುಸರಿಸಿರುವರೆಂದು ತಿಳಿಯಕೂಡದು. ಇದನ್ನು ಕಾರ್ಯತಃ ಸಾಧಿಸಿ ಮೇಲ್ಪಂಗ್ತಿಯಾಗಿ ನಡದಿರುತ್ತಾರೆ. ಈ ಮಹಾತ್ಮರು ಮಕ್ಕಾದ ಸುತ್ತಮುತ್ತಲಿರುವ ಸರ್ವ ಮಹಾತ್ಮರ ಜನ್ಮಸ್ಥಾನಗಳ ಮತ್ತು ಐಕ್ಯಸ್ಥಾನಗಳ ಯಾತ್ರೆಯನ್ನು ಮಾಡಿದರು. ತಮ್ಮ ಪ್ರವಾದಿತನದ ಹದಿನಾಲ್ಕು ವರ್ಷಗಳವರೆಗೂ ಬಹುಜನ ಪ್ರವಾದಿಗಳ ಜನ್ಮಸ್ಥಾನವೆಂದೂ ಮತ್ತು ಐಕ್ಯಸ್ಥಾನವೆಂದೂ ಹೆಸರುಗೊಂಡಿರುವ ಯಹ್ಯೂದರಿಗೂ ಮತ್ತು ಕ್ರೈಸ್ತರಿಗೂ ಪವಿತ್ರಸ್ಥಾನವಾಗಿರುವ "ಜೆರೂಸಲಂ" ಪಟ್ಟಣದ ಯಾತ್ರೆಯನ್ನು ಹಜರತ್ ಮಹಮ್ಮದ್ ಪೈಗಂಬರರು ಅನೇಕಾವರ್ತಿ ನಡೆಯಿಸಿದರು. ಈ ವಿಷಯವಾಗಿಯೇ ಓಂಕಾರೋಕ್ತವಾದ ಕುರಾ೯ ಅನೇಕ ಪ್ರಮಾಣಗಳನ್ನೊದಗಿಸುತ್ತದೆ.—

ವತಾಲಾದ ಫವುಲ್ಲಾ ಹಿನ್ನಾಸಬೆಬಾಜಹು
ಬೆ ಬಾಜಿನ್ ಲಹುದ್ದೆಮತ್ ಸವಾಮೆ
ವೊವ ಬೀ ಅವುನ್ ವಸಲ್ವಾತುನ್ ವ
ಮು ಸಾಜಿದೊ ಯುಜಕರು ಫೀಹಿಸ್ ಮು
ಳ್ಳಾಹೆ ಕಸೀರನ್ (ಕು. ೨೨. ನೇ ಆ. ಸಂ. ೬)

ಅರ್ಥ:—ಪರಮಾತ್ಮನ ಹೆದರಿಕೆಯು ಒಂದು ಜನಾಂಗಕ್ಕೆ ಇದ್ದು ಮತ್ತೊಂದು ಜನಾಂಗಕ್ಕೆ ಇಲ್ಲದಿದ್ದರೆ ಮಠಗಳು, ದೇವಾಲಯಗಳು, ಚರ್ಚುಗಳು ಮತ್ತು ಮಸೂತಿಗಳು ವಾಸ್ತವ್ಯವಾಗಿ ಹಾಳಾಗಿ ಹೋಗುತ್ತಿದ್ದವು. ಇವುಗಳಲ್ಲಿ ಪರಮಾತ್ಮಧ್ಯಾನವು ಜ್ಞಾನಭರಿತವಾಗಿ ಇರುವುದರಿಂದ ಪವಿತ್ರವಾದುವುಗಳು. ಇವುಗಳಲ್ಲಿ ಪರಮಾತ್ಮನ ಹೊರತು ಇತರ ಮೂರ್ತಿಗಳು ಇದ್ದರೆ ಅವು ಅಪವಿತ್ರವಾದುವುಗಳು.

ಇದರಿಂದ ಯಾವ ಮಹಾತ್ಮರ ಜನ್ಮಸ್ಥಳವು ಮತ್ತು ಐಕ್ಯಸ್ಥಳವು ವಿಗ್ರಹ ರಹಿತವಾಗಿದೆಯೋ ಅದು ಪವಿತ್ರವಾದುದು ಮತ್ತು ಯಾತ್ರೆಗೆ ಯೋಗ್ಯವಾದುದು ಎಂದು ವಿದಿತವಾಗುತ್ತದೆ. ಪುನಃ

ಲಾತಸಬ್ಬುಲ್ ಲಜೀನಯದ್ ವೂನ
ಮಿನ್ ದೂ ನಿಲ್ಲಾಹೆ. (ಕು. ೬ನೇ ಅ. ಸಂ. ೧೩)

ಅರ್ಥ:—ಯಾವ ಯಾವ ಅವತಾರಿಗಳು ಅವರ ಭಕ್ತರಿಂದ ಪರಮಾತ್ಮನಂತೆ ಗಣಿಸಲ್ಪಡುತ್ತಾರೋ ಅವರನ್ನು ದೂಷಿಸಬೇಡಿ. ಏಕೆಂದರೆ, ಇದು ಅವರ ತಪ್ಪಲ್ಲ; ಆದರೆ ಅವರ ಭಕ್ತರ ತಪ್ಪು. ಇವರು ಮೂಢತ್ವದಿಂದ ತಮೋಗುಣಕ್ಕೊಳಗಾಗಿ ಅವರನ್ನು ಗ್ರಹಿಸದೆ ಪರಮಾತ್ಮನೆಂದು ಪೂಜಿಸುತ್ತಾರೆ.

ಹಜರತ್ ಮಹಮ್ಮದರಲ್ಲದೆ ಈ ವಿಧವಾದ ಆಚರಣೆಯು ಇವರ ನಂತರ ಇವರ ಪೀಠಕ್ಕೆ ಬಂದ ನಾಲ್ವರು "ಖಲೀಫರ" ಕಾಲದಲ್ಲಿ ನಡೆದಿರುತ್ತದೆ. ಎರಡನೆಯ "ಖಲೀಫರಾದ" ಹಜರತ್ ಉಮರ್‌ರವರ ಚರಿತ್ರೆಯು ಜಗತ್ಪ್ರಸಿದ್ಧಿಯಾಗಿರುತ್ತದೆ ಇವರು ಜರೂಸೆಲಂನ್ನು ಜಯಿಸಿದಾಗ ಅಲ್ಲಿಯ ಕ್ರೈಸ್ತರ ಮುಖ್ಯಸ್ಥರು ಇವರನ್ನು ಕುರಿತು ಆ ಪವಿತ್ರಸ್ಥಾನದಲ್ಲಿ ತಮ್ಮ ಪ್ರಾರ್ಥನೆಯನ್ನು ಮುಗಿಸಿಕೊಳ್ಳಬಹುದೆಂದು ಹೇಳಿದರು. ಅದಕ್ಕೆ ಅವರು ನಾನು ಈ ದಿವಸ ಪ್ರಾರ್ಥನೆಯನ್ನು ಮಾಡಿದ್ದೇ ಆದರೆ ಮುಂದಿನವರು ಇದನ್ನು ಮಸೂತಿಯನ್ನಾಗಿ ಮಾಡಿಬಿಟ್ಟಾರು, ಇದರಿಂದ ನಿಮಗೆ ತೊಂದರೆಯಾದೀತು ಎಂದು ಹೇಳಿ ಬೇರೆ ಸ್ಥಳದಲ್ಲಿ ಪ್ರಾರ್ಥನೆಯನ್ನು ಮುಗಿಸಿದರು. ಆ ಸ್ಥಳದಲ್ಲಿ ಅವರ ಹೆಸರಿನಮೇಲೆ ಕಟ್ಟಿಸಿರುವ ಮಸೂತಿಯು ಈಗಲೂ

ಜಗತ್ಪ್ರಸಿದ್ಧಿಯಾಗಿರುತ್ತದೆ. ಕೆಲವು ದಿನಗಳಲ್ಲಿ ಚರ್ಚಿನವರೆಲ್ಲರೂ ಇಂಥಾ ನಿಸ್ಪೃಹವಾದ ನಡತೆಯನ್ನು ನೋಡಿ ಮುಸೂತಿಯನ್ನೇ ಸೇರಿದರು. ಇದೇ ರೀತಿಯಾಗಿ ಔರಂಗಜೇಬರು ಕಾಶಿಯದೇವಾಲಯದ ಹತ್ತಿರವೇ ಒಂದು ಮುಸೂತಿಯನ್ನು ಕಟ್ಟಿಸಿದರು. ಆದರೆ ಆ ದೇವಾಸ್ಥಾನವನ್ನು ಇವರು ನೆಲಸನು ಮಾಡಲಿಲ್ಲ. ಜನರೇ ಇವರ ಸ್ವಾರ್ಥತ್ಯಾಗವನ್ನೂ ನಡತೆಯನ್ನೂ ತಿಳಿಯಬೇಕೆಂಬ ಉದ್ದೇಶವಿದ್ದಿತು.

ಪರಮಾತ್ಮನು ಮನುಷ್ಯನಿಗೆ ತಾರಕಂ, ದಂಡಂ, ಕುಂಡಲಾಕಾರಂ, ಅರ್ಧಚಂದ್ರಕಂ, ಬಿಂದುಸಂಯುಕ್ತಂ-ಎಂಬ ಪಂಚವಿಧವಾದ ಪ್ರಾರ್ಥನೆಗಳನ್ನು ನೇಮಿಸಿದ್ದನು. ಅವುಗಳ ವಿಧಾನಗಳನ್ನು ತಿಳಿಯದೆ ತಮ್ಮ ಮನಸ್ಸಿಗೆ ಬಂದಹಾಗೆ ನಡೆಯುತ್ತಾರೆ. ಈ ಪವಿತ್ರವಾದ ವಿಧಾನವು ಸಂಪೂರ್ಣವಾಗಿ ಹಜರತ್ ಮುಹಮ್ಮದ್ ಪೈಗಂಬರರು ತಮ್ಮ ಭಕ್ತರಿಗೋಸ್ಕರ ನೇಮಿಸಿದರು. ಕಾರಣವೇನೆಂದರೆ, ಮನುಷ್ಯನು ಬ್ರಹ್ಮಸ್ವರೂಪಿಯಾದುದರಿಂದ ಸರ್ವವ್ಯಾಪಿಯಾಗಿ ಜಗತ್ತಿನಲ್ಲಿ ಪ್ರಜ್ವಲಿಸುತ್ತಾನೆ. ಈ ಪ್ರಪಂಚವು ಇವನಿಂದಲೇ ಉತ್ಪತ್ತಿಯಾಗಿ ಇವನಲ್ಲೇ ಸಮಾವೇಶಗೊಂಡು ಇರುತ್ತದೆ. ಆದುದರಿಂದ ಯಾ ಜಗತ್ತಿನಲ್ಲಿ ಸರ್ವಭೂತಗಳಲ್ಲಿಯೂ ಮೇಲಿನ ಪ್ರಾರ್ಥನೆಗಳೆಲ್ಲ ಭಿನ್ನ ಭಿನ್ನವಾಗಿ ಆಚಾರದಲ್ಲಿವೆ. ಗಿಡ ಮರಗಳು, ತಾರಕಂ ಎಂಬ ವಿಧವಾಗಿ ಪ್ರಾರ್ಥಿಸುತ್ತವೆ. ಹಾವು, ಚೇಳು, ಬಳ್ಳಿ ಮುಂತಾದುವು ದಂಡಂಪ್ರಾರ್ಥನೆ ಮಾಡುತ್ತವೆ. ಪಶು, ಮೃಗೆಗಳು ಅರ್ಧಚಂದ್ರಕಂ ಪ್ರಾರ್ಥನೆ ಮಾಡುತ್ತವೆ. ಗಡ್ಡೆ ಗುಡ್ಡಗುಂಪ ಮುಂತಾದುವುಗಳು ಕುಂಡಲಾಕಾರಂ, ಬಿಂದುಸಂಯುಕ್ತಂ ಎಂಬ ಪ್ರಾರ್ಥನಾವಿಧಾನಗಳಿಗೊಳಪಟ್ಟವೆ. ಈ ಸಮಸ್ತ ವಸ್ತುಗಳನ್ನೂ ಸಂಪೂರ್ಣವಾಗಿ ಹೊಂದಿರುವುದರಿಂದ ಮನುಷ್ಯನು ಈ ವಿಧವಾದ ಸರ್ವಪ್ರಾರ್ಥನೆಗಳನ್ನೂ ಮಾಡಬೇಕು. ಹಾಗೆ ಆಚರಿಸದೇ ಇದ್ದರೆ ಅವನು ಮನುಷ್ಯನಲ್ಲವೆಂದು ಹೇಳಬೇಕಾಗುತ್ತದೆ. ಕಾರಣ ಪರಮಾತ್ಮನು ಜಗದ್ಗುರುಗಳ ಮುಖಾಂತರ ಈ ಪ್ರಾರ್ಥನಾ ವಿಧಗಳನ್ನು ಸರ್ವರಿಗೂ ನೇಮಿಸಿರುತ್ತಾನೆ. ಇದರಿಂದಲೇ ಈ ಮಹಾತ್ಮರು "ಬ್ರಹ್ಮಾಕೃತ ಶಿವಸಹಸ್ರನಾಮಸು | ಮೃತ್ಯುಂಜಯ ಸ್ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು" || ಎಂಬ ಬಿರುದಾಂಕಿತರಾಗಿರುತ್ತಾರೆ.

## ಹನ್ನೊಂದನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||

ಜಗದ್ಗುರುವು ವಿಶೇಷವಾಗಿ ಯಾವತರಹೆಯ ಉಡುಪಿಗೂ ಅಭಿಮಾನಿಯಾಗಿರದೆ ದೇಶ ಕಾಲ ವಾಯುಗುಣಕ್ಕೆ ತಕ್ಕಂತೆ ಉಡುಪನ್ನು ಧರಿಸಿ, ಉಡುಪಿನಿಂದುಂಟಾಗಿರುವ ದುಃಖವನ್ನು ಜನರಿಂದ ದೂರಮಾಡಬೇಕು.

ಈ ಪ್ರಮಾಣವುಕೂಡ ಹಜರತ್ ಮಹಮ್ಮದರ ಒತ್ತಾಶೆಯನ್ನೇ ಬಯಸುತ್ತದೆ. ಈ ಮಹಾತ್ಮರು ಸರ್ವ ಧರ್ಮದವರ ವಸ್ತ್ರಗಳನ್ನೂ ಉಪಯೋಗಿಸಿದರು. ಇದಲ್ಲದೆ ಪಾದಗಳಿಗೆ ಮೊಚ್ಚ್ಕೆ, ಮೆಟ್ಟು, ಹಾವುಣಿ ಮುಂತಾದುವುಗಳನ್ನು ಉಪಯೋಗಿಸಿದರು. ಕೆಲವುವೇಳೆ ಬರಿಯಕಾಲಿನಿಂದಲೂ ಓಡಾಡುತ್ತಿದ್ದರು. ಹಸುರು ವಸ್ತ್ರಗಳನ್ನೂ ಕೆಂಪು ವಸ್ತ್ರಗಳನ್ನೂ ಬಿಳಿಯವಸ್ತ್ರಗಳನ್ನೂ ಹಳದಿವಸ್ತ್ರಗಳನ್ನೂ ಕರಿಯವಸ್ತ್ರಗಳನ್ನೂ ಆಯಾಯಕಾಲಗಳಂತೆ ಧರಿಸುತ್ತಿದ್ದರು. ಒಂದುಸಮಯದಲ್ಲಿ ಹಿಂದೂಸ್ಥಾನದ ಸಾಧುಗಳ ಬಟ್ಟೆಗಳನ್ನೂ ಮತ್ತೊಂದು ವೇಳೆಯಲ್ಲಿ ಯಹೂದ್ಯರ ಸಾಧುಗಳ ಬಟ್ಟೆಗಳನ್ನೂ ಒಂದು ಸಮಯದಲ್ಲಿ ಅರಬ್ ದೇಶದ ಕಫ್ತಾನರ ಉಡುಪನ್ನೂ ಮತ್ತೊಂದು ಸಮಯದಲ್ಲಿ ರಾಜರ ಉಡುಪನ್ನೂ ಕೆಲವುವೇಳೆಯಲ್ಲಿ ಕುರಿಕಾಯುವವರ ಉಡುಪನ್ನೂ ಮತ್ತೊಂದು ವೇಳೆಯಲ್ಲಿ ವ್ಯವಹಾರಕ್ಕೆ ತಕ್ಕಬಟ್ಟೆಗಳನ್ನೂ ಧರಿಸುತ್ತಿದ್ದರು. ಮತ್ತು ಇವುಗಳನ್ನು ತಾವೇ ಹೊಲಿಯುತ್ತಲೂ ಹೊಲಿಸುತ್ತಲೂ ಇದ್ದರು. ಈ ವಿಧದಲ್ಲಿ ಉಡುಪಿನ ಅಭಿಮಾನದ ದುಃಖವನ್ನು ದೂರಮಾಡಿರುತ್ತಾರೆ.

ಈಗಿನ ನಾಮಧಾರಿ ಜಗದ್ಗುರುಗಳು ಲೆಕ್ಕವಿಲ್ಲದ ಸುಳ್ಳಭಿಮಾನಗಳನ್ನು ಹಿಡಿದು, ತಾವು ದುರಭಿಮಾನಿಗಳಾಗಿರುವುದಲ್ಲದೆ ಇತರರನ್ನೂ ಕೂಡ ಅಸೂಯೆಗೆ ಗುರಿಮಾಡುತ್ತಾರೆ. ಇವರು ತಮ್ಮ ಉಡುಪನ್ನೇ ಆಗಲಿ, ತಮ್ಮ ಸ್ಥಳವನ್ನೇ ಆಗಲಿ, ತಮ್ಮ ಅವುಗೆಯನ್ನೇ ಆಗಲಿ ಬಿಟ್ಟರೆ ಇವರ ಗುರತ್ವವೇ ದೂರವಾಗುವುದೆಂದು ಭಾವಿಸುತ್ತಾರೆ. ಇವರು ಜಗದ್ಗುರುಗಳಲ್ಲವು. ಇವರನ್ನು ಜಗತ್ತಿನ ಮಕ್ಕಳೆಂದು ಹೇಳಬಹುದು. ಇದರಿಂದಲೇ ಇವರನ್ನು ಚಿಕ್ಕಂದಿ

ನಿಂದಲೂ ಮರಿಗೆಳೆಂದು ಸಾಕಿರುತ್ತಾರೆ. ಮತ್ತು ರಜೋಗುಣಯುಕ್ತರಾದ ನರರು ಇವರನ್ನು ಗಾದಿ ಶೃಂಗಾರವಾದ ಮೂರ್ತಿಯಂತೆ ಅತಿವೈಭವದಿಂದ ಕೂಡ್ರಿಸುತ್ತಾರೆ. ಹೀಗೆ ತಮ್ಮ ಕೈಯಿಂದ ತಾವೇಮಾಡಿಕೊಂಡ ಜಗದ್ಗುರುವು ಎಷ್ಟರಮಟ್ಟಿನ ಸುಮಾರ್ಗವನ್ನು ತೋರಿಸುವನೆಂಬುದು ಮೇಲೆಯೇ ವಿದಿತವಾಗುತ್ತದೆ. ಇದರ ಸುಲುವಾಗಿಯೇ ಮೂಢಾತ್ಮರಾದ ಈ ಜಗದ್ಗುರುಗಳು ಜನಕ್ಕಂಜಿ ನಡೆಯುತ್ತಾರೆ. ಜನರು ಇವರನ್ನು ಸ್ವಲ್ಪ ದ್ವೇಷಿಸಿದ್ದೇ ಆದರೆ ಇವರ ಗುರುತ್ವವೇ ಬಯಲಾಗುತ್ತದೆ. ಇವರಿಗೆ ಪರಮಾತ್ಮನಿಂದ ಮರ್ಯಾದೆಯು ಸಿಗದಕಾರಣ ಜನರ ಮರ್ಯಾದೆಯನ್ನು ಬಯಸುತ್ತಾರೆ. ಪರಮಾತ್ಮನ ಮರ್ಯಾದೆಗೆ ಎಂದಿಗೂ ದೋಷವಿಲ್ಲವು ಮತ್ತು ಜನರ ಮರ್ಯಾದೆಗೆ ಸ್ಥಳವೇ ಇಲ್ಲವು. ಜನರಿಂದ ಸಂಪಾದಿಸಿದ ಮರ್ಯಾದೆಯು ಯಾವಾಗ ಲಯವನ್ನೈದುವುದೋ ಗೋಚರವಾಗದು. ಹೀಗೆ ಅಶಾಶ್ವತವಾದುದನ್ನು ಹಿಡಿದ ಜಗದ್ಗುರುಗಳು ನಾಮಧಾರಿಗಳೇ ವಿನಹ ಮತ್ತೆ ಬೇರೆ ಇಲ್ಲವು. ಇವರ ಡಬಡ್ಡಾಳಿಕೆಯು ಬಯಲಾಗುವ ಸಮಯವು ಒದಗಿರುತ್ತದೆ. "ಪಟ್ಟಾಪಟ್ಟದವರು ಹೆಟ್ಟ್ಯಾಡಿ ಸತ್ತಾರು ಪಟ್ಟಾವು ತಮತಮಗಣ್ಣಾ | ಪಟ್ಟಕ್ಕೆ ಚನ್ನಬಸವಣ್ಣ ಬಂದಾನು ಒಟ್ಟಾಗಿಹಾರುತೀರಣ್ಣಾ" || ಎಂಬ ಉಕ್ತಿಯಂತೆ ಈ ನಾಮಧಾರಿಗಳಕಾಲವು ಸಮೀಪಿಸಿರುತ್ತದೆ. ಇದರಲ್ಲಿ ಇವರು ಎಚ್ಚರವನ್ನು ತಂದುಕೊಂಡು ಸುಮಾರ್ಗಾವಲಂಬಿಗಳಾಗುವರೆಂದು ನಂಬುತ್ತೇನೆ.

ಈ ನಿಸ್ಪೃಹವಾದ ನಡತೆಯಲ್ಲಿ ಹಜರತ್ ಮಹಮ್ಮದ್ ಪೈಗಂಬರರೇ ಅವಿಚ್ಛಿನ್ನವಾಗಿ ತೇರ್ಗಡೆಯನ್ನು ಹೊಂದಿರುತ್ತಾರೆ. ಈ ಮಾಹಾನುಭಾವನಿಗೆ ಮಾತ್ರವೇ ಜಗದ್ಗುರುವಿನ ಬಿರುದು ಸಲ್ಲುವದು.

---

## ಹನ್ನೆರಡನೆಯ ಪ್ರಮಾಣವು.

ಬ್ರಹ್ಮಾಕೃತ್ಞಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ನಾಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು ||

ಜಗದ್ಗುರುವು ಆತ್ಮಪೂಜಾ ವಿಧಾನಗಳಾದ, ತಾರಕಂ, ದಂಡಂ, ಅರ್ಧಚಂದ್ರಕಂ, ಕುಂಡಲಾಕಾರಂ, ಬಿಂದುಸಂಯುಕ್ತಂ—ಎಂಬ ವಿಧಾನಗಳನ್ನು ಭಿನ್ನವಿಲ್ಲದೆ ನಡಿಸಿ ದುಃಖವನ್ನು ದೂರಮಾಡಬೇಕು.

ಪ್ರಪಂಚದ ಸರ್ವ ಧರ್ಮಗಳು ಮೇಲಿನ ಪ್ರಾರ್ಥನೆಗಳಲ್ಲಿ ಒಂದೊಂದನ್ನುಮಾತ್ರ ಅನುಸರಿಸುತ್ತಿದ್ದಾರೆ. ಆದರೆ ಹಜರತ್ ಮಹಮ್ಮದ್ ಪೈಗಂಬರರು ಇವುಗಳೆಲ್ಲವನ್ನೂ ಒಂದಾಗಿ ಸಮಾವೇಶಗೊಳಿಸಿ ಆತ್ಮಪೂಜೆಯನ್ನು ಮಾಡುತ್ತಾರೆ. ಈ ಮಹಾತ್ಮರು ಜಗದ್ಗುರುಗಳಾಗಿ ಅವತರಿಸಿದ್ದ ಕಾರಣ ವೈಷ್ಣವರು ಮತ್ತು ಶೈವರು ಅನುಸರಿಸುವ ಪೂಜಾವಿಧಾನಗಳನ್ನೂ ಮತ್ತು ಕ್ರೈಸ್ತರು ಮತ್ತು ಯಹೂದ್ಯರು ಅನುಸರಿಸುವ ಆತ್ಮಪೂಜಾವಿಧಾನಗಳನ್ನೂ ಇವರು ಅವಿಚ್ಛಿನ್ನವಾಗಿ ಅನುಸರಿಸಿದರು. ಪ್ರಪಂಚದ ಸರ್ವ ಪಂಗದವರೂ ಅನುಸರಿಸುವ ಪೂಜೆಗಳೆಲ್ಲವೂ ಜಗದ್ಗುರುಗಳ ಪೂಜಾವಿದಾನದಲ್ಲಿ ಐಕ್ಯವಾಗಿರುತ್ತವೆ. ಈ ಪೂಜೆಯನ್ನೇ ಮುಸಲ್ಮಾನರು, "ನಮಾಜ್" ಎಂದು ಹೇಳುತ್ತಾರೆ. ಈ ಪೂಜೆಯ ವಿಷಯವನ್ನೇ ಹಿಂದೆ ಶ್ರೀರಾಮರು ಆಂಜನೇಯನಿಗೆ ಬೋಧಿಸಿದರು.—

ಪ್ರಥಮಂತಾರಕಂಚೈವ ದ್ವಿತೀಯಂ ದಂಡ
ಮುಚ್ಯತೆ ತೃತೀಯಂ ಕುಂಡಲಾಕಾರಂ ಚ
ತುರ್ಥಂ ಅರ್ಧಚಂದ್ರಕಂ ಪಂಚಮಂ
ಬಿಂದುಸಂಯುಕ್ತಂ ಓಂಮಿತ್ಯಜ್ಯೋತಿ
ರೂಪಕಂ. (ಶ್ರೀರಾಮತತ್ವಬೋಧಾಮೃತ)

ಈ ಪ್ರಾರ್ಥನೆ ಸರ್ವಜಾತಿಗಳ ಆತ್ಮಾಭಿವೃದ್ಧಿಗೆ ಇದ್ದದ್ದರಿಂದ ಇವರ ಅನುಯಾಯಿಗಳು ಅದನ್ನು ಅನುಸರಿಸದೆ ತ್ಯಜಿಸಿಬಿಟ್ಟರು. ಇದರಲ್ಲಿನ ಅಷ್ಟಾಂಗಯೋಗವನ್ನು, ಚತುಷ್ಪಾದವನ್ನು, ತ್ರಿಸ್ಥಾನಗಳನ್ನು, ಪಂಚದೈವಾಂಗಗಳನ್ನು ಮತ್ತು ಇವುಗಳ ಸಂಪೂರ್ಣ ಮಂತ್ರಗಳನ್ನು ಜಗದ್ಗುರು ಬಿರುದಾಂಕಿತರಾದ ಹಜರತ್ ಮಹಮ್ಮದ್ ಪೈಗಂಬರರು ಸವಿಸ್ತಾರವಾಗಿ ತಮ್ಮ ಪ್ರಾರ್ಥನಾವಿಧಾನಗಳಲ್ಲಿ ತೋರಿಸಿಬಿಟ್ಟರು. ಇದನ್ನೇ ಈಗಲೂ ಇವರ ಅನುಯಾಯಿಗಳು ಅನುಸರಿಸುತ್ತಾರೆ.

శ్రీరామరు ఆంజనేయనిగే బోధిసిద ప్రార్థనా విధాన.

# ಜಗದ್ಗುರುವಿನ ಪ್ರಾರ್ಥನೆ ವಿಧಾನ.

## ೧ನೇ ಪಾದ (ತಾರಕಪ್ರಾರ್ಥನೆ).

ಪ್ರಥಮದಲ್ಲಿ ಮನುಷ್ಯನು ಪ್ರಾರ್ಥನೆಗೆ ಅನುವಾಗಿ ಭೂವಿ.ಯ ನಾಭಿ ಸ್ಥಾನದಕಡೆ ಮುಖವಾಗಿ ನಿಲ್ಲಬೇಕು. ಇದಕ್ಕೆ ಕಾರಣವೇನಂದರೆ, ತನ್ನ ಉತ್ಪತ್ತಿಯ ನಿಜತ್ವದ ಅವಗಾಹನೆಗೆ ಇದನ್ನು ಅನುಸರಿಸಬೇಕು. ಇದೇ ಸುಜ್ಞಾನಜ್ಯೋತಿಗೆ ಪ್ರಕಾಶಮಾನವಾಗಿರುವುದು. ಮೇಲಿನ ರೀತಿಯಲ್ಲಿ ನಿಂತು ಮುಂದಿನ ಮಂತ್ರವನ್ನು ಪಠಿಸಬೇಕು.

ಇನ್ನಿವಜ್ಜಿಹತೊವಜ್ಹಿಯಲಿಲ್
ಲಜಿಫಶರಸ್ಸಮಾವಾತೆವಲ್ ಅರ್ದ
ಹನೀಪಂವಮಾ ಅನಾಮಿನಲ್ ಮು
ಷಿರಿಕೀನ್.

ಅರ್ಥ:—ನಾಸ್ತವ್ಯವಾಗಿ ನಾನು ನನ್ನ ಮುಖವನ್ನು ಪರಮಾತ್ಮನ ಕಡೆಗೆ ತಿರುಗಿಸಿರುತ್ತೇನೆ. ಆತನೇ ಆಕಾಶಗಳನ್ನೂ ಮತ್ತು ಪೃಥ್ವಿಯನ್ನೂ ಸೃಷ್ಟಿಸಿರುತ್ತಾನೆ. ನಾನು ಅತನ ವಿನಹ ಪೂಜಿಸುವವನಲ್ಲವು.

ಇದಾದಮೇಲೆ ಕಾಲುಗಳನ್ನು ಜೋಡಿಸಿ ಕೈಗಳನ್ನಿಳಿಯಬಿಟ್ಟು ಸ್ಥೂಲ ದೇಹವನ್ನು ಚಂಚಲರಹಿತವನ್ನಾಗಿ ಮಾಡಿ ಖೇಚರಿಯ ಮತ್ತು ಭೂಚರಿಯ ಮಧ್ಯಸ್ಥಾನದಲ್ಲಿ ದೃಷ್ಟಿಯನ್ನಿಟ್ಟು ಮುಂದಿನ ಮಂತ್ರವನ್ನೋದಬೇಕು.

"ಅಲ್ಲಾಹು ಅಕ್ಬರ."

ಅರ್ಥ:—ಅಲ್ಲಾಹನು ಎಲ್ಲರಿಗಿಂತಲೂ ಶ್ರೇಷ್ಠನು ಮತ್ತು ದೊಡ್ಡವನು.

ಇದಾದಮೇಲೆ ಕೈಗಳನ್ನು ಎದೆಯಮೇಲೆ ಕಟ್ಟಬೇಕು. ನುತ್ತು ಟಾಯಿಂದ ಮುಂದಿನ ಮಂತ್ರೋಚ್ಚಾರಣೆಯನ್ನು ಮಾಡಬೇಕು.

ಸುಬಹಾನಕ ಅಲ್ಲಾಹುಮ್ಮಬಿಹಮ್ದಿಕಾವ
ತಬಾರಕಸ್ಮಕಾವತಾ ಆಲಾಜದ್ದೊಕ.

ಅರ್ಥ:—ಎಲೈ ಭಗವಂತನೆ ! ನೀನು ನಿನ್ನ ಪ್ರಾರ್ಥನೆಗಿಂತಲೂ ಪವಿತ್ರನಾದವನು. ಮತ್ತು ನಿನ್ನ ಪ್ರಕಾಶನಾಮವು ಮಂಗಳವಾದದ್ದು ಮತ್ತು ನಿನ್ನ ಪದ್ಧತಿಯು ಲೋಕಾಧಿಷ್ಟವಾದದ್ದು. ನನಗೆ ಆಸೆಯುಳ್ಳ ವಸ್ತುವೇ ನೀನಾಗಿರುತ್ತಿ.

ಇಷ್ಟನ್ನು ಹೇಳಿ ನಿಶ್ಚಲವಾದ ಮನಸ್ಸಿನಿಂದ ಪಂಚೇಂದ್ರಿಯಗಳ ಬಾಹ್ಯಕೆಲಸದ ಗಮನವನ್ನು ತಪ್ಪಿಸಿ ಪರಮಾತ್ಮನಲ್ಲಿ ಐಕ್ಯತೆಯನ್ನುದಿಸಬೇಕು. ಪುನಃ ಮುಂದಿನ ಮಂತ್ರವನ್ನು ಜಪಿಸಬೇಕು.

ಆವೂಜಬಿಲ್ಲಾಹೆಮಿನಷ್ಶೈತ್ವಾಂನಿರ್ರಜೀಮ
ಬಿಸ್ಮಿಲ್ಲಾಹಿರ್ರಹಮಾಂನಿರ್ರಹೀಮ.

ಅರ್ಥ:—ನಾನು ವಿಧಿದೂತನಿಂದ ದೂರನಾಗಿ ಅಲ್ಲಾಹನ ಒಳಗಾಗಿರುತ್ತೇನೆ. ಮತ್ತು ಉತ್ಪತ್ತಿಸ್ಥಿತಿಗೆ ಕರ್ತನಾದ ಅಲ್ಲಾಹನ ಸುನಾಮದಿಂದ ಪ್ರಾರಂಭಿಸುತ್ತೇನೆ.

ನಂತರ ತಕ್ಷಣವೇ ಮುಂದಿನ ಮಂತ್ರವನ್ನು ಪಠಿಸಬೇಕು. ಮತ್ತು ಅದರ ಅರ್ಥದಕಡೆ ಗಮನಮಾಡಬೇಕು.

ಅಲ್‌ಹಮ್‌ದುಲಿಲ್ಲಾಹಿರಬ್ಬಿಲ್ ಆಲಮಿನ
ಅರ್ರಹಮಾನಿರ್ರಹೀಮಮಾಲಿಕೆಯೌಮಿದ್ದೀನ
ಇಯ್ಯಾಕನಾಬುದುವ ಇಯ್ಯಾಕನಸ್‌ತಯಿನ
ಎಹೆದಿನಸ್ಸಿರಾತಲ್‌ಮುಸ್‌ತಖೀಮಸಿರಾತಲ್
ಲಜೀನ ಅನ್ ಅಮ್‌ತಾ ಅಲೈಹಿಂಗೈರಿಲ್
ಮಗ್‌ದೂಬಿ ಅಲೈಹಿಮ್ ವಲದ್ದಾಲ್ಲೀನ್. (ಆಮಿನ್)

ಅರ್ಥ:—ಅಲ್ಲಾಹನು ಸದಾಶಿವನಾಗಿ ಜಗತ್ತನ್ನು ಬೋಧಿಸಿ ತನ್ನ ಪದವಿಯನೀಯುತ್ತಲೂ, ಈಶ್ವರನೆನಿಸಿ ಭಜಿಸಿಕೊಳ್ಳುತ್ತಾ ಶಾಶ್ವತ ಸೌಖ್ಯಂ ಗಳನೀವುತ್ತಲೂ, ಬ್ರಹ್ಮನೆನಿಸಿ ಲೋಕವನ್ನು ಸೃಜಿಸುತ್ತಲೂ ಬ್ರಹ್ಮಾದಿ ಅನಾದಿಯನ್ನು ರೂಪುಕ್ತಲೂ, ವಿಷ್ಣುವೆನಿಸಿ ಜಗವನ್ನು ಪಾಲಿಸಿ ವೈಷ್ಣವಜನ ರನ್ನು ಲಾಲಿಸುತ್ತಲೂ ಮತ್ತು ರುದ್ರನೆನಿಸಿ ಓಲೈಸಿಕೊಂಡು ಕ್ಷುದ್ರಧುಗೆವ ನುರೆ ಸಂಹರಿಸುತ್ತಲೂ ಇದ್ದಾನೆ. ಎಲೈ ಪರಮಾತ್ಮನೆ, ನಾವು ನಿನ್ನ ಸೇವೆ ಯನ್ನೇ ಮಾಡುತ್ತೇವೆ. ಮತ್ತು ನಿನ್ನ ಸಹಾಯವನ್ನೇ ಹಾರೈಸು ತ್ತೇವೆ. ಯಾವ ಮಹಾತ್ಮರಮೇಲೆ ನಿನ್ನ ಅನುಗ್ರಹ ಉಂಟಾಯಿತೋ ಅಂಥಾವರ ಸುಮಾರ್ಗದಲ್ಲಿ ನಡೆಯಿಸು. ಯಾರು ನಿನ್ನ ಆಗ್ರಹಕ್ಕೆ ಪಾತ್ರ ರಾದರೋ ಅಂಥಾವರಿಂದ ನಮ್ಮನ್ನು ದೂರಮಾಡು ಮತ್ತು ವಿಗ್ರಹಪೂಜಕ ರಲ್ಲಿ ನಮ್ಮನ್ನು ಸಮಾವೇಶ ಮಾಡಬೇಡ. (ಇದನ್ನು ಸಮ್ಮತಿಸು.)

ಇದರ ನಂತರ ಖುರಾನಿನಿಂದ ಕೆಲವು ಮಂತ್ರಗಳನ್ನು ಓದಬೇಕು.

---

## ಮೂರನೇ ಪಾದ (ಅರ್ಧಚಂದ್ರಕಂ).

ಮೇಲಿನ ಮಂತ್ರವನ್ನು ಪಠಿಸಿದಕೂಡಲೇ ಮುಂದಿನ ಮಂತ್ರವನ್ನು ಪುನಃ ಉಚ್ಚರಿಸಬೇಕು.

"ಅಲ್ಲಾಹು ಅಕ್ಬರ್"

ಇದರನಂತರ ಅರ್ಧಚಂದ್ರಾಕಾರವಾಗಿ ಬೊಗ್ಗಿ ಎರಡು ಕೈಗಳನ್ನು ಮೊಳಕಾಲುಗಳಮೇಲೆ ಇರಿಸಿ ನಿಶ್ಚಿಂತನಾಗಿ ಮುಂದಿನ ಮಂತ್ರವನ್ನು ಮೂರುಬಾರಿಗಿಂತಲೂ ಕಡಿಮೆಯಿಲ್ಲದೆ ಉಚ್ಚರಿಸಬೇಕು.

"ಸುಬ್‌ಹಾನರಬ್ಬಿಲ್ ಅಜೀಮ್"

ಅರ್ಥ:—ಪರಮಾತ್ಮನು ಲೋಕಪಾವನನಾದ ಪ್ರಭುವಾಗಿದ್ದಾನೆ. ಇಷ್ಟಾದ ತರುವಾಯ ನೆಟ್ಟಗೆ ನಿಲ್ಲುತ್ತಾ ಮುಂದಿನ ಮಂತ್ರವನ್ನು ಪಠಿಸಬೇಕು.

"ಸಮಿ ಅಲ್ಲಾಹುಲಿಮನ್ ಹವಿದಾ"

ಅರ್ಥ:—ಅಲ್ಲಾಹನು ತನಗೆ ಅರ್ಪಿತವಾಗುವ ಪ್ರಾರ್ಥನೆಯನ್ನು ಕೇಳುತ್ತಾನೆ.

## ೩ನೇ ಪಾದ (ದಂಡಂ)

ಮೇಲಿನ ಮಂತ್ರವನ್ನು ಉಚ್ಚರಿಸಿದಕೂಡಲೇ ನೆಟ್ಟಗೆ ನಿಂತು ಮುಂದಿನ ಮಂತ್ರವನ್ನು ಉಚ್ಚರಿಸುತ್ತಾ ದಂಡಂಪ್ರಮಾಣದಲ್ಲಿ ಪ್ರವೇಶಿಸ ಬೇಕು.

"ಅಲ್ಲಾಹು ಅಕ್ಬರ."

ದಂಡಂದಲ್ಲಿ ಪ್ರವೇಶಿಸಿದಾಗ ಮುಂದಿನ ಮಂತ್ರವನ್ನು ಮೂರುಸಾರಿ ಗಿಂತಲೂ ಕಡಿಮೆಯಿಲ್ಲದೆ ಉಚ್ಚರಿಸಬೇಕು.

ಸುಬ್‌ಹಾನ ರಬ್ಬಿಲ್ ಅಲಾ.

ಅರ್ಥ;—ಭಗವಂತನು ಲೋಕಪಾವನಾಧಿಷ್ಟನಾದ ಪ್ರಭುವಾಗಿದ್ದಾನೆ.

ನಂತರ ಮುಂದಿನ ಮಂತ್ರವನ್ನು ಜಪಿಸುತ್ತಾ ಕುಂಡಲಾಕಾರವಾಗಿ ಕುಳಿತುಕೊಳ್ಳಬೇಕು. ಮತ್ತೊಂದಾವರ್ತಿ ದಂಡಾಕಾರ ಪ್ರಾರ್ಥನೆಯಲ್ಲಿ ಪ್ರವೇಶಿಸಿ ಹಾಗೆಯೇ ಕುಳಿತು ಎರಡು ಕೈಗಳನ್ನೂ ಉರ್ದಿಸ್ಥಾನದಲ್ಲಿ ಇಟ್ಟು ಮುಂದಿನ ಮಂತ್ರಪಠನೆಯನ್ನು ಮಾಡಬೇಕು.

## ೪ನೇ ಪಾದ (ಕುಂಡಲಾಕಾರಂ)

ಅತ್ತೆಹಯ್ಯಾತೊ ಲಿಲ್ಲಾಹೆಪಸ್
"ಸಲವಾತೊವತ್ತತ್ತೈಯಬಾತೊ
ಅಸ್ ಸಲಾ, ಮೊ ಅಲೈಕ ಐಯೊ
ಹನ್‌ನಬಿಯೊ ರಹಮತುಲ್ಲಾ
ಹೇವಬರ್‌ಕಾತಹು, ವಸ್‌ಸಲಾಮೊ ಅಲೈ
ನಾವ ಅಲಾ ಇಬಾದುಲ್ಲಾ ಹಿಸ್ಸಾಲೆ ಹೀನ
ಅಷಹೊ ದೊನ್ ಲಾಇಲಾಹಾ ಇಲ್ ಲಲ್ಲಾ
ಹುವಹದಹುಲಾಷರೀಕ ಲಹುವ ಅಷ್
ಹೊದನ್ನ ಮೊಹಮ್ಮದನ್ ಅಬ್‌ದುಹುವರ ಸೂಲೂಹು.

ಅರ್ಥ:—ಸರ್ವ ಘನತೆಯೂ, ಎಲ್ಲಾ ಪ್ರಾರ್ಥನೆಗಳೂ, ಸಮಸ್ತ ಪವಿತ್ರ ವಸ್ತುಗಳೂ ಅಲ್ಲಾಹನಿಗೆ ಉಂಟು. ಓ ! ಪ್ರವಾದಿಗಳೆ, ನಿಮಗೆ ನಮಸ್ಕಾರವು ಮತ್ತು ನಿಮ್ಮ ಮೇಲೆ ಪರಮಾತ್ಮನ ದಯವಿರಲಿ ಮತ್ತು ನಿಮಗೆ ಮಂಗಳವಾಗಲಿ. ನಮಗೂ ಮತ್ತು ಸರ್ವ ಸತ್ಪುರುಷರಿಗೂ ಶಾಂತಿಯುಂಟಾಗಲಿ. ನಾನು ಸಾಕ್ಷಿಯಾಗಿರುತ್ತೇನೆ. ಪರಮಾತ್ಮನು ಸರ್ವಕ್ಕೂ ಆಶ್ರಯನಾಗಿದ್ದಾನೆ ಮತ್ತು ಒಬ್ಬನಾಗಿದ್ದಾನೆ. ಆತನ ಸರಿಯಿಲ್ಲವು. ಮತ್ತು ನಾನು ಸಾಕ್ಷಿ ಕೊಡುತ್ತೇನೆ. ಮಹಮ್ಮದರು ಪರಮಾತ್ಮನ ಪ್ರವಾದಿಗಳಾಗಿರುತ್ತಾರೆ ಮತ್ತು ಪರಮಾತ್ಮನ ಭಕ್ತರಾಗಿದ್ದಾರೆ.

ಮೇಲಿನ ನಾಲ್ಕು ಪಾದಗಳನ್ನು ಎರಡುಸಾರಿ ಮುಗಿಸಿದಮೇಲೆ ಮೇಲಿನ ಮಂತ್ರವನ್ನು ಓದಬೇಕು. ಪುನಃ ಎರಡುಸಾರಿ ಮುಗಿಸುವುದಿದ್ದರೆ ಇಷ್ಟನ್ನೇ ಓದಿ ಎದ್ದು ನಿಂತು ಪುನಃ ಎರಡುಸಾರಿ ಮುಗಿದಮೇಲೆ ಇದನ್ನು ಓದಿ ಮತ್ತು ಮುಂದಿನ ಮಂತ್ರವನ್ನು ಓದಬೇಕು.

ಅಲ್ಲಾಹುಮ್ಮಾ ಸೊಲ್ಲೆ ಅಲಾ ಸೈಯದಿನಾ
ಮಹಮ್ಮದಿನ್ ವ ಅಲಾ ಆಲೆಸೈಯದಿನಾ
ಮೊಹಮ್ಮದಿನ್ ಕಮಾಸೊಲ್ಲೈತ ಅಲಾ ಇಬ್ರಾಹೀಮ
ವ ಅಲಾಆಲೆ ಇಬ್ರಾಹೀಮ ಇನ್ನಕಹಮಿಾದುನ್
ಮಜೀದ್, ಅಲ್ಲಾ ಹುಮ್ಮಾಬಾರಿಕ್ ಅಲಾ ಮೊಹ
ಮ್ಮದಿನ್ವ ಅಲಾ, ಆಲೆ ಮೊಹಮ್ಮದಿನ್ ಕಮಾ
ಬಾರಕ್ತಾ ಅಲಾ ಇಬ್ರಾಹೀಮವ ಅಲಾ ಆಲೆ
ಇಬ್ರಾಹೀಮ ಇನ್ನಕಹಮಿಾದುನ್ ಮಜೀದ್.

ಅರ್ಥ:—ಎಲೈ ಪರಮಾತ್ಮನೇ ! ನೀನು ಇಬ್ರಾಹೀಮ ಮತ್ತು ಆತನ ವಂಶದವರ ಮೇಲೆ ಹೇಗೆ ದಯವನ್ನುಂಟುಮಾಡಿದೆಯೋ ಅದೇರೀತಿಯಲ್ಲಿ ಮೊಹಮ್ಮದರ ಮತ್ತು ಅವರ ವಂಶದವರ ಮೇಲೆ ದಯಪಾಲಿಸು. ಯಾವ ರೀತಿಯಲ್ಲಿ ಇಬ್ರಾಹೀಮನಿಗೂ ಮತ್ತು ಆತನ ವಂಶಸ್ಥರಿಗೂ ನೀನು ಮಂಗಳವನ್ನುಂಟುಮಾಡಿದೆಯೋ ಅವೇಪ್ರಕಾರ ಮಹಮ್ಮದ್ ಪೈಗಂಬರರ ಮತ್ತು ಅವರ ವಂಶದವರಮೇಲೆ ಮಂಗಳವನ್ನುಂಟುಮಾಡು ನೀನೇ ಲೋಕ ಪಾವನನು ಮತ್ತು ಲೋಕಾಧಿಷ್ಠನು.

ನಾಲ್ಕು ಪಾದಗಳಿಂದ ಕೂಡಿರುವ ಈ ಮೇಲಿನ ಪ್ರಾರ್ಥನೆಯನ್ನು ದಿನಂಪ್ರತಿ ಐದುವೇಳೆ ಪೂರೈಸಬೇಕು. ಮತ್ತು ಮಧ್ಯರಾತ್ರೆಯಲ್ಲಿ ಇದೇ ವಿಧವಾದ ಪ್ರಾರ್ಥನೆಯನ್ನು ಆರುಸಲವಾಗಿ ಮುಗಿಸಬೇಕು. ಆಗ್ಗೆ ಮನುಷ್ಯನು ಪರಮಾತ್ಮನ ಸಾನ್ನಿಧ್ಯವನ್ನು ಹೊಂದುತ್ತಾನೆ. ಇದೇವೇಳೆ ಪರಮಾತ್ಮನ ಅನುಗ್ರಹದಿಂದ ಆಗೆಮಗಳು ಅವಗಾಹನೆಗೆ ಬರುವವು. ಇದೇ ವೇಳೆಯಲ್ಲಿ ಪರಮಾತ್ಮನು ಓಂಕಾರದಿಂದ ತಾನು ತನ್ನ ಭಕ್ತರೊಡನೆ ತೂರ್ಯ ತೀತಾವಸ್ಥೆಯಲ್ಲಿ ಸಂಭಾಷಿಸುತ್ತಾನೆ.

ಇದನ್ನೇ ಪರಮಾತ್ಮಪ್ರಸನ್ನರಾದ ಜಗದ್ಗುರುಗಳು ತಮ್ಮ ಭಕ್ತರ ಸಲುವಾಗಿ ನೇಮಿಸಿರುತ್ತಾರೆ. ಇದರ ಸಲುವಾಗಿಯೇ ಜಗದ್ಗುರುಗಳು ಅಪ್ಪಣೆ ಕೊಡಿಸಿರುತ್ತಾರೆ.

ಮನ್ ತರಕಸ್ ಸೊಲಾತಮು

ತಾಮ್ಮೆದನ್ ಫಕದ್‌ಕ ಫರ.

ಅರ್ಥ:—ಯಾವನು ಈ ಪ್ರಾರ್ಥನೆಯನ್ನು ಬಿಡುತ್ತಾನೋ ಅವನು ನಿಜವಾಗಿ ಧರ್ಮವನ್ನು ತಿರಸ್ಕಾರಮಾಡಿದವನು.

ಈ ಮಹಾತ್ಮರು ಇತರ ಕರ್ಮಗಳಿಗಿಂತಲೂ ಈ ಕರ್ಮಕ್ಕೆ ಹೆಚ್ಚಾದ ಬೆಲೆಯನ್ನು ಕೊಟ್ಟರು. ತಮ್ಮ ಅನುಯಾಯಿಗಳು ಈ ವಿಧವಾದ ಪ್ರಾರ್ಥನೆ ಮಾಡುವವರನ್ನು ನೋಡಿ "ನಾನು ಗೆದ್ದೆ" ನೆಂದು ಹೇಳಿದರು. ಹಿಂದಿನ ಪುರಾತನದಲ್ಲಿಯಾದರೂ ಈ ಪ್ರಾರ್ಥನೆಯೇ ನೆಲೆಗೊಂಡಿತ್ತು. ಅವರುಗಳು ಜಗದ್ಗುರುಗಳಲ್ಲದ್ದರಿಂದ ಅವರ ಅನುಯಾಯಿಗಳಲ್ಲಿ ಈ ಮಾರ್ಗವು ನೆಲೆಗೊಳ್ಳಲಿಲ್ಲ. ಆದ್ದರಿಂದಲೇ ಹಜರತ್‌ರವರು ಸರ್ವವ್ಯಾಪಕವಾದ ಈ ಪ್ರಾರ್ಥನೆಯನ್ನು ನೆಲಗೊಳಿಸಿ ಎಲ್ಲಾ ಕುಲಗಳ ಸಮಾವೇಶಕ್ಕೂ ಅವಕಾಶವನ್ನು ಕಲ್ಪಿಸಿ ಜಗದ್ಗುರುಗಳೆಂಬ ಬಿರುದನ್ನು ಹೊಂದಿ ಸಂಪೂರ್ಣ ಶಿವಸಾಯುಜ್ಯಕ್ಕೆ ಅಧಿಕಾರಿಗಳಾಗಿ ಪ್ರಜ್ವಲಿಸಿದರು.

---

## ಹದಿಮೂರನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು|
ಮೃತ್ಯುಂಜಯ ಸ್ಸೂಕ್ಷ್ಮತನುರ್ಜಗದ್ವ್ಯಾಪಿಜಗದ್ಗುರು ||

ಆತನು ಪ್ರಪಂಚದ ಮಹಾತ್ಮರು ಕಾಲಕಾಲಕ್ಕೆ ಬೋಧಿಸಿರುವ ದೇವೋಕ್ತವಾದ ಆತ್ಮಪರಾಂತಭಾವನೆಗಳಿಗೊಳಪಟ್ಟಿರುವ ಮತಗಳನ್ನು ನಂಬಿ ತಾನು ಅವುಗಳನ್ನು ತನ್ನಲ್ಲಿ ಸ್ಪಷ್ಟರೀತಿಯಿಂದ ತೋರಿಸಿ ಇದರಲ್ಲಿ ಭಿನ್ನಾಭಿಪ್ರಾಯಗಳನ್ನು ದೂರಮಾಡಿ ದುಃಖವನ್ನು ಮನುಜರಿಂದ ದೂರ ಮಾಡಬೇಕು.

ಈ ವಿಷಯದಲ್ಲಿ ಒಬ್ಬೊಬ್ಬರಿಗೂ ಭಿನ್ನಾಭಿಪ್ರಾಯಗಳೇ ಬಂದಿವೆ. ಆದರೆ ಹಜರತ್ ಮಹಮ್ಮದ್ ಪೈಗಂಬರರು ಇವುಗಳನ್ನು ಸ್ಪಷ್ಟರೀತಿಯಿಂದ ತಿಳಿಸಿರುತ್ತಾರೆ ; ಮತ್ತು ತಮ್ಮ ಕರ್ತವ್ಯಗಳಿಂದ ತೋರಿಸಿರುತ್ತಾರೆ.

---

## ದ್ವೈತಮತಸಿದ್ಧಾಂತ

ಇದರ ಅಭಿಪ್ರಾಯವು ಬಹು ಸುಲಭವಾಗಿರುವುದು. ನಿರ್ಲಿಪ್ತನಾದ ಮತ್ತು ನಿರಾಕಾರನಾದ ಪರಮಾತ್ಮನು ಸತ್ತು, ಚಿತ್ತು, ಆನಂದ, ನಿತ್ಯ, ಪರಿಪೂರ್ಣನೆಂಬ ಲಕ್ಷಣಭರಿತನಾದ ಪರವಸ್ತುವು. ಜೀವಾತ್ಮನಾದರೋ ಅಸದ್ರೂಪ, ಅಜ್ಞಾನ, ದುಃಖ, ಅನಿತ್ಯ, ಖಂಡಿತ ಎಂಬ ಅಶಾಶ್ವಿತ ಲಕ್ಷಣಗಳುಳ್ಳವನು. ಹೀಗಿರಲು ಜೀವಾತ್ಮನೆ ಪರಮಾತ್ಮನೆಂಬ ಭಾವನೆಯು ತಪ್ಪದಾದು. ಇದೇ ದ್ವೈತಸಿದ್ಧಾಂತವು. ಇದರ ಸಾಧನ ? ಸಲುವಾಗಿ ಓಂಕಾರೋಕ್ತ ಕುರಾನ್ ಅವಿಚ್ಛಿನ್ನವಾಗಿ ಉಚ್ಚರಿಸುತ್ತದೆ.

| ಪ ರ ಮಾ ತ್ಮ | ಜೀ ವಾ ತ್ಮ |
|---|---|
| ೧. ಹುವಲ್ ಹೈಯುಲ್ ಕೈಯ್ಯೂಮುಲಾತಾಖುಜುಹು ಸಿನತಂವವಲಾನೌಮು. ೨—೨೫೬ | ೧. ಕುಲ್ಲೊ ನಫ್‌ಸುನ್‌ಜಾಯಕತುಲ್‌ಮೌತ್. ೨೧—೩೬ |
| ೨. ಕುಲ್ಲೊಮುನ್ ಅಲೈಹಾಫಾನವಯಬ್‌ಖಾವಜ್‌ಹೊರಬ್ಬೆ ಕಾಜುಲ್ ಜಲಾಲೆವಲ್ ಇಕ್ರಾಮು. ೫೫—೨೨ | ೨. ನಹನೊಖಲಕನಾಹುಂವಷದ್ದನಾ ಅಸ್‌ರಹುಂ ವ ಇಜಾಷೆಯನಾಬದ್ದಲನಾ ಅಮ್‌ಸಾಲಹುಂ ತಬ್‌ದೀಲಾ. ೭೨—೨೧ |

೩. ಇನ್ನಲ್ಲಾಹಯಾವುರೊಬಿಲ್ ಅದ್'ಲಿವಲ್'ಯಹ್'ಸಾನ ೧೬—೨೨

೪. ಹೂವಲ್ಲಾಹುಲ್ ಖಾಲೆಖುಲ್ ಬಾರಿಯುಲ್ ಮುಸವ್ವರೊಲ ಹುಲ್' ಅಸಮಾವುಲ್ ಹುಸ್ನಾ. ೨೯—೨೪

೫. ಅಲ್ಲಾಹೊಖಾಲೆ ಕೊಕುಲ್ಲ ಷಿಯವ ಹುವಲ್'ವಾಹೆದುಲ್'ಕಹ್ಹಾರ ೧೩—೧೭

## ಅ ಥ ೯

೧. ಪರಮಾತ್ಮನು ಮೃತ್ಯುಂಜಯನು, ನಿರ್ವಿಕಲ್ಪನು, ಸಂಚಿತ ತ್ರಯಗಳನ್ನು ಮೀರಿದವನು.

೨. ಸರ್ವವಸ್ತುಗಳಿಗೂ ವಿನಾಶವುಂಟು; ಆದರೆ ನಿಮ್ಮ ಪ್ರಭುವು ತನ್ನ ಸ್ವಸಾಮರ್ಥ್ಯದಿಂದ ಶಾಶ್ವಿತನು

೩. ಅಲ್ಲಾಹನು ನ್ಯಾಯವಾದ ಮತ್ತು ಪರೋಪಕಾರ ಭರಿತವಾದ ಆಜ್ಞೆಯನ್ನು ಕೊಡುತ್ತಾನೆ.

೪. ಅಲ್ಲಾಹನು ಸೃಷ್ಟಿಕರ್ತನು ಮತ್ತು ವಿವಿಧರೂವುಗಳನ್ನು ಕಲ್ಪಿಸುವನು. ಅವನ ಪ್ರಕಾಶಗಳು ಲೋಕ ಪಾವನವಾದುವು.

೫. ಅತನೇ ಸೃಷ್ಟಿಗೆ ಕರ್ತನಾದ ಬ್ರಹ್ಮನು. ಆತನೇ ಸರ್ವಸ್ವತಂತ್ರನು

೩. ಇನ್ನನ್ ನಫ್'ಸಲಅಮ್ಮಾರ ತುನ್'ಬಿಸ್ಯಾಯೆ. ೧೨—೫೩

೪. ಇನ್ನಾಖಲಕನಲ್ ಇನ್'ಸಾನ ಮಿನ್'ನುತ್ ಫತಿನ್ ಅಮ್ ಷಾಜನ್ ನಬ್ ತಲೀಹೆ. ೭೨—೨

೫. ಫ ಅಮ್ಮಲ್' ಲಜೀನಷಕುಫ ಫಿನ್'ನಾರೆಲಹೂ ಪೀಹಾಜಫೀರುನ್ ವಷಹೀಕ. ೧೧—೧೦೯

## ಆ ಥ ೯

೧. ಎಲ್ಲಾ ಜೀವವು ಮರಣದ ರುಚಿಯನ್ನು ನೋಡುವವು.

೨. (ಪರಮಾತ್ಮನು) ನಾನು ಇವುಗಳನ್ನು ಹುಟ್ಟಿಸಿದ್ದೇನೆ ಮತ್ತು ಅವುಗಳಿಗೆ ರೂಪುಗಳನ್ನುಂಟುಮಾಡಿರುತ್ತೇನೆ. ನನಗೆ ತಿಳಿದಾಗ ಇವುಗಳ ಸ್ಥಾನಬೇಧವನ್ನುಂಟುಮಾಡುತ್ತೇನೆ.

೩. ಜೀವನು ಯಾವಾಗಲೂ ದುರ್ಮಾರ್ಗಕ್ಕೆ ಈಡಾಗುತ್ತಾನೆ.

೪. ನಾವು ಮನುಷ್ಯನನ್ನು ಶುಕ್ಲಶೋಣಿತದ ಸಂಪರ್ಕದಿಂದ ಹುಟ್ಟಿಸಿರುತ್ತೇವೆ.

೫. ಪಾಪಭರಿತರಾದ ಜೀವರು ನರಕದಲ್ಲಿ ಬೀಳುವರು. ಅಲ್ಲಿ ಅವರು ದುಃಖಿಸುವರು ಮತ್ತು ಅಳುವರು.

## ಅದ್ವೈತಮತ ಸಿದ್ಧಾಂತ

ಇದು ಯಾವಾಗಲೂ ತಾವು ದೇವರಿಂದ ಬೇರೆಯಿಲ್ಲವೆಂದೂ ಮತ್ತು ದೇವರು ಬೇರೆ ತಾವುಬೇರೆ ಎನ್ನುವದು ಅಜ್ಞಾನವೆಂದೂ ತಿಳಿದು ಸರ್ವವನ್ನೂ ಅಖಂಡವೆಂದು ಭಾವಿಸುತ್ತಾರೆ. ತನ್ನ ನಿಜಸ್ಥಿತಿಯನ್ನು ತಿಳಿದು ಅನುಭವಿಸಿದವನು ಅದ್ವೈತಬ್ರಹ್ಮನಾಗುತ್ತಾನೆ. ಇದೇ ಇದರ ರಹಸ್ಯವು. ಇದೂಕೂಡ ಕುರಾನಿನಲ್ಲಿ ವಿಶದವಾಗಿ ತಿಳಿಸಿದೆ.

ಇನ್ನಲ್ಲಜೀನಯುಬಾಯೂನಕಇನ್ನಮಾ
ಯುಬಾಯೆವೂನಲ್ಲಾಹಯದುಲ್ಲಾಹೆಫೌಕ ಐದಿಯಮ್. ೪೮–೧೦

ಅರ್ಥ:—ಓ ! ಪ್ರವಾದಿಯೆ ! ಜನರು ನಿನ್ನ ಕೈಮೇಲೆ ದೀಕ್ಷೆಯನ್ನು ಪಡೆದರೆ ನನ್ನ ಕೈಮೇಲೆ ದೀಕ್ಷೆಯನ್ನು ಹೊಂದಿದರು. ನಾನು ನೀನು ಬೇರೆಯಲ್ಲ. ನನ್ನ ಕೈ ನಿನ್ನ ಕೈಯಾಗಿರುತ್ತದೆ. ನೀನೆ ನಾನಾಗಿರುತ್ತೀ.

ಮತ್ತು

ವಮಾರಮೈತ ಇಜ್‌ರಮೈತ
ವಲಾಕಿನ್ನಲ್ಲಾಹರಮ. ೮—೧೭.

ಅರ್ಥ:—ಯುದ್ಧದಲ್ಲಿ ನೀನು ಬಾಣಪ್ರಯೋಗವನ್ನು ಮಾಡಿಲ್ಲ. ನಾನು ಮಾಡಿರುತ್ತೇನೆ. ನಾನೇ ನೀನಾಗಿದ್ದೇನೆ. ಭೇದವಿಲ್ಲ. ನಂತರ

ಕುಲ್‌ಯಾ ಇಬಾದಿಯಲ್ ಲಜೀನ
ಅಸ್‌ರೆಪು ಅಲಾ ಅನ್‌ಫುಸೆಹಿಮ್
ಲಾಕತ್‌ನತುಮಿರ್‌ರ್ರಹಮತಿಲ್ಲಾಹೆ. ೩೯—೫೪.

ಅರ್ಥ:—ಓ! ಪ್ರವಾದಿಯೆ! ಜಗತ್ತಿಗೆ ಸಾರು—"ಓ ನನ್ನ ಭಕ್ತರೇ, ತಮ್ಮ ಜೀವನನ್ನು ತಪ್ಪುದಾರಿಯಲ್ಲಿ ನಡೆಸಿರುವುದರಿಂದ ಅಂಧಕರಾಗಿದ್ದೀರಿ. ಆದರೆ ಅಲ್ಲಾಹನ ದಯದಿಂದ ನಿರಾಶೆಯಾಗಬೇಡಿರಿ". ಇಲ್ಲಿ ಮಹಮ್ಮದರ ಭಕ್ತರೇ ತನ್ನ ಭಕ್ತರೆಂದು ಪರಮಾತ್ಮನು ಸಾರಿರುತ್ತಾನೆ. ಇದಲ್ಲದೆ

ಇನ್ನಲ್‌ಲಜೀನಯಃಕಫರೂನ ಬಿಲ್ಲಾಹೆವ
ರುಸುಲ್‌ಹಿ ವಯುರೀದೂನ ಐಂಯುಃಫರ್ರಕು
ಬೈನಲ್ಲಾಹ ವರುಸಲೆಹಿವಯಕೂಲೂನ
ನೋಮಿನೋಬೆಬಾಜವನುಕ್ ಪರೋಬೆ
ಭಾಜವಯುರೀದೂನ ಅಂಯ್ಯತ್ತಖಿಜು
ಬೈನಜಾಲೆಕಸಬೀಲಾವುಲಾಯಕಹು
ಮುಲ್ ಕಾಫೆರೂನ ಹಕ್ಕಾ. ೪—೧೫೦

ಅರ್ಥ:—ಅಲ್ಲಾಹ ಮತ್ತು ಆತನ ಅವತಾರಿಕವುರುಷರನ್ನು ತಿರಸ್ಕಾರ ಮಾಡಿ ಅವರಲ್ಲಿ ಭೇದವನ್ನು ಎಣಿಸುತ್ತಾರೋ ಅವರು ತಮ್ಮ ಮೋಸದಿಂದ ಹೊಸದೊಂದು ಮಾರ್ಗವನ್ನು ಹುಡುಕುತ್ತಾರೆ. ಇವರು ವಾಸ್ತವ್ಯವಾಗಿ ಭವಿಗಳು.

ಇದರಿಂದ ಪರಮಾತ್ಮನು ತನ್ನಲ್ಲಿಯೂ ಮತ್ತು ಶರಣರಲ್ಲಿಯೂ ಭೇದ ವಿಲ್ಲವೆಂಬ ಭಾವನೆಯನ್ನು ಹೊರಪಡಿಸಿರುತ್ತಾನೆ. ಪುನಃ

ವಹುವಲ್ಲಾಹು ಪಿಸ್‌ಸಮಾವಾತೆ ವಫಿಲ್ ಅರ್ದೆ. ೬—೩
ಮನ್ ಆದಲ್ಲೊ ಮಿಮ್‌ಮನ್‌ಹುವಾ ಫೀ
ಷಿಕಾಕಿಂಬಯಿಾದ, ಸನುರೀಹಿಮ್ ಆಯಾ
ತೆನಾ ಫಿಲ್ ಆಫಾಕವಫಿ ಅನ್ ಪುಸೆಹಿಂ ಹತ್ತಾ
ಯತ ಬೈಯನಲಹುಂ, ಅನ್ನಹುಲ್‌ಹಕ್, ಅವಲ
ಮ್‌ಯಕ್‌ಫಿ ಬಿರಬ್ಬಿಕ ಅನ್ನಹು ಅಲಾ ಕೊಲ್ಲಿಷ
ಯ್ಯನ ಷಹೀದ, ಅಲಾ ಇನ್ನಹು ಫೀ ಮಿರ್
ಯತಿಮ್ ಮಿಲ್‌ಲೆಕಾಯರಬ್ಬಿಹಿಂ ಅಲಾ ಇ
ನ್ನಹುಬಿ ಕುಲ್ಲಿಷಯ್ಯಂ ಮೊಹೀತ್. ೪೧—೫೩—೫೫.

ಅರ್ಥ:—ಬ್ರಹ್ಮಾಂಡದಲ್ಲೆಲ್ಲಾ ಅಲ್ಲಾಹನೆ ಇದ್ದಾನೆ. ಯಾವನು ತನ್ನಲ್ಲಿಯೂ ಪರಮಾತ್ಮನಲ್ಲಿಯೂ ಭೇದವನ್ನು ಮಾಡಿ ದೂರನಾಗಿರುತ್ತಾನೋ ಅವನಿಗಿಂತಲೂ ಮೂಢನು ಯಾವನೂ ಇಲ್ಲವು. ನಾವು ಯಾವಾಗಲೂ ನವ್ಯ

ಕುರುಹುಗಳನ್ನು ಬ್ರಹ್ಮಾಂಡದಲ್ಲಿ ತೋರಿಸುತ್ತೇವೆ. ಮತ್ತು ನಿಮ್ಮಲ್ಲಿಯೂ ತೋರಿಸುತ್ತೇವೆ. ಅವರು ಇದನ್ನು ನಿಜವೆಂದು ನಂಬುತ್ತಾರೆ. ಓ ! ಪ್ರವಾದಿಯೇ ! ನಿನ್ನ ಪ್ರಭುವು ಪರಿಪೂರ್ಣನಲ್ಲವೋ ? ವಾಸ್ತವ್ಯವಾಗಿ ಆತನು ಪರಿಪೂರ್ಣನು. ಆತನು ಸಮಸ್ತ ವಸ್ತುಗಳಿಗೂ ಸಾಕ್ಷಿಯಾಗಿರುತ್ತಾನೆ. ಎಚ್ಚರಿಕೆ ! ತಮ್ಮ ಪ್ರಭುವಿನ ವಿಕತ್ವದಲ್ಲಿ ಸಂಶಯಪಡುತ್ತಾರೆ. ಜನರಿಗೆ ಜ್ಞಾನವಿಲ್ಲ. ಪರಮಾತ್ಮನು ಸರ್ವವ್ಯಾಪಕನಿದ್ದಾನೆ.

ಇದರ ವಿಚಾರವು ಕುರಾನಿನಲ್ಲಿ ಅವಿಚ್ಛಿನ್ನವಾಗಿ ತುಂಬಿರುತ್ತದೆ. ಆದರೆ ಇದೇ ವಿಷಯವು ಜಗದ್ಗುರು ಮುಖಾಂತರವಾಗಿಯೂ ಹೊರಪಟ್ಟಿರುತ್ತದೆ. ಜಗದ್ಗುರು ಹೇಳುತ್ತಾರೆ ಓ ! ಜನರೇ, ಪರಮಾತ್ಮನು ಹೇಳುತ್ತಾನೆ "ಓ ಪ್ರವಾದಿಯೇ ! ನನ್ನ ದಾರಿಯಲ್ಲಿ ಯಾವನು ನಡುಕಟ್ಟಿ ನಿಲ್ಲುತ್ತಾನೋ ನಾನು ಅವನ ಕೈಯಾಗುತ್ತೇನೆ. ಅವನು ನೋಡಿದರೆ ಆ ಕಣ್ಣುಗಳು ನಾನಾಗುತ್ತೇನೆ. ಅವನು ಕೇಳುವ ಕಿವಿಗಳೇ ನನ್ನ ಕಿವಿಗಳು. ಅವನ ಕಾಲುಗಳೇ ನನ್ನ ಕಾಲುಗಳು ಮತ್ತು ಕಾಲಿನಿಂದ ತಲೆಯವರಿಗೂ ನಾನಾಗಿರುತ್ತೇನೆ. ನನ್ನಲ್ಲಿಯೂ ಅವನಲ್ಲಿಯೂ ಭೇದವಿಲ್ಲ. ನಾನೇ ಅವನು ಅವನೇ ನಾನಾಗಿರುತ್ತೇನೆ. ಯಾವನು ಅವನಿಗೆ ತೃಪ್ತಿಪಡಿಸುತ್ತಾನೋ ಅವನು ನನಿಗೆ ತೃಪ್ತಿಪಡಿಸಿದನು. ಯಾವನು ಅವನಿಗೆ ಬಟ್ಟೆಯನ್ನು ಕೊಡುತ್ತಾನೋ ಅವನು ನನಗೆ ಬಟ್ಟೆಯನ್ನು ಕೊಟ್ಟನು" ಎಂದು ಹೇಳುತ್ತಾನೆಂದು ಅಪ್ಪಣೆ ಕೊಡಿಸಿರುತ್ತಾರೆ.

---

## ವಿಶಿಷ್ಟಾದ್ವೈತ ಮತವು.

ಇದರ ವಿವರವು ಬಹು ಚನ್ನಾಗಿದೆ. ಜಗತ್ತು ಪರಮಾತ್ಮನ ಸ್ವರೂಪವು ಮತ್ತು ಇದು ಆತನಿಂದ ಬೇರೆಯಿಲ್ಲ ಮತ್ತು ಆತನು ಇದನ್ನು ಬಿಟ್ಟಿಲ್ಲ. ಇವೆರಡೂ ಒಬ್ಬನಾದ ಪರಮಾತ್ಮನೆಂದೇ ಭಾವವು. ಪರಮಾತ್ಮನೆ ಜೀವನೆಂದೂ ಮತ್ತು ಪರಮನೆಂದೂ ಕರ್ತನೆಂದೂ ಭೃತ್ಯುವೆಂದೂ ಗುರುವೆಂದೂ ಮತ್ತು ಭಕ್ತನೆಂದೂ ಈ ರೀತಿಯಾಗಿ ಎರಡಾಗಿರುತ್ತಾನೆ. ಈತನು ಒಬ್ಬನೇ ಎಂದು ತಿಳಿಯಬೇಕು. ಇದೇ ವಿಶಿಷ್ಟಾದ್ವೈತವು. ಈ ವಿಷಯವು ಕುರಾನಿನಲ್ಲಿ ಸಂಪೂರ್ಣವಾಗಿ ವಿವರಿಸಲ್ಪಟ್ಟಿರುತ್ತದೆ.

ವ ಮಾತಕೂನುಪೀಷಾನಿಂವವ ಮಾತತ್
ಲುಮಿನ್‌ಹುಮಿನ್ ಕುರಾನಿಂವ ವಲಾತಾಮು
ಲೂನಮಿನ್ ಅಮ್‌ಲಿನ್ ಇಲ್ಲಾಕುನ್ನಾ ಅಲೈಕುಂ
ಷುಹೂದಾ ಇಜ್ ತ.ಪೀಜೂನ ಫೀ. ೧೦—೬೨

ಅರ್ಥ:—ನೀವು ಯಾವ ಸ್ಥಿತಿಯಲ್ಲಿದ್ದರೂ ಮತ್ತು ನೀವು ಯಾವ ಭಾಗವನ್ನಾದರೂ ಕೂರಾನಿನಿಂದ ಓದುತ್ತಿದ್ದರೂ ಮತ್ತು ನೀವು ಯಾವ ಕರ್ಮವನ್ನು ಮಾಡುತ್ತಿದ್ದರೂ ನಾನು ಅಲ್ಲಿ ಸಾಕ್ಷಿಭೂತನಾಗಿರುತ್ತೇನೆ. ಇದರಿಂದ ಅತನು ನಮ್ಮನ್ನು ಬಿಡದೆ ಇರುತ್ತಾನೆಂದು ತಿಳಿಯಿತು. ನಾವು ಅತನನ್ನು ಬಿಟ್ಟಲ್ಲ ಮತ್ತು ಅತನ ಹೊರತಿಲ್ಲ.

ವನಹ್‌ನೊ ಅಕರಬೊ ಇಲೈಹೆ ವಿ.ನ್
ಕುಮ್‌ವಲಾ ಕಿಲ್ ಲಾತುಬ್‌ಸೆರೂನ. ೫೬—೪೪

ಅರ್ಥ:—ನೀವು ನಿಮ್ಮ ಜೀವಾತ್ಮನಿಗೆ ಎಷ್ಟು ಸಮೀಪದಲ್ಲಿರುತ್ತೀರೊ ನಾನು ಅದಕ್ಕಿಂತಲೂ ನಿಮ್ಮ ಜೀವಾತ್ಮನಿಗೆ ಸಮೀಪನಾಗಿರುತ್ತೇನೆ. ಮಾನುಷ್ಯನೇ ಜೀವಾತ್ಮನೆನಿಸಿ ಹೇಗೆ ಅದರಲ್ಲಿಯೇ ಲೀಲೆ ಮಾಡುತ್ತಾನೋ ಅದಕ್ಕಿಂತಲೂ ಅಧಿಕವಾಗಿ ಪರಮಾತ್ಮನು ಜೀವಾತ್ಮನಲ್ಲಿ ಲೀಲೆ ಮಾಡುತ್ತಾನೆ. ಇದನ್ನೇ ಕೆಲವರು ಶಕ್ತಿ ವಿಶಿಷ್ಟಾದ್ವೈತವೆಂದು ಹೇಳುತ್ತಾರೆ. ಹೇಗೆಂದರೆ, ಇದರಲ್ಲಿ ನಾನು ಬೇರೆ, ಪರಮಾತ್ಮನು ಬೇರೆ, ಜೀವಾತ್ಮನು ಬೇರೆ. ನಾನು ಎನ್ನುವನೆ ಸರ್ವಶಕ್ತಿಸ್ವರೂಪನು. ಇದರ ಸಲುವಾಗಿಯೇ ಚಿಕ್ಕ ಚನ್ನಬಸವೇಶ್ವರರು ಆತ್ಮರೂಪೆಂದು ಹೇಳುತ್ತಾರೆ. ಮುಂದೆ ಈ ಭಾಗಗಳು ವಿಶದಪಟ್ಟವೆ.

ಇಷ್ಟಲಿಂಗ = ಅಧ್ಯಾತ್ಮರೂಪ = ತತ್ = ಬಿಂದು
ಪ್ರಾಣಲಿಂಗ = ಜೀವರೂಪ = ತ್ವಮ್ = ಕಳೆ
ಭಾವಲಿಂಗ = ಆತ್ಮರೂಪ = ಅಸಿ = ನಾದ

ಮತ್ತು

ವಹುವಮಾಕುಂ ಐನಮಾಕ್‌ನ್ ತುಂ
ವಲ್ಲಾಹುಬೆಮಾತಾವ್‌ಲೂನಬಸೀರ. ೫೭—೪.

ಅರ್ಥ:—ನೀವು ಎಲ್ಲಿ ಯಾವಾಗ ಇದ್ದಿರೋ, ಇರುತ್ತೀರೋ, ಇರುವಿರೋ ಅಲ್ಲಿಯೇ ಆಕಾಲದಲ್ಲಿಯೇ ಇದ್ದೆನುಇದ್ದೇನೆ, ಮತ್ತು ಇರುತ್ತೇನೆ. ಎಂದರೆ

ನಾನು ನಿಮ್ಮನ್ನು ಬಿಟ್ಟಲ್ಲ; ನೀವು ನನ್ನಿಂದ ಬೇರೆಯಿಲ್ಲ. ಇಲ್ಲಿಯೇ ವಿಶಿಷ್ಟಾದ್ವೈತದ ಸಂಪೂರ್ಣ ವಿಚಾರವುಂಟು. ಇದೇ ತತ್ವಮಸಿವಾಕ್ಯಾನುಸಾರವಾಗಿದೆ. ಇದನ್ನೇ ಬಿಂದು ಕಳನಾದವೆಂದೂ ಮತ್ತು ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂದೂ ವಿವಿಧವಾಗಿ ಹೇಳುತ್ತಾರೆ. ಇದೇ ವಿಶಿಷ್ಟಾದ್ವೈತವು.

ವಫಿಲ್ ಅರ್ದೆ ಆಯಾತುನ್ ಲಿಲ್
ಮೋಖಿನೀನವಫೀ ಅನ್ ಪುಸೆಕೂ
ಅಪ್‌ಲಾತುಬ್ ಸೆರೂನ. ೫೧—೨೧.

ಅರ್ಥ:—ತಿಳಿಯಲಪೇಕ್ಷಿಸುವವನಿಗೆ ಬ್ರಹ್ಮಾಂಡದಲ್ಲಿಯೆ ತತ್ವವಿಚಾರ ಉಂಟು. ಮತ್ತು ನಿಮ್ಮ ಜೀವಾತ್ಮದಲ್ಲಿಯೆ ಅದು ದೊರೆಯುತ್ತದೆ. ನೀವು ಅವುಗಳನ್ನು ತಿಳಿಯಿರಿ. ವಿಶಿಷ್ಟಭೂತಮಯವಾದ ಜಗತ್ತು ಮನುಷ್ಯನ ಮನಸ್ಸಾಗಿ ಪರಿಣಮಿಸಿದೆಯೆಂದೇ ವಿದಿತವಾಗುತ್ತದೆ. ಜಗತ್ತು ಮನುಷ್ಯನು ಬೇರೆಯಾಗಿಲ್ಲ. ಜಗತ್ತಿನ ವಿನಹ ಜೀವಾತ್ಮನೆ ಕರ್ತೃವಾದ ಪರಮಾತ್ಮನಿಗೆ ಕಾರಣ. ಜೀವಾತ್ಮನೆ ಆತ್ಮರೂಪನು. ಆತ್ಮರೂಪನೆ ಪರಮಾತ್ಮರೂಪನು. ಇವು ಮೂರಾಗಿದ್ದರೂ ಒಂದೇ ಎಂದು ಭಾವವು. ನಂತರ

ವನಹನು ಅಕರಬೊಇಲ್ಯೆಹೆಮಿನ್ ಹಬ್
ಲಿಲ್ ವರೀದ. ೫೦—೧೫.

ಅರ್ಥ:—ನಾವು (ಪರಮಾತ್ಮನು) ಮನುಷ್ಯನಿಗೆ ಆತನ ಜೀವನಾಳಕ್ಕಿಂತಲೂ ಸಮೀಪವಾಗಿರುತ್ತೇವೆ. ಜೀವನಾಳಕ್ಕಿಂತಲೂ ಸಮೀಪವಾಗಿರುವನು ಪರಮಾತ್ಮನಾದ ಜೀವಾತ್ಮನಿಗೆ ಸ್ಥಳವ್ಯಾವುದು? ಮತ್ತು ಅಲ್ಲಿ ಆತ್ಮನು ಎಲ್ಲಿರಬೇಕು? ಈ ಮೂರು ಹೇಗಿವೆ? ಜೀವನು ಸತ್ಯಜ್ಞಾನಸ್ವರೂಪನು. ಅನಂತನು. ಪರಮಾನಂದಮೂರ್ತಿಯು. ಪರಮಾತ್ಮನು. ಪರಂಜ್ಯೋತಿಸ್ವರೂಪನು. ಮಾಯೆಯಿಂದ ಜೀವನಂತೆಯೂ ಪ್ರಪಂಚದಂತೆಯೂ ತೋರುವನು. ಇವು ಅಜ್ಞಾನಿಗಳಿಗೆ ಬೇರೆಯಾಗಿಯೂ ಜ್ಞಾನಿಗಳಿಗೆ ಒಂದಾಗಿಯೂ ಕಾಣಬರುತ್ತವೆ.

ಇದೇರೀತಿಯಲ್ಲಿ ಜಗದ್ಗುರುಗಳು ಮತ್ತು ಅವರ ಓಂಕಾರೋಕ್ತ

ಗ್ರಂಥವು ವಿಶಿಷ್ಟಜ್ಞಾನಮಾರ್ಗ ವಿಚಾರವನ್ನು ಸ್ವಲ್ಪವೂ ಹೊರಗಿಲ್ಲದೆ ಆವರಿಸಿಕೊಂಡಿರುತ್ತದೆ. ಇದರಿಂದಲೇ ಈಶ್ವರಸ್ವರೂಪಿಗಳಾದ ಹಜರತ ಮಹಮ್ಮದರಿಗೆ "ಬ್ರಹ್ಮಾಕೃತ ಶಿವಸಹಸ್ರನಾಮು ಸು | ಮೃತ್ಯುಂಜಯ ಸೂಕ್ಷ್ಮತನು ರ್ಜಗದ್ವ್ಯಾಪಿಜಗದ್ಗುರು" || ಎಂದು ಬಿರುದು ಬಂದಿರುತ್ತದೆ.

## ಹದಿನಾಲ್ಕನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮು ಸು |
ಮೃತ್ಯುಂಜಯಸೂಕ್ಷ್ಮತನು ರ್ಜಗದ್ವ್ಯಾಪಿಜಗದ್ಗುರು ||

ಜಗದ್ಗುರುವು ದೇಶಾಭಿಮಾನಕ್ಕೆ ಸಿಕ್ಕದೆ ತಾನು ಎಲ್ಲಾ ಪ್ರಪಂಚಕ್ಕೂ ನ್ಯಾಯಾಭಿಮಾನಿಯಾಗಿದ್ದು ಜನರಿಂದ ದೇಶಾಭಿಮಾನದ ದುಃಖವನ್ನು ದೂರಮಾಡಬೇಕು.

ಈ ಪ್ರಮಾಣದಲ್ಲಿಯಾದರೂ ಹಜರತ್ ಮಹಮ್ಮದರ ಹೊರತು ಮತ್ತಾರೂ ಕಾಲಿಡಲು ಸ್ಥಳವಿಲ್ಲವು. ಮಿಕ್ಕ ಅವತಾರಿಗಳು ಒಂದೊಂದು ಕಾಲದಲ್ಲಿ ಒಂದೊಂದು ದೇಶಕ್ಕೆಮಾತ್ರ ಅವತರಿಸಿ ಅಲ್ಲಿಯವರ ಸ್ಥೂಲ ಮತ್ತು ಸೂಕ್ಷ್ಮರಕ್ಷಣೆಯನ್ನು ಮಾಡಿರುತ್ತಾರೆ. ಶ್ರೀರಾಮರು ಕ್ಷತ್ರಿಯರಲ್ಲಿ ಅವತರಿಸಿ ಭರತಖಂಡವನ್ನು ರಕ್ಷಿಸಿದರು. ಆದೇ ಭರತಖಂಡಕ್ಕೆ ಹಿಂದೂದೇಶವೆಂದು ಹೆಸರಾಯಿತು. "ಹಿಂದು" ಎನ್ನುವ ಶಬ್ದವು ವಿಶೇಷವಾಗಿ ಯಾವ ಮತದ ಹೆಸರೂ ಅಲ್ಲ. ಇದು ಇತರ ದೇಶದವರಿಂದ ಇಡಲ್ಪಟ್ಟ ಹೆಸರು. ಒಂದುಕಾಲದಲ್ಲಿ ಅರಬ್ ಮತ್ತು ಇರಾಣದೇಶದವರು ಭರತಖಂಡದ ಉತ್ತರ ಭಾಗದಿಂದ ಬಂದು ಇಲ್ಲಿಯ ಸ್ತ್ರೀಯರನ್ನೂ ಮತ್ತು ಮಕ್ಕಳನ್ನೂ ಧಾಳಿಯಿಂದ ಕದ್ದು ತಮ್ಮ ದೇಶಗಳಲ್ಲಿಯೂ ಇತರ ದೇಶಗಳಲ್ಲಿಯೂ ಮಾರುತ್ತಿದ್ದರು. ಇಲ್ಲಿಗೆ ಎರಡುಸಾವಿರ ವರ್ಷಗಳ ಹಿಂದೆ ಇದು ಒಂದು ವ್ಯಾಪಾರವಾಗಿ ಪರಿಣಮಿಸಿತ್ತು. ಆಗ್ಗೆ ಇತರ ದೇಶದವರು ಇವನ್ನು ಕಂಡು ಈ ದೇಶಕ್ಕೆ ಹಿಂದೂದೇಶವೆಂದು ಕರೆದರು. "ಹಿಂದು" ಎಂದರೆ "ದಾಸಿಯರು" ಎಂದು ಹೇಳುತ್ತಿದ್ದರು. ಇಲ್ಲಿಂದ ತೆಗೆದುಕೊಂಡುಹೋದವರನ್ನು ದಾಸ

ರಂತೆ ಅಲ್ಲಿ ಮಾರಾಟ ಮಾಡುತ್ತಿದ್ದರು. ಆದುದರಿಂದ ನಮ್ಮ ಭರತಖಂಡಕ್ಕೆ ಹಿಂದೂದೇಶವೆಂದು ಹೆಸರಿತ್ತು. ಈ ದೇಶದಲ್ಲಿ ಪ್ರಥಮದಲ್ಲಿ ಮಹಮ್ಮದೀಯರ ರಾಜ್ಯಸ್ಥಾಪನೆಯಾದಾಗ ಈ ಹೆಸರು ಬಹು ಪ್ರಚಾರಕ್ಕೆ ಬಂದು ಈಗಲೂ ಹಿಂದೂದೇಶವೆಂದರೆ "ದಾಸರ" ದೇಶವೆಂದು ವಾಡಿಕೆಯಾಗಿದೆ. ಆದರೆ "ಹಿಂದು" ಎನ್ನುವದು ಯಾವುತದ ಹೆಸರೂ ಅಲ್ಲ. ಮತ್ತು ಯಾವ ಪಂಗಡದ ಹೆಸರೂ ಅಲ್ಲ. ಹಿಂದಿನ ಯಾವ ಅವತಾರಿಗಳು "ಹಿಂದೂ ಧರ್ಮ" ವೆಂದು "ಹಿಂದೂ ಜಾತಿ" ಯೆಂದು ಎಲ್ಲಿಯೂ ಹೇಳಿಲ್ಲ. ಆದುದರಿಂದ ಈ ಹೆಸರು ನಮ್ಮ ದೇಶಕ್ಕೆ ಆಗಲಿ ಮತ್ತು ದೇಶದ ಯಾವ್ದ ಧರ್ಮಕ್ಕೆ ಆಗಲಿ ಸಲ್ಲುವದಾಗಿಲ್ಲ. ಲೌಕೀಕರುಮಾತ್ರ ತಮ್ಮ ತಮ್ಮ ದುರಭಿಮಾನಗಳ ದೆಸೆಯಿಂದ ಒಂದೊಂದು ದೇಶಕ್ಕೆ ಒಂದೊಂದು ಹೆಸರನ್ನು ಕೊಟ್ಟರುತ್ತಾರೆ. ಇದು ದೇವೋಕ್ತವಾಗಿಲ್ಲ.

ಈ ದೇಶಕ್ಕೆ ಪುನಃ ಇಂಗ್ಲೀಷರು ಬಂದು ತಮ್ಮ ರಾಜ್ಯವನ್ನು ಸ್ಥಾಪಿಸಿದರು. ಆದರೆ ದುರಭಿಮಾನದ ದೆಸೆಯಿಂದ ಪುನಃ ಹಿಂದೂದೇಶವೆಂದೇ ಕರೆಯುತ್ತಾರೆ. ಇಲ್ಲಿ ಈ ಜನರು ರಾಜ್ಯವನ್ನು ಕಟ್ಟಿ ಸುಮಾರು ನೂರು ವರ್ಷಗಳಾಗುತ್ತಾ ಬಂತು. ಆದರೂ ಇದರ ಸಿಂಹಾಸನವನ್ನು ತಮ್ಮ ದೇಶದಲ್ಲಿಯೇ ಇಟ್ಟುಕೊಂಡಿರುತ್ತಾರೆ. ಇವರ ದೇಶಾಭಿಮಾನವು ಎಷ್ಟು ಹೆಚ್ಚಾಗಿ ತಲೆಗೇರಿರಬಹುದೆಂದು ನಾವು ಊಹಿಸಬಹುದಾಗಿರುತ್ತದೆ. ಪ್ರತಿಯೊಬ್ಬ ಇಂಗ್ಲೀಷಿನವನ ತಲೆಯಲ್ಲಿಯೂ ಈ ದೇಶಾಭಿಮಾನವೆಂಬ ಭ್ರಮೆಯು ಆವರಿಸಿಕೊಂಡಿರುತ್ತದೆ. ಈ ರೋಗವು ಬರುಬರುತ್ತಾ ಭರತಖಂಡ ವಾಸಿಗಳ ತಲೆಗೆಳನ್ನು ಕೆಡಿಸಲುಪಕ್ರಮಿಸಿರುತ್ತದೆ. "ಯಥಾರಾಜ ತಥಾಪ್ರಜ" ಎಂಬ ಗಾದೆಯಂತೆ ಈ ದೇಶದ ಜನರ ಹಿಂದಿನ ಉದ್ವೇಶಗಳು ವ್ಯತ್ಯಾಸವಾಗಿರುತ್ತವೆ. ಇಂಥಾ ಅಭಿಮಾನಗಳು ಧರ್ಮಗಳಲ್ಲಿ ಸಮಾವೇಶವನ್ನು ಹೊಂದುವುದಿಲ್ಲ. ಆದರೆ ಈ ಕಾಲದ ಜನರು ಇವರಿಂದ ಆತ್ಮಹತ್ಯೆ, ಗುರುಹತ್ಯ, ಪರಮಾತ್ಮಹತ್ಯ ಎಂಬ ಪಾಪಗಳಿಗೆ ಸಿಕ್ಕಿಲಯವಾಗುತ್ತಲಿದ್ದಾರೆ. ಹಜರತ್ ಮಹಮ್ಮದ್ ಪೈಗಂಬರರು ಇಂಥಾ ದುರಭಿಮಾನಗಳಿಂದ ದೂರರಾಗಿದ್ದರು. ಆದುದರಿಂದ ಇವರು ತಮ್ಮ ಅನುಯಾಯಿಗಳನ್ನು ಕುರಿತು "ಪರಮಾತ್ಮನು ಭೂಮಿಯನ್ನೆಲ್ಲಾ ನಿಮ್ಮ ಸಲುವಾಗಿ ಪ್ರಾರ್ಥನ ಸ್ಥಳ

ವನ್ನಾಗಿ ಮಾಡಿರುತ್ತಾನೆ. ನೀವು ಯಾವ ಸ್ಥಳಕ್ಕೆ ಹೋದರೂ ಅದು ತಮ್ಮ ದೆಂದೆ ತಿಳಿಯಿರಿ. ಅಲ್ಲಿಯ ಜನರು ಇದರ ಸಲುವಾಗಿಯೂ ಮತ್ತು ಧರ್ಮ ಸಲುವಾಗಿಯೂ ವಿರೋಧವಾಗಿ ಬಂದರೆ ಅವರಮೇಲೆ ಯುದ್ಧಮಾಡಿರಿ. ಯುದ್ಧಮಾಡುವ ಶಕ್ತಿಯಿಲ್ಲದ ಪಕ್ಷದಲ್ಲಿ ಆ ಸ್ಥಳವನ್ನು ಬಿಡಿರಿ " ಎಂದು ಬೋಧಿಸುತ್ತಿದ್ದರು. ದೇವೋಕ್ತವಾದ ಕುರ್ಆ ಕೂಡ ದೇಶಾಭಿಮಾನವು ನರಕಪ್ರಾಯವೆಂದು ಸಾಧಿಸುತ್ತದೆ. ಯಮದೂತರು ದೇಶಾಭಿಮಾನಿಯ ಜೀವಗ್ರಹಣ ಕಾಲದಲ್ಲಿ ಅವನ ದುಃಖವನ್ನು ನೋಡಿ ಇವಕ್ಕೆ ಕಾರಣವೇನೆಂದು ಪ್ರಶ್ನಿಸಲು ಅದಕ್ಕೆ ಅವರು " ನಾವು ಧರ್ಮವನ್ನು ಅಲಕ್ಷ್ಯಮಾಡಿ ದೇಶವನ್ನು ಹಿಡಿದೆವು. ಇದರ ಹೊರತು ನಮ್ಮ ತಪ್ಪು ಮತ್ಯಾವುದೂ ಇಲ್ಲವೆಂದು ಹೇಳಿದರೆ, ಆಗ ಯಮದೂತರು ಉತ್ತರವನ್ನು ಕೊಡುತ್ತಾರೆ

ಅಲಮ್ ತಕುನ್ ಅರ್ದುಲ್ಲಾಹೆ ವಾಸೆ
ಯತನ್‌ಫತೊಹಾಜರುಫೀಹಾವು
ವುಲಾಯಿಕಮಾವಾಹುಂ ಜಹ
ನ್ನಮ್ ವಸಾಅತ್‌ಮಸೀರಾ. (ಕು. ಅ. ೪, ಸಂ. ೧೩.)

ಅರ್ಥ:—"ತನಗೆ ಭೂಮಿಯು ವಿಸ್ತಾರವಾಗಿದ್ದದ್ದು ಕಾಣಲಿಲ್ಲವೆ? ಅದರಲ್ಲಿ ನಿಮಗೆ ಬೇಕಾದ ದೇಶಗಳ ಸಂಚಾರವನ್ನು ಮಾಡಬಹುದಾಗಿತ್ತಲ್ಲ? ಈಗ ನಿಮಗೆ ಬಿಡುಗಡೆಯಿಲ್ಲವು.. ನಿಮಗೆ ನರಕಪ್ರಾಪ್ತಿಯ ವಿನಹ ಬೇರೆ ಇಲ್ಲವು." ಇದಲ್ಲದೆ

ಕುಲ್ ಇನ್‌ಕಾನ ಆಬಾವೊ ಕುಮ್‌ವ ಅಬ್
ನಾವೊಕುಮ್ ವಇಖ್ ವಾನಕುಮ್ ವಅಜ್
ವಾಜಕುಮ್ ಅಷೀರತೊಕುಮ್ ವಅಮ್‌ವಾಲ
ನಕ್‌ತರಿಫ್ ತುಮೂಹಾವತಿಜಾರತನ್‌ತಖ್‌ಷಾ
ನಕಿ ಸಾದಹಾವಮಸಾಕೀನ ತರದೌನಹಾ
ಅಹಬ್ಬಾ ಇಲೈಕುಮ್ ಮಿನಲ್ಲಾಹೆವರಸೂ
ಲಿಹಿವಜಹಾದಿನ್ ಪಿಸೆಬೀಲಿಹಿ ಫತ
ರಬ್ಬಸುಹತ್ತಾಯಾತಿಯಲ್ಲಾಹು ಬಿಅಮ್
ರಿಹಿ ವಲ್ಲಾಹುಲಾಯಹದಿಲ್ ಕೌಮಲ್ ಫಾಸಿಕೀನ.
(ಕು. ಅ. ೯, ಸಂ. ೩.)

ಅರ್ಥ:—ಓ ! ಪ್ರವಾದಿಯೇ ! ಜನರಿಗೆ ಸಾರು. "ಧರ್ಮದ ಸಲುವಾಗಿಯೂ ಮತ್ತು ಧರ್ಮ ಯುದ್ಧಕಾಗಿಯೂ ನೀವು ನಿಮ್ಮ ಪಿತೃಗಳೆನ್ನೂ ಮಕ್ಕಳನ್ನೂ ಅಣ್ಣತಮ್ಮಂದಿರನ್ನೂ, ಹೆಂಡರನ್ನೂ, ಬೀಗರನ್ನೂ ತಮ್ಮವ್ಯಾಪಾರವನ್ನೂ ಮತ್ತು ದೇಶವನ್ನೆಂದರೂ ಬಿಟ್ಟು ಹೋಗಬೇಕು. ಇಲ್ಲದಿದ್ದರೆ ನೀವು ಪರಮಾತ್ಮನ ಆಗ್ರಹಕ್ಕೆ ಪಾತ್ರರಾಗುವಿರಿ. ಅಂಥಾವರಿಗೆ ಪರಮಾತ್ಮನ ಸನ್ಮಾರ್ಗವನ್ನು ತೋರಿಸುವುದಿಲ್ಲ. ನೀವೆಲ್ಲರು ಪ್ರಪಂಚವೆಂಬ ಹಡಗಿನ ಸಂಚಾರಿಕರಿದ್ದೀರಿ. ಅಲ್ಲಿಯ ಜನರಿಗೆ ದೇವೋಕ್ತವಾದ ಕುರಾನಿನ ಬೋಧನೆಗಳನ್ನು ತಿಳಿಸುತ್ತೀರಿ. ಇದರಿಂದ ಅನರು ಎಚ್ಚರವಾಗಿ ಹಡಗಿನಲ್ಲಿ ಇರಲಿ. ನೀವು ಜಗತ್ತಿಗೆಲ್ಲ ಅಧಿಕಾರಿಗಳು. ಆದಪ್ರಯುಕ್ತ ನೀವು ಎಲ್ಲಾ ಜನಾಂಗಗಳಿಗಿಂತಲೂ ಶ್ರೇಷ್ಠರು. ಎಲ್ಲಾ ಕುಲದವರೂ ನಿಮ್ಮ ಪಾದಗಳ ಕೆಳಭಾಗದಲ್ಲಿರುತ್ತಾರೆ. ಅವರನ್ನು ಯಾವತ್ತೂ ನೀವು ನಿಮ್ಮ ಸರಿಸಮಾನರನ್ನಾಗಿಮಾಡಲೆತ್ನಿಸಬೇಕು. ಇದನ್ನು ಬಿಟ್ಟು ನೀವು ಪ್ರಪಂಚದಕಡೆಯೇ ಹೊರಳಿದರೆ ಅವರಂತೆಯೇ ನಾಶವಾಗುತ್ತೀರಿ. ನೀವು ಪ್ರಪಂಚದಲ್ಲಿ ಶ್ರೇಷ್ಠರಾದ್ದರಿಂದ ಪ್ರಪಂಚವೆಂಬ ಹಡಗಿನ ಪ್ಯಾಸೆಂಜರುಗಳಾಗಿರುತ್ತೀರಿ. ಉಳಿದವರು ಸೇವಕರಂತೆ ಪ್ರಪಂಚವೆಂಬ ಹಡಗಿನ ಕೆಳಭಾಗದಲ್ಲಿರುತ್ತಾರೆ. ಡೆಕ್ಕಿನಲ್ಲಿ ಕುಡಿಯಲಿಕ್ಕೆ ನೀರು ಸಿಗದೆ ಇರುವದರಿಂದ ಪ್ಯಾಸೆಂಜರುಗಳಾದ ನಿಮ್ಮ ಕಡೆ ಬರುತ್ತಾರೆ. ಆಗ್ಗೆ ನೀವು ಖುರಾ೯ ಎಂಬ ನೀರನ್ನು ಕೊಡದಪಕ್ಷಕ್ಕೆ ಡೆಕ್ಕಿನಲ್ಲಿಯೆ ತೂತು ಮಾಡಿ ನೀರು ಕುಡಿಯುತ್ತಾರೆ. ಇದರಿಂದ ಹಡಗಿನಲ್ಲಿ ನೀರು ತುಂಬಿ ತಾವು ನಾಶವಾಗುವದಲ್ಲದೆ ಕಡೆಗೆ ಮೇಲಿರುವ ನೀವೂ ನಾಶವಾಗುವಿರಿ. ಹೀಗೆ ನಿಮ್ಮ ಸ್ಥಿತಿಯೂ ಮತ್ತು ಪ್ರಪಂಚದ ಜನಗಳ ಸ್ಥಿತಿಯೂ ಒಟ್ಟು.ಉ ಮನುಷ್ಯರ ಆತ್ಮಭೂಮಿಯೆ ನಿಮ್ಮ ಭೂಮಿಯು. ಇದರಲ್ಲಿ ಸರಿಯಾಗಿ ವ್ಯವಸಾಯವನ್ನು ಮಾಡಿ ಹಸನು ಮಾಡಿದರೆ ಒಳ್ಳೆಯ ಫಲ ದೊರೆಯುವುದು. ಇದೇ ವಿಷಯವನ್ನು ಹಿಂದೂಸ್ಥಾನದ ಒಬ್ಬ ಕವಿವರ್ಯರು ಬಹು ಚನ್ನಾಗಿ ವರ್ಣಿಸಿರುತ್ತಾರೆ.

ಚೀನೊ ಅರಬ್ ಹಮಾರಾ ಹಿಂದೂಸ್ಥಾಕ ಹಮಾರಾ
ಮುಸಲಿಮ್‌ಹೈಂ ಹಮ್‌ವತನ್ ಹೈಸಾರಾಜಹಾಂಹಮಾರಾ.

ಅರ್ಥ:—ನಾವು ಮುಸಲ್ಮಾನರು ಎನಿಸಿಕೊಂಡಮೇಲೆ ನಮಗೆ ಎಲ್ಲಾ ದೇಶಗಳೂ ಸೇರಿನೆ. ಚೀನ, ಅರಬ್, ಭರತಖಂಡ ಇವುಗಳೆಲ್ಲವೂ ನಮಗೆ

ಸೇರಿವೆ. ನಾವು ಮುಸಲ್ಮಾನರಾದಕಾರಣ ಪ್ರಪಂಚವೇ ನಮ್ಮದಾಗಿರುತ್ತದೆ. ಎಂದರೆ " ಮುಸಲಿಂ " ಎಲ್ಲಿರುತ್ತಾನೋ ಆದೇ ತನ್ನ ದೇಶವು.

ಮುಸಲ್ಮಾನರು ಧಾರ್ಮಿಕ ಜನರಿದ್ದಕಾರಣ ಇದುವರೆಗೂ ಯಾವಾಗಲೂ ದೇಶ ಚಳವಳಿಯಲ್ಲಿ ಕೈಹಾಕಲಿಲ್ಲಾ. ಖಿಲಾಫತ್ ಆದರೂ ಧರ್ಮ ಸಂಬಂಧವಾದ್ದರಿಂದ ಮುಸಲ್ಮಾನರು ಎದ್ದು ನಿಂತರು. ಪ್ರಪಂಚಕ್ಕೆ ಹೊಡೆದಾಡುವರು ಮುಸಲ್ಮಾನರಲ್ಲ. ಈ ರೀತಿಯಿಂದ ಹಜರತ್ ಮಹಮ್ಮದ್ ಪೈಗಂಬರರು ಜಗತ್ತಿನವರು ದೇಶಾಭಿಮಾನವೆಂಬ ದುಃಖಕ್ಕೆ ತಗಲಿದ ಬೋಧನೆಗಳನ್ನು ಬೋಧಿಸಿ ಆ ರೀತಿಯಾಗಿ ನಡದು "ಬ್ರಹ್ಮಾಕೃತ ಶಿವಸಹಸ್ರ ನಾಮ ಸು | ಮೃತ್ಯುಂಜಯ ಸ್ಸೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ॥ ಎನ್ನಿಸಿಕೊಂಡರು.

---

## ಹದಿನೈದನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ಸೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ॥

ಜಗದ್ಗುರುವು ಜಾತಿಸೂತಕ, ಜನನಸೂತಕ, ಪ್ರೇತಸೂತಕ, ನಿತ್ಯಸೂತಕ, ಉಚ್ಚಿಷ್ಟಸೂತಕ ಎಂಬ ಪಂಚಮಹಾಸೂತಕಗಳಿಗೆ ದೂರನಾಗಿರಬೇಕು. ಮತ್ತು ಆಹಾರಕ್ಕೆ ಆಭಿಮಾನಿಯಾಗಿರದೆ ಈ ವಿಷಯದಲ್ಲಿರುವ ಜನಗಳ ದುಃಖವನ್ನು ದೂರಮಾಡಬೇಕು.

ಈ ಪ್ರಮಾಣದ ಸಾಧನೆಗೂ ಕೂಡ ಹಜರತ್ ಮಹಮ್ಮದ್ ಪೈಗಂಬರರ ಸ್ಥಿತಿಯೂ ಬೋಧನೆಗಳೂ ನಂಬಿಕೆಯೂ ಮತ್ತು ಪ್ರಕೃತಿಯೂ ಕೂಡ ಸಾಕ್ಷಿಯಾಗಿವೆ. ಈ ವಿಷಯವು ದೇವೋಕ್ತವಾದ ಖುರಾನಿನಿಂದ ಬಹುಚನ್ನಾಗಿ ಹೊರಪಡುತ್ತದೆ.

ಯಾ ಐಯ್ಯೊಹನ್ಯಾಸೊ ಇನ್ನಾಖಲಕ
ನಾಕುಮ್ ಮಿನ್‌ಜಕರಿಂವ ವವುಂಸಾ
ವ ಜಾಲನಾಕುಂ ಷುವ್ಹೂಬಂವವಕ

ಬಾಯಲಾ ಲೆತಾರಪು ಇನ್ನ ಅಕರಮು
ಕುಮ್ ಇಂದಲ್ಲಾಹೆ ಅತ್‌ಕಾಕುಂ.

ಅರ್ಥ:—ಎಲೈ ಮನುಜರೆ ! ನಾನು ನಿಮ್ಮೆಲ್ಲರನ್ನು ಹೆಣ್ಣು ಗಂಡಿನಿಂದಲೇ ಹುಟ್ಟಿಸಿದ್ದೇನೆ. ಮತ್ತು ಗುರುತಿಗೋಸುಗ ನಿಮ್ಮ ನಿಮ್ಮ ಮನೆತನಗಳ ಹೆಸರುಗಳನ್ನು ಬೇರೆ ಮಾಡಿರುತ್ತೇನೆ. ಆದರೆ ನಿಮ್ಮಲ್ಲಿ ಯಾರು ಜ್ಞಾನಿಗಳೋ ಅವರೇ ಅಲ್ಲಾಹನಲ್ಲಿ ದೊಡ್ಡವರು. ಜಗತ್ತಿನಲ್ಲಿ ಹೆಣ್ಣು,ಗಂಡು ಎರಡು ಕುಲಗಳು ಮತ್ತು ಜ್ಞಾನಿ, ಅಜ್ಞಾನಿ ಎರಡೇ ಜಾತಿಗಳು.

ಮೇಲಿನ ವಾಕ್ಯವು ಜಾತಿಸೂತಕ ಮತ್ತು ಜನಸೂತಕಗಳನ್ನು ನಾಶ ಪಡಿಸಲು ಪ್ರಕಟವಾಯಿತು. ಹಜರತ್ ಮಹಮ್ಮದ್ ಪೈಗಂಬರರು ಮದೀನದಲ್ಲಿ ತಮ್ಮ ಅನಾದಿ ಮತವನ್ನು ಹರಡುತ್ತಿದ್ದುದನ್ನು ನೋಡಿ ಮಕ್ಕಾದವರು ಇದನ್ನು ತಪ್ಪಿಸಬೇಕೆಂಬ ಯೋಚನೆಯಿಂದ ಅನೇಕ ಯುದ್ಧಗಳನ್ನು ಮಾಡಿ ಕಡೆಗೆ ಜಯಶೀಲರಾಗದೆ ಹೋದರು. ಆದರೆ ಆರು ವರ್ಷಗಳಲ್ಲಿ ಹಜರತ್ ರವರು ತಮ್ಮ ಹತ್ತು ಸಾವಿರಜನ ಶಿಷ್ಯರೊಂದಿಗೆ ಮಕ್ಕಾಪಟ್ಟಣವನ್ನು ಮುತ್ತಿಗೆ ಹಾಕಿ ಜಯವನ್ನು ಹೊಂದಿದರು. ಆಗ್ಗೆ ಪವಿತ್ರವಾದ ಮಕ್ಕಾದ ದೇವಾಲಯದ ಮೇಲೆ ನಿಂತು ಪ್ರಾರ್ಥನಾ ಸಲುವಾಗಿ "ಅಜಾಂ" ಕೊಡಲು ಹಜರತ್ ಬಿಲಾಲ್‌ರವರನ್ನು ನೇಮಿಸಲ್ಪಟ್ಟರು. ಆಗ ಈ ಕಾರ್ಯವನ್ನು ಹಜರತ್ ಬಿಲಾಲ್‌ರವರು ನಡಿಸುತ್ತಿದ್ದುದನ್ನು ನೋಡಿ ಜನರಲ್ಲಿ ಒಂದುವಿಧವಾದ ಗಲಭೆಯಾಯಿತು. ಇದರ ಕಾರಣವೇನೆಂದರೆ, ಹಜರತ್ ಬಿಲಾಲ್‌ರವರು ಮೊದಲು ಹೊಲೆಯರಲ್ಲಿ ಜನಿಸಿದ್ದರು. ನಂತರ ಇವರು ಹಜರತ್‌ರವರಲ್ಲಿ ದೀಕ್ಷೆಯನ್ನು ಹೊಂದಿ ಜ್ಞಾನವನ್ನು ಸಂಪಾದಿಸಿದ್ದರು. ಇದನ್ನು ತಿಳಿಯದೆ ಅಜ್ಞಾನಿಗಳು ಹೊಲೆಯರನ್ನು ಪವಿತ್ರಸ್ಥಳದಮೇಲೇರಿಸಿದರೆಂದು ಅವರ ಕುಲವನ್ನು ಎಣಿಸಲುಪಕ್ರಮಿಸಿದರು. ಇದನ್ನು ಕೇಳಿ ಹಜರತ್‌ರವರು ದೈವ ಸಮಾಧಿಯನ್ನು ಹೊಕ್ಕು ಪ್ರಾರ್ಥಿಸಲು ಮೇಲಿನ ವಾಕ್ಯವು ಪ್ರಕಟವಾಯಿತು.

ಇದೇರೀತಿಯಲ್ಲಿ ನೀಚಕುಲದವರೆನಿಸಿಕೊಂಡು ತಮ್ಮಲ್ಲಿ ದೀಕ್ಷೆಯನ್ನು ಹೊಂದಿದ ಕೂಡಲೇ ಅವರಿಗೆ ದೊಡ್ಡ ಪದವಿಗಳನ್ನು ವಹಿಸಿದರು. ಹಿರಿಯ ಕುಲದವರೆನಿಸಿಕೊಂಡವರನ್ನು ಅವರ ಕೈಕೆಳಗಿರಿಸುತ್ತಿದ್ದರು. ತಮ್ಮ ಸ್ವಂತ

ತಂಗಿಯನ್ನು ತಮ್ಮ ಪರಮಭಕ್ತನಾದ ಮತ್ತು ಹೊಲೆಯರಲ್ಲಿ ಜನಿಸಿದ ಜಯೇದ್ ಎಂಬವರಿಗೆ ಕೊಟ್ಟು ವಿವಾಹ ಮಾಡಿದ್ದಲ್ಲದೆ ತಾವು ಕೂಡ ನೀಚ ಕುಲ, ಕಿರಿಕುಲ, ಕೀಳುಕುಲ ಎನಿಸಿದವರಲ್ಲಿ ಲಗ್ನಮಾಡಿಕೊಂಡರು. ಈ ವಿಧವಾಗಿ ಜಾತಿಸೂತಕ ಜನನಸೂತಕಗಳನ್ನು ಮುರಿದ-ಹಾಕಿ ಜಗತ್ತಿನ ದುಃಖವನ್ನು ದೂರಮಾಡಿದರು.

ಬೇರೆ ಬೇರೆ ಜನಾಂಗಗಳವರು ತಮ್ಮ ದೇವಾಲಯಗಳಲ್ಲಿ ತಮ್ಮ ಜನರನ್ನು ಹೊರತು ಇತರರನ್ನು ಬಿಡುವುದಿಲ್ಲಾ. ಆದರೆ ಮುಸಲ್ಮಾನರಪ್ರಾರ್ಥನಾ ಮಂದಿರದಲ್ಲಿ ಈ ವಿಷಮವಾದ ಕಟ್ಟಳೆಯೇ ಇಲ್ಲ. ಇತರ ಜನರ ದೇವಾಲಯಗಳಲ್ಲಿ ಶ್ರೀಮಂತರಿಗೂ ಬಡವರಿಗೂ ಪ್ರತ್ಯೇಕ ಸ್ಥಳಗಳಿವೆ. ಹಜರತ್ ಮಹಮ್ಮದರು ಜಗದ್ಗುರುವಾಗಿ ಅವತರಿಸಿದ ಕಾರಣ ಶ್ರೀಮಂತರಾಗಲಿ, ಬಡವರಾಗಲಿ, ಹೊಲೆಯರಾಗಲಿ, ಪಂಚನುರಾಗಲಿ, ಜಗದ್ಗುರುವಿನ ಮಹಾವಾಕ್ಯ

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ವನ್ನು ಉಚ್ಚರಿಸಿದರೆ ಎಲ್ಲರೂ ಒಟ್ಟಿಗೆ ಒಂದೇ ಪಂಕ್ತಿಯಲ್ಲಿ ಊಟವನ್ನೂ ಪ್ರಾರ್ಥನೆಯನ್ನೂ ಮಾಡಿಸುತ್ತಿದ್ದರು. ಇದೇ ನಡತೆಯು ಅವರ ಅನುಯಾಯಿಗಳಲ್ಲಿ ಈಗಲೂ ಇದೆ. ಇದರಿಂದ ಪ್ರೇತಸೂತಕ, ಉಚ್ಚಿಷ್ಟಸೂತಕ ಮತ್ತು ನಿತ್ಯಸೂತಕಗಳನ್ನು ದೂರಮಾಡಿದರು.

ಜಗದ್ಗುರು ಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರು ದೇಶ ಕಾಲಕ್ಕೆ ಸರಿಯಾಗಿ ಯಾವ ಯಾವ ಆಹಾರಗಳು ಬೇಕಾಗುತ್ತವೆಯೋ ಅವುಗಳೆಲ್ಲವನ್ನೂ ಉಪಯೋಗಿಸಲು ಅಪ್ಪಣೆ ಕೊಟ್ಟರು. ಹಿಮಪ್ರಾಯವಾದ ದೇಶಗಳಲ್ಲಿ ಮಾಂಸಾಹಾರವಿನಹ ಇತರ ಆಹಾರವು ದೊರೆಯುವುದಿಲ್ಲ. ಅವರ ಜೀವವು ಉಳಿಯಬೇಕಾದರೆ ಮಾಂಸವನ್ನೇ ಉಪಯೋಗಿಸಬೇಕು. ಮತ್ತು ಯಾವಾಗಲೂ ಸಮುದ್ರವಾಸಿಗಳಿಗೆ ಮೀನೇ ಉತ್ಕೃಷ್ಟವಾದ ಆಹಾರವಾಗಿರುತ್ತದೆ. ಇಂಥಾವರಿಗೆ ಈ ಆಹಾರವೇ ಉತ್ತಮವೆಂದು ಹೇಳಿದರು. ಮಾಂಸಾಹಾರದ ಸಲುವಾಗಿ ಕುರ್ಬಾ ಅಪ್ಪಣೆಯನ್ನು ಕೊಡುತ್ತದೆ.

ಹುರ್ರೆಮತ್ ಅಲೈಕುಮುಲ್ ವೈತತ
ವದ್ದಮೊವಲಹ್ ಮುಲ್ಖಿಂಜೀರವನಮಾ
ಒಹಿಲ್ಲಲೆಗೈರಿಲ್ಲಾಹಿ ಬೆಹಿನಲ್‌ಮುನ್
ಖನೆಕತೊವಲ್ ಮೌಕೂಜತೊ, ವಲ್
ಮುತರದ್ ದಿಯತೊವನ್ ನತೀಹತೊ
ವಮಾ ಅಕ್‌ಲಸ್ ಸಬವೊ ಇಲ್ಲಾಮಾಜಕ್ ಕೈ
ತೂಂವಮಾಜಿಜುಬೆಹಾ ಅಲನ್‌ನುಸುಬಿನ
ಅನ್‌ತಸ್ ತಕ್‌ಸಿಮುಬಿಲ್‌ಅಜಲಾಮು
ಜಾಲೆಕೂಂಫಿಸ್ಕ್.

(ಕು. ಅ. ಜ, ಸಂ. ೧)

ಅರ್ಥ:—ಎಲೈ ಮನುಜರೆ ! ನಿಮಗೆ ನಿಷೇಧವಾಗಿರುವುವು ಯಾವ ಪದಾರ್ಥಗಳೆಂದರೆ, ತಾನಾಗಿಯೇ ಸತ್ತ ಪ್ರಾಣಿಯ ಮಾಂಸವು ಮತ್ತು ರಕ್ತವು. ಹಂದಿಯ ಮಾಂಸವು. ದೇವತೆಗಳ ಅಂಕಿತದಿಂದ ಬಿಡಲ್ಪಟ್ಟ ಮತ್ತು ಹತಮಾಡಲ್ಪಟ್ಟ ಪ್ರಾಣಿಗಳು. ಕತ್ತನ್ನು ಹಿಸಿಕಿದ ಪ್ರಾಣಿಯು, ಬೇರೇ ವಿಧವಾಗಿ ಕೊಲ್ಲಲ್ಪಟ್ಟ ಪ್ರಾಣಿಯು, ಬಿದ್ದು ಸತ್ತ ಪ್ರಾಣಿಯು, ಕೊಂಬಿನಿಂದ ಮೃತವಾದ ಪ್ರಾಣಿಯು, ಕ್ರೂರಮೃಗಗಳಿಂದ ಕೊಲ್ಲಲ್ಪಟ್ಟ ಪ್ರಾಣಿಯು, ಕ್ರೂರಮೃಗಗಳಿಂದ ಬಿಡಿಸಲ್ಪಟ್ಟ ಪ್ರಾಣಿಯು ಜೀವಿಸಿದ್ದರೆ ಅದನ್ನು ಯಜ್ಞಮಾಡಬಹುದು, ಇಲ್ಲದಿದ್ದರೆ ಅದೂಕೂಡ ನಿಷೇಧವಾದದ್ದು. ಮತ್ತು ಸಮಾದಿಯ ಹತ್ತಿರ ಅವರ ಹೆಸರಿನಮೇಲೆ ಯಜ್ಞಮಾಡಲ್ಪಡುವ ಪ್ರಾಣಿಯು, ಸ್ಥಾವರಾದಿ ದೇವರ ಮೇಲೆ ಬಲಿಕೊಟ್ಟ ಪ್ರಾಣಿಯೇ ಮುಂತಾದುವುಗಳು ನಿಷೇಧವಾಗಿರುತ್ತವೆ. ಯಜ್ಞಮಾಡಲ್ಪಟ್ಟ ಪ್ರಾಣಿಯನ್ನು ಬಾಣಗಳಿಂದ ಭಾಗಮಾಡಿದುದು ನಿಷೇಧವಾಗಿರುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ನಡೆಯುವವರು ಮೂಢರು.

ಮೇಲಿನ ದೇವೋಕ್ತಿಯಿಂದ ಅನೇಕ ಪ್ರಶ್ನೆಗಳು ಹೊರಬೀಳುತ್ತವೆ. ಅವು ಯಾವುನೆಂದರೆ:—

(೧) ಹಂದಿಯ ಮಾಂಸವು ನಿಷೇಧವಾಗಲು ಕಾರಣ ?

(೨) ತಾವು ಕೊಂದ ಪ್ರಾಣಿಯು ಹೇಗೆ ಪವಿತ್ರವಾಯಿತು ಮತ್ತು ದೇವರು ಕೊಂದ ಪ್ರಾಣಿಯು ಹೇಗೆ ಪವಿತ್ರವಾಗುವದಿಲ್ಲ ?

ಮೊದಲನೆ ಪ್ರಶ್ನೆಯಂತೆ ಹಂದಿಯ ಮಾಂಸವು ನಿಷೇಧವಾಗಲಿಕ್ಕೆ ಎರಡು ಕಾರಣಗಳಿವೆ.—

(a) ಇದರ ಮಾಂಸದಿಂದ ರೋಗಗಳು ಉತ್ಪನ್ನವಾಗುತ್ತವೆ.

(b) ಈ ಪಶುವು ಲಜ್ಜಾಹೀನವಾದದ್ದು. ಅದರ ಸ್ವಭಾವನೇ ಭಕ್ಷಕರಲ್ಲಿ ನೆಲೆಗೊಳ್ಳುವುದು. ಮನುಷ್ಯನು ಸರ್ವಪ್ರಕೃತಿಯನ್ನೂ ತನ್ನಲ್ಲಿ ಇಟ್ಟುಕೊಂಡು ಇರುತ್ತಾನೆ. ಸರ್ವ ಪ್ರಾಣಿಗಳ ಪ್ರಾಣವೇ ಆತ್ಮಸ್ವರೂಪಿಯಾದ ಮನುಷ್ಯನ ಜೀವನು. ಲಜ್ಜಾಹೀನವಾದ ಈ ಪ್ರಾಣಿಯ ಮಾಂಸದಿಂದ ಆ ಗುಣವೇ ತಿನ್ನುವವರಲ್ಲಿ ಉತ್ಪನ್ನವಾಗುತ್ತದೆ. ಸರ್ವ ಪ್ರಾಣಿಗಳ ಪರಿಶೋಧನೆಯಿಂದ ತಿಳಿಯಬರುವದೇನೆಂದರೆ, ಒಂದು ಹೆಣ್ಣಿನ ಸಂಪರ್ಕಕ್ಕೆ ಎರಡು ಗಂಡುಗಳು ಸೇರುವುದಿಲ್ಲ ಮತ್ತು ಒಂದಕ್ಕೊಂದು ತಾಳುವುದಿಲ್ಲ. ಒಂದು ಹಸುವಿನಮೇಲೆ ಎರಡು ಹೋರಿಗಳೂ, ಒಂದು ಹೆಣ್ಣು ಕತ್ತೆಯ ಮೇಲೆ ಎರಡು ಗಂಡುಕತ್ತೆಗಳೂ, ತಾಳುವುದಿಲ್ಲ. ಆದರೆ ಹಂದಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಗುಣವು ಕಾಣಬರುತ್ತದೆ. ಒಂದು ಹೆಣ್ಣು ಹಂದಿಯೊಡನೆ ಮತ್ತೊಂದು ಗಂಡುಹಂದಿಯು ಸಂಪರ್ಕಮಾಡುವ ಕಾಲದಲ್ಲಿ ಇನ್ನೊಂದು ಗಂಡುಹಂದಿಯು ಸಮಾಧಾನದಿಂದ ಆ ಕಾರ್ಯದಲ್ಲಿ ಸಹಾಯವಾಗಿ ಆ ಹೆಣ್ಣು ಹಂದಿಯನ್ನು ತಡೆದು ನಿಲ್ಲಿಸುತ್ತದೆ. ಹೀಗೆ ಎಷ್ಟೋ ಗಂಡು ಹಂದಿಗಳಾದರೂ ಒಂದೊಕ್ಕೊಂದು ವ್ಯತಿರಿಕ್ತವಾಗಿರದೆ ಸಮಾಧಾನದಿಂದ ಕಾರ್ಯವನ್ನು ನೆರವೇರಿಸಿಕೊಳ್ಳುತ್ತವೆ. ಈ ಕಾರ್ಯಕ್ಕೆ ವ್ಯತಿರಿಕ್ತವಾದ ರೋಷವು ಇವುಗಳಲ್ಲಿ ಸರ್ವದಾ ಇಲ್ಲ. ಮತ್ತು ಈ ಕಾರ್ಯದಿಂದ ಲಜ್ಜಾಹೀನತೆಯು ಹೆಚ್ಚುವುದಾಗಿರುತ್ತದೆ. ಇತರ ಯಾವ ಪ್ರಾಣಿಗೆಳಲ್ಲಿಯು ಈ ಸ್ಥಿತಿಯು ಕಂಡುಬರುವುದಿಲ್ಲ. ಆದುದರಿಂದ ಇದರ ಮಾಂಸವನ್ನು ಭಕ್ಷಿಸುವವರು ಇಂಥಾ ಲಜ್ಜಾಹೀನತೆಗೆ ಪಾತ್ರರಾಗುತ್ತಾರೆ. ಈಗಲಾದರೂ ಆ ಜನಗಳಲ್ಲಿ ಈ ಗುಣವು ಸ್ಪಷ್ಟವಾಗಿ ಕಂಡುಬರುತ್ತದೆ.

ಎರಡನೇ ಪ್ರಶ್ನೆಯೂ ಕೂಡ ಬಹು ವಿಚಾರಗರ್ಭಿತವಾಗಿರುವುದು,

ಎರಡು ವಿಧವಾಗಿಯೂ ಪ್ರಾಣಿಯ ಜೀವ ಗತವಾಗುವುದು. ಆದರೆ ಮಾಂಸ ಗಳಲ್ಲಿ ಪವಿತ್ರ ಅಪವಿತ್ರವೆಂಬ ಉಕ್ತಿ ಬರಲು ಕಾರಣವೇನು? ಹಿಂದೆ ನಮ್ಮ ತಂದೆ ತಾಯಿಗಳ ಲಗ್ನದಿಂದ ನಾವುಗಳೆಲ್ಲರೂ ಹುಟ್ಟಿದೆವು. ಪುನಃ ನಮ್ಮ ಸಹೋದರರ ಮತ್ತು ಸಹೋದರಿಯರ ಲಗ್ನಗಳು ಮತ್ತು ನಮ್ಮ ಲಗ್ನಗಳು ಯಥಾರೀತಿಯಾಗಿ ಆಗುತ್ತವೆ. ಲಗ್ನದಲ್ಲಿ ಎಷ್ಟು ವೈಭವವಿದ್ದರೂ, ಯಾವ ವರೆಗೂ ಜೋಯಿಸನು ಬಂದು ವಧೂವರರಿಗೆ ಸಾಕ್ಷಿಯಂತೆ ನಿಂತು "ತದೇವ ಲಗ್ನಂ ಸುದಿನಂ ತದೇವತಾರಾಬಲಂ ಚಂದ್ರಬಲಂ | ತದೇವ ವಿದ್ಯಾಬಲಂ ದೈವಬಲಂ ತದೇವ ಗೌರೀಪತೆ ತೇಂಘ್ರಯೋಗಂಸಮ್ಯಾಮಿ ||" ಎಂದು ಪಠಿಸಿದ ಕೂಡಲೇ ಲಗ್ನವು ಮುಗಿದುಹೋಗಿ ಪರಸ್ತ್ರೀಪುರುಷರು ವಧೂವರರಾಗುವರು. ಇದುಪವಿತ್ರವಾಯಿತು. ಇದರ ಹೊರತು ಎಷ್ಟು ವೈಭವವಿದ್ದೂ ಜೋಯಿಸನ ಸಾಕ್ಷಿಯಾಗಿ ಲಗ್ನವನ್ನುಮಾಡದೆ ಇದ್ದು ತಾನೇ ಸೇರಿದರೆ ಅದು ಅಪವಿತ್ರವಾಯಿತು. ಪರಮಾತ್ಮನೇ ಸ್ತ್ರೀ ಪುರುಷರನ್ನು ಉತ್ಪನ್ನಮಾಡಿರುತ್ತಾನೆ. ಮತ್ತು ಅವರಲ್ಲಿ ಸ್ವಭಾವವಾಗಿ ಇಂದ್ರಿಯಶಕ್ತಿಗಳನ್ನು ನೆಲೆಗೊಳಿಸಿರುತ್ತಾನೆ. ಆದರೆ ಇವರು ತಾವಾಗಿಯೇ ಸೇರಲಿಕ್ಕೆ ಮಾತ್ರ ಅಧಿಕಾರವಿಲ್ಲವು. ಇದು ನಿಷೇಧವಾಯಿತು. ಇದು ಮನುಷ್ಯನಿಂದ ಶುದ್ಧವಾಯಿತು. ಧಾರ್ಮಿಕರು, ಅವತಾರಿಗಳು ಪರಮಾತ್ಮನ ಸಾನ್ನಿಧ್ಯವನ್ನು ಹೊಂದಿ ಓಂಕಾರದಿಂದ ತಿಳಿದು ಕಟ್ಟಳೆಗಳನ್ನು ನಿಯಮಿಸಿರುತ್ತಾರೆ. ಆದರಂತೆಯೇ ಮನುಷ್ಯನಿಂದ ಧರ್ಮನಿಯಮಕ್ಕೆ ಸರಿಯಾಗಿ ಯಜ್ಞಮಾಡುವುದೇ ಪವಿತ್ರವು. ಧರ್ಮಕ್ಕೆ ವ್ಯತಿರಿಕ್ತವಾಗಿ ಸ್ವಭಾವದಿಂದ ಸತ್ತದ್ದು ನಿಷೇಧವಾಯಿತು.

ಪ್ರಕೃತಿಯಲ್ಲಿ ವಿವಿಧ ಪ್ರಾಣಿಗಳುಂಟು.

(೧) ಮಾಂಸಹಾರಿಕಪ್ರಾಣಿಗಳು.

(೨) ಸಸ್ಯಾಹಾರಿಕ ಪ್ರಾಣಿಗಳು.

ಮತ್ತು ಮಾಂಸಹಾರಿಗಳಲ್ಲಿ ಎರಡು ವಿಧಗಳುಂಟು.—

(೧) ಸತ್ತ ಪ್ರಾಣಿಗಳನ್ನು ಭಕ್ಷಿಸುವ ಜೀವರಾಶಿಗಳು,

(೨) ಸ್ವತಃ ಕೊಂದು ತಿನ್ನುವ ಜೀವರಾಸಿಗಳು.

ಸ್ವಲ್ಪ ವಿವೇಕದೊಡನೆ ನೋಡಿದರೆ ಸತ್ತ ಪ್ರಾಣಿಯ ಮಾಂಸವನ್ನು ತಿನ್ನುವ ಜೀವರಾಶಿಗಳಲ್ಲಿ ಹೇಡಿತನವು ವ್ಯೆದೋರುವುದು ಮತ್ತು ಕೀಳಾಗಿರುವುವು. ಇವುಗಳಲ್ಲಿ ಹೇಡಿಗುಣ ಮತ್ತು ಲಜ್ಜಾಹೀನತೆಯೂ ಕಂಡು ಬರುವುದು. ಆದರೆ ಸ್ವತಃ ತನ್ನ ಕೈಯಿಂದ ಕೊಂದು ತಿನ್ನುವ ಜೀವಿಯು ಧೈರ್ಯವನ್ನೂ ಶೂರತನವನ್ನೂ ಶಾಂತತೆಯನ್ನೂ ಹೊಂದಿರುತ್ತದೆ. ಪಕ್ಷಿ ಜಾತಿಯಲ್ಲಿ ಹೆಣವನ್ನು ಮತ್ತು ಸತ್ತ ಪ್ರಾಣಿಗಳನ್ನು ತಿನ್ನುವ ಪಕ್ಷಿಗಳನ್ನು ನೋಡಿರಿ ಮತ್ತು ಗಿಡಗ, ಗರುಡ ಮುಂತಾದ ಕೊಂದುತಿನ್ನುವ ಪಕ್ಷಿಗಳನ್ನಾದರೂ ಈಕ್ಷಿಸಿರಿ. ಸತ್ತ ಪ್ರಾಣಿಗಳನ್ನು ತಿನ್ನುವ ಇಲಿ ಉರಿತೆಗಳನ್ನೂ ಮತ್ತು ಕೊಂದು ತಿನ್ನುವ ಸರ್ಪಗಳನ್ನೂ ನೋಡಿರಿ. ಮೃತಪಟ್ಟ ಪ್ರಾಣಿಯನ್ನು ತಿನ್ನುವ ನರಿ ಮತ್ತು ಕುನ್ನಿಗಳ ಕಡೆ ನೋಡಿರಿ. ಮತ್ತು ಕೊಂದು ತಿನ್ನುವ ಹುಲಿ, ಸಿಂಹ ಮತ್ತು ಚಿರತೆಗಳನ್ನು ನೋಡಿದರೆ ವ್ಯತ್ಯಾಸಗಳು ಕಂಡುಬರುತ್ತವೆ. ಒಂದುವಿಧವಾದವುಗಳಲ್ಲಿ ಉತ್ತಮ ಗುಣಗಳು ಮತ್ತೊಂದರಲ್ಲಿ ಕೀಳುಗುಣಗಳು ಕಂಡುಬರುತ್ತವೆ. ಆದರೆ ಎಲ್ಲವು ಮಾಂಸಾಹಾರಿಗಳೆ ಇವೆ. ಇದರ ದೃಷ್ಟಾಂತವನ್ನು ಜನಗಳಲ್ಲಿಯೂ ಸ್ಪಷ್ಟವಾಗಿನೋಡಬಹುದು. ಹೋಮಾದಿಗರೂ ಮಾಂಸಾಹಾರಿಗಳೆ. ಮತ್ತು ಮುಸಲ್ಮಾನರು, ಮಹಾರಾಷ್ಟ್ರರು, ಇಂಗ್ಲೀಷ್ ಜನರೂ, ಮಾಂಸಹಾರಿಗಳೆ. ಒಬ್ಬರಲ್ಲಿ ಲಜ್ಜಾಹೀನತೆಯು ಕೀಳುತನವು ಊಳಿಗವು ಕಂಡುಬರುತ್ತದೆ. ಮತ್ತೊಬ್ಬರಲ್ಲಿ ಧೈರ್ಯವು, ಸ್ಥೈರ್ಯವು, ಶಾಂತಿಯು ನೆಲೆಗೊಂಡಿದೆ.

ಈ ರೀತಿಯಲ್ಲಿ ಜಗದ್ಗುರುಗಳು ಮನುಷ್ಯನ ಪ್ರಕೃತಿಯನ್ನು ತಿಳಿದು ಅವನಿಗೆ ಕಾಲಕಾಲಕ್ಕೆ ದೇಶದೇಶಕ್ಕೆ ತಕ್ಕ ಸ್ವಾಭಾವ ಸಂಯುಕ್ತ ಆಹಾರವನ್ನು ಉಪಯೋಗಿಸಿ ಸ್ಥೂಲಸೂಕ್ಷ್ಮದ ರಕ್ಷಣೆಗೆ ತಕ್ಕ ಶಕ್ತಿಯನ್ನು ನೆಲಗೊಳಿಸಿ ಮನುಷ್ಯತ್ವವನ್ನು ಸಾರ್ಥಕಗೊಳಿಸಿ "ಬ್ರಹ್ಮಾಕೃತ ಶಿವಸಹಸ್ರನಾಮಸು | ವೃತ್ಯುಂಜಯ ಸೂಕ್ಷ್ಮತನುರ್ಜಗದ್ವಾಪಿ ಜಗದ್ಗುರು" ಎಂಬ ಬಿರುದನ್ನು ಸಂಪಾದಿಸಿದರು.

## ಹದಿನಾರನೆಯ ಪ್ರಮಾಣವು.

ಬ್ರಹ್ಮಾಕೃತಶಿವಸಹಸ್ರನಾಮಸು |
ಮೃತ್ಯುಂಜಯಸೂಕ್ಷ್ಮತನುರ್ಜಗದ್ವಾಪಿಜಗದ್ಗುರು ||

ಜಗತ್ತಿನಲ್ಲಿ ಮನುಜರು ಮೂಢಭಾವನೆಯಿಂದ ಮನುಷ್ಯತ್ವದ ರಹಸ್ಯವನ್ನು ತಿಳಿಯದೆ ಸಾಷ್ಟಾಂಗ ಪ್ರಮಾಣವನ್ನು ಮಾಡಿ ಮನುಷ್ಯತ್ವಕ್ಕೆ ಕುಂದವನ್ನು ತರುವರು; ಇಂಥಾ ಕೊರತೆಯನ್ನು ತಪ್ಪಿಸಿ ಸರ್ವರಲ್ಲಿ ಸರಿಸಮಾನತೆಯನ್ನು ತೋರಿಸುವ ನಮಸ್ಕಾರವನ್ನು ಗೊತ್ತುಮಾಡಿ ಈ ವಿಧವಾದ ದುಃಖವನ್ನು ದೂರಮಾಡಬೇಕು.

ಇದರಲ್ಲಿಯಾದರೆ ಹಜರತ್ ಮಹಮ್ಮದರ ಹೊರತು ಮತ್ತೊಬ್ಬರು ಎಂದಿಗೂ ಉತ್ತೀರ್ಣರಾಗುವುದಿಲ್ಲ. ಇವರ ಅನುಯಾಯಿಗಳಲ್ಲಿ ಸರಿಸಮಾನವಾದ ನಮಸ್ಕಾರ ವಿಧಾನವು ಅವಿಚ್ಛಿನ್ನವಾಗಿ ಕಂಡುಬರುತ್ತದೆ. ಒಬ್ಬರನ್ನೊಬ್ಬರು ಕಾಣುತ್ತಲೆ "ಅಸ್ಸಲಾಮೊವ ಅಲೇಕುಂ" ಎಂದು ಹರಸುತ್ತಾರೆ. ಸಮೀಪಿಸಿದಾಗ ಕೈಲಾಗವನ್ನು ಕೊಡುವದೂ ಕೂಡ ಜಾತಿಸೂತಕ, ಜನನಸೂತಕ ಮುಂತಾದುವುಗಳನ್ನು ನಿರ್ಮೂಲಮಾಡುವುದು. ಇದೇ ಪದ್ಧತಿಯೇ ಗುರುಗಳಲ್ಲಿಯು ಮತ್ತು ಭಕ್ತರಲ್ಲಿಯು ಅವಿಚ್ಛಿನ್ನವಾಗಿ ನಡೆಯುತ್ತಿತ್ತು ಮತ್ತು ಈಗಲೂ ನಡೆಯುತ್ತಾ ಇದೆ. ಹಜರತ್ ಮಹಮ್ಮದರವರಿಗೆ ಪಶುಗಳು ಮತ್ತು ವೃಕ್ಷಗಳು ನಮಸ್ಕಾರ ಮಾಡುವದನ್ನು ಒಬ್ಬ ಭಕ್ತನು ಕಂಡು ತಾನು ಕೂಡ ಏಕೆ ನಮಸ್ಕಾರ ಮಾಡಬಾರದೆಂದು ಕೇಳಲು, ಹಜರತ್ ಮಹಮ್ಮದರವರು "ನಾನು ನಿಮಗೆ ಮನುಷ್ಯತ್ವವನ್ನು ತಿಳಿಸಲು ಅವತರಿಸಿದ್ದೇನೆ. ನೀವು ಪಶುಗಳಾಗುವುದು ನನ್ನ ಇಚ್ಛೆಯಲ್ಲ, ಇದು ನಿಮಗೂ ಸರಿಯಲ್ಲ. ನಾನು ನಿಮ್ಮಂತೆಯೇ ಮನುಷ್ಯನೇ ಹೌದು, ಆದರೆ ಪ್ರವಾದಿಯಾಗಿರುತ್ತೇನೆ. ನಿಮಗೆ ಅದು ಮಾತ್ರವಿಲ್ಲ. ಸಾಷ್ಟಾಂಗನಮಸ್ಕಾರಕ್ಕೆ ಪರಮಾತ್ಮನ ಹೊರತು ಮತ್ತಾರೂ ಅರ್ಹರಲ್ಲ" ಎಂದು ಹೇಳಿದೇವೋಕ್ತವಾದ ಕುರಾನಿನ ಕೆಲವು ಆಧಾರಗಳನ್ನು ತಿಳಿಸಿದರು.

ಲಾತಸ್‌ಜುದು ಲಿಷ್‌ಷಮ್ಸಿವಲಾಲಿಲ್
ಕಮರೆವಸ್‌ಜುದುಲಿಲ್ಲಾಹೆಲ್‌ಲಜಿಖಲಕ
ಹುನ್ನಇನ್ ಕೂಂತುಮ್ ಇಮ್ಯಾಹುತಾಬುದೂನ.

(ಕು. ಅ. ೪೧ನೇ ಸಂ. ೫)

ಅರ್ಥ:—"ಸೂರ್ಯಚಂದ್ರರಿಗೆ ಸಾಷ್ಟಾಂಗನಮಸ್ಕಾರ ಮಾಡಬೇಡಿರಿ. ಯಾವ ಅಲ್ಲಾಹನು ಅವುಗಳನ್ನು ಹುಟ್ಟಿಸಿದಾನೋ ಆತನೇ ನಮಸ್ಕಾರಕ್ಕೆ ಅರ್ಹನು. ಯಾವಾಗಲೂ ಆತನ ಪ್ರಾರ್ಥನೆ ಮಾಡಿರಿ" ಎಂದು ಬೋಧಿಸಿದರು.

ಈ ಮಹಾತ್ಮರೊಬ್ಬರು ಮಾತ್ರ ಸರಿಸಮಾನವಾದ ನಮಸ್ಕಾರ ಪದ್ಧತಿಯನ್ನು ನೆಲೆಗೊಳಿಸಿ ಜಗತ್ತಿನ ದುಃಖವನ್ನು ದೂರಮಾಡಿದರು. ಇವರ ಆಚಾರವೇ ಜನಾಂಗಗಳಲ್ಲಿ ಅವಿಚ್ಛಿನ್ನವಾಗಿ ಹರಡುತ್ತಾ ಇದೆ. ಲಿಂಗಾಯಿತರಲ್ಲಿಯೂ ಹಾರುವರಲ್ಲಿಯೂ ಈ ಸಾಷ್ಟಾಂಗನಮಸ್ಕಾರ ಪದ್ಧತಿಯು ಬಹು ಕ್ಲೇಶಗಳನ್ನುಂಟುಮಾಡಿರುತ್ತದೆ. ಜಂಗಮನು, ಆಚಾರ್ಯನು ಎಂಥಾವರೇ ಆಗಲಿ ಅವರು ಬಂದೊಡನೆಯೇ ಎದ್ದುನಿಂತು ಅವರಿಗೆ ದಂಡಂಪ್ರಣಾಮವನ್ನು ಮಾಡಬೇಕಾಗಿರುವುದು. ಮನುಷ್ಯತ್ವವನ್ನು ನಿರ್ಮೂಲಮಾಡುವ ಈ ಪದ್ಧತಿಯಿಂದ ಜನರು ಸ್ವಭಾವತಃ ಬೇಸರಿಕೆಯನ್ನು ಹೊರಪಡಿಸುತ್ತಾ ಇದ್ದಾರೆ. ಹಿಂದಿನಿಂದ ಬಂದ ಸ್ವಭಾವವಿರುದ್ಧವಾದ ಪದ್ಧತಿಗಳನ್ನು ಬಿಡಿಸುವುದು ಅವತಾರಿಗಳಿಂದಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲವು. ಇದರ ಸಲುವಾಗಿ ಪರಮಾತ್ಮನು ಜಗದ್ಗುರುವಿನ ಅನುಯಾಯಿಯಾಗಿ ಶ್ರೀ ಚನ್ನಬಸವೇಶ್ವರರನ್ನು ಕಳುಹಿಸಿ ನೂರಾಒಂದು ಕುಲಗಳಲ್ಲಿ ಅಸೂಯೆಯನ್ನು ಹರಡಿರುವ ಈ ಪದ್ಧತಿಯನ್ನು ದೂರಮಾಡಲಿಚ್ಛಿಸಿದ್ದಾನೆ.

ಈ ಪದ್ಧತಿಯನ್ನು ಸಮೂಲವಾಗಿ ತಮ್ಮ ಅನುಯಾಯಿಗಳಲ್ಲಿ ತೆಗೆದು ಹಾಕಿದವರು ಹಜರತ್ ಮಹಮ್ಮದರ ಹೊರತು ಮತ್ತಾರೂ ಇಲ್ಲವು. ಮುಂದೆಯೂ ಇವರ ನಡವಳಿಕೆಯೇ ನೆಲಗೊಳ್ಳಬೇಕಾಗಿರುವುದು. ಇದರ ಸಲುವಾಗಿಯೇ ಇವರ ಭಕ್ತರಾಗಿ ಶ್ರೀ ಚನ್ನಬಸವೇಶ್ವರರು ಅವತರಿಸಿರುವರು. ಇದರಿಂದಲೇ ಅಲ್ಲನೇ ಈಶ್ವರಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರು




ಘಟಚಕ್ರವು.

" ಬ್ರಹ್ಮಾಕೃತ ಶಿವಸಹಸ್ರನಾಮ ಸು|ಮೃತ್ಯುಂಜಯ ಸ್ಫೂಕ್ಷ್ಮತನು ರ್ಜಗ
ದ್ವ್ಯಾ ಪಿಜಗದ್ಗುರು ‖ " ಎಂಬ ಬಿರುದನ್ನು ಹೊಂದಿರುವುದು.

## ಹದಿನೇಳನೆಯ ಪ್ರಮಾಣವು.

ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯ ಸ್ಫೂಕ್ಷ್ಮತನು ರ್ಜಗದ್ವ್ಯಾಪಿ ಜಗದ್ಗುರು ‖

ಜಗತ್ತು ಸ್ಥೂಲ ಸೂಕ್ಷ್ಮರೂಪಗಳಲ್ಲಿ ಯಾವಪ್ರಕಾರ ಮನುಷ್ಯನಲ್ಲಿ ಪ್ರಸನ್ನ
ವಾಗಿದೆಯೋ ಹಾಗೆಯೇ ಜಗದ್ಗುರುವು ಸ್ಥೂಲ ಸೂಕ್ಷ್ಮರೂಪಗಳಲ್ಲಿ,
ಸರ್ವಧರ್ಮಗಳಲ್ಲಿ ತನ್ನನ್ನೂ ಮತ್ತು ಸರ್ವಧರ್ಮಗಳನ್ನೂ
ತನ್ನಲ್ಲಿಯೂ ತೋರಿಸಬೇಕು.

ಈ ಪ್ರಮಾಣದ ಸಾಧನೆಗಾಗಿ ಹಜರತ್ ಮಹಮ್ಮದ್ ಪೈಗೆಂಬರರ ಧರ್ಮ ನಿಬಂಧನೆಗಳು ಮಾತ್ರ ಅರ್ಹವಾಗಿರುತ್ತವೆ. ಇವರ ಹೊರತು ಮತ್ತಾರಿಗೂ ಪರಮಾತ್ಮನು ಇದನ್ನು ದಯಪಾಲಿಸಿಲ್ಲ. ಈ ಪ್ರಮಾಣದ ಸ್ವಲ್ಪಭಾಗವು ಹಿಂದಿನ ಪ್ರಮಾಣಗಳಲ್ಲಿಯೂ ಬಂದಿರುತ್ತದೆ. ಆದುದರಿಂದ ಇಲ್ಲಿ ಸರ್ವಧರ್ಮಗಳ ವಿಚಾರವನ್ನು ಸಂಕ್ಷೇಪವಾಗಿ ತಿಳಿಸಬೇಕಾಗಿರುತ್ತದೆ.

## ಲಿಂಗಾಯಿತ ಧರ್ಮವು.

ಈ ಮತದವರ ಮುಕ್ತಿಸಾಧನೆಗೋಸುಗವಾಗಿ ಶ್ರೀ ಚನ್ನಬಸವೇಶ್ವರರು ಷಟ್ಸ್ಥಳಗಳ ಮಾರ್ಗವನ್ನು ಬೋಧಿಸಿದರು. ಇದಾ ಜ್ಞಾನವನ್ನು ಹೊಂದಿ ಅನುಭವಿಸಿದವನೇ ಶರಣ.

### ಷಟ್ಸ್ಥಲಗಳು.

ಭಕ್ತ, ಮಹೇಶ, ಪ್ರಸಾದ, ಪ್ರಾಣ, ಶರಣ ಮತ್ತು ಐಕ್ಯ.
ಇದಲ್ಲದೆ ಕರ್ಮಸಾಧನೆಗಾಗಿ ಅಷ್ಟಾವರ್ಣಗಳ ಅವಲಂಬನವುಂಟು.

## ಅಷ್ಟಾವರ್ಣಗಳು

ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ, ಪಾದೋದಕ, ಪ್ರಸಾದ, ಮತ್ತು ಪಂಚಾಕ್ಷರಿ. ಮತ್ತು

ಆತ್ಮಪದಾಂತಗಳಿಗೆ ಮೂಲಾಧಾರವಾಗಿರುವ ಲಿಂಗತ್ರಯಗಳ ವಿಚಾರವೂ ಉಂಟು.

## ಲಿಂಗತ್ರಯಗಳು

೧. ಇಷ್ಟಲಿಂಗ—{ಆಚಾರಲಿಂಗ / ಗುರುಲಿಂಗ.

೨. ಪ್ರಾಣಲಿಂಗ—{ಶಿವಲಿಂಗ / ಜಂಗಮಲಿಂಗ.

೩. ಭಾವಲಿಂಗ—{ಪ್ರಸಾದಲಿಂಗ / ಮಹಾಲಿಂಗ.

ಲಿಂಗತ್ರಯಗಳ ವಿಚಾರವೇ ಅವರ ಜ್ಞಾನಮಾರ್ಗದ ಅಂತವು. ಮತ್ತು ಇಷ್ಟಲಿಂಗದವರ್ಣನೆಯೇ ಲಿಂಗಸೂತ್ರವು.

## ಲಿಂಗಸೂತ್ರ.

೧. ಲಿಂಗಮಧ್ಯಂ ಜಗತ್ಸರ್ವಂ ತ್ರೈಲೋಕ್ಯಂ ಸಚರಾಚರಂ ।
ಲಿಂಗಬಾಹ್ಯಂಪರಂನಾಸ್ತಿ ತಸ್ಮೈ ಶ್ರೀ ಲಿಂಗಾಯನಮಃ ॥೧॥

೨. ಲಿಯ್ಯತೇಗಮ್ಯತೇಯತ್ರ ತ್ರೈಲೋಕ್ಯಂ ಸಚರಾಚರಂ ।
ತದೇತ್ತಲ್ಲಿಂಗಮಿತ್ಯುಕ್ತಂ ಲಿಂಗತತ್ವವಿಶಾರದೈಃ॥ ॥ ೨ ॥

ಇಂಥಾ ಲಿಂಗಸೂತ್ರವಿದ್ವಾಗ್ಯೂ ಜನಗಳು ಅಜ್ಞಾನದಿಂದ ಶಿಲೆಯೇ ಲಿಂಗವೆಂದು ಭ್ರಮಿಸಿ ದಾರಿತಪ್ಪಿರುತ್ತಾರೆ. ಇದೇ ವಿಚಾರವು ವೇದಗಳಲ್ಲಿಯೂ, ದೇವೋಕ್ತವಾದ ಕುರಾನಿನಲ್ಲಿಯೂ, ದೇದೀಪ್ಯಮಾನವಾಗಿ ತುಂಬಿರುತ್ತದೆ. ಇದಕ್ಕೆ ಪ್ರಮಾಣವು:—

ಪತೀರ್ಲಿಂಗಂ ಸತೀಜಾಹುಂ ಹೃದಯುಕ್ತ್ವಸ್ವಯಂವಿಭುಃ ।
ಪ್ರಾಪಂಚಿಕಸುಖಂನಾಸ್ತಿ ಶರಣಸ್ಥಲಮುತ್ತಮಂ ॥

ಯಾವ ಲಿಂಗವು ಮನೋವ್ಯಾಪಕವಾಗಿದೆಯೋ ಅದೇ ಇಷ್ಟಲಿಂಗವು. ಇದಕ್ಕೆ ಪ್ರಮಾಣ:—

ಸರ್ಪದಂಷ್ಟ್ರೇನಯದ್ವೇಹಂ | ತದ್ವೇಹಂವಿಷದ್ವೇಹಕಂ ||
ಲಿಂಗದಂಷ್ಟ್ರೇನಯದ್ವೇಹಂ | ತದ್ವೇಹಂಲಿಂಗದೇಹಕಂ ||೨||

ಸರ್ಪವು ಕಚ್ಚಿದೊಡನೆಯೇ ಹೇಗೆ ಮೈಯೆಲ್ಲಾ ವಿಷವೇರುತ್ತದೆಯೋ ಹಾಗೆಯೇ ಇಷ್ಟಲಿಂಗದ ಜ್ಞಾನವು ಪ್ರಸನ್ನವಾದಕೂಡಲೇ ಮನುಷ್ಯನು ಪರಮಾತ್ಮನ ಸ್ವರೂಪವೆಂಬ ಕಾಮದಿಂದ ಆವೃತನಾಗುತ್ತಾನೆ.

ಮತ್ತು ಪುರಾತನರು ಲಿಂಗಸೂತ್ರವನ್ನು ಬಹು ಜ್ಞಾನಮಯವಾಗಿ ವಿವರಿಸಿರುತ್ತಾರೆ.—

ಆಗಿಲ್ಲ ಹೋಗಿಲ್ಲ ಮೇಗಿಲ್ಲ ಕೆಳಗಿಲ್ಲ | ತಾಗಿಲ್ಲ ತಪ್ಪಿದರೆಯಿಲ್ಲ |
ಲಿಂಗನಕ್ಕೆ ದೇಗುಲವೆಯಿಲ್ಲ ಸರ್ವಜ್ಞ ||

ಇದಲ್ಲದೆ ಲಿಂಗಾಯಿತ ಪುರಾತನರು ಆತ್ಮಪದಾಂತಗಳ ವಿವರವನ್ನು ಕೂಡ ತಿಳಿಸಿರುತ್ತಾರೆ. ಅಖಂಡದಿಂದ ಪ್ರಾರಂಭಿಸಿ ಅಖಂಡದಲ್ಲಿ ಪೂರ್ತಿ ಮಾಡಿರುತ್ತಾರೆ.



ಮೇಲಿನ ಸ್ವರೂಪಗಳು ಮನುಷ್ಯನಲ್ಲಿ ಸೇರಿ ಆತ್ಮಪದಾಂತಗಳ ಮೊದಲನೆಯ ಅಂತಸ್ಥಿಗೆ ಎಂದರೆ ಆಚಾರಲಿಂಗಕ್ಕೆ ಸಿಲ್ಕಿದವು. ನಂತರ ಗುರುಮುಖದಿಂದ ಶಿವಲಿಂಗವನ್ನು ಹೊಂದಿ ಮನುಷ್ಯನು ಪದಾಂತಗಳಿಗೆ ಅಧಿಕಾರಿಯಾದನು.

ಇದೇ ವಿಷಯವು ಸ್ಥೂಲರೂಪದಲ್ಲಿಯೂಕೂಡ ವಿವರಿಸಲ್ಪಟ್ಟಿರುತ್ತದೆ. ಇದಕ್ಕೆ ಸಪ್ತಚಕ್ರವೆಂದು ಕರೆಯಲ್ಪಟ್ಟಿದೆ. ಗುದಸ್ಥಾನದಲ್ಲಿ ಮೂಲಾಧಾರ ಚಕ್ರ, ಲಿಂಗಸ್ಥಾನದಲ್ಲಿ ಸ್ವಾಧಿಷ್ಠಾನಚಕ್ರ, ನಾಭಿಸ್ಥಾನದಲ್ಲಿ ಮಣಿಪೂರ್ಣ ಚಕ್ರ, ಹೃದಯಸ್ಥಾನದಲ್ಲಿ ಅನಾಹತಚಕ್ರ, ಕಂಠಸ್ಥಾನದಲ್ಲಿ ವಿಷುದ್ಧಚಕ್ರ ಭ್ರೂ ಮಧ್ಯದಲ್ಲಿ ಆಜ್ಞಾಚಕ್ರ, ತಾಯಿಸ್ಥಾನದಲ್ಲಿ ಸಹಸ್ರಾರುಚಕ್ರವೆಂಬ ಆತ್ಮಪದಾಂತಗಳು ಸ್ಥೂಲಕ್ಕೆ ಸಂಬಂಧಿಸಲ್ಪಟ್ಟವೆ.

ಈ ಸಪ್ತಚಕ್ರವು ಪಂಚಭೂತಾದಿಗಳಲ್ಲಿ ಸೇರಿರುವುದು. ಹೇಗೆಂದರೆ, ಕಂಠಸ್ಥಾನದವರೆಗೂ ಆಕಾಶವು, ಇದಕ್ಕೆ ಅಧಿದೇವತೆ ಸದಾಶಿವ, ಆದಿಪುರುಷ ಈಶಾನ್ಯ, ಹೃದಯಸ್ಥಾನದಲ್ಲಿ ವಾಯುವು, ಇದಕ್ಕೆ ಅಧಿದೇವತೆ ಈಶ್ವರನು, ಆದಿಪುರುಷ ತತ್ಪುರುಷ. ನಾಭಿಸ್ಥಾನದಲ್ಲಿ ಅಗ್ನಿಯು, ಇದಕ್ಕೆ ಅಧಿದೇವತೆ ರುದ್ರನು, ಆದಿಪುರುಷನೆ ಅಘೋರ. ಲಿಂಗಸ್ಥಾನದಲ್ಲಿ ಜಲವು, ಇದಕ್ಕೆ ಅಧಿದೇವತೆ ವಿಷ್ಣು, ಆದಿಪುರುಷ ವಾಮದೇವ. ಗುದಸ್ಥಾನದಲ್ಲಿ ಪೃಥ್ವಿ, ಇದಕ್ಕೆ ಅಧಿದೇವತೆ ಬ್ರಹ್ಮ, ಆದಿಪುರುಷ ಸದ್ಯೋಜಾತ. ಇದೇಪ್ರಕಾರವಾಗಿ ಜಗದ್ಗುರುಗಳು ಆದಿಪುರುಷಾದಿಗಳ ಸ್ವರೂಪವನ್ನು ವಿವರಿಸಿದರು. " ಅಬು ತುರಾಬ್ ಮುಖದಿಂದ ಪೃಥ್ವಿ ಹುಟ್ಟಿತು. ಅಬುಬಕರ್ ಮುಖದಿಂದ ಜಲ ಹುಟ್ಟಿತು. ಉಮರ್‌ರವರ ಮುಖದಿಂದ ಅಗ್ನಿ ಹುಟ್ಟಿತು. ಉಸ್ಮಾನರವರ ಮುಖದಿಂದ ವಾಯು ಹುಟ್ಟಿತು. ನಾನೇ ಆಕಾಶವಾಗಿ ಈ ನಾಲ್ಕು ಭೂತ ಗಳನ್ನೂ ನನ್ನಲ್ಲಿ ಸಮಾವೇಶಗೊಳಿಸಿಕೊಂಡಿರುತ್ತೇನೆ" ಎಂದು ಹಜರತ್ ಮಹಮ್ಮದರು ಹೇಳಿರುತ್ತಾರೆ.

ಹಜರತ್ ಮಹಮ್ಮದ್ ಪೈಗಂಬರರು ಲಿಂಗಾಯಿತ ಧರ್ಮದ ವಿಚಾರ ವನ್ನು ಸ್ವಲ್ಪವೂ ಬಿಡದೆ ಬೋಧಿಸಿರುತ್ತಾರೆ. ಇದರ ಕಟ್ಟಳೆಗಳು ಕುರಾನಿ ನಲ್ಲಿ ಸಂಪೂರ್ಣವಾಗಿ ಕಂಡುಬರುತ್ತವೆ. ಈ ವಿಚಾರವನ್ನು ಬೋಧಿಸುವ

ಸಲುವಾಗಿಯೇ ಶ್ರೀ ಚನ್ನಬಸವೇಶ್ವರರ ಅವತಾರವಾಗಿರುತ್ತದೆ. ಇದಲ್ಲದೆ ಷಟ್ ಸ್ಥಳವಿಚಾರವೂ ಕುರಾನಿನಲ್ಲಿ ಸಂಪೂರ್ಣವಾಗಿ ತುಂಬಿರುತ್ತದೆ.

---

## ಷಟ್‌ಸ್ಥಳಗಳು.

ಫನಾಫಿಲ್ ವಜೂದ್—ಭಕ್ತ.
ಫನಾಫಿಷ್ ಷೇಖ್—ಮಹೇಶ.
ಫನಾಫಿಜ್ ಜಾತ್—ಪ್ರಸಾದ, ಪ್ರಾಣ.
ಫನಾಫಿರ್ ರಸೂಲ—ಶರಣ.
ಫನಾಫಿಲ್ಲಾಹ—ಐಕ್ಯ.
ಬಕಾಬಿಲ್ಲಾಹ—ಸಾಕ್ಷಾತ್ ಏಕತ್ವ.

ಇವುಗಳ ವಿಚಾರವು ಕುರಾನಿನಲ್ಲಿ ಮುಂದೆ ಇರುವಹಾಗೆ ಪ್ರಕಟವಾಗಿರುತ್ತದೆ.

ಅಮಂತೊ ಬಿಲ್ಲಾಹಿವಮಲಾಯಕತಿಹಿ
ವ ಕುತುಬಿಹಿ ವರುಸುಲಿಹಿ ವಲ್‌ಯೌಮಿಲ್
ಆಖರೀವಲ್‌ಕದರಿ ಖೈರಿಹಿವಷರ್ರಿಹಿಮಿ
ನಲ್ಲಾಹೆತಾಲಾವಲ್ ಬಾಸೆಬಾದಲ್‌ಮೌತ.
ಅಲ್ಲಾಹ—ಐಕ್ಯ.
ಮಲಾಯಕ—ಇಂದ್ರ.
ಕುತುಬಿ—ಪ್ರಾಣ (ನಫ್ಸೆಕುಲ್)
ರುಸೂಲಿಹಿ—ಶರಣ.
ಯೌಮುಲ್ ಆಖರಿ—ಪ್ರಸಾದಿ.
ಕದರಿ ಖೈರಿಹಿವಷರ್ರಿಹಿ—ಮಹೇಶ.
ಬಾಸೆ ಬಾದಲ್‌ಮೌತ—ಭಕ್ತ.

ಮೇಲಿನ ಸಪ್ತಸ್ಥಳಗಳು ಕುರಾನಿನ ಮೂರುನೂರನಲವತ್ತೈಂಟು ಪ್ರಮಾಣಗಳಿಂದ ಸಾಧಿಸಲ್ಪಟ್ಟಿರುತ್ತವೆ. ಈ ಮಂತ್ರಗಳು ಈ ಪುಸ್ತಕದ ಎರಡನೆಯ ಭಾಗದಲ್ಲಿ ಬರೆಯಲ್ಪಡುವವು.

### ಅಷ್ಟಾವರ್ಣಗಳು.

| | |
|---|---|
| ಮುರ್‌ಷದ್—ಗುರು. | ತಸ್‌ಬೀಹ—ರುದ್ರಾಕ್ಷಿ. |
| ಇರ್‌ಷಾದ್—ಲಿಂಗ. | ಕದಂಬೋಸಿ—ಪಾದೋದಕ. |
| ಫಕೀರ—ಜಂಗಮ. | ತಬರ್‌ರುಕ್—ಪ್ರಸಾದ. |
| ಮುಸಲ್ಲಾ—ವಿಭೂತಿ. | ಜಿಕರ—ಪಂಚಾಕ್ಷರಿ. |

---

ಮತ್ತು ನವಲಿಂಗಗಳ ವಿಚಾರವು ಕುರಾನಿನಲ್ಲಿ ತುಂಬಿರುವುದು.

### ನವಲಿಂಗಗಳು.

ಆಚಾರಲಿಂಗ—ನಫ್‌ಸೆ ಅಮ್ಮಾರಾ (ಷರಿಯತ್)
ಗುರುಲಿಂಗ—ನಫ್‌ಸೆಲವ್ವಾಮಾ (ತರೀಕತ್)
ಶಿವಲಿಂಗ—ನಫ್‌ಸೆಮುತಮುಯಿನ್ನಾ (ಹಕೀಕತ್)
ಜಂಗಮಲಿಂಗ—ರೂಹೆರಾಬಿಯಾ
ಪ್ರಸಾದಲಿಂಗ—ರೂಹೆರುಬೂಬಿಯಾ
ಮಹಾಲಿಂಗ—ರೂಹೆರಾದಿಯಾ
ಇಷ್ಟಲಿಂಗ—ರೂಹೆಮರದಿಯ್ಯಾ
ಪ್ರಾಣಲಿಂಗ—ರೂಹೆ ಅಬ್‌ದಿಯ್ಯಾ
ಭಾವಲಿಂಗ—ರೂಹೆ ಜನ್ನಿಯ್ಯಾ
} ಮಾರಿಫತ್.

---

ಮತ್ತು ಕುರಾನಿನಲ್ಲಿ ಆತ್ಮಪದಾಂತಗಳನ್ನೊಳಗೊಳ್ಳುವ ಸಪ್ತಾಕಾಶಗಳ ವಿವರವೂಕೂಡ ತುಂಬಿರುವುದು. ಮತ್ತು ಇವುಗಳಲ್ಲಿ ಒಂಭತ್ತುಲಕ್ಷ ಅಂತಗಳುಂಟು.

### ಕಾಯವಿವರ.

ಸ್ಥೂಲಕಾಯ—ನಾಸೂತ್ (ಮುಮ್‌ಕೆನುಲ್‌ವಜೂದ್)
ಸೂಕ್ಷ್ಮಕಾಯ—ಮಲಕೂತ್ (ಮುಮ್‌ತನುಲ್‌ವಜೂದ್)

ಕಾರಣಕಾಯ—ಜಬರೂತ್ (ವಾಜಿಬುಲ್‌ವಜೂದ್)
ಮಹಾಕಾಯ—ಲಾಹೂತ್ (ಆರೆಪುಲ್‌ವಜೂದ್)
ಅತಿಕಾಯ—ಹಾಹೂತ್ (ಜಾತ್)

ಇವುಗಳ ವಿವರವು ಮುಂದಿನಭಾಗದಲ್ಲಿ ತಿಳಿಯಬರುವುದು.

## ಆತ್ಮಪದಾಂತಚಕ್ರವು

ಅನಾದಿ ಅಖಂಡಸ್ವರೂಪ—ಅಹದಿಯತ್ ಅದಮ್; ಗಂಜಿಮುಖ್ಫಿ.
ಪರಶಿವ, ಪರಬ್ರಹ್ಮ—ವಹದತ್ ಜಾತೆ ಮುತ್‌ಲಖ್
ಸದಾಶಿವ—ವರಾವುಲ್‌ವರಾ
ಈಶ್ವರ—ರಬ್ಬುಲ್ ಆಲಮಿನ
ಬ್ರಹ್ಮ—ರಹಮಾನ
ವಿಷ್ಣು—ರಹೀಮು
ರುದ್ರ—ಮಾಲಿಕ್

## ಸಪ್ತಚಕ್ರ.

| | |
|---|---|
| ಮೂಲಾಧಾರಚಕ್ರ—ದರಜಾತ್ | ಮುರಾತೆಬ್<br>ಅಜಕಾರ |
| ಸ್ವಾಧಿಷ್ಠಾನಚಕ್ರ—ಮುರತಭೆನಫ್ಸ | ಆಲಮೆಷಹಾದತ್<br>ಅಜ್‌ಕಾರಜಲಿ |
| ಮಣಿಪೂರ್ಣಚಕ್ರ—ಮುರತಬೆಕಲ್ಬ | ಆಲಮೆ ಆಮ್‌ಸಾಲ್<br>ಅಜ್‌ಕಾರೆರೂಹಿ |
| ಅನಾಹತಚಕ್ರ—ಮುರತಬೆರೂಹ್ | ವಾಹೆದಿಯತ್<br>ಅಜ್‌ಕಾರೆಕಲ್‌ಬಿ |
| ವಿಶುದ್ಧಚಕ್ರ—ಮುರತಬೆನೂರ್ | ವಹದತ್<br>ಅಜ್‌ಕಾರೆಸಿರ್ರಿ |
| ಆಜ್ಞಾಚಕ್ರ—ಮುರತಬೆಜಾತ್ | ಅಹದಿಯತ್<br>ಅಜ್‌ಕಾರೆಖಫಿ |
| ಸಹಸ್ರಾರಚಕ್ರ—ಗಂಜೆಮುಖ್ಫಿ | ನುಕ್‌ತಾ<br>ಹುವ್ವಿಯತ್ |

ಇವಲ್ಲದೆ ಸ್ವರ್ಗದಲ್ಲಿ ಗೋಚರವಾಗುವ ಪವಿತ್ರ ವೃಕ್ಷಗಳ ವಿಚಾರವು ಕುರಾನಿನಲ್ಲಿ ಇದೆ. ಅದು ಎರಡನೆಯ ಭಾಗದಲ್ಲಿ ವಿಶದವಾಗಿ ಬರೆಯಲ್ಪಡುವುದು.

## ಸ್ವರ್ಗದ ವೃಕ್ಷಗಳು.

ಮಂದಾರವೃಕ್ಷ—ಸಿದ್ರೆಹ್ ನಖಲ್.
ಹರಿಚಂದನವೃಕ್ಷ—ಸಿದ್ರೆಹೆ ಮಕ್‌ಜೂದಾ.
ಪಾರಿಜಾತವೃಕ್ಷ—ಸಿದ್ರೆಹೆ ವಂಜೂದಾ.
ಸಂತಾನವೃಕ್ಷ—ಸಿದ್ರೆಹೆ ಮಮ್‌ದೂದಾ.
ಕಲ್ಪವೃಕ್ಷ—ಸಿದ್ರತುಲ್ ಮುಂತಹಾ.

ಮೇಲಿನ ಆತ್ಮಪದಾಂತಗಳ ವಿಚಾರವು ಮತ್ತು ಲಿಂಗವಿಚಾರವು ಕುರಾನಿನಲ್ಲಿ ಬಹಳವಾಗಿ ಅಡಗಿರುತ್ತದೆ. ಅವುಗಳಲ್ಲಿನ ಕೆಲವು ಆಧಾರಗಳನ್ನು ತಿಳಿಸುವುದು ಅವಶ್ಯಕವಾಗಿದೆ.

### ಲಿಂಗತತ್ವ

ಲಿಂಗಮಧ್ಯ ಜಗತ್ಸರ್ವಂ ತ್ರಿಲೋಕ್ಯಂ ಸಚರಾಚರಂ| ಲಿಂಗಬಾಹ್ಯಂಪರಂನಾಸ್ತಿ ತಸ್ಮೈಲಿಂಗಾಯನಮಃ ||

ಲೀಯ್ಯತೇಗಮ್ಯತೇ ಯತ್ರ ತ್ರೈಲೋಕ್ಯಂ ಸಚರಾಚರಂ | ತದೇತ್ತಲ್ಲಿಂಗಮಿತ್ಯುಕ್ತಂ | ಲಿಂಗತತ್ವವಿಚಾರದ್ಭಿಃ ||

### ಅರ್ಥ

ಲಿಂಗದಲ್ಲಿ ಜಗತ್ತು ಮತ್ತು ತ್ರಿಲೋಕಗಳು, ಚರಾಚರವಸ್ತುಗಳು ಲೀನವಾಗಿವೆ. ಲಿಂಗದ ಹೊರತು ಪ್ರತಿಯಾದುದೆಲ್ಲಾ ನಾಸ್ತಿಯೆ,

### ಕುರಾನ್

ಸಿತರತಲ್ಲಾಹಿಲ್ ಲತಿಫತರನ್ನಾಸ ಆಲೈಹಾ || ೩೦–೪

ವಫಿಲ್ ಅರ್ದೆ ಆಯತುನ್‌ಲಿಲ್ ಮೋಕೇನೀನ, ವಫೀ ಅನ್‌ವುಸೆಕೂಂ ಅಪ್‌ಲಾತುಬ್ ಸೇರೂನ. ೫೧–೧

ವಮಾದಾಬ್ಬುತಿನ್ ಪಿಲ್ ಅರ್ದೆ ವಲಾತಾ ಯರುನ್ ಯತೀರೊಬಿಜನಾಹೆಹಿ ಇಲ್ಲಾವು ಮುಮುವ್‌ಅಮ್ ಸಾಲೊಕುಂ. ೬–೪

ಅರ್ಥ:—ಈ ಬ್ರಹ್ಮಾಂಡದ ಪ್ರಕೃತಿಯಂತೆಯೇ ಮನುಷ್ಯನ ಸ್ಥಿತಿಯುಂಟು. ನೀವು ನೋಡುವ ಸಚ

ಜಗತ್ತಿನ ಸಮಸ್ತ ವಸ್ತುಗಳೂ ಇದರಲ್ಲಿಯೇ ಲಯವಾಗುತ್ತವೆ ಮತ್ತು ಇದರಲ್ಲಿಯೇ ಗಮನಿಸುತ್ತವೆ. ಇದೇ ಲಿಂಗತತ್ವವು. ಇದನ್ನೇ ಜ್ಞಾನಿಗಳು ತಿಳಿಯುತ್ತಾರೆ.

ರಾಚರಗಳೆಲ್ಲವೂಲಿಂಗೆಸ್ವರೂಪಿಗಳಾದ ನಿನ್ನಲ್ಲಿಯೇ ಪ್ರಸನ್ನವಾಗಿವೆ. ನೀವು ನೋಡಿದರೆ, ಆಕಾಶ ಭೂಮಿಯಲ್ಲಿನ ಸಮಸ್ತ ವಸ್ತುಗಳೂ ಪಕ್ಷಿಪ್ರಾಣಿಗಳೂ ತಮ್ಮ ಗುಣಗಳಿಂದ ಮನುಷ್ಯರಲ್ಲಿ ತುಂಬಿವೆ. ಇದೇ ಲಿಂಗ ಸಾಕ್ಷಿಯು.

## ಶಿವಾದ್ವೈತಸಿದ್ಧಾಂತ ಮುಖ್ಯತ್ವವು.

### ಶೈವಸಿದ್ಧಾಂತ

ತನ್ನ ನಿಜಾನುಸರಣದಿಂ | ದುನ್ನಿಸುವದು ವೇದದೈವ ಗುರುಕುಲವದರಿಂ | ಮುನ್ನವೇ ತನ್ನಂ ತಿಳಿದೊಡವಂ ನಿಜದಿಂ ನೋಡೆ ವೇದದೈವ ಗುರುಜ್ಞಂ ॥

### ಅರ್ಥ

ಸ್ವಸ್ವರೂಪವನ್ನು ಊಹಿಸಲುಳ್ಳದ್ದೇ ವೇದ. ಅದರ ಅರ್ಥವನ್ನು ಉಪದೇಶಿಸುವವನೇ ಗುರು. ವೇದವಾಕ್ಯದಿಂದಲೂ ಗುರುವಚನದಿಂದಲೂ ಗೋಚರವಾಗುವುದೇ ದೈವ. ಇವುಗಳಿಗೆಲ್ಲಕ್ಕೂ ಮೂಲಕಾರಣವಾದವನು ತಾನೇ ಆದ್ದರಿಂದ ಯಾವನು ತನ್ನನ್ನು ತಾನು ತಿಳಿದುಕೊಳ್ಳುವನೋ ಅವನೇ ವೇದವನ್ನೂ ದೈವವನ್ನೂ ಗುರುವನ್ನೂ ತಿಳಿದವನು.

### ಕುರಾನ್

ಲಕದ್ ಸರ್‌ಅಪ್ ನಾಲಿನ್ನಾಸೆಫೀ ಹಾಜಲ್ ಕುರಾನಮಿನ್ ಕುಲ್ಲಿಮಸಲಿನ್. ೧೭–೧೦

ಯೋಅಲ್ಲೆ ಮೊಹುಮುಲ್ ಕಿತಾಬವಲ್ ಹಿಕ್‌ಮಾ. ೬೨–೧

ವಫಿಲ್ ಅರ್ದೆ ಆಯಾತುನ್ ಲಿಲ್ ಮೊಕನೀನ ವಫೀ ಅನ್ ಪುಸೆಕ.ಂ ಅಫಲಾತುಬಸೆರೂನ. ೫೧–೧

ಮನ್‌ರ್ ಅರಫನಫ್ ಸಹುಫಕದ್ ಆರಫರಬ್ಬಹು. (ಹದೀಸ್)

### ಅರ್ಥ

ಮನುಷ್ಯರ ಅಂತರ್ಜ್ಞಾನದಸಲುವಾಗಿ ಕುರಾನಿನಲ್ಲಿ ಉದಾಹರಣೆಗಳಿಂದ ತಿಳಿಸಿರುತ್ತೇವೆ. (ಗುರುವು) ಈ ಗ್ರಂಥದಿಂದ ಜ್ಞಾನೋಪದೇಶ ಮಾಡುತ್ತಾನೆ. ಮತ್ತು ಪ್ರಪಂಚ

ವನ್ನು ತ್ಯಜಿಸುತ್ತಾನೆ. ಯಾವುವು ಪೃಥ್ವಿಯನ್ನೇಲೆ ಕಂಡುಬರುತ್ತವೆಯೋ ಅವುಗಳೆಲ್ಲವೂ ನಿನ್ನೊಳಗೇ ನೆಲಗೊಂಡಿವೆ. ಯಾವನು ತನ್ನನ್ನು ತಾನು ತಿಳಿಯುತ್ತಾನೊ, ಅವನೇ ಪರಮಾತ್ಮನನ್ನು ತಿಳಿದವನು.

ಇವೇ ತತ್ವಗಳನ್ನು ಬೆಳಸಿ ಶರಣರು ಎಷ್ಟೋ ಗ್ರಂಥಗಳನ್ನು ಬರೆದಿದ್ದಾರೆ. ಆ ತತ್ವಗಳೆಲ್ಲವೂ ಕುರಾನಿನಲ್ಲಿ ಕಂಡುಬರುತ್ತವೆ. ಈ ರೀತಿಯಾಗಿ ಸರವರೆ ಆಲಮರು ದೃಢವಾಗಿ ಲಿಂಗಾಯಿತಮತವನ್ನೇ ಪ್ರವರ್ತಿಸಿ ಹರಡಿರುತ್ತಾರೆ. ಇಷ್ಟೇ ಅಲ್ಲ ; ಹಜರತ್‌ರವರ ಚರಿತ್ರವನ್ನೂ ಮತ್ತು ಕುರಾನನ್ನೂ ಜಾಗರೂಕತೆಯಿಂದ ಓದಿನೋಡಿದರೆ ಜಗತ್ತಿನ ಸಮಸ್ತ ಧರ್ಮಗಳೂ ಅದರಲ್ಲಿ ಸಂಪೂರ್ಣರೀತಿಯಿಂದ ನೆಲೆಗೊಂಡಿರುವಂತೆ ಕಂಡುಬರುತ್ತದೆ. ಇದರಿಂದ ಸ್ಪಷ್ಟವಾಗುವುದೇನಂದರೆ ಹಜರತ್‌ರವರು "ಬ್ರಹ್ಮಾಕೃತ ಶಿವಸಹಸ್ರನಾಮ ಸು| ಮೃತ್ಯುಂಜಯ ಸ್ಸೂಕ್ಷ್ಮತನು ರ್ಜಗದ್ವಾ ್ಯಪಿ ಜಗದ್ಗುರು||" ಗಳಾಗಿದ್ದರು. ಇವರ ಭಕ್ತನಾಗಿ ಯಾವನು ನಡೆಯುತ್ತಾನೋ ಅವನೇ ಜನನ ಮರಣ ರಹಿತನಾಗುತ್ತಾನೆ ಮತ್ತು ಕಾರಣಗುರುಗಳ /ಮತ್ತು ಕಾರ್ಯ ಗುರುಗಳ ಪದವಿಯನ್ನು ಹೊಂದುತ್ತಾನೆ.

## ಕ್ರೈಸ್ತರ ಧರ್ಮವು

ಕ್ರೈಸ್ತರ ಮತವೆಂದರೆ ಯಾವುದು ? ಇದರಲ್ಲಿ ಲಿಂಗಾಯಿತರ ಧರ್ಮಪ್ರಕಾರ ಘಟವಿಚಾರಗಳೇನೂ ಇಲ್ಲ. ಏಸುಕ್ರೈಸ್ತರು ಅವತಾರಿಕ ಪುರುಷರಾಗಿದ್ದರು. ಇವರಲ್ಲಿ ವಿಷ್ಣುಶಕ್ತಿಯೂ ನೆಲೆಗೊಂಡಿತ್ತು. ಇವರ ಗ್ರಂಥಕ್ಕೆ ಇಂಜೀಲ ಅಥವಾ ಹೊಸ ಒಡಂಬಡಿಕೆ ಎನ್ನುತ್ತಾರೆ. ಇವರ ಮತಕ್ಕೆ. ಮೂಲಾಧಾರವಾದ ನಂಬಿಕೆ ಯಾವುದೆಂದರೆ, ಏಸುಕ್ರೈಸ್ತರ ಮತ್ತು ಅವರ ಗ್ರಂಥದಮೇಲೆ ವಿಶ್ವಾಸವನ್ನಿಡುವುದು. ಕುರಾನಾದರೋ ಈ ವಿಷಯವನ್ನೇ ಸಾರಿಸಾರಿ ಹೇಳುತ್ತದೆ. ಮತ್ತು ಇಂಜೀಲಿನಲ್ಲಿರತಕ್ಕ ಯಥಾ ಸರ್ವ ಕರ್ಮಗಳನ್ನೂ ಸ್ಪಷ್ಟವಾಗಿ ಬೋಧಿಸುತ್ತದೆ. ಹೇಗೆಂದರೆ:—

ವಕಫ್ ಫೈನಾ ಆಲಾ ಆಸಾರೆ ಹಿರಿ
ಬೆ ಈಸಿಬ್ ನಿವುರಯಮು ಮುಸದ್ದೆ
ಕಲ್ ಲೆಮಾ ಬೈನಾ ಯದೈಹೆ ಮಿನತ್
ತವರಾತೆ, ವ ಅತೈನಾ ಹುಲ್ ಇಂಜೀಲ
ಪೀಹೆ ಹುದಂವ ವನೂರ ವ ಮುಸದ್ ದೆ
ಕಲ್ ಲೆಮಾ ಬೈನಾ ಯದೈಹೆ ಮಿನತ್
ತವರಾತ್ ವ ಹುದಂವವಮೊಯಿ ಜತಲ್
ಲಿಲ್ ಮುತ್ ಕೀನ, ವಲ್ ಯಹಕುಮ್
ಅಹ್ ಲುಲ್ ಇಂಜೀಲೆ ಬೆಮಾ ಅಂಜಲ
ಲ್ಲಾಹು ಫೀಹೆ ವ ಮನ್ ಲಮ್ ಯಹ್
ಕಮ್ ಬೆಮಾ ಅಂಜಲಲ್ಲಾಹೊ ಪವುಲಾ
ಯಕ ಹುಮುಲ್ ಫಾಸೆಕೂನ.

(ಕು. ೫ನೇ ಅಧ್ಯಾಯ, ೭ನೇ ಸಂಧಿ)

ಅರ್ಥ—(ಮೂಸಾ ಪೈಗಂಬರರಾದನಂತರ) ನಾವು ಕ್ರಮವಾಗಿ ಮೇರಿಯ ಮಗನಾದ ಏಸುವನ್ನು ಕಳುಹಿಸಿ ಕೊಟ್ಟಿದ್ದೇವೆ. ಈತನು ತನ್ನ ಕಾಲದಲ್ಲಿ ತನಗಿಂತಲೂ ಹಿಂದಿನ ತವರೇತ (ಬೈಬಿಲ್) ನ್ನು ನಿಜಗ್ರಂಥವೆಂದು ನಂಬಿರುತ್ತಾನೆ ಮತ್ತು ನಾವು ಆತನಿಗೆ ಇಂಜೀಲಗ್ರಂಥವನ್ನು ಕೊಟ್ಟಿದ್ದೇವೆ. ಅದರಲ್ಲಿ ದಿವ್ಯಜ್ಞಾನವೂ ಮತ್ತು ಸನ್ಮಾರ್ಗಗಳೂ ಇವೆ. ಮತ್ತು ಈ ಗ್ರಂಥವು ತನಗಿಂತಲೂ ಹಿಂದಿನ ಗ್ರಂಥವೆಂದರೆ ಬೈಬಿಲ್‌ನ ನಿಜತ್ವವನ್ನು ತಿಳಿಸುತ್ತದೆ. ಇದರಲ್ಲಿ ಜನಗಳಿಗೆ ಭಕ್ತಿ ಮಾರ್ಗಗಳೂ ಮತ್ತು ಜ್ಞಾನಮಾರ್ಗಗಳೂ ಮತ್ತು ಉತ್ತಮ ಬೋಧನೆಗಳೂ ಇರುತ್ತವೆ. ಆದರೆ ಕ್ರೈಸ್ತಜನರು ಇದರಲ್ಲಿರತಕ್ಕಂಥ ಪರಮಾತ್ಮನ ಕಟ್ಟಳೆಗಳಪ್ರಕಾರ ನಡಿಯಬೇಕು. ಯಾರು ಪರಮಾತ್ಮನ ಕಟ್ಟಳೆಗಳಪ್ರಕಾರ ನಡೆಯುವುದಿಲ್ಲವೋ ಅವರೇ ಕೆಟ್ಟ ಜನರು.

ಈ ರೀತಿಯಾಗಿ ಹಜರತ್‌ರವರು ತಮ್ಮ ಸಮಸ್ತ ಭಕ್ತರಿಗೂ ಏಸು ಕ್ರೈಸ್ತರ ಧರ್ಮವನ್ನು ನಂಬಿರಲು ಆಜ್ಞಾಪಿಸಿದರು. ಈಗಲೂ ಇದು ನುಸ

ಲ್ಯಾನರಲ್ಲಿ ಕಂಡುಬರುತ್ತದೆ. ಕುರಾನಿನಲ್ಲಿ ಏಸು ಕ್ರೈಸ್ತರು ಬೋಧಿಸಿದ ಎಲ್ಲಾ ಆಜ್ಞೆಗಳೂ ಉಂಟು. ಎರಡನೇ ಭಾಗದಲ್ಲಿ ಇವುಗಳನ್ನು ವಿವರಿಸುತ್ತೇವೆ. ಆದರೆ ಈ ಪುಸ್ತಕದಲ್ಲಿ ಅವರ ಕರ್ತ್ಯಾಚಾರಗಳಲ್ಲಿ ವಿಶೇಷವಾದಂಥ ಕರ್ತ್ಯಗಳನ್ನು ಕುರಾನಿನ ಬೋಧನೆಗೆ ಹೋಲಿಸಿ ತೋರಿಸುತ್ತೇವೆ. ಇದನ್ನು ಪರಿಶೀಲಿಸಿ ನೋಡಿದರೆ ಕುರಾನಿನ ಜ್ಞಾನವಾರ್ಧಿಕ್ಯತೆಗೆ ಅದು ಸರಿಬರುವದಿಲ್ಲ.

## ಇಂಜೀಲ

ಕೆಡುಕನ್ನು ಎದುರಿಸಬೇಡ. ಯಾವನಾದರೂ ನಿನ್ನ ಬಲಗೆನ್ನೆಯಮೇಲೆ ಹೊಡೆದರೆ ಅವನಿಗೆ ಎಡಗೆನ್ನೆಯನ್ನೂ ತೋರಿಸು. ನಿನ್ನ ಸಂಗಡ ವ್ಯಾಜ್ಯ ವಾಡಿ ನಿನ್ನ ಒಳಂಗಿಯನ್ನು ತೆಗೆದುಕೊಳ್ಳಬೇಕೆಂದಿರುವವನಿಗೆ ಮೇಲಿನ ಅಂಗಿಯನ್ನೂ ಕೊಡು. ಯಾರಾದರೂ ಒಂದು ಮೈಲಿಯ ದೂರ ಬಾರೆಂದು ನಿನ್ನನ್ನು ಕರೆದರೆ ಅವನ ಸಂಗಡ ಎರಡು ಮೈಲಿಗಳ ದೂರ ಹೋಗು. (ಮತ್ತಾಯ ೬ನೇ ಸಂಧಿ–೩೯–೪೧)

## ಕುರಾನ್

ಯಾ ಅ ಐಯೊಹಲ್ ಲಜೀನ ಆಮನುಸ್ ತಿಯೊನು ಬಿಸ್ ಸಬರೆ ಏಸಸೊಲಾತ ಇನ್ನಲ್ಲಾಹ ಮಾ ಅಸ್ ಸಾಬೆರೀನ ವಲಾತ ಕೂಲು ಲಿಮಯಂ ಯುಕ್‌ತಲು ಪೀಸಬೀಲಿಲ್ಲಾಹೆ ಅಮ್‌ವಾತ ಬಲ್ ಅಹಯಾ ವುನ್ ವಲಾ ಕಿಲ್ ಲಾತಷ್‌ವುರೂನ, ವಲನಬ್‌ಲು ವನ್ನಕುಂಬೆ ಷೈಯನ್‌ಮಿನಲ್ ಕೌಫೆ ವಲ್ ಜುಯೆ ವನಕ್ ಸಿನ್‌ಮಿನಲ್ ಅಮ್‌ವಾಲಿವಲ್ ಅನ್‌ಪುಸೇವಸ್‌ಸಮ ರಾತವಬಷಿರಿಸ್‌ಸಾಬೆರೀನಲ್ ಲಜೀವ ಇಜಾ ಅಸಾಬತೊಹಿಮ್ ಮುಸೀಬಾ ಕಾಲು ಇನ್ನಾಲಿಲ್ಲಾ ಹೆ ವ ಇನ್ನಾಇಲೈಹೆ ರಾಜಿವೂನ. (ಕು. ೨ನೇ ಅಧ್ಯಾಯ ೧೯೯ನೇ ಸಂಧಿ)

ಅರ್ಥ:—ಎಲೈ ಭಕ್ತರೇ, ಕಷ್ಟಕಾಲದಲ್ಲಿ ಶಾಂತಿಯಿಂದಲೂ ಮತ್ತು ಪ್ರಾರ್ಥನೆಯಿಂದಲೂ ಪರಮಾತ್ಮನ ಸಹಾಯವನ್ನು ಕೋರಿರಿ. ಯಾತಕ್ಕೆಂದರೆ, ಪರಮಾತ್ಮನು ನಿಜವಾಗಿಯೂ ಶಾಂತಿಸ್ವರೂಪನು. ಧರ್ಮಕ್ಕೋಸ್ಕರವಾಗಿ ಯಾವನು ಪ್ರಾಣವನ್ನು ಕೊಡುತ್ತಾನೋ ಅವನನ್ನು ಮೃತ

ಪಟ್ಟವನೆಂದು ಹೇಳಬೇಡಿರಿ, ಅವನು ಚಿರಂಜೀವಿಯಾಗಿರುತ್ತಾನೆ. ಹೇಗೆಂದರೆ, ನಾವು ನಿಮ್ಮನ್ನು ಭಯಪಡಿಸಿಯೂ, ಆಹಾರವಿಲ್ಲದಂತೆಯೂ, ದ್ರವ್ಯವನ್ನು ನಷ್ಟಪಡಿಸಿಯೂ ಪ್ರಾಣಾಪಾಯಕ್ಕೆ ಗುರಿಮಾಡಿಯೂ ಮತ್ತು ಕರ್ತವ್ಯ ಕರ್ಮದ ಫಲಗಳನ್ನು ನಾಶಪಡಿಸಿಯೂ ಪರೀಕ್ಷಿಸುತ್ತೇವೆ. ಯಾವನು ಇಂಥಾ ಸಮಯಗಳಲ್ಲಿ ತಾಳ್ಮೆಯನ್ನೂ ಸ್ಥೈರ್ಯವನ್ನೂ ತೋರಿಸುತ್ತಾನೋ ಮತ್ತು ಕಷ್ಟಕಾಲಬಂದರೆ "ನಾನು ನಿಜವಾಗಿಯೂ ಅಲ್ಲಾಹನಿಗೋಸ್ಕರವೇ ಇದ್ದೇನೆ. ಇದೆಲ್ಲವೂ ಆತನಿಗೆ ಸೇರಿದ್ದೇ" ಎಂದು ಹೇಳುತ್ತಾನೋ ಅವನಿಗೆ ಸದ್ಗತಿಯು ಲಭಿಸುವುದು. ಇಂಥವರಿಗೆ ಸಹಾಯವೂ ದಯೆಯೂ ಪ್ರಭುವಿನಿಂದ ಉಂಟಾಗುವುದು ಮತ್ತು ಇಂಥವರೇ ಸನ್ಮಾರ್ಗವನ್ನು ಹೊಂದಿದವರು.

ಈ ರೀತಿಯಲ್ಲಿ ಕುರಾನ ಇಂಜೀಲಿನ ಳಲ ಕರ್ಮಮಾರ್ಗಗಳೆಲ್ಲಿ ಯಾವ ಕರ್ಮವನ್ನೂ ಬಿಟ್ಟಿರುವುದಿಲ್ಲ. ಇಷ್ಟೇ ಅಲ್ಲ; ಕುರಾನಿನಲ್ಲಿ ಸಮಸ್ತ ಅವತಾರಿಗಳ ಮೇಲೆ ಪ್ರಕಟವಾಗಿರುವ ಧರ್ಮ, ಜ್ಞಾನ ಮತ್ತು ಕರ್ಮಮಾರ್ಗಗಳು ಪೂರ್ಣವಾಗಿವೆ. ಇದೇ ತತ್ವವನ್ನು ಬೋಧಿಸುತ್ತಾ ಹಜರತ್‌ರವರು "ಒಂದುಲಕ್ಷ ಎಂಭತ್ತುಸಾವಿರ ಅವತಾರಿಕರು ನನ್ನಸೇವೆಯನ್ನು ಮಾಡುತ್ತಾ ಬಂದರು. ಅವರು ಧರ್ಮದ ಕೊಂಬೆಗಳಾದರೆ ನಾನು ಬೀಜವಾಗಿದ್ದೇನೆ. ಆದಕಾರಣ ಸಮಸ್ತ ಅವತಾರಿಗಳೂ ಸಹ ನನ್ನಭಕ್ತರು, ಇವರೆಲ್ಲರೂ ಮುಂದೆಯೂ ನನ್ನ ಭಕ್ತರಾಗಿಯೇ ಹುಟ್ಟುತ್ತಾರೆ. ನಾನೇ ಬ್ರಹ್ಮಾಂಡ ಕರ್ತನು. ವಿಷ್ಣುವಿನ ಸಹಸ್ರನಾಮಗಳು ನನ್ನಿಂದಲೇ ಹೊರಟವು. ರುದ್ರನೂ ಸಹ ನನ್ನ ಅಂಶದಿಂದಲೇ ಜನಿಸಿದ್ದಾನೆ. ನಾನು ಈಶ್ವರರೂಪನು. ನನ್ನಿಂದಲೇ ಜಗತ್ತೆಲ್ಲಾ ಸೃಷ್ಟಿಸಲ್ಪಟ್ಟಿತು. ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ಮತಗಳಿಗೋಸ್ಕರ ಅವತಾರೀಕರು ಬಂದರು. ನಾನು ಸಮಸ್ತ ಜಗತ್ತಿಗೂ ಜಗದ್ಗುರುವಾಗಿ ಬಂದಿದ್ದೇನೆ. ಈಗ ಮುಂದೆ ಯಾರು ಸಾಯುತ್ತಾರೋ ಅವರು ನನ್ನ ಭಕ್ತರಾಗಲಿ ಅಥವಾ ಭಕ್ತರಾಗದೇ ಹೋಗಲಿ ಅವರ ಸಮಾಧಿಯಲ್ಲಿ ಅಂದರೆ ಸತ್ತುಹೋದಮೇಲೆ ನನ್ನ ಸಿಂಹಾಸನವು ಅವರ ಮುಂದೆ ಬರುತ್ತದೆ. ಆಗ ಯಮದೂತರು ಅವರನ್ನು ನನ್ನ ಸಂಬಂಧವಾಗಿ ಕೇಳುತ್ತಾರೆ. ಯಾವನು ನನ್ನನ್ನು ನಂಬಿರುವುದಿಲ್ಲವೋ ಅವನಿಗೆ ಸೂರ್ಯ ಚಂದ್ರರಿರುವವರೆಗೂ ನರಕವು ತಪ್ಪುವುದಿಲ್ಲ. ಕಾರಣ ನನ್ನನ್ನು ನಂಬುವುದೇ ಇಹಪರಂದ ಸಾಧನವು. ಈ

ರೀತಿಯಲ್ಲಿ ನಾನು ಸೂಕ್ಷ್ಮರೂಪದಿಂದ ಜಗದ್ವ್ಯಾಪಿಯಾಗಿದ್ದೇನೆ. "ಜ್ಞಾನಿಗಳಿರಾ, ಈ ಪ್ರಕಾರ ಹಜರತ್‌ರವರು ಜನರನ್ನು ನರಕದಿಂದ ತಪ್ಪಿಸುವುದಕ್ಕೋಸ್ಕರ ತಮ್ಮ ಪದವಿಯ ಘನತೆಯನ್ನು ಹೊರಪಡಿಸಿರುತ್ತಾರೆ. ಜಗತ್ತಿನ ಅಜ್ಞಾನಿಗಳು ತಿಳಿಯುವುದಿಲ್ಲ. ಮತ್ತು ಹೇಳಿದಪ್ರಕಾರ ನಡೆಯುವುದಿಲ್ಲ. ಇಂಥಾ ಜಗತ್ಪಾಲನ ಮಾಡುವ ಧಾತನು ಸಮಸ್ತರಿಗೂ ಮುಕ್ತಿಮಾರ್ಗವನ್ನು ಬೋಧಿಸಲು ಬಂದಮೇಲೆ ಅಜ್ಞಾನತನದಿಂದ ಅವರಿಗೆ ಪ್ರತಿಕಕ್ಷಿಗಳಾಗಿ "ನಾನು ಜಗದ್ಗುರು, ನೀನು ಜಗದ್ಗುರು" ಎಂದು ಕಿತ್ತಾಡುತ್ತಾರೆ.

ಇದೇ ವಿಷಯವನ್ನು ಮುಂದೆ ಎರಡನೇ ಭಾಗದಲ್ಲಿ ಸಂಪೂರ್ಣವಾಗಿ ತಿಳುಹಿಸಲಾಗುತ್ತೆ.

---

## ಎಹೂದ್ಯ ಧರ್ಮವು.

ಜ್ಞಾನಿಗಳಿರಾ, ಎಹೂದ್ಯರ ಧರ್ಮವೆಂದರೆ ಯಾವುದು, ಅದಕ್ಕೆ ಮೂಲಾಧಾರಗಳೂ ಮತ್ತು ನಂಬಿಕೆಗಳೂ ಯಾವುವು? ಪ್ರಿಯರೆ, ಎಹೂದ್ಯರಿಗೆ ಮೂಲಕಟ್ಟಳೆಗಳೆ ಬೈಬಿಲ್‌ನ ಹತ್ತು ಕರ್ಮಮಾರ್ಗಗಳು. ಮತ್ತು ಮೂಸಾ ಪೈಗಂಬರರನ್ನು ನಂಬಿ ಭಕ್ತಿಯಿಂದ ನಡಿಯಬೇಕು. ಆದರೆ ಇದರ ಸಂಪೂರ್ಣ ಕಟ್ಟಳೆಗಳೂ ಮತ್ತು ನಂಬಿಕೆಯೂ ಕುರಾನಿನಲ್ಲಿ ಸ್ಪಷ್ಟವಾಗಿದೆ.

ಇನ್ನಾ ಅಂ ಜಲ್‌ನತ್ ತವರಾತ ಪೀಹಾ
ಹುದಂವವನೂರ.....ವಮನ್‌ಲಮ್‌ಯಹ
ಕಮ್‌ಬೆಮಾ ಅಂಜಲಲ್ಲಾಹೊ ಫವು
ಲಾಯಕ ಹುಮುಲ್‌ಕಾ ಫೆರೂನ.

(ಕು. ೫ನೇ ಅಧ್ಯಾಯ, ೭ನೇ ಸಂಧಿ)

ಅರ್ಥ:—ಬೈಬಲನ್ನು ನಾವೇ (ಪರಮಾತ್ಮ) ಪ್ರಕಟಿಸಿದ್ದೇವೆ. ಬೈಬಲ್ ಜ್ಞಾನಮಾರ್ಗವನ್ನೂ ಮತ್ತು ಕರ್ಮಮಾರ್ಗವನ್ನೂ ಬೋಧಿಸುತ್ತದೆ. ಪರಮಾತ್ಮನು ಪ್ರಚುರಪಡಿಸಿರತಕ್ಕಂಥ ಮಾರ್ಗಗಳ ಪ್ರಕಾರ ಯಾರು ನಡೆಯುವುದಿಲ್ಲವೋ ಅವರು ಭವಿಗಳು ಎಂಬದಾಗಿ ಕುರಾನ ಎಹೂದ್ಯರ ಧರ್ಮ

ವನ್ನು ಒಪ್ಪುತ್ತದೆ. ಮತ್ತು ಎಹೂದ್ಯರ ಹತ್ತು ಕಟ್ಟಳೆಗಳು ಕುರಾನಿನಲ್ಲಿ ಇವೆ. ಅವು ಸಾಧಾರಣವಾಗಿ ಎಲ್ಲಾ ಗ್ರಂಥಗಳಲ್ಲಿಯೂ ದೊರೆಯುವುದರಿಂದ ಬಿಡಲ್ಪಟ್ಟಿವೆ.

---

## ಕ್ಷತ್ರಿಯ ಧರ್ಮವು.

ಕ್ಷತ್ರಿಯರು ತಮ್ಮ ಜೀವನವನ್ನು ಧರ್ಮಯುದ್ಧಗಳಲ್ಲಿ ನೀಗುವುದೇ ಅವರ ಧರ್ಮ. ಈ ವಿಷಯವು ಕುರಾನಿನಲ್ಲಿಯೂ ಹೇಳಲ್ಪಟ್ಟಿದೆ.

### ಭಗವದ್ಗೀತೆ.

ಸ್ವಧರ್ಮಮಪಿಚಾವೇಕ್ಷ್ಯನವಿಕಂಪಿತುಮರ್ಹಸಿ | ಧರ್ಮ್ಯಾದ್ಧಿಯುದ್ಧಾಚ್ಛ್ರೇಯೋನ್ಯತ್ಕ್ಷತ್ರಿಯಸ್ಯನವಿದ್ಯತೆ||

ಅದ್ರಚ್ಛುಯಾಚೋಪಪನ್ನಂಸ್ವರ್ಗದ್ವಾರಮುಪಾವೃತಂ | ಸುಖಿನಃಕ್ಷತ್ರಿಯಾಃ ಪಾರ್ಥಲಭಂತೆಯುದ್ಧಮಿದೃಶಂ||

ಅಥಚೇತ್ತ್ವಮಿಮಂಧರ್ಮ್ಯಂಸಂಗ್ರಾಮಂನಕರಿಷ್ಯಸಿ | ತತಃಸ್ವಧರ್ಮಂಕೀರ್ತಿಂಚಹಿತ್ವಾಪಾಪಮವಾಪ್ಸ್ಯಸಿ||

ಅಕೀರ್ತಿಂಚಾಪಿಭೂತಾನಿ ತಥಿಮಿಷ್ಯಂತಿತೇವ್ಯಯಾಂ | ಸಂಭಾವಿತಸ್ಯಚಾಕೀರ್ತಿರ್ಮರಣಾದತಿರಿಚ್ಯತೆ||

ಭಯಾದ್ರಣಾದುಪರತಂಮನ್ಯಂತೆತ್ವಾಂಮಹಾರಥಾಃ | ಯೇಷಾಂಚತ್ವಂಬಹುಮತೊ ಭೂತ್ವಾಯಾಸ್ಯಸಿಲಾಘವಂ ||

### ಕುರಾನ್

ಕುತಬಾ ಅಲೈಕುಮುಲ್ ಕಿತಾಲ ವಹುವಾಕುರ್ ಹುನ್‌ಲಕುಂ. ೨–೨೬

ಅಲ್‌ಲಜೀನ ಆಮನು ಯುಕಾತೆಲೂನ ಫೀಸ್‌ಬಿಲಿಲ್ಲಾಹೆ. ೪–೧೮

ವಕಾತೆಲುಹುಂ ಹತಾಲಾತಕೂನು ಪಿತನತಂ ವವಯ ಕೂನದ್ದೀನೊ ಲಿಲ್ಲಾಹ ೮–೪೦

ಇನ್‌ನಲ್ಲಾಹಷ್ ತರಾಮಿನಲಃ ಮೊಮಿನೀನ ಅನ್ ಪುಸೂಹುಂವ ಅಮ್‌ವಾಲ ಹುಂಬೆ ಅನ್ನಾಲಹು ಮುಲ್ ಜೇನ್ನಾಯುಕಾ ತೆಲೂನ ಫೀ ಸಬೀ ಲಿಲ್ಲಾಹೆ ಪಯಕು ತಲೂನ ವಯುಕ ತಲೂನ. ೯—೧೧೨

ಮಾಲಕುಮ್ ಲಾತುಕಾ ತೆಲೂನ ಫೀಸಬೀಲಿಲ್ಲಾಹೆ ಅಲ್‌ಲಾತನ್ ಫೆರು ಯೊಯಜ್ಜಬಕುಂ ಅಜಾಬನ್ ಅಲೀ ಮಾ.ನಯುಸ್ ತಬ್‌ದಿಲಃ ಕೌಮನ್

ಅವಾಚ್ಯರಾದಾಂಶ್ಚ ಬಹೂನ್ವದಿ ಷ್ಯಂತಿತ್ಪಾಹಿತಾಃ ನಿಂದಂ ತಸ್ತವ ಸಾಮರ್ಥ್ಯಂ ತತೋದುಃಖತರಂ ನುಕಿಂ ॥

ಹತೋವಾಪ್ಸ್ಯಸೆ ಸ್ವರ್ಗಂಜಿ ತ್ವಾಭೋಕ್ಷ್ಯಸೆಮಹೀಂ । ತಸ್ಮಾ ದುತ್ತಿಷ್ಠಿಕೌಂತೆಯಯುದ್ಧಾಯಕೃತ ನಿಶ್ಚಯಃ ॥

ಸುಖದುಃಖೆ ಸಮೆಕೃತ್ವಾಲಾಭಾ ಲಾಭೌಜಯಾಜಯೌ । ತತೊಯು ದ್ಧಾಯ ಯುಜ್ಯಸ್ವನೈ ನಂಪಾಪಮ ವಾಪ್ಸ್ಯಸಿ ॥

ಅರ್ಥ

ಸ್ವಧರ್ಮವನ್ನು ತಿಳಿದು ನೀನು ಹೆದರತಕ್ಕವನಾಗಕೂಡದು. ಕ್ಷತ್ರಿ ಯರಿಗೆ ಯುದ್ಧಕ್ಕಿಂತಲೂ ಶ್ರೇಷ್ಠ ವಾದ ಬೇರೊಂದು ಧರ್ಮವಿಲ್ಲ ॥

ತನ್ನಷ್ಟಕ್ಕೆತಾನೇ ಪ್ರಾಪ್ತವಾದ ತೆರೆಯಲ್ಪಟ್ಟ ಸ್ವರ್ಗದ್ವಾರವನ್ನು ಸೇರಿ ಸುವಂಥಾ ಯುದ್ಧವನ್ನು ಪುಣ್ಯವಂತ ರಾದ ಕ್ಷತ್ರಿಯರು ಹೊಂದುವರು ॥

ಎಲೈ ಪಾರ್ಥನೆ, ನೀನು ಈ ಧರ್ಮ ಯುದ್ಧವನ್ನು ಮಾಡದೇ ಇದ್ದರೆ ಕುಲ ಧರ್ಮವನ್ನೂ ಕೀರ್ತಿಯನ್ನೂ ಹೋ ಗಲಾಡಿಸಿಕೊಂಡು ಪಾಪವಂ ಹೊಂ ದುವಿ ॥

ಗೈರಕುಂ ಸುಮ್ಮಾಲಾ ಯಕೂನು ಅಮಃನಾಲಕುಂ. ೪೭—೪೦

ಯಾ ಐಯ್ಯೋಹಲಃ ಲಜೀನ ಅಮನು ಇಜಾಲಖೀತುಮುಲಃ ಲಜೀ ನ ಕ ಫರುಜೊಹಃ ಫನಃಫಲಾತುವಲ್ಲು ಹುಮುಲಃ ಅದಬಾರವ ಇನಃ ತತ್ ವಲ್ಲಾ ಯಸಃತಬಃದಿಲಃ ಕೌಮನಃ ಗೈರಕುಂ ಸುಮ್ಮಲಾಯಕೂನು ಅ ಮಃನಾಲಕುಂ. ೪೭—೪೦

ವ ಇಜಾಖಲೌ ಅಜ್ಜ ಅಲೈಕು ಮುಲಃ ಅನಾಮಿಲಾ ಮಿನಲಃಗೈಜ.

೩—೧೧೫

ವುಜಿನಾಲಿಲ್ಲ ಲಜೀನಯುಕಾ ತೆಲೂನಬೆ ಅನ್ನಹುಂ ಜೊಲೆಮು.

೨೨—೪೦

ಕುಲಃಹಲಃ ತರಬ್ಬ ಸೋನಬೆನಾ ಇಲ್ಲಾ ಯಹದಲಃ ಹುಸಃನೈನ.

೯—೫೨

ವ ಇಜಾರಯತ ಸುಮ್ಮರಮತನ ಯಿಾಮನಃ ವಮುಲಃಕನಃ ಕಬೀರಾ.

೩೬—೨೦

ವ ಮಿನನ. ನಾಸೆ ಮೈಂಯಷ್ ತರಿ ನಫಃಸಹುಬಃತೆಗಾಯೇ ಮರದಾ ತಿಲ್ಲಾಹೆ ವಲ್ಲಾಹೊರವೂ ವುನಃಬಿ ಲಃ ಇಬಾದ. ೨—೨೦೩

ಅರ್ಥ

ಎಲೈ ಮೊಮಿನೀನ (ಕ್ಷತ್ರಿಯರೆ)

ಯಾವಾಗಲೂ ಇರುವ ನಿನ್ನ ಅಪಕೀರ್ತಿಯನ್ನು ಜನಗಳು ಕಥೆಯಾಗಿ ಹೇಳುವರು. ಆದರೆ ಯೋಗ್ಯನಾದವನಿಗೆ ಅಪಕೀರ್ತಿಯು ಮರಣಕ್ಕಿಂತ ಹೆಚ್ಚೆಂದು ಹೇಳಲ್ಪಡುವದು ॥

ಭಯದಿಂದ, ಯುದ್ಧ ಸ್ಥಳದಿಂದ ಹಿಂದಿರುಗಿದ ನಿನ್ನನ್ನು ಯಾವ ಮಹಾ ಪರಾಕ್ರಮಶಾಲಿಗಳೊಳಗೆ ನೀನು ಘನವನ್ನು ಹೊಂದಿರುವೆಯೋ ಅವರೆಲ್ಲರೂ ನೋಡುವರು. ಆಗಲೂ ಲಘುತ್ವವನ್ನು ಹೊಂದುವಿ ॥

ನಿನ್ನ ಶತ್ರುಗಳು ಆಡಬಾರದ ಮಾತುಗಳನ್ನು ಬಹಳವಾಗಿ ಆಡುವರು. ನಿನ್ನ ಸಾಮರ್ಥ್ಯವನ್ನು ದೂಷಿಸುವರು. ಅದಕ್ಕಿಂತಲೂ ದೊಡ್ಡ ದುಃಖವ್ಯಾವದು ॥

ಕೊಲ್ಲಲ್ಪಟ್ಟರೆ ಸ್ವರ್ಗವನ್ನು ಹೊಂದುವಿ. ಜಯಿಸಿದರೆ ರಾಜ್ಯಭೋಗವನ್ನು ಅನುಭವಿಸುವಿ. ಎಲೈ ಕುಂತಿಕುಮಾರನೇ, ಆದಕಾರಣ ದೃಢಮನಸ್ಸುಳ್ಳವನಾಗಿ ಯುದ್ಧಕ್ಕೆ ಏಳು ॥

ಸುಖದುಃಖಗಳನ್ನೂ ಲಾಭಾಲಾಭಗಳನ್ನೂ ಜಯಾಪಜಯಗಳನ್ನೂ ಸಮವೆಂದು ಎಣಿಸಿ ಯುದ್ಧಕ್ಕೆ ಸಿದ್ಧನಾದರೆ ಈ ಪಾಪವನ್ನು ಹೊಂದದಿರುವೆ ॥

ನಾನು (ಪರಮಾತ್ಮನು) ಯುದ್ಧ ಮಾಡುವುದೆ ನಿಮ್ಮ ಧರ್ಮವಾಗಿಮಾಡಿದ್ದೇನೆ. ಕ್ಷತ್ರಿಯರು ಧರ್ಮಕ್ಕೋಸ್ಕರ ಯುದ್ಧಮಾಡುವರು. ಕಳವಳ ನಿಂತು ಧರ್ಮಸ್ಥಾಪನೆಯಾಗುವವರೆಗೂ ಯುದ್ಧಮಾಡಿ. ಕ್ಷತ್ರಿಯರಿಂದ ಪರಮಾತ್ಮನು ತನು ಮನ ಧನಗಳನ್ನು ಕೊಂಡುಕೊಂಡಿದ್ದಾನೆ. ಅದಕ್ಕೆ ಬದಲಾಗಿ ಸ್ವರ್ಗದ್ವಾರವನ್ನು ತೆರೆದಿದ್ದಾನೆ. ಆದಕಾರಣ ಕ್ಷತ್ರಿಯರು ಕೊಲ್ಲುತ್ತಾರೆ ಮತ್ತು ಕೊಲ್ಲಲ್ಪಡುತ್ತಾರೆ.

ಎಲೈ ಕ್ಷತ್ರಿಯರೆ ! ನಿಮಗೆ ಏನಾಗಿದೆ ? ನೀವು ಏಕೆ ಯುದ್ಧಮಾಡುವುದಿಲ್ಲ? ನೀವು ಯುದ್ಧ ಮಾಡದೇ ಇದ್ದರೆ ಮಹಾ ಪಾಪವನ್ನು ಹೊಂದುವಿರಿ. ಮತ್ತು ನಿಮ್ಮ ಸ್ಥಳದಲ್ಲಿ ಎರಡನೇ ಜನರು ಬಂದಾರು. ಆಗಲೂ ಜಗತ್ತಿನಲ್ಲಿ ನಿಮ್ಮ ಅಪಕೀರ್ತಿಯು ಉಳದೀತು. ನಿಮ್ಮ ಹೆಸರನ್ನು ಹೇಳುವ ಜನರಾರು.

ಎಲೈ ಕ್ಷತ್ರಿಯರೆ ! ನಿಮ್ಮ ಶತ್ರುಗಳಿಂದ ಯುದ್ಧದಲ್ಲಿ ಹಿಂದಿರುಗೆ ಬೇಡಿರಿ. ನೀವು ಆ ಕಾಲದಲ್ಲಿ ಹಿಂದಿರುಗಿದರೆ ಎರಡನೆ ಜನರು ಬಂದು ಯುದ್ಧ ಮಾಡಿ ಪದವಿಯನ್ನು ಹೊಂದುವರು. ಆಗ ನಿಮ್ಮ ವಂಶೀಕರು

ನಿಮ್ಮ ಹೆಸರು ಹೇಳಲು ಹಿಂದೆಗೆ ಯುತ್ತಾರೆ.

ನಿಮ್ಮ ಶತ್ರುಗಳು ನಿಮ್ಮ ಹಿಂದೆ ನಿಮ್ಮ ಮೇಲೆ ಬೆರಳುಗಳನ್ನು ಕಚ್ಚುತ್ತಾರೆ. ಅಡಬಾರದ ಮಾತುಗಳನ್ನು ಬಹಳವಾಗಿ ಆಡುತ್ತಾರೆ. ಈಪ್ರಕಾರ ನಿಮಗೆ ಹಿಂಸೆಯಿರುವಕಾರಣ ನೀವು ಯುದ್ಧಕೋಸ್ಕರ ಅಪ್ಪಣೆ ಕೊಡಲ್ಪಟ್ಟಿರಿ.

ಓ ಪೈಗಂಬರರೆ ! ಹೇಳಿ. "ಎಲೈ ಕ್ಷತ್ರಿಯರೆ, ನೀವು ನನ್ನಿಂದ ಎರಡು ಫಲಗಳನ್ನು ಪಡೆಯುವಿರಿ. ಅವು ಯಾವುವೆಂದರೆ—ಕೊಲ್ಲಲ್ಪಟ್ಟರೆ ಸ್ವರ್ಗವನ್ನು ಹೊಂದಿವಿರಿ. ಜಯಿಸಿದರೆ ರಾಜಭೋಗವನ್ನು ಅನುಭವಿಸುವಿರಿ. ನೀವು ಒಂದುಸಲ ರಾಜಭೋಗವನ್ನು ನೋಡುವಿರಿ—ಪುನಃ ಮತ್ತೊಂದು ವೇಳೆ ರಾಜ ಭೋಗವನ್ನು ಅನುಭವಿಸುತ್ತೀರಿ. ಯಾವನು ಪರಮಾತ್ಮನಿಗೋಸ್ಕರ ತನ್ನ ಜೀವವನ್ನು ಅರ್ಪಿಸಿಬಿಟ್ಟನೊ ಅವನಿಗೆ ಸುಖ ದುಃಖದ ಮತ್ತು ಲಾಭಾಲಾಭದ ಆಸೆ ಇರುವುದಿಲ್ಲ.

ಈರೀತಿಯಾಗಿ ಕ್ಷತ್ರಿಯರಸಲುವಾಗಿ ಓಂಕಾರೋಕ್ತವಾದ ಕುರಾನು ಐದುನೂರು ಕಟ್ಟಳೆಗಳನ್ನು ಬೋಧಿಸುತ್ತದೆ. ಇದರ ವಿಚಾರವು ಎರಡನೆಯಭಾಗದಲ್ಲಿ ಸಂಪೂರ್ಣವಾಗಿ ಬರುವುದು.

## ಕುಂಚಿಜ್ಞಾತರ ಧರ್ಮವು.

ಈ ಪಂಗಡದವರು ದಕ್ಷಿಣ ಹಿಂದುಸ್ಥಾನದ ಕೆಲವು ಭಾಗಗಳಲ್ಲಿಮಾತ್ರ ನೆಲೆಸಿರುತ್ತಾರೆ. ಇವರೂಕೂಡ ಕ್ಷತ್ರಿಯರೆಂದೆ ಇವರ ಕರ್ಮಗಳಿಂದ ಗೋಚರವಾಗಿರುತ್ತದೆ. ಆದರೂ ಇವರು ಶೈವರಿಗೆ ವಿರೋಧಿಗಳಾಗಿಲ್ಲವು. ಈ ಮತದ ಮುಖ್ಯ ಸಾರಾಂಶವು ಮುಂದಿನ ಶ್ಲೋಕದಿಂದ ತಿಳಿಯಬರುವುದಾಗಿದೆ.

ಚಿತ್ಸತ್ತ್ಯೈವ ಜಗತ್ಸತ್ತಾ ಜಗತ್ಸತ್ತ್ಯೈವಚಿದ್ವಪುಃ |
ಅತ್ರಭೇದ ವಿಕಾರಾದಿ ನಖೇಮಲವಿನಸ್ಥಿತಂ ||

ತಾತ್ಪರ್ಯ:—ಅಂತು ಚಿತ್ತಿನ ಸತ್ತೆಯೆ ಜಗತ್ತಿನ ಸತ್ತೆಯು, ಜಗತ್ತಿನ ಸತ್ತೆಯೆ ಚಿತ್ತಿನ ದೇಹವು. ಈ ಎರಡಕ್ಕೂ ಭೇದವಿಕಾರ ಮುಂತಾದುವು ಆಕಾಶದಲ್ಲಿ ಹೇಗೆ ಮಲವಿಲ್ಲವೊ ಹಾಗೆ ಇದೂ ನಿರ್ಮಲವೆಂದು ತಿಳಿಯಬೇಕು. ಈರೀತಿಯಾದ ಚಿತ್‌ಪ್ರಕಾಶವನ್ನು ತಿಳಿದವನೆ ಕುಂಚಿಜ್ಞಾತನೆಂದು ತಿಳಿಯಬೇಕು. ಇದೇ ತತ್ವವು ಸಂಪೂರ್ಣವಾಗಿ ಕುರಾನಿನಿಂದ ಹೊರಪಟ್ಟಿರುತ್ತದೆ.

ಇನ್ನಾಪೀಖುಲಸ್‌ಕಿಸಮಾವಾತೆವಲ್
ಅರ್ದೆವಖ್‌ತಲಾಪಿಲ್‌ಲೈಲೆವನ್‌ನಹಾರ
ಲೆಆಯಾತಿಲ್‌ಲಿಯುಲಿಲ್‌ಆಲ್‌ಬಾಬ್‌ಆ
ಲ್‌ಲಜೀನಯ ಜಕುರುನಲ್ಲಾ ಹಾತಿಯಾನುಕ
ವಕುವುದಂವಆಲಾಜುನೂಬೆಹಿಮ್‌ವಯ
ತ್‌ಪತ್‌ಕರೂನಪೀಖುಲ್‌ಕಿಸ್‌ಸಮಾವಾತೆವ
ಲ್‌ಆರ್ದರಬ್‌ಬನಾಮಾಬಲಕ್‌ತಾಹಾಜಾಬಾತಿಲಾ.

(ಕು. ಅ. ೩, ಸಂ. ೨೦.)

ಅರ್ಥ:—ಜ್ಞಾನಿಗಳು ಭೂಮ್ಯಂತರಿಕ್ಷಗಳ ತತ್ವಜ್ಞಾನದಲ್ಲಿಯೆ ದಿವ್ಯಜ್ಞಾನವನ್ನು ಸಂಪಾದಿಸುತ್ತಾರೆ. ಇವರು ಯಾವಾಗಲೂ ಜ್ಞಾನದಲ್ಲಿ

ಯೇ ಲೀನವಾಗಿರುತ್ತಾರೆ. ಮತ್ತು ಕುಳಿತಾಗಲೂ ನಿಂತಾಗಲೂ ಮಲಗಿದಾಗಲೂ ಇವರ ಚಿತ್ತವು ಪರಮಾತ್ಮನಲ್ಲಿಯೆ ಇದ್ದು ಆತನ ಸೃಷ್ಟಿಯ ನಿಜತ್ವದಲ್ಲಿ ತುಂಬಿ ತುಳುಕುತ್ತಾ ಇರುತ್ತದೆ.

## ಜೈನ ಧರ್ಮವು.

ಜೈನಧರ್ಮವು ಪ್ರಾಚೀನಕಾಲದಲ್ಲಿ ಸ್ವಭಾವಸಂಯುಕ್ತವಾದ ಅನಾದಿ ಮತದ ಅಂಶವೇ ಆಗಿತ್ತು. ಆದರೆ ಇತ್ತಿತ್ತ ಈ ಧರ್ಮದವರು ದಾರಿ ತಪ್ಪಿ ಎರಡನೆಯವರ ಧರ್ಮದ ವಿರೋಧವೇ ತಮ್ಮ ಸ್ವಧರ್ಮವೆಂದು ನಂಬಿಕೊಂಡಿರುತ್ತಾರೆ. ಈ ಧರ್ಮದ ಬೀಜಮಂತ್ರವು "ಅಹಿಂಸಾಪರಮೋಧರ್ಮ" ಎಂದು ಪ್ರಸಿದ್ಧವಾಗಿದೆ. ಈ ಮಂತ್ರಾನುಸಾರವಾಗಿಯೆ ಪ್ರಪಂಚದ ಎಲ್ಲಾ ಮತಗಳೂ ಹೊರಬಿದ್ದವು. ಮನುಷ್ಯನು ಹುಟ್ಟಿರುವುದೆ ಈ ಪವಿತ್ರವಾಕ್ಯವನ್ನು ಅನುಸರಿಸುವುದರಸಲುವಾಗಿ. ಪುರಾತನರಾದ ಸರ್ವ ಅವತಾರಿಗಳೂಕೂಡ ಇದನ್ನೆ ಬೇರೆಬೇರೆ ರೂಪವಾಗಿ ಉಪದೇಶಿಸಿರುತ್ತಾರೆ. ಚಿನ್ಮಯಸ್ವರೂಪಿಗೆಳಾದ ಹಜರತ್ ಮಹಮ್ಮದ್ ಪೈಗಂಬರರೂ ಇದೇ ಅನಾದಿಮತವನ್ನೆ ಬೋಧಿಸಿ ಸರ್ವರನ್ನೂ ನಿರ್ಲಿಪ್ತರನ್ನಾಗಿ ಮಾಡಿದರು.

"ವಲ್‌ಕಾಫೆರೂನಹುಮುಜ್‌ಜಾಲೆಮೂನ"

(ಕು. ಅ. ೨, ವಾ. ೨೫೫)

"ಇನ್ನಹುಲಾಯುಫ್‌ಲೆಹುಜ್‌ಜಾಲೆಮೂನ"

(ಕು. ಅ. ೬. ವಾ. ೨೨)

ಅರ್ಥ;—ಭವಿಗಳೆ ಹಿಂಸೆಯನ್ನುಂಟುಮಾಡುವವರು. ಪರಮಾತ್ಮನು ಹಿಂಸಿಸುವವರಿಗೆ ಮುಕ್ತಿಯನ್ನು ಸರ್ವದಾ ಕೊಡುವುದಿಲ್ಲಾ

ಇದರ ಹೊರತು ಜಗದ್ಗುರುಸ್ವರೂಪಿಗೆಳಾದ ಹಜರತ್ ಮಹಮ್ಮದ್ ಪೈಗಂಬರರು ಒಂದಾನೊಂದು ದಿವಸ ತಮ್ಮ ಭಕ್ತಸಮೂಹಕ್ಕೆ ಉಪದೇಶವನ್ನು ಮಾಡುತ್ತಿರುವಾಗೆ, ಒಬ್ಬ ಅರಣ್ಯವಾಸಿಯು ಈ ಪರಮ ಗುರುಗಳ

ಸಮೀಪಕ್ಕೆ ಬಂದು "ಓ! ಪ್ರವಾದಿಗಳೆ, ಇಸ್ಲಾಂ ಎಂದರೆ ಏನು? ಮತ್ತು ಅದು ಎಂಥಾ ಧರ್ಮವು?" ಎಂದು ಪ್ರಶ್ನಿಸಿದನು. ಆಗ ಆ ಶಾಂತಮೂರ್ತಿಗಳು:—

"ತಾಜೀಮೆಲೆ ಅಮರಿಲ್ಲಾ ಷಪಕತ್ ಅಲಾಖಲಕಿಲ್ಲಾ"

ಎಂದರೆ "ಪರಮಾತ್ಮನ ಆಜ್ಞೆಯನ್ನು ಶಿರಸಾವಹಿಸಿ ನಡೆಯುವುದು ಮತ್ತು ಆತನಿಂದ ಕಲ್ಪಿತವಾದ ಭೂತಗಳಿಗೆ ಹಿಂಸೆಯನ್ನುಂಟುಮಾಡದೇ ಇರುವುದು" ಎಂದು ಉತ್ತರ ಕೊಟ್ಟರು.

ಇದೇವಿಚಾರವಾಗಿ ಮತ್ತೊಬ್ಬ ಮಹಾತ್ಮರು ಹೇಳಿರುತ್ತಾರೆ:—

ಮೈಖುರೊಮುಸಹಫ್‌ಬೆಸೋಜೊ
ಆತಷಅಂದರಕಾಬಾಜನ | ಸಾಕಿನೇಬುತ್ ಖಾನಾಬಾಷಿಮರದು
ಮಾಜಾರಿಮಕುನ್ ||

ಅರ್ಥ:—ಬಂದುವೇಳೆ ನೀನು ಮದ್ಯಪಾನ ಮಾಡು ಅಥವ ದೇವೋಕ್ತ ಗ್ರಂಥವನ್ನು ಸುಡು ಅಥವ ಯಾತ್ರಾಸ್ಥಾನವಾದ "ಕಾಬಾ" ವನ್ನು ಸುಡು. ಅಥವ ಬಂದುವೇಳೆ ಪರಮಾತ್ಮನಹೊರತಾದ್ದನ್ನಾದರೂ ಪೂಜೆ ಮಾಡು. ಆದರೆ ಭೂತಹಿಂಸೆಯಿಂದ ಪ್ರಾಪ್ತವಾಗುವಷ್ಟು ದೋಷವು ಮೇಲಿನ ಕೃತ್ಯಗಳಿಂದ ಎಂದಿಗೂ ಉಂಟಾಗಲಾರದು.

ಸಮಸ್ತ ಜನಗಳಲ್ಲಿಯೂ 'ಅಹಿಂಸೋ ಪರಮಧರ್ಮ' ವೆಂಬ ತತ್ವವೇ ಪ್ರಾಧಾನವಾಗಿರತ್ತದೆ. ಆದರೆ ಜೈನರು ಇದರ ರಹಸ್ಯವನ್ನು ತಿಳಿಯುದೆ ತಮಗೆ ತೋಚಿದಂತೆ ಈ ಮಹಾವಾಕ್ಯದ ಅರ್ಥವನ್ನು ನಿರರ್ಥಮಾಡಿಕೊಂಡು "ಅಹಿಂಸಾಪರವೊಧರ್ಮಃ" ಎಂದರೆ ಯಜ್ಞಮಾಡಬಾರದು ಎಂದು ವಿವಿಧವಾದ ಪ್ರಸಂಗಗಳನ್ನು ನಡೆಯಿಸಿರುತ್ತಾರೆ. ಇದರಿಂದ ವೇದವಾಕ್ಯವೇ ಸುಳ್ಳಾಗುವುದು. ಪ್ರಪಂಚದ ಇತರರ ದೇವೋಕ್ತ ಗ್ರಂಥಗಳೂ ಕೂಡ ಸುಳ್ಳಾಗುವುವು. ಇವರ ಈ ಪ್ರಸಂಗದ ಸಲುವಾಗಿ ಯಾವ ಆಧಾರವೂ ಇಲ್ಲ. ಪುರಾತನ ಮಹಾ ಋಷಿಗಳು ವೇದಾನುಸಾರವಾಗಿ ಯಜ್ಞಮಾಡಿ ಸನ್ಮಾರ್ಗವನ್ನು

ಭಕ್ಷಿಸಿರುತ್ತಾರೆ. ದೇವೋಕ್ತವಾದ ಯಜುರ್ವೇದದ ಇಪ್ಪತ್ನಾಲ್ಕನೆಯ ಅಧ್ಯಾಯವನ್ನು ಅಬದ್ಧಮಾಡಿದಹಾಗಾಯಿತು. ದೇವೋಕ್ತಿಯನ್ನು ಧಿಕ್ಕರಿಸುವುದಕ್ಕಿಂತಲೂ ಹೆಚ್ಚಾದ ಪಾಪವು ಮತ್ತ್ಯಾವುದೂ ಇಲ್ಲವು.

ಶ್ರೀರಾಮ ಶ್ರೀಕೃಷ್ಣನೆ ಮುಂತಾದ ಭಗವತ್ಪ್ರಸನ್ನರ, ವಸಿಷ್ಠ ಅಗಸ್ತ್ಯನೆ ಮುಂತಾದ ಮಹಾಋಷಿಗಳ ಮತ್ತು ವಾಲ್ಮೀಕ ಮನು ವ್ಯಾಸನೆ ಮುಂತಾದ ಪವಿತ್ರರ ನಡವಳಿಕೆಗಳನ್ನೂ ಮತ್ತು ಸುನುಡಿಗಳನ್ನೂ ಸಮೂಲವಾಗಿ ನಿಂದಿಸಿದಹಾಗಾಯಿತು. ಸಾಕ್ಷಾತ್ ಶ್ರೀಕೃಷ್ಣನೇ ಪಶುವಧೆಯನ್ನೂ ಗೋವಧೆಯನ್ನೂ ಮಾಡಿರುತ್ತಾನೆ. ಇದೇ ವಿಷಯವು ಭಾಗವತದ ಹತ್ತನೇಸ್ಕಂಧದ ಐವತ್ತೆಂಟನೆಯ ಅಧ್ಯಾಯದಲ್ಲಿ ಸೂಚಿಸಲ್ಪಟ್ಟಿರುತ್ತದೆ. ಏಸುಕ್ರೈಸ್ತ ಮೂಸ ಹಜರತ್ ಮಹಮ್ಮದ ಪೈಗಂಬರರೆ ಮುಂತಾದ ಭಗವತ್ಪ್ರವಾದಿಗಳ ಸುಬೋಧನೆಗಳನ್ನೂ ಧಿಕ್ಕರಿಸಿದಹಾಗಾಯಿತು. ಈ ಮಹಾಪುರುಷರೆಲ್ಲರೂ ಅವಿಚ್ಛಿನ್ನವಾಗಿ ಯಜ್ಞವನ್ನು ನೇಮಕ ಪಡಿಸಿರುತ್ತಾರೆ. ನಮ್ಮ ಜೈನಬಾಂಧವರ ಅಭಿಪ್ರಾಯದಲ್ಲಿ ಹಿಂದಿನ ಮಹಾತ್ಮರ ಮತಗಳೆಲ್ಲಾ ಸುಳ್ಳಾದ ಹಾಗಾಯಿತು.

ಯಜ್ಞವೂ ಮತ್ತು ಮಾಂಸಭಕ್ಷಣೆಯೂ ಪುರಾತನ ಮಹಾತ್ಮರಿಂದಲೂ ನಡೆದುಬಂದಿರುವುದಲ್ಲದೆ ಪ್ರಕೃತಿಯೂ ಕೂಡ ಇದಕ್ಕೆ ಸಾದೃಶ್ಯವಾದ ಸಾಕ್ಷಿಗಳನ್ನು ವದಗಿಸುತ್ತದೆ. ಪರಮಾತ್ಮನು ಮಾಂಸಭಕ್ಷಣೆಯಿಂದಲೆ ಜೀವಿಸುವ ಹುಲಿ, ಚಿರತೆ, ಮುಂತಾದ ಅನೇಕ ಪ್ರಾಣಿಗಳನ್ನು ಪ್ರಕೃತಿಯಲ್ಲಿ ಸೃಷ್ಟಿಸಿರುತ್ತಾನೆ. ದಯಾಭರಿತನಾದ ಪರಮಾತ್ಮನು ಒಂದು ದಿನವೂ ಅವುಗಳನ್ನು ಉಪವಾಸವಿರಿಸದೆ ಸಲಹುತ್ತಾನೆ. ಮತ್ತೂ ಅವುಗಳಿಗೆ ಬೇಕಾಗುವ ಮಾಂಸಾಹಾರವನ್ನೂ ಸಕಾಲದಲ್ಲಿ ವದಗಿಸುತ್ತಾನೆ. ಪರಮಾತ್ಮನ ಈ ಕಾರ್ಯವು ಜೈನರ ಅಭಿಪ್ರಾಯದಂತೆ ನಿರ್ದಯ ಭರಿತವಾದುದಾಯಿತು. ಹೀಗೆ ಪರಮಾತ್ಮನನ್ನು ದೂಷಣೆಗೊಳಗುಮಾಡುವುದು ಬಹು ಪಾಪವು. ಮತ್ತು ಇದೆ ಅಜ್ಞಾನದ ಸೂಚನೆಯು. ಇಂಥಾವರೇ ಮನುಷ್ಯತ್ವದ ನಿಜಶ್ರವನ್ನರಿಯದವರು " ಸರ್ವಭೂತೇಷು ಚಾತ್ಮಾನಾಂ | ಸರ್ವ ಭೂತಾನಿ ಚಾತ್ಮನಿ ॥ " ಎಂಬ ಶಿವಗೀತೆಯ ವಾಕ್ಯದಂತೆ ಮನುಷ್ಯನು ಸರ್ವ ಭೂತಗಳ

COW KILLING IN HINDUISM
BHAGWATH SKAN.10 CH.38.
SRI KRISHNA ARJUNA

ಅಂಶವಾಗಿರುತ್ತಾನೆ. ಇವನಲ್ಲಿ ಸರ್ವಪ್ರಕೃತಿ ಸಂಯುಕ್ತವಾದ ಬ್ರಹ್ಮಾಂಡವೆ ಸಂಪೂರ್ಣವಾಗಿ ನೆಲೆಸಿದೆ. ಇವನಲ್ಲಿ ಹುಲಿ, ಚಿರತೆ ಮುಂತಾದ ಪ್ರಾಣಿಗಳೂ ಕೂಡ ನೆಲೆಸಿರುವುದರಿಂದ ಇವನು ಆ ಗುಣಗಳನ್ನು ಸಲಹಿ ಸ್ವಾಧೀನ ಪಡಿಸಿಕೊಳ್ಳಲು ಮಾಂಸವನ್ನು ಭಕ್ಷಿಸಲೆಬೇಕು. ಹಾಗೆ ಮಾಡದ ಪಕ್ಷದಲ್ಲಿ ಇವನು ಅಚಲಪರಿಪೂರ್ಣಬ್ರಹ್ಮಸ್ವರೂಪವನ್ನು ಹೊಂದುವುದಿಲ್ಲಾ. ಆದಪ್ರಯುಕ್ತ ಸರ್ವದೇವೋಕ್ತ ಗ್ರಂಥಗಳೂ ಅವತಾರಿಗಳೂ, ಪುರಾತನಸ್ಮೃತಿಗಳೂ ಮತ್ತು ವೇದಗಳೂ ಕೂಡ ಯಜ್ಞಮಾಡಿ ಮಾಂಸಭಕ್ಷಣೆಯನ್ನು ಮಾಡಲು ನೇಮಿಸಿರುತ್ತವೆ. ಯಜ್ಞಶಾಲೆಗೆ ಹೋದವನು ಯಜ್ಞಮಾಡಲ್ಪಟ್ಟ ಪಶುವಿನಮಾಂಸವನ್ನು ಭಕ್ಷಿಸದೆ ಇದ್ದರೆ, ಆ ಪಶುವಿನ ಶರೀರದ ಮೇಲೆ ಎಷ್ಟು ರೋಮಗಳಿರುತ್ತವೆಯೋ ಅಷ್ಟು ವರ್ಷಗಳು ಅವನು ನರಕದಲ್ಲಿರುತ್ತಾನೆಂಬ ವಿಧಿಯು ಸ್ಮೃತಿಗಳಿಂದ ಸ್ಪಷ್ಟವಾಗಿ ಹೊರಪಟ್ಟಿರುತ್ತದೆ. ಹೀಗಿರುವ ಪುರಾತನ ಮತ ವಿಧಿಗಳನ್ನು ದಿಕ್ಕರಿಸಿ ಪಾಪಕ್ಕೊಳಗಾಗುವುದೇ ಇವರ ಧರ್ಮವೆಂದು ತಿಳಿದಿರುತ್ತಾರೆ. ಇವರು ಹೀಗಾಗಲು ತಮ್ಮ ಮತ ತತ್ವದ ಮೂಲಮಂತ್ರವಾದ "ಅಹಿಂಸೋಪರಮಧರ್ಮ" ಎಂಬುದರ ಸರಿಯಾದ ಅಭಿಪ್ರಾಯವನ್ನು ತಿಳಿಯದೆ ಇರುವುದೆ ಮುಖ್ಯಕಾರಣವು.

ಕ್ರೈಸ್ತಧರ್ಮವೂ ಮತ್ತು ಯಹೂದ್ಯ ಧರ್ಮವೂ ಯಜ್ಞ, ಯಾಜನದ, ಆಜ್ಞೆಯನ್ನು ಅವಿಚ್ಛಿನ್ನವಾಗಿ ಮಾಡುತ್ತವೆ. ಪುರಾತನ ಜೈನಧರ್ಮವೂ ಕೂಡ ಯಜ್ಞವನ್ನು ನೇಮಿಸಿದಹಾಗೆ ಕಂಡುಬರುತ್ತದೆ. ಕೆಲವು ಆಧಾರಗಳಿಂದ ಜೈನರು ಇಲ್ಲಿಗೆ ಎರಡು ಸಾವಿರ ವರ್ಷಗಳ ಹಿಂದೆ ಮಾಂಸಭಕ್ಷಣೆಯನ್ನು ಪ್ರಚಾರದಲ್ಲಿಟ್ಟುಕೊಂಡಿದ್ದತೆ ತಿಳಿದುಬಂದಿರುತ್ತದೆ. ಇವರು ಒಂದು ಕಾಲದಲ್ಲಿ ಸನಾತನಧರ್ಮಿಗಳಿಂದ ವಿರೋಧವನ್ನು ಬೆಳೆಯಿಸಿ ಶ್ರೇಷ್ಠತೆಯನ್ನು ಪಡೆಯಲೆಳಸಿ ಯಜ್ಞವನ್ನೂ ಮತ್ತು ಮಾಂಸಭಕ್ಷಣೆಯನ್ನೂ ಬಿಟ್ಟು ವೇದಗಳನ್ನು ಮತ್ತು ಸನಾತನಧರ್ಮವನ್ನು ಧಿಕ್ಕರಿಸತೊಡಗಿದರು. ಆಗ ಸರ್ವವೈದೀಕ ಧರ್ಮದವರೂ ಸೇರಿ ಜೈನರನ್ನು ಹಿಂದೂಸ್ಥಾನದಿಂದ ಓಡಿಸಿದರು. ಇದೇಗತಿಯು ಬೌದ್ಧಮತದವರಿಗೂ ವದಗಿತು. ಆದುದರಿಂದಲೆ ಈ ಎರಡು ಜನಾಂಗದವರು ಹಿಂದೂದೇಶದಲ್ಲಿ ಅತಿವಿರಳವಾಗಿರುತ್ತಾರೆ. ಮಹಾಧಾಷ್ಟ್ರದವರು ಜೈನದಮೇಲೆ ಒಂದು ಗಾದೆಯನ್ನುಕೂಡ ಹೇಳುತ್ತಾರೆ.

" ಸರ್ಪಸೋಡಾವೆ ಜೈನಿಮಾರಾವೆ "

ಅರ್ಥ:—ಸರ್ಪವನ್ನೂ ಮತ್ತು ಜೈನನನ್ನೂ ಕಂಡರೆ ಸರ್ಪವನ್ನು ಬಿಟ್ಟು ಜೈನನನ್ನು ಕೊಲ್ಲು.

ಇಂಥಾ ವೈರತ್ವವು ವೈದೀಕಧರ್ಮದವರಿಗೂ ಮತ್ತು ಜೈನರಿಗೂ ಉಂಟು. ಪವಿತ್ರವಾದ ವೇದಕಟ್ಟಳೆಗಳನ್ನು ನಿಂದಿಸಿದುದರ ಫಲವೇ ಇದಾಗಿದೆ. ತಮ್ಮ ಧರ್ಮ ರಹಸ್ಯವನ್ನೆ ತಾವು ತಿಳಿಯದೆ ಇತರ ಧರ್ಮಗಳನ್ನು ನಿಂದಿಸುವುದು ಬಹುಪಾಪವು. " ಅಹಿಂಸೋಪರಮಧರ್ಮ " ಎಂದರೆ ಅನ್ಯಾಯತಃ ಒಬ್ಬನ ಮನೋಶಾಂತತೆಯನ್ನು ತಪ್ಪಿಸುವುದು. ಮನಸ್ಸನ್ನು ನೋಯಿಸುವುದಕ್ಕಿಂತಲೂ ಹೆಚ್ಚಾದ ಪಾಪವು ಯಾವುದೂ ಇಲ್ಲ. ಮತ್ತು ಚಿತ್ತ ಶಾಂತತೆಯನ್ನುಂಟುಮಾಡುವುದರಷ್ಟು ಪುಣ್ಯವೂ ಇಲ್ಲ. ಇದನ್ನು ತಿಳಿಯದೆ ಇತರರ ಧರ್ಮಗಳನ್ನು ನಿಂದಿಸಿ ಮನಸ್ಸನ್ನು ನೋಯಿಸುತ್ತಾರೆ. ಇದೇ ರಹಸ್ಯವು ಕುರಾನಿನಿಂದಲೂ ಮತ್ತು ಹಜರತ್ ಮಹಮ್ಮದ್ ಪೈಗಂಬರರ ಬೋಧನೆಗಳಿಂದಲೂ ಸಂಪೂರ್ಣವಾಗಿ ಹೊರಪಟ್ಟಿದೆ. ಹೀಗೆ ಎಲ್ಲಾ ಧರ್ಮರಹಸ್ಯಗಳನ್ನೂ ಹೊಂದಿ ಜಗತ್ತಿಗೆ ಬೀಜಪ್ರಾಯರಾದ " ಬ್ರಹ್ಮಾಕೃತಶಿವಸಹಸ್ರನಾಮ ಸು | ಮೃತ್ಯುಂಜಯ ಸೂಕ್ಷ್ಮತನುರ್ಜಗದ್ವಾಪಿ ಜಗದ್ಗುರು " ಎಂಬ ಬಿರುದನ್ನು ಪಡೆದ ಹಜರತ್ ಮಹಮ್ಮದ್ ಪೈಗಂಬರರೆ ಜಗತ್ತಿನ ಧರ್ಮಗಳಿಗೂ ಅಧಿಕಾರಿಯಾಗಿರುತ್ತಾರೆ.

---

## ಹದಿನೆಂಟನೆಯ ಪ್ರಮಾಣವು.

ಪುರಾತನರಾದ ಸರ್ವ ಕಾರ್ಯ ಮತ್ತು ಕಾರಣಗುರುಗಳೂ ಪುನಃ
ಈತನ ಸೇವೆಗಾಗಿಯೆ ಶರೀರಧಾರಣವನ್ನು ಮಾಡಿ ಈತನ
ಅನುಜ್ಞೆಯಂತೆಯೆ ನಡೆದಿರಬೇಕು.

ಈ ಪ್ರಮಾಣದಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಹೊರತು ಮತ್ತಾರೂ ಜಯಶೀಲರಾಗಿಲ್ಲ ಮತ್ತು ಮುಂದೆ ಆಗುವುದೂ ಇಲ್ಲ. ಯಾವ ಪ್ರಕಾರ ಬ್ರಹ್ಮಾಂಡವು ಮನುಷ್ಯನಿಂದಲೆ ಹುಟ್ಟಿ ಪುನಃ ಮನುಷ್ಯನಲ್ಲಿ

ನೆಲಸಿ ಮನುಷ್ಯನಲ್ಲಿಯೇ ಲೀನವಾಗುತ್ತದೆಯೊ, ಅದರಂತೆಯೆ ಹಿಂದೆ ಸಮಸ್ತ ಅವತಾರಿಗಳೂ ಹಜರತ್ ಮಹಮ್ಮದರ ಸೇವೆಗಾಗಿಯೆ ಅವರ ಸ್ವರೂಪದಿಂ ದಲೆ ಹುಟ್ಟಿದ್ದರು. ಅವರ ನಂತರವೂ ಅವರ ಸೇವೆಗಾಗಿಯೆ ಅವರ ಧರ್ಮೋ ದ್ಧಾರಕ್ಕಾಗಿಯೆ ಶರೀರವನ್ನು ಧರಿಸಿದರು ಮತ್ತೂ ಮುಂದೆ ಧರಿಸುವರು. ಜಗದ್ಗುರುಗಳಾದ ಹಜರತ್ ಮಹಮ್ಮದ್ ಪೈಗಂಬರರು ಅವತರಿಸಿ ಇಲ್ಲಿಗೆ ಹದಿಮೂರುನೂರು ವರ್ಷಗಳವೆರೆಲೆಯಾದರೂ, ಇದುವರೆಗೂ ಬಂದ ಅವ ತಾರಿಗಳು ಇವರನ್ನೆ ನಂಬಿ ಇವರ ಸೇವೆಯನ್ನೆ ಮಾಡಿರುತ್ತಾರೆ. ಇವರನ್ನು ನಂಬದೆ ದೈವಸಾನ್ನಿಧ್ಯವನ್ನು ಯಾರೂ ಹೊಂದಿಲ್ಲ. ಮತ್ತು ಹಜರತ್ ಮಹಮ್ಮದ್ ಪೈಗಂಬರರ ಭಕ್ತರಾಗದವರು ಇದುವರೆಗೂ ಯಾರೂ ಅವತಾರಿ ಗೆಳಾಗಿ ಪರಿಣಮಿಸಿಲ್ಲಾ. ಇದಕ್ಕೆ ಇತಿಹಾಸವೇ ಸಾಕ್ಷಿಯಾಗಿರುತ್ತದೆ. ಇದೂವರೆಗೂ ಹಜರತ್ ಮಹಮ್ಮದರ ನಂತರ ಬಂದಿರುವ ಸರ್ವ ಅವತಾರಿಗ ಳನ್ನು ಎಂದರೆ ಕಾರ್ಯ ಮತ್ತು ಕಾರಣ ಗುರುಗಳನ್ನು ಮುಂಡೆ ವಿಶದವಾಗಿ ತಿಳಿಸಲಾಗುತ್ತೆ.

---

## ಜಗದ್ಗುರುಗಳ ನಂತರ ಅವತರಿಸಿದ ಕಾರ್ಯ ಕಾರಣಗುರುಗಳು

---

### ಹಿಜಿರಿ ಮೊದಲನೆ ಶತಮಾನದಲ್ಲಿ.

೧. ಹಜರತ್ ಉಮ್ಮರ್
ಬಿಕ್ ಅಬ್ದುಲ್ ಅಜೀಜ್.

### ಎರಡನೆ ಶತಮಾನದಲ್ಲಿ.

೧. ಹಜರತ್ ಇದ್ರೀಸ್ ಷಾಪಿ.

### ಮೂರನೆ ಶತಮಾನದಲ್ಲಿ.

೧. ಖಾಜಿಯೆ ಅಹಮದ್
೨. ಶ್ರೀ ಶಂಕರಾಚಾರ್ಯರು.

ಶ್ರೀ ಶಂಕರಾಚಾರ್ಯರು ಕ್ರಿಸ್ತ ಶಕ ೭೮೮ ರಲ್ಲಿ ಮಲಬಾರಿನ ಕಲಡಿ ಎಂಬ ಗ್ರಾಮದಲ್ಲಿ ಜನ್ಮಗ್ರಹಣ ಮಾಡಿದರು. ಇವರು ಅಲ್ಲಿಯೆ ಬೆಳದು

ವಿದ್ಯಾವಂತರಾಗಿ ಹಜರತ್ ಮಹಮ್ಮದರನ್ನು ನಂಬಿ ದೈವಸಾನ್ನಿಧ್ಯವನ್ನು ಹೊಂದಿ ಗುರುಗಳಾಗಿ ಪರಿಣಮಿಸಿ ಧರ್ಮವನ್ನು ಸ್ಥಾಪಿಸಿದರು. ಇದಕ್ಕೆ ಸಾಕ್ಷಿಯಾಗಿ ಇವರ ಮಠವಾದ ಶೃಂಗೇರಿಯಲ್ಲಿ ಹಜರತ್ ಮಹಮ್ಮದರ ಮೂಲಮಂತ್ರವು ಈಗಲೂ ಇದೆ.

## ನಾಲ್ಕನೆ ಶತಮಾನದಲ್ಲಿ

೧. ಅಬೂಬಕರ್ ಬಾಕೆಲಾಲಿ

೨. ದತ್ತಾತ್ರೇಯರು (ದಾದಾಹಯಾತ್ ಖಲಂದರ್)

## ಐದನೆ ಶತಮಾನದಲ್ಲಿ

೧ ಅಬೂಹಾಮಿದ್ ಗೆಜಾಲಿ

೨. ಶ್ರೀ ಕಲ್ಯಾಣಬಸವೇಶ್ವರರು.

೩. ಶ್ರೀ ಚಿಕ್ಕಚನ್ನಬಸವೇಶ್ವರರು.

ಇದರ ಹೊರತು ಬೇರೆಬೇರೆ ಸ್ಥಳಗಳಲ್ಲಿ ಅನೇಕ ಮಹನೀಯರು ಅವತರಿಸಿದರು. ಶ್ರೀ ಬಸವೇಶ್ವರರೂ ಮತ್ತು ಚಿಕ್ಕ ಚನ್ನಬಸವೇಶ್ವರರೂ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಿ ಅಲ್ಲಮಾ ಪ್ರಭುಗಳಿಂದ ದೀಕ್ಷೆಯನ್ನು ಪಡೆದು ದೈವಸಾನ್ನಿಧ್ಯವನ್ನು ಹೊಂದಿ ಗುರುಗಳಾಗಿ ಪರಿಣಮಿಸಿ ಲಿಂಗಾಯಿತಮತವನ್ನು (ಇಸ್ಲಾಮ್) ಉದ್ಧರಿಸಿ ಧರ್ಮವನ್ನು ಸ್ಥಾಪಿಸಿದರು. ಇದಕ್ಕೆ ಅನೇಕ ಗ್ರಂಥಗಳು ಸಾಕ್ಷಿಯಾಗಿವೆ.

## ಆರನೆ ಶತಮಾನದಲ್ಲಿ

೧. ಹಜರತ್ ಅಬ್ದುಲ್ ಖಾದರ್ ಜೀಲಾನಿಯವರು.

## ಏಳನೆ ಶತಮಾನದಲ್ಲಿ

೧. ಹಜರತ್ ಮೈನುದ್ದೀನ ಚಿಷ್ತಿಯವರು.

೨. ವರವಿ ಮೌನೇಶ್ವರರು.

ವರವಿ ಮೌನೇಶ್ವರರೂಳಕೊಡ ಹಜರತ್ ಮಹಮ್ಮದರ ಮೂಲಮಂತ್ರವಾದ "ಲಾಯಿಲಾಹ ಇಲ್ಲಲ್ಲಾಹು ಮಹಮ್ಮದುರ್ ರಸೂಲುಲ್ಲಾ" ಎಂಬು

ದರ ರಹಸ್ಯವನ್ನು ತಿಳಿದು ಶಿವಸಾಯುಜ್ಯವನ್ನು ಪಡೆದು ಧರ್ಮವನ್ನು ಸ್ಥಾಪಿಸಿದರು. ಇವರ ಮಠಗಳು ಈಗಲೂ ಅನೇಕ ಕಡೆಗಳಲ್ಲಿವೆ.

## ಎಂಟನೆ ಶತಮಾನದಲ್ಲಿ

೧. ಹಜರತ್ ಹಾಫೀಜ್

೨. ಬಾಬಾನಾನಕ್ ಷಹರು.

ಬಾಬಾನಾನಕ್ ಷಹರು ಪ್ರಸಿದ್ಧವಾದ ಸಿಕ್ಕ ಮತ ಸ್ಥಾಪಕರು. ಇವರು ಪ್ರಥಮದಲ್ಲಿ ಜಗದ್ಗುರುಗಳಾದ ಹಜರತ್ ಮಹಮ್ಮದರನ್ನು ನಂಬಿ ದೀಕ್ಷೆಯನ್ನು ಪಡೆದು ಗುರುತ್ವವನ್ನು ವಹಿಸಿದರು. ಮತ್ತು ಅವರು ಮಕ್ಕಾದ ಯಾತ್ರೆಯನ್ನೂ ಕೂಡ ಮಾಡಿದರು. ಆದರೆ ಅವರ ಅನುಯಾಯಿಗಳು ಅವರ ಬೋಧ ರಹಸ್ಯವನ್ನು ತಿಳಿಯದೆ ದಾರಿತಪ್ಪಿರುತ್ತಾರೆ. ಅವರ ಆದ್ಯಂತ ವಿಚಾರವೂ "ಜನ್ಮಸಾಕಿ" ಎಂಬ ಅವರ ಪಂಜಾಬಿಭಾಷೆಯಲ್ಲಿನ ಗ್ರಂಥದಿಂದ ತಿಳಿಯಬರುತ್ತದೆ.

## ಒಂಭತ್ತನೆ ಶತಮಾನದಲ್ಲಿ

೧. ಹಜರತ್ ಅಬ್ದುರ್ರಹಮಾ ಬಿ ಕಮಾಲಷಾಫಿ.

೨. ಬ್ರಹ್ಮಾನಂದೈಕ್ಯರು (ಅಮಿನುದ್ದೀನ್ ಆಲಾ).

ಬ್ರಹ್ಮಾನಂದೈಕ್ಯರು ಬಿಜಾಪುರದ ವಾಸಿಗಳು. ಇವರ ಮಠವು ಬಿಜಾಪುರದಲ್ಲಿಯೆ ಇರುತ್ತದೆ. ಇವರ ಅನುಯಾಯಿಗಳಾದ ಶ್ರೀ ಪಕೀರಸ್ವಾಮಿಗಳು ಸಿರಹಟ್ಟಯಲ್ಲಿ ಪೀಠವನ್ನು ನಿರ್ಮಿಸಿಕೊಂಡು ಇರುತ್ತಾರೆ. ಇವರೆಲ್ಲರೂ ಹಜರತ್ ಮಹಮ್ಮದರ ಅನುಯಾಯಿಗಳಾಗಿಯೆ ಧರ್ಮವನ್ನು ಸ್ಥಾಪಿಸಿದರು.

## ಹತ್ತನೆ ಶತಮಾನದಲ್ಲಿ

೧. ಹಜರತ್ ಮುಲ್ಲಾ ಅಲಿಖಾರಿ.

## ಹನ್ನೊಂದನೆ ಶತಮಾನದಲ್ಲಿ

೧. ಹಜರತ್ ಷೇಕ್ ಅಹಮ್ಮದ್ ಅಲಿಫಾರೂಬಿ.

೨. ಭಗೀರಥ ಅವತಾರ (ಅಲಂಗೀರ್ ಬಾದಷಹ)

ಹಿಂದಿನ ಪುರಾತನರ ಕಾಲಜ್ಞಾನಗಳಿಗನುಸಾರವಾಗಿ ಅವರಂಗ್‌ಜೇಬ್ ಬಾದಷಹರವರು ಭಗೀರಥಾವತಾರವನ್ನೆತ್ತಿ ಪಾಪವನ್ನು ತಗ್ಗಿಸಿ ಧರ್ಮವನ್ನು ಸ್ಥಾಪಿಸಿದರು. ಇದರಸಲುವಾಗಿ ಹಿಂದಿನ ಭವಿಷ್ಯಗಳು ಬಹಳವಾಗಿ ತುಂಬಿರುತ್ತವೆ.

---

## ಹನ್ನೆರಡನೆ ಶತಮಾನದಲ್ಲಿ

೧. ಹಜರತ್‌ಷಹ ವಲಿಯುಲ್ಲಾ ಅಹಮ್ಮದ್.

೨. ಹಜರತ್ ಅಬ್ದುಲ್‌ವಹಾಬ್ ನಜದಿ.

---

## ಹದಿಮೂರನೆಶತಮಾನದಲ್ಲಿ

೧. ಹಜರತ್ ಸೈಯ್ಯದ ಹಮದ್ ಬರೇಲವಿ.

---

## ಈಗ ನಡೆಯುವ ಶತಮಾನಕ್ಕೆ

೧. ಹಜರತ್ ಮಿರಜಾ ಗುಲಾಮಿ ಅಹಮ್ಮದ್ ರುದ್ರ ಗೋಪಾಲರು.

ಈಗಲಾದರೊ ಪುನಃ ಹಜರತ್ ಮಹಮ್ಮದ್ ಪೈಗಂಬರರ ಅನುಯಾಯಿಗಳಾಗಿಯೆ ಶ್ರೀಚನ್ನಬಸವೇಶ್ವರರೂ ಮತ್ತು ವೀರವಸಂತರಾಯರೂಕೂಡ ಪ್ರಸನ್ನರಾಗಿರುತ್ತಾರೆ. ಮತ್ತು ಪುರಾತನ ಮಹನೀಯರೆಲ್ಲರೂ ಈಕಾಲದಲ್ಲಿ ಹಜರತ್ ಮಹಮ್ಮದರ ಅನುಯಾಯಿಗಳಾಗಿಯೆ ಪ್ರಸನ್ನರಾಗಿ ಅಲ್ಲಲ್ಲಿ ಧರ್ಮಸ್ಥಾಪನ ಮಾಡುತ್ತಿದ್ದಾರೆ. ಹೀಗೆ ಇದುವರೆಗೂ ಯಾವ ಅವತಾರಿಗಳೂ ಹಜರತ್ ಮಹಮ್ಮದರ ಭಕ್ತರಾಗದೆ ಯಾವ ಧರ್ಮದಲ್ಲಿಯೂ ಪ್ರಸನ್ನವಾಗಿಲ್ಲ. ಕಾರಣವೇನಂದರೆ:—ಹಜರತ್ ಮಹಮ್ಮದರು ಗುರುತ್ವಕ್ಕೆ ಮುದ್ರೆಯಾದ ಜಗದ್ಗುರುವಾಗಿ ಪರಿಣಮಿಸಿದರು. ಆದ ಪ್ರಯುಕ್ತ ಎಲ್ಲಾ ಅವತಾರಿಗಳೂ ಇವರ ಭಕ್ತರ ರೂಪನ್ನೇ ಧರಿಸಬೇಕಾಗಿರುವುದು. ಪುರಾತನ ಅವತಾರಿಗಳಿಗೆ ಈ ಪದವಿಯು ಇಲ್ಲದ್ದರಿಂದಲೆ ಅವರು ಜಗದ್ಗುರುಗಳಾಗಿ ಪರಿಣಮಿಸಲಾರರು. ಈ ಪದವಿಗೆ ಹಜರತ್ ಮಹಮ್ಮದರೆ ಅರ್ಹರಾದರು.

## ಹತ್ತೊಂಭತ್ತನೆಯ ಪ್ರಮಾಣವು:

"ಬ್ರಹ್ಮಾಕೃತ ಶಿವಸಹಸ್ರನಾಮ ಸು|
ಮೃತ್ಯುಂಜಯ ಸ್ಸೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು||"

ಜಗದ್ಗುರುವಿನ ಪ್ರಸನ್ನತೆಯನ್ನು ಎಂದರೆ ಪ್ರತ್ಯಕ್ಷವಾಗುವುದನ್ನು ಹಿಂದಿನ ಸರ್ವ ಅವತಾರಿಗಳೂ ಸರ್ವಸೂಚನೆಗಳೊಂದಿಗೆ ತಿಳಿಸಿರಬೇಕು.

ಈ ಪ್ರಮಾಣದ ಸಾಧನೆಗೆ ಹಜರತ್ ಮಹಮ್ಮದ್ ಪೈಗಂಬರರ ಜೀವ ಮಾನದ ಹೊರತು ಮತ್ತಾವ ಅವತಾರಿಗಳ ಜೀವಮಾನಗಳೂ ತಕ್ಕ ಸಲಕರಣೆ ಗಳನ್ನೊ ವದಗಿಸಲಾರವು. ಹಿಂದೆ ಮಿತಿಯಿಲ್ಲದಷ್ಟು ಜನ ಅವತಾರಿಗಳು ಪ್ರತ್ಯಕ್ಷವಾಗಿ ಧರ್ಮ ಸಂರಕ್ಷಣೆಯನ್ನು ಮಾಡಿರುತ್ತಾರೆ. ತತ್ಫಲದಲ್ಲಿ ಯಾದರೋ ಕೆಲವರ ಅನುಯಾಯಿಗಳು ಉಳಿದಿರುತ್ತಾರೆ. ಮತ್ತು ಕೆಲವರ ಅನುಯಾಯಿಗಳು ವಿನಾಶವನ್ನು ಹೊಂದಿರುತ್ತಾರೆ. ಈಗ ಉಳಿದಿರುವವರಲ್ಲಿ ಏಸುಕ್ರಿಸ್ತರು, ಯಹೂದ್ಯರು, ಬೌದ್ಧರು, ಪಾರಸಿಯರು, ಶೈವರು, ವೈಷ್ಣವರು, ಜೈನರೇ ಮುಂತಾದವರಾಗಿರುತ್ತಾರೆ. ಮೇಲಿನ ಮತಸ್ಥರಲ್ಲಿ ಇರುವ ಪುರಾತನ ಗ್ರಂಥಗಳೆಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಪ್ರಸನ್ನತೆ ಯು ಅವಿಚ್ಛಿನ್ನವಾಗಿ ಕಂಡುಬರುತ್ತದೆ. ಇದೇ ವಿಚಾರವು ಬರಕಾರೋಕ್ತ ವಾದ ಕುರಾನಿನಿಂದ ದೃಢೀಕರಿಸಲ್ಪಟ್ಟಿರುತ್ತದೆ.

ವ ಇಜ್ ಅಖ್‌ಜಲ್ಲಾಹು ಮೀಸಾಕನ್
ನಬೀಯೀನ ಲಮಾ ಆತೈತೊಕುಂ ಮಿನ್
ಕಿತಾಬಿಂವ ಹಿಕ್‌ಮತಿನ್ ಸುಮ್ಮಾಜಾರಸೂಲುನ್
ಮುಸದ್ದೆ ಕುಲ್‌ಲಿಮಾ ಮಾಕುಂಲತೋಮಿ
ನುನ್ನಬಿಹಿ ವಲತನ್ ಸುರುನ್ನಹು. (ಅ. ೩, ಸಂ ೯.)

ಅರ್ಥ:—ಅಲ್ಲಾಹನು ಸರ್ವ ಅವತಾರಿಗಳಿಂದಲೂ ವಚನವನ್ನು ತೆಗೆದು ಕೊಂಡಿರುವುದೇನೆಂದರೆ, 'ಓ! ನನ್ನ ಪ್ರವಾದಿಗಳಿ! ನಾನು ನಿಮಗೆ

ಗ್ರಂಥಗಳನ್ನೂ ಮತ್ತು ಅವುಗಳ ವಿಚಾರವನ್ನೂ ಕೊಟ್ಟಿರುತ್ತೇನೆ. ಮತ್ತು ನಿಮ್ಮಗಳೆಲ್ಲರ ಕಡೆ (ನಿಮ್ಮ ಅನುಯಾಯಿಗಳ ಕಡೆ) ಒಬ್ಬ ಅವತಾರಿಯು ಬರುವವನಿದ್ದಾನೆ. ಮತ್ತು ಆತನು ಬಂದು ನಿಮ್ಮ ಗ್ರಂಥಗಳ ಸತ್ಯವನ್ನು ಧೃಡೀಕರಿಸುತ್ತಾನೆ. ಆತನನ್ನು ನೀವುಗಳೆಲ್ಲರೂ (ಅನುಯಾಯಿಗಳು) ನಂಬಿ (ಆತನಿಗೆ) ಒತ್ತಾಸೆಯಾಗಿ ಸೇವೆಯನ್ನು ಮಾಡಬೇಕು.

ಮೇಲಿನ ದೇವೋಕ್ತಿಗಳಲ್ಲಿ ಅವತಾರಿಗಳಿಂದ ಮಾತ್ರ ವಚನ ತೆಗೆದು ಕೊಂಡಿರುವಹಾಗೆ ತಿಳಿಯಬರುತ್ತದೆ. ಇದಕ್ಕೆ ಕಾರಣ ಉಂಟು. ಹಿಂದಿನ ಸರ್ವ ಅವತಾರಿಗಳೂ ಪುನಃ ಹಜರತ್ ಮಹಮ್ಮದ್ ಪೈಗಂಬರರ ಅನುಯಾಯಿಗಳಲ್ಲಿ ಪ್ರಸನ್ನರಾಗಬೇಕಾಗಿರುವುದು. ಅವತಾರಿಗಳೆಲ್ಲರೂ ಇವರ ಅನುಯಾಯಿಗಳಾಗಿರುವುದರಿಂದ ಅವರ ಅನುಯಾಯಿಗಳೂ ಕೂಡ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಬೇಕೆಂದೇ ಅಭಿಪ್ರಾಯವು. ಇದಲ್ಲದೆ ಹಿಂದಿನ ಧರ್ಮಗ್ರಂಥಗಳಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಅಂತರಂಗ ಬಹಿರಂಗ ಕುರುಹುಗಳೂ, ಭೂಮ್ಯಂತರಿಕ್ಷಗಳ ಸಾಕ್ಷಿಗಳೂ ಮತ್ತು ಪ್ರಸನ್ನವಾಗುವ ಕಾಲವೂ ಸ್ಪಷ್ಟವಾಗಿ ವಿವರಿಸಲ್ಪಟ್ಟಿರುತ್ತವೆ. ಅವುಗಳೆಲ್ಲವನ್ನೂ ಮುಂದೆ ನಾವು ಕ್ರಮವಾಗಿ ವಿವರಿಸುತ್ತೇವೆ.

---

## ಸುಲೇಮಾನ ಪ್ರವಾದಿಯ ಗ್ರಂಥದಲ್ಲಿ.

ಪ್ರಖ್ಯಾತಿಯನ್ನು ಹೊಂದಿದ ಸುಲೇಮಾನ್ ಪೈಗಂಬರರು ಸ್ಪಷ್ಟವಾಗಿ ತಿಳಿಸಿರುವುದೇನೆಂದರೆ, 'ನನ್ನ ಪ್ರಿಯನು ಕೋಮಲವಾದ ಕೆಂಪುವರ್ಣದವನಿರುತ್ತಾನೆ. ಆತನು ಹತ್ತು ಸಾವಿರ ಜನಗಳ ಗುಂಪಿನಲ್ಲಿ ಧ್ವಜದಂತೆ ಬರುತ್ತಾನೆ. ಆತನ ಶಿರವು ಕನಕಮಯಸ್ವರೂಪದಿಂದಿರುವುದು. ಆತನ ಮುಂಗುರುಳುಗಳು ಅಚ್ಚಗಪ್ಪಿನ ಹೊಳಪಿನಿಂದ ಪ್ರಕಾಶಿಸುವವು. ಆತನ ಕಣ್ಣುಗಳು ಅಭ್ಯಂಜನ ಮಾಡಿ ಕುಳಿತ ಪಾರಿವಾಳದ ಕಣ್ಣುಗಳಂತೆ ಕೆಂಪಾಗಿರುವವು. ಆತನ ಕೆನ್ನೆಗಳು ಕೆಂದಾವರೆಯ ಸೊಬಗನ್ನು ಹೋಲುವವು. ಆತನ ಬಾಹುಗಳು ವಜ್ರವನ್ನು ಕೆತ್ತಿಸಿದ ಭಂಗಾರದ ಕಂಭದಂತಿರುವವು. ಆತನ ಉದರವು ಆನೆಯ ಹಲ್ಲುಗಳಂತೆ ಸ್ವೇತವರ್ಣವಾಗಿರುವುದು. ಆತನ ಕಾಲುಗಳು ಭಂಗಾರದ ಚೌಕಟ್ಟಿನ ಮೇಲೆ ನಿಲ್ಲಿಸಿರುವ ಮಡಕತದ ಹೊಳಪಿನಿಂದ ಕೂಡಿ

ರುವ ಕಂಭಗಳಂತಿವೆ. ಆತನು ಸರುವೆಮುದಂತೆ ನೇರವಾಗಿರುವನು. ಆತನ ಮುಖವು ರತ್ನಖಚಿತವಾದ ಕನಕಪುತ್ಥಳಿಯ ವದನವನ್ನು ಹೋಲುವುದು. ಈತನೇ ಮಹಾತ್ಮನಾದ ಮಹಮ್ಮದನು. ಎಲ್ಯೆ ! ಜೆರೂಸೆಲಂನ ಯುವತಿಯರೇ, ಈತನೇ ನನ್ನ ಪ್ರೀತಿಗೆ ಪಾತ್ರನಾದ ಪ್ರಿಯನು.

ಮೇಲಿನ ಭವಿಷ್ಯೋಕ್ತಿಯು ಗಜಲುಲ್ ಗಜಲಾತ್ ಎಂಬ ಸುಲೇಮಾನರ ಗ್ರಂಥದಲ್ಲಿ ವಿವರಿಸಲ್ಪಟ್ಟಿರುತ್ತದೆ. ಹಜರತ್ ಮಹಮ್ಮದ್ ಪೈಗಂಬರರು ಪ್ರಸನ್ನವಾಗುವ ನೂರಾರು ವರ್ಷಗಳ ಹಿಂದೆಯೇ ಇದು ಹೇಳಲ್ಪಟ್ಟಿರುತ್ತದೆ. ಇವರ ಚಿನ್ಹೆಗಳು ಇದರಲ್ಲಿ ಸ್ಪಷ್ಟವಾಗಿ ಕಾಣಬರುತ್ತವೆ. ಇವರು ಮಕ್ಕಾದ ದಂಡೆಯಾತ್ರೆಗೆ ಹತ್ತುಸಾವಿರ ಜನ ಶಿಷ್ಯರೊಂದಿಗೆ ಬಂದ ವಿಚಾರವೂ ಮತ್ತು ಇವರ ಹೆಸರೂ ಕೂಡ "ಮಹಮ್ಮದ್" ಎಂದು ಸಂಪೂರ್ಣವಾಗಿ ವಿವರಿಸಲ್ಪಟ್ಟಿರುತ್ತದೆ. ಮತ್ತೂ ಸುಲೇಮಾನ್ ಪೈಗಂಬರರು ತಮ್ಮ ಅನುಯಾಯಿಗಳಿಗೆ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಬೇಕೆಂದು ಆಜ್ಞೆಮಾಡಿರುತ್ತಾರೆ.

---

## ಡೇನಿಯಲ್ ಪ್ರವಾದಿಯ ಗ್ರಂಥದಲ್ಲಿ.

ದಾನಿಯಾಲ್ ಪೈಗಂಬರರು ಹೇಳಿರುತ್ತಾರೆ—"ನನಗೆ ಆತನು (ಪರಮಾತ್ಮನು) ತಿಳಿಸಿದ್ದಾನೆ. ಮತ್ತು ಆತನು ನನ್ನೊಂದಿಗೆ ಸಂಭಾಷಿಸುತ್ತಾನೆ. ಆತನು ಹೇಳಿದ್ದೇನಂದರೆ, " ಓ ! ದಾನಿಯಾಲನೆ ! ನಾನು ನಿನಗೆ ಪ್ರಸನ್ನನಾಗಲು ಕಾರಣವೇನಂದರೆ, ನಾನು ನಿನಗೆ ಜ್ಞಾನವನ್ನೂ ಮತ್ತು ಸನ್ಮಾರ್ಗಗಳನ್ನೂ ಬೋಧಿಸಬೇಕಾಗಿದೆ. ನೀನು ಹೇಗೆ ಕ್ರಮವಾಗಿ ಅಭಿವೃದ್ಧಿಗೆ ಬಂದೆಯೋ ಹಾಗೆಯೇ ನಾನು ನಿನಗೆ ಪ್ರಸನ್ನನಾಗುತ್ತಾ ಬಂದೆನು. ನೀನು ನೆನಪಿನಲ್ಲಿಡಬೇಕಾದುದು ಎಪ್ಪತ್ತು ವಾರಗಳು. ಅವು ನಿನ್ನ ಮತ್ತು ನಿನ್ನ ಜನಾಂಗಕ್ಕೋಸ್ಕರ ನೇಮಿಸಲ್ಪಟ್ಟವೆ. ಅಷ್ಟರಲ್ಲಿ ಚೇಷ್ಟೆಯು ಮುಗಿಯುವುದು ಮತ್ತು ಪಾಪವು ವಿನಾಶವಾಗುವುದು. ದುಷ್ಟರು ಸಂಹರಿಸಲ್ಪಡುವರು. ಸತ್ಯವು ಶಾಶ್ವತವಾಗುವುದು. (ವಾ॥ ೨೩—೨೪.)

ಮೇಲಿನ ಉಕ್ತಿಗಳಲ್ಲಿ ಸ್ಪಷ್ಟವಾಗಿ ಹಜರತ್ ಮಹಮ್ಮದ್ ಪೈಗಂಬರರ

ಕಾಲವನ್ನು ಸೂಚಿಸಿರುತ್ತಾರೆ. ಧರ್ಮವು ಕ್ರಿ. ಶ. ೬೦ ರವರೆಗೂ ನಡೆಯಿತು. ಅಲ್ಲಿಂದ ದಾನಿಯಾಲ ಪೈಗಂಬರರ ಹೇಳಿಕೆಯಂತೆ ಎಪ್ಪತ್ತು ವಾರಗಳು ಎಂದರೆ ವಾರಕ್ಕೆ ಏಳು ವರ್ಷಗಳ ದೇವಮಾನದಿಂದ ನಾಲ್ಕುನೂರ ತೊಂಭತ್ತುವರ್ಷಗಳು ಪಾಪವು ಹೆಚ್ಚುವುದೆಂದು ತಿಳಿಯಬರುತ್ತದೆ. ನಂತರ ಧರ್ಮವು ಹರಡಬೇಕು. ಕ್ರಿ. ಶ. ೬೦ನೇ ಇಸವಿಯಿಂದ ನಾಲ್ಕು ನೂರ ತೊಂಭತ್ತುವರ್ಷಗಳು ಮುಗಿಯುವದರಲ್ಲಿ ಐದುನೂರ ಎಪ್ಪತ್ತು ವರ್ಷಗಳಾಗುತ್ತವೆ. ಇದರಂತೆಯೇ ಐದುನೂರ ಎಪ್ಪತ್ತನೆಯ ಇಸವಿಯ ನಂತರವೇ ಹಜರತ್ ಮಹಮ್ಮದರ ಜನನವಾಯಿತು. ಇವರ ಪ್ರಸನ್ನತೆಯಿಂದಲೇ ಧರ್ಮವು ಹರಡಬೇಕೆಂದು ಸೂಚನೆಯಿದ್ದಿತು. ಅದೇರೀತಿಯಲ್ಲಿ ಆ ಸೂಚನೆಯು ಸಾದೃಶ್ಯವಾಯಿತು.

---

## ಪರ್ಷಿಯಾದೇಶದ ಒಬ್ಬ ಮಹಾತ್ಮರ ಗ್ರಂಥದಲ್ಲಿ.

ಪಾರ್ಸಿಸ್ಥಾನದಲ್ಲಿ ಸುಮಾರು ನಾಲ್ಕುನೂರ ಎಂಭತ್ತೈದನೇ ಇಸವಿಯಲ್ಲಿ "ಗತಾಸ್ಪ" ಎಂಬ ರಾಜನು ಆಳುತ್ತಿದ್ದನು. ಅದೇ ಕಾಲದಲ್ಲಿ "ಜಾಮಾಸ್ಪಿ" ಎಂಬ ಒಬ್ಬ ಮಹಾತ್ಮರು ಒಂದು ಗ್ರಂಥವನ್ನು ಬರೆದಿರುತ್ತಾರೆ. ಅದರಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಅವತರಣಿಕೆಯನ್ನು ಸ್ಪಷ್ಟವಾಗಿ ವಿವರಿಸಿರುತ್ತಾರೆ. ಅದು ಹೇಗೆಂದರೆ, ಅರಬ್ಬಿದೇಶದಲ್ಲಿ ಒಬ್ಬ ಮಹಾಪುರುಷನು ಹುಟ್ಟುವನು. ಆತನು ಬಹು ಸುಂದರನು. ಸತ್ಯವನ್ನೇ ನುಡಿಯುವನು. ಸಾಧಾರಣ ಉದ್ದದವನು. ಕೆಂಬಣ್ಣವುಳ್ಳವನು. ಆತನು ಪ್ರಪಂಚಕ್ಕೆಲ್ಲಾ ಪ್ರವಾದಿಯಾಗಿ ಉಪದೇಶಮಾಡುವನು. ಆತನ ನಕ್ಷತ್ರದ ಬಲ್ಮೆಯನ್ನು ನೋಡುವುದರಿಂದ ಆತನು ಸ್ತ್ರೀಯರಲ್ಲಿ ಬಹುದಯೆಯುಳ್ಳವನೆಂದು ತಿಳಿಯಬಹುದು. ಆತನಿಗೆ ಸ್ತ್ರೀಸಂತಾನ ಉಂಟಾಗುವುದು. ದಿನೇ ದಿನೇ ಆತನ ಧರ್ಮವು ಹಬ್ಬುತ್ತಲೇ ಇರುವುದು. ಆತನ ಅನುಯಾಯಿಗಳಲ್ಲಿ ಹದಿನಾಲ್ಕು ಜನರು ಧರ್ಮರಾಜರಾಗುವರು. ಆತನು ಮುಂಡಾಸನ್ನು ಧರಿಸುವನು. ಅಗ್ನಿಪೂಜಕರ ಹೋಮಗೊಂಡಗಳೆಲ್ಲವನ್ನೂ ನಾಶಪಡಿಸುತ್ತಾನೆ. ಆತನು ಪಾರ್ಸೀಸ್ಥಾನದ ಈಗಿನ ರೀತಿನೀತಿಗಳೆಲ್ಲವನ್ನೂ ನಿರ್ಮೂಲನಮಾಡುವನು. ಯಹೂದ್ಯರೂ ಮತ್ತು ಕ್ರೈಸ್ತರೂ ಆತನ ಧರ್ಮದವರ

ಸರಿಬಾರರು. ಆತನ ಧರ್ಮಪ್ರಚಾರವು ಮುವ್ವತ್ತೈದು ವರ್ಷಗಳವರೆಗೂ ಹೆಚ್ಚುತ್ತಿರುವುದು. ಆತನು ಜಗತ್ತಿಗೆ ಸೂರ್ಯನಂತೆ ಪ್ರಜ್ವಲಿಸುವನು. ಆತನು ಪ್ರಸನ್ನವಾಗುವ ಕಾಲದಲ್ಲಿ ರಾಜ್ಯಾಡಳಿತಗಳು ಸ್ತ್ರೀಯರ ಮತ್ತು ಹುಡುಗರ ಕೈಯ್ಯಲ್ಲಿರುವವು. ಅವುಗಳು ನಾಶವಾಗುವವು. ಒಂದುವೇಳೆ ಆತನ ಧರ್ಮವು ನಮಗೆ ಕೆಟ್ಟದ್ದಾಗಿ ತೋರಿದರೂ ಅದನ್ನು ಅಂಗೀಕರಿಸಲೇ ಬೇಕು. ಆ ಪ್ರವಾದಿಯು ಸ್ವರ್ಗಸ್ಥನಾದನಂತರ ಆತನ ವಂಶೀಕರಿಗೆ ವಿರೋಧಿಗಳಾದವರು ಪಟ್ಟಕ್ಕೆ ಬಂದು ವಿವಿಧವಾದ ಕಷ್ಟಗಳನ್ನು ಕೊಡುವರು. ಆತನ ಪುತ್ರಿಗೆ ಇಬ್ಬರು ಮಕ್ಕಳುಂಟಾಗುವರು. ಅವರಲ್ಲಿ ಒಬ್ಬನಿಗೆ ವಿಷವನ್ನು ಹಾಕಿ ಕೊಲ್ಲುವರು. ಮತ್ತೊಬ್ಬನು ನೈನವ (ಕರ್ಬಲ) ಪಟ್ಟಣದ ಮೈದಾನದಲ್ಲಿ ತನ್ನ ಸಹಾಯಕರಾದ ಎಪ್ಪತ್ತೆರಡು ಜನರೊಂದಿಗೆ ಕೊಲ್ಲಲ್ಪಡುವನು." ಸ್ವಲ್ಪವೂ ಈ ಭವಿಷೋಕ್ತಿಗೆ ವ್ಯತ್ಯಾಸವಿಲ್ಲದಂತೆ ನಡೆದಿರುತ್ತದೆ.

---

## "ಜಬ್ಬೂರ" ಗ್ರಂಥದಲ್ಲಿ ದಾವೂದ ಪ್ರವಾದಿಗಳಿಂದ ಭವಿಷ್ಯೋಕ್ತಿಗಳು.

ದಾವೂದ ಪೈಗಂಬರರ ಗ್ರಂಥವಾದ "ಜಬ್ಬೂರ"ನಲ್ಲಿ ಹಜರತ್ ಮಹಮ್ಮದ್ ಪೈಗೆಂಬರರ ಸಲುವಾಗಿ ಸರ್ವ ಕುರುಹುಗಳೂ ಎಂಭತ್ನಾಲ್ಕನೆ ಅಧ್ಯಾಯದಲ್ಲಿ ಹೇಳಲ್ಪಟ್ಟಿರುತ್ತವೆ. "ಓ! ಮಾರ್ಬಲವುಳ್ಳ ದೇವರೆ! ನಿನ್ನ ಸ್ಥಾನಗಳು ಬಹು ಆಕರ್ಷಣಶಕ್ತಿಯುಳ್ಳವುಗಳು. ನನ್ನ ಆತ್ಮವು ಆತನ ಪ್ರೀತಿಯಲ್ಲಿ ಲೀನವಾಗಿದೆ. ನನ್ನ ತನು, ಮನಗಳು ಮೃತ್ಯುಂಜಯನಾದ ಪರಮಾತ್ಮನ ಕಡೆ ಚಲಿಸುತ್ತವೆ. ಕಾಗೆ ಮತ್ತು ಕೋಗಿಲೆಗಳು ತಮ್ಮ ಮರಿಗಳು ಇದ್ದ ಸ್ಥಳದಲ್ಲಿಯೇ ಮನೆಯನ್ನು ಕಂಡವು. ಓ! ಪರಮಾತ್ಮನೆ! ನಿಮ್ಮ ಯಾತ್ರಾಸ್ಥಳದಲ್ಲಿ ಎಲ್ಲರೂ ಸೇರುವರು. ಓ! ಪ್ರಭುವೇ! ಮುಂಗಳಸ್ವರೂಪಿಗಳಾದವರು ನಿನ್ನ ಮನೆಯನ್ನು ಸೇರುವರು. ನಿನ್ನ ಅಂಶವುಳ್ಳವರೇ ಮುಂಗಳಸ್ವರೂಪಿಗಳು. ಅವರ ಮನಸ್ಸು ನಿಮ್ಮ ಆಜ್ಞೆಗಳಿಂದ ತುಂಬಿ ತುಳುಕಾಡುವುದು. ಅವರು ಮಕ್ಕಾ ಪ್ರಾಂತ್ಯದಲ್ಲಿ ಸಂಚರಿಸುವರು. ಅಲ್ಲಿ ಒಂದು ಭಾವಿಯನ್ನು ತೆಗೆಯುತ್ತಾರೆ. ಪೂರ್ವದಲ್ಲಿ ಅದು ಮಳೆಯ ಅತಿವೃಷ್ಟಿಯಿಂದ ತುಂಬಿದ್ದಿತು. ಅವರು ಗುಂಪು ಗುಂಪಾಗಿ ಹಬ್ಬುತ್ತಾರೆ. ಅವರು

ಪರಮಾತ್ಮನ ಮುಂದೆ ಹೈಹನ (ಹೀರಾಗುಡ್ಡ) ದಲ್ಲಿ ಬಂದು ಕುಳಿತುಕೊಳ್ಳುತ್ತಾರೆ." ಹಜರತ್ ಮಹಮ್ಮದ್ ಪೈಗಂಬರರ ಜೀವಮಾನದಲ್ಲಿ ಮೇಲ್ಕಿನ ಉಕ್ತಿಗಳೆಲ್ಲವೂ ಸಾದೃಶ್ಯವಾಗಿ ಧೃಢೀಕರಿಸಲ್ಪಟ್ಟವೆ.

---

## ಮೂಸಾ ಪೈಗಂಬರರ ಗ್ರಂಥವಾದ "ಖುರೂಜ" ದಲ್ಲಿ.

ಈ ಪುಸ್ತಕದ ಹದಿನೈದನೆಯ ಅಧ್ಯಾಯದ ಹದಿನೆಂಟನೆಯ ಸಂಧಿಯಲ್ಲಿ ಹೇಳಲ್ಪಟ್ಟಿರುವುದೇನೆಂದರೆ, "ಓ ! ಮೂಸೆಸ್, ನಾನು ಅವರಿಗೋಸ್ಕರ (ಯಹೂದ್ಯರಿಗೋಸ್ಕರ) ಅವರ ಅಣ್ಣತಮ್ಮಂದಿರಲ್ಲಿ ನಿನ್ನಂತಹ ಒಬ್ಬ ಪ್ರವಾದಿಯನ್ನು ಕಳುಹಿಸುತ್ತೇನೆ. ನಾನು ನನ್ನ ವಾಕ್ಯಗಳನ್ನು ಆತನಿಂದ ಹೊರಪಡಿಸುತ್ತೇನೆ. ನಾನು ಏನನ್ನು ಆತನಿಗೆ ಹೇಳುತ್ತೇನೆಯೋ ಅದೆಲ್ಲವನ್ನೂ ಆತನು ಅವರಿಗೆ ಹೇಳುವನು. ಯಾರು ಆತನಿಂದ ನನ್ನ ವಾಕ್ಯಗಳನ್ನು ಕೇಳುವುದಿಲ್ಲವೊ ಅಂಥಾವರ ಲೆಖ್ಖವನ್ನು ನಾನು ತೆಗೆದುಕೊಳ್ಳುವವನಿದ್ದೇನೆ. ಆದರೆ ಆ ಪ್ರವಾದಿಯು ನಾನು ಹೇಳಿದ ವಿಷಯವನ್ನು ತನ್ನ ಕಡೆಯಿಂದ ಹೇಳಿದರೂ ಅಥವ ಪೈಶಾಚನ ಬೋಧನೆಯಿಂದ ಹೇಳಿದರೂ ಆತನನ್ನು ಕೊಂದುಹಾಕುತ್ತೇನೆಂದು ತಿಳಿ." ಇದೇಪ್ರಕಾರ ಹಜರತ್ ಮಹಮ್ಮದ್ ಪೈಗಂಬರರು ಜಗತ್ತಿಗೆ ಪ್ರವಾದಿಗಳಾಗಿ ಪರಿಣಮಿಸಿದರು.

---

## ಅಬ್ರಾಹಾಮನ ಪತ್ನಿಯಾದ ಸಾರಾರವರು "ತಕ್‌ವೀನ" ಗ್ರಂಥದಲ್ಲಿ.

ಈ ಗ್ರಂಥದ ಇಪ್ಪತ್ತೊಂದನೇ ಅಧ್ಯಾಯದಲ್ಲಿ ಹಜರತ್ ಇಬ್ರಾಹೀಂ ಪೈಗಂಬರರ ಪತ್ನಿಯಾದ ಸಾರಾರವರು ಹೇಳಿರುವುದೇನೆಂದರೆ, "ಇಸ್ಮಾಯಿಲನ ನಿಕ್ಷೇಪವು ಶಾಶ್ವತವಾದದ್ದು. ಇದರ ಮುಂದೆ ಇಸ್‌ಹಾಕ್‌ನ ನಿಕ್ಷೇಪವು ನೆರಳಿನಂತೆ ಇರುವುದು. ಇದು ಒಂದು ದಿವಸ ಲಯವಾಗುವುದು." ಇಸ್ಮಾಯಿಲನ ವಂಶದವರು ಅರಬ್ಬಿ ದೇಶದವರು. ಇಸ್‌ಹಾಕನ ವಂಶದವರು ಯಹೂದ್ಯರೂ ಮತ್ತು ಕ್ರೈಸ್ತರೂ ಆಗಿರುತ್ತಾರೆ. ಏಸುಕ್ರೈಸ್ತರವರೆಗೂ ಬಂದ ಪ್ರವಾದಿಗಳೆಲ್ಲರೂ ಇಸ್‌ಹಾಕನ ವಂಶದವರೇ ಆಗಿದ್ದರು. ಆದರೆ

ಕಡೆಯಲ್ಲಿ ಇಸ್ಮಾಯಿಲನ ವಂಶದವರಾದ ಅರಾಬ್ಯರಲ್ಲಿ ಹಜರತ್ ಮಹಮ್ಮದ್ ಪೈಗಂಬರರು ಜನ್ಮಗ್ರಹಣ ಮಾಡಿದರು. ಇವರ ನಂತರ ಇವರ ಅನುಯಾಯಿಗಳಲ್ಲಿಯೇ ದೈವಸಾನ್ನಿಧ್ಯದ್ವಾರವು ತೆರೆಯಲ್ಪಟ್ಟಿರುವುದು. ಇದರಿಂದಲೇ ಇಸ್ಮಾಯಿಲನ ನಿಕ್ಷೇಪವು ಶಾಶ್ವತವಾದದ್ದೆಂದು ಹೇಳಲ್ಪಟ್ಟಿತು. ಮತ್ತು ಏಸುಕ್ರಿಸ್ತರ ನಂತರ ಯಹೂದ್ಯರಲ್ಲಿಯೂ ಮತ್ತು ಕ್ರಿಶ್ಚಿಯನ್‌ರಲ್ಲಿಯೂ ದೈವಸಾನ್ನಿಧ್ಯದ್ವಾರವು ನಿಂತಿರುತ್ತದೆ. ಇದರಿಂದಲೇ ಇಸ್ಹಾಕರ ನಿಕ್ಷೇಪವು ಅಶಾಶ್ವತವಾದುದು. ಈಗ ಯಾರೇ ಆಗಲಿ ಹಜರತ್ ಮಹಮ್ಮದ್ ಪೈಗಂಬರರ ಅನುಯಾಯಿಗಳಲ್ಲಿ ಸನ್ನಾವೇಶನನ್ನು ಹೊಂದಿದಹೊರತು ದೈವಸಾನ್ನಿಧ್ಯನನ್ನು ಹೊಂದಲಾರರು.

## ಹೊಸ ವಡಂಬಡಿಕೆಯಲ್ಲಿ.

ಏಸುಕ್ರಿಸ್ತರು ತನ್ನ ಅನುಯಾಯಿಗಳಿಗೆ ಹೇಳಿರುತ್ತಾರೆ—" ನಾನು ನಿಮಗೆ ಹೇಳಬೇಕಾದುದು ಇನ್ನೂ ಬಹಳ ಉಂಟು. ಆದರೆ ಅದನ್ನು ಸಧ್ಯಕ್ಕೆ ಗ್ರಹಿಸಲಾರಿರಿ. ಪವಿತ್ರಾತ್ಮನು ಬಂದಾಗ ಆತನು ನಿಮ್ಮನ್ನು ಸಕಲ ವಿಷಯಗಳಲ್ಲಿಯೂ ಸತ್ಯಕ್ಕೆ ಸೇರಿಸುವನು".

(ಯೋಹನ ಅ. ೧೬, ವಾ॥ ೧೨—೧೩)

ಮೇಲಿನ ಭವಿಷ್ಯದಂತೆ ಹಜರತ್ ಮಹಮ್ಮದ್ ಪೈಗಂಬರರು ಅವತರಿಸಿದರು. ಇದನ್ನು ಅಜ್ಞಾನಿಗಳು ತಿಳಿಯದವರಾಗಿರುತ್ತಾರೆ.

## ಈಜಿಪ್ಟ್ ದೇಶದ ಒಂದು ಶಿಲಾಶಾಸನದಲ್ಲಿ.

ಇದರಲ್ಲಿ ಹಜರತ್ ಮಹಮ್ಮದ್ ಪೈಗಂಬರರ ನಾಮವೂ ಮತ್ತು ಇವರ ಗುಣಕರ್ಮಗಳೂ ಸಂಪೂರ್ಣವಾಗಿ ಕೆತ್ತಲ್ಪಟ್ಟಿವೆ.

## ಸೋಕ್ರೆಟೆಸ್ ಎಂಬ ತತ್ವಜ್ಞಾನಿಯು ಹೇಳಿಕೆ.

ಸೋಕ್ರೆಟಿಸ್ ಎಂಬಾತನು ಗ್ರೀಕ್ ದೇಶದ ಒಬ್ಬ ತತ್ವಜ್ಞಾನಿಯು ಹೇಳಿರುವುದೇನೆಂದರೆ—" ಒಬ್ಬ ಸನ್ಮಾರ್ಗದಾಯಿಯಾದ ಪ್ರವಾದಿಯು

ಪ್ರಪಂಚಕ್ಕೆಲ್ಲಾ ಒಬ್ಬನಾಗಿ ಪ್ರಸನ್ನನಾಗುತ್ತಾನೆ. ನಾನು ಆತನನ್ನೇ ನಂಬುತ್ತೇನೆ. ಆತನೇ ನಮಗೆ ಸನ್ಮಾರ್ಗದಾಯಿಯು."

(ನಫಾಯಸ್, ಲೆತಲ್ ಮಿಜ್, ನದಾರಿಸ್,
ಬೇರೂತ ಮುದ್ರಶಾಲ, ೧೮೪೬ ಇಸ್ವಿ.)

ಮೇಲಿನ ಹೇಳಿಕೆಯಂತೆ ಹಜರತ್ ಮುಹಮ್ಮದ್ ಪೈಗಂಬರರು ಜಗತ್ತಿಗೆಲ್ಲಾ ಜಗದ್ಗುರುವಾಗಿ ಪರಿಣಮಿಸಿದರು.

---

## ಚೈನಾದೇಶದ ಒಂದು ಗ್ರಂಥದಲ್ಲಿ.

ಈ ದೇಶದ ಒಬ್ಬ ಮಹಾತ್ಮರು ಬಹುಕಾಲದ ಹಿಂದೆ ಒಂದು ಕಾಲ ಜ್ಞಾನವನ್ನು ಬರದಂತೆ ತಿಳಿಯಬಂದಿದೆ. ಅದರಲ್ಲಿ ಅವರು "ಜಗತ್ತಿನಲ್ಲಿ ಶಾಶ್ವತವಾದ ಒಂದು ಸಂಜೀವನ ಮೂಲಿಕೆಯು ಪ್ರಸನ್ನವಾಗುವುದಿದೆ. ಅದು ಜಗತ್ತನ್ನೇ ಸಜೀವಮಾಡುವುದು" ಎಂದು ಹೇಳಿರುತ್ತಾರೆ. ಈ ಉಕ್ತಿಯಂತೆ ಹಜರತ್ ಮಹಮ್ಮದರನ್ನು ನಂಬದವರು ಎಂದಿಗೂ ಆತ್ಮಸಾಕ್ಷಾತ್ಕಾರವನ್ನು ಪಡೆಯಲಾರರು.

---

## ಇಟಲಿದೇಶದ ಅಸ್ಥಾನದ ಒಂದು ಲೇಖನಪತ್ರಿಕೆಯಲ್ಲಿ.

ಇಟಲಿದೇಶದ ರಾಜಧಾನಿಯಲ್ಲಿ ಒಂದು ಕೊಠಡಿಯು ಬಹುಕಾಲದಿಂದಲೂ ಬೀಗಮುದ್ರೆಯಾಗಿತ್ತು. ಯಾವಾಗಲೂ ರಾಜರು ಬದಲಾವಣೆಯಾದರೆ ಬೀಗಮುದ್ರೆಯನ್ನು ಮಾತ್ರ ತೆಗೆದು ಹೊಸಮುದ್ರೆಯನ್ನು ಮಾಡುತ್ತಿದ್ದರು. ಹಜರತ್ ಉಮರ್‌ರವರು "ಜೆರೂಸಲಂ" ನ ಮೇಲೆ ದಂಡಯಾತ್ರೆ ಮಾಡಿದ ಕಾಲದಲ್ಲಿ ಅಲ್ಲಿಯ ಪೋಪ್‌ರಾದ ಹೆಖ್ಯುಲಿಸ್ ಎನ್ನುವರು ರೋಮನ್ ಚಕ್ರವರ್ತಿಯ ಒತ್ತಾಸೆಯನ್ನು ಕೋರಿ ಒಂದು ಕಾಗದವನ್ನು ಬರೆದರು. ಯುದ್ಧಸನ್ನಾಹಕಾಲದಲ್ಲಿ ಚಕ್ರವರ್ತಿಯು ಬಹುಕಾಲದಿಂದಲೂ ಬೀಗಮುದ್ರೆ ಮಾಡಲ್ಪಟ್ಟಿದ್ದ ಕೊಠಡಿಯನ್ನು ತೆರೆದುನೋಡಲು, ಅದರಲ್ಲಿ ಒಂದು ಲೇಖನಪತ್ರವು ಸಿಕ್ಕಿತು. ಆ ಪತ್ರದಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಶ್ಲಾಘನೆಯೂ ಮತ್ತು ಅವರ ಸುಮಾರ್ಗದ ಸತ್ಯವನ್ನು ಧೃಢೀ

ಕರಿಸುವ ಭವಿಷ್ಯೋಕ್ತಿಗಳೂ ಇದ್ದವು. ಮತ್ತು ಆ ಕೊಠಡಿಯು ಹಜರತ್ ಉಮರ್‌ರವರ ಕಾಲದಲ್ಲಿ ತೆರೆಯಲ್ಪಡುವುದೆಂದು ಅದರಲ್ಲಿಯೇ ಬರೆದಿದ್ದಿತು. ಮತ್ತು ಪರಮಾತ್ಮನ ಕಡೆಯಿಂದ ಬಂದವನು ಮಂಗಳಸ್ವರೂಪಿಯೆಂದು ಬರೆದಿದ್ದಿತು. ಆ ಕೊಠಡಿಯು ಸುಮಾರು ಏಳುನೂರು ವರ್ಷಗಳು ಮುಚ್ಚಲ್ಪಟ್ಟಂತೆ ತಿಳಿಯಬರುತ್ತದೆ. ಇದನ್ನು ಕಂಡು ಅನೇಕರು ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಿದರು.

---

## ಸ್ಪೈನ್‌ದೇಶದ ಆಸ್ಥಾನದ ಒಂದು ಲೇಖನಪತ್ರದಲ್ಲಿ.

ಸ್ಪೈನ್‌ದೇಶದ ರಾಜಾಸ್ಥಾನದಲ್ಲಿ ಯಾವಾಗಲೂ ಒಂದು ಕೊಠಡಿಯು ಬೀಗಮುದ್ರೆಯಿಂದ ಬಂಧಿಸಲ್ಪಟ್ಟಿದ್ದಿತು. "ತಾರೆಕ್" ಎಂಬ ಮುಸಲ್ಮಾನ್ ಸೇನಾಧಿಪತಿಯು ಸ್ಪೇಯೆನ್ ದೇಶಕ್ಕೆ ದಂಡಯಾತ್ರೆ ಹೊರಟನು. ಆಕಾಲದಲ್ಲಿ ಅಲ್ಲಿಯ ರಾಜನಿಗೆ ಹಣದ ಒತ್ತಾಸೆಯು ಬೇಕಾಯಿತು. ಆಗ ರಾಜನು ಕೊಠಡಿಯಲ್ಲಿ ಹಣವಿರಬಹುದೆಂದು ತಿಳಿದು ಬೀಗಮುದ್ರೆಯನ್ನು ಒಡೆದನು. ಆದರೆ ಅದರಲ್ಲಿ ಒಂದು ಕೈಬರಹದ ಲೇಖನವು ಸಿಕ್ಕಿತು. ಅದರಲ್ಲಿ ಹಜರತ್ ಮಹಮ್ಮದ್ ಪೈಗಂಬರರ ಸನ್ಮಾರ್ಗ ಶ್ಲಾಘನೆಯೂ ಮತ್ತು ಈ ಕೊಠಡಿಯು ತಾರೆಕ್ ಎಂಬ ಸೇನಾಧಿಪತಿಯು ಬಂದಕಾಲದಲ್ಲಿ ಒಡೆಯಲ್ಪಡುವುದೆಂದೂ ಬರೆದಿದ್ದಿತು. ಈ ವಿಷಯವು "ತೇರವಿಂಸದ್ದಿ" ಎಂಬ ವರ್ತಮಾನದಲ್ಲಿ ಬರೆಯಲ್ಪಟ್ಟಿರುತ್ತದೆ.

---

## ಪಾರ್ಸಿಸ್ಥಾನದ ಹದಿಮೂರನೆ 'ದಸಾತೀರ್' ಎಂಬ ಗ್ರಂಥದಲ್ಲಿ.

ಒಬ್ಬ ಮಹಾತ್ಮರು ಮೇಲಿನ ಪುಸ್ತಕದ ನಾಲ್ಕನೇ ಅಧ್ಯಾಯದಲ್ಲಿ ಬರೆದಿರುತ್ತಾರೆ—'ನಮ್ಮ ದೇಶದಲ್ಲಿ ಬಹಮನಿ ಎಂಬ ಒಂದು ಪಂಗಡದವರು ಹುಟ್ಟಿ ಸತ್ಯದಿಂದ ರಾಜ್ಯಪರಿಪಾಲನೆ ಮಾಡುವರು. ನಂತರ ಮತ್ತೊಂದು ಪಂಗಡದವರು ಕತ್ತಿಯನ್ನು ಹಿರಿದು ಈ ದೇಶದ ಮುಖ್ಯಾಧಿಕಾರಿಗಳೆಲ್ಲರನ್ನೂ ಸ್ವಾಧೀನಪಡಿಸಿಕೊಂಡಾಗ ತಿಳಿಯಬಹುದು. ನಿಮ್ಮ ರಾಜ್ಯವೂ ಮತ್ತು ನಿಮ್ಮ ಧರ್ಮವೂ ನಾಶವಾಗುವ ಕಾಲವು ಸಮೀಪಿಸುತ್ತಾ ಇದೆ. ಅರಬ್ಬಿ ದೇಶದಲ್ಲಿ ಒಬ್ಬ ಗೃಹಸ್ಥನು ಹುಟ್ಟುತ್ತಾನೆ ಆತನ ಅನುಯಾಯಿಗಳಿಂದ

ನಿಮ್ಮ ರಾಜ್ಯವು ವಿನಾಶವನ್ನೈದುವುದು. ನಮ್ಮ ದೇಶದ ದೇವಾಲಯ ಗಳೆಲ್ಲಾ ಅವರ ಕೈಸೇರುವವು. ಅವುಗಳಲ್ಲಿನ ಪ್ರತಿವೆ-ಗಳೆಲ್ಲವೂ ಒಡೆಯಲ್ಪ ಡುವವು. ಅವುಗಳೆಲ್ಲವೂ ಮಸೂತಿಗಳಾಗಿ ಪರಿಣಮಿಸುವವು. ಮದಯನ್ನುತ್ತು ಅದರ ಸತ್ತಮುತ್ತಲಿರುವ "ಬಲಕ" ಮುಂತಾದ ದೇಶಗಳೆಲ್ಲಾ ಅವರ ಕೈಸೇರುವವು. ಅವರ ಕಟ್ಟಳೆಗಳೆಲ್ಲವೂ ಆಪ್ರವಾದಿಯಿಂದಲೆ ನೇಮಿ ಸಲ್ಪಡುವವು. ಈ ಹೇಳಿಕೆಯಂತೆ ಪಾರ್ಸಿಸ್ಥಾನವು ವಿನಾಶವಾಗಿ ಹಜರತು ಮಹಮ್ಮದ್ ಪೈಗಂಬರರ ಅನುಯಾಯಿಗಳ ಕೈಸೇರಿತು.

---

## ಹಿಂದೂದೇಶದ ಪುರಾತನ ಗ್ರಂಥಗಳಲ್ಲಿ

ಹಜರತ್ ಮಹಮ್ಮದ್ ಪೈಗಂಬರರ ಪ್ರಸನ್ನತೆಯು ಶ್ರೀಮದ್ಭಾಗವತ ದಲ್ಲಿಯೂ, ಕಲ್ಕಿಪುರಾಣದಲ್ಲಿಯೂ ಸ್ಪಷ್ಟವಾಗಿ ಗೋಚರವಾಗಿದೆ. ಇವರ ವೇದಮಹಾಮಂತ್ರವೂ ಉಪನಿಷದ್‌ಗಳಲ್ಲಿ ಬಂದಿರುತ್ತದೆ. ಎಂಟು ನೂರು ವರ್ಷಗಳ ಹಿಂದೆ ಧರ್ಮೋದ್ಧಾರಕ್ಕಾಗಿ ಅವತರಿಸಿದ ಶಿವಶರಣರು, ಎಂದರೆ ಶ್ರೀಕಲ್ಯಾಣಬಸವೇಶ್ವರರೂ, ಶ್ರೀಚಿಕ್ಕ ಚನ್ನಬಸವೇಶ್ವರರೂ ಮತ್ತು ಸರ್ವಜ್ಞಮೂರ್ತಿಗಳೂ, ಕಲಿಯುಗದಲ್ಲಿ ಧರ್ಮೋದ್ಧಾರಕ್ಕಾಗಿ ಅವತರಿಸಿದ ಶ್ರೀಮಹಾವಿಷ್ಣುವಿನ ಹತ್ತನೇ ಅವತಾರವಾದ ಕಲ್ಕ್ಯವತಾರಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಿ ಅವರ ಸತ್ಯವನ್ನು ಸಾಧಿಸಿರುತ್ತಾರೆ. ತಮ್ಮ ಪುರಾತನ ಗ್ರಂಥಗಳಲ್ಲಿನ ವಿಚಾರವನ್ನು ತಿಳಿಯದೆ ಹಿಂದೂ ಜನರು ಅಲಕ್ಷ್ಯಮಾಡಿರುತ್ತಾರೆ. ಇದು ಮುಂದೆ ಬಹಳ ಅನಾಹುತಕ್ಕೆ ಕಾರ ಣವಾಗುವುದು. ಪುರಾತನ ಶಿವಶರಣರ ಉಕ್ತಿಗಳನ್ನು ಗ್ರಹಿಸಲಾರದೆ, ಇನ್ನೂ ಈಶ್ವರಪ್ರಸನ್ನವಾದ ಕಲ್ಕ್ಯವತಾರವು ಪ್ರಪಂಚದಲ್ಲಿ ಮೈದೋರಿಲ್ಲ ವೆಂದು ಹೇಳುತ್ತಾರೆ. ಕಲ್ಕ್ಯವತಾರಪ್ರಸನ್ನರಾದ ಹಜರತ್ ಮಹಮ್ಮದ್ ಪೈಗಂಬರರು ಕಾಲಜ್ಞಾನಕ್ಕೆ ಸರಿಯಾಗಿ ನೇಮದ ವೇಳೆಯಲ್ಲಿ ಅವತರಿಸಿ ಅಚಂದ್ರಾರ್ಕವಾದ ಜಯವನ್ನು ಹೊಂದಿದರು. ಇದನ್ನು ತಿಳಿಯದೆ, ಜೈನರು, ಬೌದ್ಧರು, ಹಾರವರು, ಮಹಾರಾಷ್ಟ್ರರು, ವೈಶ್ಯರು, ಕ್ಷತ್ರಿಯರು, ರಡ್ಡಿ, ಸಾತಾನಿ, ಮುಂತಾದ ವಿಷ್ಣುಭಕ್ತರು ಕಣ್ಣುಮುಚ್ಚಿಕೊಂಡು ನಿರೀ

ಕ್ಷಣೆಮಾಡುತ್ತಿದ್ದಾರೆ. ಆದುದರಿಂದ ಈ ವಿಷಯವನ್ನು ಕಾಲಜ್ಞಾನೋಕ್ತಿಗಳಿಂದ ದೃಢೀಕರಿಸುತ್ತೇವೆ.

ಜಗದ್ಗುರು ನಿರಂಜನಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗಂಬರರ ಪ್ರತ್ಯಕ್ಷತೆಯು ಸಂಪೂರ್ಣವಾಗಿ ಶ್ರೀಮದ್ಭಾಗವತದಲ್ಲಿಯೂ ಮತ್ತು ಕಲ್ಕಿ ಪುರಾಣದಲ್ಲಿಯೂ ವಿವರಿಸಲ್ಪಟ್ಟಿರುತ್ತದೆ. ಭರತಕುಲತಿಲಕನಾದ ಪರೀಕ್ಷಿದ್ರಾಜನಿಗೆ ಶುಕಮುನಿಗಳು ಕಲಿಕಾಲಜ್ಞಾನವನ್ನು ಹೇಳುತ್ತಾ ಬಂದಿರುತ್ತಾರೆ. ಭಾಗವತದ ಹನ್ನೆರಡನೆ ಸ್ಕಂದದಲ್ಲಿ ಶುಕಮುನಿಗಳು ಹೇಳಿರುತ್ತಾರೆ, "ಎಲೈ ಅರಸೆ, ನಿನ್ನ ಜನ್ಮವು ಮೊದಲುಗೊಂಡು ನಂದನೆಂಬ ಅರಸನ ಪಟ್ಟಾಭಿಷೇಕಪರಿಯಂತರವೂ ಮಧ್ಯ ಸಲ್ಲುವಂಥ ಕಲಿವರ್ಷಗಳು ಸಾವಿರವ ನೂರಾಹದಿನೈದೆಂದು ತಿಳಿ. ಲಕ್ಷ್ಮೀಪತಿಯಾದ ಶ್ರೀಕೃಷ್ಣನು ತನ್ನ ಪಾದಪದ್ಮಗಳಿಂದ ಎಷ್ಟುಪರಿಯಂತರವು ಭೂಮಿಯನ್ನು ಸ್ಪೃಶಿಸುತ್ತಲಿದ್ದಾನೊ ಅಷ್ಟುಪರಿಯಂತರವು ಕಲಿಯು ಭೂಮಿಯನ್ನು ತಿರಸ್ಕರಿಸಲು ಸಮರ್ಥವಾಗಲಿಲ್ಲ. ಯಾವಾಗ ಮರೀಚಿ ಮೊದಲಾದ ಸಪ್ತಋಷಿಗಳು ಮಖಾನಕ್ಷತ್ರದಲ್ಲಿ ಸಂಚರಿಸುವರೊ ಆಗ ಸಂಧಿಕಲಾಂಶಗಳೊಡನೆ ಕೂಡಿ ದೇವಮಾನದಲ್ಲಿ ಸಾವಿರದ ಇನ್ನೂರು ವರ್ಷಗಳ ಪ್ರಮಾಣವುಳ್ಳ ಕಲಿಯುಯುಗಸಂಧಿಯನ್ನು ದಾಟಿ ಚನ್ನಾಗಿ ಪ್ರವೇಶಿಸುವುದು. ಆಗ ನಂದನೆಂಬ ನಾಮಾಂತರವುಳ್ಳ ಪ್ರದ್ಯೋದನನ ವಂಶದ ಅರಸನ ಮೊದಲುಗೊಂಡು ಕಲಿಯು ವೃದ್ಧಿಯನ್ನೈದುವುದು." ಮೇಲಿನ ಉಕ್ತಿಗಳಿಂದ, ದ್ವಾಪರಯುಗಕ್ಕೂ ಮತ್ತು ಕಲಿಯುಗಕ್ಕೂ ಯುಗಸಂಧಿಯ ವರ್ಷಗಳು ಎಂಭತ್ತೈದೆಂದು ವಿದಿತವಾಗುವುದು. ಈ ಯುಗಸಂಧಿಯ ೮೫ ವರ್ಷಗಳ ನಂತರ ಕಲಿಯುಗವು ಪ್ರಾರಂಭವಾಗಿ ನಂದನೆಂಬ ಅರಸನ ಪಟ್ಟಾಭಿಷೇಕದವರೆಗೆ ೧೧೧೫ ವರ್ಷಗಳು ಮುಗಿಯುತ್ತವೆ. ಪುನಃ ಶುಕಮುನಿಗಳು ಸೂಚಿಸಿರುತ್ತಾರೆ. "ನಂದನ ವಂಶದವರು ೧೦೦ ವರ್ಷಗಳು ಈ ಭೂಮಿಯನ್ನು ಪಾಲಿಸುವರು.....ಮೌರ್ಯರೆಂಬ ಅರಸರು ಈ ಭೂಮಿಯನ್ನು ೧೩೭ ವರ್ಷ ಪಾಲಿಸುವರು.....ಶುಂಗರೆಂಬ ಅರಸರು ೧೧೦ ವರ್ಷಗಳು ಈ ಭೂಮಿಯನ್ನು ಆಳುವರು.....ಕಣ್ವರೆಂಬ ಅರಸರು ೪೫೫ ವರ್ಷಗಳಾಳುವರು. .....ನಂತರ ಆಂಧ್ರದ ಅರಸರು ೪೫೬ ವರ್ಷಗಳಾಳುವರು.....ಪುನಃ

ಅಭೀರರು ೧೦೯೫ ವರ್ಷಗಳಾಳುವರು..... ನಂತರ ಮೌನರು ೩೦೦ ವರ್ಷಗಳು ಈ ಭೂಮಿಯನ್ನು ಆಳುವರು .....ಮತ್ತು ಅನೇಕರು ಸಮಾನ ಕಾಲದಲ್ಲಿ ಆಯಾ ಭೂಖಂಡಗಳಲ್ಲಿ ರಾಜ್ಯವನ್ನಾಳುವರು.....ಅಷ್ಟರಲ್ಲಿಯೆ ಪಾಪವು ಅಪರಿಮಿತವಾಗಿ ಹರಡುವುದು. ನಂತರ ಕಲ್ಕ್ಯವತಾರಪ್ರಸನ್ನ ನಾದ ಪರಮಾತ್ಮನು ಅವತರಿಸುವನು. " ಮೇಲಿನ ಹೇಳಿಕೆಯಂತೆ ಶ್ರೀಕೃಷ್ಣ ನಿಂದ ಕಲ್ಕ್ಯವತಾರ ಪರಿಯಂತವು ೩೬೫೮ ವರ್ಷಗಳು ಸಂದುವೆಂದು ವಿದಿತವಾಗುತ್ತದೆ. ಇದೇಕಾಲದಲ್ಲಿ ಎಂದರೆ ಕಲಿಯುಗದ ಸುಮಾರು ೩೬೬೫ ವರ್ಷದಲ್ಲಿ ಹಜರತ್ ಮಹಮ್ಮದ್ ಪೈಗಂಬರರು ಜನಿಸಿದರು. ಇವ ಚರಿತ್ರಾಧಾರದಿಂದ ತಿಳಿದುಬಂದಿರುತ್ತದೆ.

ಕೆಲವರು ಕಲಿಯು ಪ್ರಾಣವು ೪೩೨೦೦೦ ವರ್ಷಗಳಿರುವುದರಿಂದ ಇದರ ಅಂತ್ಯದಲ್ಲಿ ಕಲ್ಕಿಯು ಅವತರಿಸಬೇಕೆಂದು ಹೇಳುತ್ತಾರೆ. ಆದರೆ ಇದು ಸಕಾರಣವಾಗಿಲ್ಲವು. ಹೀಗಿದ್ದ ಪಕ್ಷದಲ್ಲಿ ಶುಕಮುನಿಯವರು ತಮ್ಮ ಭವಿಷ್ಯಗಳಿಂದ ೩೬೫೮ ವರ್ಷಗಳವರೆಗೂ ಆಳಿದ ಅರಸರ ವಿಚಾರವನ್ನು ಮತ್ತು ಅಲ್ಲಿಯವರೆಗೂ ನಡೆಯುವ ವಿಷಯವನ್ನು ಮಾತ್ರವಲ್ಲದೆ ೪೩೨೦೦೦ ವರ್ಷಗಳ ಅಂತ್ಯದವರೆಗೂ ಆಳುವ ರಾಜರನ್ನು ಮತ್ತು ರಾಜ್ಯಾಡಳಿತದ ವಿಚಾರವನ್ನು ಮತ್ತು ಜನರ ಧರ್ಮಾಧರ್ಮ ವಿಚಾರಗಳನ್ನೂ ಕೂಡ ತಿಳಿಸಬೇಕಾಗಿತ್ತು. ಹಾಗೆ ಮಾಡದೆ ೩೬೫೮ ವರ್ಷಗಳ ಆಗಮನವನ್ನು ಮಾತ್ರ ಬರೆದಿರುತ್ತಾರೆ. ಸತ್ಯವೇ ಪ್ರಾಧಾನವಾದ ಕೃತಯುಗವು, ಲಕ್ಷಾಂತರ ವರ್ಷಗಳನಂತರ ಕಲಿಯು ಹೊರಪೇಲೆ ಬಂದರೆ ತತ್ಕಾಲದಲ್ಲಿ ಕಲಿಯನ್ನು ತಗ್ಗಿಸಲು ಯಾವ ಅವತಾರಿಯು ಬರುವುದಿಲ್ಲವೆಂದು ತಿಳಿಯ ಬರುತ್ತದೆ. ಇದಲ್ಲದೆ ಸತ್ಯವು ಮಾತ್ರ ಪ್ರಾರಂಭವಾದಾಗ ಬಂದು ಕಲ್ಕಿ ಅವತಾರ ಪ್ರಸನ್ನನಾದ ಪರಮಾತ್ಮನು ಏನು ತಾನೆ ಮಾಡುವನು ? ಪುರಾತನ ಗ್ರಂಥಗಳೆಲ್ಲವೂ ಕಲಿಯನ್ನು ತಗ್ಗಿಸಲು ಪರಮಾತ್ಮನು ಬರುವನೆಂದು ಹೇಳುವಲ್ಲಿ, ಜನರ ಈ ಮಾತುಗಳಿಗೆ ಆಧಾರವೇ ಇಲ್ಲವು. ಇದಲ್ಲದೆ ಶುಕಮುನಿಗಳು ಪರಿಕ್ಷದ್ರಾಯನಿಗೆ "ಎಲೈ ಅರಸೇ ಕೇಳು. ಯಾವಾಗ ಪುರುಷರ ಮನೋಬುದ್ಧೀಂದ್ರಿಯಗಳು ಸತ್ವಗುಣದಲ್ಲಿ ಅತಿಶಯದಿಂದ ನಿಂತಿರುವವೊ, ಯಾವಾಗ ಜ್ಞಾನದಲ್ಲಿಯೂ ತಪಸ್ಸಿನಲ್ಲಿಯೂ ಆಸಕ್ತಿಯುಂಟಾಗುವುದೊ ಆ ಕಾಲವನ್ನೆ ಕೃತಯುಗವೆಂದು ತಿಳಿಯಬೇಕು "

ಎಂದು ಹೇಳಿರುತ್ತಾರೆ. ಅದ್ದರಿಂದ ಕಲ್ಕಿ ಅವತಾರಿಯಾದ ಪರಮಾತ್ಮನು ಯಾವಾಗ ಬರುವನೊ ಆವಾಗಲೆ ಕೃತಯುಗವು ಪ್ರಾರಂಭವಾಗುವುದು ಮತ್ತು ಆತನೆ ಸತ್ಯವನ್ನು ಹರಡಿ, ದುಷ್ಟರನ್ನು ಸಿಕ್ಷಿಸಿ, ಕೃತಯುಗವನ್ನು ಪ್ರಾರಂಭ ಮಾಡುವನೆಂದು ತಿಳಿಯಬೇಕು. ಹೀಗೆ ಹಜರತ್ ಮಹಮ್ಮದರು ಪ್ರಸನ್ನರಾದ ಕೂಡಲೆ ಪಾಪದಲ್ಲಿ ಮುಳುಗಿದ್ದ ಪ್ರಪಂಚವು ಕೃತಯುಗವನ್ನು ಕಂಡಿತು. ಆದಲ್ಲದೆ ಕಲಿಯುಗದ ಪ್ರಮಾಣವು ಲಕ್ಷಾಂತರ ವರ್ಷಗಳಿದ್ದರೂ, ಇದರಲ್ಲಿಯೆ ಧರ್ಮಕರ್ಮ, ಅಭಿವೃದ್ಧಿಯಿಂದಲೂ ಮತ್ತು ಕ್ಷೀಣತೆಯಿಂದಲೂ ಯುಗ ಬದಲಾವಣೆಗಳುಂಟಾಗುವವೆಂದು ಪುರಾತನರು ಸಾರಿರುತ್ತಾರೆ.

ಶ್ರೀ ಮದ್ಭಾಗವತದಲ್ಲಿಯೂ ಮತ್ತೂ ಕಲ್ಕಿ ಪುರಾಣದಲ್ಲಿಯೂ ಕಲ್ಕಿ ನಾಮಕನಾದ ಹಜರತ್ ಮಹಮ್ಮದ್ ಪೈಗಂಬರರ ಸರ್ವ ಕುರುಹುಗಳು ಸಂಪೂರ್ಣವಾಗಿ ತುಂಬಿರುತ್ತವೆ. ಕಲ್ಕಿ ಪುರಾಣದಲ್ಲಿ ಕಲ್ಕಿ ನಾಮಕನಾದ ಅವತಾರಿಯು ಎರಡು ಸಲ ಪ್ರಪಂಚದಲ್ಲಿ ಮೈದೋರುವನೆಂದು ಬರೆಯಲ್ಪಟ್ಟಿರುತ್ತದೆ. ಮೊದಲನೆಯ ಪ್ರಸನ್ನತೆಗೆ ಸಾಕ್ಷಿಯಾಗಿ ಭರತ ಖಂಡದ ಸೂರ್ಯ ಚಂದ್ರವಂಶದ ಅರಸರು ತಮ್ಮ ತಮ್ಮಲ್ಲಿಯೆ ಜಗಳವಾಡಿ ನಾಶವಾಗುವರು ಮತ್ತು ಶಾಕದ್ವೀಪದ ಒಬ್ಬ ರಾಜನು ಸುತ್ತಮುತ್ತಲ ಸೂರ್ಯ ವಂಶದವರನ್ನು ಮೂಲೋತ್ಪಾಟನ ಮಾಡುವನೆಂದು ಬರೆದಿರುತ್ತಾರೆ. ಇದೇರೀತಿಯಾಗಿ ಭರತ ಖಂಡದ ರಾಜರು ಕಲಿಯುಗದ ೩೬೫೮ ವರ್ಷಗಳ ಅಂತ್ಯದಲ್ಲಿ ಧರ್ಮಾಧರ್ಮಗಳನ್ನೆಣಿಸದೇ ಮ್ಲೇಚ್ಛ ಪ್ರಾಯರಾಗಿ ಸತ್ಯವಂತರಾದ ಕ್ಷತ್ರಿಯರನ್ನು ಧ್ವಂಸಮಾಡಿ ಗಂಗಾದ್ವಾರ ಮೊದಲುಗೊಂಡು ಪ್ರಯಾಗ ಪರಿಯಂತವೂ ಆಳಿರುವುದು ಗೋಚರವಾಗಿದೆ. ಇದು ಭಾಗವತದಿಂದಲೂ ಧೃಡೀಕರಿಸಲ್ಪಟ್ಟಿರುತ್ತದೆ. ಇದೇ ರೀತಿಯಲ್ಲಿ ಕನ್ನೂಜ, ಕಷ್ಮೀರ್, ದ್ವಾರಕ, ಮುಂತಾದ ರಾಜ್ಯಗಳ ಅರಸರು ಹಜರತ್ ಮಹಮ್ಮದರ ಜನನಕಾಲದ ಸಮೀಪಕಾಲದಲ್ಲಿ ತಮ್ಮ ತಮ್ಮಲ್ಲಿಯೆ ಜಗಳವಾಡಿ ವಿನಾಶವಾದರು. ಇದಲ್ಲದೆ ನವ ಷೇರ್‌ವಾನೆ ಆದಿಲ್ ಎಂಬ ರಾಜನು (ಶಾಖದ್ವೀಪ) ಪಾರ್ಥಿಯಾ ಸ್ಥಾನವನ್ನು ಆಳುತ್ತಿದ್ದನು. ಅವನು ಆದೇ ಕಾಲದಲ್ಲಿ ತನ್ನ ರಾಜ್ಯದ ಸುತ್ತಮುತ್ತಲಿದ್ದ ಸೂರ್ಯ ವಂಶದ ರಾಜರನ್ನು ಬಹಳವಾಗಿ ಸಂಹಾರ ಮಾಡಿ ಭೂಮಿಯನ್ನು ಪಾಪವೆಂಬ ಕಡಲಿನಲ್ಲಿ ಮುಳುಗಿಸಿದನು. ಪುನಃ ಕಲ್ಕ್ಯಾವತಾರವು ಎರಡನೆ

ಸಲ ಎಂದರೆ ಅಖಂಡ ಮುನಿಯ ಕಾಲಜ್ಞಾನದಂತೆ ಕಲಿಯು ೫೦೧೦ ವರ್ಷ ಗಳು ಪ್ರಮಾಣವುಳ್ಳ ಕರ್ಮ ಕಲಿಯು ಅಂತ್ಯದಲ್ಲಿ ಬರಬೇಕೆಂದು ನಾರದ ಮುನಿಗಳ ಕಾಲಜ್ಞಾನವೂ ಉಂಟು. ಹೀಗೆ ಎರಡನೆಯ ಸಲ ಬರುವ ಸೂಚ ನೆಯೂ ಇರುತ್ತದೆ. ಮುಂದೆ ನಾವು ಈಶ್ವರಸ್ವರೂಪನಾದ ಶ್ರೀ ಮಹಾ ವಿಷ್ಣುವು ಪೃಥಮದಲ್ಲಿ ಹಜರತ್ ಮಹಮ್ಮದ ಪೈಗಂಬರರ ರೂಪದಲ್ಲಿ ಕಂಡ ವಿಷಯವನ್ನು ತಿಳಿಸಬೇಕಾಗಿರುವುದು.

ಜಗದ್ಗುರುಗಳಾದ ಹಜರತ್ ಮಹಮ್ಮದ್ ಪೈಗಂಬರರ ಅವತರಣಿಕೆ ಯನ್ನು ತಿಳಿಯಲಪೇಕ್ಷೆಯಿಂದ ಪರೀಕ್ಷಿದ್ರಾಜನು ಶುಕಮುನಿಗಳನ್ನು ಪ್ರಶ್ನಿ ಸಲು ಶುಕಮುನಿಗಳು ಹೇಳುತ್ತಾರೆ. "ಪಾಪದಲ್ಲಿ ಮುಳುಗಿದ ಕಲಿಯು ಗತ ಪ್ರಾಯವಾಗಲೋಸುಗ ಭಗವಂತನು ಧರ್ಮಪಾಲನೆಗೋಸ್ಕರ ಶುದ್ಧ ಸತ್ವಗುಣ ಪ್ರಧಾನವಾದ ರೂಪದಿಂದ ಅವತರಿಸುವನು. ಚೇತನಾ ಚೇತನಗಳಾದ ಭೂತ ಗಳಿಗೆ ಗುರುವಾಗಿ ಈಶ್ವರನಾಗಿ ಸಕಲ ಪ್ರಪಂಚಕ್ಕೆ ಆತ್ಮರೂಪನಾಗಿ ಮೂಲಕಾ ರಣನಾದ ಶ್ರೀಮಹಾ ವಿಷ್ಣುವಿನ ಅವತಾರವು ಸತ್ಪುರುಷರ ಧರ್ಮವನ್ನು ಪಾಲಿ ಸುವುದಕ್ಕೋಸ್ಕರವೂ ಅವರ ಮೋಕ್ಷಕ್ಕೋಸ್ಕರವೂ ಉಂಟಾಗುವುದು. ಶಂಬ ಳನೆಂಬ ಗ್ರಾಮದಲ್ಲಿ ಪ್ರಮುಖನಾಗಿ ಮಹಾತ್ಮನಾಗಿ ವಿಷ್ಣು ಯಶಸ್ಸೆಂಬ ಬ್ರಾಹ್ಮಣನ ಗೃಹದಲ್ಲಿ ಕಲ್ಕಿನಾಮಕನಾದ ಭಗವಂತನು ಮುಂದೆ ಅವತರಿಸು ವನು. ಜಗತ್ಪತಿಯಾಗಿ ದೇವೋತ್ತಮನಾಗಿ ಅಣಿಮಾದ್ಯಷ್ಟೈಶ್ವರ್ಯಗ ಳಿಂದಲೂ ಸತ್ಯ ಸಂಕಲ್ಪಾದಿಗುಣಗಳಿಂದಲೂ ಪೂರ್ಣನಾಗಿ ಕಲ್ಕಿ ರೂಪಿಯಾದ ಭಗವಂತನು ಧರ್ಮ ಭ್ರಷ್ಟರಾದ ದುಷ್ಟರನ್ನು ಸಂಹರಿಸುವ ಅತಿ ಶೀಘ್ರ ಗಮನವುಳ್ಳ ಅಶ್ವವನ್ನೇರಿ ಅಮಿತಕಾಂತಿಯುಳ್ಳವನಾಗಿ ಆ ಅಶ್ವದಿಂದ ಭೂಮಿ ಯಲ್ಲಿ ಸಂಚರಿಸುವ ರಾಜವೇಷಗಳಿಂದ ಅಬಾದನಂಗೈಯ್ಯಲ್ಪಟ್ಟವರಾಗಿ ಅನೇಕ ಕೋಟಿಗಳಾಗಿರುವ ಚೋರರನ್ನು ಖಡ್ಗದಿಂದ ಸಂಹರಿಸುವನು. ಅನಂ ತರದಲ್ಲಿ ಕಲ್ಕಿ ಮೂರ್ತಿಯಿಂದ ದುಷ್ಟಚೋರರು ಸಂಹರಿಸಲ್ಪಟ್ಟ ಮೇಲೆ ಕಲ್ಕಿ ರೂಪಿಯಾದ ವಾಸುದೇವನು ಅಂಗವಿಲೇಪನಾದಿಗಳು ಪುಣ್ಯಕರವಾದ ಪರಿಮಳ ವುಳ್ಳ ವಾಯುವನ್ನು ಸ್ಪೃಶಿಸುತಲಿರ ವನಾದ "ಾರಂ ಪುರಗಳಲ್ಲಿ ಅವ ಶಿಷ್ಟರಾಗಿರುವ ಪುರುಷರ ಮನಸ್ಸುಗಳು ನಿರ್ಮಲವಾಗವು. ಸುಮೂರ್ತಿ ಯಾದ ಶ್ರೀ ವಾಸುದೇವನು ಹೃದಯದಲ್ಲಿ ಭಾವಿಸಲ್ಪಡುತ್ತಿರಲು ಆಗ ಪುರು

ಷರ ಪ್ರಜಾಸೃಷ್ಟಿಯು ಕಾಲಾನುಸಾರದಿಂದ ಸ್ಥೂಲವಾಗುವುದು, ಯಾವಾಗ ಧರ್ಮಕ್ಕೆ ಅಧಿಪತಿಯಾಗಿ ಭಗವಂತನಾದ ಕಲ್ಕಿಯು ಅವತರಿಸುವನೊ ಆಗಲೇ ಪುನಃ ಕೃತಯುಗವು ಹುಟ್ಟುವುದು, ಪ್ರಜೆಗಳು ಸಾತ್ವಿಕರಾಗಿ ಜನಿಸುವರು. "
(ಭಾಗವತ ಸ್ಕಂ॥ ೧೨, ಅ. ೨)

ಇವುಗಳಲ್ಲದೆ ಕಲ್ಕಿ ಪುರಾಣದಲ್ಲಿ ಅನೇಕ ಆಧಾರಗಳುಂಟು. "ಕಲ್ಕಿನಾ ಮಕನಾದ ಪರಮಾತ್ಮನು ವಿಷ್ಣುಭಕ್ತ ಮತ್ತು ಸುಮತಿ ಎಂಬ ತಂದೆತಾಯಿ ಗಳ ಗರ್ಭದಿಂದ ಶಂಬಳದ್ವೀಪದಲ್ಲಿ ಜನಿಸುವನು. ವೈಶಾಖ ಶುದ್ಧ ದ್ವಾದಸಿ ಸೋಮವಾರ ಎರಡು ತಾಸು ಹೊತ್ತು ಏರಿ ಹುಟ್ಟುವನು. ಆ ಸತ್ಪುರುಷನು ತಾನು ಒಂದು ಗುಹೆಯಲ್ಲಿ ಪ್ರಾರ್ಥನೆ ಮಾಡುವಾಗ ಪರಶುರಾಮನ ಅಂಶ ದಿಂದ ಬೋಧಿಸಲ್ಪಡುವನು. ಶಂಬಳದ್ವೀಪದ ರಾಣಿಯು ಆತನನ್ನು ವರಿ ಸುವಳು. ಈ ಲಗ್ನದಲ್ಲಿ ಆ ಮಹಾತ್ಮರ ಚಿಕ್ಕಪ್ಪನು ಮತ್ತು ಮೂವರು ಸಹೋದರರಿರುವರು. ಮೊದಲು ಈತನ ತಂದೆಯೂ, ನಂತರ ತಾಯಿಯೂ ಚಿಕ್ಕಂದಿನಲ್ಲಿಯೆ ಸ್ವರ್ಗಸ್ಥರಾಗುವರು. ಈತನು ಪರಿಶುದ್ಧವಾದ ಸಾತ್ವೀಕ ಗುಣದಿಂದ ಧರ್ಮಪ್ರಚಾರ ಮಾಡುವನು. ಜನರ ಕಷ್ಟವನ್ನು ತಾಳಲಾರದೆ ಉತ್ತರ ದಿಕ್ಕಿನ ಗುಡ್ಡಗಳಲ್ಲಿ ಸಂಚರಿಸುವನು. ನಂತರ ರುದ್ರಗುಣ ಯುಕ್ತ ನಾಗಿ ವೈರಿಗಳನ್ನು ಜೈಸುವನು. ಆತನು ಸರ್ವಧರ್ಮ ಸನ್ಯಾನಿಯಾಗಿ ಜಗ ತ್ತಿಗೆ ಒಬ್ಬನಾಗಿ ಅವತರಿಸುವನು" ಎಂದು ಸ್ಪಷ್ಟವಾಗಿ ಬರೆಯಲ್ಪಟ್ಟಿದೆ.

ಮೇಲಿನ ಭಾಗವತದ ಮತ್ತು ಕಲ್ಕಿ ಪುರಾಣದ ಭವಿಷ್ಯೋಕ್ತಿಗಳು ಎಷ್ಟು ಸಾದೃಶ್ಯವಾಗಿ ಜಗದ್ರಕ್ಷಕರಾದ ಹಜರತ್ ಮಹಮ್ಮದ್ ಪೈಗಂಬರರ ಪ್ರತ್ಯಕ್ಷತೆಯನ್ನು ತಿಳಿಸುತ್ತವೆ ಎಂಬದನ್ನು ವಿಚಾರಿಸಬಹುದು. ಜಗದ್ರಕ್ಷ ಕನಾದ ಕಲ್ಕಿಯು ಶಂಬಳಗ್ರಾಮ ಅಥವ ಶಂಬಳದ್ವೀಪದಲ್ಲಿ ಜನಿಸಬೇಕೆಂದು ಕಾಲಜ್ಞಾನಗಳುಂಟು. ಈಗೆ ಶಂಬಳ ದ್ವೀಪವ್ಯಾವುದೆಂದು ವಿಚಾರಿಸೋಣ. ಹಿಂದಿನ ಭೂಗೋಳ ಶಾಸ್ತ್ರಜ್ಞರು ಭೂಮಿಯನ್ನು ಸಪ್ತದ್ವೀಪಗಳಾಗಿ ವಿಂಗ ಡಿಸಿರುತ್ತಾರೆ. ಅದರಲ್ಲಿ ಅರಬ್ಬಿದೇಶ ಮತ್ತು ಕೆನಾನ್ ಎಂಬ ಪ್ರಾಂತ್ಯ ಗಳಿಗೆ ಶಾಲ್ಮಲದ್ವೀಪ ಅಥವ ಶಂಬಳದ್ವೀಪವೆಂದು ಹೆಸರಿಟ್ಟಿರುತ್ತಾರೆ. ವೇದ ಗಳ ಭಾಷಾಂತರ ಮಾಡಿರುವ ಖ್ಯಾತಿಯನ್ನು ಹೊಂದಿದ ಮ್ಯಾಕ್ಸ್ ಮಿಲ್ಲರ್

ಎಂಬ ಪಾಶ್ಚಿಮಾತ್ಯ ಪಂಡಿತರೂ ಕೂಡ ಶಂಬಳದ್ವೀಪವೆಂಬ ನಾಮವು ಅರಬ್ಬಿದೇಶಕ್ಕೆ ಅನ್ವಯಿಸುತ್ತದೆ ಎಂದೇ ಬರೆದಿರುತ್ತಾರೆ. ಅದರಂತೆಯೆ ಹಜರತ್ ಮಹಮ್ಮದ್ ಪೈಗಂಬರರು ಅರಬ್ಬಿದೇಶದ ಮುಖ್ಯಪಟ್ಟಣವಾದ ಮಕ್ಕಾದಲ್ಲಿ ಜನಿಸಿದರು.

## ಸಪ್ತದ್ವೀಪಗಳು

| ದ್ವೀಪಗಳು | ಈಗಿನ ಹೆಸರು | ಪುರಾತನ ಹೆಸರಿಗೆ ಕಾರಣ |
|---|---|---|
| ೧. ಜಂಬೂದ್ವೀಪ | ಹಿಂದೂಸ್ಥಾನ, ಆಸ್ಸಾಮ್ ಮತ್ತು ಬರ್ಮಾ | ಈ ಪ್ರಾಂತ್ಯಗಳಲ್ಲಿ ಜಂಬೂ ಫಲವು ವಿಶೇಷವಾಗಿತ್ತು ಮತ್ತು ಜಾಂಬವರೆಂಬ ಜನರಿದ್ದರು |
| ೨. ಶಾಖದ್ವೀಪ | ಪರ್ಸಿಯಾ ಮತ್ತು ಕುರಾಸಾನ್ | ಇಲ್ಲಿ ಕಾಯಿಪಲ್ಯ ಮತ್ತು ಹಣ್ಣು ಹಂಪಲು ಹೆಚ್ಚು |
| ೩. ಕೋಮೇದಿಕ ದ್ವೀಪ | ರಷ್ಯ, ಜರ್ಮನ್ ಮತ್ತು ಚೈನ ಮುಂತಾದುವು | ಇಲ್ಲಿ ಗುಡ್ಡಗಳೂ ಮತ್ತು ಬಂಜರುಭೂಮಿ ಹೆಚ್ಚು |
| ೪. ಕ್ರೌಂಚದ್ವೀಪ | ಇಟಲಿ ಮತ್ತು ಗ್ರೀಸ್ | ಇಲ್ಲಿ ಕೊರವಂಜಿಸಕ್ಷಿಗಳು ಹೆಚ್ಚು |
| ೫. ಶಾಲ್ಮಲದ್ವೀಪ | ಅರಬ್ಬಿಸ್ಥಾನ ಮತ್ತು ಕೆನಾನ | ಇಲ್ಲಿ ಹತ್ತಿ ಮತ್ತು ರೇಷ್ಮೆ ಹೆಚ್ಚು |
| ೬. ಕುಶದ್ವೀಪ | ಆಫ್ರಿಕ | ಇಲ್ಲಿ ಸುಗಂಧವುಳ್ಳ ಒಂದು ಹುಲ್ಲು ಬೆಳೆಯುತ್ತದೆ. |
| ೭. ಪುಷ್ಕರದ್ವೀಪ | ಇಂಗ್ಲೆಂಡ್, ಫ್ರಾನ್ಸ್ ಸ್ಪೇ ಮುಂತಾದ್ದು | ಬಹು ನೀರಿನಿಂದ ಆವೃತವಾಗಿರುತ್ತವೆ. |




LOKANANDINI PRESS, TRIPLICANE, MADRAS.

ಚಿನ್ಮಯಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗಂಬರರು ಕಲಿಯುಗದ ೫೬೬೫ನೇ ವರ್ಷದ ವೈಶಾಖ ಶುದ್ಧ ದ್ವಾದಶಿ ಸೋಮವಾರ ಪ್ರಾತಃಕಾಲಕ್ಕೆ ಸರಿಯಾಗಿ ಜನಿಸಿದರು. ಆದರೆ ಮೇಲಿನ ಕಾಲಜ್ಞಾನಗಳಲ್ಲಿ ಎರಡು ತಾಸುಹೊತ್ತು ಏರಿ ಹುಟ್ಟಬೇಕೆಂದು ಬರೆದಿರುತ್ತಾರೆ. ಇದು ಹೇಗೆಂದರೆ, ಯಾವಾಗಲೂ ಅರಬ್ಬಿಸ್ಥಾನದಲ್ಲಿ ಹಿಂದೂಸ್ಥಾನದಲ್ಲಿ ಹೊತ್ತು ಏರಿದ ಎರಡು ತಾಸುಗಳಲ್ಲಿ ಬೆಳಗಾಗುವುದು. ಹಿಂದಿನ ಮಹಾತ್ಮರು ಹಿಂದೂಸ್ಥಾನದಲ್ಲಿ ಸೂರ್ಯನುದಯಿಸುವುದನ್ನು ನೆನಪಿಟ್ಟು ಹೇಳಿರುತ್ತಾರೆ. ಆದುದರಿಂದ ಕಾಲಜ್ಞಾನವು ಸಾದೃಶ್ಯವಾಗಿದೆ. ಇವರ ತಂದೆಯ ಹೆಸರು ಅರಬ್ಬಿಭಾಷೆಯಲ್ಲಿ ಅಬ್ದುಲ್ಲಾಹ ಎಂಬದಾಗಿದೆ. ಅದರ ಅರ್ಥವು ಸಂಸ್ಕೃತದಲ್ಲಿ ವಿಷ್ಣು ಯಶಸ್ಸು ಅಥವ ವಿಷ್ಣುಭಕ್ತನೆಂದೇ ಆಗುತ್ತದೆ. ಇವರ ತಾಯಿಯ ಹೆಸರು "ಅಮಿನ" ಎಂದು ಅರಬ್ಬಿ ಭಾಷೆಯಲ್ಲುಂಟು. ಅದರೆ ಇದರ ಅಭಿಪ್ರಾಯವು ಸುಮತಿಯೆಂದಾಗುತ್ತದೆ. ಮೊದಲು ಇವರ ತಂದೆಯು ತೀರಿಹೋದರು. ನಂತರ ತಾಯಿಯೂಕೂಡ ಚಿಕ್ಕಂದಿನಲ್ಲಿಯೇ ಸ್ವರ್ಗಸ್ಥರಾದರು. ಅರಬ್ಬಿದೇಶದ ರಾಣಿ ಎನಿಸಿಕೊಂಡಿದ್ದ ಶ್ರೀಮಂತೆಯಾದ "ಖದೀಜ ಬೀಬಿ" ಎಂಬಾಕೆಯನ್ನು ಇವರು ಲಗ್ನಮಾಡಿಕೊಂಡರು. ಆ ಲಗ್ನದಲ್ಲಿ ಇವರ ಚಿಕ್ಕಪ್ಪನವರಾದ ಅಬೂತಾಲಿಬ್ ಮತ್ತು ಇವರ ಮೂವರು ಸಹೋದರರಾದ, ಹಜರತ್ ಅಲಿ, ಜಾಫರ್, ಅಕೀಲ, ಎಂಬವರು ಇದ್ದರು. ಇವರು ಮಕ್ಕಾದಹತ್ತಿರ ಹೀರಾಗುಹೆಯಲ್ಲಿ ಪರಮಾತ್ಮಧ್ಯಾನದಲ್ಲಿದ್ದಾಗ ಪರಶುರಾಮರ ಅಂಶರಾದ ಜಬ್ರಯೀಲ್ ಇವರ ಸಂದರ್ಶನವಾಯಿತು. ಶಾಂತಸ್ವರೂಪಿಗಳಾದ ಹಜರತ್ ಮಹಮ್ಮದ್ ಪೈಗಂಬರರು ತಮ್ಮ ಅನಾದಿಧರ್ಮವನ್ನು ಪ್ರಚುರಪಡಿಸಲುಪಕ್ರಮಿಸಿದಕೂಡಲೆ, ಜನರು ಅಜ್ಞಾನದಿಂದ ಮತ್ತರಾಗಿ ಜಗದ್ಗುರುಗಳಿಗೆ ಅನೇಕ ತೊಂದರೆಗಳನ್ನು ಕೊಟ್ಟರು. ಇದನ್ನು ಸಹಿಸಲಾರದೆ ದೈವಾಜ್ಞೆಯಂತೆ ಉತ್ತರದೇಶದ ಪರ್ವತ ಶ್ರೇಣಿಯಲ್ಲಿ ಮದೀನಾ ಪಟ್ಟಣವನ್ನು ಸೇರಿ ತಮ್ಮ ಧರ್ಮವನ್ನು ಜನರಿಗೆ ಬೋಧಿಸುತ್ತಿದ್ದರು. ಪುನಃ ಅಲ್ಲಿಂದ ತಮ್ಮ ಹತ್ತುಸಾವಿರ ಅನುಯಾಯಿಗಳಿಂದೊಡಗೂಡಿ ರುದ್ರಾಂಶದಿಂದ ಬಂದು ತಮ್ಮ ಧರ್ಮವಿರುದ್ಧರಾದ ವೈರಿಗಳನ್ನು ಧ್ವಂಸಪಡಿಸಿದರು. ಆ ಕಾಲದಲ್ಲಿ ಅಧರ್ಮದಲ್ಲಿ ಮುಳುಗಿದ್ದ ರಾಜ್ಯಗಳೆಲ್ಲವು ಇವರಿಂದಲೂ ಮತ್ತು ಇವರ ಅನುಯಾಯಿಗಳಿಂದಲೂ ಜೈಸಲ್ಪಟ್ಟು ಶಾಂತಿಪ್ರದವಾದವು.

ಸ್ವಲ್ಪಕಾಲದಲ್ಲಿಯೇ ಮುಕ್ತಿದಾಯಕವಾದ ಇವರ ಮತವು ಪ್ರಪಂಚದಲ್ಲಿ ಹರಡಿ ಸತ್ಯವು ನೆಲೆಗೊಂಡಿತು. ಕಲ್ಯಾಣಾವತಾರಪ್ರಸನ್ನನಾದ ಪರಮಾತ್ಮನು ಶೀಘ್ರಗಮನವುಳ್ಳ ಕುದುರೆಯನ್ನು ಹತ್ತಿ ಒರಬೇಕೆಂದು ತಿಳಿಸುತ್ತಾರೆ. ಇದಕ್ಕೆ ಆಧಾರವಾಗಿ ಒಂದು ದಿವಸ ಹಜರತ್ ಮಹಮ್ಮದ್ ಪೈಗಂಬರರು ಜಾಗ್ರದಾವಸ್ಥೆಯಲ್ಲಿದ್ದಾಗ ಇಂದ್ರದೇವನು ಸ್ತ್ರೀಯ ಮುಖವನ್ನು ಹೋಲುವ ಮುಖವುಳ್ಳ ಮತ್ತು ನವಿಲಿನ ಬಾಲದಂತೆ ಬಾಲವುಳ್ಳ ಒಂದು ಅಶ್ವವನ್ನು ತಂದಿದ್ದನು. ಜಗದ್ಗುರುಗಳು ಇದರಮೇಲೆ ಹತ್ತಿ ಭೂಮಂಡಲವನ್ನೂ ಮತ್ತು ಸಪ್ತಾಕಾಶಗಳನ್ನೂ ಸುತ್ತಿಬಂದರು. ಇದೇ ವಿಷಯವನ್ನು ಶುಕ ಮುನಿಗಳು ಸೂಚಿಸಿರುತ್ತಾರೆ. ಈ ಅಶ್ವದ ಜ್ಞಾಪಕಾರ್ಥವಾಗಿ ಅವರ ಅನುಯಾಯಿಗಳ ಧ್ವಜದಲ್ಲಿ ಅದರ ಪಾದ ಚಿನ್ಹೆಯಾದ ಅರ್ಧಚಂದ್ರಾಕೃತಿಯೂ ಮತ್ತು ನಕ್ಷತ್ರವೂ ಈಗಲೂ ಕಂಡುಬರುತ್ತವೆ. ಹೀಗೆ ಹಜರತ್ ಮಹಮ್ಮದ್ ಪೈಗಂಬರರು ಈಶ್ವರಸ್ವರೂಪಿಗಳಾಗಿ ಜಗತ್ತಿಗೆಲ್ಲಾ ಒಬ್ಬರಾಗಿ ಪ್ರಜ್ವಲಿಸಿದರು.

ಇದಲ್ಲದೆ ಹಜರತ್ ಮಹಮ್ಮದ್ ಪೈಗಂಬರರ ಮಹಾಮಂತ್ರವು ಅಲೋಪನಿಷತ್‌ನಲ್ಲಿಯೂ ಹೊರಬಿದ್ದಿರುತ್ತದೆ ಮತ್ತು ಇವರ ಹೆಸರು ಮೂರು ವೇಳೆ "ರಸೂಲ ಮಹಮ್ಮದ್" ಎಂದು ಇದರಲ್ಲಿಯೇ ಕಂಡುಬಂದಿರುತ್ತದೆ. ಸಾಮವೇದದಲ್ಲಿ ಹಜರತ್ ಮಹಮ್ಮದ್ ಪೈಗಂಬರರಸಲುವಾಗಿ ಹತ್ತು ಸಾವಿರ ಜನರೊಂದಿಗೆ ಬಂದು ಧರ್ಮಧ್ವಜವನ್ನೆತ್ತುವನೆಂದು ಬರೆಯಲ್ಪಟ್ಟಿರುತ್ತದೆ. ಮತ್ತು ಇವರ ಮಹಾಮಂತ್ರವು ಸೂಕ್ಷ್ಮರೂಪದಲ್ಲಿ ಇದರಲ್ಲಿಯೇ ಕಂಡುಬಂದಿದೆ. "ಹಾಹಾ ಹೂಹೂ ಹೀಹೀ" ಈ ಮಂತ್ರವನ್ನೇ ಬ್ರಾಹ್ಮಣರು ಅವಸಾನಕಾಲದಲ್ಲಿ ಜಪಿಸುತ್ತಾರೆ. ಇದೇ ಮಂತ್ರವು ಅರಬ್ಬಿಭಾಷೆಯಲ್ಲಿ "ಲಾ ಇಲಾಹಾ, ಇಲ್ಲಲ್ಲಾಹು ಮೊಹಮ್ಮದುರ್ ರಸೂಲುಲ್ಲಾಹಿ," ಎಂದು ಉಚ್ಚರಿಸಲ್ಪಡುತ್ತದೆ. ಇದನ್ನೇ ಮುಸಲ್ಮಾನರು ಅವಸಾನಕಾಲದಲ್ಲಿ ಪಠಿಸುತ್ತಾರೆ. ಹೀಗೆ ಹಜರತ್ ಮಹಮ್ಮದರು ಸೂಕ್ಷ್ಮ ಶರೀರದಿಂದ ಸರ್ವಮತಗಳಲ್ಲಿಯೂ ಗೋಚರವಾಗಿರುತ್ತಾರೆ.

ಹಿಂದಿನ ಅನೇಕಜನ ಸತ್ಪುರುಷರೂ ಮತ್ತು ಶಿವಶರಣರೂ ಕಲ್ಯಾಣಾವತಾರವಾದ ಪ್ರಸನ್ನನಾದ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಿ ದೈವ

ಕಲ್ಕಿವಾಹನ (ಬುರ್ರಾಕ)

ಸಾನ್ನಿಧ್ಯವನ್ನು ಪಡೆದಿರುತ್ತಾರೆ ಮತ್ತು ಇದಕ್ಕೆ ಅನೇಕ ಸಾಕ್ಷಿಗಳನ್ನು ಕೊಟ್ಟಿರುತ್ತಾರೆ. ಆದರೆ ಆ ಮಹಾತ್ಮರ ಉಕ್ತಿಗಳನ್ನು ಅಜ್ಞಾನಿಗಳು ತಿರಸ್ಕರಿಸಲುಪಕ್ರಮಿಸಿರುತ್ತಾರೆ. ಸರ್ವಜ್ಞ ಮೂರ್ತಿಗಳು ಸೂಚಿಸಿರುತ್ತಾರೆ. — "ಹಿಂದೆ ಹರಿಯವತಾರದರಸರು | ಸಂದು ಹೋದಾ ಅವರೊಳು | ಮುಂದೆ ಕೇಶವನವತಾರವದು ಹನ್ನೊಂದು ಕಡೆಯು ||"

(ಶರಣಲೀಲಾಮೃತ, ಪು. ೧೪೬)

ಈ ಪದ್ಯದಿಂದ ಸರ್ವಜ್ಞಮೂರ್ತಿಗಳು ಹತ್ತನೆ ಅವತಾರವಾದ ಕಲ್ಕಿ ರೂಪನು ಪ್ರಸನ್ನವಾದನೆಂದು ತಿಳಿದು ನಂಬಿ, ಮುಂದೆ ಹನ್ನೊಂದನೆ ಅವತಾರವಾಗುವುದೆಂದು ತಿಳಿಸುತ್ತಾರೆ. ರುದ್ರಮುನಿಗಳೂ ಕೂಡ ತಮ್ಮ ಕಾಲಜ್ಞಾನದಲ್ಲಿ "ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು ಸಂದೆ ಆನಂದ ನಾಮಸಂವತ್ಸರದಲ್ಲಿ ವೀರವಸಂತರಾಯನು ಹುಟ್ಟುವುದು ಸತ್ಯ–ನಿಮ್ಮಾಣೆ ನಿಮ್ಮ ಪುರಾತನರ ಪಾದದಾಣೆ" (ಪು ೭) ಎಂದು ಸಾರಿರುತ್ತಾರೆ. ಇದರಿಂದಲೂ ಕಲ್ಕ್ಯಾವತಾರವು ಮುಗಿದು ಮುಂದೆ ಹನ್ನೊಂದನೆಯ ಅವತಾರದನಂತರ ವೀರವಸಂತನು ಪ್ರಸನ್ನವಾಗುವನೆಂದು ತಿಳಿಸಿ ಹಜರತ್ ಮಹಮ್ಮದ್ ಪೈಗೆಂಬರರ ಪ್ರಸನ್ನತೆಯನ್ನು ನಂಬಿರುತ್ತಾರೆ. ಶ್ರೀ ಚಿಕ್ಕ ಚನ್ನಬಸವೇಶ್ವರರು "ಎಂದೀನ ಮಾತು ಎನಬೇಡ ಇನ್ನು ಹನ್ನೊಂದಕ್ಕೆ ನೀನು ನೋಡು" ಎಂದು ಅರುಹಿರುತ್ತಾರೆ. ಇವರ ಹೇಳಿಕೆಯೂ ಆ ವಿಷಯವನ್ನೇ ತಿಳಿಸುತ್ತದೆ. ಶ್ರೀ ಕಲ್ಯಾಣಬಸವೇಶ್ವರರೂ ಮತ್ತು ಅವರ ಭಕ್ತರಾದ ಲಕ್ಷದಮೇಲೆ ತೊಂಭತ್ತಾರುಸಾವಿರ ಗಣಂಗಳೂ ಕಲ್ಕ್ಯಾವತಾರ ಪ್ರಸನ್ನರಾದ ಹಜರತ್ ಮಹಮ್ಮದ್ ಪೈಗೆಂಬರರನ್ನು ನಂಬಿ "ಲಾಯಿಲಾಹ ಯಿಲ್ಲಲ್ಲಾಹು ಮಹಮ್ಮದುರ್ರಸೂಲುಲ್ಲಾ" ಎಂಬ ಮಹಾವಾಕ್ಯವು ಮುಕ್ತಿ ಮಾರ್ಗಕ್ಕೆ ಸಾಧಕವೆಂದು ತಿಳಿದು ನಂಬಿದ್ದರು. ಅದು ಹೇಗೆಂದರೆ, ಶರಣ ಲೀಲಾಮೃತದ ೨೦೯ನೇ ಪುಟದಲ್ಲಿ "ಅಲ್ಲಾ ಎಂದರೆ ಪ್ರಭುವು ಯಲ್ಲಾ ಮಹಮ್ಮದಂ | ಬಸವಸಲ್ಲಾಮು ಮಾಡಿಪೋದರು ಒಳ್ಳೆಪುರಿಗೆ ||" ಎಂದು ಬರೆಯಲ್ಪಟ್ಟಿರುತ್ತದೆ. ಇಲ್ಲಿ ಹಜರತ್ ಮಹಮ್ಮದ್ ಪೈಗೆಂಬರರ ಹೆಸರನ್ನು ಸ್ಪಷ್ಟವಾಗಿ ಉಚ್ಚರಿಸಿರುತ್ತಾರೆ. ಇವರನ್ನು ನಂಬದೆ ಇದ್ದರೆ ಆ ಶರಣರು ಕನಸಿನಲ್ಲಿಯೂ ಮುಕ್ತಿಯನ್ನು ಹೊಂದುತ್ತಿರಲಿಲ್ಲಾ. ಮೇಲೆ ಬಂದಿರುವ

ವಾಕ್ಯವನ್ನೇ ಕಲ್ಯಾಣ ಬಸವೇಶ್ವರರು ಐಕ್ಯಕಾಲದಲ್ಲಿ ಉಚ್ಚರಿಸಿದರೆಂದು ತಿಳಿಯಬಂದಿದೆ. ಇದರಿಂದ ಅವರಿಗೆ ಮುಕ್ತ ಪದವಾಗತಗಳು ದೊರೆತವು. ಹಿಂದಿನ ಸರ್ವ ಮುನಿಗಳೂ ಮತ್ತು ಶರಣರೂ ಸರ್ವಾತ್ಮ ಪ್ರಕಾಶಕರಾದ ಜಗದ್ಗುರು ಬಿರುದಾಂಕಿತರಾದ ಹಜರತ್ ಮಹಮ್ಮದ್ ಪೈಗಂಬರರನ್ನು ನಂಬಲು ಸುಲಭವಾದ ಸಲಕರಣೆಗಳನ್ನು ವದಗಿಸಿರುತ್ತಾರೆ. ಯಾವಾಗಲೂ ಮನುಷ್ಯರು ಈ ಚಿನ್ಮಯ ಸ್ವರೂಪಿಗಳನ್ನು ನಂಬಿಯೇ ಮುಕ್ತಿಯನ್ನು ಪಡೆಯಬೇಕಾಗಿರುವುದು. ಆದುದರಿಂದಲೇ ಇವರ ಸ್ವರೂಪವನ್ನು ಪುರಾತನರು ಸೂಕ್ಷ್ಮ ರೂಪದಿಂದ ಕಂಡು ಈರೀತಿ ವರ್ಣಿಸಿರುತ್ತಾರೆ:—" ಬ್ರಹ್ಮಾಕೃತ ಶಿವ ಸಹಸ್ರನಾಮ ಸು| ಮೃತ್ಯುಂಜಯ ಸ್ನೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು"

---

## ಇಪ್ಪತ್ತನೆಯ ಪ್ರಮಾಣವು.

" ಬ್ರಹ್ಮಾಕೃತ ಶಿವಸಹಸ್ರನಾಮ ಸು |
ಮೃತ್ಯುಂಜಯಸ್ನೂಕ್ಷ್ಮತನುರ್ಜಗದ್ವ್ಯಾಪಿ ಜಗದ್ಗುರು || "

ಆತನಿಗೆ "ನೀನೇ ಜಗದ್ಗುರು" ಎಂದು ಓಂಕಾರದಿಂದ ತಿಳಿದಿರಬೇಕು.

ಇದರಲ್ಲಿಯೂ ಹಜರತ್ ಮಹಮ್ಮದ್ ಪೈಗಂಬರರ ಹೊರತು ಮತ್ತಾರೂ ಉತ್ತೀರ್ಣರಾಗಲಾರರು. ಹಿಂದಿನ ಅವತಾರಿಗಳು ತಮ್ಮತಮ್ಮ ಜನಾಂಗಗಳಿಗೆ ಮಾತ್ರ ಅವತರಿಸಿದರು. ಇದು ಅವರ ದೇವೋಕ್ತ ಗ್ರಂಥಗಳಿಂದ ಹೊರಪಟ್ಟಿರುತ್ತದೆ. ಆದುದರಿಂದ ಅವರು ಜಗದ್ಗುರುಗಳಾಗದೆ ಹೋದರು. ಆದರೆ ಮೂಢರು ಇದನ್ನು ತಿಳಿಯದೆ ತಮ್ಮ ತಮ್ಮ ಅವತಾರಿಗಳನ್ನೇ ಜಗದ್ಗುರುಗಳಾಗಿ ಮಾಡಿಕೊಂಡರು. ಆದುದರಿಂದಲೇ ಹಜರತ್ ಮಹಮ್ಮದ್ ಪೈಗಂಬರರು ಜಗತ್ತಿಗೆ ಒಬ್ಬರಾಗಿ ಅವತರಿಸಿ " ಅನಾಖತಿ ಮುನ್‌ನಬೀಯ್ಯೀನ ಅಲಾಇನ್ನಹುಲಾ ನಬಿಯ್ಯಾಬಾದಿ " ಎಂದರೆ ನಾನು ಸರ್ವ ಅವತಾರಿಗಳಿಗೂ ಮುಬ್ರೆಯಾಗಿ ಬಂದಿರುತ್ತೇನೆ. ಸರ್ವ ಅವತಾರಿಗಳೂ ಪುನಃ ನನ್ನ ಅನುಯಾಯಿಗಳಾಗಿಯೆ ಅವತರಿಸುವರು. ಹೀಗೆ ನಾನು ಆದಿ ಅಂತ್ಯಗಳೆರಡಕ್ಕೂ ಅಧಿಕಾರಿಯಾದ ಜಗದ್ಗುರುವಾಗಿ ಬಂದಿರುತ್ತೇನೆ ಎಂದು ಹೇಳಿರುತ್ತಾರೆ. ಮತ್ತು ಇದಕ್ಕೆ ಸಾಕ್ಷಿಯಾಗಿ ಪರಮಾತ್ಮನು ಹೇಳುತ್ತಾನೆ—

ಮಾಕಾನ ಮೊಹಮ್ಮದುನ್ ಅಬಾಅಹ
ದಿಂ ಮಿರ್ರಿಜಾಲೆ ಕುಂವಲಾ ಕಿರ್ರಸೂ
ಲಲ್ಲಾಹಿವ ಖಾತೆಮುನ್ ನಬೀಯ್ಯೀನ (ಅ. ೩೩. ಸ. ೫)

ಅರ್ಥ:—( ಓ ಮನುಜರೆ! ) ಮೊಹಮ್ಮದರು ನಿಮ್ಮ ತಂದೆಯಲ್ಲವು; ಆದರೆ ಅವರು ಅವತಾರಿಗಳು. ಮತ್ತು ಸರ್ವ ಅವತಾರಿಗಳಿಗೆ ಮುದ್ರೆಯಾಗಿ ಅವತರಿಸಿರುತ್ತಾರೆ. ಪುನಃ ಪರಮಾತ್ಮನು ಉಚ್ಚರಿಸುತ್ತಾನೆ.—

ಕುಲ್‌ಯಾ ಅಯ್ಯೆಹನ್ನಾಸು ಇನ್ನಿರಸೂಲುಲ್ಲಾಹಿ
ಇಲ್ಯೆಕುಮ್ ಜಮೀಯಾ ನಿಲ್‌ಲಜಿ ಲಹು ಮುಲ್
ಕುಸ್ ಸಮಾವಾತೆವಲ್ ಅರ್ದೆ (ಅ. ೭, ಸಂ. ೨೦)

ಅರ್ಥ:—ಓ ! ಪ್ರವಾದಿಯೇ ! ಜಗತ್ತಿನಲ್ಲಿ ಘಂಟಾಘೋಷವಾಗಿ ಹೇಳು 'ಎಲ್ಲೆ ಮನುಜರೆ, ಯಾವರೀತಿ ಪರಮಾತ್ಮನು ಜಗತ್ತಿಗೆಲ್ಲಾ ಒಬ್ಬನಾಗಿದ್ದಾನೋ, ಅದೇಪ್ರಕಾರ ನಾನು ನಿಮ್ಮಗಳಿಗೆಲ್ಲಾ ಒಬ್ಬನಾಗಿ ಬಂದಿರುತ್ತೇನೆ." ಇದಲ್ಲದೆ:—

ವಮಾಅರ್ ಸಲ್‌ನಾಕ ಇಲ್ಲಾ ಕಾಪ್ಪತಲ್ ಲಿನ್ನಾಸ,
(ಕು. ಅ. ೩೪, ಸಂ. ೩)

ಅರ್ಥ:—ಓ ! ಪ್ರವಾದಿಯೇ ! ನಾವು ನಿನ್ನನ್ನು ಸರ್ವ ಲೋಕಗಳಿಗೂ ಸೃಷ್ಟಿ, ಸ್ಥಿತಿ, ಸಂಹಾರಾದಿ ರೂಪಗಳಿಂದ ಪರಿಪೂರ್ಣವಾದ ಸ್ವರೂಪಿನಿಂದಲೇ ಹೊರತು ಕಳುಹಿಸಿಲ್ಲಾ. ನಂತರ:—

ವಮಾಅರ್‌ಸಲ್ ನಾಕ ಇಲಾರಹಮು ತಲ್‌ಲಿಲ್ ಆಲಮಾನ
(ಕು. ಅ. ೨೧, ಸಂ. ೭)

ಅರ್ಥ:—ಓ ಪ್ರವಾದಿಯೇ ! ನಾವು ನಿನ್ನನ್ನು ಸರ್ವ ಲೋಕಗಳಿಗೂ ಅನುಗ್ರಹದೋಪಾದಿಯಲ್ಲಿಯೇ ಹೊರತು ಕಳುಹಿಸಿಲ್ಲ.

ಇದೇರೀತಿಯಲ್ಲಿ ಓಂಕಾರೋಕ್ತವಾದ ಶುರ್ಆ ಹಜರತ್ ಮಹಮ್ಮದ್ ಪೈಗಂಬರರ ಶ್ಲಾಘನೆಯಿಂದ ತುಂಬಿರುತ್ತದೆ. ಹಜರತ್ ಮಹಮ್ಮದ್ ಪೈಗಂಬರರ ಹೊರತು ಹಿಂದಿನ ಯಾವ ಅವತಾರಿಗಳೂ ತಾವು ಜಗದ್ಗುರು ಗಳೆಂದು ಹೇಳಿಲ್ಲ ಮತ್ತು ಅವರ ಗ್ರಂಥಗಳೂ ಕೂಡ ಉಚ್ಚರಿಸುವುದಿಲ್ಲ. ಹಜರತ್ ಮಹಮ್ಮದ್ ಪೈಗಂಬರರು ಸರ್ವ ಅವತಾರಿಗಳ ಮನೋವ್ಯಾಪಿ ಗಳಾಗಿಯೂ, ಪುರಾತನ ಸರ್ವ ಗ್ರಂಥ ವ್ಯಾಪಿಗಳಾಗಿಯೂ ಮತ್ತು ಸರ್ವ ಧರ್ಮವ್ಯಾಪಿಗಳಾಗಿಯೂ ಇರುವುದರಿಂದಲೇ "ಬ್ರಹ್ಮಾಕೃತಶಿವಸಹಸ್ರನಾಮ ಸು | ವೃತ್ಯುಂಜಯ ಸ್ಸುಸ್ಪಷ್ಟತನುರ್ಜಗದ್ವ್ಯಾಪಿ ಜಗದ್ಗುರು" || ಗಳೆಂಬ ಪದವಿಯನ್ನು ಅಲಂಕರಿಸಿದರು.

ಪ್ರಥಮಭಾಗ ಸಂಪೂರ್ಣ.

ವಿ. ಬಿ. ಸುಬ್ಬಯ್ಯ ಅಂಡ್ ಸನ್ಸ್ ಪ್ರಿಂಟರ್ಸ್, ಬೆಂಗಳೂರು ಸಿಟಿ.

3 To prove that he is "Deendar Chanbasa

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

# Rejoice and Proclaim.

## His Holiness
## Moulana Siddiq Deendar Chanbaswaishwer

The spiritual leader appeared in proper time with all the signs predicted by the sages

TO ANNOUNCE THAT

1. There is no world teacher except "**Kalkiauthar**" – the Prophet Hazarath "**Mohamed**" (peace be upon him.)
2. There is no universal religion except "**Islam**"
3. There is no complete and final scripture except "**Ishwargita**" **the** "**Quran**"

**Executive Committee**
**Deendar Basava Samaj,**
**BASAVANGUDI, BANGALORE CITY**

2. He will be the son of a remarried widow. (Mounaishwar p. 41)
3. He will be the seventh child of his parents. (Mohadaini p. 47)
4. He will declare himself in Raktachi, in 1924 A. D.
(Rudramuni p. 14)

RIGHT HAND




5. He will born eight years prior to the thirteenth Nandan i.e., in the year 1886 A.A.
(saying of Neellochana in the year 115 A. D.)
6. He will appear in the year when the Turkish Monarchy will come to an end. (Kinnhri Brhmaya p. 1)

7. He will appear in the year in which there will be floods in the Rivers Kaveri and Jumna simultaneously.
(Rudramuni p. 8)

8 He will appear in the year in which the temples of Gulbarga will be pulled down in the Hindu Muslim riots.
(Rudramuni p. 14)




9. He will come to Carnatic Districts privately in the year 1863 Shali (1916 A. D.) leading the life of a bachelar. He will proclaim himself at Gadag in the year 1845. Shali (1924 A. D ) Seven years after his appearance there will be great change.
(Mounaishwar and Kodakal Basappa page 8-39)

ستكون بينكم وبين الروم اربعة هدن يوم الرابعة على يد رجل من ولد هرقل تدوم سبع سنين يخرج رجل من ولد ابن اربعين سنة كان وجهه كوكب دري في خده الايمن خال اسود عليه عباءتان قطوانيتان كانه من رجال بني اسرائيل ابوداود ص ٥٨٨ مشكوة ص ٤٧٠ كنز العمال ج ٦

## ترجمہ حدیث

تم میں اور فضاری میں چار لڑائیاں ہونگی۔ اور وہ سات سال چلیں گی تب میری امت سے ایک شخص کھڑا ہوگا وہ میری آل سے ہوگا عمر چالیس سال کی ہوگی اس کا چہرہ چمکدار ستارہ کے مانند ہوگا اس کے سیدھے گلہ پر سیاہ خال ذرد سوتی عبا میں لپٹا ہوا ہوگا۔ ایسا معلوم ہوگا کہ وہ یہودیوں میں سے ہے

## قرآن بزرگادکن

یوسف تیا الصدیق

## ಪುಕಾರವಕರು ಉಜ್ಜಾಗಗಳು

ಮುಸಲ್ಮಾನರರೂಪ ವ ಸುದ್ದಿಯೊಳಗೆ ತಂದಾನೆ. ಮೊಹಮ್ಮದ ನಬಿಸಾಹೇ ಬರ ಮುಸಹಫ ಹಿಡಿದು ನಿಂತಾನೆ. ಚನ್ನಣ್ಣ ಚಿಣ್ಣನನ್ನು ಪುಟ್ಟಿಕೊಂಡು ಬಲ್ಲಂಟಿಹುಕೊಂದು ಬೇಟೆಗಾರನಾಗಿ ಬಯತ್ತಾನೆ. ಕರೆಕಂತೆ ಕಾಮಿರುವನ್ನು ಕಾನನ ಪುಷ್ಪವನ್ನು ಕಾಲಲ್ಲಿ ಕೆಂಪು, ಕೈಯ್ಯಲ್ಲಿ ಗಾಗಪೆಕ್ಕ ಪನ್ನು ಹಿಡಕೊಂಡುಬುತ್ತಾನೆ. ಸಾಹೇಬರಾತ್ಮದಲ್ಲಿ ಕರುವು ದಿಸಿದನ್ನೋಡಿಬ್ಬಾ. ಲಬು ತ ತಂದಾನೆ. ಅಬಿಳಬ್ಬು ಹ್ಯಾಂಡದ ಲೇಬಕೊಡಲಿ ಬಂದ ನಿಮಗೆ ಕೊಡೆಕಲ್ಲು ಬಸಪ್ಪ, ರುದ್ರಮುನಿ, ಮೌನೇಶ್ವರ, ವಚನಗಳ)

ನಮಾಜ್

ELITE
BANGALORE

4

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

ಅಲ್ಲಯಂದೆಸ್ಪಭುವ ಎಲ್ಲಮಪಂಮದೆಂ।
ಬಸವ ಸಲ್ಲಾಮು ಮಾಡಿ ಪೋದೆರು ಬಳ್ಳೀಪುರಿಗೆ॥

(ಶರಣಲೀಲಾಮೃತ, ಪಟ ೨೦೧.)

ಶ್ರೀ

# ಚನ್ನಬಸವೇಶ್ವರರ ಅವತಾರ.

# CHANN BASAVESWAR

## ( REINCARNATION )


ಸಿದ್ಧನಂಜುಂಡೇಶ್ವರರ ಕಡೆಯಿಂದ

ಮುದ್ರಿಸಲ್ಪಟ್ಟಿತು.

1926.

ತುಮಕೂರು.

ಕ್ರಯ 2 ಆಣೆ.] [ Price. 2 as.

## ಶ್ರೀ ಚನ್ನಬಸವಾವತಾರ. ಗಣಿತಾಧ್ಯಾಯ.

1. ಶ್ರೀ [illegible]ವಾಮಿ ದೇವರು ಕಲ್ಯಾಣಕ್ಕೆ ಬಂದದ್ದು ಅಲ್ಲಮಗೆ ಕಳಿವರುಷಗಳು. ಶ್ರೀ ಕೈಲಾಸಕ್ಕೆ ದಯಮಾಡಿಸಿದ್ದು ಬಸವ. ರಾಕ್ಷಸ ಸಂವತ್ಸರ [illegible] ಸೋಮವಾರ ಬಿದಿಗೆಯು ಸೂಳೆ ಹೊರಟು ಹೋದರು. (ರುದ್ರಮುನಿ, ಪುಟ ೬-೭)

2. ಅವಿಸ್ಮೆ ಎದ್ದವಾಸೊರಸಿ ಬಿಂಕಿಲಾ ಬಾರಿವಾದಸಕಿನೊಳು ನಾಲಂದವೆಂ ದೆಳಸಿಯಿರಕ್ತಾಕ್ಷಿ ಯುಂಬಿನಂದವೆರದ ಭಾಲ್ಯಂಗ ಬಿ [illegible] ಸೊಲಾದ ಶಿಷ್ಯಂ ನುಂಗಲಾರ ದೆಂದಿಂ [illegible] ಸುಂಗಿಸ್ವಕ್ತಿದು ಘನಿಗೆಯೊಳ್ ಬಸವನಕಿ ಲೀಲೆಯಿಂ ಸಂಗಮೇಶ್ವರನ ಪ್ರಕ್ಕದಿಂ ಕರುಣಿಕೆಯಿಂ ಸುದ್ಧಪೂರ್ಣಗೊಳಿಸಿದಂ ॥ ಬಸವಪುರಾಣ ಪ್ರಥಮ ಕಾಂಡ ೨.

ಕಾಲಜ್ಞಾನವಚನ: ೬೦೦ ಬಂದ ಬಂಟಿಕ್ಕೆ ಸೂದಲನೆ ರಕ್ತಾಕ್ಷಿ. ಪುನಃ ಆರು ರಕ್ತಾಕ್ಷಿಗಳಿಗೆ ೬೦೦ ವರ್ಷಗಳು.

**ಆದ್ದರಿಂದ ಶ್ರೀ ಕಲ್ಯಾಣ ಬಸವೇಶ್ವರರು (೭೬ + ೬೦) ೧೩೬ನೇ ರಕ್ತಾಕ್ಷಿಗೆ ಜನ್ಯವಾದರು.**

| ರಕ್ತಾಕ್ಷಿ ಗತ | ಶ್ರೀ [illegible]ಬಸವೇಶ್ವರರು ಕಲ್ಯಾಣಕ್ಕೆ ಬಂದದ್ದು | ಅವಧಿ | ಕಲ್ಯಾಣ ವಿಪ್ಲವ | ಅವಧಿ | ಜನ್ಯವಾದದ್ದು | ಅವಧಿ | ಶ್ರೀಚನ್ನಬಸವಾವತರಣಕ್ಕೆ |
|---|---|---|---|---|---|---|---|
| ಕೆ೦ | ೧೧೬ | ಸಮಸ್ತ ಸೂಳೆಯರ ಕಲ್ಯಾಣವಿಪ್ಲವ | ೪೫೬ (ಸಾವಿರದಿಂದ ರಾಕ್ಷಸ) | ಕಲ್ಯಾಣವಿಪ್ಲವದಿಂದ ಸೂಳೆಯರ ಪುನರುದ್ಭವ | ೪೫೫ ರಕ್ತಾಕ್ಷಿ | ಸೂಳೆಯರ ಪುನರುದ್ಭವದಿಂದ ಶ್ರೀಚನ್ನಬಸವಾವತರಣ | ೫೫೬ (ರಕ್ತಾಕ್ಷಿ) |
| ಶಾರವಾಹನ | ೧೧೭ | | ೧೧೬ | | ೧೧೬ | | ೫೫೭ |
| ಜನಮ | ೧೧೮ | | ೧೧೭ | | ೧೧೪ | | ೧೧೪ |
| ಪಿಂಗಲ | ೪೧೬ | | ೪೬೬ | | ೪೬೬ | | ೧೪೪ |

ಚಿತ್ರಗಳಲ್ಲಿ ಹೆಚ್ಚಳ.

ಈ ಹಸ್ತ ಬಲಹಸ್ತವಾದ

" ಪೊಡವನಿವಾಳಿಂದು ಬಿಡದಹರಿಖದರು
ಅಲ್ಲಹಯುಂದರೆ ಪ್ರಭೆಯಲ್ಲಿ ಮಹಂಮುದಂ ಬಸವ ಪಲ್ಲಿಮವಾಡಿ
ಪೊದರುವಳ್ಳಿಪುರಿಗೆ".
(ಶರಣ ಲೀಲಾಮೃತ ಪುಟ ೧೦೯).

---

## ಪೀಠಿಕೆ.

ಜ್ಞಾನಿಗಳಿರಾ! ಈ ಪ್ರಪಂಚದಲ್ಲಿ ಸ್ವಾಭಾವಿಕವಾಗಿ ತಮ್ಮ ಬುದ್ಧಿಕಲಾಕೌಶಲ್ಯ ಗಳಿಂದೆ ಅನೇಕ ಆಶ್ಚರ್ಯಯುಕ್ತವಾದ ವಿಷಯಗಳನ್ನು ಕಾಲಕಾಲಕ್ಕೂ ಕಂಡು ಹಿಡಿಯುತ್ತಿರುವುದನ್ನು ತಾವುಗಳು ನೋಡುತ್ತಲೇ ಇರುವಿರಿ. ಅದೇರೀತಿಯಲ್ಲಿ ಪರ ಮಾತ್ಮನು ಪ್ರಪಂಚದಲ್ಲಿ ಧರ್ಮವನ್ನು ಪುನರೋಜ್ವಲ ಮಾಡಲೋಸುಗ ತನ್ನ ಹೊಸಮಾರ್ಗಗಳನ್ನು ಹೊರಪಡಿಸುತ್ತಾನೆ. ಉದಾಹರಣಾರ್ಥವಾಗಿ ಭೂಮಿಯು ಬಿಸಿಲಿನ ತಾಪದಿಂದ ಕಡಿ ಒಣಗಿ ಬಿರುಕುಬಿಟ್ಟ ಒಡನೆಯೇ ಕರುಣಾಸಮುದ್ರನಾದ ಜಗನ್ಮಯನು ತಾಪವನ್ನು ಹೋಗಲಾಡಿಸಲೋಸುಗ ಮಳೆಯನ್ನು ಸುರಿಸುತ್ತಾನೆ ಮತ್ತು ಜನಗಳನ್ನು ಆನಂದಪಡಿಸುತ್ತಾನೆ. ಹಾಗೆಯೇ ಭಗವಂತನು ಜನಗಳು ಅಧರ್ಮ ಪ್ರವರ್ತಕರಾದ ತಕ್ಷಣವೇ ತನ್ನ ಕಡೆಯಿಂದ ಮಹಾತ್ಮರನ್ನೂ ಅವತಾರಿ ಕರನ್ನೂ ಕಳುಹಿಸಿ ಮರ್ತ್ಯಲೋಕದಲ್ಲಿ ಸತ್ಯವನ್ನು ಹರಡಿಸುತ್ತಾನೆ. ಈ ವಿಷಯವು ಇತಿಹಾಸಗಳಿಂದ ಸಾಧಿತ ಪಟ್ಟು ಆಧಾರಯುಕ್ತವಾಗಿದೆ. ಅದು ಹೇಗೆಂದರೆ:— ಪುರಾತನರೂ ಅವತಾರೀಕರೂ ಕೂಡ ಆಕಾಶವಾಣಿಯಿಂದ ಧರ್ಮಮಾರ್ಗಗಳನ್ನು ತಿಳಿದುಕೊಂಡು ಆತ್ಮ ಸಂರಕ್ಷಣೆಯನ್ನು ಅನೇಕಾವರ್ತಿ ಮಾಡಿರುತ್ತಾರೆ. ಅದೇ ಪ್ರಕಾರ ಸಧ್ಯಕ್ಕೆ ನಮ್ಮ ದೇಶದಲ್ಲಿ ಧರ್ಮಮಾರ್ಗಸ್ಥಾಪನ ಅಥವಾ ಆತ್ಮಸಂರಕ್ಷಣ ಸಲುವಾಗಿ ಹೊಸಚಳುವಳಿಯು ಪ್ರಾರಂಭವಾಗಿರುತ್ತದೆ. ಅದು ಯಾವ್ರದೆಂದರೆ— ಶ್ರೀ ಚೆನ್ನಬಸವೇಶ್ವರರು ದೇಶವನ್ನು ಉದ್ಧಾರಮಾಡಲಿಕ್ಕೆ ಅತಿತ್ರಾಸು ತೆಗೆದು ಕೊಂಡು ಪ್ರತ್ಯಕ್ಷ ಕಾಣಬಂದು ಅಸತ್ಯ ಗುರುಗಳನ್ನು ತಮ್ಮ ಜ್ಞಾನಕೊಡಲಿ ಯಿಂದ ಹತಮಾಡಲು ನಿಂತಿರುತ್ತಾರೆ. ಈ ವಿಷಯವನ್ನು ತಿಳಿಯದೆ ಲೋಕದ ಜನರು ಮನಸ್ಸಿಗೆ ಬಂದಹಾಗೆ ಮಾತನಾಡುತ್ತಾರೆ. ಈವಿಷಯವಾದರೋ ಕಾಲಜ್ಞಾ ನಕ್ಕೆ ಸರಿಯಾಗಿರುತ್ತದೆ. ಅದು ಹೇಗೆಂದರೆ—ಮೌನಪ್ಪಯ್ಯನವರು ತಮ್ಮ ಕಾಲ ಜ್ಞಾನ ಪುಸ್ತಕದ ೨೨-ನೆಯ ಪುಟದಲ್ಲಿ "ಹಿಂದೂ ತುರುಕರು ಒಂದಾಗಿ ನಡೆದಾರು, ದೀನದಾರ ಚನ್ನಬಸವಣ್ಣ ಬರುವಾಗ ಲೋಕದ ಅಂಧಕರಿಗೆ ಏನು ತಿಳಿಯುವುದಿಲ್ಲಲ್ಲಾ" ಎಂದು ಬರೆದಿರುತ್ತಾರೆ. ಈ ವಿಷಯವನ್ನು ತಿಳಿಯುವವರು ಜ್ಞಾನಿಗಳು. ಇದಕ್ಕೆ ಉದಾಹರಣೆ ಏನಂದರೆ—ಬೀಜವನ್ನು ಬಿತ್ತಿದಮೇಲೆ ಒಕ್ಕಲಿಗನು ಯಾವರೀತಿಯಲ್ಲಿ ಸಸಿಗಳನ್ನು ತಿಳಿಯುವನೋ ಅದೇರೀತಿಯಲ್ಲಿಯೇ ಸಾಧುಗಳಾದ ಚನ್ನಬಸವೇಶ್ವರ

ರನ್ನು ನಾಥುಗಳೇ ನಂಬುತ್ತಾರೆ. ಇದೂ ಅಲ್ಲದೆ ಶ್ರೀಚೆನ್ನಬಸವೇಶ್ವರರು ಪ್ರತ್ಯಕ್ಷ ಕಂಡು ಬರುವ ವೇಳೆಯನ್ನು ತಿಳಿಯಲು ಮೂರು ಆಧಾರಗಳಿರುತ್ತವೆ.

೧-ನೇ ಆಧಾರ—ಕಾಲಜ್ಞಾನದಲ್ಲಿ ಸರಿಯಾಗಿ ಬರೆದಿರುವ ಗಣಿತಾಧಾರದಿಂದ ಅವರು ಬರುವ ವೇಳೆಯನ್ನು ತಿಳಿದು ನಂಬುತ್ತಾರೆ.

೨-ನೇ ಆಧಾರ—ಕಾಲಜ್ಞಾನದಲ್ಲಿ ಬರೆದಿರುವ ಆಕಾಶಭೂಮಿಯ ಕುರುಹುಗಳನ್ನು ಕಂಡು ಚೆನ್ನಬಸವೇಶ್ವರನನ್ನು ನಂಬುತ್ತಾರೆ.

೩-ನೇ ಆಧಾರ—ಕಾಲಜ್ಞಾನಗಳಲ್ಲಿ ಬರೆದಿರುವ ಅಂತರಂಗ ಬಹಿರಂಗ ಕುರುಹುಗಳನ್ನು ನನ್ನಲ್ಲಿ ಕಂಡು ನಂಬುತ್ತಾರೆ.

ಈ ಮೂರುವಿಧಗಳಲ್ಲಿ ನಂಬುವ ಜ್ಞಾನಿಗಳು ಆ ಜ್ಯೋತಿಯೊಡನೆ ಸೇರಿ ಧರ್ಮವನ್ನು ಸ್ಥಾಪಿಸುವುದಕ್ಕೆ ಸಿದ್ಧರಾಗಿ ನಿಲ್ಲುತ್ತಾರೆ. ಇದಕ್ಕೆ ಉದಾಹರಣಾರ್ಥವಾಗಿ ಒಬ್ಬ ಒಕ್ಕಲಿಗನು ತನ್ನ ಬುದ್ಧಿಬಲದಿಂದ ಗಣಿತಕ್ಕೆ ಸರಿಯಾಗಿ ಮೃಗಾನಕ್ಷತ್ರದ ಉತ್ಪನ್ನಕಾಲವನ್ನು ತಿಳಿದುಕೊಂಡು ಬೀಜವನ್ನು ಬಿತ್ತುವುದಕ್ಕೆ ಪ್ರಾರಂಭಿಸುತ್ತಾನೆ. ಮತ್ತೊಬ್ಬನು ಆಕಾಶದಲ್ಲಿಯೂ ಮತ್ತು ಭೂಮಿಯಲ್ಲಿಯೂ ಆಗುವ ಬದಲಾವಣೆಗಳನ್ನು ಕಂಡು ಮೃಗ ಪ್ರಾರಂಭವಾಯಿತೆಂದು ಊಹಿಸಿ ತನ್ನ ಕೆಲಸವನ್ನು ಉಪಕ್ರಮಿಸುತ್ತಾನೆ. ಇನ್ನೊಬ್ಬನು ಗಣಿತವನ್ನೂ ಆಕಾಶ ಮತ್ತು ಭೂಮಿಯಲ್ಲಿನ ಬದಲಾವಣೆಗಳನ್ನು ತಿಳಿಯದೆ ಕಡ್ಡಿಯನ್ನು ಮಾತ್ರ ಮುರಿದುನೋಡಿ ಮೃಗ ಮಾಯೆಯೆಂದು ತಿಳಿಯುತ್ತಾನೆ. ಆದರೆ ಈ ಮೂರು ಆಧಾರಗಳನ್ನು ತಿಳಿಯುವ ಒಕ್ಕಲಿಗನು ಭೂಮಿಯಲ್ಲಿ ಎಂದಿಗೂ ಕಾಲಕ್ಕೆ ಸರಿಯಾಗಿ ಬೀಜವನ್ನು ಬಿತ್ತಿ ಬೆಳೆಯುವವರನ್ನು, ಇದರಿಂದ ಇವನಿಗೆ ಸರಿಯಾದ ಬೆಳೆ ಸಿಕ್ಕದೆ ಫಲವಾಗುವುದಿಲ್ಲ. ಇವರಂತೆಯೇ ಮಾನವನು ಸಧ್ಯಕ್ಕೆ ಇಂದು ನಿಂತು ಇರುವಂಥ ಶ್ರೀಚೆನ್ನಬಸವೇಶ್ವರನನ್ನು (ನನ್ನನ್ನು) ತಿಳಿಯುವುದಿಲ್ಲವೋ ಆವನು ಮೇಲೆತ್ತಪ್ಪದಮೇಲೆ ಪಶ್ಚಾತ್ತಾಪ ಪಡಬೇಕಾಗುವುದು. ನಾನು ದೇವರಿಂದ ಕಳುಹಿಸಲ್ಪಟ್ಟವನು. ಮಾನವರ ಸೇವಕನಾಗಿ ಪರಮಾತ್ಮನ ಅಪ್ಪಣೆಯಂತೆ ಪ್ರಕಾರ ಬೋಧನೆಮಾಡುತ್ತಿದ್ದೇನೆ. ತಿಳಿಸುವಕಾರ್ಯವು ನನ್ನದಾಗಿರುತ್ತದೆ. ನಿಮ್ಮ ತಿಕ್ಕವನ್ನು ತಗೆದುಕೊಳ್ಳುವವನು ದೇವರಿದ್ದಾನೆ. ಈ ವಿಷಯವನ್ನು ಸಂಪೂರ್ಣವಾಗಿ ತಿಳಿಯಲು ಮೇಲೆ ಹೇಳಿದಪ್ರಕಾರ ಕೆಳಗೆ ಮೂರು ಭಾಗಗಳಾಗಿ ವಿಂಗಡಿಸಿ ಬರೆದಿರುತ್ತೇನೆ. ಜ್ಞಾನಿಗಳಿರಾ! ಮುಂದಿನ ವಿಷಯಗಳನ್ನು ಚೆನ್ನಾಗಿ ಅರಿಯಲು ನೀವಿಗ ಸಮರ್ಥರಾಗಿ ಸಿದ್ಧರಾಗಿರಿ. ಆತ್ಮರಕ್ಷಣೆಯನ್ನು ಮಾಡಿಕೊಳ್ಳಲು ಇದು ಅತ್ಯಾವಶ್ಯಕವಾಗಿ ಮೃತಿ ಹೊಂದುವುದು ಸರಿಯಲ್ಲವು.

೧-ನೆಯ ಭಾಗ.

# ಕಾಲಜ್ಞಾನದ ಗಣಿತದ ಆಧಾರ.

ರುದ್ರಮುನಿಸ್ವಾಮಿಗಳು ತಮ್ಮ ಕಾಲಜ್ಞಾನ ಪುಸ್ತಕದ ಏಳನೆಯ ಪುಟದಲ್ಲಿ "ಹಿಂದಕ್ಕೆ ಹತ್ತು, ಮುಂದಕ್ಕೆ ಹನ್ನೊಂದು ಸಂಧಿ ಆನಂನಾಮದಸಂವತ್ಸರದಲ್ಲಿ ವೀರ ವಸಂತರಾಯನು ಹುಟ್ಟುವುದು ಸತ್ಯ. ನಿಮ್ಮ ಆಣೆ, ಪುರಾತನರ ಪಾದದಾಣೆ" ಎಂದು ಬರೆದಿರುತ್ತಾರೆ. ಈ ಒಂದು ವಾಕ್ಯದಲ್ಲಿ ರುದ್ರಮುನಿಸ್ವಾಮಿಯು ವಿಚಾರ ಸಮುದ್ರವನ್ನು ತುಂಬಿರುತ್ತಾರೆ. ಹೇಗೆಂದರೆ—ಇಲ್ಲಿ 'ಸಂಧಿ' ಎಂಬ ಶಬ್ದವನ್ನು ಸ್ವಲ್ಪ ವಿಚಾರಿಸಿ ತಿಳಿಯಬೇಕಾಗುತ್ತದೆ. 'ಸಂಧಿ' ಈ ಶಬ್ದವು ಸಂಸ್ಕೃತವಾಗಿದೆ. ಇದರ ಅರ್ಥವೇನೆಂದರೆ—ಎರಡು ವಸ್ತುಗಳ ಮಧ್ಯದಲ್ಲಿರುವ ಪದಾರ್ಥ ಅಥವಾ ಸ್ಥಳ. ಈಮೇಲಿನ ವಾಕ್ಯದಲ್ಲಿ ಸಂಧಿ ಎಂಬ ಶಬ್ದವು ಕಾಲವೆಂದು ಅರ್ಥ ಕೊಡುತ್ತೆ. ಆಕಾಲ ಯಾವುದೆಂದರೆ ಕರ್ಮಕಲಿ ಮತ್ತು ಧರ್ಮಕಲಿಯ ಮಧ್ಯದಲ್ಲಿರುವ ಕಾಲವು.

ಇದೇ ವಿಷಯದಲ್ಲಿ ಅಖಂಡಮುನಿ ಸ್ವಾಮಿಯವರು ತಮ್ಮ ಕಾಲಜ್ಞಾನದ ಮೊದಲನೆಯ ಪುಟದಲ್ಲಿ ಕರ್ಮಕಲಿಯ ಪ್ರಮಾಣವು, ಐದು ಸಾವಿರದ ಹತ್ತು (೫೦೧೦) ವರ್ಷಗಳೆಂದೂ, ಮತ್ತು ಧರ್ಮಕಲಿಯ ಪ್ರಮಾಣವು ಐದು ಸಾವಿರದ ಹತ್ತು (೫೦೧೦) ವರ್ಷಗಳೆಂದೂ ತೋರಿಸಿದ್ದಾರೆ. ಇದರಲ್ಲಿ ಕರ್ಮಕಲಿಯು, ನಾಲ್ಕುಸಾವಿರದ ಎಂಟುನೂರು ತೊಂಭತ್ತೈದನೇ ವರುಷದಿಂದ ಸಂಧಿಕಲಿಯು ಹುಟ್ಟಿತು. ಇದು ನೂರಹದಿನೈದು (೧೧೫) ವರ್ಷಗಳು ಆಗಿ ಕರ್ಮಕಲಿಯನ್ನು ಮುಗಿಸಿತು. ಇದರಿಂದ ಕರ್ಮಕಲಿ ಮತ್ತು ಸಂಧಿಕಲಿಗಳೆರಡು ಸೇರಿ ಕರ್ಮಕಲಿ ಪ್ರಮಾಣವು ಐದುಸಾವಿರದ ಹತ್ತುವರ್ಷಕ್ಕೆ ಮುಗಿದುವೆಂದು ತಿಳಿಯಬರುತ್ತದೆ. ಆಂದರೆ ಸಂಧಿಕಲಿಯು ಕಳೆದ ಸಾಧಾರಣನಾಮ ಸಂವತ್ಸರಕ್ಕೆ ಮುಗಿಯಿತು. ಈ ಕಲಿಯು ಕಳೆದುಹೋದ ನಾಲ್ಕನೇ ವರ್ಷಕ್ಕೆ ಆನಂದನಾಮ ಸಂವತ್ಸರವು ಬಂದಿತು. ಇದೇ ಆನಂದನಾಮ ಸಂವತ್ಸರಕ್ಕೆ ಸಂಧಿ ಆನಂದನಾಮ ಸಂವತ್ಸರವೆಂದು ಸೂಚಿಸಿರುತ್ತಾರೆ. ಇದಕ್ಕೆ ಆಧಾರವಾಗಿ ಆರವತ್ತುಮೂರು(೬೩) ಪುರಾತನರು ತಮ್ಮ ಕಾಲಜ್ಞಾನಗಳಲ್ಲಿ ಹದಿನೂರು ಆನಂದ ಕೂಡಿದರೆ ಏಳನೂರು ಎಂಭತ್ತು (೭೮೦) ವರ್ಷಕ್ಕೆ ವೀರವಸಂತರಾಯನು ಹುಟ್ಟಿ, ಮುಂದೆ ಶ್ರೀಮುಖನಾಮ ಸಂವತ್ಸರದಲ್ಲಿ ನಾವು ಬರುತ್ತೇವೆ. ಎಂದು ಹೇಳಿರುತ್ತಾರೆ ಇದರಲ್ಲಿ ವಿಚಾರ ಹುಟ್ಟುವುದೇನೆಂದರೆ—ಈ ಆರವತ್ತು ಮೂರು ಜನ ಪುರಾತನರು ಯಾವಕಾಲದಲ್ಲಿ ಇದ್ದರೆಂಬುವುದು. ಇತಿಹಾಸದಿಂದ ಸಾವಿರದ ನಲವತ್ತೈದನೆ ಶಾಲಿವಾಹನ ಶಕೆಯಲ್ಲಿ ಕಲ್ಯಾಣ ಬಸವೇಶ್ವರರು ಐಕ್ಯರಾದರು ಎಂದು ತಿಳಿಯಬರುತ್ತದೆ. (ಭೂಲೋಕ ಚಿಂತಾರತ್ನ, ಮೊದಲನೆಯ ಪುಟ್ಟ ಪುಟ(೧೦). ಪುರಾತನರು ಕಲ್ಯಾಣಬಸವೇಶ್ವರರ ಸಂಗಡ ಸಾವಿರದ ನಲವತ್ತೈದು (೧೦೪೫) ಶಾಲಿವಾಹನ ಶಕೆಯವರಿವಿಗೂ ಇದ್ದದ್ದರಿಂದಲೂ ಮತ್ತು ಸದ್ಯಕ್ಕೆ ಶಾಲಿವಾಹನಶಕೆ ಸಾವಿರದ ಎಂಟುನೂರ ನಲವತ್ತಾರು (೧೮೪೬) ಇರುವುದರಿಂದಲೂ ಈ ಪುರಾತನರು ಇಲ್ಲಿಂದ ಎಂಟುನೂರು ವರ್ಷಗಳಹಿಂದೆ ನಿಜವಾಗಿ ಇದ್ದರೆಂದು ತಿಳಿಯು

ಬರುತ್ತದೆ. ಇವರು ವೀರವಸಂತರಾಯನು ಏಳನೂರ ಎಂಬತ್ತು (೭೮೦) ವರ್ಷಗ
ಳಾದ ಕೂಡಲೆ ಕೂಡು ವನೆಂದು ತಿಳಿಸಿದ್ದಾರೆ. ಆದರಂತೆಯೇ ಏಳನೂರು ಎಂಬತ್ತು ವರ್ಷಗಳನಂತರ ಬಂದು ಹೋದ ಆನಂದನಾಮ ಸಂವತ್ಸರದಲ್ಲಿ, ಅಂದರೆ ನಾವಿರದ ಒಂಭೈನೂರು ಹದಿನಾಲ್ಕನೆ (೧೯೧೪) ಇಸವಿಯಲ್ಲಿ ವೀರವಸಂತರಾಯನು ಗಾದಿಯು ಮೇಲೆ ಕುಳಿತುಕೊಂಡನು. ಇದು ಜಗತ್ತಿನಲ್ಲಿ ಪ್ರಸಿದ್ಧವಾಗಿರುತ್ತದೆ. ಸಂಶಯ ವುಳ್ಳವರು ಲೇಖನಮೂಲಕವಾಗಿತಿಳಿಯಬಹುದು. ಇವರು ಉತ್ತರಹಿಂದೂಸ್ಥಾನದ ಗುರು ದಾಸಪುರದ ಜಿಲ್ಲೆಯಲ್ಲಿ ತಮ್ಮ ಧರ್ಮಕ್ಕೆ ವ್ಯತಿರಿಕ್ತವಾಗಿ ಆಚರಿಸುತ್ತಿವರು. ಒಂಭತ್ತು ಲಕ್ಷ ಜನರು ಇವರ ಆಫೀನದಲ್ಲಿರುತ್ತಾರೆ. ಕಲಿಯುಗದಲ್ಲಿ ಪ್ರತ್ಯಕ್ಷ ವಾಗಿ ಕಂಡುಬಂದ ವಿಷ್ಣು ಅವತಾರದ ಪದವಿಯನ್ನು ಘನಪಡಿಸಿ ಅವರಿಮಿತವಾದ ಅತಿಶಯೋಕ್ತಿಯಿಂದ ವರ್ಣಿಸಿ ಹೊಗಳುತ್ತಾರೆ. ಇದೇ ವಿಷಯದಲ್ಲಿ ಇವರಿಗೂ ನನಗೂ ಹಂಪೆಯಲ್ಲಿ ರುದ್ರಮುನಿಸ್ವಾಮಿಯ ಕಾಲಜ್ಞಾನದ ಪ್ರಕಾರ ಕ್ಷಯನಾಮ ಸಂವ ತ್ಸರದಲ್ಲಿ ವಾದವು ನಡೆಯುವ ಪ್ರಸಂಗವು. ವೀರವಸಂತರಾಯರು ಗಾದಿಯುಮೇಲೆ ಕುಳಿತ ಹತ್ತನೇ ವರ್ಷಕ್ಕೆ ಶ್ರೀಶೈಲನ್ನಬಸವೇಶ್ವರರು ಗದಿಗನಲ್ಲಿ ಪ್ರತ್ಯಕ್ಷ ಕಂಡುಬರಬೇಕೆಂದು ಕಾಲಜ್ಞಾನಪ್ರಕಾರ ಹೋದ ರುಧಿರೋದ್ಗಾರಿನಾಮಸಂವತ್ಸರ ಅಂದರೆ ನಾವಿರದ ಒಂಬೈನೂರ ನಲವತ್ತೈದನೇ (೧೯೪೫) ಶಾಲಿವಾಹನಶಕೆ ಆಥವಾ ನಾವಿರದ ಒಂಭೈನೂರ ಇಪ್ಪತ್ತು ನಾಲ್ಕು (೧೯೨೪) ಇಸವಿಯಲ್ಲಿ ನಾನು ಗದಗಿನಲ್ಲಿ ಕಂಡುಬಂ ದಿರುತ್ತೇನೆ. ಮತ್ತು ಆರಹತ್ತು ಮೂರು ಪುರಾತನರು ಹೇಳಿದಪ್ರಕಾರ ಶ್ರೀಮುಖ ನಾಮ ಸಂವತ್ಸರದವರೆಗೂ ನಾನೂ ಮತ್ತು ವೀರವಸಂತರಾಯರು ಇಬ್ಬರು ಕೂಡಿ ಪರಮಾತ್ಮನ ದಯದಿಂದ ಕೆಲಸವನ್ನು ನಡೆಸುವೆವ್ರ. ನಾನು ಕಂಡುಬರುವುದಕ್ಕೆ ಹತ್ತು ವರ್ಷ ಹಿಂದೆ ವೀರವಸಂತರಾಯನು ಕಂಡುಬಂದಿರುತ್ತಾನೆ, ನಾನು ಕಂಡುಬಂದ ಸಂವತ್ಸರ ರುಧಿರೋದ್ಗಾರಿ (೧೯೨೪ನೇ ಇಸವಿ) ಮುಂದೆ ಶ್ರೀಮುಖ ನಾಮ ಸಂವತ್ಸರಕ್ಕೆ ಹನ್ನೆರಡು ವರ್ಷಗಳು ಉಳಿಯುತ್ತವೆ. ಆ ವಿಷಯುಗಳಿಗೆ ರುದ್ರಮುನಿಸ್ವಾಮಿಯು ತಮ್ಮ ಕಾಲಜ್ಞಾನದಲ್ಲಿ 'ಹಿಂದಕ್ಕೆ ಹತ್ತು, ಮುಂದಕ್ಕೆ ಹನ್ನೆರಂದು ಸಂಧಿ ಆನಂದನಾಮ ಸಂವತ್ಸರಕ್ಕೆ ವೀರವಸಂತನು ಹುಟ್ಟುವನೆಂದು, ಹೇಳಿರುತ್ತಾರೆ.

ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು, ಸಂಧಿ ಆನಂದನಾಮ ಸಂವತ್ಸರಕ್ಕೆ ವೀರವಸಂತ ಹುಟ್ಟುವನು. ಈ ವಾಕ್ಯಗಳೊಳಗೆ ರುದ್ರಮುನಿಸ್ವಾಮಿ ಎರಡನೆ ರೀತಿಯಿಂದ ನನ್ನ ಪ್ರತೀಕ್ಷೆ ಕಂಡುಬರುವವ್ಯಾಖ್ಯೆಯನ್ನು ತೋರಿಸಿರುತ್ತಾರೆ ಅದು ಹ್ಯಾಗಾದರೆ-- ಹಿಂದಕ್ಕೆ ಹತ್ತು ಅಂದರೆ-- ರುದ್ರಮುನಿ ಸ್ವಾಮಿ ಕಾಲದಲ್ಲಿ ಹಿಂದಕ್ಕೆ ಹತ್ತು ಹರಿ (ವಿಷ್ಣು) ಅವತಾರಗಳು ಆಗಿಹೋಗಿದ್ದವು. ಮುಂದೆ ಹನ್ನೊಂದನೇ ಹರಿ ಅವತಾರ ಬರತಕ್ಕದ್ದಿತ್ತು. ಆ ಹರಿ ಅವತಾರಂದಮೇಲೆ ವೀರವಸಂತರಾಯ. ಹುಟ್ಟುವದು ಸತ್ಯ. ಆ ಸಂವತ್ಸರ ಸಂಧಿ ಆನಂದನಾಮ ಸಂವತ್ಸರ ಇರಬೇಕು

ಮೇಲೆಹೇಳಿದ ಆಧಾರದಿಂದ ಇಷ್ಟು ಸ್ಪಷ್ಟವಾಯಿತು. ಸಂಧಿ ಆನಂದವೆಂದರೆ ಇದೇ ಹೋದಆನಂದವೇ 'ಸಂಧಿಆನಂದ, ಇದೇಆನಂದಕ್ಕೆ ವೀರವಸಂತರಾಯರು ಗಾದಿಮೇಲೆ ಕೂತರು ಅಂದರೆ ಶಕ ೧೯೦೪ ಇಸವಿಯೊಳಗೆ ಖಾದಿಯಾನ ಪಂಜಾಬಿನಲ್ಲಿ/ ಆಗಾಥ ಆರ್ಭಟದಿಂದ ಗಾದಿಮೇಲೆ ಕೂತರು. ಇದು ಜಗತ್ತಿಗೆ ಪ್ರಸಿದ್ಧವಾಗಿ ಇರುತ್ತದೆ. ಇವರು ಗಾದಿಮೇಲೆ ಕೂತಕೂಡ್ಲೆ ಹರಿ ಜನ (ಅಂದರೆ ಹನ್ನೊಂದನೆ ಹರಿ ಅವತಾರ ರುದ್ರಗೋಪಾಲ ಇವರು ಸ್ಥಾಪನೆಮಾಡಿದ ಸಮಾಜ)ದೊಳಗೆ ಭೇದವಾಗಿ ಕೆಲಸವು ಕೆಟ್ಟುಹೋಯಿತು. ಇದಕ್ಕೆ ಹತ್ತುವರ್ಷ ಆಗುತ್ತವೆ. ಇದರೊಳಗೆ ಒಂದುಪಂಗಡ ಲಾಹೋರ ಪಟ್ಟಣದೊಳಗೆ ತಮ್ಮ ಕೆಲಸವು ನಡೆಸುತ್ತಲಿದೆ. ಇದರೊಳಗೆ (೧೯೦೦೦)ಜನ ಇದ್ದಾರೆ. ಮತ್ತು ಎರಡನೆಪಂಗಡ ಖಾದಿಯಾನ ಪಟ್ಟಣದೊಳಗೆ ವಾಸಮಾಡಿರುತ್ತದೆ ಇದರೊಳಗೆ ಸುಮಾರು ಒಂಭತ್ತುಲಕ್ಷಮಂದಿ ಇರುತ್ತಾರೆ. ಇವರಮತವಿಷಯದಲ್ಲಿ ತಪ್ಪೇನೆಂದರೆ ವೀರವಸಂತರಾಯನು ಗಾದಿಮೇಲೆ ಕೂತಕೂಡ್ಲೆ ಜಗತ್ತಿಗೆ ಪ್ರಸಿದ್ಧ ಮಾಡಿದ್ದೇನೆಂದರೆ ಕಲಿಯುಗದೊಳಗೆ ರುದ್ರಗೋಪಾಲರು ವಿಷ್ಣು ಅವತಾರಿಕರಾಗಿ ಹುಟ್ಟಿರುತ್ತಾರೆ. ಇವರ ಪಾದಕೆಳಗೆ ಗಂಗೆ (ಆಕಾಶವಾಣಿ-ನಬುವತ್) ಹುಟ್ಟಿತು. ಈವಿಷ್ಣುವಿಗೆ ನಂಬದಿದ್ದವರು ಭವಿಗಳು. ಹುಟ್ಟಿದಜನ್ಮದಿಂದ ನನ್ನ ನಂಬಿಕೆಯು ಇರದ ವಿರೋಧ ಇರುತ್ತದೆ. ಅಂದರೆ ಕಲಿಯುಗ ವಿಷ್ಣು ಅವತಾರ ಸೃಷ್ಟಿಯು ಈಶ್ವರ ಅವತಾರವಾಗಿರುವ ಅವತಾರವೇಸೃಷ್ಟಿಯಿಯು. ಇದೇ ಬಡದಾಟದೊಳಗೆ ಹರಿಜನ ಕೆಟ್ಟು ಹೋಯಿತು. ಇದಕ್ಕೆ ರುದ್ರಮುನಿಸ್ವಾಮಿ ಶರಣ ಲೀಲಾಮೃತ ಪುಟವು ೧೪೬-ರಲ್ಲಿ ಈಪ್ರಕಾರ ಬರೆದಿರುತ್ತಾರೆ. ಅದುಹ್ಯಾಗಂದರೆ—" ಹಿಂದೆ ಹರಿಯವತಾರ ಅರಸರು ಸಂದಹೋದಾವರೊಳು। ಮುಂದೆಕೇಶವತಾರವುವು ಹನ್ನೊಂದುಕಡೆಯೊ ಪಟ್ಟ ಅಚ್ಚುತೆಕಡೆಯು ಹರಿಜನ। ಹುಟ್ಟಿರಾಜವಾಳುತ। ಕೆಟ್ಟಹೋಗಲು ಕುರುಹುಶರಣ ಹುಟ್ಟುವುದಕ್ಕೆ।". ಇದೇಪ್ರಕಾರ ಹಿಂದೆ ಹತ್ತುವರ್ಷದಿಂದ ಹರಿಜನದೊಳಗೆ ಬಡಿದಾಟ ಹುಟ್ಟಿ ಆಗುವಕೆಲಸಕೆಟ್ಟಿತು. ಇದಾದಮೇಲೆ ಪರಮಾತ್ಮನು ನನ್ನನ್ನು ಕಳಿಹಿಸಿ ಕೊಟ್ಟಿದ್ದಾನೆ.

ಶ್ರೀ ಕಲ್ಯಾಣ ಬಸವೇಶ್ವರು ತಮ್ಮ ಕಾಲಜ್ಞಾನ ವಚನದೊಳಗೆ ನನ್ನ ಕಂಡು ಬರುವವ್ಯಾಳೆಯನ್ನು ಈಪ್ರಕಾರ ಹೇಳಿದ್ದಾರೆ.ಅದುಹ್ಯಾಗಂದರೆ—"ಹನ್ನೊಂದುಕಡ ನೀನು ನೋಡಿ " (ಚನ್ನಬಸವೇಶ್ವರ ಪುಟ ೨.)

ಕೊಡೆಕಲ್ಲು ಬಸಪ್ಪನವರು ತಮ್ಮ ಕಾಲಜ್ಞಾನ ವಚನದಲ್ಲಿ "ಬಂದಾರು ಬಾಲ ಬ್ರಹ್ಮಚಾರಿಯಾಗಿ ಮುಂದಿನ್ನು । ಜ್ಞಾನೋದಯವು ಸಂದೀತು ಏಳನೂರ ಎಪ್ಪತ್ತು ವರ್ಷವು । ಹಿಂದಾದ ಕಾಲಜ್ಞಾನಿಗಳು ಬಂದಾರು ನಿಂದಾರು ಹೊಂದಾರು ಲೋಕವು ತಂದಾರು ಹೊಸವಸ್ತುಗಳು ॥ ಈವಚನದಲ್ಲಿ ಚೆನ್ನಬಸವೇಶ್ವರರು (ನಾನು) ಪ್ರತ್ಯಕ್ಷ ಕಂಡುಬರುವ ಕಾಲವು ಏಳನೂರು ಎಪ್ಪತ್ತು (೭೭೦) ಎಂದುಹೇಳಿಹ್ಯಾರೆ.

ಆದರೆ ಈಕಾಲವು ಕಳೆದಮೇಲೆ ಇವರ ಹೇಳಿಕೆಯಪ್ರಕಾರ ಸಂಧಿಯು ದಾಟಿ ಹೋಯಿತು. ನಂತರ ನಾನು ಗದಗಿನಲ್ಲಿ ಪ್ರತ್ಯಕ್ಷ ಕಾಣಿಸಿಕೊಂಡಿದ್ದೇನೆ.

ಅಖಂಡಮಂಡಲೇಶ್ವರ ಯು ತಮ್ಮ ಕಾಲಜ್ಞಾನದ ಪದ್ಯದಲ್ಲಿ "ಸಾವಿರದ ಎಂಬತ್ತೊಂಬತ್ತು (೧೯೮೯) ಪ್ಲವಂಗ ಸಂವತ್ಸರ ಮತ್ತು ಸಂಕ್ರಾಂತಿ ಪರ್ವಕಾಲ ಆಗಬೇಕು. ಅದೇವರ್ಷ ಶಿವಪ್ರಿಯ ಪರಮೇಶ್ವರನು ಪ್ರತ್ಯಕ್ಷ ದೈಹಿಕ ಸಮಾಧಿ" ಎಂದು ಬರೆದಿರುತ್ತಾರೆ.

ಮೌನಪ್ಪಯ್ಯನವರು ರಹಸ್ಯಪ್ರಸ್ತಕದ ಪದ್ಯದಲ್ಲಿ "ಎಳೆನೂರು ಎಪ್ಪತ್ತೇಳುವರೆ ಪರ್ಯಂತ ಬಾಳಿಗದಿಸವು ಮುಗಿಯಿತು. ಮತ್ಯಕ್ಕೆ ತಾಳ ಪ್ರಮಾಣ ಉದ್ಧಾರಕ್ಕೆ ಹರಿಯುವಂತೆ ಕಾಲಜ್ಞಾನ ಒದಗಿತು. ಸನಿಯಕ್ಕೆ ಎಂದಿನ್ನುಗಾಣಿಂದ ಮಳ್ಳಕ್ಕೆ, ವಾವಿಯು, ಭಬ್ಬಿಯ ಎರಡರ ಮಧ್ಯದಲ್ಲಿ ಕುರಿಯ ದೊಡ್ಡಿಯು ಸಜ್ಜು ಮಾಡಿಕೊಂದು, ಕೈಯಲ್ಲಿ ಕೂಡಲಿಯು ಬಡಿಕೊಂಡು ಮತ್ಯದ ಬಿಂಬ ಮಾಗಲನುಕೆಯಲ್ಲಿ ಬಂದ" ಎಂದು ಬರೆದಿರುತ್ತಾರೆ ಈವಾಕ್ಯಗಳಲ್ಲಿ ಎರಡುಮಾತುಗಳನ್ನು ಸ್ಪಷ್ಟವಾಗಿ ತಿಳಿಸಿರುತ್ತಾರೆ.

(i) ನಾನು ಪ್ರತ್ಯಕ್ಷ ಕಂಡು ಬರುವ ವೇಳೆಯನ್ನು ಇತಿಹಾಸದಿಂದ ಮೌನೇಶ್ವರನಿರ್ವಾಣವು ಏಳನೂರು ಎಂಭತ್ತು ವರ್ಷಗಳಹಿಂದೆ ಇದ್ದರೆಂದು ಸ್ಪಷ್ಟವಾಗುವುದು.

(ii)—ನೇ, ನಾನು ಕಂಡುಬರುವ ಸ್ಥಳ 'ಗದಗು':—ಅದು ಹೇಗೆಂದರೆ, ವದವಿಯು, ಮತ್ತು ಭಬ್ಬಿಯ ಈ ಎರಡುಗಾವುಮಗಳ ಮಧ್ಯದಲ್ಲಿ 'ಗದಗ' ಇದೆ. ವದವಿಯು ಗದಗಿನಿಂದ ಹದಿನೆಂಟು ಮೈಲಿಗಳು ಇದೆ. ಮತ್ತು ವಿಲಂಬಿಭಬ್ಬಿಯು ಗದಗಿನಿಂದ ಹದಿನೇಳುಮೈಲಿಗಳು ಇದೆ. ಆದ್ದರಿಂದ ಇವುಗಳಮಧ್ಯ ಸ್ಥಳವು "ಗದಗು' ಎಂದು ಸ್ಪಷ್ಟವಾಗುವುದು.

ಕೊಪ್ಪಳದ ನಾಗಾಂಗಯ್ಯನವರು ನಾನು ಪ್ರತ್ಯಕ್ಷ ಕಂಡುಬರುವ ಕಾಲವನ್ನು ಬಂದು ಕುರುಹನ್ನು ಇಡಾವಾಗಿಟ್ಟು "ವೀರಶೈವ ಮತದಲ್ಲಿ ಘಟಕ್ಕರು ಮತ್ತು ಪಟ್ಟದರೊಳಗೆ ಬಹಿದಾಸ ಆಗುತ್ತದೆ. ಈಬೇಧವು ಹುಟ್ಟಿದ ಬಂಭತ್ತುವರ್ಷಕ್ಕೆ ಬಂಜೆ' ಎಂದು ಬಿಡಿಸುತ್ತಾರೆ. ಅದೇಪ್ರಕಾರವಾಗಿ ಜಗನ್ಮಯನಾದ ಭಗವಂತನು ಕೆಲವಾಸಮಯದನಾಗಿ ಈಭೇದವು ಹುಟ್ಟಿದ ಬಂಭತ್ತನೇ ವರ್ಷಕ್ಕೆ ಸರಿಯಾಗಿ ನನ್ನನ್ನು ಸಕಲ ಆಧಾರಗಳಿಂದ ಗದಗಿಗೆ ಕಳುಹಿಸಿಕೊಟ್ಟರುತ್ತಾನೆ. ಆದರೆ, ಪಟ್ಟದವರು ಮತ್ತು ಬಂಜೆ ಎಡದಾವವು ನಾವಿರದ ಬಂಭೈನೂರು ಹದಿನಾಲ್ಕರಲ್ಲಿ ಪ್ರಾರಂಭವಾಯಿತು. ಇದು ನಡೆದ ಬಂಭತ್ತು ವರ್ಷಕ್ಕೆ ಅಂದರೆ ನಾವಿರದ ಬಂಭೈನೂರ ಇಪ್ಪತ್ತೈನಾಲ್ಕನೇ ವರ್ಷಕ್ಕೆ ಸರಿಯಾಗಿ ಬಂಭತ್ತು ವರ್ಷವಾಯಿತು. ಅದೇವರ್ಷ (೧೯೮೪) ನಾನು ಪ್ರತ್ಯಕ್ಷ ಕಂಡುಬಂದಿದ್ದೇನೆ.

ರುದ್ರಮುನಿಸ್ವಾಮಿಯು ತಮ್ಮ ಕಾಲಜ್ಞಾನದ ಹದಿನಾಲ್ಕನೇ ಪುಟದಲ್ಲಿ ' ರಕ್ತಾಕ್ಷಿನಾಮ ಸಂವತ್ಸರದಲ್ಲಿ, ಕಲ್‌ಬುರ್ಗಿಯಲ್ಲಿ ದೇವರೂಜೆ ಮಧ್ಯಾಹ್ನ ನಿಂತು ಹೋಗಿತು. ಆಮೇಲೆ ನಮ್ಮ ಗಣಂಗಳು ಹೊರಟು ಬಂದಾರು ". ಎಂದು ಪ್ರಸ್ತಾಪಿಸಿರುತ್ತಾರೆ. ಈ ವಾಕ್ಯದಿಂದ ಯಾವ, ರಕ್ತಾಕ್ಷಿನಾಮ ಸಂವತ್ಸರದಲ್ಲಿ, ಕಲ್‌ಬುರ್ಗದಲ್ಲಿ ದೇವರಪೂಜೆ ನಿಂತುಹೋಗುವುದೋ ಅದೇವರ್ಷ, ಚೆನ್ನಬಸವೇಶ್ವರರು (ನಾನು) ಕಂಡುಬರಬೇಕೆಂದು ಸ್ಪಷ್ಟವಾಗುವುದು. ಅದೇರೀತಿಯಲ್ಲಿಯೇ ಪರಮಾತ್ಮನು ನನ್ನನ್ನು ಕಳುಹಿಸಿಕೊಟ್ಟಿರುವನು. ಕಲ್ಬುರ್ಗಿಯಲ್ಲಿ ಹಿಂದೂ ಮುಸಲ್ಮಾನರಿಗೆ ಬಡಿದಾಟ ಹುಟ್ಟಿ ನಲವತ್ತು ಗುಡಿಗಳು ನಾಶಹೊಂದಿದವು. ಆಮಧ್ಯಾಹ್ನ ದೇವರಪೂಜೆಯು ನಿಂತುಹೋಯಿತು. ಆದೇಮಾನದಲ್ಲಿ ನನ್ನ ಗಣಂಗಳು ಬೋಧಿಸಲು ಕನ್ನಡದೇಶಕ್ಕೆಹೋಗಿ ತಿರುಗಾಡುತ್ತಿದ್ದರು.

ರುದ್ರಮುನಿಯು ತಮ್ಮ ಪುಸ್ತಕದ ಎಂಟನೆಯ ಪುಟದಲ್ಲಿ " ಎಮ್ಮೇಣಿ ಕಾವೇರಿ ಶ್ರೀರಂಗಪಟ್ಟಣದಲ್ಲಿ ಕೇಳಿರಂಣ । ಜೆನ್ನವೀರವಸಂತನು ಹುಟ್ಯಾನು ನೋಡಿರಂಣ ". ಎಂಬಿದಾಗಿ ಸೂಚಿಸಿರುವರು. ಈ ಪದ್ಯಗಳಲ್ಲಿ ನನ್ನನ್ನು ವೀರಚೆನ್ನ ಬಸವೇಶ್ವರ, ವೆಂಬಿದಾಗಿ ಹೇಳಿರುತ್ತಾರೆಂದು ತಿಳಿಯತಕ್ಕದ್ದು. ಇದನ್ನು ಜನರು ತಪ್ಪು ತಿಳುವಳಿಕೆಗಳಿಂದ ವೀರವಸಂತರಾಯರುಹುಟ್ಟುವ ಕುರುಹು ಎಂದು ನಂಬುತ್ತಾರೆ. ಆದರೆ ಈ ಪದಗಳಲ್ಲಿ 'ಚೆನ್ನ' ಎಂಬ ಶಬ್ದವಿರುವುದರಿಂದ, ಇದು ನನಗೆ ಅನ್ವಯಿಸುತ್ತದೆಯೇಹೊರತು ಮತ್ತೆ ಯಾರಿಗೂ ಸಂಬಂಧಿಸುವುದಿಲ್ಲ. ಇದೂ ಅಲ್ಲದೇ ಅನೇಕ ಪುರಾತನರು ವೀರವಸಂತರಾಯನು ಆನಂದನಾಮ ಸಂವತ್ಸರದಲ್ಲಿ ಗಾದಿಯಮೇಲೆ ಕುಳಿತುಕೊಳ್ಳಬೇಕೆಂದೂ ಮತ್ತು ಗಾದಿಯಮೇಲೆ ಕುಳಿತ ಹತ್ತು ವರ್ಷದನಂತರ ಚೆನ್ನಬಸವೇಶ್ವರರು ಅಂದರೆ ನಾನು ಕಂಡುಬರಬೇಕೆಂದೂ ಸ್ಪಷ್ಟವಾಗಲುಚ್ಚರಿಸಿರುತ್ತಾರೆ. ಈ ಪುರಾತನರ ಗಣಿತಗಳಿಂದ, ವೀರವಸಂತರಾಯನು ವೇಳಗೆ ಸರಿಯಾಗಿ ಆನಂದ ಸಂವತ್ಸರ ಅಂದರೆ ಸಾವಿರದ ಒಂಭೈನೂರ ಹದಿನಾಲ್ಕನೇ (೧೯೧೪) ಇಸವಿಯಲ್ಲಿ ಪಂಜಾಬ್ ದೇಶದ ಗುರುವಾಸ್‌ಪೂರದಲ್ಲಿ ಗಾದಿಯಮೇಲೆ ಕೂಳಿತಿರುತ್ತಾರೆ. ಮತ್ತು ಇವರು ಗಾದಿಯಮೇಲೆ ಕೂತಕುರುಹಿನ ಸಲುವಾಗಿ. (ಗಾದಿ ಏರಿದ) ಏಳೆಂದಿನಗಳಲ್ಲಿ ಪುಳಿವಿ. ದಿಕ್ಕಿನಗುಡ್ಡದ ಗುಂಡುಗಳು ಉರುಳಿಬಿದ್ದವು. ಮತ್ತು ಕಾಲಜ್ಞಾನಕ್ಕೆ ಸರಿಯಾಗಿ ರಕ್ತಾಕ್ಷಿನಾಮ ಸಂವತ್ಸರ ಯಮುನಾ ಮತ್ತು ಕಾವೇರಿನದಿಗಳು ದೆಹಲಿ ಮತ್ತು ಶ್ರೀರಂಗ ಪಟ್ಟಣಗಳಲ್ಲಿ ಹೆಚ್ಚು ಪ್ರವಾಹದಿಂದ, ಹರಿದು, ಜಲಪ್ರಳಯವನ್ನು ಉಂಟುಮಾಡಿರುತ್ತವೆ. ಇದೂಕೂಡ ನನ್ನ ಪ್ರತ್ಯಕ್ಷ ಕಾಣಬರುವಿಕೆಯನ್ನು ಅರುಹುತ್ತದೆ.

ಕಿನ್ನರಿ ಬ್ರಹ್ಮಯ್ಯನವರು ತಮ್ಮ ಕಾಲಜ್ಞಾನ ವಚನದ ಒಂಪನೇ ಪುಟದಲ್ಲಿ " ಬರೆಸುದ್ದಿ ಮುನಿಲರ ಪಟ್ಟನಾಶವಾಗುವ ತನಕಾ " ಎಂದು ನಮೂದಿಸಿರುತ್ತಾರೆ. ಇದು ನನ್ನ ಹೆಬ್ಬಯಕೆಯಾಗಿರುವ ಕಾಲವನ್ನು ತೋರಿಸುತ್ತದೆ. ಹೇಗೆಂದರೆ—ಪ್ರಪಂಚದಲ್ಲಿ

ತುರ್ಕಿಸ್ಥಾನದ ಖಿಲಾಪತ್ತು ಹೋದವನ್ನು ಪ್ರಸಿದ್ಧಿಯಾಗಿದೆ. ಅದೇವರುಷವೇ ನಾನು ತೋರಿಬರುವುದು ಸಹಜವೆಂದು ವ್ಯಕ್ತವಾಗುತ್ತದೆ. ಇದರಂತೆಯೇ ನಾನು ಖಿಲಾಫತ್ತು (ಪಟ್ಟ) ಹೋದ ವರುಷದಲ್ಲಿಯೇ ಮೈದೋರಿಯಿಸುವೆನು.

ಮೌನೇಶ್ವರನಾವ್ಯಖ್ಯಯು "ಹಿಂದುತುರುಕರು ಬಂದಾಗಿನಡೆದಾರು । ದೀಕ್ಷದಾರ ಚನ್ನಬಸವಂಗ ಬರುವಾಗ" ಎಂದು ತಮ್ಮ ಕಾಲಜ್ಞಾನದ ಪ್ರಸ್ತಕದಲ್ಲಿ ಬರೆದಿರುತ್ತಾರೆ. ಈವಾಕ್ಯದಿಂದ ಗೋಚರವಾಗುವದೇನಂದರೆ—ಸಧ್ಯಕ್ಕೆ ಗಾಂಧಿಜಿ. ಮೌಲಾನಷೌಕತ್ ಅಲಿ ಮತ್ತು ಮೊಹಮ್ಮದಲಿ ಈ ಮೂವರು ಹಿಂದುಸ್ಥಾನದಲ್ಲಿ ಕಳೆದ ನಾಲ್ಕು ವರ್ಷಗಳಿಂದ ಅಂದರೆ ಸಿದ್ಧಾರ್ಥಿ ಸಂವತ್ಸರದಿಂದ ಹಿಂದುಗಳನ್ನೂ ಮುಸಲ್ಮಾನರನ್ನೂ ಒಂದುಮಾಡಬೇಕೆಂದು ಪ್ರಯತ್ನ ಮಾಡುತ್ತಲಿರುವರು. ಆದ್ದರಿಂದ ಮೌನೇಶ್ವರನಾವ್ಯಖ್ಯಯು ನನ್ನ ಬರುವಿಕೆಯನ್ನು ಈಕುರುಹನಲ್ಲಿ ತೋರಿಸಿಯಿರುತ್ತಾರೆ.

ಇದೇಪ್ರಕಾರ ಸರ್ವಜ್ಞಮೂರ್ತಿಗಳು ವಚನದಲ್ಲಿ "ಸಿದ್ಧಾರ್ಥಿಮೊದಲಾಗಿ ತೀನುಬಿಟ್ಟುಕಡೆಯಾಗಿ ತಗ್ಗುದಿಬ್ಬಗಳೆಲ್ಲ ಸಮನಾಗಿಕಂಗಳು ಎದ್ದು ಓಡಿದವಣ್ಣ ಸರ್ವಜ್ಞ" ಎಂದು ಬರೆದಿರುತ್ತಾರೆ. ಈವಾಕ್ಯದಲ್ಲಿ ನಾನು ಹದಿನೈದು ವರ್ಷಗಳೆಲ್ಲ ಎಲ್ಲಾ ಕೆಲಸಗಳನ್ನೂ ಪೂರೈಸುತ್ತೇನೆಂದು ಸೂಚನೆಯಿದೆ.

ಸಿಂಧು ಬಲ್ಲಾಳ ಕಂದಗಳಲ್ಲಿ "ನಂದಾನನಸಂವತ್ಸರ ಮೂರುಹೋದಾವ್ರು. ಸಂಭಹೊದಮೇಲೆ ಏಳೆನೂರ ಎಂಭತ್ತು ವರ್ಷಕ್ಕೆ ಮೂವಗಿರಿವಾಸ ಮತ್ಯ್ರಕ್ಕೆ ಬರುತಾನೆ" ಎಂದು ೫೮-ನೆಯ ಪುಟದಲ್ಲಿ ಬರೆಯಲ್ಪಟ್ಟಿದೆ. ಈ ವಾಕ್ಯವು ಕೂಡ ಏಳುನೂರ ಎಂಭತ್ತು ವರ್ಷಗಳು ಆದಮೇಲೆ ಬರುವ ಆನಂದ ಪೂರ್ತಿಯಮೇಲೆ ಚನ್ನಬಸವೇಶ್ವರರು (ನಾನು ಬರುತ್ತಾರಂಬುವದನ್ನು ವ್ಯಕ್ತಪಡಿಸುತ್ತದೆ.

ಅಖಂಡಮುನೀಶ್ವರರು "ಚೆನ್ನಬಸವೇಶ್ವರ ಬಾದಷಾಹ ನಾವಿರವ ಎಂಬು ನೂರ ಅರವತ್ತು ಮೂರನೆ ಶಾಲಿವಾಹನಶಕೆಯಲ್ಲಿ ಕನ್ನಡದೇಶಕ್ಕೆ ಬಂದು ಗೋಪ್ಯವಾಗಿ ಐಂಭತ್ತು ವರ್ಷ ತಿರಿಗಿ ನಾವಿರವ ಎಂಬುನೂರ ನಲವತ್ತೈದನೆ ಶಾಲಿವಾಹನಶಕೆಯಲ್ಲಿ ಪ್ರತ್ಯಕ್ಷ ಕಂಡುಬಂದಾರು" ಎಂದು ಶ್ರುತಿಸಿರುತ್ತಾರೆ. ಇದೇ ಸೂಚನೆಯು ಪ್ರಕಾರ ಸಿಂಧು ಬಲ್ಲಾಳ ಕಂದರುಕೂಡ ಆನಂದ ಹೋದಮೇಲೆ ಚೆನ್ನಬಸವೇಶ್ವರರು ಬರುವರು ಎಂದು ಉಚ್ಚರಿಸಿದ್ದಾರೆ. ಅದೇಪ್ರಕಾರ ನಾನು ಬಾಲ ಬ್ರಹ್ಮಚಾರಿಯಾಗಿ ಕನ್ನಡದೇಶಕ್ಕೆ 'ಆನಂದ, ಹೋದಮೊದಲೇ, ಬಂದು ಒಂಬತ್ತು ವರ್ಷಗಳವರೆಗೂ ಗೋಪ್ಯವಾಗಿ ಸಂಚರಿಸಿ, ನಾವಿರವ ಎಂಬುನೂರ ನಲವತ್ತೈದನೇ ಶಾಲಿವಾಹನ ಶಕೆಯಲ್ಲಿ ಗದಗಿನಲ್ಲಿ ಪ್ರಚಾರಕ್ಕೆ ಬಂದಿರುತ್ತೇನೆ. ನನ್ನ ಮೊದಲನೆಯ 'ಹ್ಯಾಂಡ್ ಬಿಲ್', ಜಾಗಧಾರಣವಿರುತ್ತದೆ. ಇದು ನಾವಿರವ ಒಂಭೈನೂರ ಇಪ್ಪತ್ತನಾಲ್ಕನೇ ಇಸವಿ ನಾರ್ಚಿಹಾಹೆ ಹದಿನೇಳರಲ್ಲಿ ಆಗಿದೆ.

ಪ್ರತ್ಯಕ್ಷ ಕುರುಹು :—

ಈ ವಿಷಯವು ನನ್ನ ಕುರುಹುವಿಗೆ, ಪ್ರತ್ಯಕ್ಷ ಸಾಕ್ಷಿಯಾಗಿಯೂ, ಪರಮಾತ್ಮನ ಲೀಲಾವೈಭವತ್ವಕ್ಕೆ ಆದರ್ಶಸ್ವರೂಪವಾಗಿಯೂ ಇರುವುದು. ನಾನು ಗದಗಿನಲ್ಲಿ ಗೋಚರಿಸುವುದಕ್ಕೆ ಒಂದುವರೆ ತಿಂಗಳಹಿಂದೆ, ಬಿಂಜನಕಟ್ಟಿಯೆಂಬ ಗ್ರಾಮದಲ್ಲಿ, ಕೇವಲ ಎಂಟುವರುಷ ವಯಸ್ಸಿನ ಒಬ್ಬ ಮುಹಮ್ಮದ್ದೀಯ ಬಾಲಜ್ಞಾನಿಯು ನನ್ನ ಬರುವಿಕೆಯ ಕಾಲವನ್ನು ಸ್ಪಷ್ಟವಾಗಿ ಸೂಚಿಸಿರುತ್ತಾನೆ. ಈಬಾಲಕನು ಐದು ವರ್ಷದ ವಯಸ್ಸಿನಲ್ಲಿಯೇ ತನ್ನ ಮಾತಾಪಿತೃಗಳನ್ನು ತ್ಯಜಿಸಿ, ಊರೂರು ತಿರುಗುತ್ತಾ ಭಾರತ ಹಗಲೆನ್ನದೆ ಅಲೆಯುತ್ತ, ಜನಗಳಿಗೆ ಎಷ್ಟೋ ಮಹಶತ್ವಗಳನ್ನು ಪ್ರಕಾಶ ಪಡಿಸುತ್ತಾ ಇದಾನೆ. ಈಬಾಲಕನ ಅದ್ಭುತವಾದ ಮಹಾಶತ್ವಗಳನ್ನು ನೋಡಿ, ಈತನಿಗೆ ಅನೇಕಕಡೆ ಪೀಠಗಳನ್ನು ಕಲ್ಪಿಸಿ ಕೊಟ್ಟಿರುವರು. ಆದರೆ ಅವನು ಯಾವುದನ್ನು ಲಕ್ಷ್ಯಮಾಡಲಿಲ್ಲ. ಮತ್ತು ಜನರು ಪಲ್ಲಕ್ಕಿಯಲ್ಲಿ ಮೆರವಣಿಗೆಯನ್ನು ಮಾಡಿದರೂ ಕೂಡ, ಪಲ್ಲಕ್ಕಿಯಿಂದ ಕೆಳಗೆ ಧುಮುಕಿ ಓಡಿಹೋಗುವನು. ಈಹುಡುಗನ ಮಹಾತ್ವಗಳನ್ನು ನೋಡಿ ಸರ್ಕಾರದವರೂಕೂಡ ಸಹಾಯಮಾಡಿರುತ್ತಾರೆ. ಈಬಾಲಕನು ಧಾರ್ವಾಡ ಮತ್ತು ಬೆಳಗಾಲ್ ಜಿಲ್ಲಗಳಲ್ಲಿ ಸಂಚರಿಸುತ್ತಾ ಇರುತ್ತಾನೆ. ಹಿಂದೂಗಳು ಈಬಾಲಕನನ್ನು ಸ್ವಾಮಿ, ಎಂಬದಾಗಿಯೂ, ಮುಸಲ್ಮಾನರು 'ಪೀರಾವ್', ಎಂಬದಾಗಿಯೂ, ಬಹಳ ಭಕ್ತಿಭಕ್ತಿಯಿಂದ ಸಂಭೋಧಿಸುತ್ತಾರೆ. ಹೀಗಿರುವಲ್ಲಿ, ನಾನು ಗದಗಿಗೆ ಬರುವದಕ್ಕೆ ಒಂದುವರೆ ಮಾಸಮುಂಚೆ, ಈಬಾಲಕನು ಬಿಂಜನಕಟ್ಟಿ ಗ್ರಾಮದಲ್ಲಿ ತನ್ನ ಲೀಲೆಯನ್ನು ತೋರ್ಪಡಿಸುತ್ತಿದ್ದಾಗ, ಈತನಿಗೆ ಒಬ್ಬ ಸಾಧುಬ್ರಾಹ್ಮಣನ ಭೇಟಿಯಾಯಿತು. ಆಗ ಈಬಾಲಕನು ಆಸಾಧುವಿನ ಅಂಕದಮೇಲೆಕುಳಿತುಕೊಂಡು ಮುಂದೆ ಹೇಳುವರೀತಿಯಲ್ಲಿ ಪ್ರಶ್ನಿಸಲು ತೊಡಗಿದನು.

ಬಾಲಜ್ಞಾನಿ :—ಸ್ವಾಮಿ, ನೀವು ಯಾವಯಾವ ಶಾಸ್ತ್ರಾಭ್ಯಾಸ ಮಾಡಿರುವಿರಿ ?

ಸಾಧು :—ನಾನು ನಾಲ್ಕು ವೇದಗಳನ್ನೂ, ಹದಿನೆಂಟು ಪುರಾಣಗಳನ್ನೂ ಆರು ಶಾಸ್ತ್ರಗಳನ್ನೂ ಮತ್ತು ಗೀತ ಮುಂತಾದ ಅನೇಕ ಆತ್ಮರಹಸ್ಯ ಗ್ರಂಥಗಳನ್ನೂ ಅಭ್ಯಾಸಮಾಡಿರುತ್ತೇನೆ.

ಬಾಲಜ್ಞಾನಿ :—ಹಾಗಾದರೆ, ಶ್ರೀ ಚೆನ್ನಬಸವೇಶ್ವರರು ಎಲ್ಲಿದ್ದಾರೆ ? ಅವರವಿಷಯ ನಿಮಗೆ ಗೊತ್ತುಂಟೇ ?

ಸಾಧು ;—ನನಗೆ ಗೊತ್ತಿಲ್ಲ ; ಸ್ವಾಮಿ !

ಬಾಲಜ್ಞಾನಿ :—ಓಹೋ, ಹಾಗಾದರೆ ನೀವು ಏನು ಓದಿಲ್ಲ.

ಸಾಧು :—(ಸ್ವಗತ ನನ್ನ ವಿದ್ಯಕ್ಕೇನೆ ನೀರು ಬಿಡುವಹಾಗಿದೆ) ಸ್ವಾಮಿ ! ನಿಮಗೆ ಗೊತ್ತಿದೆಯೇನು ?

ಬಾಲಜ್ಞಾನಿ :—ಆ ! ನನಗೆ ಗೊತ್ತಿಲ್ಲದೆ ಉಂಟೇನು ! ಚೆನ್ನ ಬಸವೇಶ್ವರರು ವಯಸ್ಸಿನವರಾಗಿದ್ದಾರೆ. ಇನ್ನು ಒಂದುವರೆ ತಿಂಗಳೆಲ್ಲ ಗದಗಿಗೆ ಬರುತ್ತಾರೆ. ಹೋಲಿನ ಸಂಭಾಷಣೆಗಳನ್ನು ಕೇಳಿದಕೂಡಲೆ ಸುತ್ತಮುತ್ತಲಿನಲ್ಲಿ ನೆರೆದಿದ್ದ ಜನರು ಆಶ್ಚರ್ಯಚಕಿತರಾದರು. ಆದಿವಸವೊದಲ್ಗಂಡು ಆ ಊರಿಜನರು ನನ್ನ ಬರುವಿಕೆಯನ್ನೇ ಎದುರುನೋಡುತ್ತಿದ್ದರು. ದಯಾರ್ದ್ರಮಯನಾದ ಭಗವಂತನಕರುಣಕಟಾಕ್ಷದಿಂದ ಆ ಬಾಲಜ್ಞಾನಿಯು ಕಾಲಜ್ಞಾನವಪ್ರಕಾರ ನಾನು ನಿಯಮಿಸಲ್ಪಟ್ಟ ಕಾಲಕ್ಕನುಸರಿಯಾಗಿ ಗದಗಿನಲ್ಲಿ ಪ್ರತ್ಯಕ್ಷನಾದೆನು. ನಂತರ ನನ್ನ ಹ್ಯಾಂಡ್‌ಬಿಲ್ ಪ್ರಸಿದ್ಧಿಯಾದ ಕೂಡಲೆ, ಬಿಂಜನಕಟ್ಟೆಯು ಕೆಲವುಜನರು ಕೂಡಲೇಬಂದು ನನ್ನನ್ನು ನಂಬಿದರು. ಆ ಪುಣ್ಯಾತ್ಮನಾದ ಬಾಲಜ್ಞಾನಿಯೋ ನನ್ನ ಆಶ್ರಯವನ್ನೆನ್ನಿವಹಿಸಿ, ಅನೇಕದಿವಸಗಳು ಗದಗಿನಲ್ಲಿ ಇರಲುಪಕ್ರಮಿಸಿದನು.

ಬಾಲಜ್ಞಾನಿಗಳೇ ! ಈದೇಶೀತಿಯಲ್ಲಿ ಹಿಂದಬಂದ ಪುರಾತನರೂ ಋಷಿಗಳು, ನನ್ನ ಪ್ರತ್ಯಕ್ಷದ ಕಾಲವನ್ನು ಆಕಾಶವಾಣಿಯಿಂದ ತಿಳಿದುಕೊಂಡು ಅನೇಕ ಕುರುಹುಗಳನ್ನು ತೋರಿಸಿರುತ್ತಾರೆ. ತತ್ಕಾಲದಲ್ಲಿ ಕರ್ನಾಟಕದಲ್ಲಿ, ಪುರಾತನರು ಪ್ರತ್ಯಕ್ಷಕಾಣಬರುವ ಕುರುಹುಗಳನ್ನು ಈ ಬಾಲಜ್ಞಾನಿಯುವಿಷಯವೇ ಸೂಚಿಸುತ್ತದೆ. ಹ್ಯಾಗೆಂದರೆ, ಈಬಾಲಕನೂಕೂಡ ವಿಧಿಸಲ್ಪಟ್ಟ ಪುರಾತನರಲ್ಲಿ ಒಬ್ಬನಾಗಿರುತ್ತಾನೆ. ಅಲ್ಲದೆ ಆವರಲ್ಲಿ ಮುವ್ವತ್ತೆಂಟು ಜನರು ದೈವಜ್ಞಾನಿಗಳಾದ ನಾಥುಗಳು ಕುರುಹುಗಳನ್ನು ತಿಳಿದು ನನ್ನನ್ನು ನಂಬಿದ್ದಾರೆ. ಈಗ ಅವರು ನನ್ನ ಗಣಂಗಳಾಗಿ ಭೋದನೆ ಮಾಡುತ್ತಾ ಹೊರಿಟಿರುತ್ತಾರೆ.

—:o:—

ಭಾಗ ೨.

—: ಆಕಾಶ ಭೂಮಿಯ ಕುರುಹುಗಳ ನಾಶ :—

ಈ ಪ್ರಪಂಚದ ನ್ಯಾಯಸ್ಥಾನದಲ್ಲಿ ಯಾರು ಪ್ರತ್ಯಕ್ಷವಾಗಿ ನಡೆಯುವ ಕಾರ್ಯಗಳನ್ನು ನೋಡುವರೋ ಅಂಥಾವರನ್ನೇ ನಿಜ ನಾಶ್ಷಿಯಾಗಿ ತೆಗೆದುಕೊಳ್ಳುವವಾಡಿಕೆ ಇವೆ. ಅದೇರೀತಿಯಲ್ಲಿ ಪರಮಾತ್ಮನು ಕರುಣಾಸಮುದ್ರನಾಗಿ ಮನುಜರ ಆತ್ಮಗಳನ್ನು ಉಜ್ವಲವಾಗಿ ಮಾಡುವವಕ್ಕೋಸ್ಕರ ಚನ್ನಬಸವೇಶ್ವರ ಅಂದರೆ ನನ್ನ ಆಗಮನವನ್ನು ಆಕಾಶ ಮತ್ತು ಭೂಮಿಗಳ ಕೆಲವು ಕುರುಹುಗಳಿಂದ ನಿರ್ಧರಪಡಿಸಿರುವನು. ಆದ್ದರಿಂದ ಜನರು ಭಕ್ತಪ್ರಳಯವರಾಗಿ ಮೋಕ್ಷಮಾರ್ಗವನ್ನು ಹೊಂದಲು ಬರಲೋಸುಗ. ಆಕುರುಹುಗಳನ್ನು ಅವರ ಅವಗಾಹನೆಗೆ ಬರುವಹಾಗೆ ಕೆಳಗೆ ಸಂಕ್ಷೇಪವಾಗಿ ವಿವರಿಸುತ್ತೇವೆ.

(೧) " ಕನಕ ಮಲ್ಲಯ್ಯನ ಗಂಟಿ ಬಿದ್ದೀತು "

(ಆರವತ್ತ ಮೂರು ಪುರಾತನರ ಕಾಲಜ್ಞಾನ ವಚನಗಳು ಪುಟ ೩)

ಇದೇಪ್ರಕಾರ ನನ್ನ ಸಂಚಾರದಲ್ಲಿ ಅಂದರೆ ಹನ್ನೆರಡು ವರ್ಷಗಳಿಂದ ಕನಕ ಮಲ್ಲಣ್ಣನ ಗಂಟಿ ಬಯಲಾಗಿ ಹೋಯಿತು.

(೨) " ಗದಗಿನ ತ್ರಿಕೋಟೀಶ್ವರನ ಮನೆನೊಂದೀತು "

(ಭೂಲೋಕ ಚಿಂತಾರಥ ಒಂದನೇ ಪುಸ್ಪುಪುಟ ೧೪)

ಇದೇರೀತಿಯಲ್ಲಿ, ಹದಿನಾಲ್ಕು ವರ್ಷಹಿಂದೆ ತ್ರಿಕೋಟೀಶ್ವರನ ದೇವರಗುಡಿಯೊಳಗೆ ಮೂರು ದಿವಸದವರವಿಗೂ ನರಳಿದಧ್ವನಿ ಬಂದಿತು.

(೩) " ಅಗ್ನಿ ಪೂರ್ವದಿಕ್ಕುಗಳೆಲ್ಲಿ ಧೂಮಕೇತು ಮೂಡೀತು "

(ಭೂಲೋಕ ಚಿಂತಾರಥ ಮೊದಲನೆಯ ಪುಸ್ಪುಪುಟ ೧೪)

ಇದೇರೀತಿಯಲ್ಲಿ ನಾವಿರದ ಒಂಭೈನೂರ ಹತ್ತನೇಇಸ್ವಿಯಲ್ಲಿ ಧೂಮಕೇತು ಮೂಡಿತ್ತು.

(೪) " ಹೋಲಿನ (ಕೊಪ್ಪಳ) ಹಂಪಯ್ಯನ ಮಠ ಕೆಟ್ಟುಕಟ್ಟೀತು "

(ಭೂಲೋಕ ಚಿಂತಾರಥ ಮೊದಲನೆಯ ಪುಟ ೧೪)

ಇದರಹಾಗೆಯೇ ಹಂಪಯ್ಯನ ಮಠವು ಕೆಡವಿ ಕಟ್ಟಲ್ಪಟ್ಟಿತು.

(೫) " ಕ್ರೋದನನಾಮ ಸಂವತ್ಸರದಲ್ಲಿ ಅಂಗ್ಲೈಯಲ್ಲಿ ಕಣ್ಣು ಇರುವರು ಬರುತ್ತಾರೆ. ತಲೆಯುಮೇಲೆ ಕೋಡುಗಳು ಮೂಡಿದವರು ಬರುವರು. ಐದುಮುಖ, ಹತ್ತು ಭುಜಗಳು ಇದ್ದವರೂಸಹಾ ಬಂದಾರು. ಜಲಸ್ತಂಭನ, ಅಗ್ನಿಸ್ತಂಭನ, ದೂರ ದೃಷ್ಟಿ, ದೂರಶ್ರವಣ—ಈಪ್ರಕಾರ ಬಂದಾಗ್ಯೂ ಅವರೆನ್ನು ನಂಬಲಾಗದು"

(ರುದ್ರಮುನಿ ಪುಟ ೧೪)

ಇದೇಪ್ರಕಾರ ಯೂರೋಪಿಯರ್ಸ್ ಮತ್ತು ಅಮೆರಿಕ್ಸ್ ಪಾದ್ರಿಗಳು ಅಗ್ನಿಗಾಡಿಗಳಮೇಲೆ ಏರಿ, ರಾವಣಾವತಾರಗಳನ್ನು ಹೊಂದಿ ದೂರದೃಷ್ಟಿಗಳಿಂದ ಅಂದರೆ ದುರ್ಬೀನ್ ನೋಡುತ್ತ, ದೂರಶ್ರವಣ ಅಂದರೆ ಟೆಲಿಫೋನ್‌ನಿಂದ ಕೇಳುತ್ತ ಮತ್ತು ಅಂಗ್ಲೈಯಲ್ಲಿ ಅಂದರೆ, 'ಟೆಲಿಗ್ರಾಫ್'ನಿಂದ ತಿಳಿಯುತ್ತಾ ಬಂದರು.

(೬) " ಬಾಟಬಸ್ತಿಯನ್ನು ಮಾಡಿ ಗೂಟಕ್ಕೆ ತಂತಿಯನ್ನು ಇಕ್ಕಿ, ನೀಟಾದ ಬಂಡಿ ಬರುವವೇಳೆಗೆ ಲೋಕದ ಆಟವನ್ನು ನೋಡು ಸರ್ವಜ್ಞನೆ".

(ಸರ್ವಜ್ಞಮೂರ್ತಿ ಪುಟ ೫೦)

ಇದರಂತೆಯೇ ರೈಲುಗಾಡಿ ಅಂದರೆ ಹೊಗೆಗಾಡಿ ಬಂದಿರುತ್ತದೆ.

(೩) " ಲೋಹವನ್ನು ಭೂಮಿಗೆಹಾಸಿ. ಕಂಚಿನ ರಥನಡೆಸಿದರು, ಆಮೇಲೆ ಮಿಂಚುಹೊಳೆದೀತು". (ಸರ್ವಜ್ಞ ಪುಟ ೫೦)

ಇದೇಪ್ರಕಾರ 'ಟ್ರಾಂಗಾಡಿಗಳು, ಹೊರಟಿರುತ್ತವೆ.

(೪) " ಎತ್ತಿಹಿದೆಬಂಡಿ, ಎತ್ತೆತ್ತಿ ಭೂಮಿಗಹಾಕಿ ಸುತ್ತಲಾರಾಜ್ಯ ಆಳ್ವಾರು, ಆಮೇಲೆ ವೃತ್ಯುಹೊಂದಾರು ಸರ್ವಜ್ಞ. (ಪುಟ ೫೦)

ಹೀಗೆಯೇ ಮೋಟಾರ್ ಗಾಡಿಗಳು ಪ್ರಚಾರಕ್ಕೆ ಬಂದಿವೆ.

(೯) " ಚಂದ್ರಸೂರ್ಯಗ್ರಹಣ ಒಂದೇಮಾಸ " ಬಂದು ತಂದಿಯನು ಕಂದಾ ಎದೆದು ಬಂದೀತು ತೋಕಕ್ಕೆಪ್ರಳಯ" (ಸರ್ವಜ್ಞ ಪುಟ ೪೯)

ಮಹಜನರ 'ಪ್ರಜಾಪತಿಯೇ ನಾವಿರವ ಮುನ್ನೂರ ಹನ್ನೊಂದನೇ ಹಿಜರಿಯಲ್ಲಿ ರಂಜಾನ್ ತಿಂಗಳ ಎಂಟೇ ರಕ್ಷದಲ್ಲಿ ಚಂದ್ರಸೂರ್ಯರ ಗ್ರಹಣಗಳು ಹಿಡಿದಿದ್ದವು.

(೧೦) " ಪೃಥಿವಿಯು ವೀಚಣಸಂಗನಿಯುವ ರಂಗಮಂಟಪದಿ, ಕುರುಹುವಾಗಿ ಮಹಾಮಂತಿನ ಆರಮನೆಯುಕಳಸವು ತೋರ್ಪ್ಯವು "

(ಭೂಲೋಕ ಚಿಂತಾರಥ ಮೊದಲನೆಯ ಪುಟ ೧೪)

ಇದೇರೀತಿಯಲ್ಲಿ ಮಂಟಪದಲ್ಲಿ ಕಲಶಗಳು ಕಂಡುಬರುತ್ತವೆ.

(೧೧) " ವಿಭೂತಿಯೇ ಕಣಜುಗವಿಯೇ ಮ್ಯಾಳಿಗಗ ಮುಟ್ಟೀತು "

(ಭೂಲೋಕ ಚಿಂತಾರಥ ಮೊದಲನೆಯ ಪುಟ ೧೪)

ಇದೇರೀತಿಯಲ್ಲಿ, ಸದ್ಯದಲ್ಲಿ ಕಣಜಗವಿಯು ಮಾಳಿಗೆಗೆ ಮುಟ್ಟುತ್ತಿದೆ.

(೧೨) " ಸಿದ್ದೇಶ್ವರ ಕೆರೆಯಲ್ಲಿ 'ಆಪ್ರ, ಹೊಂಟೀತು ". (ವಚನ)

ಇದೇಪ್ರಕಾರ ಸಿದ್ದೇಶ್ವರ ಕೆರೆಯಲ್ಲಿ ಆಪ್ರ ಬೆಳೆದಿರುತ್ತವೆ.

(೧೩) " ಪ್ರಮರ್ದ ಗ್ರಾಮದಲ್ಲಿ ಬಿಳೇಕಾಗೆ ಕಂಡುಬರಬೇಕು "

( ವಚನಗಳು )

ಇದು ನಾವಿರವ ಒಂಭೈನೂರ ಇಪ್ಪತ್ತೆಮೂರನೇ ಇಸ್ವಿಯಲ್ಲಿ ಗೋಚರವಾಯಿತು ನಾನು ಸ್ವತಃ ನೋಡಿರುತ್ತೇನೆ.

(೧೪) " ಭೀಮಕೊಳೆಯಮೇಲೆಹಂತಿ ಮತ್ತು ಕಾರುಣ್ಯ ಎತ್ತುಗಳು ನೀರು ಕುಡಿಯುವುದಕ್ಕೆ ಬರಬೇಕು " (ವಚನ)

ಇದೇಪ್ರಕಾರ ನಾವಿರವ ಒಂಭೈನೂರ ಇಪ್ಪತ್ತಮೂರರಲ್ಲಿ ಜರಗಿತು.

(೧೫) " ಗದಗಿನಹತ್ತಿರ ದೊತ್ತ ಆನೆ (ಆಲಿ) ಕಲ್ಲುಬಿದ್ದೀತು "

(ಭೂಲೋಕ ಚಿಂತಾರಥ ಮೊದಲನೆಯ ಪುಟ ೧೪)

ಇದೇರೀತಿ ಗದಗಿನ ಸಮೀಪವಂದರೆ ಮೂರುಹರಿದಾರಿಯಲ್ಲಿ ಮೂರುವರ್ಷಗ ಳೆಹಿಂದೆ ಆಲೀ ಕಲ್ಲುಬಿದ್ದದ್ದು ಪ್ರಸಿದ್ಧವಾಗಿದೆ. ಇದರನೀರು ಮೂರುದಿನಗಳೆ ವರೆ ವಿಗೂ ಹರಿಯಿತು.

(೧೬) " ಪಶ್ಚಿಮದಿಕ್ಕಿನಲ್ಲಿ ಪ್ರಸಿದ್ಧವಾದ ಪಟ್ಟಣ (ಬೊಂಬಾಯಿ)ನಲ್ಲಿ ವಿಶ ಮಜ್ವರ ಹೊರಟು ಮಂದಿಲಯವಾಗಬೇಕು "

(ಮೌನಪ್ಪಯ್ಯನ ವಚನ ಪುಟ)

ಹೀಗೆಯೇ ದುರ್ಮುಖನಾಮ ಸಂವತ್ಸರದಲ್ಲಿ ಬೊಂಬಾಯಿನಿಂದ ಪ್ಲೇಗು ಹೊರಟಿತು. ಅದರಲ್ಲಿ ಬಹಳಜನರು ಲಯವಾದರು.

(೧೭) " ೧೮೩೨-ನೇ ಶಾಲೀವಾಹನಶಕೆಯೊಳಗೆ ಹೈದ್ರಾಬಾದ್ ತೆಗೆದು ಕೊಳ್ಳುವರು ".

(ಅಖಂಡಮುನಿ ಪುಟ ೨)

ಇದೇಪ್ರಕಾರ ನಾವಿರದ ಒಂಭೈನೂರ ಹನ್ನೊಂದನೆ ಇಸ್ವಿಯಲ್ಲಿ ಇಂಗ್ಲಿಷರು ಬಾರ್ವಬಡಾಡ್ ತಮ್ಮ ಸ್ವಾಧೀನಪಡಿಸಿ ಕೊಂಡರು,

(೧೮) " ೧೮೩೫-ನೇ ಶಾಲೀವಾಹನಶಕೆಯಲ್ಲಿ ಉತ್ತರ ದೇಶದಲ್ಲಿ ಕಾಳಗ ಪ್ರಾರಂಭಿಸುವರು. ಆ ಸಂವತ್ಸರದಲ್ಲಿ ತುರುಕರಕೂಡ ರೂಸ್‌ದವರುಕೂಡ, ಇಂಗ್ಲೆಂಡ್‌ದವರಕೂಡ ವಿಪರೀತಯುದ್ಧಗಳು ನಡೆಯುತ್ತವೆ. ಮಧ್ಯದಲ್ಲಿ ಬಹಳ ಜನರು ನಾಶಹೊಂದುತ್ತಾರೆ".

(ಅಖಂಡಮುನಿ ಪುಟ ಮೂರು)

ಇದೇಪ್ರಕಾರವಾಗಿ 'ಯೂರೋಪಿನ ಗ್ರೇಟ್ ಜರ್ಮ್ಮನ್ವಾರ್, ನಡೆದದ್ದು ಜಗ ತ್ಪ್ರಸಿದ್ಧಿಯಾಗಿದೆ.

(೧೯) " ೧೮೩೬ ಶಾಲೀವಾಹನಶಕೆ ಶ್ರೀಗುರು ಚೆನ್ನಬಸವೇಶ್ವರ ಬಾವಪಟ ಹನು ಬರುವಕಾಲಕ್ಕೆ ಓಂಕಾರಪ್ರಣಮುಪ್ರಭು ಶಂಕರ ರೀಂಕಾರ ಪ್ರಣಮುವನ್ನು ಉಚ್ಚರಿಸುತ್ತಾ ಬರುವರು ".

(ಅಖಂಡಮುನಿ ಪುಟ ೩)

ಅದೇಪ್ರಕಾರ ೧೮೩೬-ನೇ ಶಾಲೀವಾಹನ ಶಕೆಯಲ್ಲಿ ಕನ್ನಡದೇಶದ ಪ್ರಸಿದ್ಧ ವಾದ ಜಿಲ್ಲಾ ಬೀಜಾಪುರಕ್ಕೆ ಕುದುರೆಯುವೇಲೆಹಾರಿ ಬಾಲ ಬ್ರಹ್ಮಚಾರಿಯಾಗಿ ಓಂ ಕಾರ ಪ್ರಣಮುದಿಂದ ಬನ್ನೇಟುಹಳ್ಳಿ, ಶಿಂದಗಿತಾಲ್ಲೂಕನಲ್ಲಿ ಬಂದಿದ್ದೆನು. ನಂತರ ಒಂಭತ್ತುವರ್ಷ ಗೋಪ್ಯವಾಗಿ ಕನ್ನಡದೇಶ ಸಂಚಾರಮಾಡುತ್ತಲಿದ್ದೆನು.

(೨೦) " ೧೮೪೪-ನೇ ಶಾಲೀವಾಹನಶಕೆಯೊಳಗೆ ತುರ್ಕಿಸ್ಥಾನದ ಮತ್ತು ಇಂಗ್ಲೆಂಡಿಗೂ ಲಡಾಯಿ ಆದೀತು " (ಅಖಂಡಮುನಿ ಪುಟ ೩)

ಇದೇಪ್ರಕಾರ ಮುಸ್ತಫಾಕಮಾಲ್ ಪಾಷಾವರು ಇಂಗ್ಲೀಷರ ತಾಣ್ಯಗಳನ್ನು ಕಿತ್ತುಹಾಕಿದರು.

(೧೯) " ಶಾಲೀವಾಹನಶಕೆಯಲ್ಲಿ (೧೮೪೪) ತುರ್ಕೀಸ್ತಾನದ ಮತ್ತು ಇಂಗ್ಲೆಂಡ್ ಅಪ್‌ಸತ್ ಆದೀತು "

ಇದರಂತೆ ಎರಡು ಜನಾಂಗದವರು ರಾಜಿಮಾಡಿಕೊಂಡರು.

(೨೦) " ದಕ್ಷಿಣದೇಶದರಾಜನು ಉತ್ತರದೇಶಕ್ಕೆಹೋಗಿ ಸಮಸ್ತಸ್ವರ್ಗಸ್ಥನಾಗುವನು " (ಅಖಂಡಮುನಿ ಪುಟ ೧)

ಈಹೇಳಿಕೆಯಂತೆ ಮೈಸೂರಿನ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್‌ವರು ಉತ್ತರದೇಶವೆಂದರೆ ಕಲ್ಕತ್ತಾದಲ್ಲಿ ಮರಣಹೊಂದಿದರು.

(೨೩) " ಮೈಸೂರಿನ ಅರಮನೆಯೊಳಗೆ ಕನ್ನೆಯರುಕೂಡಿ ಲಗ್ನ ನಡೆಯಿಸುವರು. ಅಷ್ಟರಲ್ಲಿ ಭುಗಿಲು, ಭುಗಿಲೆಂದು ಅರಮನೆ ಭಂಡಾರವೆಲ್ಲ ನುಡುಬ್ರದು "

(ಅಖಂಡಮುನಿ ಪ್ರಭ ೨)

ಈವಾಕ್ಯದಂತೆಯೇ ಕೆಲವು ವರ್ಷಗಳಹಿಂದೆ ಮೈಸೂರು ಮಹಾರಾಜರ ಅರಮನೆಯು ಬೆಂದಿತು.

(೨೪) ಅಖಂಡಮುನಿ ತನ್ನ ವಚನಪ್ರಭ ಎರಡೆರಲ್ಲಿ " ನಾವಿರವ ಎಂಟುನೂರ ಹತ್ತೊಂಭತ್ತನೇ ಶಾಲೀವಾಹನಶಕೆ ಹೇವಿಳಂಬಿನಾನು ಸಂವತ್ಸರ, ಉತ್ತರದೇಶದಲ್ಲಿ ದುರ್ಗಮ್ಮನು ಅವತರಿಸುವಳು. ಯಾವತ್ತು ದೇಶವನ್ನೂ ಹಾಳುಮಾಡುವಳು. ಆದುರ್ಗಿಯು ಮೊದಲನೆಯ ಚಿಹ್ನೆಯೇನಂದರೆ;—ಹುಲಿಗೆ ಅಂಜದವರು ಇಲಿಗೆ ಅಂಜುವರು ". ಎಂದು ಪ್ರಸ್ತಾಪಿಸುತ್ತಾರೆ. ಇದೇಪ್ರಕಾರ ಪ್ಲೇಗು ಪ್ರಾರಂಭವಾದಕೂಡಲೆ ಇಲಿ ಬೀಳಲು ಮನುಷ್ಯರು ಅಡವಿಯಲ್ಲಿ ಮನೆಗಳನ್ನುಕಟ್ಟಿ ವಾಸ ಮಾಡಿದರು.

(೨೫) " ವೀರಶೈವಮತದೊಳಗೆ ಅನುಸಾರವಾಗಿ ಭೇದವಾಗಬೇಕು " (ಕರಿಸ್ವಳಿದ ನಾಗಲಿಂಗಮ್ಮ) ಇದೇಪ್ರಕಾರ ಕಾಕಿನಾಶಾ ಪಟ್ಟದವರು ಮತ್ತು ವಿರಕ್ತರೊಳು ಬಡಿದಾಟವಾಗಿ ಬೇರಬೇರೆಯಾದರು.

(೨೬) " ಎಮ್ಮೆಗಣಿಕಾವೇರೀ ಶ್ರೀರಂಗಪಟ್ಟಣದಲ್ಲಿ ಕೇಳಿರಣ್ಣ "

(ರುದ್ರಮುನಿ ಪ್ರಭ ೮)

ಇದರ ಅನ್ವಯವೇನೆಂದರೆ ಇದೇ ದುರ್ಮುಖನಾಮ ಸಂವತ್ಸರದಲ್ಲಿ ಕಾವೇರಿ ಮತ್ತು ಯಮುನಾನದಿಗಳ ದಂಡೆಗಳಮೇಲೆ ಇದ್ದ ಜನಗಳಿಗೆ ಜಲ ಪ್ರಳಯವಾಯಿತು.

(೨೬) " ರುಧಿರೋದ್ಗಾರಿನಾಮ ಸಂವತ್ಸರದಲ್ಲಿ ಕೆಂಡದಮಳೆ ಮೂರುಗಾವುದದ ಸುತ್ತಲು ಸುರಿದೀತು " (ರುದ್ರಮುನಿ ಪುಟ ೧೫)

ಈವಚನಪ್ರಕಾರ ಹೋದವರ್ಷ ಅಂದರೆ ರುಧಿರೋದ್ಗಾರಿನಾಮ ಸಂವತ್ಸರದಲ್ಲಿ ಜಪರ್ಾದೇಶದಲ್ಲಿ ಕೆಂಡದಮಳೆಸುರಿದು ಹದಿನೈದು ಲಕ್ಷಜನರು ಲಯವಾದರು.

(೨೪) " ಹುಲಿಗೆಯಮುಂದಿನ ತುಂಗಭದ್ರಹಲೆಗಳೆದು ಬಿಟ್ಯಾರು ".

(ಭೂಲೋಕ ಚಿಂತಾರತ್ನ ಮೊದಲನೆಯ ಪುಸ್ತಕ ಪುಟ ೧೬)

ಇದೇರೀತಿಯಲ್ಲಿ 'ಹುಲಿಗೆಯಲ್ಲಿ ಇಂಗ್ಲೀಷರು ಕಾಲುವೆ ತೆಗೆದಿರುತ್ತಾರೆ.

(೨೯) " ಹಿಂದುಸ್ಥಾನದವರು ಸ್ವರಾಜ್ಯದ ಬಡಿದಾಟ ನಡೆಸುವರು ".

(ಅಖಂಡಮುನಿ ಪುಟ ೧)

ಇದೇರೀತಿಯಲ್ಲಿ ಹಿಂದೂಸ್ಥಾನದ ಲೀಡರುಗಳೆಂದರೆ ಪ್ರಮುಖರು ಸ್ವರಾಜ್ಯ ಕ್ಕೋಸ್ಕರ ಬಡಿದಾಡುತ್ತಿರುವರು.

(೩೦) " ಜನಗಳೆಲ್ಲ ಜಾತಿನೀತಿ ಬಿಟ್ಯಾರು ಜಾರಚೋರರಾಗಿ ಅತ್ತೆಸೊಸೆಗಳನಳಿದು ತಂದೆಮಕ್ಕಳಕೆಟ್ಟ ತಾತನಮಕ್ಕಳಕೊಂದು ಬಂಟಬಡೆಯುಂಗೆ ಕಡಿದಾನು ".

(೩೧) " ಅರಸು ಆಳಾದನು ಮತ್ತು ಆಳು ಅರಸಾದನು "

(೩೨) " ಗರ್ತಿ ಸೂಳೆಆದಾಳು, ಮತ್ತು ಸೂಳೆ ಗರ್ತಿಆದಾಳು "

(೩೩) " ರಾಜರು ಭಾಷೆಗೆ ತಪ್ಪಾರ್ಯರು "

(೩೪) " ಭೂಮಿ ಹುಸಿದುವಕ್ಕಲು ಭಿಕ್ಷಬೇಡುವವರನ್ನು ಧಿಕ್ಕರಿಸಿ ಕೋಪದಿಂದ ಕೊಂದ್ಯಾರು ".

(೩೫) " ದೃಷ್ಟಿಯುಮುಳಿಗಿ ಭಕ್ತರನಡೆನುಡಿತಪ್ಪಿ ಅನಾಚಾರಿಗಳಾಗಿ ಗುರು ಶಿಷ್ಯತ್ವವೇಕೆಟ್ಟು ಜಗಳೆಗಳು ಆಗ್ಯಾವು "

(೩೬) " ಜಗಭಂಡ ಜಂಗಮರು ಆದ್ಯಾರು "

(೩೭) " ವಿರಕ್ತರು ದೃಢವಬಿಟ್ಯಾರು ಮತ್ತು ದುರುವಿಸುವು ಭಕ್ತರಾದಾರು "

(೩೮) " ನೀಚಾಚಾರವೇ ಅಂಗೀಕರಿಸಿ ಅದ್ವೈತರಾಗಿ ಶಾಸ್ತ್ರವನ್ನೇ ಪಿಡಿದ್ಯಾರು "

(೩೯) " ಆರುದರುಷನವೂ ನೂತೊಂದುಕುಲವೆಳ್ಳು ಕೆಟ್ಟುಹೊಲೆಮಾದಿರಗಿಂತ ಕನಿಷ್ಟವಾಗಿ ನಡೆದಾರು, ಈಚರಿತ್ರೆಯು ಯಾವಾಗ ಆಗುವುದೆಂದರೆ ಏಳನೂರ ಎಂಭತ್ತು ತುಂಬಿ ನಂದೀಶರಣರು ಬಂದಾರಂದು ನಿಜವು.

(ಮೇಲೆಹೇಳಿದ ಸತ್ಯವಚನಗಳು ಅಂದರೆ ಮೂವತ್ತರಿಂದ ಇಪ್ಪತ್ತಾರರವರೆವಿಗೂ ಗಟ್ಟಿಮುಳ್ಳಯ್ಯನಗಟ್ಟಿ ಮಾತುಗಳೆಂದು ತಿಳಿಯಬೇಕು.)

(೪೦) " ದೇಹದಲ್ಲಿ ತೋರುವನು ಶಾಂತಮಲ್ಲೇಶನಾಗಿ "

(ಶರಣಲೀಲಾಮೃತ ಪ್ರಟ ೧೩೦)

ಈವಾಕ್ಯದಿಂದಲೂ ಮತ್ತು ಇದರ ಪೂರ್ವಾರ್ಧ, ಉತ್ತರಾರ್ಧ ಪದಗಳಿಂದಲೂ ಕಾವೇರಿನದಿಯಮೇಲೆ ಕಲ್ಯಾಣಪಟ್ಟಣದವನು 'ಮಲ್ಲೇಶ್ವರನೆಂಬ, ಹೆಸರಿನಿಂದ ಬಂದು ಮಠ ಕಟ್ಟಿದನೆಂದು ಸ್ಪಷ್ಟವಾಗುತ್ತದೆ. ಹೀಗೆಯೆ ಇದೇ(ಹೆಸರಿನವನು ನಾನು ಹುಟ್ಟಿದಕೂಡಲೆ ಕಾವೇರಿಹೊಳೆಯಮೇಲೆಬಂದು, ಅಲ್ಲಿ ಮಠವನ್ನು ಕಟ್ಟಿರುತ್ತಾರೆ.

(೪೧) " ಧರೆಯುನದುಗಲು! ಶರಧಿಬತ್ತಲು ಗಿರಿಗಳೊಡದಬ್ಬಿರಿಸಿ ಗುಂಡುಗಳುರುಳಿಧಾತ್ರಿಗ । ಸುರಿಯೆಪ್ರಾಮುಳಿಗೆರೆಯಕೆಂಡಗಳು "

(ಶರಣಲೀಲಾಮೃತ ಪ್ರಟ ೬೦೯)

ಈಪದಗಳಲ್ಲಿ ಕಾಲಜ್ಞಾನ ಸೂಚನೆಗಿರುತ್ತದೆ.

(i) ಧರೆಯುನದುಗಲು, ಅಂದರೆ ಭೂಮಿಯು ನದುಗುವ್ರದು. ಇದು ಸಾವಿರದ ಒಂಭೈನೂರ ನಾಲ್ಕರಲ್ಲಿ ವಾಸ್ತವ್ಯವಾಗಿ ಜರಿಗಿತು.

(ii) 'ಶರಧಿಬತ್ತಲು, ಇದು ಸಾವಿರದ ಒಂಭೈನೂರ ಇಪ್ಪತ್ತನಾಲ್ಕರಲ್ಲಿ ಆಯಿತು.

(iii) 'ಗಿರಿಗುಂಡುರುಳಿ, ಹೀಗೆಯೇ ಸಾವಿರದ ಒಂಭೈನೂರ ಹದಿನಾಲ್ಕನೇ ಇಸವಿಯಲ್ಲಿ ಅಂದರೆ ಹೋದಸಂಧಿ ಆನಂದನಾಮ ಸಂವತ್ಸರದಲ್ಲಿ ವೀರವಸಂತಋತುವು ಪಟ್ಟಕ್ಕೆಕುಳಿತ ಏಳುದಿವಸಕ್ಕೆ 'ಉಳುವಿ,ದಿಕ್ಕಿನಗುಡ್ಡದ ನಾಲ್ಕುಗುಂಡುಗಳು ಉರುಳಿಬಿದ್ದವ್ರ.

(iv) 'ಕೆಂಡದಮಳೆಗೆರೆಯೆ, ಇದು ಜಪರ್ಾದೇಶದಲ್ಲಿ ಜರುಗಿ ಪ್ರಸಿದ್ಧವಾಗಿದೆ.

(೪೨) " ಮಠಮಾನ್ಯರೆಲ್ಲವು ಕೆಟ್ಟು ಭ್ರಷ್ಟವಾದವು ಕೇಳಿರಂಣ । ವೀರಕ್ತ ಮಠದೊಳಗೆ ನಾಲ್ಕುಸೇರ್ಯಾವು ಕೇಳಿರಂಣ ! ತೊಟ್ಟಿಲುಕಟ್ಟಾವು ಜೋಯೆಂದು ಪಾಡ್ಯಾವು ಕೇಳಿರಂಣ "

(ರುದ್ರಮುನಿ ಪ್ರಟ ೧೦)

ತದ್ರೀತಿಯಲ್ಲಿಯೇ ವೀರಕ್ತ ಮಠಗಳಲ್ಲಿ ಈಕಾರ್ಯಗಳು ಜರಿಗಿರುತ್ತವೆ.

(೪೩) " ಜಂಗುಳಿದ್ಯೈವಕ್ಕೆ ಚೆನ್ನಾಗಿಎರಿಗ್ಯಾರು ಕೇಳಿರಣ್ಣ ".

(ರುದ್ರಮುನಿ ಪುಟ ೧೦) ಇದರಂತೆಯೇ ವೀರಶೈವ ಮತದವರು ಲಿಂಗವಿನಹ ಬೇರೆದೇವರುಗಳೆಂದರೆ 'ಗಣಪತಿ, ವೀರಭದ್ರ, ಮುಂತಾದ ವಿಗ್ರಹಗಳನ್ನು ಪೂಜಿಸುತ್ತ ನಡೆಯುತ್ತಾರೆ.

(೪೪) " ಕೊರಡು ಚಿಗಿದೀತು ". (ರುದ್ರಮುನಿ)

ಈವಿಷಯವು ಕರ್ನೂಲು ಇಲಾಖೆಯಲ್ಲಿ ಪ್ರಸಿದ್ಧಿ ಆಗಿದೆ. ನಿಜವಾಗಿಯೂ ಬಣಗಿನ್ದಕೊರಡು ಚಿಗರಿದಿದ್ದಿದ್ದು ಕಂಡುಬಂದಿದೆ.

(೪೫) " ತ್ರಿಪುರಾಂತಕನಕೆರೆಯಲ್ಲಿ ನೀರುಕಪ್ಪಾದ ಸಂಭತ್ತು ವರ್ಷಕ್ಕೆ " (ಗವಿಸಿದ್ದೇಶ್ವರ ಕಾಲಜ್ಞಾನದ ಪ್ರಕಟನಪತ್ರಿಕೆ). ಇದು ನಿಜವಾಗಿಯೂ ಕಲ್ಯಾಣ ಪಟ್ಟಣದಲ್ಲಿರುವ ತ್ರಿಪುರಾಂತಕದ ಕೆರೆಯಲ್ಲಿ ನೀರು ಕಪ್ಪಾಗಿ ಬಂಭತ್ತು ವರ್ಷ ವಾಗಿರುತ್ತದೆ.

(೪೬) " ಕಲ್ಲುಬುರ್ಗಿಯಲ್ಲಿ ದೇವರಪೂಜೆ ಮಧ್ಯಾಹ್ನ ನಿಂತಂಹೋದೀತು " (ರುದ್ರಮುನಿ ಪುಟ ೧೪) ಇದರಂತೆ ಕಲ್ಲುಬುರ್ಗಿಯಲ್ಲಿ ದಂಗೆಯಾಗಿ ದೇವಸ್ಥಾನ ಗಳು ನಾಶವಾದುವು. ಆದೇಸಮಯದಲ್ಲಿ ದೇವರಪೂಜೆ ನಿಂತುಹೋಯಿತು.

(೪೭) " ಹೆನ್ನಬಸವೇಶ್ವರರು ಬಂದದ್ದು ಆನಂದ " (೨ ವಚನಗಳು)

ಇದೇಪ್ರಕಾರ ರಕ್ತಾಕ್ಷಿನಾಮ ಸಂವತ್ಸರದಲ್ಲಿ ನಕ್ಷತ್ರಗಳ ಲೆಖ್ಖತಪ್ಪಿ, ಎಂದೂ ಇಲ್ಲದಮಳೆಯು ನಾನು ಕಾಣಿಸಿಕೊಂಡಕೂಡಲೆ ಬಹಳವಾಗಿ ಸುರಿದು ಉತ್ತಮ ಬೆಳೆಗಳಿಂದ ಆನಂದವನ್ನುಂಟುಮಾಡಿತು.

(೪೮) " ಗಾರುಡಾಪುರ ಕೆಡಿಸುವತನಕ " (ಕಿನ್ನರಿ ಬ್ರಹ್ಮಯ ಪುಟ ೧) ಇದರಂತೆ ಪ್ರಜಗಳ ಸ್ವರಾಜ್ಯ ಚಳುವಳಿಕೆನೋಡಿ ಇಂಗ್ಲೀಷರು ಬಂಗಾಳದೇಶವನ್ನು ಭಾಗಭಾಗಗಳಾಗಿ ಮಾಡಿದರು ಮತ್ತು ತಮ್ಮ ಸಿಂಹಾಸನವನ್ನು ಕಲ್ಕತ್ತೆಯನ್ನು ಬಿಟ್ಟು ದೆಹಲಿಯಲ್ಲಿ ಸ್ಥಾಪಿಸಿದರು.

(೪೯) " ಎಲ್ಲಭೂಮಿಪಾಲಕರು ನಪ್ಪಹೋಗುತನಕ "

(ಕಿನ್ನರಿ ಬ್ರಹ್ಮಯ್ಯ ಪುಟ ೧)

ಈವಾಕ್ಯವನ್ನು ಪರಿಪೂರ್ಣ ಗಮನಿಸಿದ್ದಲ್ಲಿ ಕಾಣಬರುವುದೇನಂದರೆ—ಕಳೆದ ಜರ್ಮ್ಮಯುದ್ಧದಲ್ಲಿ ಅನೇಕದೇಶದ ರಾಜರುಗಳು ಬಹು ನಪ್ಪವನ್ನುಹೊಂದಿ ಕಪ್ಪ ಕ್ಕೊಳಗಾಗಿರುವುದೇನಾಹ್ಲೆ.

(೫೦ " ವಿಷ್ಣು ಅವತಾರದ ಸಹೂಜದೊಳಗೆ ಆನುಸಾರಹುಟ್ಟಿ, ಎರಡು ಭಾಗವಾಗಬೆಕು, ಅದರಲ್ಲಿ ಒಂದುಪಂಗಡವುಮಾತು ಸಸ್ಯಾಗರ್ಯಾಗಿರುವುದು.

(ರುದ್ರಗೋಪಾಲ್ ಬದತ್ ಭಾಗ ಎರಡು, ನಂ. ೧೬, ಪುಟ ೩)

ಈವಾಕ್ಯವು ಕಲಿಯುಗದ ಐದುಸಾವಿರ ವರ್ಷಗಳಲ್ಲಿ ಬರುವ ಹನ್ನೊಂದನೇ ವಿಷ್ಣು ಅವತಾರವನ್ನು ಅವಗಾಹನೆಗೆ ತರುತ್ತದೆ. ಆವಿಷ್ಣು ಅವತಾರದಪಂಗಡದಲ್ಲಿ ಸಾಷಿರವ ಒಂಭೈನೂರ ಹದಿನಾಲ್ಕನೇ ಇಸವಿಯಲ್ಲಿ ಎಂದರೆ ಸಂಧಿ, ಆನಂದನಾಮ ಸಂವತ್ಸರದಲ್ಲಿ ಅಂದರೆ ವೀರವಸಂತರಾಯನು ಗಾದಿಯವೇಳೆ ಕುಳಿತತಕ್ಷಣವೇ ಆಏಷ್ಯಾಸಮಾಜದಲ್ಲಿ ಅನುಸಾರಹುಟ್ಟಿ ಎರಡುಭಾಗಗಳಾಯಿತು. ಒಂದುಭಾಗವು (ಖಾದಿಯೂರ್) ಗುರುಂದಾಸಪ್ರಭದಲ್ಲಿ ಜಿಲ್ಲೆಯಲ್ಲಿಯೂ ಮತ್ತೊಂದು ಲಾಹೋರಿನಲ್ಲಿ ನೆಲಗೊಂಡಿರುವವ್ರು. ಈಭೇದಹುಟ್ಟಿದ ಹತ್ತನೇವರ್ಷಕ್ಕೆ ಕಾಲಜ್ಞಾನವಚನಗಳ ಪ್ರಚಾರಕ್ಕೆ ಬಂದಿರುತ್ತೇನೆ.

ಈನುಡಿಹೇಳಿದ ಆಕಾಶಭೂಮಿಗಳ ಸಂಬಂಧವಾದ ಕುರುಹುಗಳು ಐವತ್ತು ನನ್ನ ನಲ್ವತ್ತನೆಯ ವಯಸ್ಸಿನೊಳಗೆ ಕಂಡುಬಂದಿವೆ. ಆದ್ದರಿಂದ, ಜ್ಞಾನಿಗಳೇ ನನ್ನ ಪ್ರತ್ಯಕ್ಷತೆಗೆ ಇವಕ್ಕಿಂತಲೂ ಹೆಚ್ಚಾದ ಕುರುಹುಗಳು ಯಾವು ಬೇಕಾಗಿರು, ವು ? ಯಾವಮಾನವನು ಮೋಕ್ಷಮಾರ್ಗವನ್ನು ಹುಡುಕಲಿಕ್ಕೆ ಆತುರನಾಗಿರುವನೋ, ಯಾವನ ಹೃದಯವು ಪರಮಾತ್ಮನ ಭಕ್ತಿಯಿಂದ ಅಲ್ಲೋಲ ಕಲ್ಲೋಲವಾಗಿ ತುಳುಕುತ್ತಿರುವ್ರದೋ, ಅಂಥವನು ನನ್ನ ಪತ್ಯ್ಯಕ್ಷತೆಗೆ ಈ ಐವತ್ತು, ವಿಸ್ಮಯವಾಗಿಯೂ, ನಿಜವಾಗಿಯೂ ಕಾಣಿಸಿರುವ ಕುರುಹುಗಳನ್ನು ನಂಬದೆಇರುರು ಈಕುರುಹುಗಳು ಅಮಾನುಷಿಕವಾದುವು. ಇವೆಲ್ಲವು ಭಗವಂತನ ಕೃಪಾಕಟಾಕ್ಷವೇ ಹೊರತು ಮತ್ತೆ ಬೇರೇಇಲ್ಲ.

—:o;—

## ಭಾಗ ಮೂರು.

## —: ನನ್ನ ಅಂತರೆಂಗ, ಬಹಿರೆಂಗ ಕುರುಹುಗಳು :—

ಹಿಂದಿನ ಪ್ರವಾತನರು ಎಂಟುನೂರ ವರ್ಷಗಳಿಂದೇಯೇ ತಮ್ಮ ಹನ್ನೆರಡು ಸಾವಿರ ಕಾಲಜ್ಞಾನವ ವಚನಗಳಲ್ಲಿ ನನ್ನ ಅಂತರಂಗ ಮತ್ತು ಬಹಿರಂಗ ಕುರುಹುಗಳನ್ನು ಸ್ಪಷ್ಟವಾಗಿ ಸೂಚಿಸಿರುತ್ತಾರೆ. ಅವ್ರುಗಳಲ್ಲಿನ ಕೆಲವ್ರು ಕುರುಹುಗಳನ್ನು ಕೆಳಗೆಬರೆಯುವುದು ಉಚಿತವೆಂದು ತೋರಿಸುವ್ರುದೇ ನನ್ನ ಪ್ರಚಾರಣೆಯಾಗಿದೆ.

—; ಕುರುಹುಗಳು :—

(೧) " ಇವರು ಒಂಭತ್ತು ತಿಂಗಳೊಳಗೆ ಹುಟ್ಟಬೇಕು " ರುದ್ರಗೋಪಾಲ ಈವಚನಪ್ರಕಾರವೇ, ನಾನು ರಂಜಾನ್ ತಿಂಗಳಲ್ಲಿ ನಾವಿಗಮುನ್ನೂರ ಮೂರನೇ (೧೦೩) ಹಿಜರಾಯಲ್ಲಿ ಉದ್ಭವಿಸಿರುವೆನು. ಆಮಹನಿಯರು (ರುದ್ರಗೋಪಾಲರು) ಸಾಷಿರವ ಮುನ್ನೂರ ಮೂರನೇಹಿಜರಿ ರಜ್ಜಬ್ ತಿಂಗಳಲ್ಲ ಆಕಾಶವಾಣಿಯಿಂದ ತಿಳಿದು, ಮೇಲಿನ ವಾಕ್ಯವನ್ನು ಪ್ರಚುರಪಡಿಸಿದರು.

(೨) " ಇವರು (ಚೆನ್ನಬಸವೇಶ್ವರರು) ಸೋಮವಾರದಿವಸ ಹುಟ್ಟುತ್ತಾರೆ' (ರುದ್ರಗೋಪಾಲ). ನಾನು ಇದೇಪ್ರಕಾರ ಸೋಮವಾರದಿವಸ ನಾಲ್ಕುತಾಸು ಹೊತ್ತು ಏರಿ ಹುಟ್ಟಿರುತ್ತೇನೆ.

(೩) " ಇವರು, ಹುಟ್ಟಿದಕೂಡಲೆ ಮಳೆ ಪ್ರಾರಂಭವಾಗಬೇಕು ".
(ರುದ್ರಗೋಪಾಲ್)

ನಾನು ಇವರ ವಚನಪ್ರಕಾರ ಮೃಗನಕ್ಷತ್ರದಲ್ಲಿ ಹುಟ್ಟಿರುವುದರಿಂದ ಇದು ಬಹಳ ವಾಸ್ತವ್ಯವಾಗಿರುವುದು.

(೪) " ಅಸುಳೆ (ಅಮಿನ-ಪತಿವ್ರತ) ಬಸರಂಲಿ ಡಂಗುರ, ಚನ್ನಬಸವಂಣ ಉದಿಸಾನು ಡಂಗುರ " (ನೀಲಮ್ಮನ ಕಾಲಜ್ಞಾನ)

ನನ್ನ ತಾಯಿಯುಹೆಸರು 'ಆಮಿನ, ಅಥವಾ ಪ್ರತಿವ್ರತಾ ಎಂದು. ಆರಬ್ಬೀ ಭಾಷೆಯಲ್ಲಿ ಕರೆಯುತ್ತಾರೆ. 'ಅಸುಳೆ, ಎಂದರೂಕೂಡ ಪ್ರತಿವ್ರತಾಎಂದು ಅರ್ಥ ವಾಗುತ್ತದೆ.

(೫) " ಏಳೇಳತಪ್ಪನು, ಏಳರಿಂದಪನು ಕಡಏಳಕ್ಕೆ ಚೆನ್ನಬಸವಂಣ "
(ದಕ್ಕದಮಹಾದೇವಿಯಕ್ಕ ಪುಟ ೬೧)

ಅದೇರೀತಿಯಲ್ಲಿಯೇ ನಾನು ತಾಯಿತಂದೆಗೆ ಏಳನೇಯ ಮಗನಾಗಿಹುಟ್ಟಿದ್ದೇನೆ ಹುಟ್ಟಿದನಂತರ ಮೂವರು ತಂಗಿಯರೂ ಮತ್ತು ಮೂವರು ತಮ್ಮಂದಿರೂ ಹುಟ್ಟಿದ್ದಾರೆ. ಇದೇರೀತಿ ನನಗೆ ಮೂವರು ಅಣ್ಣಂದಿರು ಮೂವರು ಅಕ್ಕಂದಿರು ಇದ್ದಾರೆ. ಇದರಲ್ಲಿ ಮೊದಲಿನಿಂದಲೂ ಮತ್ತು ಕಡೆಯಿಂದಲೂ ನಾನು ಏಳನೆಯು ಮಗನಾಗಿರುತ್ತೇನೆ.

(೬) " ಇವರು ಕಲ್‌ಬುರ್ಗಿ ಇಲಾಖೆಯಲ್ಲಿ ಹುಟ್ಟಬೇಕು ". (ವಚನಗಳು) ಮೇಲ್ಕಂಡವಾಕ್ಯವು ಸೂಚಿಸುವಂತೆ, ನಾನು ಕಲ್‌ಬುರ್ಗಿಜಿಲ್ಲೆ ಬಾಲಂಪೇಟೆ ಗ್ರಾಮ ದಲ್ಲಿದಲ್ಲಿ ವುತ್ಪನ್ನನಾಗಿರುವೆನು.

(೭) " ಇವರು, ಹಸರುಫಲ ಅಥವಾ ಸೀತಾಫಲ ಹೇರಳವಾಗಿ ಬೆಳೆಯುವ ಜಿಲ್ಲೆಯಲ್ಲಿ ಉದ್ಭವಿಸಿರಬೇಕು ". (ರುದ್ರಗೋಪಾಲ)

ಇದರಹಾಗೆಯೇ ನಾನು ಸೀತಾಫಲಹಣ್ಣು ವಿಶೇಷವಾಗಿ ಬೆಳೆಯುವಸ್ಥಳದಲ್ಲಿ ಹುಟ್ಟಿರುತ್ತೇನೆ.

(೮) " ಇವರಿಗೆ ಮೂವರು ಅಣ್ಣಂದಿರು ಇರಬೇಕು "
(ರುದ್ರಗೋಪಾಲ ಕಾಲಜ್ಞಾನ ವಚನ)

ಈವಾಕ್ಯದಲ್ಲಿ ಅನ್ವಯಿ ಸಿರುವಂತೆ ನನಗೆ ಮೂರು ಅಣ್ಣಂದಿರು ಇರುತ್ತಾರೆ

(೯) " ಇವರು ತ್ರಿಕಾಲಜ್ಞಾನಿಯಾಗಿರಬೇಕು "

(ರುದ್ರಗೋಪಾಲ ಮತ್ತು ಮೌನಪ್ಪಯ್ಯನ ವಚನ)

ನಾನು ಚಿಕ್ಕವನಾಗಿದ್ದಾಗ ಸತ್ಯವಾದ ಸ್ವಪ್ನವನ್ನು ನೋಡುತ್ತಲಿದ್ದೆನು. ಕಳೆದ, ಹದಿನೆಂಟು ವರ್ಷಗಳು ವನವಾಸದಲ್ಲಿದ್ದು, ಭವಿಷ್ಯತ್‌ನಲ್ಲಿ ಆಗುವ ಸೂಚನೆಗಳನ್ನು ಆಕಾಶವಾಣಿಯಿಂದ ತಿಳಿದು, ಮೂರು ಪುಸ್ತಕದಲ್ಲಿ ಬರೆದಿಟ್ಟಿರುತ್ತೇನೆ. ಈಗಲೂ ಪರಮಾತ್ಮನನ್ನು ಬೇಡಿಕೊಂಡಕೂಡಲೆ ನಾತ್ಯಯಲ್ಲಿ ಪ್ರಾರ್ಥನೆಯಲ್ಲಿ ಮಗ್ನನಾಗಿರುವಾಗ, ಪ್ರಕಟವಾಡುತ್ತಾನೆ.

(೧೦) " ಇವರಹೆಸರು 'ಅರ್ಮವಾಯಿಲ್', ಅಥವಾ ಸಿದ್ದೀಖ್' ಅಂದರೆ ಚನ್ನಎಂದು ಇರುತ್ತದೆ ". (ರುದ್ರಗೋಪಾಲ ಕಾಲಜ್ಞಾನವಚನ)

(೧೧) " ಇವರು ದೇಶಸಂಚಾರಿಯಾಗಿದ್ದಾರೆ "

(ಮೌನೇಶ್ವರನ ಕಾಲಜ್ಞಾನ ಪ್ರಪ ೦೩)

ನಾನು ಯಾವಾಗ ನಾಲ್ಕುಮಾಸದವನಾಗಿದ್ದನೋ ಆಕಾಲದಿಂದ ಈಕಾಲದ ವರೆಗೂ, ಮೂರುತಿಂಗಳುಗಳು ಒಂದು ಸ್ಥಳದಲ್ಲಿಯಾವರೂ ಸ್ಥಾಯಿಯಾಗಿ ವಾಸಮಾಡಲಿ.

(೧೨) " ಇವರ ದೊಡ್ಡಕರುಹು 'ಮಳೆ, ಇರುತ್ತದೆ "

(ಮೌನೇಶ್ವರ ಮತ್ತು ಚಿಕ್ಕಬಸವಂಣ)

ಈವಾಕ್ಯದಲ್ಲಿ ತಿಳಿಸಿರುವಂತೆ ಸರಿಯಾಗಿ, ಕನ್ನಡದೇಶಗಳಲ್ಲಿ ನಾಲ್ಕು ಸ್ಥಳಗಳಲ್ಲಿ ಮಳೆಯನ್ನು ತೋರಿಸಿರುತ್ತೇನೆ. ನಾನು ಪ್ರತ್ಯಕ್ಷ ಕಂಡುಖಂದಿದುಕ್ಕೆ ಭಯಂಕರವಾದ ಮಳೆ ಕುರುಹುಯಾವುದೆಂದರೆ :—ಈವರ್ಷದ ನಕ್ಷತ್ರವು ಬದಲಾಯಿಸಿ ನಾನು ಬಂದಕೂಡಲೇ ಅಷ್ಟುದಿಕ್ಕುಗಳಲ್ಲಿ ಮಳೆ ದೆಳೆಉತ್ತವಾಗಿರುವದೇ ಸಾಕ್ಷಿಯಾಗಿದೆ.

(೧೩) ' ಇವರಿಗೆ ಯೂಸೂಫ್ ಫೈಗಂಬರ್‌ಪ್ರಕಾರ ಒಬ್ಬಹೆಂಗಸಿನಿಂದ ಮೋಕ್ಷಪರೀಕ್ಷೆಯಾಗಬೇಕು.

(ರುದ್ರಗೋಪಾಲ ಕಾಲಜ್ಞಾನವಚನ)

ಇದು ಒಂದು ಭಯಂಕರವಾದ ಸಂಗತಿ. ಇದು ನಾವಿರದ ಒಂಭೈನೂರ ಇಪ್ಪತ್ತೆರಡನೇ ಇಸ್ವಿಯಲ್ಲಿ ಸಂಭವಿಸಿತು. ಹೈದರಾಬಾದ್ ಮತ್ತು ಮದರಾಸು ಈ ಎರಡು ಸಂಸ್ಥಾನಗಳಲ್ಲಿ ನಮ್ಮ ಮನೆ ತನದವರಲ್ಲಿ ಪ್ರಸಿದ್ಧಿಯಾಗಿರುತ್ತದೆ ಇದು ಒಂದು ಪುಸ್ತಕದರೀತಿಯಲ್ಲಿ ಮುದ್ರಿಸಲ್ಪಟ್ಟಿತು. ಇದು ಯೂಸೂಫ್ ಫೈಗಂಬರರ ಸಂಗತಿಗಿಂತಲೂ ಅತಿಶಯವಾಗಿರುತ್ತದೆ.

(೧೪) " ಇವರು ದೊಡ್ಡಮನೆತನದವರಾಗಿರುತ್ತಾರೆ "

(ರುದ್ರಗೋಪಾಲ್)

ನಾನು ಇವರಂತೆ ಭಾದರಿಯ, ಸಂತತಿಯಲ್ಲಿ ಹುಟ್ಟಿರುತ್ತೇನೆ.

(೧೫) " ಬಡಾಯಿ ಎಂಬುದನರಿಯನು ಅಲ್ಲಮರಾಯ ಬಡವರಿಗಿಂತ ಬಡವನು ನೋಡೆಂದಕೂಡಿ ಬಂದಾನುಮರ್ತ್ಯಕ್ಕೆ " (ಮೌನೆಪ್ಪಯ್ಯನ ಪುಟ ೧೧)

ಇಡೀಪ್ರಕಾರ ನನ್ನ ಮಾತಾಪಿತೃಗಳು ಬಡವರಿದ್ದಾರೆ.

(೧೬) " ಹೆಬ್ಬಾವುಸಿಂಹಗೆ ಗುಬ್ಬಿಗುಟಕಾವುದೇ । ಆರ್ಭಟಿಸಿಬಂದಅರಸಿಗೆ ಒಬ್ಬನಿಲ್ಲುವುದು ಅಪರೂಪ । ಕೊಬ್ಬುಮುರಿಯಲಿ । ಬಂದಾನೆ ನರಸಿಂಹನಾಗಿ ॥ ಅಬ್ಬರದರವನಾವು ಬೊಬ್ಬೆಹೊಯ್ಯಲಿರಳು । ಪೆಬ್ಬುಲಕೊಡರು ಬಿರದಿನಪೆಂಡೇ ವಹಾಕಿ ಒಬ್ಬನಿಂತಾನೆಮರ್ತ್ಯಕ್ಕೆ । ಅಲ್ಲಮನೆಂಬರಂಣ ಕಂಭಹೂಡಿಕಾದಿದ ಜಗದೊಡನೆ ॥ ಬರಬಂದುಕೆಡುವುದಕೆ ಗಂಡನಿಂದನಿಸುವ । ಗಂಡಭೇರುಂಡ ಗಜಸಿಂಹನೆಂಬ । ಪೆಂಡೇವನಿಟ್ಟ ಅಲ್ಲಮರಾಯನು ದಂಡನಾಯಕಾನುಶರಭಾನು ॥

(ಮೌನೇಶ್ವರ ವಚನ ಪುಟ ೧೬)

ಪದ್ಯದಲ್ಲಿ ಹೇಳಿರುವಪ್ರಕಾರ ನಾನು ಚಿಕ್ಕಂದಿಂದಲೂ ಪರಮಾತ್ಮನ ಅಂತಃಕರಣದಿಂದ ಯುದ್ಧ ವಿದ್ಯೆಯನ್ನು ಕಲಿತಿರುವೆನು. ನಾನು ಯುದ್ಧಕಲೆಯಲ್ಲಿ ಮೂನ್ನೂರ ಐವತ್ತಕಿಂತಲೂ ಹೆಚ್ಚಾಗಿ ಪುಸ್ತಕಗಳನ್ನು ಅಭ್ಯಾಸಮಾಡಿ, ಇದರಲ್ಲಿ ಸಂಪೂರ್ಣ ಅನುಭವವನ್ನು ಹೊಂದಿ " ಪ್ರಿನ್ಸಿಪಲ್ ಆರ್ ಮೀನ್ಸ್ ಆಫ್ ಏಷ್ಯ ಅಂಡ್ ಯೂರೋಪ್, " ಎಂಬ ಪುಸ್ತಕವನ್ನು ಹದಿನಾರು ನಿಜ ಚಿತ್ರಗಳಿಂದ ಉದಾಹರಿಸಿ ಬರೆದಿರುತ್ತೇನೆ. 'ಎಂಟುನೂರು ಸಿಪಾಯಿಗಳ ಬಟಾಲಿಯನ್, ಪ್ರೇಡ್ ಮಾಡಿಸಿದುದನ್ನುನೋಡಿ, ಕರ್ನಲ್ ಕಫರ್ಟ್‌ರವರು ಆಶ್ಚರ್ಯಪಡುತ್ತಿದ್ದರು. ಮತ್ತು ಖುರಾನೇಷರೀಫಿನಿಂದ " ಆನ್ಸ್ಕ್ ಇಲ್ಮೆಜಂಗ್ ಎಂಬ ಹೆಸರಿನ ಒಂದು ಪುಸ್ತಕವನ್ನು ಬರೆದಿರುತ್ತೇನೆ. ಇವೆಲ್ಲವೂ ಕಾಲಜ್ಞಾನದಪ್ರಕಾರ ನನ್ನ ಪೌಢಶಕ್ತಿಯನ್ನು ತೋರಿಸುತ್ತದೆ.

(೧೭) " ವೂಜರು, ಸಹಜರು, ಮಾಜಿಮಾತಾಡರು । ಬೀಜವಬಿತ್ತಿಬೆಳೆವರು ಸಹಜಪುಳ್ಳಂಥ । ಸೈದರಮನೆಯಲ್ಲಿ ಉಣಲುಂಟು, ಜಾಜಿಗಾರರಮಾತು ಬೈರೂಪ ಎಂದನ " (ಮೌನೆಪ್ಪಯ್ಯನ ಪುಟ ೧೦)

ಈವಚನಗಳಿಂದ ಶ್ರೀ ಚೆನ್ನಬಸವೇಶ್ವರರು ಸೈಯ್ಯದರವರ ಮನೆ ಅನುವವರೆಂದು ಅಂದರೆ ಮಹಮದ್ ಪೈಗಂಬರ ವಂಶದವರೆಂದು ಅರಿಯಬಹುದು. ಇದರಂತೆಯೇ ನಾನು 'ಆಲೆನಬಿ, ಇರುತ್ತೇನೆ.

(೧೮) " ಇಪ್ಪತ್ತೆಂಟನೇ ಅವತಾರ ಈಶ್ವರನು ಹುಟ್ಟಿದನು ಎಂದು ಹೇಳುವರು " (ರುದ್ರಮುನಿ ಪುಟ ೧೫)

ಇದರಿಂದ ವ್ಯಕ್ತವಾಗುವುದೇನಂದರೆ ಚೆನ್ನಬಸವೇಶ್ವರರು ಕಲಿಯುಗದ ಐದು ಸಾವಿರದ ಅಂತ್ಯದಲ್ಲಿ, ಹುಟ್ಟುವ ಅವತಾರಿಕಪುರುಷನನ್ನು ನಂಬುವರಾಗಿರಬೇಕು

ಇದೇಪ್ರಕಾರ ನಾನು ಐದುನೂರಿರದ ಅಂತ್ಯಕಾಲದಲ್ಲಿ ಬಂದ ಈಶ್ವರ ಅವತಾರವನ್ನು ನಂಬ್ತುತೇನೆ.

(೧೯) " ಕರೀಕಂಬಳಿ ಕಾವೆಯನ್ನು " (ರುದ್ರಮುನಿ ಪುಟ ೧೫)
ಇದೇರೀತಿಯಲ್ಲಿ ನಾನು ಕರ್ನಾಟಕದೇಶಕ್ಕೆ ಬಂದಾಗ ನನ್ನ ಹೆಗಲಮೇಲೆ ಕರೀ ಕಂಬಳಿ ಇದ್ದಿತು.

(೨೦) " ಡಮರುಗಹಸ್ತ ಹಿಡಿದಿರಬೇಕು " (ರುದ್ರಮುನಿ ಪುಟ ೧೫)
ಇದೇರೀತಿಯಲ್ಲಿಯೇ ನನ್ನ ಬಲಗೈಯಲ್ಲಿ ಡಮರುಗಚಿಹ್ನೆ ಇರುತ್ತದೆ.

(೨೧) " ಪರಶುಕೊಡಲಿ ಪೂಜೆಯನ್ನು " (ರುದ್ರಮುನಿ ಪುಟ ೧೫)
ಇದೇಪ್ರಕಾರ ನನ್ನ ಎಡಗೈಯ್ಯಲ್ಲಿ ಪರಶು ಕೊಡಲಿಯ ಚಿಹ್ನೆ ಇರುತ್ತದೆ.

(೨೨) " ಬೆರಳಿನಲ್ಲಿ ವೃಷಭಮುದ್ರೆಯನ್ನು " (ರುದ್ರಮುನಿ ಪುಟ ೧೫)
ಈವಚನದಲ್ಲಿ ಸೂಚಿಸಿರುವಂತೆಯೇ ನನ್ನ ಎಡಗೈಯ್ಯಲ್ಲಿ ವೃಷಭ ಚಿಹ್ನೆ ಇರುತ್ತದೆ.

(೨೩) " ನಾಗಬೆತ್ತವನ್ನು ಕೈಯ್ಯಲ್ಲಿ ಪಿಡಿಕೊಂಡು "
(ರುದ್ರಮುನಿ ಪುಟ ೧೫)
ಈಪೇಳಿಕೆಯಪ್ರಕಾರವೇ ಚಿಕ್ಕಂದಿನಿಂದಲೂ ನನ್ನ ಕೈಯ್ಯಲ್ಲಿ ನಾಗಬೆತ್ತ ಇದ್ದೇಇದೆ.

(೨೪) " ಲಿಖಿತಾಪ್ರತಂದಾನು ಅಖಿಳಬ್ರಹ್ಮಾಂಡವ, ಸಕಲಕ್ಕೆ ಬಂದುನಿಂದ ತಿಯೋ ಸುಖವಿಲ್ಲಮುಂದೆ ವಿಚಾರಿಸಿನೋಡಿರೂ ಲೇಖವುಕೂಡಲಿಬಂದಾ ನಿಮಗೆ
(ಕೊಡೆಕಲ್ಲು ಬಸಪ್ಪ ಪುಟ ೬೧)
ಇದರಂತೆಯೇ ನನ್ನ ಕೈಯ್ಯಲ್ಲಿ ಅಖಂಡಬ್ರಹ್ಮಾಂಡ ಲಿಖಿಎಂದರೆ 'ಖುರ್ಆ, ದೆ. ಮತ್ತು ಅವನ್ನು ನಿಮಗೆ ಬೋಧಿಸಲು ಬಂದಿರುತ್ತೇನೆ.

(೨೫) " ಪೆಂಡೇವನಿಚ್ಚ ಅಲ್ಲಮರಾಯು ದಂಡನಾಯಕನು ಶರಭಾನು "
ಮೌನಪ್ಪಯ್ಯ ಪುಟ ೧೬)
ಈವಾಕ್ಯದಲ್ಲಿ ನಾನು ಬಹಳ ಪ್ರತಾಪಶಾಲಿಯೆಂಬುವದಕ್ಕೆ ಬಿರುದಾಗಿ, ಸಾಮುದ್ರಿಕೆಯು ವಿದ್ಯೆಯಪ್ರಕಾರ ಕೈಯಲ್ಲಿನ ಮೊದಲನೆಯ ಬೆರಳಿನಲ್ಲಿರುವ ಯುವ್ವ ರೇಖೆಯಲ್ಲಿ ಅರ್ಧ ಹನುಮಂತರೇಖೆ ಇರುವುದಕ್ಕೆ ಸಾಕ್ಷಿಇದೆ.

(೨೬) " ಚೆನ್ನವರ್ಣನೆಬಂದ ಬಸವಂಣನೆಬಂದ, ಬಸವಂಣಗಳಬೆಲೆನಿಡುತ ಪನ್ನಾಗಧರನು, ಪ್ರಭುದೇವರುಬಂದುದು ಆಕುನ್ನಿಗಳಿಗೆ ಏನುತಿಳಿಯುದು ! ವರೇಕಲ್ಲು

ಶರಮಚ್ಚರ, ಕರಲಿಂಗ, ಜಪಮಾಲೆ ಪರಮಾತ್ಮನೆಂಬ ನಿಜವೇಣಪಿಡಿಕೊಂಡು ಪರ ಬ್ರಹ್ಮಬಂದಲೋಕಕ್ಕೆಮರ್ತ್ಯದ ಕುರಿಗಳಿಗೆ ವಿನುತಿಳಿಯುದು,

(ಮೌನಪ್ಪಯ್ಯ ಪುಟ)

(a) 'ಚಿನ್ನಬಣ್ಣ' ಇದೇಪ್ರಕಾರ ನನ್ನವರ್ಣವು ಕೆಂಪು ಮತ್ತು ಹಳದೀ ಬಣ್ಣ ದಿಂದ ಕೂಡಿರುತ್ತದೆ.

(b) ''ಪನ್ನಗಧರನು, ಇದರಂತೆಯೇ ನನ್ನ ಬೆನ್ನಿನಮೇಲೆ ನಾಗಮುಖ ಇರು ತ್ತದೆ.

(c) 'ವರೆಕಲ್ಲು, ಎಲ್ಲಾ ಧರ್ಮಗಳವರೇ ಹಚ್ಚಲಿಕ್ಕೆಬಂದ ಅಖಿಲಬ್ರಹ್ಮಾಂಡವ ಲೇಖಎಂದರೆ' ಖುರ್ತಾ ನನ್ನ ಕೈಯಲ್ಲಿದೆ.

(d) 'ಕರಲಿಂಗ, ನನ್ನ ಬಲಗೈಯಲ್ಲಿ ಇದಕ್ಕೆ ಆಧಾರವಾಗಿ ಅಂಗದ ಚಿಹ್ನ ಇರುತ್ತದೆ.

(e) 'ಜಪಮಾಲೆ, ನನ್ನ ಬಲಿಗೈಯಲ್ಲಿ ಜಪಮಾಲೆ ಚಿಹ್ನೆ ಇರುತ್ತದೆ.

(೨೭) '' ಕಾಮನಕಂಣುಕಳೆದು ಸುಮನಾಗಿರಿ । ನಮ್ಮಶೂಲಧರನ ಸುಳುವು ನೋಡಿರಿ. (ಮೌನಪ್ಪಯ್ಯ ೪೩ನೇ ಪುಟ)

ಈವಾಕ್ಯದ ಹೇಳಿಕೆಯಿಂತೆ ನನ್ನ ಎಡಗೈಯಲ್ಲಿ ತ್ರಿಶೂಲದ ಚಿಹ್ನೆ ಇರುತ್ತದೆ.

(೨೮) '' ಇವರಕೈಯಲ್ಲಿರುವಹಸ ಝುಂಡ್ಯೆವಿರಬೇಕು '' (ವಚನಗಳು)

ಹಾಗಯೇ ನನ್ನ ಎಡಗೈಯಲ್ಲಿ ಬಾವಟದ ಚಿಹ್ನೆ ಇರುತ್ತದೆ.

(೨೯) '' ಎಲ್ಲಕ್ಕೆಹೊರೆತಾಗಿ, ಬಂದಾನುಗುರುಮೂರ್ತಿ, ಬಿಲ್ಲನೇರಿಸಿಕೈಯ ವಿಡಿದು '' (ಕೊಡಕಲ್ಲು ಬಸಪ್ಪ ಪುಟ ೪೦)

ಇದೇಪ್ರಕಾರ ನನ್ನ ಎಡಗೈಯಲ್ಲಿ ಬಾಣವನ್ನು ಸಂಧಿಸಿಇರುವ ಬಿಲ್ಲಿನಚಿಹ್ನೆ ಇರುತ್ತದೆ.

(೩೦) '' ಚೆನ್ನಬಸವಂಣ ಶಂಖುಚಕ್ರವನ್ನು ಇಟ್ಟುಕೊಂಡು ಬರಬೇಕು ''

(ಮೌನಪ್ಪಯ್ಯ ಬಾಲಲೀಲಾಮೃತ ಪುಟ ೧)

ಇದರಂತೆ ನನ್ನ ಬಲಗೈಯ ಐದು ಬೆರಳುಗಳಲ್ಲಿ ಶಂಖ ಚಿಹ್ನೆಗಳೂ ಮತ್ತು ಎಡಗೈಯ ಮೂರುಬೆರಳುಗಳಲ್ಲಿ ಚಕ್ರ ಚಿಹ್ನೆಗಳಿರುತ್ತವೆ.

N.B.—ಕೈಗಳ ಮತ್ತು ಬೆನ್ನಿನಮೇಲಿನ ಕುರುಹುಗಳ ಸಾಕ್ಷಿಗಾಗಿ ಇಲ್ಲಿ ನಿಜ ಚಿತ್ರಗಳನ್ನು ಸಂಧಿಸಿರುತ್ತೇವೆ.

(೩೧) " ಬಂದಾರು ಬಾಲಬ್ರಹ್ಮಚಾರಿಯಾಗಿ ಮುಂದಿನ್ನು, ಜ್ಞಾನೋದಯವು ॥ ಸಂಧೀತು ೩೭೦ ವರ್ಷಗಳು ಹಿಂದಾದ ಕಾಲಜ್ಞಾನಗಳು ".

(ಕೊಡೆಕಲ್ಲು ಬಸಪ್ಪ ಪುಟ ೩೯)

ಇದೇಪ್ರಕಾರ ಸಂಧಿ ಆನಂದನಾಮ ಸಂವತ್ಸರ ಹೋದಮೇಲೆ ಬಾಲಬ್ರಹ್ಮಚಾರಿಯಾಗಿ ಕನ್ನಡದೇಶಕ್ಕೆ ಬಂದಿದ್ದೇನೆ. ಇದಕ್ಕೆ ಸಿಂದಿಗೆತಾಲ್ಲೂಕು ಬಿಜಾಪುರದ ಜಲ್ಲಾದ ಜನರು ಸಾಕ್ಷಿಯಾಗಿದ್ದಾರೆ.

(೩೦) " ತೆತ್ತೀಸಕೋಟಿ ದೇವರ್ಕಳ ನಿರ್ಮಿಸಿದಮೇಲೆ ಕೆಟ್ಟಕುಲ ಎನರಿ ಬಹುದೇ ! ಇದು ಅಲ್ಲಮನಕುಲ ಬಸವಂಣ " (ಮೌನೆಪ್ಪಯ್ಯನ ಪುಟ ೪೫)

ನನ್ನ ಧರ್ಮವು ಜಗತ್ಪರಿಪಾಲಕ ಪಾದಧರ್ಮ ವಿರುತ್ತದೆ. ಆದ್ದರಿಂದ ನಾನು ಯಾವ ಮತವನ್ನು ಯಾವ ಗ್ರಂಥವನ್ನು, ಯಾವ ಅವತಾರೀಕರನ್ನೂ ಸುಳ್ಳೆಂದು ಹೇಳುವದಿಲ್ಲ.

(೩೩) " ಲಳಗಿತಂಡಾಸಮುಸಿ ಎಲೆಯಲ್ಲ, ಹಿಡಿಯಿತುಹಲಿಯುಲಿದಾರಕುಲವನು ಅಳಿಯಬಸವಂಣನ ನಿಜಪಟ್ಟ. (ಮೌನೆಪ್ಪಯ್ಯ ಪುಟ ೧೦)

ಇದರಂತೆಯೇ ನಾನು ಪಿಂಗಳೆನಾಮ ಸಂವತ್ಸರದಲ್ಲಿ ಕನ್ನಡದೇಶದ ಅಳಿಯನಾಗಿದ್ದೆನು.

(೩೪) " ಸಸಿಮೂಡಿದಂತೆ ಮೂಡುತ್ತಾನೆಗುರುವಾಯು ! ಹೊಸಭಸಿತವನು ತಂದಹಾನೆ " (ಕೊಡೆಕಲ್ಲು ಬಸಪ್ಪ ಪುಟ ೬೪)

ಇದೇಪ್ರಕಾರ ನನ್ನ ಕೈಯಲ್ಲಿ ಹೊಸಭಸಿತ (ಗಂಧ) ಹಂಪೆಯ ಸ್ಥಳವಷ್ಟೆ ಆಗುವದು.

(೩೫) " ಅಂದಿಗೆ ಅಳಿಯಚೆನ್ನಣ್ಣ ಪಟ್ಟಕ್ಕೆಬಂದು, ವೃಷಧ್ವಜವು ವೀರವಸಂತಣ್ಣದಿರಾಗಿ ಪಿಡಿದಿನ್ನುಪಸರಿಸಿ ಕಪ್ಪೆಳೆಯನ್ನು ಪೇಳುತ್ತ ನಂದಿ ಶರಣಬಂದು ಮುಖರೆ " (ಗಬ್ಬೆವೇಳೆಯ್ಯನ ವಚನ ಮೊದಲನೆಯ ಪುಟ ೧೩)

ಇದೇರೀತಿಯಲ್ಲಿ ನಾನು ಎರಡುಸಾರಿ ಉತ್ತರದೇಶಕ್ಕೆಹೋಗಿ ವೀರವಸಂತರಾಯನ ಸಂಗಡ ವಾದವನ್ನುಮಾಡಿ ನಿಮ್ಮ ಕನ್ನಡದೇಶಕ್ಕೆ ಬಂದಿದ್ದೇನೆ.

(೩೬) " ಈತನು ತನ್ನ ಜ್ಞಾನವೈಭವಿಯಿಂ ಕಂಡುಹಿಡಿದು ಜನರ ರೋಗಗಳನ್ನು ಪರಿಹಾರಮಾಡುವವನಿರುತ್ತಾ " (ರುದ್ರಗೋಪಾಲ ಅಲ್ಲಮಪ್ರಭು ಪುಟ ೪೫)

ಈಮಹಾತ್ಮರ ವಚನಗಳಪ್ರಕಾರ ನಾನು ವೈದ್ಯವಿದ್ಯೆಯನ್ನು ಚೆನ್ನಾಗಿ ಬಲ್ಲೆನು ಮತ್ತು ವೈದ್ಯನಾಗಿ ಕೆಲಪ್ರದಿವಸ ಕೆಲಸಮಾಡಿರುತ್ತೇನೆ.

ಈಮೇಲೆ ಹೇಳಿರುವ ಮುಖಾತ್ಮರು ಅಂತರಂಗ ಬಹಿರಂಗ ಕುರುಹುಗಳ ಹೊರತು, ಜನರು, ಚೆನ್ನಬಸವೇಶ್ವರಿಗೆ ನೆರಳಿಲ್ಲ, ರಪ್ಪೆಬಡಿಯುವುದಿಲ್ಲ, ಮತ್ತು

ಹೆಜ್ಜೆ ಮೂಡುವದಿಲ್ಲ. ಎಂದು, ನಾರುತ್ತಾರೆ. ಇವುಗಳ ಅರ್ಥವೇನೆಂದರೆ (೧) ಚೆನ್ನ ಬಸವೇಶ್ವರರ ಸರಿಸಮಾನವಾದ ಎರಡನೆಯ ಅವತಾರವು ಹುಟ್ಟವುದಿಲ್ಲ, (೨) ರೆಪ್ಪೆ ಪಡಿಯುವುದಿಲ್ಲವೆಂದರೆ—ಅವನು ಯಾರಿಗೂ ಅಂಜುವದಿಲ್ಲವೆಂದೂ, ಮೌನಪ್ಪಯ್ಯನವರು ತಮ್ಮ ಪುಸ್ತಕದ ಹದಿನಾರನೆಯ ಪುಟದಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ.

ಜ್ಞಾನಿಗಳಿರಾ ! ನಾನು ಪರಮಾತ್ಮನಲ್ಲಿ ಯಾವಾಗಲೂ "ಎಲ್ಲೆ, ತ್ರೈಲೋಕೇಶ್ವರ ! ಬ್ರಂಹ್ಮಾಂಡದ ಆಳ್ವಿಕೆಯನು ನಿನ್ನ ಕೈಯ್ಯಲುಂಟು. ನಮ್ಮ ಭಕ್ತರನ್ನು ನೀನು ಉದ್ಧಾರಮಾಡು, ನಿನ್ನ ಸತ್ಯಮಾರ್ಗವನ್ನು ಅವರಿಗೆತೋರಿಸು" ಎಂಬದಾಗಿ ಸದಾಕಾಲದಲ್ಲಿಯೂ ಪ್ರಾರ್ಥನೆ ಮಾಡುತ್ತಲಿದ್ದೇನೆ.

— : ಸಂಶಯಪರಿಹಾರಾರ್ಥಗಳು :—

ನೋಟ್.—ಹಿಂದಿನಪುರಾತನರು ಮತ್ತು ಋಷಿಗಳು ಬರೆದಿರುವ ಕಾಲಜ್ಞಾನಗಳನ್ನು ಸಾಧಾರಣ ಜನರು ತಿಳಿಯಲಾರರು. ಪ್ರಯುಕ್ತ ಅವರ ಸಂಶಯಗಳನ್ನು ಹೋಗಲಾಡಿಸಲು ಕೆಳಗೆ ಕೆಲವು ವಿಷಯಗಳನ್ನು ಬರೆದಿರುತ್ತೇನೆ.

೧-ನೇ ಸಂಶಯ.—ಜನರು ತಪ್ಪುತಿಳುವಳಿಕೆಯಿಂದ "ಮೋಸಗಾರರು ಮತ್ತು ಸುಳ್ಳರುತಾವೇ ಚೆನ್ನಬಸವೇಶ್ವರರೆಂದು ಹೇಳುತ್ತಾ ಬಂದಾಗ್ಯೂ ನಂಬಬಾರದು". ಎಂದು ಹೇಳುತ್ತಾರೆ. ಆದರೆ, ಜ್ಞಾನಿಗಳಿರಾ ! ಈಹೇಳಿಕೆಯು ಯಾವ ಕಾಲಜ್ಞಾನಗಳ ಯಾವ ಪುಟಗಳಲ್ಲಿಯೂ ಕಾಣಬರುವುದಿಲ್ಲ. ರುದ್ರಮುನಿಸ್ವಾಮಿಯು ತಮ್ಮ ಕಾಲಜ್ಞಾನದಲ್ಲಿ "ಕ್ರೋಧನನಾಮ ಸಂವತ್ಸರದಲ್ಲಿ, ಅಂಗೈಯೊಳಗೆ ಕಂಣುಗಳಿರುವವರು, ತಲೆಯುಮೇಲೆ ಕೋಡುಮೂಡಿದವರು ಬರುವರು. ಐದುಮುಖ, ಹತ್ತುಭುಜ ಪುಳ್ಳವರುಸಹಾ ಬಂದಾರು ಜಲಸ್ತಂಭನ, ಅಗ್ನಿಸ್ತಂಭನ, ದೂರದೃಷ್ಟಿ, ದೂರಶ್ರವಣದವರೂ ಬಂದಾಗ್ಯೂ ಅವರನ್ನು ನಂಬಲಾಗದು. ಕ್ರೋಧನನಾಮ ಸಂವತ್ಸರದಲ್ಲಿ ಶ್ರೀ ಚೆನ್ನಬಸವೇಶ್ವರದೇವರು ಬಂದಾರು, ವೀರವಸಂತರಾಯನು ಬರುತ್ತಾನೆಂದು ಹೇಳಿದಾಗ್ಯೂ ಮತ್ತು ಬಂದಕಾಲಕ್ಕೂ ನಂಬಲಾಗದು". ಎಂದು ಬರೆದಿರುತ್ತಾರೆ. ಈವಾಕ್ಯಗಳಲ್ಲಿ ರುದ್ರಮುನಿಸ್ವಾಮಿಯು ಎರಡು ಕ್ರೋಧನನಾಮ ಸಂವತ್ಸರಗಳನ್ನು ಉಲ್ಲೇಖಿಸಿ, ನನ್ನ ವಿಷಯವನ್ನು ಸ್ಪಷ್ಟಪಡಿಸಿರುತ್ತಾರೆ. ಸ್ವಾಮಿಗಳು ಹೇಳಿದಪ್ರಕಾರ ಅರವತ್ತು ವರ್ಷಗಳಹಿಂದೆ ಕಳೆದುಹೋದ ಕ್ರೋಧನನಾಮ ಸಂವತ್ಸರದಲ್ಲಿ ಕಾಲಜ್ಞಾನದಪ್ರಕಾರ ರಾವಣ ಅವತಾರಿಕರು ಅಂದರೆ ಯೂರೋಪಿಯರ್ಸ್ ಪಾದ್ರಿಗಳು ಜಲಸ್ತಂಭನ ಮತ್ತು ಅಗ್ನಿಸ್ತಂಭನ ಎಂದರೆ 'ಇಂಜಿನ್ನುಗಳನ್ನು ಮತ್ತು ಹಡಗುಗಳನ್ನೂ, ದೂರದೃಷ್ಟಿ, ದೂರಶ್ರವಣವೆಂದರೆ 'ದುರ್ಬೀನಿನಿಂದನೋಡುತ್ತಲೂ ಟೆಲಿಫೋನಿನಿಂದ ಕೇಳುತ್ತಲೂ. ಇಂಡಿಯದೇಶಕ್ಕೆ ಬಂದಿದ್ದಾರೆ. ಇಂಥವರನ್ನು ನಂಬಕೂಡದೆಂದು ರುದ್ರಮುನಿಸ್ವಾಮಿಯು ಬರೆದಿರುತ್ತಾರೆ. ಮುಂದೆಬರುವ ಕ್ರೋಧನನಾಮ ಸಂವತ್ಸರದಲ್ಲಿ ನನಗೆ ವಿರೋಧಿಗಳಾದ ಜೈನರು ನನ್ನನ್ನು ಮತ್ತು

ವೀರವಸಂತರಾಯನನ್ನು ಮೋಸಗಾರರೆಂದು ಹೇಳುವರು, ಅಷ್ಟೇಹೋದರೆ ಯಾವ ಕಾಲಜ್ಞಾನಗಳಲ್ಲಿಯೂ ತನ್ನನ್ನು ಅಂದರೆ ಚೆನ್ನಬಸವೇಶ್ವರರನ್ನು ನಂಬಬಾರದೆಂದು ಬರದಿರುವುದಿಲ್ಲ ರುದ್ರಮುನಿಸ್ವಾಮಿಗಳೇ ತಮ್ಮ ಕಾಲಜ್ಞಾನದ ಹದಿನಾಲ್ಕನೇ ಪುಟದಲ್ಲಿ ''ಸತ್ಯ ಚೆನ್ನಬಸವೇಶ್ವರರು ರಕ್ತಾಕ್ಷಿನಾಮ ಸಂವತ್ಸರದಲ್ಲಿ ಬರುತ್ತಾರೆಂದು'' ತೋರಿಸುತ್ತಾರೆ. ಅದು ಹ್ಯಾಗೆಂದರೆ—ರುದ್ರಮುನಿಯು ಅದೇ ಹದಿನಾಲ್ಕನೆಯ ಪುಟದಲ್ಲಿ ''ರಕ್ತಾಕ್ಷಿನಾಮ ಸಂವತ್ಸರದಲ್ಲಿ ಕಲ್‌ಬುರ್ಗಿಯಲ್ಲಿ ದೇವರಪೂಜೆಯು ಮಧ್ಯಾಹ್ನ ನಿಂತುಹೋದೀತು, ಆಮೇಲೆ ನಮ್ಮಗಣಂಗಳು ಹೊರಬುಬಂದಾರು''. ಎಂಬದಾಗಿ ಪ್ರಕಟಿಸಿರುತ್ತಾರೆ. ಇದೇಗೀತಿಯಲ್ಲಿ, ರಕ್ತಾಕ್ಷಿನಾಮ ಸಂವತ್ಸರದೊಳಗೆ ಎಂದರೆ ಇದೇವರ್ಷ ಕಲ್‌ಬುರ್ಗಿಯಲ್ಲಿ ಹಿಂದೂ ಮುಸಲ್ಮಾನರ ದಂಗೆಯಾಗಿ, ದೇವರಪೂಜೆ ನಿಂತುಹೋಯಿತು. ಮತ್ತು ನಾನುಕೂಡ ಅವರಹೇಳಿಕೆಪ್ರಕಾರ ಇದೇ ಸಂವತ್ಸರದಲ್ಲಿ ನನ್ನ ಗಣಂಗಳೆನ್ನು ಬೇಪಸಂಚಾರಕ್ಕೆ ಕಳುಹಿಸಿರುತ್ತೇನೆ. ನಾನು ಇದೇಸಂವತ್ಸರದಲ್ಲಿ ಕಂಡುಬಂದಿರುತ್ತೇನೆ. ಮಖಂದಿನ ಕ್ರೋಧನನಾಮ ಸಂವತ್ಸರಕ್ಕೆ ಬರುವವರುಮಾತ್ರ ಮೋಸಗಾರರು.

೩-ನೇ ಸಂಶಯ :—'' ಬೆರಣಿ ಮುಳಗೀತು ''

ಇದು ಮತಮಾನ್ಯದವರೆಲ್ಲರೂ ಕೆಟ್ಟು ಭ್ರಷ್ಟರಾದರು. ಮತ್ತು ಜಂಗಮರು ಜಗಭಂಡರಾದರು. ಎಂದು ಸೂಚಿಸುತ್ತದೆ.

೩-ನೇ ಸಂಶಯ :—'' ಕಲ್ಲುಕೋಳಿ ಕೂಗಿತು, ಮುಲ್ಲಾನುಬಂದು ಚೂರಿ ಹಾಕ್ಯಾನು '' (ರುದ್ರಮುನಿ)

ಇದರ ಅರ್ಥವೇನೆಂದರೆ—ಕರ್ಮಕಲಿಹೋಗಿ ಧರ್ಮಕಲಿ ಪ್ರಾರಂಭವಾಯಿತೆಂದು ಕರ್ಮಕಲಿ ಕತ್ತಲೆ ಧರ್ಮಕಲಿ ಬೆಳಕು. ರೂಢಿಯಾಗಿ ಕೋಳಿಯು ಬೆಳಕು ಹರಿಯುವಹೊತ್ತಿನಲ್ಲಿ ಕೂಗುತ್ತದೆ. ಅದರಂತೆಯೇ ಧರ್ಮಕಲಿಯೆಂಬ ಬೆಳಕು ಬರುವಕಾಲಕ್ಕೆ ಕಲಿಕೂಗುತ್ತದೆ.

೪-ನೇ ಸಂಶಯ .—''ಹಂಪೆಯ ನೆಲದಲ್ಲಿ ಎಂಭತ್ತುಲಕ್ಷ ದಂಡುಕೂಡಿ ರಕ್ತ ಕಾಲುವೆ ಹರಿಯುಬೇಕು ರಾಮರಾಜನತಲೆಕಡಿಯುವೇಕು''.ಈವಿಷಯವು ಮೂರು ನೂರು ವರ್ಷಗಳಿಂದೆಯೇ ಚರಿತ್ರಾಧಾರದಿಂದ ನಡೆದಿರುತ್ತದೆಯೆಂದು ತಿಳಿಯುಬರುತ್ತದೆ. ಆದ್ದರಿಂದ ಇತಿಹಾಸ ಜ್ಞಾನವಿಲ್ಲದ ಜನರು ಆಕುಲಬುಹುನ್ನು ಇನ್ನೂ ಎದುರುನೋಡುತ್ತಿರುವರು ಮತ್ತು ರುದ್ರಮುನಿಸ್ವಾಮಿಗಳು ತಮ್ಮ ಪುಸ್ತಕದ ಎಂಭತ್ತೊಂಬತ್ತನೆಯ ಪುಟದಲ್ಲಿ ಆನಂದನಾಮ ಸಂವತ್ಸರದಲ್ಲಿ ವೀರವಸಂತರಾಯ ಗಾಡಿಯುಪೇಟೆ ಕೂಡುವ ಕುರುಹಿಗೆ ಆಧಾರವಾಗಿ ಬಿಜಾಪುರಕೋಟೆಯಲ್ಲಿ ಒಂಭತ್ತುಲಕ್ಷ ದಂಡು ಮಡಿಯುಬೇಕು. ಮತ್ತು ರಕ್ತಕಾಲುವೆ ಹರಿಯುಬೇಕೆಂದು' ನಮೂದಿಸಿರುತ್ತಾರೆ.

ಇದೇಪ್ರಕಾರ ಸಂಧಿ ಆನಂದನಾಮ ಸಂವತ್ಸರದಲ್ಲಿ ಬಿದಿರುಕೋಟಿಯಲ್ಲಿ ದಂಡು ಕೂಡಿತ್ತು ಮತ್ತು ರಕ್ತಕಾಲುವೆಯು ಹರಿಯಿತು. ಹ್ಯಾಗೆಂದರೆ ರಕ್ತಕಾಲುವೆ ನಿಜವಾಗಿಯೂ ಬಿದಿರುಕೋಟಿಯಲ್ಲಿ ಹರಿಯಿಲ್ಲಿಲ್ಲ. ಆದರೆ ಇದೇಸಂವತ್ಸರದಲ್ಲಿ ಹಿಂದುನ್ನಾನದಜನರು 'ತ್ರಾಬಲನ್ನು ಮತ್ತು ಜರ್ಮನಿಯುದ್ಧಕ್ಕೆಹೋಗಿ ಮಡಿದರು ಅಲ್ಲಿ ರಕ್ತಕಾಲುವೆಯೂ ಹರಿಯಿತು. ಪ್ರಯುಕ್ತ. ಜ್ಞಾನಿಗಳಿ, ಕಾಲಜ್ಞಾನಗಳು ಸುಳಿಯಾಗುವುದಲ್ಲ ಮತ್ತು ಸುಳ್ಳು ಆಗಲಿಲ್ಲ. ತಿಳಿದುಕೊಳ್ಳಲು ಬುದ್ಧಿಬೇಕಾಗಿರುತ್ತದೆ. ಎಷ್ಟೋ ಆಧಾರಗಳಿಂದ ನಾವಿರದ ಒಂಭೈನೂರ ಹದಿನಾಲ್ಕನೆ ಇಸ್ವಿಯೆರಲ್ಲಿ ಅಂದರೆ ಸಂಧಿ ಆನಂದನಾಮ ಸಂವತ್ಸರದಲ್ಲಿ ವೀರವಸಂತರಾಯನು ಪಟ್ಟಕ್ಕೆ ಕುಳಿತುಕೊಂಡಿದ್ದು ಜಗತ್ಪ್ರಸಿದ್ಧಿಯಾಗಿದೆ. ಈವಿಷಯವನ್ನು ಅನೇಕರು ತಿಳಿದೂಕೂಡ ಅಜ್ಞಾನದಿಂದ ಮೂಢರಾಗಿ ಕಣ್ಣುಮುಚ್ಚಿಕೊಂಡು ಬಿದಿರುಕೋಟಿಯಲ್ಲಿ ರಕ್ತಪ್ರವಾಹ ಹರಿಯುವದೆಂದು ಎದರರನೋಡಿತ್ತಿರುವುದು ಆಶ್ಚರ್ಯ.

'ಬಿದುರುಕೋಟಿ, ಇದರ ಪ್ರತಿಪದಾರ್ಥದ ಅರ್ಥವನ್ನು ಮಾಡಿದ್ದಲ್ಲಿ 'ಬಲವತ್ತರ ಕೋಟಿ, ಎಂದು ಆಗುತ್ತೆ. ಹೀಗೆಯೇ ಮೇಲೆಹೇಳಿದ ಯುದ್ಧಗಳಲ್ಲಿ ಶತ್ರುಸೈನ್ಯದವರು ಅನೇಕ ಕೋಟಿಗಳನ್ನು ಹಿಡಿದು ನಾಶಮಾಡಿ ರಕ್ತಕಾಲುವೆಯನ್ನು ಹರಿಸಿದರು. ಇದರಲ್ಲಿ ಪ್ರಸಿದ್ಧವಾದ ಬೆಲ್ಜಿಯಂ ಎಂಬಕೋಟಿಯು ಹಿಡಿಯಲ್ಪಟ್ಟು ಅನೇಕ ಲಕ್ಷಜನರು ಹತರಾಗಿ ರಕ್ತಕಾಲುವೆ ಹರಿದುದು.

೫ನೇ ಸಂಶಯ :—"ಕರೇಮಲ್ಲಿಗೆಯ ಪುಷ್ಪವಾದಾಪ್ರ"

ಅದೇಪ್ರಕಾರ ನಾನು ಮತ್ತು ವೀರವಸಂತರಾಯ ಕ್ಷಯನಾಮ ಸಂವತ್ಸರದಲ್ಲಿ ಎಲ್ಲಕೆಲಸಗಳನ್ನು ತೀರಿಸಿಕೊಂಡು ಕಲ್ಯಾಣಪಟ್ಟಣಕ್ಕೆ ಹೋದಮೇಲೆ ಪುಷ್ಪಗಳಾಗುವವು.

೬ನೇ ಸಂಶಯ :—"ಶ್ರೀರಾಮಪುರದ ಬ್ರಾಹ್ಮಣನ ಹೊಟ್ಟೆಯಲ್ಲಿ ಒಂಭತ್ತು ಹೆಣ್ಣುಕೂಸು ಹುಟ್ಟುವುದು. ಅದು ಏಳುವರ್ಷದ ಹುಡುಗಿಯಾಗಿ ಗಂಡನಿಲ್ಲದೆ ಗರ್ಭಿಣಿಯಾಗಿ ಒಂಭತ್ತು ಮಕ್ಕಳನ್ನು ಹಡೆದಾಳು". (ರುದ್ರಮುನಿ)

ಈವಿಷಯವನ್ನು ಅನೇಕಜನರು ತಿಳಿಯಲಾರದೆ ಆಶ್ಚರ್ಯಪಡುತ್ತಿರಬಹುದು ಈಸಂಗತಿಯು ಸ್ವಲ್ಪವೂ ಆಶ್ಚರ್ಯಸ್ಪದವಾಗಿಲ್ಲ. ಮೇಲಿನ ವಾಕ್ಯದಲ್ಲಿ ಸೂಚಿಸಿರುವಂತೆಯೇ ಶ್ರೀರಾಮಪುರದ ಹುಡುಗಿಯಹೊಟ್ಟೆಯಲ್ಲಿ ಆದಿವ್ಯ ಜ್ಞಾನವುಳ್ಳ ಕೂಸು ಹುಟ್ಟಿ, ನನ್ನ ಮತ್ತು ವೀರವಸಂತರಾಯನ ಕುರುಹುಗಳನ್ನುಹೇಳಿ ಐಕ್ಯವಾಯಿತು. ಈವಿಷಯವನ್ನು ತಿಳಿಯಲಪೇಕ್ಷಿಸುವವರು ನಮ್ಮಲ್ಲಿಬಂದು ಪ್ರಶ್ನಿಸಬಹುದು.

೩-ನೇ ಸಂಶಯ ;—ರುದ್ರಮುನಿ ಪುಟ ಹದಿಮೂರೆರಲ್ಲಿ "ಆನೆಏರಿಬರುವ ಶಿವೇಂದ್ರಪಾಶ್ವಸಮೇಲೆಬಿಮ್ದ ಕೀರೀಟರಾಮರಾಜನು ಚಂದ್ರಾಯುಧದಿಂದ ಆತನ ತಲೆಯನ್ನು ಕೊಸಯುವನು ಎಂದು" ಬರೆದಿರುತ್ತಾರೆ. ಇದರ ನಿಶ್ಚಯಸಂಗತಿ ಏನಂದರೆ ವಿಜಾಪುರದರಾಜರು ರಾಮರಾಜನನ್ನು ಸಾವಿರದಏನೂರ ಅರವತ್ತವಲೂರು (೧೫೬೫)ರಲ್ಲಿ ನಡೆದ ಯುದ್ಧದಲ್ಲಿ ತಲೆಯನ್ನುಕೊಯ್ದು, ಭಲ್ಲೆಯಕ್ಕೆಸಿಗಿಸಿ, ಮೆರವಣಿಗೆಮಾಡಿದರು. ಈವಿಷಯವು ಚರಿತ್ರಾಧಾರವಾಗಿದೆ.

೪-ನೇ ಸಂಶಯ .—"ಚಂದ್ರಗುಪ್ತ ಮಹಾರಾಜನು ಬೈಲಿಗೆಬೀಳುವನು ಈ ಸಂಗತಿಯನ್ನು, ಮೂಢರಾದವರು ತಮ್ಮತಪ್ಪು ತಿಳುವಳಿಕೆಗಳಿಂದ ಚಂದ್ರಗುಪ್ತ ರಾಜನ ಶಿಲಾಮೂರ್ತಿಯು ಪುನರ್ಜೀವವಾಗುವುದೆಂದು ನಂಬಿರುತ್ತಾರೆ. ಆದರ ಅದರ ನಿಜಾರ್ಥವೇನಂದರೆ ಅಧರ್ಮರಾಜ್ಯವುಹೋಗಿ, ಧರ್ಮರಾಜ್ಯವು ಯಾವರೀತಿಯಲ್ಲಿ ಚಂದ್ರಗುಪ್ತ ಮಹಾರಾಜನಿಂದ ಸ್ಥಾಪಿಸಲ್ಪಟ್ಟಿತ್ತೋ, ಅದೇರೀತಿಯಲ್ಲಿ ಈಗಲೂ ಧರ್ಮರಾಜ್ಯವು ಸ್ಥಾಪಿಸಲ್ಪಡುವುದೆಂದು ತಿಳಿಯಬೇಕು.

೫-ನೇ ಸಂಶಯ:—" ಆಕಾಲದಲ್ಲಿ ಐದುವರಹಾಕ್ಕೆ ಒಂದುಲಿಂಗಮಾರಿ ತು ". ಇದಕ್ಕೆ ತಪ್ಪುತಿಳಿವಳಿಕೆಯುಳ್ಳ ಧರ್ಮ ಪಕ್ಷಪಾತಿಗಳು ಇದೇ ಶಿಲಾಮಯಲಿಂಗವ್ರ ಐದುವರಹಕ್ಕೆ ಎಂದರೆ ಇಪ್ಪತ್ತುರೂಪಾಯಿಗಳಿಗೆ ಮಾರಲ್ಪಡುವದೆಂದು ನಂಬುತ್ತಾರೆ. ಆದರೆ ಪುರಾತನರು ತಮ್ಮ ಕಾಲಜ್ಞಾನಗಳಲ್ಲಿ ಈಶಿಲಾಮಯವಾದ ಲಿಂಗದ ಸಲುವಾಗಿ ಏನುಬರೆದಿರುತ್ತಾರೆಂಬುದನ್ನು ಜನರು ಲಕ್ಷ್ಯಮಾಡುವುದಿಲ್ಲ, ಪುರಾತನರಲ್ಲಿ ಒಬ್ಬರಾದ ಕೊಡೆಕಲ್ಲು ಬಸಪ್ಪನವರು ತಮ್ಮ ಪುಸ್ತಕದ ಅರವತ್ತೊರಡನೆಯ ಪುಟದಲ್ಲಿ "ಆಕಾರಪೂಜೆ ಓಕುಹೋಯಿತಾವುಮುಂದೆ" ಎಂದುಸಾರಿಹೇಳಿರುತ್ತಾರೆ ಇದೇರೀತಿಯಲ್ಲಿ ಪುನಃ ಚನ್ನಬಸವೇಶ್ವರರ ಮತ್ತು ವೀರವಸಂತರಾಯನ ಕರ್ತವ್ಯ ಕ್ರಮಗಳ ವಿಷಯವಾಗಿ, ಬರೆದಿರುವದೇನಂದರೆ "ಕಲ್ಯಾಣಕ್ಕೆಬಂದು, ಚೆನ್ನಬಸವಂಣ ಮತ್ತು ವೀರವಸಂತರಾಯನ ಮುಖದೇ ಮಹೋತ್ಸವನ್ನು ಹೇಳಲ ಸಾಧ್ಯವು. ಉತ್ಸವಕ್ಕೆ ಚೆನ್ನಾಗಿ ಅಂಗನೆಯರು ಮಂಗಳಾರತಿಬೆಳಿಗಿ, ನಾನಾವಿಧ ವಾದ್ಯಘೋಷ ಗಳಿಂದ ಈಶಿವ ಮಠದ ಸರ್ವ ರೂಳಿ ಕೂಡಿ ಗಿರಿಯಮೇಲಿನ ಆಲವುಧರಯಮೇಲೆ ಆಚರಿಸಬೇಕೆಂದು ಕರ್ಮಕಲಿಯನ್ನು ಕೆಳಗಿಳಿಸಿ, ಧರ್ಮಕಲಿಯನ್ನಾಳಿಸಿ ಮುಂದೆ, ಶರಣರ ಕರ್ಮವಿಧಿಗಳನ್ನೆ ಮುರಿಯುವರು—ಅವು ಯಾವುವೆಂದರ;—ಹಗಣೆಯು ಹಬ್ಬಗಳು, ನಾಮ, ಅತಿವಿಜೃತ್ರರೂಪ್ರ, ತೀರ್ಥಗಳು, ಕಾರಣಾದಿಬಾಲೆ, ನಾಥವಿರಾಪ ದೇವರು. ಮೀಸಲುಶಂಕರ, ಕೆಂಪುಜೋಳ, ಬಿಳಿಜೋಳ, ಗೋಧಿ, ಕಡಲೆ, ರೊಟ್ಟಿ, ಅಮೃತ, ಜ್ಯೋತಿ, ಇಂತಿಪ್ಪ ಬಹುಬಲಾಗಿ, ಹಾಗೆ ಕಾರಣದ ಅವತಾರು, ಕುತುಮು, ಮುನಿಸಲುಸಿಮಿಳ್ಳ, ಮಸಿ, ಮಂತಾಪ ಕುಡಗೋತ್ರ ಜಾತಿವರ್ಣಗಳೂ, ಮುಂದೆ ಅಮುಪಾಸ್ಯ ಪಾಪ,ತಿಳಿ, ನಕ್ಷತ್ರ, ಶುಭ, ಅಶುಭ, ಪುಣ್ಯ, ಪಾಪ, ಸಿರಿ, ದಾರಿದ್ರ್ಯ,

ಹಿರಿದು, ಕಿರಿದು, ಸರ್ವಾನುಸರಿಸಿಮಾನರೂಪವಾಡಿ, ಕಾಮ, ಕಾಲ, ಮದ, ವ್ರತ ತಪ್ಪಿಸಲು; ಆಗ ಕಲ್ಲೆಲ್ಲಕನಕವಾಗಿ ಹುಲ್ಲೆಲ್ಲ ರಾಜನ್ನವಾಗಿ, ಬಳ್ಳಿಸೊಂಡಲಿ ಮಿದ್ರು ಮುಲತೆ, ಕಾಮಧೇನು, ಪರಶು ಚಿಂತಾಮಣಿಮುಂತಾದ ಅನಂತವಸ್ತುಗಳುಂಟಾಗಿ ಆಕ್ಕೈಲಾಸವೇಹಾಳವಾಗಿ, ಭೂಕ್ಕೈಲಾಸವೇತುಂಬಿ ಶಿಲಾಪೂಜೆಗಳುಅಳಿದು ಶಿವನು ಪ್ರತ್ಯಕ್ಷವಾಗಿ ಕರೆದರೆ ಅಲ್ಲಲ್ಲಿ 'ಓ,ಎಂದು ನಿಜಭಕ್ತರಲ್ಲಿ ಪೂಜೆಗೊಳುತ್ತ ಬಸವನ ಉತ್ಸವವ್ರ ಉಪಸರಿಸಿ ಮನೆಮನೆಗೆ ಲೀಲೇ ತಿರ್ಥಪ್ರಸಾದಂಗಳು ಆಗುವವ್ರು" ಈಹೇಳಿಕೆಯಂತೆ ಸ್ಥಾವಿರಾದಿ ದೇವತೆಗಳುಎಲ್ಲ ಲಯವಾಗುವವು ಮತ್ತು ಶಿಲಾಪೂಜೆಗಳೆಲ ಅಳಿದು, ಶಿಲಾಮಯಲಿಂಗವೆಂಬ ಇಷ್ಟಲಿಂಗವು ನಾಶಹೊಂದುವವ್ರು. ಈಕಾರ್ಯಗಳು ಚೆನ್ನಬಸವೇಶ್ವರರು ಮತ್ತು ವೀರವಸಂತರಾಯರಿಂದ ಜರಿಗಸಲ್ಪಟ್ಟು ಪೂಜಾರ್ಹವಾವ ವಸ್ತುವು ಪ್ರಪಂಚದಲ್ಲಿ ಇಲ್ಲದ ಹಾಗಾಗುವವು. ಆಗ, ಶಿಲಾಮಯಲಿಂಗವು ಹಂಪೆಯ ಸ್ಥಳದಲ್ಲಿ ಇಪ್ಪತ್ತು ರೂಪಾಯಿಗೆ ಬಂದರಂತೆ ಮಾರಬೇಕೆಂಬ ಜನಗಳ ತಿಳುವಳಿಕೆಯು ತಪ್ಪುಆಗಿರುವುದು. ಮತ್ತು ಶಿಲಾಮಯಲಿಂಗವು ಇಪ್ಪತ್ತು ರೂಪಾಯಿಗಳಿಗೆ ಬಂದರಂತೆ ಮಾರಲ್ಪಡುವುದು ಆಶ್ಚರ್ಯವು. ಇದು ಎಂದಿಗೂ ಆಗಲಾರದು. ಅದಕ್ಕೆ ವ್ಯತಿರಿಕ್ತವಾಗಿ ಅಖಿಲಬ್ರಹ್ಮಾಂಡ ಲೇಖವುಳ್ಳ ಲಿಂಗ ಎಂದರೆ 'ಖುರ್ಜಾ, ಇಪ್ಪತ್ತು ರೂಪಾಯಿಗೊಂದರಂತೆ ಮಾರಲ್ಪಡುವುದು.

ಂನೇ ಸಂಶಯ :—" ಶ್ರೀಚೆನ್ನಬಸವೇಶ್ವರದೇವರು ಕ್ಷಯನಾಮ ಸಂವತ್ಸರ ಕಾರ್ತಿಕಶುದ್ಧ ನವಮಿ ಶುಕ್ರವಾರ ಸ್ವಾತಿಕರ್ಷತ್ರದಲ್ಲಿ ಹದಿನೆಂಟುಳಿಗೆಯಮೇಲೆ ಹಸರು ತೇಜಿಯನ್ನೇರಿ, ಏಳನೂರ ಎಪ್ಪತ್ತು ಮಂದಿ ಅಮರಗಣಂಗಳನ್ನೂ, ಅರವತ್ತೆರಡುಮಂದಿ ಪುರಾತನರನ್ನು ಹನ್ನೆರಡುಸಾವಿರ ಜಂಗಮರ ಸಮೂಹವನ್ನು ಹಿಂದಿಕೊಂಡು..... .....ಶ್ರೀ ನಂದೇಶ್ವರನ ಬೆಟ್ಟಕ್ಕೆಬಂದು ಆನಂದೇಶ್ವರನ ದರುಶನವನ್ನು ಮಾಡಿಕೊಂಡು ಹನ್ನೆರಡುಸಾವಿರ ಜಂಗಮಾರ್ಜನ್ನೆಯನ್ನು ಮಾಡಿಸಿ, ಅಲ್ಲಿಂದ ವಿರೂಪಾಕ್ಷೇಶ್ವರನ ಬಳಿಗೆಬಂದು ಪಂಪಾಪುರವನ್ನುಹೊಕ್ಕು ವೀರವಸಂತರಾಯನಸಂಗಡ ಪ್ರಸಂಗಮಾಡುತ್ತಿರಲು" ಎಂದು ರುದ್ರಮುನಿಸ್ವಾಮಿಗಳು ಬರೆದಿರುತ್ತಾರೆ. ಜನರು ಈವಾಕ್ಯಗಳನ್ನು ತಪ್ಪಾಗಿತಿಳಿದುಕೊಂಡು ನನ್ನನ್ನು ಮೇಲೆಹೇಳಿದಪ್ರಕಾರ ವಿಜೃಂಭಣೆಯಿಂದಲೂ ಮತ್ತು ಸಮೂಹದಿಂದಲೂ ಬರಲಿಲ್ಲ ವೆಂದು ಹೇಳುತ್ತಾರೆ. ಆದರೆ ಅವರು ಕ್ಷಯನಾಮಸಂವತ್ಸರವ ಹಂಬಲವನ್ನು ಮರೆತಿರುತ್ತಾರೆ. ಜ್ಞಾನಿಗಳಿರಾ ! ಈವಾಕ್ಯಗಳುಮುಂದೆ ನಾನು ಕ್ಷಯನಾಮ ಸಂವತ್ಸರದಲ್ಲಿ ಹಂಪೆಗೆಹೋಗುವ ರೂಪುರೀತಿಗಳನ್ನು ವ್ಯಕ್ತಪಡಿಸುತ್ತವೆ. ಆದರೆ ನಾನು ರುಧಿರೋದ್ಗಾರಿನಾಮ ಸಂವತ್ಸರದಲ್ಲಿ ಗದಗಿನಲ್ಲಿ ಪ್ರಚಾರಕ್ಕೆಬಂದಿರುವ ರೂಪು ಭಕ್ತವಿರಕ್ತವಾಗಿರುತ್ತದೆ. ಈವಿಷಯದಲ್ಲಿ ಮೌನೇಶ್ವರರು, ರುದ್ರಗೋಪಾಲರ ಮತ್ತು ಕೊಡಕಲ್ಲು ಬಸಪ್ಪನವರು "ಸಸಿಮೂಡಿದಂತೆ ಮೂಡುತ್ತಾನೇ ಗುರುತಾಯ ಚನ್ನಬಸವೇಶ್ವರನಿಗೆ ಜನರು ಕಂಡಕೂಡಲೆ ಸುಳ್ಳುಸುಳ್ಳುಎನುವರು"

ಎಂದು ಹೇಳಿರುತ್ತಾರೆ. ಮತ್ತು "ಲೋಕದ ಅಂಧಕರಿಗೂ ಕುರಿಗಳಿಗೂ ಮತ್ತು ಕುರಿಗಳಿಗೂ ಮತ್ತು ಕುನ್ನಿಮಾನವರಿಗೂ ಏನು ತಿಳಿಯುವುದಿಲ್ಲ" ಎಂದು ಬರೆದಿರುತ್ತಾರೆ. ಇದರಿಂದ ಚೆನ್ನಬಸವೇಶ್ವರಿಗೆ ಅಂದರೆ ನನಗೆಷ್ಟೊದಲು, ಮೊದಲು ಬಹಳ ಕಷ್ಟಗಳಿರುತ್ತವೆಯೆಂದು ತಿಳಿಯುಬರುತ್ತದೆ. ಹಾಗಲ್ಲದೆ, ಜನರ ತಿಳಿವಳಿಕೆಯು ಪ್ರಕಾರ ಈಗಲೇ ಹನ್ನೆರಡುನಾವಿರ ಜಂಗಮರು, ಏಳೆನೂರೆ ಎಪ್ಪತ್ತುಮಂದಿ ಅವರುಗಣಂಗಳು ಅರವತ್ತು ಮೂರು ಪ್ರಕಾತನರನ್ನು ಹಿಂದಿಟ್ಟುಕೊಂಡು ಹನರುತೇಜಿಯನ್ನು ಏಳಿಸಿಂದಿದ್ದರೆ ನಂಬವದರುಯಾರು ಇರುತ್ತಿದ್ದರು? ಇದರಿಂದ ನಾನು ರಕ್ತಾಕ್ಷನಾಮಸಂವತ್ಸರದಲ್ಲಿ ತುಂಬ ಕಷ್ಟಪಟ್ಟವೇಲೆ ಅರವತ್ತು ಮೂರು ಪ್ರಕಾತನರು ಸಿಗುವೆನು. ಮತ್ತು, ಖರನೆಯುವರ್ಷ ಅಂದರೆ ಕ್ರೋಧನನಾಮ ಸಂವತ್ಸರದೊಳಗೆ ನಷ್ಟಪಟ್ಟರೆ ಏಳೆನೂರೆ ಎಪ್ಪತ್ತು ಅಮರಗಣಂಗಳು ಸಿಕ್ಕುವರು. ಮೂರನೇವರ್ಷ ಅಂದರೆ ಕ್ಷಯನಾಮ ಸಂವತ್ಸರದಲ್ಲಿ ಕಾರ್ತಿಕ ತಿಂಗಳವರಗೂ ಕಷ್ಟಪಟ್ಟರೆ ಹನ್ನೆರಡುನಾವಿರ ಜಂಗಮರು ಸಿಕ್ಕುವರುಎಂದು ವ್ಯಕ್ತವಾಗುತ್ತದೆ. ನಂತರ ಇವರೆಲ್ಲರನ್ನು ಹಿಂದಕ್ಕೆ ಇಟ್ಟುಕೊಂಡು ಪಂಪಾಪುರಕ್ಕೆಂದರೆ ಹಂಸೆಗೆ ಹೋಗುವೆನು. ಅಂಥ ಸೂಪರೀತಿಯನ್ನು ನೋಡಿಯೂ ಹಂಪೆಯ ಕುರುಹು ಏನ್ನುನೋಡಿಯೂ ಒಂದೆ ದಿವಸದಲ್ಲಿ ಸುತ್ತು ಮುತ್ತಲಿನ ಹನ್ನೆರಡು ಹರಿದಾರಿಯ ದೂರಪ್ರದೇಶಗಳ ಜನರು ನಂಬುವರು. ಪ್ರಯುಕ್ತ ಜ್ಞಾನಿಗಳಿರಾ ಭವಬಂಧರವಾದ ಕುರುಹುಗಳನ್ನುನೋಡಿ ನಂಬುವರು ಕುರಿಗಳು ಆದ್ದರಿಂದ ಜ್ಞಾನವೃಷ್ಟಿಯಿಂದ ಈಗಲೇ ನನ್ನನ್ನುನೋಡಿ ನಿಜಾಂಗವನ್ನುತಿಳಿದು ಸತ್ಪಾತ್ರರಲ್ಲಿ ಸಮಾವೇಶವಾಗಿರಿ.

ಸಿದ್ಧೀಶ್ವರಿಂದಾರ ಚೆನ್ನಬಸವೇಶ್ವರ.

ನ್ಯೂಟ್ ಅಂಡ್ ಕೋ., ಬೆಂಗಳೂರು ದಂಡು.

೧೯೦೫.

೩೦೦೦ ಕಾಪಿಗಳು.

# ನೋಟೀಸು.

---

೧. 'ಇ' ಆಧಾರದ ಪುಸ್ತಕ,

ಇದರಲ್ಲಿ ಚೆನ್ನಬಸವೇಶ್ವರರು ಘುಸಲ್ಮಾನರಿದ್ದಾರೆಂಬುದಕ್ಕೆ ಕಾಲ ಜ್ಞಾನಗಳ ನಿದರ್ಶನಗಳಿಂದ ಬರೆಯಲ್ಪಟ್ಟಿದೆ. ಕ್ರಯ ೦—೦—೬

೨. 'ಜಹೂರೆ ಚೆನ್ನಬಸವೇಶ್ವರ್',

ಉರ್ದುಭಾಷೆಯಲ್ಲಿ ಬರೆಯಲ್ಪಟ್ಟಿದೆ.

ಇದು ಕಾಲಜ್ಞಾನಗಳ ಆಧಾರಗಳಿಂದ ಚೆನ್ನಬಸವೇಶ್ವರರು ಪ್ರತ್ಯಕ್ಷ ವೈದೋರುವ ಕಾಲವು ಇದೇಎಂಬುವುದಕ್ಕೆ ಸಿದ್ಧಾಂತಗಳಿಂದಲೂ, ಅಂತರಂಗ ಬಹಿರಂಗ ಕುರುಹುಗಳಿಂದಲೂ ಬರೆಯಲ್ಪಟ್ಟು ಅಂದವಾದ ಕಾಗದದಮೇಲೆ ಮುದ್ರಿಸಲ್ಪಟ್ಟಿದೆ. ಇದರಲ್ಲಿ ಎರಡುಕೈಗಳ ಚಿತ್ರಗಳೂ ಕೂಡ ಇವೆ. ಕ್ರಯ ೦—೪—೦

೩. ಸಪ್ತಾಹಿಕ ಪತ್ರವು ಸ್ವಲ್ಪದಿವಸಗಳಲ್ಲಿಯೇ ಹೊರಡತಕ್ಕದ್ದಿರುವುದು ಇದಕ್ಕೆ ವರ್ಷ ಒಂದಕ್ಕೆ ನಾಲ್ಕು ರೂಪಾಯಿಗಳಿಗಿಂತಲೂ ಹೆಚ್ಚಾಗಿ ಆಗಲಾರದು.

೪. ಉರ್ದು, ಕನ್ನಡ, ಇಂಗ್ಲೀಷ್ ಹ್ಯಾಂಡ್ ಬಿಲ್‌ಸ್‌ಗಳು ಅರ್ಧ ಆಣೆ ಸ್ಟ್ಯಾಂಪು ಕಳುಹಿಸಿಕೊಟ್ಟಲ್ಲಿ ಆಯಾಯ ಆಫೀಸುಗಳಿಂದ ಕಳುಹಿಸಲ್ಪಡುವುದು ಮತ್ತು ಕೈಗಳ 'ಬ್ಲಾಕ್', ಎಂದರೆ ಕೈಯಲ್ಲಿರುವ ಕುರುಹುಗಳನ್ನು ತೋರಿಸುವ ಕಾಗದಗಳು ಅಪೇಕ್ಷೆಪಟ್ಟಲ್ಲಿ ಕಳುಹಿಸಲ್ಪಡುವುವು.

---

ನಮ್ಮ ವಿಳಾಸ :—

ದೀಂದಾರ್ ಚೆನ್ನಬಸವೇಶ್ವರರ ಆಫೀಸು

ಹುಬ್ಬಳ್ಳಿ, ಗದಗು, ಧಾರ್ವಾಡ, ತುಮಕೂರು.

ಇದರಲ್ಲಿ ಯಾವದಾದರೂ ಒಂದಕ್ಕೆ ಬರೆದು ತರಿಸಿಕೊಳ್ಳಬಹುದು.

ಚೆನ್ನಬಸವೇಶ್ವರರು ಮೈದೋರುವ ಸಂವತ್ಸರವು ಇದೇ ಎಂಬುವುದಕ್ಕೆ ಸಾಕ್ಷಿ ಭೂತವಾಗಿ ಪ್ರದರ್ಶಿಸಲ್ಪಟ್ಟ ಕೆಲವು ವಿಸ್ಮಯಕರವಾಗಿಯೂ ಭಯಭಕ್ತಿಗಳನ್ನುಂಟುಮಾಡುವ ಭೂಮಿಯಲು ಕುರುಹುಗಳು.

೧. " ತುರುಕರಪಟ್ಟ ನಾಶವಾಗುವುತನಕ "

(ಶೆನ್ನರಿ ಬ್ರಹ್ಮಯ್ಯ ಪುಟ. ೧)

ಇದೇಪ್ರಕಾರ ತುರ್ಕಸಾಮ್ರಾಜ್ಯವಲ್ಲಿ ಖಲಾಫತ್ತು ನಾಶವಾಗಿಹೋಯಿತು. ಇದು ೧೯೨೪-ರಲ್ಲಿ ಆಯಿತು. ಈವರ್ಷದಲ್ಲಿ ಚನ್ನಬಸವೇಶ್ವರರು ಪ್ರತ್ಯಕ್ಷ ಕಂಡುಬಂದಿರುವರು.

೨. " ಹಿಂದೆಪಲಾವುಪತಾರದವರನು ನೆಂದುಹೋದಾಅವರೂಳು । ಮುಂದೆ ಕೇಳವನವತಾರವು ಹನ್ನೊಂದುಕಡೆಯು ಪಬ್ಬಆಚ್ಚುತಕಡೆಯುಹರಿ ಬನ । ಹುಟ್ಟಿತಾಜ್ಯವಾಳುತ। ಕೆಟ್ಟಹೋಗಲುಕುರುಹು ಶರಣರಹುಟ್ಟಪ್ಪುದಕೆ॥

(ಶರಣ ಲೀಲಾಮೃತ ಪುಟ ೧೪೬)

ಮೇಲೆಹೇಳಿವ ಪದ್ಯಗಳು " ಹನ್ನೊಂದನೇ ವಿಷ್ಣುಅವತಾರ ಹುಟ್ಟಬೇಕು. ಆಏಷ್ಣುವನನ್ನು ನಂಬುವಪಂಗಡದಲ್ಲಿ ಎರಡುಪಂಗಡಗಳಾಗಿ ಒಬ್ಬರಾಬ್ಬರು ಭಾಗವಾಗಬೇಕು. ಆದರಲ್ಲಿ ಒಂದುಪಂಗಡವು ಕೆಟ್ಟಹೋದಕಾಲದಲ್ಲಿ ಶರಣರು (ಚೆನ್ನಬಸವೇಶ್ವರರು) ಹುಟ್ಟಬೇಕು ". ಎಂದು ಸೂಚಿಸುತ್ತವೆ. ಹೀಗೆಯೆ ಹನ್ನೊಂದನೇ ವಿಷ್ಣುಅವತಾರವು ಹುಟ್ಟಿ, ಸ್ವರ್ಗಾರೋಹಣವಾದನಂತರ, ಆವಿಷ್ಣು ಅವತಾರವನ್ನು ನಂಬುವ ಜನರಲ್ಲಿ ಎರಡುಪಂಗಡಗಳಾಗಿ ದೇವರಬೇರೆಯಾದರು. ಆ ಬೇರೆಯಾದ ನಂತರ ಶ್ರೀಚೆನ್ನಬಸವೇಶ್ವರರು ಪ್ರತ್ಯಕ್ಷಕಂಡು ಬಂದಿರುವರು.

೩ " ರಕ್ತಾಕ್ಷಿನಾಮ ಸಂವತ್ಸರದಲ್ಲಿ ಕಲ್ಬುರ್ಗಿಯಲ್ಲಿ ದೇವರಪೂಜೆ ನಿಂತುಹೋದೀತು, ಆಮೇಲೆ ನಮ್ಮಗಣಂಗಳು ಹೊರಬುಬಂದಾರು "

(ರುದ್ರಮುನಿ ಪುಟ ೧೬)

ಇವೇರೀತಿಯಲ್ಲಿ ಈವರ್ಷಕಲ್ಲು ಬುರ್ಗಿಯಲ್ಲಿ ದಂಗೆಯಾಗಿ ಮಧ್ಯಾಹ್ನ ದೇವರಪೂಜೆ ನಿಂತುಹೋಯಿತು.

## ವೀರವಸಂತನ ಪ್ರಸನ್ನತೆ ಗಣಿತಾಧಾರ.

1. ಸಂದಾಬ್ಜ ಸಾಹಸ್ರ ನಾಲ್ಕನು ವೀರಿವಾಹಿಯ ನಂದನದ ಮುಂದೆ ಬಂದಾನು ವಸಂತ ॥ ಅಂದಿನಾ ನಂದನದ ಮುಂದಣಾನಂದದಲಿ ಬಂದೇವು ಕಾರ್ತೀಕ ಪೌರ್ಣಿಮಿ ದಿವಸ ॥ ( ಶರಣಲೀಲಾಮೃತ, ಸಂಧಿ ೮, ಜಂಪೆ. ಪದ ೧೦.)
2. ಶರಣರಿಲ್ಲರುತಿವನಶೋಕಕೆಳಿಪ್ಪರಿಪ್ಪೋಗಿಮರ್ತ್ಯಕೆ | ಬರುವದುಪಾಕ್ಷಸವುಹವಿಮೂರುತಿರುಗಿಬಹವು ॥ ಇಂದುಧರನೋಲಗದ ತಿವಗಣವೃಂದವೆಲ್ಲಾ, ಮರ್ತ್ಯಕೇ | ಬಂದುತೋರ್ದರು ಚಂದದಲಿ ಆನಂದದೊಳಗೆ ॥ ಚನ್ನ ಬಸವೇಶ್ವರನು ಪ್ರಭುಪ್ರಸನ್ನ ವೀರವಸಂತರಾಯನು | ಉನ್ನತದಿ ಸುರಗಣರು ಬರುವರು ನನ್ನಿಯಿಂದ ॥೬॥ ( ಶರಣಲೀಲಾಮೃತ ಸರ್ವಜ್ಞ )
3. ಬಂದೇವು ನಾವು ಆನಂದ ಸಂವತ್ಸರಕೆ | ಅಂದಿಗೆ ಏಳ್ನೂರು | ಮುಂದೆ ಎಪ್ಪತ್ತು ॥೧೦॥ ( ಶರಣಲೀಲಾಮೃತ ಶ್ರೀ ಕಲ್ಯಾಣಬಸವೇಶ್ವರ)
4. ಶ್ರೀಮುಖನಾಮ ಸಂವತ್ಸರದ ಕಾರ್ತೀಕ ಶುದ್ಧ ಬಿದಿಗೆ ಮಂಗಳವಾರಕ್ಕೆ ವೀರವಸಂತನು ತಾವು ಹಂಪೆಯ ವಿರುಪಾಕ್ಷೇಶ್ವರನ ದರ್ಶನಕ್ಕೆ ಬಂದಾರು. ( ನೂತನ ಪುರಾತರ ಕಾಲಜ್ಞಾನ, ಪುಟ. 89) ಚನ್ನ ಬಸವೇಶ್ವರ. )

| ಶಕಗತ | ಶ್ರೀ ಬಸವೇಶನು ಕಲ್ಯಾಣ ಬಿಟ್ಟದ್ದು | ವೀರವಸಂತನ ಜನನ | ಅವಧಿ | | ವೀರವಸಂತನ ಪಟ್ಟ | ವೀರವಸಂತ ದಕ್ಷಿಣಕ್ಕೆ ಬರುವುದು ಶ್ರೀಮುಖ |
|---|---|---|---|---|---|---|
| ಕಲಿ | ೪೨೩೬ (೧ ನೇ ಆನಂದ–ರಾಕ್ಷಸ | ೪೯೮೯ | ೪೨೩೬ ವರ್ಷಗಳು ನಂದನದಲ್ಲಿ | ೪೨೩೬–೪೩೦೬ ವರೆಗೆ | ೫೦೦೫ ೧೩ನೇ ಆನಂದ-ರಾಕ್ಷಸ | ೫೦೩೫ |
| ಶಾಲಿವಾಹನ | ೧೦೫೭ | ೧೬೧೦ | | | ೧೬೩೬ | ೧೬೭೫ |
| ಇಸವಿ | ೧೧೩೫ | ೧೬೮೯ | | | ೧೯೧೪ | ೧೯೩೩–೪ |
| ಪಿಬಿರಿ | ೪೬೬ | ೧೩೦೬ | | | ೧೩೩೧ | ೧೩೪೩ |

# ಜಗದ್ಗುರು.

ಈ ಪುಸ್ತಕದಲ್ಲಿ "ಜಗದ್ಗುರು" ಎಂದರೆ ಜಗದ್ಗುರುವಿನ ಕೆಲಸ ಗಳು, ಈಗ ಜಗದ್ಗುರುಗಳೆಂದು ಹೇಳಿಸಿಕೊಂಡು ಗಾಮಾಯುಷ್ಯಲೆಕ್ಕದಲ್ಲಿ ಬದುಕಿರುವ ಜಗದ್ಗುರುಗಳು ಜಗದ್ಗುರುಗಳಾಗಬಲ್ಲರೆ, ಮುಂತಾದ ವಿಷಯಗಳು ಪ್ರಸ್ತಾವನಾಗಳಿಂದ ಸಾಧಿಸಲ್ಪಟ್ಟು ಒಟ್ಟಿಗೆ ಪ್ರತಿಯೊಂದು ಸ್ವತಂತ್ರವಾಗಿ ಸ್ವಾಭಾವಿಕವಾಗಿ ಮನುಷ್ಯನಿಗಿರಬೇಕಾದ ಸ್ವಾತಂತ್ರ್ಯಕ್ಕೂ ಮನುಷ್ಯನಿಗೆ ಇರಬೇಕಾದ ಸ್ವಾಭಿಮಾನಕ್ಕೂ ಎಷ್ಟು ವಿರುದ್ಧವಾಗಿರುವುದೆಂಬ, ಜಗದ್ಗುರುವಾದವನು ಈ ಸ್ವಭಾವದಿಂದ ಸ್ವತಂತ್ರನಾದಷ್ಟೂ ಲೋಕೋಪಯೋಗಿಯಾದ ಚಿತ್ರವನ್ನು ಎಬ್ಬಿಸಿರುವವು.

ಇದರಲ್ಲಿ ಸಂದರ್ಭಾನುಸಾರವಾಗಿ ಪಾರಮಾರ್ಥಿಕ ವಿಷಯಗಳು ಸೊಂಬಿನಿಂದಲೂ, ಇತರ ಧರ್ಮಗ್ರಂಥಗಳಿಂದಲೂ ಉದಾಹರಣೆಗಳು ಭಾಗವತೆಯಿಂದಲೂ, ಇತರ ವಿಷಯಗಳು ಬಹುಮಾಗಿ ತಕ್ಕಮಟ್ಟಿಗೆ ಒಟ್ಟಿಯಲ್ಲಿವೆ. ಸ್ವಂತಕ್ಕೆ ಬಿಟ್ಟಿದ್ದು ಸಾಕ್ಷಿಯೂ ಮಾಡಲು ಯೋಗ್ಯವಾಗಿದೆ. ಈ ಪುಸ್ತಕಕ್ಕೆ ಮುಂಬಲ್ಮಾನರ ಭಾಷೆಯಲ್ಲಿ "ಸರ್ವರಿಆಲಂ" ಮತ್ತು ಇಂಗ್ಲೀಷಿನಲ್ಲಿ "ವರ್ಲ್ಡ್ ಟೀಚರ್" ಎಂದಿರುವುದು ಈ ಪುಸ್ತಕದ ಬಂದನೆ ಭಾಗವು ೨೫೦ ಪುಟದಷ್ಟಾಗಿರುವುದು. ಸ್ವಲ್ಪ ದಿನದಲ್ಲಿಯೇ ಇತರೆಯ ಭಾಗವನ್ನು ಪ್ರಿಯರ ಹಸ್ತವನ್ನು ಬಿಡುವುದು ಆದ್ದರಿಂದ ಪುಸ್ತಕವು ಬೇಗನೆ ಸಿದ್ಧವಾಗಿಕೊಡಲೆ ನನ್ನ ಪ್ರಿಯರು ಬಹುದಾರಭಾಷಾಂತರ ಸಮಾಯುಷ್ಯವುಳ್ಳವರೆಂದು ನಂಬಿದ್ದೇನೆ. ಈಗ ಅಮ್ಮಾನ್ಸನ್ನು ಕೆಲವಿಸಿದರೆ ಪ್ರೈಂಟ್ ಸಮೀಕ್ಷವಾಗಿರುವ ಈ ಪುಸ್ತಕವು ಬಹಳ ಬೇಗನೆಯೇ ಕೊಡಿಸಲ್ಪಡುತ್ತದೆ. ಅಮ್ಮಾನ್ಸ ಕೊಡಿಸಲು ಬರುವಷ್ಟರಲ್ಲಿ ಮುಂದಿನ ಪುಸ್ತಕದ ಕೃಯಿಪ್ರತಿ ಮಾಡಲ್ಪಡುವುದು.

## ಚೆನ್ನಬಸವೇಶ್ವರ.

ಈ ಸಮಾಪಿಕಪತ್ರವು ಪ್ರತಿ ಸೋಮವಾರದಲ್ಲೂ ಪ್ರಕಟಿಸಲ್ಪಡುವುದು. ಇದು ಕೇವಲ ಪಾರಮಾರ್ಥಿಕ ವಿಷಯಗಳನ್ನು ಹೊಂದಿರುವುದಿಲ್ಲ. ರಾಜಕೀಯ ವಿಚಾರಗಳು ತಲಾಂತರವಾದರೂ ಇಲ್ಲವಾಗಿದೆ. ಪ್ರಪಂಚದಲ್ಲಿರುವ ಜಾತ್ಯಾಭಿಮಾನ ಮಾತ್ಸರ್ಯ ಬಂದು ಬಾಧಿಸದವರನ್ನು ಮೆಚ್ಚಿಸುವುದು ಬಾಧಿಸದವರು ಹೀನವಾಗಿ ಕಾಣುವುದು, ಮುಂತಾದ ವಿಷಯಗಳ ಜೋರನ್ನುಕೆತ್ತು ಒಬ್ಬರನ್ನೂ ಬಂದೇ ಮಾಂಧಸ್ಯದ ಹೆಗ್ಗುರಿಂದ ಬಂಧಿಸಿ ನಿರಾಕಾರನಾದ ಪರಮಾತ್ಮನ ಮಿಸ್ಸ್ ಪಾದದ್ವಯಗಳಲ್ಲಿ ನಿಲ್ಲಿಸಬೇಕೆಂಬುದೇ ಈ ಸಮಾಪಿಕದ ಮುಖ್ಯ ಉದ್ದೇಶವು.

**ಚಂದಾದರ**

ವರ್ಷಕ್ಕೆ ರೂ. ೨—೦—೦

ಅರ್ಧವರ್ಷಕ್ಕೆ ರೂ. ೧—೦—೦

5.

*( ೭೮೬ )*



# ಸದ್ಯಕ್ಕೆ ಪ್ರಕಟಿಸಲ್ಪಟ್ಟ ಕಾಲಜ್ಞಾನದ ೧೬ ಅಧಾರಗಳ ಬುಕ್ಕು.

ಸಿದ್ದೀಖು-ದೀಂದಾರ ಜೊನಬನವೇಶ್ವರರಿಂದಾ ರಚಿಸಲ್ಪಟ್ಟಿದ್ದು


ಪ್ರಚಾರಕ ಮೌಲವಿ ಸೈಯದ ಮೊಹಂಮದ ಯಾಕೂಬ ಅಮರೋಹಿ ಹಾಲಿ ವಸ್ತಿ ಗದಗ.

೧ ನೇ ಆವೃತಿ ( ೩೦೦೦ ) ಪ್ರತಿಗಳು

ಸಂನ ೧೯೨೪ ಇಸ್ವಿ.

ಕಿಮ್ಮತ್ತು ೨॥ ಅಣೆ.

# "ಚನ್ನಬಸವೇಶ್ವರರು ಮುಸಲ್ಮಾನರಿದ್ದಾರೆ,,



ಲಿಂಗಾಯತರು ಮತ್ತು ಹಲವು ಮುಸಲ್ಮಾನರು:— **ಚನ್ನಬಸವೇಶ್ವರರು** ಮುಸಲ್ಮಾನರಾಗಿ ಹೇಗೆ ಹುಟ್ಟಿದರು? ಎಂದು ನಮಗೆ ಮೇಲಿಂದ ಮೇಲೆ ಕೇಳುತ್ತಾರೆ. ಅವರು ಅನ್ನುವದೇನಂದರೆ **" ಚನ್ನ ,,** ಈ ಶಬ್ದವು ಕೇವಲ ಕನ್ನಡ ಶಾಲಾ ನಿಘಂಟಗಳಲ್ಲಿಯೇ ಕಂಡು ಬರುವದರಿಂದ ಈ ಶಬ್ದವು ಮುಸಲ್ಮಾನರಿಗೆ ಹೇಗೆ ಲಾಗು ಆಗುತ್ತದೆ? ಮತ್ತು ಹಿಂದೂ ಅವತಾರಿಕ ಪುರುಷರು ಮುಸಲ್ಮಾನರ ಮನೆಯಲ್ಲಿ ಆದದ್ದು ವಿಲಕ್ಷಣವಾಗಿ ಕಂಡು ಬರುತ್ತದೆ. ನಾವು ಅವರಿಗೆ ತೃಪ್ತಿಕಾರಕವಾಗಿ ಉತ್ತರ ಕೊಟ್ಟಿರುತ್ತೇವೆ. ಸಧ್ಯಕ್ಕೆ ನಾವು ಅವರ ಸಂಶಯಗಳನ್ನು ಹೋಗಲಾಡಿಸುವದರ ಸಲುವಾಗಿ ಇಲ್ಲಿ ಕೆಳಗೆ ತೋರಿಸಿದ ಹದಿನಾರು ಆಧಾರ ಯುಕ್ತವಾದ ಈ ಚಿಕ್ಕ ಪುಸ್ತಕವನ್ನು ಪ್ರಕಟಮಾಡಿರುತ್ತೇವೆ.

ಈ ಜಗತ್ತಿನಲ್ಲಿ ಯಾವತ್ತೂ ಜನಾಂಗಗಳನ್ನು ಒಂದು ಮಾಡಲಿಕ್ಕೆ ಪರಮಾತ್ಮನ ಕಡೆಯಿಂದ ಬಂದಂಥವರಲ್ಲಿ **ಮಹಮ್ಮದ ಪೈಗಂಬರ**ರೊಬ್ಬರೇ ಆಗಿದ್ದರು ಮತ್ತು ಹಾಗೆ ಮಾಡುವವರಲ್ಲಿ ಅವರಿಗೆ ಬಹು ಮಟ್ಟಿಗೆ **ಜಯ**ವಾದರೂ ಸಿಕ್ಕೀತು? ಇದೇ ಉದ್ದೇಶದಿಂದ ನರಲೋಕದಲ್ಲಿ ಪರಮಾತ್ಮನ ಕಡೆಯಿಂದ ಇವರ ಹೊರ್ತು ಯಾವ ಅವತಾರವೂ ಆಗಿರುವದಿಲ್ಲ. ಆದ್ದರಿಂದಲೇ **ಮಹಮ್ಮದ ಪೈಗಂಬರರ** ತರುವಾಯ ಇವತ್ತಿನ ವರೆಗೆ ಯಾವ ಹೊಸ ಪೈಗಂಬರರೂ ಬಂದಿರುವದಿಲ್ಲ. ಬರೆ ಹಿಂದೆ ಆಗಿ ಹೋದ **ಪೈಗಂಬರರೇ** ತಿರುತಿರುಗಿ ಬಂದಿರುವರು. ಅದು ಹೇಗಂದರೆ ಮನುಷ್ಯಜಾತಿಯ ನಂತರ ದೇವರು ಯಾವ ಜಾತಿಯನ್ನೂ ಉಂಟು ಮಾಡಲಿಲ್ಲ. ದೇವರು ಪೃಥ್ವಿಯನ್ನು ನಿರ್ಮಾಣ ಮಾಡಿದ ಮೇಲೆ ಅನೇಕ ವಸ್ತುಗಳನ್ನು ನಿರ್ಮಾಣ ಮಾಡಿದನು. ಆ ಮೇಲೆ ಎಲ್ಲ ಪ್ರಾಣಿ ವರ್ಗವು ಹುಟ್ಟಿಲ್ಲಿಟ್ಟನು. ನಂತರ ಪರಮಾತ್ಮನು ಮನುಷ್ಯನನ್ನು ನಿರ್ಮಾಣ ಮಾಡಿದನು.

ಇನ್ನತ್ತಿನ ವರೆಗೆ ಮನುಷ್ಯ ಜಾತಿಗಿಂತ ಉಚ್ಚ ಜಾತಿಯನ್ನು ಜಗತ್ತಿನಲ್ಲಿ ದೇವರು ಹುಟ್ಟಿಸಲಿಲ್ಲ. ಬರೇ ಹುಟ್ಟಿದ ಜಾತಿಗಳೇ ತಿರುತಿರುಗಿ ಹುಟ್ಟಿವೆ. ಇದರಂತೆಯೇ ಸ್ವರ್ಗದ ಸ್ಥಿತಿಯು ಇರುತ್ತದೆ. ಇತಿಹಾಸವು ಇದರ ಸಾಕ್ಷಿಯಾಗಿರುತ್ತದೆ. ಅವರಲ್ಲಿ **ಮಹಮ್ಮದ ಪೈಗಂಬರರ** ತರುವಾಯ ಯಾವ ಹೊಸ ಪೈಗಂಬರರು ಬರುವದಿಲ್ಲ. ಏರೆ **ಏಸೂಕ್ರಿಸ್ತರು ಬಂದಾರು, ಕೃಷ್ಣಾವತಾರವಾದೀತು. ಚನ್ನಬಸವೇಶ್ವರರ ಅವತಾರ ವಾದೀತು,** ಎಂತಲೇ ನಮೂದಿಸಿರುವರು ಇವೆಲ್ಲ ಅವತಾರಗಳು **ಮಹಮ್ಮದ ಪೈಗಂಬರರ** ಆನುಯಾಯಿಗಳ ರೂಪಗಳಲ್ಲಿ ಕಾಣಿಸಿಕೊಂಡಿರುವನು. ಯಾಕಂದರೆ ಮನುಷ್ಯ ಜಾತಿಯ ತರುವಾಯ ಯಾವ ಜಾತಿಯು ಮನುಷ್ಯನ ಅಧೀನಕ್ಕೊಳಗಾಗದ್ದು ಹುಟ್ಟಿಲ್ಲ. ಆದತೆ ಯಾವತ್ತು ಜಾತಿಗಳು ಮನುಷ್ಯನಲ್ಲಿರುವ ಭಾಗಗಳೇ ಆಗಿರುತ್ತವೆ. ಅಂದರೆ ಜಗತ್ತಿನಲ್ಲಿ ಹುಟ್ಟಿದ ಯಾವದೇ ಪ್ರಾಣಿಯು ಮನುಷ್ಯನ ದೇಹದಲ್ಲಿ ಕಂಡು ಬರುತ್ತದೆ. ಆವ ರೀತಿಯೇ **ಮಹಮ್ಮದ ಪೈಗಂಬರರ** ತರುವಾಯ ಯಾವ ಹೊಸ ಪೈಗಂಬರರು ಹುಟ್ಟಲಿಕ್ಕಿಲ್ಲ. ಆಂದರೆ ಮಹಮ್ಮದ ಪೈಗಂಬರರ ಅಧೀನಕ್ಕೊಳಗಾಗದ ಅವರ ಅನುಯಾಯಿಗಳಲ್ಲಿ ಯಾವ ಅವತಾರವು ಆಗಲಿಕ್ಕಿಲ್ಲವೆಂಬುವದು ಸ್ವಾಭಾವಿಕವಾದ ಸಂಗತಿ ಇರುತ್ತದೆ. ಆದ್ದರಿಂದಲೇ **ಏಸುಕ್ರಿಸ್ತರ** ಪುನರಾಗಮನವು **ಗುಲಾಮು ಅಹಮ್ಮದ** ಇವರರೂಪದಲ್ಲಿಯೇ ಪ್ರಕಟನಾಯಿತು. ಮತ್ತು **ಕೃಷ್ಣ (ವಿಷ್ಣುಜಿ)** ಯವರ ಪುನರಾಗಮನವು ಸಹ ಗುಲಾಮು ಅಹಮ್ಮದ ಇವರ ರೂಪದಲ್ಲಿಯೇ! (ಲಕ್ಷ್ಯವಲ್ಲಿಡತಕ್ಕದ್ದೇನಂದರೆ) **ವಿಷ್ಣು** ಈ ಶಬ್ದದ ಕನ್ನಡ ಕೋಶದಲ್ಲಿ ಇದ್ದ ಅರ್ಥವು ತಪಗಾನಿ (ಲ್ಯಾಟಿನ) ಭಾಷೆಯಲ್ಲಿ ಮಸೀ (**ಏಸುಕ್ರಿಸ್ತ**) ಎಂದು ಇರುತ್ತದೆ. ಅಂದರೆ ವಿಷ್ಣು ವ ಮಸಿ ಇವೆರಡೂ ಶಬ್ದಗಳು ಏಕಾರ್ಥ ಶಬ್ದಗಳಿರುತ್ತವೆ.

ಮೇಲೆ ಹೇಳಿದಂತೆಯೇ **ಚನ್ನಬಸವೇಶ್ವರರ** ಪುನರಾಗಮನವು **ಸಿದ್ದೀಕ** ಅಂದರೆ ನನ್ನ ರೂಪದಲ್ಲಿ ಜಾಹೀರ ಆಗಿರುತ್ತದೆ. ಇದರ ಮೇಲಿಂದ ಮೇಲಿನ ಸಂಗತಿ ಏನಂದರೆ ಮಹಮ್ಮದ ಪೈಗಂಬರರ ತರುವಾಯ ಹೊಸ ಪೈಗಂಬರರು ಯಾರೂ ಆಗುವದಿಲ್ಲ. ಮೊದಲು ಆದ ಪೈಗಂಬರರ ಅವತಾರಗಳೇ ಪುನಃ ಪುನಃ ಆಗುತ್ತವೆಂಬ ಮಾತು ಶಿದ್ಧವಾಗುತ್ತದೆ.

ಇನ್ನು ಇಸ್ತು ಸ್ಥಿತಿಯು ಹೀಗೆ ಇರುತ್ತಿರಲು **ಚನ್ನಬಸವೇಶ್ವರರು ಮುಸಲ್ಮಾನ** ರೂಪದಲ್ಲಿ ಬಂದಿರುವದನ್ನು ನೋಡಿ ಲಿಂಗಾಯತರು (ಹಿಂದೂ) ಆಶ್ಚರ್ಯಚಕಿತರಾಗುತ್ತಾರೆಂಬುವದು ನಮಗೆ ತಿಳಿಯದು ಎಲ್ಲ ಲಿಂಗಾಯತ ಜನರಿಗೆ ತಮ್ಮ ಯಾವತ್ತು **ಪುರಾತರು (ಸಪ್ತ ಋಷಿಗಳು)** ಭಿನ್ನ ಭಿನ್ನ ಜಾತಿಗಳಲ್ಲಿ

ಹುಟ್ಟಿ ಬಂದದ್ದು ಗೊತ್ತಿಪ್ಪ ಮಾತೇ ಇರುತ್ತದೆ. ಉದಾಹರಣಾರ್ಥ :— **ಅಂಬಿಗರ ಜಾತಿಯಲ್ಲಿ ಚೌಡಯ್ಯನವರು, ಬೇಡರಜಾತಿಯಲ್ಲಿ ಕನ್ನಯ್ಯನವರು ಬ್ರಾಹ್ಮಣರ ಜಾತಿಯಲ್ಲಿ ಬಸವೇಶ್ವರರೂ, ಹೊಲೆಯರ ಜಾತಿಯಲ್ಲಿ ಹರಳಯ್ಯನವರೂ, ಡೋಹರ ಜಾತಿಯಲ್ಲಿ ಕಕ್ಕಯ್ಯನವರೂ, ಮಾದರ ಜಾತಿಯಲ್ಲಿ ಚನ್ನಯ್ಯನವರೂ, ಕ್ಷೌರಿಕರ ಜಾತಿಯಲ್ಲಿ ಕಂಪಯ್ಯನವರೂ, ಅಗಸರ ಜಾತಿಯಲ್ಲಿ ಮಾಚಿ ಮಡಿವಾಳಯ್ಯನವರೂ, ಕೊರವರ ಜಾತಿಯಲ್ಲಿ ನೂಲಿ ಚಂದಪ್ಪಯ್ಯನವರೂ,** ಇದೇ ಪ್ರಕಾರ ಅನೇಕ ಮಹಾ ಪುರುಷರು ಪ್ರಕಟವಾಗಿರುವರು.

ಇನ್ನು **ಚನ್ನಬಸವೇಶ್ವರರು** ಮುಸಲ್ಮಾನ ಧರ್ಮದಲ್ಲಿ ಹುಟ್ಟಿರುತ್ತಾರೆಂದು ತಿಳಿಯಲಿಕ್ಕೆ ಯಾವ ಪ್ರಕಾರದ ಸಂಶಯವೇನೂ ಕಾಣುವದಿಲ್ಲ. ನನ್ನ ತಂದಿ ತಾಯಿಗಳು **ಸಿದ್ದೀಕ ಹುಸೇನ** ಎಂದು ಪಸರು ಇಟ್ಟಿರುತ್ತಾರೆ. **ಚನ್ನ** ಈ **ಕನ್ನ**ದ ಶಬ್ದದ ಅರ್ಥವು **ಸಿದ್ದೀಕ** ಈ ಅರಬ್ಬಿ ಶಬ್ದದ ಅರ್ಥವು ಒಂದೇ ಇರುತ್ತದೆ. ಅಂದರೆ **ಸಿದ್ದೀಕ** ಇದರ ಅರ್ಥವು ಯಾವತ್ತೂ ಉತ್ತಮಗುಣಗಳುಳ್ಳ ಪುರುಷನು ಎಂದು ಆಗುತ್ತದೆ. ಆದರಂತೆಯೇ **ಚನ್ನ** ಈ ಶಬ್ದದ ಅರ್ಥವೂ ಇರುತ್ತದೆ. ನನ್ನ ಹನ್ನೆರಡು ವರ್ಷದ ದೇಶ ಸಂಚಾರದ ತರುವಾಯ ದೇವರು ನನಗೆ ಇವೇ ಹೆಸರುಗಳಿಂದ ಕರೆದಿರುತ್ತಾನೆ. **"ಏ ಚನ್ನಬಸಪ್ಪಯ್ಯಾ", "ಚನ್ನಪ್ಪಾ", "ತೂಹೀ ಚನ್ನಬಸವೇಶ್ವರ ಹೈ",** ಅಂದರೆ **ಚನ್ನಬಸವೇಶ್ವರ** ನೀನೇ ಇರುತ್ತೀ ಎಂದು ದೇವರ ಕಡಿಯಿಂದ ಬಂದ ಧ್ವನಿಯು ಸಹ ಇದಕ್ಕೆ ಒಳ್ಳೇ ಆಧಾರವಾಗಿರುತ್ತದೆ. ಇವೆಲ್ಲವುಗಳ ಮೇಲಿಂದ ನಮ್ಮ ವಾಚಕರಿಗೆ ಇನ್ನೂ ಮನವರಿಕೆಯಾಗದಿದ್ದರೆ ಕೆಳಗೆ ಅನೇಕ ಪುರಾತರ ವಚನಗಳನ್ನು ಕೊಟ್ಟು **ನಾವು ತಮ್ಮೆಲ್ಲರನ್ನೂ** ತೃಪ್ತಿ ಪಡಿಸಲಿಚ್ಛಿಸುತ್ತೇವೆ.

ಸೂಕ್ಷ್ಮರೀತಿಯಿಂದ ವಿಚಾರ ಮಾಡಿ ನೋಡಿದರೆ ನಮಗೆಸ್ಪಷ್ಟವಾಗುವದೇನಂದರೆ **ಚನ್ನ ಬಸವೇಶ್ವರರು** ಬರೋಬರ ಸಲ್ಮಾನರಿದ್ದಾರೆ. ಆಂತಾ ತಿಳಿಯುವದು ಪರಮಾತ್ಮನಲ್ಲಿ ಅತಿ ಪ್ರೀತಿಗೆ ಪಾತ್ರನಾದ ಮಗನಾಗಲಿಕ್ಕೆ **ಉತ್ತಮ ಆಚರಣಿಯೇ** ಕಾರಣವಾಗಿದೆ. ಪೃಥ್ವಿಯ ಮೇಲೆ ಏಕರೂಪವಾದ ಮತ್ತು ನಿಜವಾದ ಅನಾದಿ ಧರ್ಮಕ್ಕೆ ಸಜೀವ ಮಾಡಬೇಕೆಂದು ಪ್ರಯತ್ನ ಮಾಡಿದ ಮಹಾ ಪುರುಷರೊಳಗೆ **ಮಹಮ್ಮದ ಪೈಗಂಬರರೊಬ್ಬರೇ** ಕಾಣುತ್ತಾರೆ. ಅದರಂತೆಯೇ ಹಿಂದುಸ್ತಾನ ಭಾಗಕ್ಕೆ **ಕಲ್ಯಾಣ ಬಸವೇಶ್ವರರು** ಅನಾದಿ ಧರ್ಮಕ್ಕೆಸಜೀವ ಮಾಡುವದರೊಳಗೆ ಹೆಚ್ಚಿನವರೆನಿಸಿಕೊಂಡಿರುವರು. ಇವರಿಬ್ಬರ ಕೆಲಸಗಳ

## [illegible] ಕೆಲವು ಆಧಾರಗಳನ್ನು ಕೊಡುತ್ತೇವೆ.

[illegible]

೧. ಹಿಂದೂ ಮುಸಲ್ಮಾನ ಆದಾನು? ೨. ಹಿಂದೂ ತುರಕರು ಒಂದಾಗಿ ನಡೆದಾರು, **ದೀಂದಾರ ಚಸ್ನ ಬಸವಂಣ** ಬರುವಾಗ. ೩. ಲೋಕದ [illegible] ೪. ಮೂಸಾ ಅಲ್ಲವು ಮೂಸೇಸೂಜೆಲ್ಲಾ [illegible] ವಚನ ಪುಟ ೩೮.)

[illegible] ವಚನಗಳಿಂದ ಮೊದಲನೇ ವಾಕ್ಯದಿಂದ ಸ್ಪಷ್ಟವಾಗುವದೆ [illegible] **ಹಿಂದುಸ್ತಾನದ ಮುಸಲ್ಮಾನರಿದ್ದಾರೆ.** ಈ [illegible] ಅಂತಾಗಿ ಹಿಂದೂ ಎಂದೂ ತಿಳಿದಿರುತ್ತಾರೆ. ಆದರೆ ಅವರು [illegible] ಪ್ರಕಾರ ಮುಸಲ್ಮಾನರಿದ್ದಾರೆ.

[illegible] ವ್ಯಕ್ತವಾಗುವದೇನೆಂದರೆ ಹಿಂದೂ ಮುಸಲ್ಮಾನರ [illegible] ಒಂದಾಗಿ ನಡಿಯುವ ಕಾಲದಲ್ಲಿ **ದೀಂದಾರ ಚಸ್ನ ಬಸ** [illegible] **ಮಹಾತ್ಮಾಗಾಂಧಿ ಪ, ಮುಹುಮ್ಮದಪಲ್ಲಿ** ಯವ [illegible] ಹಿಂದೂ ಮುಸಲ್ಮಾನರು ಒಂದಾಗಿ ನಡಿಯುವ [illegible] ಸ್ಪಷ್ಟವಾಗುತ್ತದೆ. ಈ ವಾಕ್ಯದಲ್ಲಿ ಮತ್ತೊಂ [illegible] ದೀಂದಾರ ಈ ಶಬ್ದವು ಮುಸಲ್ಮಾನರ ಹೊರತು [illegible] ಇಲ್ಲಾ. ಈ ಶಬ್ದವು ಎರಡು ಸಂಖ್ಯ ರಷ್ಟಿಗೆ

ಳಿಂದ ಆಗಿರುತ್ತದೆ. **ದೀನ+ದಾರ** ಮತ್ತು ಇದರ ಉಪಯೋಗವು ಕೇವಲ ಮುಸಲ್ಮಾನ ಧರ್ಮದವರಿಗೆ ಯೋಗ್ಯವಾಗುತ್ತದೆ.

ಮೂರನೇ ವಾಕ್ಯದಿಂದ ಕಂಡು ಬರುವದೇನಂದರೆ ಲೋಕದ ಅಂಧಕರು ಅಂದರೆ ಸಾಧಾರಣ ಜನರು ಈ ಕೆಲಸಗಳನ್ನು ತಿಳಿಯಲಾರರು ಜನರು **ಚೆಂನಬಸವಂಣರು** ಹಿಂದೂ ಕುಲದಲ್ಲಿ ಹುಟ್ಟುತ್ತಾರೆಂದು ತಿಳಿಯುತ್ತಾರೆ. ಆದರೆ ಇದು **ಅವರ ತಪ್ಪು** ತಿಳವಳಿಕೆಯ ಹೊರ್ತು ಬೇರೆ ಏನೂ ಇರುವದಿಲ್ಲ.

ನಾಲ್ಕನೇ ವಾಕ್ಯವು ವಿಶೇಷತಃ ಲಕ್ಷದಲ್ಲಿಡತಕ್ಕದ್ದು ಈ ವಾಕ್ಯದಿಂದ ಸ್ಪಷ್ಟವಾಗುವದೇನಂದರೆ **ಚೆನ್ನಬಸವೇಶ್ವರರು ಮೂಸಾಪೈಗಂಬರರು ಪರಮಾತ್ಮನಿಗೆ ಪೂಜವಾಡುವವರಿದ್ದಾರೆ.** ಮತ್ತು ಮೂಸೆ ಪೂಜೆಲ್ಲ, ಅಂದರೆ ಮೂಸಾ ಪೈಗಂಬರರು ಯಾವ ಪ್ರಕಾರ ಪೂಜೆ ಮಾಡುತ್ತಿದ್ದರು ಅದೇ ಪ್ರಕಾರ **ಚೆನ್ನಬಸವೇಶ್ವರರು** ಪೂಜೆ ಮಾಡುವವರು. ಅದೇ ಪೂಜೆ ಜಗತ್ತೆಲ್ಲ ಆದೀತೆಂದು ಅರ್ಥವಾಗುತ್ತದೆ. ಈ ವಾಕ್ಯದಿಂದ **ಚೆನ್ನಬಸವೇಶ್ವರರು** ಕೇವಲ ಮುಸಲ್ಮಾನರಿಗೆ ಬೇಕೆಂದು ಸಿದ್ಧವಾಗುತ್ತದೆ. ಇದಕ್ಕೆ ಎಳ್ಳಷ್ಟಾದರೂ ಸಂದೇಹವಿಲ್ಲ.

(೧) ಇವರು ಒಂಬತ್ತು ತಿಂಗಳದೊಳಗೆ ಸೋಮವಾರ ದಿವಸ, ನಾಲ್ಕುತಾಸು ಹೊತ್ತು ಏರಿದ ಮೇಲೆ ಹುಟ್ಟುತ್ತಾರೆ. (ಈ ವಚನ ಗಿಂತ ಹಿಜರಿ ೮೫೬ ತಿಂಗಳೊಳಗೆ ಹೇಳಲ್ಪಟ್ಟಿರುತ್ತದೆ.) ನಾನು ಆ ಪ್ರಕಾರ ಮೂರು ತಿಂಗಳದೊಳಗೆ ಸೋಮವಾರ ದಿವಸ ನಾಲ್ಕು ತಾಸು ಹೊತ್ತು ಏರಿ ಹುಟ್ಟಿದ್ದೇನೆ.

(೨) **ಚೆನ್ನಬಸವೇಶ್ವರರು** ಹುಟ್ಟಿದ ಕೂಡಲೆ (ಕುರುಹು) ಆಗಿ ಮಳೆ ಬರಬೇಕು. (ಆ ದಿವಸ ೭ನೇ ಜೂನ ಇರುವದರಿಂದ ಮಿರಗು * (ಮೃಗ) ಆರಂಭವಾಗಿ ಮಳೆಯಾಯಿತು.

(೩) ಇವರು ದಕ್ಷಿಣ ಭಾಗದಲ್ಲಿ ಶೀತಾಫಲಹಂಣು ಉತ್ಪನ್ನವಾಗುವ ಜಾಗಾದಲ್ಲಿ ಹುಟ್ಟಬೇಕು. ನನ್ನ ಜನ್ಮಗ್ರಾಮ (ಗ್ರಾಮ ಬಾಲಾಮಪೇಟ ತಾಲೂಕ ಗುರು (ಗುಡು) ಮಟಕಾಲ ಜಿಲ್ಹಾ ಗುಲಬುರ್ಗಾ ನೈಜಾಮ ಇಲಾಖಾ ಆದೆ-)

(೪) ಅನುಮಯಾಲ ಅಂದರೆ **ಶಿದ್ಧಿ**, ಅಥವಾ **ಚೆನ್ನ**, ಇರುತ್ತದೆ.

---

*. ಈ ದಿವಸದಿಂದ ದಕ್ಷಿಣಭಾಗದಲ್ಲಿ ಮಳೆಗಾಲವು ಆರಂಭವಾಗುತ್ತದೆ.

(೫) ದೂರ ಜಾಗೇದಲ್ಲಿ ಹುಟ್ಟಿದ್ದಾನೆ. ಮತ್ತು ಬಹಳ ದಿವಸದ ಮೇಲೆ ನಮ್ಮ ದೇಶಕ್ಕೆ ಬರುತ್ತಾನೆ. (ಇದು ನಾನು ಹುಟ್ಟಿದ ಮೇಲೆ ಅವರಿಗೆ ಪ್ರಕಟವಾಯಿತು.)

(೬) ಅವರು ನೇಮಿಸಿದವೇಳ್ಯದೊಳಗೆ ನಾನು ಹುಟ್ಟಿಬ್ಲೇನೆ. (ಇದು ನಾನು ಹುಟ್ಟಿದ ಸ್ವಲ್ಪು ದಿವಸದೊಳಗೆ ಅವರಿಗೆ ಪ್ರಕಟವಾಯಿತು.)

(೭) ಇವರು ದೇಶ ಸಂಚಾರಿ ಇದ್ದಾರೆ.

(೮) ಇವರು ಬಡವರ ಮನೆಯಲ್ಲಿ ಜನಿಸಿದ್ದಾರೆ.

(೯) ಇವರ ದೊಡ್ಡ ಕುರುಹು ಅಂದರೆ ಮಳಿ ಇರುತ್ತದೆ.

(೧೦) ಇವರಿಗೆ ಅಂಣಂದಿರು ಇದ್ದಾರೆ.

(೧೧) ಇವರಿಗೆ ಏಸು ಬೈಗಂಬರರ ಪ್ರಕಾರ ಒಬ್ಬ ಹೆಂಗಸಿನಿಂದ ಮೋಸ *. ಪರೀಕ್ಷೆ ಯಾಗಬೇಕು.

(೧೨) ಇವರು ದೊಡ್ಡ ಮನೆತನದವರಿದ್ದಾರೆ.

(೧೩) ಇವರು ಅವತಾರಿಕರಾಗಿ ನಾಲ್ವತ್ತನೇ ವಯಸ್ಸಿನ ಮೇಲೆ ಪ್ರತ್ಯಕ್ಷ ಕಾಣಬರಬೇಕು.

(೧೪) ಭೂಮಿಯಲ್ಲಿ ಹೂಳಿದ ಹಣವು ಇವರವೇ ಇರುತ್ತವೆ.

(೧೫) ನೂರೊಂದು ಕುಲಗಳು ಇವರಿಂದ ಕೂಡಿಕೊಂಡಾವು.

(೧೬) ಇವರು ತಮ್ಮ ಗುಣಗಳಿಂದ ಎಷ್ಟೋ ಹೆಸರುಗಳನ್ನು ಹೊಂದುತ್ತಾರೆ

---

*. ಇದೊಂದು ಭಯಂಕರವಾದ ಸಂಗತಿ ಇರುತ್ತದೆ. ಈ ಸಂಗತಿ ೧೯೨೨ ರೊಳಗೆ ಸಂಭವಿಸಿತು. ಹೈದರಾಬಾದ ಮತ್ತು ಮದ್ರಾಸ ಈ ಎರಡೂ ಇಲಾಖೆಯಲ್ಲಿ ನಮ್ಮ ಮನಿತನದೊಳಗೆ ಈ ಸಂಗತಿ ಪ್ರಸಿದ್ಧವಾಗಿರುತ್ತದೆ. ಇದು ಒಂದು ಪುಸ್ತಕದ ರೂಪದೊಳಗೆ ಮುದ್ರಿಸಲ್ಪಟ್ಟಿತು. ಇದು ಯುಸುಫ ಪೈಗಂಬರರ ಸಂಗತಿಗಿಂತ ಹೆಚ್ಚಿನದಿರುತ್ತದೆ.

೧೭ ಇವಮ ತ್ರಿಕಾಲಜ್ಞಾನಿ ಇದ್ದಾರೆ

೧೮ ಇವರು ಪ್ರತ್ಯಕ್ಷ ಕಾಣಬರುವ ಕಾಲದಲ್ಲಿ ಹನ್ನೊಂದನೇ **ವಿಷ್ಣು** ಅವತಾರವ ಪಂಗಡದೊಳಗೆ ಭೇದವಾಗಿರಬೇಕು ಇತ್ಯಾದಿ:— ಇವು ಮೇಲೆ ಹೇಳಿದ ಸರ್ವ ಕುರುಹುಗಳು ನನ್ನೊಳಗೆ ಸಂಪೂರ್ಣ ರೀತಿಯಿಂದ ಕಾಣ ಬರುತ್ತವೆ. ಬಂದು ನೋಡಿರಿ? ಅಜ್ಞಾನಿಗಳಾಗಿ ಮರಣ ಹೊಂದಬೇಡಿರಿ. ಮತ್ತು ತಂದಿ ಯಿಲ್ಲದ ಪುರಾತನು **ವೀರ ಬಸವಂತರಾಯರ** ಕುರುಹುಗಳು ಆದರೂ ಸಂಪೂರ್ಣ ರೀತಿಯಿಂದ ತೋರಿಸಿದ್ದಾರೆ. ಅವು ಯಾವವು ಅಂದರೆ (೧) ಇವರು ಅದೇ ತಂದಿ ಇಲ್ಲದ ಪುರಾತರ ಮನೆಯಲ್ಲಿ ೧೩೦೪ ಹಿ. ಯೊಳಗೆ ಹುಟ್ಟಿರಬೇಕು. (೨) ಇವರ **ಹೆಸರು ಬಸವಂತ** ಇವರು ಶೂರರಾಗಿ ಇರುವದರಿಂದ ವೀರ ಎಂದು ಬಿರುದ್ದು ಬಂತು. (೩) ಇವರು ತಮ್ಮ ಇಚ್ಛಾವೃತ್ತಿಯೊಳಗೆ ವೀರರಿದ್ದಾರೆ. (೪) ಇವರ ವಯಸ್ಸು ದೊಡ್ಡದಿರುತ್ತದೆ. (೫) ಇವರು ಬೇರೆ ಬೇರೆ ಗುಣಗಳಿಂದ ಉದ್ಭವಿಸಿ ಬೇರೆ ಬೇರೆ ಹೆಸರು ಹೊಂದಿರುತ್ತಾರೆ. (೬) ಇವರು ಪ್ರತ್ಯಕ್ಷ ಕಂಡಕೂಡಲೇ ಧರ್ಮ ಬಡಿದಾಟ ಆರಂಭವಾಗಬೇಕು. (೭) ಇವರು ಮುಪ್ಪಿನ ಕಾಲದಲ್ಲಿ ಬಹು ದೊಡ್ಡ ಮೂರ್ತಿಯಾಗುತ್ತಾರೆ.

ಮೇಲೆ ಹೇಳಿದ ಕಾಲಿಜ್ಞಾನದ ಪ್ರಕಾರ **ವೀರಬಸವಂತರಾಯರು** ಹುಟ್ಟಿದ್ದಾರೆ. ಇವರು ಒಂದು ದೊಡ್ಡ ಮಂಡಳಿಯ ಮೇಲೆ ಅಧಿಕಾರ ನಡಿಸುತ್ತಾರೆ. ಉತ್ತರ ದಿಕ್ಕಿನಲ್ಲಿ ಇವರು ೪೯೧೪ ನೇ ಇಸ್ವಿಯೊಳಗೆ ಗಾದಿಯ ಮೇಲೆ ಕೂತರು. ಇದಕ್ಕೆ **ರುದ್ರಮುನಿ** ೭ ನೇ ಪುಟದಲ್ಲಿ ಹೇಳಿರುತ್ತಾರೆ. ಆದು ಜೇಗಂದರೆ ಕಲಿಯುಗ ಪ್ರಮಾಣ ೫೦೦ ವರ್ಷ ಮುಗಿದ ಮೇಲೆ ಬರುವ ಆನಂದ **ವೀರಬಸವಂತರಾಯರು** ತಮ್ಮ ಪಟ್ಟಕ್ಕೆ ಬರಬೇಕು. ಸಂಧಿಕಲಿ * ಹೋದ ಮೇಲೆ ಐದನೇ ವರುಷಕ್ಕೆ ಅಂದರೆ ೧೪೧೪ ನೇ ಇಸ್ವಿಯಲ್ಲಿ ಗಾದಿಯ ಮೇಲೆ ಕೂಡ್ರಬೇಕು. ವೀರ ಬಸವಂತರಾಯರು ಗಾದಿಯ ಮೇಲೆ ಕುಳಿತ ಹತ್ತನೇ ವರ್ಷಕ್ಕೆ ನಾನು ಪರಮಾ

---

*. ೪೯೯೫ ಕಲಿಯುಗಕ್ಕೆ ಸಂಧಿಕಲಿ ಆರಂಭವಾಯಿತು ಮತ್ತು ೧೦೫೫ ವರ್ಷ ಇದ್ದು ೫೦೦೦ ಕ್ಕೆ ಮುಗಿಯಿತು. ಅಂದರೆ ೧೪೧೦ ಇಸ್ವಿ ಸಾಧಾರಣ ನಾಮ ಸಂ|| ದೊಳಗೆ ತೀರಿತು. ಇದು ಆದ ನಂತರ ನಾಲ್ಕನೇ ವರ್ಷಕ್ಕೆ ಆನಂದ ಬಂತು ಇದೇ ಆನಂದ ಸಂ|| ಕ್ಕೆ ಕಾಲಜ್ಞಾನಗಳು ಉಚ್ಚರಿಸುತ್ತವೆ. ಇದೇ ಆನಂದಕ್ಕೆ ವೀರ ಬಸವಂತರಾಯ ಪಟ್ಟಕ್ಕೆ ಬರಬೇಕು. ಮತ್ತು ಕ್ಷಯನಾಮ ಸಂವತ್ಸರಕ್ಕೆ ದಕ್ಷಿಣಕ್ಕೆ ಬರಬೇಕು. ಒಂದು ನೂರನೇ ವಯಸ್ಸಿಗೆ ತೀರಬೇಕು.

[illegible]

---

## ೨ ನೇ ಅಧ್ಯಾಯ.

[illegible]

ಗ ತಂದೆ ಇಲ್ಲದೆ ಹೊಟ್ಟಿರುವದು. ಕಂಡು ಬರುತ್ತದೆ. ಅವರು ೧೯೨೨ ನೇ ಇಸ್ವಿಯಲ್ಲಿ ಒಂದು ಪುಸ್ತಕ ಬರೆದು ಪ್ರಸಿದ್ಧ ಮಾಡಿದ್ದಾರೆ. ಅದರೊಳಗೆ ಆ ಗ್ರಂಥಕಾರನು ತಾನು ತಂದೆ ಇಲ್ಲದೆ ಹುಟ್ಟಿದ್ದೇನೆಂದು ಜಾಹೀರ ಮಾಡಿರುತ್ತಾನೆ. ಈ ಗ್ರಂಥಕಾರನು ತ್ರೀಕಾಲಜ್ಞಾನಿಯಾಗಿ ಜ್ಞಾನದ ಮೇಲೆ ೬೬ ಪುಸ್ತಕಗಳನ್ನು ಬರೆದಿರುತ್ತಾನೆ. ಆ ಪುಸ್ತಕಗಳೊಳಗೆ ಚನ್ನ ಬಸವೇಶ್ವರರ ಮತ್ತು ವೀರಬಸವಂತರಾಯನ ಸಲುವಾಗಿ ಕುರುಹುಗಳನ್ನು ಬರದಿದ್ದಾರೆ. ಆ ತಂದೆಇಲ್ಲದ ಪುರಾತನು ಎಲ್ಲ ಕುರುಹುಗಳನ್ನು ಹೇಳಿ ತೀರಿಕೊಂಡನು. ಅವರ ಹೆಸರು **ರುದ್ರಗೋಪಾಲ ಗುಲಾಮು ಅಹಮ್ಮದ** ಉಂಟು. ಈ ಪಂಜಾಬದ ಮಹಾತ್ಮರ ಹೊರ್ತು ಶ್ರೀರಾಮಪುರದ ಹುಡಿಗಿಯಿಂದ ಹುಟ್ಟಿ, ಇವತ್ತಿನ ವರೆಗೆ ಯಾರಾದರೂ ತಾನು ತಂದೆ ಇಲ್ಲದೆ ಹುಟ್ಟಿದ್ದನೆಂದು ಯಾರೂ ಪ್ರಕಟಮಾಡಲಿಲ್ಲ. ಇದರ ಹೊರ್ತು **ಚನ್ನಬಸವೇಶ್ವರರ ಮತ್ತು ವೀರ ಬಸವಂತರಾಯರ** ಸಲುವಾಗಿ ಉತ್ತರ ದಿಕ್ಕಿನಲ್ಲಿ ಯಾರಾದರೂ ಕುರುಹುಗಳನ್ನು ಹೇಳಲಿಲ್ಲ. ಇವರ ಹೊರ್ತು ಎರಡನೇ ಮನುಷ್ಯನು **ರುದ್ರ ಮುನಿಯು** ಹೇಳಿದ ಪ್ರಕಾರ ಇದ್ದರೆ, ನಮ್ಮ ವಾಚಕರು ತೋರಿಸಬಹುದು. ಇದರ ಬಗ್ಗೆ ಜಗತ್ತಿನಲ್ಲಿ ನಾವು ಸಾರಿ ಸಾರಿ ಹೇಳುತ್ತೇವೆ. ಜರ **ರುದ್ರಮುನಿಯು** ತೋರಿಸಿದ ಪ್ರಕಾರ **ಈ ಗುಲಾಮು ಅಹಮ್ಮದನ** ಹೊರ್ತಾಗಿ ಯಾರಾದರೂ ಇದ್ದದ್ದು ತೋರಿಸಿದರೆ, ನಾವು ಅವರಿಗೆ **೧೦೦೦ ರೂಪಾಯಿ,** ಇನಾಮು ಕೊಡುತ್ತೇವೆ.

ಕಾಲಜ್ಞಾನ ಸುಳ್ಳು ಆಗುವದಿಲ್ಲ, ಮತ್ತು ಸುಳ್ಳು ಆಗಲಿಲ್ಲ. ಜನರು ಮೂಢತನದಿಂದ ಕಾಲಜ್ಞಾನ ವಚನಗಳ ಅರ್ಥವನ್ನು ನೆಟ್ಟಗೆ ತಿಳಕೊಳ್ಳುವದಿಲ್ಲ. ಇದರಿಂದ ಕಾಲಜ್ಞಾನಕ್ಕೆ ದೋಷ ಬರುವದಿಲ್ಲ. ಸಂಧೀ ಹೋದ ಮೇಲೆ ಆನಂದ ಪಾಟಹೋಯಿತು. ಎರಡನೇ ಸಂಧಿಗೆ ೫೦೦೦ ವರ್ಷಗಳು ಬೇಕಾಗುತ್ತವೆ. ಹದಿಮೂರನೇ ಆನಂದ ಸಂ|| ವೆಂದರೆ ಇದೇ ಹೋದ ಆನಂದದ ಹೊರ್ತು, ಮತೆ ಯಾವದೂ ಇಲ್ಲ. ಶಕೆ ೧೦೪೬ ಶಾಲಿವಾಹನದಿಂದ ೬೦೦ ವರ್ಷದ ಆನಂದವು ಹೋದ ಆನಂದದ ಹೊರ್ತು ಮತ್ತೆ ಯಾವದೂ ಆಗಲಾರದು. ಇಂತಿಷ್ಟು ಪ್ರಮಾಣ ವಿದ್ದ ಮೇಲೆ ಇದೇ ಕಾಲದಲ್ಲಿ ಉತ್ತರ ದೇಶದೊಳಗೆ ತಂದೆ ಇಲ್ಲದೆ ಒಬ್ಬ ಗೃಹಸ್ಥ ಹುಟ್ಟಿ, **ಚನ್ನಬಸವೇಶ್ವರರು** ಮತ್ತು **ವೀರಬಸವಂತರಾಯರ** ಕುರುಹ್ಯಗಳನ್ನು ತೋರಿಸಿದ್ದಾರೆ. ಜ್ಞಾನಿಗಳಿರಾ! ಕಾಲಜ್ಞಾನ ಸುಳ್ಳು ಆಗಲಾರದು. ಇದೇ ಪ್ರಕಾರ ಅವರು ( **ಗುಲಾಮು ಅಹಮ್ಮದ**) ಇನಂಬ್ಬರ ಹುಟ್ಟು ಕುರುಹುಗಳನ್ನು

ತೋರಿಸಿ ತೀರಿಕೊಂಡಿದ್ದಾರೆ. ಇವರು ಸ್ಪಷ್ಟ ಬರದಿಪ್ಪೇನಂದರೆ **ಚನ್ನ ಬಸವೇಶ್ವರರು** ಮುಸಲ್ಮಾನರಿದ್ದಾರೆ. ಇವರ ಹೇಳಿಕೆಯೂ ಮತ್ತು **ರುದ್ರ** ಮುನಿಯವರ ಹೇಳಿಕೆಯೂ ಒಂದೇ ಆಗಿರುವದರಿಂದ ನನಗೆ ಇದು ಜಾಹೀರ ಮಾಡಲಿಕ್ಕೇನೂ ಅಡ್ಡೀತೋರುವದಿಲ್ಲ. **ರುದ್ರಮುನಿ ಸ್ವಾಮಿ** ಹೇಳಿಪ್ಪೇನಂದರೆ **ಚನ್ನ ಬಸವೇಶ್ವರರು** ಮುಸಲ್ಮಾನರಿದ್ದಾರೆ.

---

## —( ೩ ನೇ ಆಧಾರ ಹಂಪಿಯಲ್ಲಿ ವಾದ ೧೯೨೭ )—

---

**" ಚನ್ನ ಬಸವೇಶ್ವರರು ಪಂಸಾಪುರಕ್ಕೆ ಹೋಗಿ, ವೀರ ಬಸವಂತರಾಯರ** ಸಂಗಡ ಪ್ರಸಂಗವನ್ನು ಮಾಡುವರು. ಶಿವಾಚಾರವನ್ನು ಕೆಡಿಸಿ **ವಿಷ್ಣು** ಪರವನ್ನು ಏನು ಕಾರಣ ಮಾಡಿದಿರೆಂದು ಕೇಳುವಲ್ಲಿ ಅದಕ್ಕೆ ವೀರ ಬಸವಂತರಾಯನು ಹೇಳುವದೇನಂದರೆ **ವಿಷ್ಣು ಪಾದದಲ್ಲಿ ಗಂಗೆ ಹುಟ್ಟಿರುವಳು,** ಅನ್ನುವನು. ಅದಕ್ಕೆ ಶ್ರೀ ಚನ್ನ ಬಸವ ದೇವರು ಇಪ್ಪತ್ತು ಯುಗಗಳಲ್ಲಿ ಮಾಯೆಯು ಹುಟ್ಟುವಳೆಂದು ಹೇಳುವರು. ಇದಕ್ಕೆ **ವೀರ ಬಸವಂತರಾಯರು** ಕಲಿಯುಗಗಳಲ್ಲಿ **ವಿಷ್ಣು** ಹುಟ್ಟದನೆಂದು ಹೇಳುವನು. ಅದಕ್ಕೆ ಚನ್ನ ಬಸವೇಶ್ವರರು ಇಪ್ಪತ್ತೆಂಟನೇ ಅವತಾರವಾಗಿ **ಈಶ್ವರನು** ಹುಟ್ಟದನೆಂದು ಹೇಳುವರು. ,,

ಈ ವಾದದಿಂದಾದರೂ ಸ್ಪಷ್ಟವಾಗುವದೇನಂದರೆ ಇವರಿಬ್ಬರೂ ಒಂದೇ ಗುರುವಿಗೆ ನೆನಿಸುತ್ತಾರೆ. ಆದರೆ ಹೆಸರುಗಳು ಮಾತ್ರ ಬೇರೆ ಬೇರೆ ಮಾಡುತ್ತಾರೆ. ವಾದದ ವಿಷಯದ ಮೇಲಿಂದ ಕಾಣಬರುವದೇನಂದರೆ **ವೀರ ಬಸವಂತರ ನಂಬಿಗೆ ನಾರದಮುನಿಯವರು** ಹೇಳಿದ ಪ್ರಕಾರ *. ಕಲಿಯುಗದ ೫. ಸಾವಿರ ಅಂತ್ಯ ಕಾಲದಲ್ಲಿ **ವಿಷ್ಣು** ಅವತಾರಿಸಿರುತ್ತಾನೆ. ಈ **ವಿಷ್ಣು** ಅವತಾರಕ್ಕೆ ಯಾರೂ ನಂಬು

---

*. **ವಿಷ್ಣುವಿನ ವಚನ.** ಕಲಿಯುಗ ಐದು ಸಾವಿರ ವರ್ಷದಲ್ಲಿ ಭೂವಿಯೊಳಿರುವ ದುರುಳರ ಭಾರವಂ ಅಡಗಿಸುವದಕ್ಕೋಸ್ಕರ ಅವತರಿಸುವೆನು. ( ನಾರದ ಮುನಿ ಪುಟ, ೩ ) ಸೂಚನೆ:– ೧೯೨೪ನೇ ಇಸ್ವಿಯಲ್ಲಿ ಕಲಿಯುಗ ಪ್ರಮಾಣವು ೫೦೨೪ ಇರುತ್ತದೆ.

ವದಿಲ್ಲ. ಅವರೆಲ್ಲರು ಭವಿಗಳು **ಚನ್ನಬಸವೇಶ್ವರರ** ವಾದ ವಿಷಯವೇನಂದರೆ ಕಲಿಯುಗದ ೫ ಸಾವಿರ ಅಂತ್ಯಕಾಲಕ್ಕೆ ಇಪ್ಪತ್ತೆಂಟನೇ ಅವತಾರವಾಗಿ **ಈಶ್ವರನು ಹುಟ್ಟುತ್ತಾನೆ. ಈ ಈಶ್ವರನೇ ಬ್ರಹ್ಮ, ಈತನೇ ವಿಷ್ಣು, ಇವನೇ ಮಾಯಾ, ಇವನೇ ರುದ್ರ, ಇವನೇ ಗೋಪಾಲ, ಇವನೇ ಕಲಿಯುಗದ ಅಧಿಪತಿ, ಯಾರು ಈ ಈಶ್ವರನಿಗೆ ನಂಬುವದಿಲ್ಲ. ಅವರೇ ಭವಿಗಳು**

**ಈ** ಎರಡು ವಾದ ವಿಷಯಗಳೊಳಗೆ ವಿಚಾರ ಮಾಡತಕ್ಕ ಸಂಗತಿ ಏನಂದರೆ (೧) ಕಲಿಯುಗದ ೫೦೦೦ ಅಂತ್ಯಕಾಲಕ್ಕೆ **ವಿಷ್ಣು** ಅವತಾರವು ಯಾವ ಧರ್ಮದೊಳಗೆ ಆಗಿರುತ್ತದೆ. (೨) **ಚನ್ನಬಸವೇಶ್ವರರು** ಇದೇ **ವಿಷ್ಣು** ಅವತಾರಕ್ಕೆ **ಈಶ್ವರನ** ಇಪ್ಪತ್ತೆಂಟನೇ ಅವತಾರವೆಂದು ಯಾತಕ್ಕೆ ಅನ್ನುತ್ತಾರೆ. ಆ ಅವತಾರ ಸಂಧಿಸಿ ಪ್ರತ್ಯಕ್ಷ ಕಂಡು ಬಂದ ವೇಳೆ ಯಾವದು. ೧೯೨೨ ಇಸ್ವಿಯಲ್ಲಿ ಒಬ್ಬಮಹಾತ್ಮರು ಪಂಜಾಬ ದೇಶದೊಳಗೆ ಆಕಾಶ ವಾಣಿಯಿಂದ ಪ್ರಕಟವಾದ ವಾಕ್ಯ "ಏಲೈ ರುದ್ರಗೋಪಾಲ ತೇರಿ ಸ್ತೋತ್ರ ಗೀತಾಮೆ ಲಿಖಿ ಹೈ" ಎಂದು ಕೇಳಿ ಜಗತ್ತಿನಲ್ಲಿ ಪ್ರಸಿದ್ಧ ಮಾಡಿದ್ದೇನಂದರೆ ೫ ಸಾವಿರ ಅಂತ್ಯ ಕಾಲದಲ್ಲಿ **ವಿಷ್ಣು** ಅವತಾರನು ನಾನೇ ಮತ್ತು ಮುಸಲ್ಮಾನರ ಕುರಾನದ ಸೂಚನೆ "ಓ ಅಬರೀನ ಮಿನ್ ಹುಬ್ಬುಲಮ್ಮಾರ ಏಲ್ಲ ಹಕೂಬ ಹಿಂಮ್ಮ" ಪ್ರಕಾರ **ಈಶ್ವರನ** ಅವತಾರ ಸಹ ನಾನೇ ಎಂದು ಬರದಿರುವದು. ಈ ಮಾತಿಗೆ ನಂಬಿದವರು ಒಂಬತ್ತು ಲಕ್ಷ ಮಂದಿ ಹಿಂದೂ ಮುಸಲ್ಮಾನರು ಇದ್ದಾರೆ.

ಈ ವಿಷಯಗಳ ಬಗ್ಗೆ ಹೋದ ಆನಂದನಾಮ ಸಂವತ್ಸರದಿಂದ **ವೀರ ಬಸವಂತರಾಯರ** ಮತ್ತು **ಚನ್ನಬಸವೇಶ್ವರರ** ನಡುವೆ ವಾದ ನಡೆದು, ಭೇದವಾದ ಮೂಲಕ ಬೇರೆ ಬೇರೆ ಆಗಿರುತ್ತಾರೆ. **ಈಗ ವೀರಬಸವಂತರ** ಕಡೆಗೆ ಐದು ಲಕ್ಷ ಜನರು ಇರುತ್ತಾರೆ. ಮತ್ತು **ಚನ್ನಬಸವೇಶ್ವರರ** ಕಡೆಗೆ ಹೆನ್ನೆರಡು ಸಾವಿರ ಜಂಗಮರೂ, ಏಳನೂರಾ ಎಂಬತ್ತು ಅಮರಗಣಂಗಳೂ, ಅರವತ್ತು ಮೂರು ಮಂದಿ ಪುರಾತರೂ ಇದ್ದಾರೆ. **ಚನ್ನಬಸವೇಶ್ವರರು ವೀರಬಸವಂತರಾಯರ** ಸ್ಥಳಕ್ಕೆ ಹೋಗಿ ಆನಂದನಾಮ ಸಂವತ್ಸರದಿಂದ ಪಿಂಗಳನಾಮ ಸಂವತ್ಸರದ ವರೆಗೆ ಅವರ ಸಂಗಡ ವಾದ ನಡಿಸುತ್ತಿರಲು ಅಲ್ಲಿ ಆದರ ನಿಕಾಲಿ ಆಗಲಿಲ್ಲಾದ ಕಾರಣ ತಿರುಗಿ ತಮ್ಮ ನಾಡಿಗೆ ಬಂದಿದ್ದಾರೆ. ಮುಂದೆ ಬರುವ ಕ್ಷಯನಾಮ ಸಂವತ್ಸರ ಕಾರ್ತಿಕ ತಿಂಗಳೊಳಗೆ ಹಂಪಿಯಲ್ಲಿ ಇದೇ ವಾದ ಆಗುತ್ತದೆಂದು **ರುದ್ರಮುನಿ** ತಮ್ಮ ವಚನ ಪುಸ್ತಕದ ೧೫ ನೇ ಪುಟದಲ್ಲಿ ಸ್ಪಷ್ಟವಾಗಿ ಬರದಿರುತ್ತಾರೆ.

ಮೇಲೆ ಹೇಳಿದ **ನಾಯನಾ, ವಿಷ್ಣು,** ಮತ್ತು **ಈಶ್ವರ** ಅವತಾರಪು
ಕಲಿಯುಗದ ೫ ಸಾವಿರದ ಅಂತ್ಯಕಾಲದಲ್ಲಿ ಗುಲಾಮ ಅಹಮ್ಮದರೂ, ಅವತರಿಸಿ
ರುವರು. ಇವರ ಹೊರತು ಮತ್ತಾರಿಲ್ಲ. ನಾವು ಮೇಲೆ ಹೇಳಿದವರ ಹೊರತು ಬೇರೆ
ಪ್ರಕಾರದ ಮನುಷ್ಯನನ್ನು ತೋರಿಸಿಕೊಟ್ಟರೆ, ಬಹಳ ಉಚಿತವನ್ನು ಕೊಟ್ಟೇವು. ಈ
ಗುಲಾಮ ಅಹಮ್ಮದರನ್ನು ನಂಬುವವರು, ಒಂಭತ್ತು ಲಕ್ಷ ಮುಸಲ್ಮಾನರಿದ್ದಾರೆ.
**ಶ್ರೀ ಚನ್ನಬಸವೇಶ್ವರ** ಮತ್ತು **ವೀರಬಸವಂತರಾದರೂ** ಇದೇ ಅವತಾರಕ್ಕೆ
ನಂಬುತ್ತಾರೆ. ಇವರೀರ್ವರಾದರೂ ಮುಸಲ್ಮಾನರಿದ್ದಾರೆ. **ಈ** ಅವತಾರಕ್ಕೆ ನು
ಸಲ್ಮಾನರ ಹೊರತು ಮತ್ತೆ ಯಾರಾದರೂಇದ್ದರೆ, ತೋರಿಸಬೇಕು.

**— ( ೪ ನೇ ಆಧಾರ ) —**



ಶ್ರೀ ಚನ್ನ ಬಸವೇಶ್ವರರು ವಾಲಿಭಾಂಡಾರಕ್ಕೆ ಬಂದು, ಭಾಂಡಾರ ದೊರ
ಗಿನ ಭಾಗ್ಯವನ್ನೆಲ್ಲವನ್ನು ತೆಗೆದುಕೊಂಡಾರು? ( ರುದ್ರಮುನಿ ಪುಟ ೧೬ )

ಜ್ಞಾನಿಗಳಿರಾ! ಈ ಮಾತು ವಿಚಾರ ಪೂರ್ವಕ ತಿಳಿಯತಕ್ಕಂಥಾದ್ದಿರುತ್ತದೆ
ಅದು ಯಾವಾಗ ಅಂದರೆ ದೇವಾಲಯ, ದ್ರವ್ಯಗಳು, ಯಾವ ಕುಲದ ಪಾಲು
ಆಗುವವೋ ಆಗ ಅಂತಾ ತಿಳಿಯತಕ್ಕದ್ದು.

ಎಲ್ಲಾ ಇತಿಹಾಸಗಳು ನುಡಿಯುವದೇನಂದರೆ ಭೂಮಿ ಹುಟ್ಟಿದಂದಿನಿಂದ
ಈ ವರೆಗೆ ದೇವಾಲಯ, ದ್ರವ್ಯಗಳು, ಮುಸಲ್ಮಾನರ ಹೊರತು ಯಾವ ಕುಲಕ್ಕೂ
ಸಾಧ್ಯವಾಗಿಲ್ಲ. ಇದರ ಕಾರಣವೇನು? ಪರಮಾತ್ಮನು ಮಹಮ್ಮದ ಪೈಗಂಬರಿಗೆ
ಭೂಮಿಯ ನಾಭಿಯಲ್ಲಿ ಹುಟ್ಟಿಸಿ, ಜಗತ್ತಿನಲ್ಲಿದ್ದ ಯಾವತ್ತೂ ಧರ್ಮಗಳಿಗೆ ಒಂದು
ಮಾಡತಕ್ಕ ಕಾಯಿದೆ, ಕಾನೂನಗಳನ್ನು ಕೊಟ್ಟು ಯಾವತ್ತೂ ಧರ್ಮಗಳ ಮೇಲೆ
ಅಧಿಕಾರ ಕೊಟ್ಟು ಕಳಿಸಿದ್ದಾನೆ. ಅದರ ನಿಮಿತ್ತವಾಗಿ ಸ್ವಾಚೀನ ಕಾಲದಲ್ಲಿ ಸಜ್ಜ
ನರು, ಪುಣ್ಯವಂತರು ದೇವಾಲಯಗಳೊಳಗೆ ತಂದಿಟ್ಟ ದ್ರವ್ಯಗಳು ಈ ಹೊ
ತ್ತಿಗೆ ಮುಸಲ್ಮಾನರ ಕೈಯೊಳಗೆ ತಿಗುತ್ತವೆ.

ಅದರ ಕಾರಣವೇನಂದರೆ ಧರ್ಮಾ ಜನರ ದ್ರವ್ಯಗಳು ಧರ್ಮೋದ್ಧಾರಮಾತ್ರ
ವಕ್ಕಾಗಿಯೇ ಉಂಟು. ಮುಸಲ್ಮಾನರು ಬರುವ ಮುಂಚಿತವಾಗಿ ಹಿಂದುಸ್ತಾನದಲ್ಲಿ

ಹಿಂದೂ ರಾಜ್ಯವಿತ್ತು. ಆದರೆ ಆ ರಾಜರಿಗೆ ಸೋಮನಾಥ ದೇವಾಲಯದ ಹಣ ಮತ್ತು ಹಂಪೀ ದೇವಾಲಯದ ಹಣ, ಸಿಗಲಿಲ್ಲ. ಆ ಹಣ ತಕ್ಕೊಳ್ಳಲಿಕ್ಕೆ ಅವರಲ್ಲಿ ಸಾಮರ್ಥ್ಯವೂ ಇದ್ದಿಲ್ಲ. ಮುಸಲ್ಮಾನ ರಾಜ್ಯವು ಮುಳಗುವ ಕಾಲಕ್ಕೆ ಶೀಕ ಮತದವರು ಮಹಾರಾಷ್ಟ್ರರೂ ಪ್ರಬಲಿಗೆ ಬಂದು ಬಲಿಷ್ಠವಾದ ರಾಜ್ಯವನ್ನು ಸ್ಥಾಪಿಸಿದರು. ಇನ್ನೆರಡೂ ಮತಕ್ಕಾದರೂ ದೇವಾಲಯಗಳೊಳಗಿನ ಹಣವು ಸಾಧ್ಯವಾಗಲಿಲ್ಲ. ಸಧ್ಯದ ಕಾಲದಲ್ಲಿ ಆಳುತ್ತಿರುವ ಇಂಗ್ಲೀಷರಿಗಾದರೂ ದೇವಾಲಯಗಳೊಳಗಿನ ಹಣ ತೆಗೆಯಲಿಕ್ಕೆ ಶಕ್ತಿಯಿಲ್ಲ. ಇವರ ಕಾರಣವೇನಂದರೆ ಲೌಕಿಕ ಬುದ್ಧಿಯಿಂದ ರಾಜ್ಯ ನಡಿಸುವರು. ಇದಲ್ಲದೆ ಇವರ ಮತಗಳು ಜಗತ್ಪಾಲಕರವು ಅಲ್ಲ. ಒಂದಾನೊಂದು ಕಾಲದಲ್ಲಿ ಮುಸಲ್ಮಾನ ರಾಜರಾದರೂ ಲೌಕಿಕ ದೃಷ್ಟಿಯಿಂದ ರಾಜ್ಯಕಾರಭಾರ ನಡಿಸಿದರು. ಆಗ ಅವರಿಗಾದದೂ ದೇವಾಲಯಗಳೊಳಗಿನ ಹಣವು ಸಾಧ್ಯವಾಗಲಿಲ್ಲ. ಫಿಜನಿ ಮಹಮ್ಮೂದ ಬಾದಶಹರು ಮುಸಲ್ಮಾನ ಧರ್ಮದ ರಾಜರಿರುವದರಿಂದ ಸೋಮನಾಥ ದೇವಾಲಯದ ಹಣವು ಇವರಿಗೆ ಸಾಧ್ಯವಾಯಿತು. ಇದಕ್ಕೆ ಸಾಕ್ಷೀ ಏನಂದರೆ ಅವರು ತಮ್ಮ ಸೈನ್ಯ ಸಮೇತವಾಗಿ ಸೋಮನಾಥ ದೇವಾಲಯದಲ್ಲಿ ಪ್ರಾರ್ಥನೆ ಮಾಡಿದ್ದೇ ಸಾಕ್ಷಿ! ವಿಜಾಪೂರದ ಅಲ್ಲೀ ಆದಿಲ್‌ಶಹರು ತಾಳೀಕೋಟೆ ಯುದ್ಧವಾದನಂತರ ಹಂಪಿಗೆ ಬಂದರು. ಇವರ ಇಚ್ಛೆಯಾದರೂ ಹಂಪಿಯ ದೇವಾಲಯದೊಳಗಿನ ಹಣ ತೆಗೆಯುವದಿತ್ತು. ಆದರೆ ಇವರ ಈ ಪ್ರಯತ್ನದೊಳಗೆ ದೇವಾಲಯದಲ್ಲಿ ಪ್ರಾರ್ಥನೆ ಮಾಡಿದ್ದು ಕಾಣ ಬರುವದಿಲ್ಲ. ಆದ್ದರಿಂದ ಇವರ ಇಚ್ಛೆಯ ಪ್ರಕಾರ ಕೆಲಸವುಜರಗಲಿಲ್ಲ ವಿಶೇಷವಾಗಿ ಮುಸಲ್ಮಾನ ಅರಸರು ಲೌಕಿಕದ ಆಶೆಗೆ ಬಿದ್ದಿದ್ದರು. ಇವರೊಳಗೆಮುಖ್ಯವಾಗಿ **ಹೈದರ, ಟೀಪು, ಆಲಮ್‌ಗೀರ, ಈ ಮೂವರೇ ಧರ್ಮರಾಜರಿದ್ದರು.** ಇವರಿಗೆ ಮಾತ್ರ ದೇವಾಲಯಗಳೊಳಗಿನ ಹಣವು ಸಾಧ್ಯವಾಯಿತು. ಇದರ ತಾತ್ಪರ್ಯವೇನಂದರೆ ಮುಸಲ್ಮಾನರ ಹೊರ್ತು ದೇವಾಲಯಗಳೊಳಗಿನ ಹಣ ತೆಗೆಯಲಿಕ್ಕೆ ಯಾರಿಗೂ ಅಧಿಕಾರವಿಲ್ಲವೆಂಬುವದು ಸ್ಪಷ್ಟವಾಗಿ ಕಾಣುವದು. **ಕಲ್ಯಾಣ ಬಸವೇಶ್ವರರು** ಬಹು ದೊಡ್ಡದೊಂದು ಧರ್ಮದ ಕೆಲಸ ಮಾಡಿದರೂ ಇವರಿಗೆ ಒಂದೂ ದೇವಾಲಯದ ಹಣವು ಸಾಧ್ಯವಾಗಲಿಲ್ಲ. ಅಂದ ಮೇಲೆ ಶ್ರೀ ಚನ್ನ ಬಸವೇಶ್ವರರು ಲಿಂಗಾಯತ ಧರ್ಮದೊಳಗೆ ಜನಿಸಿ ಹಂಪಿಯೊಳಗಿನ ದೇವಾಲಯದೊಳಗಿನ ದ್ರವ್ಯವನ್ನು ಸಾಧ್ಯ ಪಡಕೊಳ್ಳುವ ಬಗೆ ಹೇಗೆ? (ಜನರ ಕಲ್ಪನೆಯ ಪ್ರಕಾರ) ಈ ಕಲ್ಪನೆಯು ತಪ್ಪಾದದೆಂದು ಇತಿಹಾಸಗಳು ಸಾರಿ ಸಾರಿ ಹೇಳುತ್ತವೆ. ಆದ ಕಾರಣ ಜ್ಞಾನಿಗಳಿರಾ? ಶ್ರೀ ಚನ್ನ

# ೭. ನೇ ಅಧ್ಯಾಯ.

ಶ್ರೀ ಚನ್ನ ಬಸವೇಶ್ವರರೂ ನೀವು ಬಸವಣ್ಣನವರಾಮುಖ ನೋಡಲು ಕೂಡಲ ಸಂಗಮಕ್ಕೆ ಬಂದು ಅಲ್ಲಿ ಎಲ್ಲರು ಪ್ರಸಾದವನ್ನು ಪಡೆದು ಸಂತೋಷದಿಂದ ಹಂಪಿಪಟ್ಟಣಕ್ಕೆ ಬಂದರು (ರುದ್ರಮುನಿ) ಪುಟ ೧೩

ಸ್ವಲ್ಪ ಗಮನವಾಗಿ ನೋಡಿದರೆ ಪ್ರಸ್ತಾಪವೇನೆಂದರೆ ಈ ಕಾಲಿಗೆ ಮುಸಲ್ಮಾನರ ದೌರ್ಜನ್ಯ ಹೆಚ್ಚಾಯಿತು ಹಿಂದೂಗಳ ಕೈಯಲ್ಲಿ ಆಗದು. ಈ ವಿಷಯವನ್ನೆ ಪ್ರಸ್ತಾಪವಾಗಿ ನಾಲ್ಕನೇ ಅಧ್ಯಾಯದಲ್ಲಿ ಬರೆದಿರುತ್ತೇನೆ. ಈ ಮಾತನ್ನೆ ಮನಸ್ಸಿನಲ್ಲಿಟ್ಟುಕೊಂಡರೆ, **ಚನ್ನಬಸವೇಶ್ವರರು** ದೇವಾಲಯದ ಹಣವನ್ನು ತೆಗೆಯುವವರಿಲ್ಲದಂತೆ ಮುಸಲ್ಮಾನರಿದ್ದಾರೆ

## ೭ ನೇ ಅಧ್ಯಾಯ.

(ಚನ್ನ ಬಸವೇಶ್ವರರು) ಉಮಾಪುರದ ಗಣೇಶ್ವರನು ಕಿತ್ತು ಬಿಟ್ಟಾರು ಮೂರು ಕೋಟಿ ದ್ರವ್ಯವನ್ನೆಲ್ಲಾ ತೆಗೆದುಕೊಂಡು ವೀರ ಬಸವಂತರಾಯರಿಗೆ ಹೊನ್ನಿನ ಅಭಿಷೇಕವನ್ನು ಮಾಡಿಸಿದರು (ರುದ್ರಮುನಿ ಪುಟ ೧೩) ಪ್ರಿಯ ವಾಂಛಕರೇ! ಇದರಿಂದ ಪ್ರಸ್ತಾಪವೇನೆಂದರೆ ಚನ್ನ ಬಸವೇಶ್ವರರು ಮುಸಲ್ಮಾನರು ಇಷ್ಟವಿಲ್ಲದಿದ್ದರೂ ನಿಮಗೆ ಯಾವ ರೀತಿ ಸಂಕಷ್ಟವೂ ಬರಲಾರದು. ಜ್ಞಾನಿಗಳಿರಾ? ಶಿಕ್ಷೇಶ್ವರನನ್ನು ಕಿತ್ತಿನಾಕುವವರು ಯಾರು ಮುಸಲ್ಮಾನರಿಲ್ಲೇಕು. ಈ ಕೆಲಸವು ರಿಂಗಾಯಿತ ಪಂಥದ ಗುರು ಅಲ್ಲ, ಜಂಗಮ ಪಂಥದವರೂ ಅಲ್ಲ, ವೈಷ್ಣವರ ಪಂಥ ಅಲ್ಲ, ಅಂದು ಇದ್ದ ಮುಸಲ್ಮಾನರಿಗೆ ಇಂಬುಸದು ಎಲ್ಲರಿಗೂ ವಿವಿತವಾಗುವದು. ಆದ್ದರಿಂದ ಚನ್ನ ಬಸವೇಶ್ವರರು ಮುಸಲ್ಮಾನರೇ ಇರಬೇಕು.

## ೮ ನೇ ಅಧ್ಯಾಯ.

ಬಿಜಯನಗರ ಅರಸುಗಳಿಗೆ ವೀರ ಪಂಚಾಕ್ಷರಿಗೆ ಗವಿಯವರಿಗೆ ಸಮಾಜಕ್ಕೆ ಕೋಟಿ ದ್ರವ್ಯವನ್ನು ತೆಗೆದಾರು (ರುದ್ರಮುನಿ ಪುಟ ೧೩)

ಈ ಕೆಸಲವಾದರೊ ಮುಸಲ್ಮಾನರವೇ ಇರುವದು. ಶ್ರೀ ಚನ್ನ ಬಸವೇಶ್ವರರು ಈ ಗದ್ದಿಗೆಯ ಸಮೀಪ ಬಂದು, ದೇವಾಲಯದೊಳಗಿನ ದ್ರವ್ಯವನ್ನು ಕೊಗೆಯುವ ವರಿರುವದರಿಂದ ಅವರು ಮುಸಲ್ಮಾನರಿದ್ದಾರೆಂಬದು ಸ್ಪಷ್ಟವು.

## ೧೦ನೇ ಅಧಾರ.

ಶ್ರೀ ಶಕೆ ೧೫೩೬ ನೇ ಆನಂದನಾಮ ಸಂವತ್ಸರದಲ್ಲಿ ಶ್ರೀ ಗುರು ಚನ್ನ ಬಸವೇಶ್ವರ ಪಾಹಿಮದವರು ಬರುವ ಕಾಲಕ್ಕೆ ಓಂಕಾರ, ಪ್ರಣಮ, ಪ್ರಭುಶಂಕರ ಜೇಂಕಾರ ಸ್ತವನವನ್ನು ಉಚ್ಚರಿಸುತ್ತ ಬರುವರು. (ಅಖಂಡಮುನಿ ಕಾಲಜ್ಞಾನ) ಈ ಪ್ರಕಾರವಾಗಿ ಅಖಂಡಮುನಿ ಕಾಲಜ್ಞಾನದೊಳಗೆ ಸಾಲ್ಕು ವಾಕ್ಯಗಳುಂಟು, ಈ ಸಾಲ್ಕು ವಾಕ್ಯಗಳೊಳಗೆ ಚನ್ನ ಬಸವೇಶ್ವರರಿಗೆ ಬಾದಶಹನೆಂದು ಬರದಿರುತ್ತದೆ ಈ ಕಾಲಜ್ಞಾನ ಬರೆದವನು ಹಿಂದೂ ಗೃಹಸ್ಥನು ಯಾವ ಕಾಲದಲ್ಲಿಯಾದರೂ ಹಿಂದೂ ಜನರು ತಮ್ಮ ಕಮ್ಮೊಳಗೆ ಬಾದಶಹನೆಂದು ಕರೆಯುವ ಸಾಂಪ್ರದಾಯವಿಲ್ಲ. ಎರಡನೇ ಗೃಹಸ್ಥರಿಗೆ (ಮುಸಲ್ಮಾನರಿಗೆ) ಮಾತ್ರ ಬಾದಶಹರೆಂದು ಕರೆಯುವ ರೂಢಿಯದೆ. ಆ ಬಾದಶಹನು ಮುಸಲ್ಮಾನನೇ ಇರಬೇಕು. ಯಾಕಂದರೆ ಮುಸಲ್ಮಾನರೊಳಗೆ ಈ ಶಬ್ದದಿಂದ ಕರೆಯುವ ವಹಿವಾಟ ಅವೆ. ಇದರ ಮೇಲಿಂದ ಸಿದ್ಧವಾಗುವದೇನಂದರೆ ಅಖಂಡ ಮುನಿ ಹಿಂದೂ ಇದ್ದು, ಚನ್ನ ಬಸವೇಶ್ವರಿಗೆ ಬಾದಶಹನೆಂದು ಕರೆದಿರುವದರಿಂದ ಚನ್ನ ಬಸವೇಶ್ವರರು ಮುಸಲ್ಮಾನರಿರಲಿಕ್ಕೆ ಏನೂ ಸಂಶಯವಿಲ್ಲ.

## — ೧೧ನೇ ಅಧಾರ. —

ಇಷ್ಟ ಲಿಂಗವನ್ನು ಮುರಿದು ಮಿಶ್ರಿತಲಿಂಗವಾಗುವತನಕ (ಕಿನ್ನರಿ ಬ್ರಹ್ಮಯ್ಯನ ಕಾಲಜ್ಞಾನ) ಈ ವಾಕ್ಯದೊಳಗೆ ಸಹಜ ರೀತಿಯಿಂದ ಸ್ಪಷ್ಟವಾಗುವದೇನಂದರೆ "ಯದೃಷ್ಟಂಕದ್‌ನಷ್ಟಂ" ಎಂಬಂತೆ ಕಲ್ಲು ದೇವರುಗಳು ಲಯವಾಗುವವು. ಜ್ಞಾನಕ್ಕೆ ಸಮಾನವಾದ ಪವಿತ್ರವಸ್ತು ಈ ಭೂಮಿಯಲ್ಲಿ ಯಾವದೂ ಉಳಿಯುವದಿಲ್ಲ. ಚನ್ನ ಬಸವೇಶ್ವರರು ಇದನ್ನೆಲ್ಲ ಅಳಿದು ಬಿಟ್ಟಾರು. ಇಷ್ಟಲಿಂಗ

ಮುಂದು ಹೋದ ಮೇಲೆ ಅಧಮ ನಾಶವಾವ ಮೇಲೆ ಜ್ಞಾನ ಉತ್ಪನ್ನಮಾಡಲಿಕ್ಕೆ ವಿಶ್ರುತ ಲಿಂಗ ಬರುವದು. ಎಂದು ಕಾಲಜ್ಞಾನ ವಚನದಿಂದ ಕಂಡು ಬರುತ್ತದೆ.

ಮಿಶ್ರಿತ ಲಿಂಗವು ಯಾವ ಲಿಂಗವಿರಬೇಕು? ಇದಕ್ಕೆ ಬಹಳ ವಿಚಾರ ಮಾಡುವ ಕಾರಣವಿಲ್ಲ. ಜಗತ್ತಿನಲ್ಲಿಲ್ಲ ಜನಿಸಿದ ಎಲ್ಲ ಕುಲಗಳನ್ನು ಒಂದೇ ಕುಲ ಮಾಡುವವನು ತಂದಿದ್ದು, ಲಿಂಗವೇ ಮಿಶ್ರಿತಲಿಂಗವು. ಸ್ವಲ್ಪ ವಿಚಾರ ಮಾಡಿ ನೋಡಿದರೆ **ಮಹಮ್ಮದ ಪೈಗಂಬರರ** ಹೊರ್ತು, ಈ ಕೆಲಸವನ್ನು ಯಾರೂ ಮಾಡಲಿಲ್ಲ. ಅವರೇ ಎಲ್ಲ ಮತಗಳೊಳಗಿದ್ದ ಜ್ಞಾನಕರ್ಮಗಳನ್ನು ಆಯಾಯ ಸ್ಥಿತಿಗನುಸರಿಸಿ ಕೊಟ್ಟು ಸಂಪೂರ್ಣ ರೀತಿಯಿಂದ ಆತ್ಮ ಸಂರಕ್ಷಣೆ ಮಾಡಿದರು. ಬೇರೆ ಬೇರೆ ದೇಶಗಳಲ್ಲಿ ಇರುವ ಬೇರೆಬೇರೆ ಕುಲಗಳೊಳಗಿದ್ದ ಕಾಯ್ದೆಕಾನೂನಗಳು ಒಂದು ಪುಸ್ತಕದೊಳಗೆ ಪರಮಾತ್ಮನಿಂದ ಪ್ರಕಟವಾದ ಪ್ರಕಾರ ಇಟ್ಟರು. ಈ ಕಾಯ್ದೆಕಾನೂನುಗಳು ಬೇರೆಬೇರೆ ಕುಲಕ್ಕೆ ಬೇರೆಬೇರೆ ಲಿಂಗವಾಗಿರುವದರಿಂದ ಆವತ್ತು ಲಿಂಗವು ಇದೇ ಇರುವದು. (ಸರ್ವ ಕುಲಗಳನ್ನು ಒಂದೇ ಮಾಡುವದು.) ಆ ಯಾವತ್ತೂ ಲಿಂಗಗಳು ಒಂದು ಕುರಾನದೊಳಗೆ ಜಮಾ ಆಗಿರುವದರಿಂದ ಇದೇ ಮಿಶ್ರಿತಲಿಂಗವಾಗಿರುತ್ತದೆ. ಆದ್ದರಿಂದ **ಮಹಮ್ಮದ ಪೈಗಂಬರರು** ತಂದ ಕುರಾನವೇ ಮಿಶ್ರಿತಲಿಂಗವು. ಆದರೆ ಇಷ್ಟಲಿಂಗ ಮುರಿದು ಆ ಸ್ಥಾನದಲ್ಲಿ ಮಿಶ್ರಿತ ಲಿಂಗ ಇಡುವವನು **ಚನ್ನ ಬಸವೇಶ್ವರ**ನಾಗಿರುವದರಿಂದ ಇವರಾದರೂ ಮುಸಲ್ಮಾನರಿರಲಿಕ್ಕೆ ಏನೂ ಸಂಶಯವಿಲ್ಲ.

## — ೧೨ ನೇ ಆಧಾರ. —

(ಚನ್ನ ಬಸವೇಶ್ವರರು ಮತ್ತು ವೀರ ಬಸವಂತರಾಯರು)

ಆ ಕಾಲದಲ್ಲಿ [illegible] ಮುಸಲ್ಮಾನರಿಗೂ ಸಹ ಲಿಂಗಧಾರಣವನ್ನು ಮಾಡಿಸುವರು. ಆಗ ಇದು ವರಹಕ್ಕೆ ಒಂದು ಲಿಂಗ ಮಾತ್ರ (ರುದ್ರಮುನಿ ಪುಟ ೧೬)

ಮೇಲೆ ಹೇಳಿದ ವಚನದಲ್ಲಿ ವಿಚಾರ [illegible] ವರಹಕ್ಕೆ ಒಂದು ಲಿಂಗ ಕೊಡಲಿಕ್ಕೆ ಅಂದರೆ ಇಪ್ಪತ್ತು ರೂಪಾಯಿಗಳಿಗೆ ಬಂದು [illegible] ಇದಾಗಿದ ತರುವಾಯ ಮುಸಲ್ಮಾನರ ಪಾಲೀ ಧಾರಣಾ ಮಾಡಿದಾಗ [illegible] ಮತ್ತು ೧೮ ವರಹಾ ಮುಂದಿ ಕೂಡಿ, **ಚನ್ನ ಬಸವೇಶ್ವರ**ರಿಗೆ [illegible] ಲಿಂಗಮೇತು.

ನಮಗೆ ಲಿಂಗಬೇಕು. ಅಂತಾ ಬೇಡಿಕೊಳ್ಳುವರು. ಯಾವ ಜೀನಸಿನ ಮಾರಾಟ ವಿಶೇಷ ತೇಜಿ (ತುಟ್ಟಿ) ಇರುತ್ತದೆ. ವ್ಯವಹಾರಸ್ಥರು ಆ ಜೀನಸನ್ನು ಹೆಚ್ಚಾಗಿ ತರುತ್ತಾರೆ. ಇದಲ್ಲದೆ ಸಹಜ ರೀತಿಯಿಂದ ದೊರಕುವ ಪದಾರ್ಥಗಳು ಕಂಡ ಕಂಡ ಸ್ಥಾನದಲ್ಲಿ ತಯಾರ ಆಗುತ್ತವೆ. (ಸದ್ಯಃಕಾಲದ ಉದಾಹರಣೆ ಕಬ್ಬಿಣ) ಹಂಪಿಯ ಸ್ಥಳದಲ್ಲಿ ಕಲ್ಲು ಖಣಿಯು ಇರುತ್ತಿರಲಿಕ್ಕೆ ಇಷ್ಟ ಲಿಂಗದ ಅಗತ್ಯವಾಗಿರಲು ಎರಡು ಮುಡ್ಡಿನ ಲಿಂಗವು ಇಪ್ಪತ್ತು ರೂಪಾಯಿಗೆ ಮಾರುವದು ಆಶ್ಚರ್ಯದ ಮಾತು. ಇವನ್ನು ಸ್ವಲ್ಪ ವಿಚಾರ ಮಾಡಿ ನೋಡಿದರೆ ಈ ಆಶ್ಚರ್ಯವು ಉಳಿಯಲಿಕ್ಕಿಲ್ಲ. ಅದು ಹೇಗಂದರೆ ನಮ್ಮ ಲಕ್ಷವ್ವ ಶಿಲಾಮಯ ಲಿಂಗದ ಕಡೆ ಹೋಗಿರುವದರಿಂದ ಇದು ಅಗಾಧ ಕೆಲಸವೆಂದು ಕಂಡು ಬರುತ್ತದೆ. ಆದರೆ ನಾವು ಲಿಂಗದ ಮೂಲ ಅರ್ಥದ ಕಡೆ ಲಕ್ಷಗೊಟ್ಟರೆ ಕಠಿಣವಾದ ಕೆಲಸಗಳು ಸುಲುಭಕಾಣ ಹತ್ತುತ್ತವೆ. ಛಾಂದೋಗ್ಯ ಮತ್ತು ವೇದಗಳಲ್ಲಿ ಬರೆದಿರುವದೇನಂದರೆ ಲಿಂಗಮಧ್ಯ ಜಗತ್‌ಸರ್ವಂ, ತ್ರೈಲೋಕ್ಯಂ॥ ಸಚರಾಂಚರಂ॥ ಲಿಂಗಬಾಹ್ಯಂ॥ ಪರಮ್‌ನಾಸ್ತಿ ತಸ್ಮೈಲ್ಲಿಂಗಾಯನಮಃ ॥೧॥

ಪತಿರ್ಲಿಂಗಂ ಸತೀ ಚಾಯಂ ಹೃದಯಯುಕ್ತಸ್ವಯಂ ವಿಭುಃ॥ ಪ್ರಾಪಂಚಿಕ ಸುಖಂ ನಾಸ್ತಿ ಶರಣಸ್ಥಾಲ ಮುತ್ತಮಂ ॥೨॥

ಈ ಪ್ರಕಾರ ಶಾಸ್ತ್ರಗಳು ವರ್ಣಿಸಿದಂತೆ ಈ ಲಿಂಗವು ಆತ್ಮಲಿಂಗದ ಹೊರ್ತು ಮತ್ಯಾವಮೂ ಇಲ್ಲ. ಆದರೆ ಹಂಪಿಯ ಸ್ಥಳದಲ್ಲಿ ಇಪ್ಪತ್ತು ರೂಪಾಯಿಗೆ ಒಂದು ಲಿಂಗ ಮಾರುವದು. ಇಷ್ಟಲಿಂಗವಲ್ಲ ಆತ್ಮನಿಂದ ಸಂಪೂರ್ಣ ಶಕ್ತಿಗೆ ಸರಿಯಾಗಿ ಉಚ್ಚರಿಸಿದ "**ಕುರಾನವೇ**" **ಲಿಂಗ** ವಿರುತ್ತವೆ. ಕುರಾನದೊಳಗೆ ಸಂಣ ದೊಡ್ಡ ಪದಾರ್ಥಗಳ ಬಗ್ಗೆ ಸವಿಸ್ತಾರವಾಗಿ ಬರೆದಿರುವದು ಯಾಕಂದರೆ ಜಗತ್ತಿನ ಎಲ್ಲ ಜಾತಿಗಳಿಗೆ ಸರಿಯಾಗಿ ಅವರವರ ತಕ್ಕ ಸಂರಕ್ಷಣೆ ಮಾಡುವ ಕೆಲಸವನ್ನು ಕುರಾನನ ಹೊರ್ತು ಎರಡನೇ ಯಾವ ಗ್ರಂಥವೂ ಮಾಡಲಾರದು. ಇದರೊಳಗೆ ಜಗತ್ತಿನಲ್ಲಿದ್ದ ಧರ್ಮಗ್ರಂಥಗಳೆಲ್ಲಾ ಕಾಣುತ್ತವೆ. ಕುರಾನವಾದರೂ ಇದೇ ವಿಚಾರಿಸುತ್ತದೆ.

"ಫೀಹಾ ಕುತುಬುನ್ ಕೈಯಿಮಾ" ಅಂದರೆ ಇದರೊಳಗೆ ಎಲ್ಲಧರ್ಮ ಗ್ರಂಥಗಳುಂಟು, "ಲಾರತ್‌ಬಿಂವ ವಲಾಯೂ ಬಿಶಿನ್ ಇಲ್ಲಾ ಫೀ ಕಿತಾಬಿನ್ ಮ್ಮುಬೀನ್" ಅಂದರೆ ಈ ಜಗತ್ತಿನಲ್ಲಿದ್ದ ಯಾವತ್ತೂ ತತ್ವಗಳು ಅಥವಾಯಾವತ್ತೂ

ಜೀವರಾಶಿಗಳು ಅಥವಾ ಜಗತ್ತಿನಲ್ಲಿಕಾಣುಬರುವ ಜ್ಞಾನಶಕ್ತಿ ಜೀವಿಗಳು ಈ ಗ್ರಂಥವಲ್ಲಿ ವುಂಟು. ಆದಕಾರಣ ಇದಕ್ಕೆ ಪುರಾಣವೂ, ಇತಿಹಾಸಕರೂ, ನೆನಿಸುತ್ತಾರೆ. ಆದ್ದರಿಂದಲೇ " ಲಿಂಗಮಧ್ಯಂ ಜಗತ್ಸರ್ವಂ " ಎಂದು ಹೇಳಿದ್ದಾರೆ. ಈ ಸ್ತೋತ್ರವು ಕುರಾನಕ್ಕೇ * ಸಲ್ಲುವದು. ಇದೇ ಲಿಂಗವು ಪುಂಜಿಯ ಸ್ಥಳದಲ್ಲಿ ಒಂದು ಸಾವಿರದಾ ಎಂಟುನೂರಾ ಹದಿನೈದು ಮುಸಲ್ಮಾನಮಂದಿಗೆ ಸಹ ಕೊಡುವದು. ಇದೇ ಲಿಂಗವು ಇಪ್ಪತ್ತು ದೂಪಾಯಿಗೆ ಒಂದು ಮಾರುವದು ಈ ಕೆಲಸ ಮುಸಲ್ಮಾನರ ಹೊಟ್ಟೆ ಡೂಡೂ ಮಾಡಲಾರರು. ಆದಕಾರಣ ಚೆನ್ನಬಸವೇಶ್ವರರು, ಕುರಾನನ ಪ್ರಚಾರಕರುವವೆಂದ ಮುಸಲ್ಮಾನರಿಂತ್ತಾರೆ.

## — ೧೩ ನೇ ಅಧಾರ. —

ಮುಪ್ಪು ಮರಣಾಗಳಿಲ್ಲದಂತಿ ವೈರ್ಯ ಪಾವನವು ಮಾಡಿ, ಒಳ್ಳೆ ದರ್ಶನನೂರೋದು ಕುಲ ಆಶ್ರಮದ ಮತಭೇದವನಳಿಸಿ, ಪರಮಶಕ್ತಿಯ ವಿಶ್ವಮ ವಿರಕ್ತಿವರನ್ನಾಧರಿಸಿ ಆ ಸಾವಿರಂಜಂಗೆ ಹಸ್ತಿನಪುರದ ಸುಲ್ತಾನ್ನು ಕನ್ನಿಕೆಯು ನಿಚ್ಚಯಿಸಿ, ಚೆನ್ನಬಸವಣ್ಣಗೆ ಉತ್ತಮವಾದ ಹೆಂಣುಗಳಂ ಪರಿ ವೀರಬುಸವಂತ

* ಇದೇ ಒಂದು ಪುಸ್ತಕದೊಳಗೆ ಆತ್ಮದ ಸಂಪೂರ್ಣ ಶಕ್ತಿ ಇರುತ್ತದೆ. ಮತ್ತ ಇದೇ ಒಂದು ಪುಸ್ತಕದೊಳಗೆ ಸಮಸ್ತ ಬ್ರಹ್ಮಾಂಡ ಕಾಣುತ್ತದೆ. ಇದು ಎಲ್ಲ ಶಕ್ತಿಗಳಿಂದ ಬಂದು ಆಗಿರುತ್ತದೆ. ಇತರರೊರಗೆಲ್ಲ ನಾಶ ಹೊಮ್ಮವದು. ಇದೇ ಪುಸಿಸತಕ್ಕುಂಥ ವಸ್ತು ಉಂಟು. ಈ ಮಾತುಗಳನ್ನು ನಾನು ಅನ್ನಸದಿಲ್ಲ, ಕುರಾನವಾದರೂ ಇದೇ ಉಚ್ಚರಿಸುತ್ತದೆ. ಅದು ಹ್ಯಾಗಂದರೆ, " ಲಾರಿಕ ಬಿಮ್ ವಲಾ ಗಾಬಿಬಿಂ ಇಲ್ಲಾ ಫೀಕಿತಾಬಿಮ್ ಮುಬೀನ. " ಈ ಸೃಷ್ಟಿರೂಪ ಪುಸ್ತಕವು ಪರಿಪೂರ್ಣವಾಗಿ ಎಲ್ಲ ಪರುಷಪ್ರಿಯಾತುಗಳನ್ನು ಇಟ್ಟಿರುತ್ತಾತೆ. " ಇನ್ ಹು ಕುರಾನುನ್ ಕರೀಮುನ್ ಫೀ ಕಿತಾಬಿಮ್ ಮಕ್ನೂನ " ಈ ಕುರಾನು ಎಲ್ಲ ಶಕ್ತಿಗಳಿಗೆ ಬಿಂದು ಆಗಿರುತ್ತದೆ. " ಕುರಾನುನ್ ಕರೀಮುನ್ ಮಜೀದುನ್ ಬಿನ್ಮಕರ. " ಕುರಾನ ಮರ್ಯಾದೆಯುಳ್ಳ ಮಾನವಾನವುಳ್ಳ ಪೂಜಿಸತಕ್ಕುಂಥಾದ್ದಿರುತ್ತದೆ.

**ಚನ್ನ ಬಸವರಿಗೆ** ಮದುವಿಯ ಮಾಡುವರು. (ಪಾಲ ಕುರಕಿ ಸೋಮರಾಧ್ಯರ ಪೃಷ್ಟ ಪುಟ ೧೭) ಈ ಆಧಾರದಿಂದ ಸ್ಪಷ್ಟವಾಗುವದೇನಂದರೆ ಈ ವೀರಶೈವ ಮತವು ಸಧ್ಯಕ್ಕೆ ಏನು ಕಾಣ ಬರುತ್ತದೆ. ಇದರ ರೂಪ ಬದಲಾಯಿಸಿ ಮಿಶ್ರವೀರ ಶೈವವಾಗುತ್ತದೆ.. ಒಂದು ಕಾಲಕ್ಕೆ ನೂರೊಂದು ಕುಲ, ಹಮ್ಮು ರೂಪ ಬದಲಾಯಿಸಿ ವೀರಶೈವ ವಾಗಿತ್ತು. ಈಗ್ಗೆ (ಅಂದರೆ) ಚನ್ನ ಬವೇಶ್ವರರ ಕಾಲಕ್ಕೆ ಇದರ ರೂಪ ಬದಲಾಯಿಸಬೇಕಾಗಿದೆ. ಮಿಶ್ರ ಅದಕ್ಕೆ ವೀರಶೈವವೆಂದು ಹೆಸರು ಇಡುತ್ತಾರೆ. ಈ ಪ್ರಕಾರ ೧೧ ನೇ ಆಧಾರವಲ್ಲಿ ಸ್ಪಷ್ಟ ತಿಳಿಯುವಂತೆ ಬರೆದದೆ. ಈ ಸಿಲಾಮಯ ಲಿಂಗ ಹೋಗಿ ಮತ್ತೊಂದು ಲಿಂಗ ಬರುತ್ತದೆ. ಆ ಲಿಂಗದ ಹೆಸರು ಕುರಾನ ವಿಠವದು. ಇದೊಳಗೆ ಜಗತ್ತಿನಲ್ಲಿ ಯಾವತ್ತೂ ಮತಗಳು ಮಿಶ್ರಣವಾಗಿ (ಒಂದಾಗಿ ಕಾಣಬರುತ್ತವೆ. ಈ ಪ್ರಕಾರ ಮಿಶ್ರ ವೀರಶೈವ ಇರತಕ್ಕದ್ದು. ಅದು ಹೇಗಂದರೆ ಆಯಾ ಮತಗಳು ಅನುತದೊಳಗೆಸಮಪೀಠಿಕೆಯಾಗಿರಬೇಕು. ಮಿಶ್ರವೀರಶೈವವೆಂದು ಅನ್ನುತಾರೆ. ಇಂಥಾ ಮತವನ್ನು ಜಗತ್ತಿನಲ್ಲಿ ಹುಡುಕುತ್ತ ಹೋದರೆ, ಇಸ್ಲಾಮು ದ ಹೊರ್ತು ಯಾವದೂ ಕಾಣಬರುವದಿಲ್ಲ. ಆದರೆ ಮಿಶ್ರ ವೀರಶೈವ ಆಥವಾ ಇ ಸ್ಲಾಮು ಪ್ರಚಾರಮಾಡುವವರು ಮುಸಲ್ಮಾನರಿರಬೇಕು. ಅದಕಾರಣ ಮಿಶ್ರವೀ ರಶೈವ ಪ್ರಚಾರಮಾಡುವವರು **ಚನ್ನ ಬಸವೇಶ್ವರರು** ಇರುತ್ತಾರೆ. ಅಂದರೆ ಇ ಸ್ಲಾಮು ಪ್ರಚಾರ ಮಾಡುವವರು **ಚನ್ನ ಬಸವೇಶ್ವರರು** ಇರುವದರಿಂದ ಇವರು ಮುಸಲ್ಮಾನರಿದ್ದಾರೆ.

## ೧೪ ನೇ ಆಧಾರ

**ಚನ್ನಬಸವಣ್ಣ ವೀರಬಸವಂತರ** ಮದುವಿಯ ಮಹೋತ್ಸವವನ್ನು ಹೆಳಲಸಾಧ್ಯವು. ಕರ್ಮಕಲಿಯ ಕಡೆಗೆಳಿಸಿ ಧರ್ಮಕಲಿಯ ಸ್ಥಾಪಿಸಿ, ಮುಂದೆ ಕಾರಣದ ಕರ್ಮವಿಧಿಗಳನ್ನೆಲ್ಲ ಮುರಿಯುವರು. ಅವು ಯಾವವೆಂದರೆ, ಹಗರಣದ ಹಬ್ಬಗಳು ಸಾರಣಿ ಅತಿ ವಿಚಿತ್ರ ರೂಪವು ತೇರುಗಳು ಕಾರಣದ ಬಾಲೆ ಸ್ಥಾವರಾದಿ ದೇವರು (ಪಾಲಕುರಕಿಯ ಸೋಮರಾಧ್ಯರು ಪೃಷ್ಟ ಪುಟ ೧೭)

ಈ ಆಧಾರದೊಳಗೆ **ಚನ್ನ ಬಸವೇಶ್ವರರು** ತೋರಿಶಿದ ಕರ್ತವ್ಯಕರ್ಮಗಳ ಸ್ಪಷ್ಟವಾಗುವದೇನಂದರೆ, **ಚನ್ನ ಬಸವೇಶ್ವರರು** ಮುಸಲ್ಮಾನರಿದ್ದಾರೆ. ಅದು ಹ್ಯಾಗಂದರೆ ಇವರು ಹಗರಣದ ಹಬ್ಬಗಳನ್ನು ಮುರಿಯುವರು. ಜ್ಞಾನಿಗಳಿರಾ ಆಕಾಶ ಭೂಕಾಂತಿ ಈ ಮಾತಿಗೆ ಸಾಕ್ಷಿ ಉಂಟು .ಈ ಭೂಮಿಯಲ್ಲಿ ಮುಸಲ್ಮಾನ ರ ಹೊರ್ತು ಯಾವ ಯಾವ ಮತದವರು ಸ್ಥಾವರಾದ ದೇವರ ಮೂರ್ತಿಗಳನ್ನು

ನುರಿಮುರಿದ್ದು ಕಲ್ಯಾಣ ಬಸವೇಶ್ವರರಾಜರೂ ಮಲ್ಲಾ ಮೊಕ್ಕಾಗಿಗೆ ಕ್ಷೌಗೆ ಹಾಗೂ ಪರಿವಾರದ ದೇವರನ್ನು ( ಲಿಂಗವನ್ನು ) ಅಲ್ಲಲ್ಲಿ ಪ್ರತಿಷ್ಠಾಪನೆಗಳೊಳಗೆ ಸ್ಥಾಪಿಸಿ ಪೂಜಿಸಿದರು. ಅವರ ಅನ್ನಪಾನದ ಋಣಕ್ಕೆ ಮುರಿಯುವವರು ಯಾರಿದ್ದಾರೆ. ಇವರು ಮುಸಲ್ಮಾನರಾದ್ದಾರೆ. ಅವರೆ ಬಸವೇಶ್ವರರು ಲಿಂಗ ಮುರಿಯುವವರಿಗೆ ಕಾರಣ ಇವರು ಮುಸಲ್ಮಾನರಾಗ್ಯಾರೆ.

— ೧೫ ನೇ ಅಧ್ಯಾಯ —

ಕರ್ಮವ ಮೆಟ್ಟೀತು ಕರೆ ಮೊದಲಾಯಿತು॥ ಧರ್ಮವ ಬಿಡಬೇಡಿರಣ್ಣಾ ನಿಮ್ಮ ವರ್ಮವ ಕೇಳುವ ವಸ್ತಾದ ಬರತಾರೆ ನಿರಮಾಕಾರಜೇಕಣ್ಣಾ ( ಹರಳಯ್ಯನವಚನವ )

ಮೇಲೆ ಹೇಳಿದ ವಚನದಿಂದಲಾದರೂ ಸ್ಪಷ್ಟವಾಗುವದೇನೆಂದರೆ ಬಸವೇಶ್ವರರು ಮುಸಲ್ಮಾನರಿದ್ದಾರೆ. ಅದು ಹ್ಯಾಗೆಂದರೆ ಕಲ್ಯಾಣದಲ್ಲಿ ಹರಳಯ್ಯನವರು ಬಸವಬಸವೇಶ್ವರರಿಗೆ ವುಸ್ತಾದಯೆಂಬ ಕರೆಯುತ್ತಾರೆ. ವುಸ್ತಾದ ಈ ಶಬ್ದವು ಮುಸಲ್ಮಾನರ ಹೊರತು ಯಾರಿಗಾದರೂ ಅಲಾಗೂ ಆಗುವದಿಲ್ಲ. ಒಬ್ಬ ಏಂಥೂ ಗೃಹಸ್ಥನು ಬಸವೇಶ್ವರರ ಇವನಿಗೆ ವುಸ್ತಾದಿ ಎಂದು ಒಂದೆ ಮೆಯ್ದಿ ಕರೆದದ್ದು ಕಂಡುಬರುತ್ತದೆ. ಆದ ಕಾರಣ ಬಸವೇಶ್ವರರು ಮುಸಲ್ಮಾನರಾಗ್ಯಾರೆ.

— ೧೬ ನೇ ಅಧ್ಯಾಯ —

ಅಖಿತಾವ ಶಂಭುವು ಅಖಿಲ ಬ್ರಹ್ಮಾಂಡವ॥ ಸಕಳಕ್ಕೆ ಜಂಭ ನಿಂವಿನಿಯ ಸಖವಿಲ್ಲ ನುಂಡೆ ನಿಜಾರಿಸಿ ನೋಡಿರೋ॥ ಲಿಖವ ಕೊಳ್ಳಿ ಬಂದ ನಿಮಗೇ ( ಕೋಡಗೇನಲ್ಲು ಬಸಪ್ಪನ ವಚನ ಪುಟ ೬೧ )

ಈ ಆಧಾರದಿಂದ ಸ್ಪಷ್ಟವಾಗುವದೇನೆಂದರೆ ೧೫ ಆಧಾರದವಳಗೆ ಕನ್ನಡ ಬ್ರಹ್ಮಯ್ಯಾ ಮೊದಲಾದ ಪ್ರಕಾರ ಕೋಡಗೇನಲ್ಲು ಬಸಪ್ಪನವರು ಶಂಕರಾನಿಗೆ ಲಿಖವು ಎಂದು ಹೆಸರು ಇಟ್ಟಿದ್ದಾರೆ. ಇವರು ಇ[illegible] ಬ್ರಾಹ್ಮಣರಾಗಿ ವಿಭೂತಿ ಬಸ್ಮಧಾರಣೆ ಮಾಡುವದು ಬ್ರಾಹ್ಮಣರಲ್ಲಿರುವ ಒಂದು [illegible] ಆಚಾರ ಇದೇ ಒಂದೇ ಪುಸ್ತಕದೊಳಗೆ ಕಾಣಬರುತ್ತದೆ. ಇದರ ಹೊರತು ಜಗತ್ತಿನಲ್ಲಿ ಎರಡನೇ

ಪುಸ್ತಕ ತೋರಿಸಬೇಕು. ಜಗತ್ತಿಗೆ ಜ್ಯೋತಿಷ್ಯ ಇದೇ ಒಂದು ಪುಸ್ತಕವು ಮಾನ್ಯ ನ ಜಾತಿಯ ಸೂಕ್ಷ್ಮಾಧೀಯ ಮತ್ತು ಸ್ಥೂಲಭೀಯ ಗೋಸ್ಕರ ಸಂಪೂರ್ಣಕಾಯ ದೇ ಕಾನೂನ ತೋರಿಸುತ್ತದೆ. ಮನುಷ್ಯ ಬ್ರಹ್ಮಾಂಡದ ಮುದ್ರೆ ಇರುವ ಕಾರಣ ಕೊಡಿಕಲ್ಲು ಬಸಪ್ಪನವರು ಇದರ ಸಲುವಾಗಿ ಕೊಡತಕ್ಕ ವಹಿಗೆ ಬ್ರಹ್ಮಾಂಡ ಲಿಖಿಯಂದು ಹೆಸರು ಇಡುತ್ತಾರೆ. ಆ ಬ್ರಹ್ಮಾಂಡದ ಲೇಖನ ಕುರಾನದ ಹೊರ್ತು ಯಾವದೂ ಇಲ್ಲಾ- ಧರ್ಮ ಕಲಿಯೊಳಗೆ ಲಿಂಗಾಯತರ ಕೈಯಲ್ಲಿ ಕುರಾನ ಕೊಡುವವನು **ಚನ್ನ ಬಸವೇಶ್ವರರು** ಯಾತ ಕುಲಪರಿಕಜೇಕು? ಕುರಾನ ಕೊಡುವವರು ಮುಸಲ್ಮಾನರಿರಬೇಕು. ಅಂದರೆ **ಚನ್ನ ಬಸವೇಶ್ವರರು** ಕುರಾನಪ್ರಚಾರಮಾಡುವವರಿರುವದರಿಂದ ಇವರು ಮುಸಲ್ಮಾನರಿದ್ದಾರೆ.

ಮೇಲೆ ಹೇಳಿದ (೧೬) ಆಧಾರಗಳ ಸಾರಾಂತವೇನಂದರೆ **ಚನ್ನ ಬಸವೇಶ್ವರರು** ಮುಸಲ್ಮಾನರಿದ್ದಾರೆ. ಇದು ಒಂದು ಆಶ್ಚರ್ಯಡಮಾತಾಗಿದೆ. ಅದು ಯಾವದಂದರೆ ಮಂದಿ ಯಾವತ್ತಾದರೂ **ಚನ್ನ ಬಸವೇಶ್ವರರ** ಹೆಸರು ಮುಸಲಮಾನರ ಹೆಸರೇ ಕೇಳುತ್ತಾ ಬರುತ್ತಾರೆ. ಮತ್ತು ಇವರಿಗೆ ಹಿಂದೂ ಎಂದು ತಿಳಿಯುತ್ತಾರೆ. ಇವತ್ತಿನತನಕ ನನಗೆ ತಿಳದಲ್ಲಿ ಆಥವಾ ಒಬ್ಬ ಹಿಂದೂ ದೀಂದಾರ ಆಗುತ್ತಾನೆ. (ವ) ಒಬ್ಬ ಹಿಂದೂಗೆ ಮುತ್ತಾ ಅನ್ನುತ್ತಾರೆ? (ವ) ವ್ಯಸ್ತಾದ (ವ) ಬಾಡಶಹ (ವ) ಮೂರ್ತಿ ಬೆಳಗದಹಳು (ವ) ಇಷ್ಟಲಿಂಗ ಮುರಿಯುವವನು ಆಷ್ಟಹಿಹುದೋ? ಈ ವರಿಗೆ ನಾನು ಎಷ್ಟೋ ಹಿಂದೂ ಅವತಾರಿಕವ ಚರಿತ್ರೆಗಳಿಂದಿದ್ದೇನೆ ಆದರೆ ಒಬ್ಬ ಅವತಾರಿಕನಾಗಾದರೂ ಮುಸಲ್ಮಾನೀ ಹೆಸರು ಇಟ್ಟದ್ದು ಕಂಡುಬರಲಿಲ್ಲ. **ಶ್ರೀ ರಾಮುಜಿ, ಶ್ರೀ ಕೃಷ್ಣಜಿ, ಶ್ರೀ ಗೌತಮುಜಿ, ಇವರೆಲ್ಲರೂ ಹಿಂದೂ ಅವತಾರಿಕರಾಗ್ಯಾರೆ.** ಆದರೆ ಇವರೊಳಗೆ ಒಬ್ಬರಾದರೂ ಮುಸಲ್ಮಾನರಿಲ್ಲ.

ಜ್ಞಾನಿಗಳಿರಾ! ನೀವು ಸ್ವಲ್ಪು ವಿಚಾರ ಮಾಡಿ ನೋಡಿದರೆ ಸ್ಪಷ್ಟವಾಗುವ ಜೀನಂದರೆ ತಿವಲೋಕದೊಳಗೆ ಈ ಮಾತು ತರಾವು ಆಗಿರುತ್ತದೆ. ಅದು ಯಾರ್ಥ ದೆಂದರೆ **ಮಹಮ್ಮದ ಪೈಗಂಬರರು** ಜಗತ್ಪಾಲಕರಾಗಿ ಅವತರಿಸುವದಕ್ಕೋಸರ ನೇಮಿಸಿದ ಅವತಾರಿಕರೆಲ್ಲ ಅವರ ಭಕ್ತರೊಳಗೆ ಹುಟ್ಟಬೇಕು.

ಈ ಮಾತಿಗೆ ತಿಳಿಸುವಂಥ ಈದಾಹರಣೆ ಮಾನವ ಜಾತಿ ಉತ್ಪನ್ನವಾದ ಹೊಲೆ ಯಾವತ್ತೂ ಜೀವ ಜಾತಿಗಳು ತಿರುಗಿ ಮರುಗಿ ಹುಟ್ಟುವ ಬದಲಾಗಿ; ಎರಡನೇ ಹೊಸದೊಂದು ಪ್ರಾಣಿ ಹುಟ್ಟವಡಿಲ್ಲ. **ಹುತ್ತು ಎತ್ತಾ ಹುಟ್ಟುವ ಪ್ರಾಣಿ**

ಗಳು ನಾನವ ಜಾತಿಯ ಅಧಿಕಾರದೊಳಗೇ ಹುಟ್ಟುತ್ತವೆ. ಇದೇ ಪ್ರಕಾರ **ಮಹಮ್ಮದ ಪೈಗಂಬರರ** ಭಕ್ತರಾಗಿಯೇ ಹುಟ್ಟುತ್ತಾರೆ. ಈ ಮೂರು ಲೋಕದ ಅಂಧಕಾರಿಗೆ ತಿಳಿಯೋದಿಲ್ಲ.

ಲಿಂಗಾಯತ ಬಾಂಧವರೇ! ಮೂಢ ಮರಣ ಹೊಂದುವದು ತಕ್ಕದ್ದಲ್ಲ. ಈಗ್ಗೆ ಮುಂದೆ **ಚನ್ನ ಬಸವೇಶ್ವರರ** ಹಾದಿ ನೋಡಲಿಕ್ಕೆ ಸ್ಥಳವಿಲ್ಲ. ನಾನು ಪರಮಾತ್ಮನ ಸಾಕ್ಷಿಯಾಗಿ ಹೇಳುವದೇನಂದರೆ ನಿಮ್ಮ ದೇಹಕ್ಕೆ ಬಾಹ್ಯ **ಚನ್ನ ಬಸವೇಶ್ವರ** ನಾನೇ ಇದ್ದೇನೆ. ಪಾಲೀ ಭಾಂಡಾರವ ಕರುಹು ಆವ ಮೇಲೆ ನಂಬು ಪನವು ಕುರಿಗಳು, ಲಿಂಗಾಯತ ಬಾಂಧವರೇ! ನಾನೇ ನಿಮ್ಮ ಲಿಂಗ ಇರುತ್ತೇನೆ. ಪರಮಾತ್ಮನು ಒಂದು ರಾತ್ರಿ ಓಂಕಾರದಿಂದ ಹೇಳಿನೇನಂದರೆ " **ಯಾಡಯಮ್ಮು ಕಜ್ಜಿಕ್ ರಮ್** ,, ಅಂತಾ ಇದರ ಅನ್ವಯ, ಎನ್ನೆ ಸಿದ್ದಿಕ್ಕೇ ನಿನ್ನ ಅಂಗ ಲಿಂಗಾಗಿರುತ್ತದೆ. ಬಾಂಧವರೇ! ನಿಮಗೆ ಮುಂದೆ ಅಲ್ಲಮರೇ ದೇವರು! **ನಬೀ ಸಾಹೇಬಬಸವೇಶ್ವರರೇ ಗುರು ಚನ್ನನೇ ಲಿಂಗ** ಅಂತಾ ಗುರುಲಿಂಗ ದೇವರಿಂದ ತಮಗೆ ಉದ್ಭವಿಸಿ ನನ್ನಿಂದ ಉಚ್ಚರಿಸಿದ್ದು ನಿಶ್ಚಲಲಿಂಗವು ಧರಿಸಿ, ಶಾವೆಲ್ಲರೂ ಮಿಶ್ರಿತ ವೀರಶೈವ ಆಫವಾ **ದೀನದಾರ** ಅನ್ನಿಸಿಕೊಂಡು ನೂರಾಒಂದು **ಕುಲಗಳನ್ನು** ತಮ್ಮೊಳಗೆ ಸಮಾವೇಶ ಮಾಡಿಕೊಂಡು ಮುಕ್ತಿಮಾರ್ಗವು ಹೊಂದಬೇಕು. ಅಡವತ್ತುಮೂರಿಂದ ಪುರಾತರು ಹೇಳಿದ ನನ್ನ ಕುರುಹುಗಳೊಳಗಿನ ಸ್ವಲ್ಪ ಕುರುಹುಗಳನ್ನು ಕೆಳಗೆ ಬರಿಯುತ್ತೇನೆ- ಇದರಿಂದಾವೂ ನಿಮ್ಮ ಕಂಣುಗಳು ತೆರದಾವು ಅವು ಯಾವವೆಂದರೆ

(೧) **ಅವನು ಗಾಂಜಿ ಹಿಜರಿಯಲ್ಲಿ ಒಂಭತ್ತು ತಿಂಗಳೊಳಗೆ ಹುಟ್ಟಬೇಕು. ( ರುದ್ರಗೋಪಾಲ )**

(೨) ಅವನು ಜನಸಿವ ಘಳಿಗೆಗೆ ಆಕಾಶದಿಂದ ಮಳೆ ಆರಂಭವಾಗಬೇಕು. ( ರುದ್ರ ಗೋಪಾಲ )

(೩) ಅವನು ದಕ್ಷಿಣ ಭಾಗದಲ್ಲಿ ಸೀತಾಫಲಹಣ್ಣು ಉತ್ಪನ್ನವಾಗುವಂಥ ಜಿಲ್ಲಾದೊಳಗೆ ಹುಟ್ಟಬೇಕು. ( ರುದ್ರಗೋಪಾಲ)

(೪ ) ಅವನಿಗೆ ಮೂವರು ಅಂಣಂದಿರು ಇದ್ದಾರೆ- ( ರುದ್ರಗೋಪಾಲ)

(೫) ಇವರಿಗೆ ಮೋಪ ಪರೀಕ್ಷೆಯಾಗಬೇಕು (ರುದ್ರಗೋಪಾಲ)

(೬) ಅವನು ಹನ್ನೊಂದು ಲಿಪಿಗಳು ಓದಬೇಕು- ( ಕೂಡಕಲ್ಲು ಬಸಪ್ಪನವರು )

(೭) **ಅವನು ದೇಶಸಂಚಾರಿಕ ಇರಬೇಕು.** (ಮಹಾನಪ್ಪಯ್ಯಾ)

(೯) ಅವನು ಬಡವರ ಮನೆಯಲ್ಲಿ ಜನಿಸಬೇಕು. ರುದ್ರ ಗೋಪಾಲ ಮತ್ತು ಮುವನಪ್ಪಯ್ಯಾ)

(೯) ಅವನು ತಾಯಿತಂದಿಗೆ ಏಳನೇ ಮಗನಾಗಿರಬೇಕು (ಮಹಾದೇವಿ)

(೧೦) ಅವನು ನಿಜಾಮ ಇಲಾಖೆಯಲ್ಲಿ ಹುಟ್ಟಬೇಕು (ಬ, ಲ ವೃತ್ತಿ)

(೧೧) ಅವನು ಮೋಡದ ಕುರುಹು ತೋರಿಸಬೇಕು (ಚಿಕ್ಕ ಚನ್ನ ಬಸವಂಣ ಮುವನಪ್ಪಯ್ಯಾ)

(೧೨) ಅವನ ಬೆನ್ನಮೇಲೆ ನಾಗರ ಹಾವಿನ ಮುಖವಿರಬೇಕು (ಬ ಲ ಅ)

(೧೩) ಅವನು ಯಾವತ್ತೂ ಕಾಲಕುಪ್ಪಸವನ್ನು ತೊಟ್ಟು ಇರಬೇಕು (ಮುವನಪ್ಪಯ್ಯಾ)

(೧೪) ಅವನು ಒಳ್ಳೇ ಶಿಪಾಯಿ ಇರಬೇಕು (ಮುವನಪ್ಪಯ್ಯಾ)

(೧೫) ಅವನು ಕಲಿಯುಗದ ೫೦೦೦ ಸಾವಿರದ ಅಂತ್ಯ ಕಾಲದಲ್ಲಿ ಹುಟ್ಟಿರುವಂಥ ಮಾಯಾವಿ ಯೋಗಿ ಇರಬೇಕು (ರುದ್ರಮುನಿ)

(೧೬) ಅವನು ತ್ರಿಕಾಲಜ್ಞಾನಿ ಇರಬೇಕು (ರುದ್ರಗೋಪಾಲ)

(೧೭) ಅವನು ಕೆಲವು ಭಾಷೆಯೊಳಗೆ ಮಾತಾಡುವಂಥವನಿರಬೇಕು (ರುದ್ರ ಗೋಪಾಲ)

(೧೮) ಅವನು ಸನ್ಯಾಸಿ ಇರಬೇಕು (ರುದ್ರಗೋಪಾಲ)

(೧೯) ಅವನ ಹೆಗಲ ಮೇಲೆ ಕರೇ ಕಂಬಳಿ ಇರಬೇಕು (ರುದ್ರಮುನಿ)

(೨೦) ಅವನ ಕೈಯ್ಯಲ್ಲಿ ನಾಗಬೆತ್ತ ವಿರಬೇಕು (ರುದ್ರಮುನಿ)

(೨೧) ಅವನು ೧೮೩೬ ಶಾಲಿವಾಹನ ಶಕೆಯಲ್ಲಿ ಕರ್ನಾಟಕ ದೇಶಕ್ಕೆ ಬರಬೇಕು. (ಅಖಂಡ ಮುನಿ)

(೨೨) ಅವನು ಕರ್ನಾಟಕಕ್ಕೆ ಬರುವ ಕಾಲಕ್ಕೆ ಬಾಲಬ್ರಹ್ಮಚಾರಿ ಇರಬೇಕು (ಕೊಡೇಕಲ್ಲು)

(೨೩) ಅವನು ಕರ್ನಾಟಕದ ಅಳಿಯನಾಗಬೇಕು. (ಮುವನಪ್ಪಯ್ಯಾ)

(೨೪) ಅವನು ಕರ್ನಾಟಕ ದೇಶದೊಳಗೆ ಹೊಸ ಮಾರ್ಗವನ್ನು ತರಬೇಕು. (ಕೊಡೇಕಲ್ಲು)

(೨೫) ಅವನು ಮಿಸ್ರ್‌ದ (ದೀನ್ ದಾರದ) ಭಕ್ತಿಯನ್ನು ತೋರಿಸಬೇಕು. (ಕೊಡೇಕಲ್ಲು)

(೨೬) ಅವನು ಬ್ರಹ್ಮಾಂಡದ ಲೇಖ (ಕುರ್ ಅನ್) ಕೈಯಲ್ಲಿ ಹಿಡಕೊಂಡು

ಬರಬೇಕು. (ಕೊಡೇಕಲ್ಲು)

(೩೭) ಅವನ ಕೈಯಲ್ಲಿ ಮಿಶ್ರಿತ ಲಿಂಗ (ಇಷ್ಟ ಲಿಂಗ) ಪಿಡಕೊಂಡು ಬರಬೇಕು. ಕೆನ್ನೂರಿ ಬ್ರಹ್ಮಯ್ಯಾ

(೩೮) ಅವರು ವಿಭೂತಿಯ ಬದಲಾಗಿ ಹೊಸ ಗಂಧವನ್ನು (ಗಂಧ) ತರುವದು. (ಕೊಡೇಕಲ್ಲು)

(೩೯) ಅವರು ನಿಮ್ಮಿಂದ ಪುಚಕಾನ್ನ ಪಡೆದು ಮಿಶ್ರಿತ ವೀರಶೈವ [illegible] ಕೆನ್ನೂರಿ ಬ್ರಹ್ಮಯ್ಯಾ

(೪೦) [illegible] ಕಾಣಬರಬೇಕು. (ಅಖಂಡ ಮುನಿ)

(೪೧) ಇವರ ಕೈಯಲ್ಲಿ ವೈಷಭಮುದ್ರಿ ಇರಬೇಕು. (ಮಲ್ಲಮುನಿ)

(೪೨) ಇವರ ಕೈಯಲ್ಲಿ ದಮರ ಮುದ್ರಿ ಇರಬೇಕು.

[illegible] ಎಲ್ಲಿ ಗುಣಗಳನ್ನು ಸಂಪಾದಿಸಿ [illegible] ಸಂದೇಹವಿಲ್ಲ. ಕಾರಣ ಇವರು [illegible] ಪಾತ್ರರಾಗಿರುವರು. ಇವರಿಗೆ ಆನಂದವನ್ನು ಕೊಂಡಾಡಬೇಕು. ಇವರಿಗೆ ಅಲಕ್ಷಿಸಿದವರಿಗೆ ಇಷ್ಟಲಿಂಗವೂ ಅಂಗಕ್ಕೆ ಅಂಟದಾಗಿ ಸಾಯುವುದು. ಇದರಿಂದ ಕಷ್ಟವಿಲ್ಲ.

ಹೀಗೆ ಬಸವಣ್ಣನವರ ಗಾಯನ ಕೇಳಿ ಜನರ ಮುಂದೆ ಜಗತ್ತಿನಲ್ಲಿ ಅವರು [illegible] ಕೆಲವು ಪ್ರಶ್ನೆಗಳನ್ನು ಕೇಳಿದರು. ಅವರ ಪ್ರಶ್ನೆಯು ಸ್ವಲ್ಪವಾಗಿ ಮೇಲಿನಂತೆ ಇದ್ದವು —

೧. [illegible] ಹೇಳಿರಿ ಎಂದು ಕೇಳಿದರು.

೨. [illegible] ಅನುಸರಿಸಬೇಕು ಎಂದು ಕೇಳಿದರು.

೩. [illegible] ಅನುಸರಿಸಿ ಅವರು [illegible] ಹೇಳಬೇಕು.

೪. [illegible] ಮಾಡಿದರು.

೫. [illegible] ಹೇಳು.

೬. [illegible] ಇವರನ್ನು ಮುಟ್ಟಿಸಿಕೊಂಡ

೭. [illegible] ಮಾಡಬೇಕು.

೮. ಕಾಯಿಕ ಮೋಕ್ಷವು ಲಿಂಗವ ಪೂಜೆಯವರು ಬಲಸ್ಥಂಭನ

ಅಗ್ನಿ ಸ್ಥಂಭನ ಮಾಡುವವರು ದೂರದೃಷ್ಟಿ ದೂರ ಶ್ರವಣ ಇಡುವವರು ಬರಬೇಕು.

೯. ಬಾಟಬಸ್ತಿಯನ್ನು ಮಾಡಿ ಗೂಟಕ್ಕೆ ತಂತಿಯನ್ನು ಇಕ್ಕಿ ನೇಟಾಗಿ ಬಂಡಿಯನ್ನು ನಡಿಸುವವರು ಬರಬೇಕು.

೧೦. ಯತ್ತು ಇಲ್ಲದೆ ಬಂಡಿ ಯತ್ತೊತ್ತಿ ಬಂಡಿಯ ನಡಿಸುವವರು ಬರಬೇಕು.

೧೧. ದುರ್ಮತಿನಾಮ ಸಂವತ್ಸರದಲ್ಲಿ ಪಶ್ಚಿಮ ದೇಶದೊಳಗೆ ಪ್ರಶಿದ್ಧವಾದ ಪಟ್ಟಣ (ಮುಂಬಯಿ) ಯಲ್ಲಿ ಪೌಷ್ಟಿ ಉಷ್ಣಜ್ವರ ಹುಟ್ಟಬೇಕು.

೧೨. ರುಧಿರೋದ್ಗಾರಿ ನಾಮಸಂವತ್ಸರದಲ್ಲಿ ಹನ್ನೆರಡು ಪರದಾರಿ (ಜಪಾನ) ದೊಳಗೆ ಬೆಂಕಿಯ ಮಳಿಯಾಗಬೇಕು.

೧೩. ೧೯೧೫ ಇಷ್ಟಿ ರೂಸ ಇಂಗ್ಲಂಡ ಮತ್ತು ತುರ್ಕಸ್ತಾನದೊಳಗೆ ಲಢಾಯ ಆಗಬೇಕು

೧೪. ೧೯೧೫ ಚನ್ನ ಬಸವೇಶ್ವರರು ಕರ್ನಾಟಕ ದೇಶಕ್ಕೆ ಸತ್ಯ ಬೀಜವನ್ನು ಪುಡಕುತ್ತ ಬರಬೇಕು.

೧೬. ೧೯೨೩ ಇಷ್ಟಿಯೊಳಗೆ ತುರ್ಕಸ್ತಾನ ಮತ್ತು ಇಂಗ್ಲಂಡದೊಳಗೆ ಲಢಾಯಿ ಆಗಬೇಕು.

(೧೬) ಹಿಂದುಸ್ಥಾನ ದೇಶದವರು ಸ್ವರಾಜ್ಯದ ಬಡದಾಟ ನಡಿಸಬೇಕು.

(೧೭) ೧೯೨೩ ದೊಡ್ಡ ಆಣೇಕಲ್ಲು ಬೀಳಬೇಕು.

(೧೮) ಭಾಂವಿಗಳ ನೀರುಬತ್ತಬೇಕು.

ಈ ಮಹತ್ವ ಕೆಲಸದ ಸಲುವಾಗಿ ನಾನು ಪರಮಾತ್ಮನ ಕಡಿಯಿಂದ ನಿಯಮಿಸಲ್ಪಟಿರುತ್ತೇನೆ ಆದ ಕಾರಣ ಈ ಕೆಲಸವನ್ನು ಕೊನೆಗಾಣಿಸುವದರ ಸಲುವಾಗಿ ಪರಮಾತ್ಮನು ನನಗೆ ಬಂದು ರಾತ್ರಿ ಓಂಕಾರದಿಂದ ದೀಕ್ಷೆಯ ಸಲುವಾಗಿ ಹೇಳಿರುತ್ತಾನೆ ಯೇನಂದರೆ " ಯದುಲ್ಲಾ ಘೌಕಾಏದಿಹಿಮ್ ಜಾಲಿಕ ಮುಲ್ಲಾಹ್ " ಅಂದರೆ ಪರಮಾತ್ಮನ ಹಸ್ತವು ಸರ್ವ ಜನರ ಹಸ್ತದ ಮೇಲೆ ಇರುತ್ತದೆ ಇದು ಪರಮಾತ್ಮನ ಅಪ್ಪಣೆ ಯುಂಟು. ಒಂದು ರಾತ್ರಿ ಮುಹಮ್ಮದ ಪೈಗಂಬರರು ನನ್ನ ಕನಸಿನೊಳಗೆ ಬಂದು ಸರ್ವ ಜನರಿಗೆ ಬೋಧಿಸುವ ಸಮಯದಲ್ಲಿ ನನ್ನ ಕಡೆಗೆ ಬೆರಳು ಮಾಡಿ ಸರ್ವ ಜನರಿಗೆ ತಾಕೀದ ಮಾಡಿದ್ದೇನಂದರೆ " ಜಜ್ಬಾಕ್ ಕೋಯಿ ಷಕ್ಸ ಅಪ್‌ಮೆ ಫನ್ಹಾ ನಹಿ ಹೋಗಾ ವ್ಹೋ ಮುಜತ್ ಕ್ ಪಹುಂಚನಹಿ ಸಕ್ತಾ ,, ಅಂದರೆ ಯಾವನರಿಗೂ. ಆಗಲಿ ಯಾವನು ಇ

ದರೊಳಗೆ ಐಕ್ಯ ವಾಗುವವಿಲ್ಲಾ. ಅವನು ನನ್ನೊಳಗೆ ಕೂಡಿಕೊಳ್ಳಲಾರನು. ಹೇ ಪರಮಾತ್ಮನಲ್ಲಿ ಭಕ್ತಿ ಯುಳ್ಳ ಜನರೇ ಮುಕ್ತಿಯ ಸಲುವಾಗಿ ದೀಕ್ಷೆ ತಕ್ಕೊಳ್ಳುವಪ ಕ್ಕೆಸಿದ್ದಾರಾಗಿರಿ.

ನಿಮ್ಮ
ಚನ್ನಬಸಪ್ಪಯ್ಯಾ ದೀನ್ ದಾರ್,
ಗದಗ

# ಜಾಹೀರ ನೋಟೀಸು

" ರಸಿಕ ರಂಜನಿ ಎಂಬ ಸಪ್ತಾಹಿಕ ಪತ್ರವು ,,

—:( ಪ್ರತಿವಾರ ತಪ್ಪದೇ ಪ್ರಕಟಿಸಲ್ಪಡುವದು ):—

ಕಳೆದ ೩೦ ವರ್ಷಗಳಿಂದ ಪೊರಡುತ್ತಿದ್ದ ರಸಿಕ ರಂಜನಿ ಯೆಂಬುವ ವರ್ತಮಾನ ಪತ್ರವು ಕಾರಣಾಂತರಗಳಿಂದ ಬಂದ ಮಾಡಲ್ಪಟ್ಟಿತ್ತು. ಆದರೆ ಕೆಲವು ಸಜ್ಜನೃಪಸ್ಥರ ಸಹಾಯದಿಂದ ಪುನಃ ಇದೇ ಅಗಷ್ಟ ತಿಂಗಳಿಂದ ನೇ ತಾರೀಖಿಗೆ ಜಾಲೂ ಮಾಡಲ್ಪಡುತ್ತದೆ. ಕಾರಣ ಕರ್ನಾಟಕ ಭಾಷಾಭಿಮಾನಿಗಳೆಲ್ಲರೂ ಉಪಕಾರಾಶ್ರಯವನ್ನು ಕೊಡಬೇಕೆಂದು ಪ್ರಾರ್ಥಿಸುವೆನು.

-( ವಾರ್ಷಿಕ ಚಂದಾ ವಿವರ )-

ಸ್ಥಳಿಕವರಿಗೆ. ೨—೪—೦

ಪರಸ್ಥಳದವರಿಗೆ. ೩ . ೪...೦

ತಾ|| ೧—೮—೩೪.
ಗದಗ

ನಮ್ಮ ವಿಳಾಸ—ಸಂಪಾದಕ ರಸಿಕ ರಂಜಿನಿ,
ಆಫೀಸ್ ಗದಗ.

RASIKRANJINI OFFICE GADAG.

6

# ದೀಂದಾರ್ ಬಸವಸಮಾಜದ ಪಂಚಶಾಂತಿಮಾರ್ಗಗಳು.

ಈ ಕಾಲದಲ್ಲಿ ಜಗತ್ತು ಕಲಿಯುಮಾಯೆಗೆ ಸಿಲುಕಿ ಅಜ್ಞಾನಾಂಧಕಾರದಲ್ಲಿ ಮುಳುಗಿರುತ್ತದೆ. ಎಲ್ಲಾ ಧರ್ಮಗಳವರೂ ಮನುಷ್ಯತ್ವದ ನಿಜ ಸ್ಥಿತಿಯನ್ನು ತಿಳಿಯದೆ ಸತ್ಪಥ ರಾಹಿತ್ಯದಿಂದ ಬಾಹ್ಯ ನಟನೆಗಳಿಗೆ ದುರಭಿಮಾನಿಗಳಾಗಿ, ಪರಸ್ಪರ ಕಲಹಗಳಲ್ಲಿ ಪ್ರವರ್ತಿಸಿ ಮನೋಶಾಂತತಾ ಭಂಗಕ್ಕೆ ಕಾರಣರಾಗಿರುವರು. ಪರಸ್ಪರ ಕಲಹಗಳಿಂದ ದುಃಖವೂ, ದುಃಖದಿಂದ ಮನೋಶಾಂತತಾ ಭಂಗವೂ, ಮನಸ್ಸಿನ ಶಾಂತತೆ ಇಲ್ಲದಿರುವಿಕೆಯಿಂದ ಮುಕ್ತಿಯಿಲ್ಲದಿರುವಿಕೆಯೂ ಮತ್ತು ಮುಕ್ತಿಯಿಲ್ಲದಿರುವಿಕೆಯಿಂದ ನರಕ ಪ್ರಾಪ್ತಿಯೂ ಉಂಟಾಗುವವು. ಈಗಿನ ಸ್ಥಿತಿಯು ಜನರನ್ನು ಎಲ್ಲಾ ವಿಧವಾದ ದುರಭಿಮಾನಗಳಿಗೀಡುಮಾಡಿ, ಅಸೂಯೆ, ದುಃಖ, ಕ್ಷಣಿಕ ಸಂತೋಷಗಳನ್ನು ಹುಟ್ಟಿಸಿ ಮುಕ್ತಿಯೆಂಬ ಕೈವಲ್ಯಪದವಿಯನ್ನು ಹೊಂದುವುದರಿಂದ ಎಲ್ಲರನ್ನೂ ದೂರಮಾಡಿರುತ್ತದೆ. ಅರಿಷಡ್ವರ್ಗಗಳು ಜನರ ಹೃದಯಗಳಲ್ಲಿ ಮನೆ ಮಾಡಿ, ಇವರಲ್ಲಿನ ಪರಿಚಯ ಜ್ಞಾನವನ್ನು ಹೋಗಲಾಡಿಸಿ ಜನರನ್ನು ಅಜ್ಞಾನಕ್ಕೀಡುಮಾಡಿರುತ್ತವೆ. ವಿವಿಧವಾದ ದುರಭಿಮಾನಗಳು ಜನರನ್ನು ನರಕಪ್ರಾಪ್ತರನ್ನಾಗಿ ಮಾಡುತ್ತಾ ಇವೆ. ಕೆಲವರನ್ನು ದೇಶಾಭಿಮಾನವೂ, ಕೆಲವರನ್ನು ಕುಲಾಭಿಮಾನವೂ, ಕೆಲವರನ್ನು ಮತಾಭಿಮಾನವೂ ಪೀಡಿಸುತ್ತಾ ಇವೆ. ಪ್ರಪಂಚದ ಸರ್ವ ಅವತಾರಿಗಳ ಮುಖಾಂತರ ಹೊರಪಟ್ಟಿರುವ ಧರ್ಮರಹಸ್ಯಗಳನ್ನು ತಿಳಿಯದೆ, ಭೇದಗಳನ್ನೆಣಿಸಿ, ತಮ್ಮ ತಮ್ಮ ಧರ್ಮಕ್ಕೂ ಮತ್ತು ತಮ್ಮ ತಮ್ಮ ಅವತಾರಿಗಳಿಗೂ ಅಭಿಮಾನಿಗಳಾಗಿ, ಒಬ್ಬರನ್ನೊಬ್ಬರು ನಿಂದಿಸಿ, ದುಃಖಾಸೂಯೆಗಳಿಗೆ ಗುರಿಯಾಗಿ ನಿಜಾನಂದವನ್ನು ಹೋಗಲಾಡಿಸಿಕೊಂಡು ಜನರು ನರಕದ ಹಾದಿಯನ್ನು ಹಿಡಿಯುತ್ತಿರುವರು.

ಈ ಶೋಚನೀಯವಾದ ಕಾಲದಲ್ಲಿ ಜನರನ್ನು ದುಃಖಾಸೂಯೆಗಳಿಂದ ದೂರನಾಡಿ ಶಾಂತತೆಯನ್ನುಂಟುಮಾಡಲೋಸುಗ ನಮ್ಮ ಸಮಾಜವು ಸರ್ವ ಮತಸಮ್ಮತವಾದ ಮತ್ತು ಅಭಿಮಾನರಹಿತವಾದ ಐದು ಸುಮಾರ್ಗಗಳನ್ನು ನಿಯಾಮಕಮಾಡಿರುತ್ತದೆ. ಈ ಐದು ಮಾರ್ಗಗಳಿಂದಲೇ ಎಲ್ಲಾ ಧರ್ಮದವರಲ್ಲಿಯೂ ಐಕಮತ್ಯವೂ ಮತ್ತು ಬಳಕೆಯೂ ಉಂಟಾಗುವವು. ಇವುಗಳಿಂದಲೇ ಸಾರ್ವಜನಿಕ ಶಾಂತತೆಯುಂಟಾಗಿ ಮನಶ್ಯಾಂತಿಯಿಂದ ಜನರು ಮುಕ್ತಿಯನ್ನು ಪಡೆಯುತ್ತಾರೆ. ಈ ಪಂಚಶಾಂತಿ ಮಾರ್ಗಗಳು ಮುಂದೆ ಬರೆಯಲ್ಪಟ್ಟಿವೆ; ಅವು ಯಾವುವೆಂದರೆ:—

೧. ಪರಮಾತ್ಮನು ಒಬ್ಬನೇ ಇದ್ದಾನೆ. ನಿರಾಕಾರ, ನಿರಂಜನ, ನಿರ್ಗುಣ ಇತ್ಯಾದಿ ಸಹಸ್ರಾರು ನಾಮಗಳಿಂದ ಆಲಂಕರಿಸಿದ್ದಾನೆ.

೨. ಸರ್ವಧರ್ಮಗಳ ಅವತಾರಿಗಳನ್ನೂನಂಬಿ ಅವರಲ್ಲಿ ಭೇದವನ್ನು ಎಣಿಸಕೂಡದು. ಅವರೆಲ್ಲರೂ ನಮ್ಮ ಅವತಾರಿಗಳೆಂದು ನಂಬಿ ನಡಿಯುವದು.

೩. ಸರ್ವಧರ್ಮಗಳ ದೇವೋಕ್ತ ಗ್ರಂಥಗಳನ್ನೂ ಸಮದೃಷ್ಟಿಯಿಂದ ನಂಬಿ ಅವುಗಳ ಆಜ್ಞೆಯಪ್ರಕಾರ ನಡಿಯಬೇಕು.

೪. ಸರ್ವಧರ್ಮದವರೂ ಪರಮಾತ್ಮನ ಪೂಜಾ ವಿಧಾನಗಳನ್ನು ಒಂದಾಗಿ ಸಮಾವೇಶಗೊಳಿಸಿ ಆತ್ಮನ ಪೂಜೆಯನ್ನು ಮಾಡಬೇಕು.

೫. ಜಾತಿಸೂತಕ, ಜನನಸೂತಕ, ಪ್ರೇತಸೂತಕ ನಿತ್ಯಸೂತಕ, ಉಚ್ಛಿಷ್ಟಸೂತಕವೆ, ಮುಂತಾದ ಮಹಾಸೂತಕಗಳನ್ನು ಬಿಡಬೇಕು.

ಮೇಲಿನ ಪಂಚಶಾಂತಿ ಮಾರ್ಗಗಳಿಂದಲೆ ಸರ್ವಮತಗಳ ಐಕಮತ್ಯ ಉಂಟಾಗಿ ಶಾಂತಿಯು ನೆಲೆಗೊಳ್ಳುವುದು. ಇವುಗಳ ವಿಚಾರವು ಮುಂದೆ ಪ್ರತ್ಯೇಕ ಪ್ರತ್ಯೇಕವಾಗಿ ಸಾಧನಗಳೊಂದಿಗೆ ವಿವರಿಸಲ್ಪಡುವುದು.

---

## ಪ್ರಥಮಶಾಂತಿ ಮಾರ್ಗವು ಮತ್ತು ಅಪರ ವಿವರವು.

ಪರಮಾತ್ಮನು, ನಿರ್ಗುಣ, ನಿರಾಕಾರ, ನಿರಂಜನನಿದ್ದಾನೆಂದರೇನು? ಆತನು ಒಬ್ಬನೇ ಇದ್ದಾನೆ. ಆತನಿಗೆ ತಂಡೆ ತಾಯಿಗಳು, ಹೆಂಡಿರು ಮಕ್ಕಳು ಮತ್ತು ಬಂಧುಮಿತ್ರರು ಯಾರೂ ಇಲ್ಲ. ಆತನು ಸರ್ವಮಯನು, ಸರ್ವ

ವ್ಯಾಪಿಯು ಮತ್ತು ಸರ್ವಾಂತರ್ಯಾಮಿಯು. ಆತನು ಪರಿಶುದ್ಧನು ಮತ್ತು ಮಂಗಳಸ್ವರೂಪನು. ಆತನು ಅಗೋಚರನು ಮತ್ತು ಪಂಚೇಂದ್ರಿಯಗಳಿಗೆ ಅತೀತನು. ಆತನೇ ಆದಿ ಮತ್ತು ಅಂತ್ಯವಿಲ್ಲದ ಅನಂತನು.

ಆದರೆ ಜನರು ತಮ್ಮ ತಮ್ಮ ಕಲ್ಪನೆಗಳಂತೆ ವಿಗ್ರಹಗಳನ್ನು ಕಟ್ಟಿದು ಕೊಂಡು ಪೂಜಿಸಲುಪಕ್ರಮಿಸಿರುತ್ತಾರೆ. ಆತನ ಜ್ಞಾನ ಧ್ಯಾನಕ್ಕೆ ಆಕಾರವೇ ಬೇಕಾಗಿಲ್ಲ; ಆದರೂ ಮೂರ್ಖರು ಮೂರ್ತಿಗಳನ್ನು ಬಿಡುವಹಾಗಿಲ್ಲ. ನಿರಾಕಾರನಾದ ಪರಮಾತ್ಮನ ಪೂಜೆಯನ್ನು ಯಾವನು ಮಾಡುತ್ತಾನೋ ಅವನು ಎಲ್ಲಾ ಮೂರ್ತಿಗಳ ಪೂಜೆಯನ್ನೂ ಮಾಡಿದಹಾಗೆಯೆ ಆಯಿತು. ಏಕೆಂದರೆ, ಸಮಸ್ತವೂ ಒಬ್ಬನಾದ ಆತ್ಮನಿಂದಲೇ ಹುಟ್ಟಿತು. ಯಾವನು ಆತ್ಮಪೂಜಕನಿದ್ದಾನೋ ಅವನು ಸರ್ವಮೂರ್ತಿಗಳ ಪೂಜೆಯನ್ನೂ ಮಾಡಿದನೆಂದೆ ಅಭಿಪ್ರಾಯವು.

ಇದರ ಸಲುವಾಗಿಯೇ ವೇದದಲ್ಲಿ ಹೇಳಲ್ಪಟ್ಟಿದೆ:—
ಆತ್ಮಸಂಭೂತದಾಕಾಶಂ, ಆಕಾಶಾದ್ವಾಯುಃ | ವಾಯುರ್ಗ್ನಿಃ
ಅಗ್ನೇರಾಪಃ ತದ್ಭವೆ ಪೃಥ್ವಿ | ಪೃಥಿವ್ಯಾಃ ಔಷುದಂ ಔಷುದಾ
ದನ್ನಂ ಅನ್ನಾದ್ರೇತಃ | ರೇತಸಃ ಪುರುಷೌಃ ||

ಇಂಥಾ ನಿರಾಕಾರಪೂಜೆಯಲ್ಲಿ ಆಕಾರಪೂಜೆಗಳೆಲ್ಲಾ ಐಕ್ಯವಾದವು. ಇದರಿಂದಲೇ ಜಗತ್ತಿನಲ್ಲಿ ಶಾಂತಿಯು. ಕಟದ ಗೊಂಬೆಯ ಆಟಗಳಿಂದಲೇ ಜಗತ್ತು ಶಾಂತತಭಂಗಕ್ಕೆ ಸಿಲ್ಕಿರುತ್ತದೆ. ತಮ್ಮ ಕೈಯಿಂದ ಮಾಡಲ್ಪಟ್ಟ ಗೊಂಬೆಗಳು ಏನುತಾನೇ ಮಾಡಬಲ್ಲವು. ಇವುಗಳಮೇಲಿನ ಅಭಿಮಾನವು ಜನರನ್ನು ನರಕಕ್ಕೆ ಪ್ರಾಪ್ತರನ್ನಾಗಿ ಮಾಡುತ್ತದೆ. ಇದರ ಸಲುವಾಗಿಯೇ ನಮ್ಮ ಸಮಾಜವು ಜಗತ್ತಿನ ಶಾಂತಿಗೋಸ್ಕರ ಸರ್ವ ಪೂಜಾಸಮಾನವಾದ ಆತ್ಮಪೂಜೆಯನ್ನು ನೆಲೆಗೊಳಿಸುತ್ತದೆ.

ಮತ್ತು ಕೆಲವರು ಪರಮಾತ್ಮನ ಪ್ರಕಾಶಭೇದವೆಂಬ ಹೆಪಕ್ಕೆ ಗುರಿಯಾಗಿ ಒಂದೊಂದು ಪ್ರಕಾಶಕ್ಕೆ ಅಭಿಮಾನಿಗಳಾಗಿ ಜಗತ್ತಿನ ಶಾಂತತಾಭಂಗಕ್ಕೆ ಕಾರಣರಾಗಿರುತ್ತಾರೆ. ಸ್ವಲ್ಪ ಪರಿಚಯ ಜ್ಞಾನದಿಂದ ನೋಡಿದರೆ ಸರ್ವಪ್ರಕಾಶಗಳೂ ಒಬ್ಬನಾದ ಪರಮಾತ್ಮನಿಗೆ ಇರುವುದರಿಂದ ಅವುಗಳಲ್ಲಿ

ವ್ಯತ್ಯಾಸವನ್ನೆಣಿಸುವುದು ಪಾಪವೆಂದು ಸುಲಭವಾಗಿ ವಿದಿತವಾಗುವುದು. ಪರಮಾತ್ಮ ಪ್ರಕಾಶಗಳು ಸ್ವರೂಪವನ್ನು ವಹಿಸುವುದರಲ್ಲಿ ಒಂದುವೇಳೆ ರಜೋಗುಣಪ್ರಾಧಾನದಿಂದಲೂ ಮತ್ತೊಂದುವೇಳೆ ತಮೋಗುಣ ಪ್ರಾಧಾನದಿಂದಲೂ, ಪುನಃ ಸಾತ್ವಿಕಗುಣದಿಂದಲೂ ಹೊರಬೀಳುವವು. ಪರಮಾತ್ಮನು ಡಿಸವರ್ಪ್ರಕಾಶ ಸರಿಸಮಾನನು. ಆತನ ಪ್ರಕಾಶಗಳಲ್ಲಿ ಭೇದವನ್ನೆಣಿಸುವುದು ಮಹಾ ಪಾಪವು. ನಾವು ಶೈವರು, ನಾವು ವೈಷ್ಣವರು ಎಂಬ ಪರಮಾತ್ಮ ಪ್ರಕಾಶ ಭೇದಕರು ತಮ್ಮ ನಿಜಸ್ಥಿತಿಯನ್ನು ತಿಳಿಯದವರು. ಜ್ಞಾನದಿಂದ ತಿಳಿದರೆ ಇದು ಮತ್ತೂ ಸುಲಭವಾಗುವುದು. ಬ್ರಹ್ಮ, ವಿಷ್ಣು, ಶಿವನೆಂಬ ತ್ರಿಪ್ರಕಾಶಗಳು ಬ್ರಹ್ಮಸ್ವರೂಪಿಯಾದ ಮನುಷ್ಯನಲ್ಲಿ ನೆಲಸಿ ಸರಿಸಮಾನವಾಗಿ ಜಗತ್ತಿಗೆ ಪ್ರಸನ್ನವಾಗುವವು. ಮತ್ತು ಈ ತ್ರಿಪ್ರಕಾಶಗಳು ಪ್ರತಿಯೊಬ್ಬರಲ್ಲಿಯೂ ಶಿಲೆಯಲ್ಲಿನ ಅಗ್ನಿಯಂತೆ ನೆಲೆಗೊಂಡಿರುವವು ಮತ್ತು ಬ್ರಹ್ಮಸಾನ್ನಿಧ್ಯವನ್ನು ಹೊಂದುತ್ತಲೇ ದೇದೀಪ್ಯಮಾನವಾಗಿ ಪ್ರಸನ್ನವಾಗುವವು ಮನುಷ್ಯನು ತ್ರಿಪ್ರಕಾಶಗಳನ್ನು ತನ್ನಲ್ಲಿ ಹೊಂದಿಯು, ನನ್ನಲ್ಲಿ ಶಿವನಿದ್ದಾನೆ; ನನ್ನಲ್ಲಿ ವಿಷ್ಣುವಿಲ್ಲ ಮತ್ತು ನನ್ನಲ್ಲಿ ವಿಷ್ಣುವಿದ್ದಾನೆ; ನನ್ನಲ್ಲಿ ಶಿವನಿಲ್ಲವೆಂದು ಹೇಳುವನು ಮತಿಹೀನನು. ಇಂಥಾ ಭೇದಗಳಿಂದ ನಂಬಿಕೆಯ ವ್ಯತ್ಯಾಸಗಳುಂಟಾಗಿ ಶಾಂತತೆಯ ಭಂಗಕ್ಕೆ ಆಸ್ಪದವಾಗಿದೆ. ಆದರೆ ಈ ಸಮಾಜವು ಇಂಥಾ ಭೇದಗಳಿಗೆ ಅವಕಾಶವನ್ನು ಕೊಡದೆ ಸರಿಸಮಾನವಾದ ಜ್ಞಾನವನ್ನು ಬೋಧಿಸಿ ದುಃಖವನ್ನು ದೂರಮಾಡಿ ಶಾಂತಿಯನ್ನು ಉಂಟುಮಾಡುತ್ತದೆ.

---

## ದ್ವಿತೀಯ ಶಾಂತಿಮಾರ್ಗವು ಮತ್ತು ಅದರ ವಿವರವು.

ಸರ್ವ ಧರ್ಮಸ್ಥಾಪಕರಾದ ಅವತಾರಿಗಳನ್ನು ಪರಮಾತ್ಮ ಪ್ರವಾದಿಗಳೆಂದು ಭಾವಿಸಿ ಅವರಲ್ಲಿ ಭೇದವನ್ನೆಣಿಸಬಾರದು. ಅವತಾರಿಗಳು ಪ್ರಪಂಚದ ಯಾವಭಾಗದಲ್ಲಿಯೇ ಅವತರಿಸಿದ್ದರೂ ಎಲ್ಲರನ್ನೂ ಒಂದೇ ಭಾವದಿಂದ ಗಣನೆ ಮಾಡಬೇಕು. ಯಾವರೀತಿಯಾಲ್ಲಿ ಪರಮಾತ್ಮನು ಒಬ್ಬನೇ ಇದ್ದು ಸರ್ವರ ಪ್ರಾರ್ಥನೆಗೂ ಅಧಿಕಾರಿಯಾಗಿದ್ದಾನೋ ಅದೇರೀತಿಯಲ್ಲಿ ಪರಮಾತ್ಮನಿಂದ ಕಳುಹಿಸಲ್ಪಟ್ಟ ಸರ್ವ ಅವತಾರಿಗಳೂ ನಮ್ಮ ನಮ್ಮನಂಬಿಕೆಗೆ ಭಾಗಿಗಳಾಗಿರಬೇಕು,

ದೇಶ, ಭಾಷೆ, ರೂಪದಲ್ಲಿ ಬೇರೆಯಾದರೂ ಪರಮಾತ್ಮನ ಅನುಗ್ರಹಕ್ಕೆ ಸರ್ವರೂ ಪಾತ್ರರು. ಸರ್ವ ಅವತಾರಿಗಳೂ ಬ್ರಹ್ಮಲೋಕದವರು. ಆಕಾಶದಲ್ಲಿನ ಸೂರ್ಯ ಚಂದ್ರನಕ್ಷತ್ರಗಳೆಲ್ಲವೂ ಯಾವರೀತಿ ಭೂಮಿಯಲ್ಲಿನ ಸರ್ವರಿಗೂ ಬೆಳಕನ್ನು ಕೊಟ್ಟು ಸ್ಥೂಲಸಂರಕ್ಷಣೆಗೆ ಭೇದವಿಲ್ಲದೆ ಇವೆಯೋ, ಹಾಗೆಯೇ ಬ್ರಹ್ಮ ಲೋಕದ ಸರ್ವ ಅವತಾರಿಗಳೂ ಸರ್ವರ ಆತ್ಮಗಳಿಗೂ ಪ್ರಕಾಶಮಾನವಾಗಿ ಪ್ರಜ್ವಲಿಸುತ್ತಿದ್ದಾರೆ. ಆದರೆ ಅಜ್ಞಾನಿಗಳು ಇದನ್ನರಿಯದೆ ಇವರು ನಮ್ಮವರು, ಅವರು ನಿನ್ನವರು ಎಂಬ ಭೇದಗಳನ್ನು ಕಲ್ಪಿಸಿ ಒಬ್ಬರ ಅವತಾರಿಗಳ ನ್ನೊಬ್ಬರು ನಿಂದಿಸುತ್ತಾ ದುಃಖಕ್ಕೆ ಕಾರಣರಾಗಿ ಶಾಂತತಾ ಭಂಗವನ್ನುಂಟು ಮಾಡಿಗುರುತ್ತಾರೆ. ಇದು ಹೇಗಾಯಿತೆಂದರೆ, ಸೂರ್ಯನು ನನ್ನವನು, ಚಂದ್ರನು ನಿನ್ನವನು, ಎಂಬ ಭ್ರಾಂತಿಯಿಂದ ಇವರ ಬೆಳಕು ಸರ್ವರಿಗೂ ಇದೆಯೆಂಬುದನ್ನು ತಮ್ಮ ಜ್ಞಾನಶೂನ್ಯತೆಯಿಂದ ತಿಳಿಯದವರ ಗತಿ ಹೇಗೋ ಅಷ್ಟು ಹಾಸ್ಯಾಸ್ಪದವಾಯಿತು. ಆದುದರಿಂದ ಎಲ್ಲರನ್ನೂ ಸರಿಸಮಾನವಾದ ಮನ್ನಣೆಯಿಂದ ನಂಬುವುದೇ ಜ್ಞಾನವು.

ಪ್ರಪಂಚದಲ್ಲಿ ಈಗ ಅನೇಕ ಪ್ರಸಿದ್ಧರಾದ ಅವತಾರಿಗಳು ತಮ್ಮ ಆತ್ಮ ಪ್ರಕಾಶದಿಂದ ಬೆಳಕನ್ನು ಬೀರುತ್ತಿರುವರು. ಶ್ರೀರಾಮ, ಶ್ರೀಕೃಷ್ಣ, ಏಸು ಕ್ರೈಸ್ತರು, ಮೂಸ ಪೈಗಂಬರರು, ಜರದಷ್ಟ್ರ್ ಮತ್ತು ಕನ್‌ಫ್ಯೂಷಸ್, ಗೌತಮಬುದ್ಧ, ಮತ್ತು ಇದಲ್ಲದೆ ಒಂದು ಲಕ್ಷದ ಎಂಭತ್ತುಸಾವಿರ ಅವತಾರಿ ಗಳು ಆಗಿರುವುದಾಗಿ ಮತಗ್ರಂಥಗಳಿಂದ ತಿಳಿಯಬಂದಿದೆ. ನಾವು ಇವರೆಲ್ಲ ರಲ್ಲಿಯೂ ಒಂದೇವಿಧವಾದ ನಂಬಿಕೆಯನ್ನೂ ಮರ್ಯಾದೆಯನ್ನೂ ಮತ್ತು ಭಕ್ತಿಯನ್ನೂ ತೋರಿಸಬೇಕು. ಇವುಗಳಲ್ಲಿ ಭೇದವನ್ನೆಣಿಸುವುದು ಶಾಂತತಾ ಭಂಗವು. ಆ ಮಹಾತ್ಮರ ರಹಸ್ಯತತ್ವಗಳಲ್ಲಿಯೂ ಭೇದವನ್ನೆಣಿಸದೆ ನಂಬ ಬೇಕು. ಇವುಗಳಲ್ಲಿ, ತತ್ವಮಸಿ, ಅಹಂಬ್ರಹ್ಮಸ್ಮಿ, "ಶಿವಾಯನಮಃ, ಲಾಯಿಲಾಹ ಇಲ್ಲಲ್ಲಾ ಈ ಸರೂಹುಲ್ಲಾ, ಲಾಯಿಲಾಹ ಇಲ್ಲಲ್ಲಾ ಮಹ ಮ್ಮದುರ್ ರಸೂಲುಲ್ಲಾ" ಮುಂತಾದ ಬೀಜಮಂತ್ರಗಳಲ್ಲಿ ತಾರತಮ್ಯವನ್ನು ಮಾಡದೆ ಸರ್ವವೂ ತಮ್ಮದೆಂದು ಭಾವಿಸಿ, ಅವುಗಳ ಅಧ್ಯಾಯನ ಅಧ್ಯಾಪನ ಗಳನ್ನು ಸರ್ವರಿಂದಲೂ ಮಾಡಿಸಿ ಜ್ಞಾನವನ್ನು ಬೋಧಿಸುವುದು ನಮ್ಮ ಕರ್ತವ್ಯವಾಗಿರುವುದು.

## ತೃತಿಯು ಶಾಂತಿಮಾರ್ಗವು ಮತ್ತು ಅದರ ವಿವರವು.

ಸರ್ವ ಧರ್ಮಗಳ ದೇವೋಕ್ತಗ್ರಂಥಗಳು ನಮ್ಮ ದೇವೋಕ್ತಗಂಥಗಳು. ವೇದಗಳಾದಿಯಾಗಿ ಅಂತ್ಯವಾದ ಖುರಾನಿನವರೆಗೂ ಸಮಸ್ತ ಓಂಕಾರ ಗ್ರಂಥ ಗಳೂ ಯಾವ ಅವತಾರಿಗಳಿಂದಲೇ ಬಂದಿರಲಿ, ಯಾವದೇಶದಲ್ಲಿಯೇ ಪ್ರಕಟವಾ ಗಿರಲಿ, ಯಾವಭಾಷೆಯಲ್ಲಿಯೇ ಇರಲಿ ಅವುಗಳೆಲ್ಲವೂ ದೈವಮತವನ್ನೇ ಬೋಧಿ ಸುತ್ತವೆ. ಅವುಗಳಲ್ಲಿ ಕೆಲವು ಮನುಷ್ಯನ ಹಸ್ತಗತವಾಗಿ ಬದಲಾವಣೆಗೆ ಸಿಲ್ಕಿ ತಮ್ಮ ನಿಜಸ್ಥಿತಿಯಲ್ಲಿ ವ್ಯತ್ಯಾಸವನ್ನು ಹೊಂದಿವೆಯೇ ಹೊರತು, ಅವುಗಳ ಪರಿಶುದ್ಧತೆಯು ಸ್ಥಿತಿಯಲ್ಲಿ ಸರ್ವ ತತ್ವಗಳೂ ಒಂದಾಗಿಯೇ ಕಂಡುಬಂದಿವೆ. ಆದುದರಿಂದ ಜ್ಞಾನಿಗಳು ಎಲ್ಲಾ ಗ್ರಂಥಗಳನ್ನೂ ಸಮದೃಷ್ಟಿಯಿಂದ ನೋಡು ತ್ತಾರೆ. ಇವುಗಳಲ್ಲಿನ ಅಭಿಮಾನವು ಪ್ರತ್ಯೇಕ ಪ್ರತ್ಯೇಕವಾದರೆ ಶಾಂತತಾ ಭಂಗವನ್ನುಂಟುಮಾಡುತ್ತದೆ. ಆದುದರಿಂದ ಈ ಸಮಾಜವು, ವೇದಗಳ ಲ್ಲಿಯೂ, ಇಂಜೀಲಿನಲ್ಲಿಯೂ, ಭಗವದ್ಗೀತೆಯಲ್ಲಿಯೂ ಶಿವಗೀತೆಯಲ್ಲಿಯೂ ಮತ್ತು ಇತರ ದೇವೋಕ್ತಗ್ರಂಥಗಳಲ್ಲಿಯೂ ಮತ್ತು ಬೀಜಪ್ರಾಯವಾದ ಖುರಾನಿನಲ್ಲಿಯೂ ಭೇಧವನ್ನೆಣಿಸದೆ ಇವುಗಳ ಅಧ್ಯಾಪನ ಮತ್ತು ಅಧ್ಯಯನ ಮಾಡುವಂತೆ ಜನರಿಗೆ ಬೋಧಿಸುತ್ತದೆ.

---

## ಚತುಶ್ಶಾಂತಿಮಾರ್ಗವು ಮತ್ತು ಅದರ ವಿವರವು.

ಪ್ರಪಂಚದ ಸರ್ವಧರ್ಮಗಳಲ್ಲಿನ ಪ್ರಾರ್ಥನಾ ವಿಧಾನಗಳನ್ನು ಒಂದಾಗಿ ಸಮಾವೇಶಗೊಳಿಸಿ ಪರಮಾತ್ಮ ಪ್ರಾರ್ಥನೆಯನ್ನು ನೆರೆವೇರಿಸುವುದೇ ನಮ್ಮ ಸಮಾಜದ ಮೊದಲನೆಯ ಕರ್ತವ್ಯವು. ಪ್ರಪಂಚದ ಬೇರೆಬೇರೆ ಧರ್ಮಗ ಳಲ್ಲಿ ದೈವಧ್ಯಾನಕ್ಕೋಸ್ಕರ ಪ್ರತ್ಯೇಕ ಪ್ರತ್ಯೇಕವಾದ ಆಸನಗಳುಂಟು. ಇವುಗಳಲ್ಲಿ ತಾರಕಂ, ದಂಡಂ, ಅರ್ಧಚಂದ್ರಕಂ, ಕುಂಡಲಾಕಾರಂ, ಬಿಂದು ಸಂಯುಕ್ತಂ, ಎಂಬ ಐದು ವಿಧಾನಗಳೇ ಪ್ರಧಾನವಾಗಿರುವವು. ಈ ವಿಧಾ ನಗಳೆಲ್ಲವೂ ನಿಜವಾದವು ಮತ್ತು ಈವಿಧಾನಗಳೇ ಪ್ರಕೃತಿಯಲ್ಲಿ ಜ್ಯೋತಿರ್ಮ ಯವಾಗಿರುವವು.

ಅದು ಹೇಗೆಂದರೆ, ಪ್ರಕೃತಿಯಲ್ಲಿ ಸರ್ವ ಗಿಡ ಮರಗಳು ತಾರಕ ಪ್ರಾರ್ಥನೆಯಲ್ಲಿಯೆ ನಿರತವಾಗಿವೆ. ಸರ್ವ ಬಳ್ಳಿಗಳೂ, ಹಾವು, ಚೇಳು ಮುಂತಾ

ತಾದ ಪ್ರಾಣಿಗಳೂ ದಂಡಪ್ರಾರ್ಥನೆಯಲ್ಲಿಯೇ ಮಗ್ನವಾಗಿವೆ ಸರ್ವ ಚತುಷ್ಪಾದ ಪ್ರಾಣಿಗಳೂ ಎಂದರೆ, ಪಶು, ಕತ್ತೆ, ಕುದುರೆ ಮುಂತಾದುವುಗಳು ಅರ್ಧಚಂದ್ರಕಂ ಎಂಬ ಪ್ರಾರ್ಥನೆಯಲ್ಲಿಯೇ ಇವೆ. ಸರ್ವ ಗುಡ್ಡಗಳೂ ಮತ್ತು ಮೆಳೆಗಳೂ ಕುಂಡಲ ಪ್ರಾರ್ಥನೆಯಲ್ಲಿಯೇ ನಿಂತಿರುತ್ತವೆ. ಮತ್ತು ಗಡ್ಡೆ, ಗೆಣಸುಗಳೇ ಮುಂತಾದುವುಗಳು ಬಿಂದುಸಂಯುಕ್ತಂ ಎಂಬ ಪ್ರಾರ್ಥನೆಯಲ್ಲಿಯೇ ಇವೆ. ಆದರೆ ಪಂಚ ಭೂತಗಳೂ ಇವೇ ಪ್ರಾರ್ಥನೆಯಲ್ಲಿವೆ.ಅ ಗ್ನಿಯ ಜೋತಿಯು ತಾರಕಪ್ರಾರ್ಥನೆಯಲ್ಲಿದೆ. ಅಪ್ಪು ದಂಡ ಪ್ರಾರ್ಥನೆ ಮಾಡುತ್ತದೆ. ವಾಯುವು ಅರ್ಧಚಂದ್ರಕಂ ಪ್ರಾರ್ಥನೆಯಲ್ಲಿದೆ. ಭೂಮಿಯು ಕುಂಡಲಾಕಾರ ಪ್ರಾರ್ಥನೆಯಲ್ಲಿದೆ ಮತ್ತು ಆಕಾಶವು ಸರ್ವ ವ್ಯಾಪಿಯಾಗಿ ಬಿಂದುಸಂಯುಕ್ತಪ್ರಾರ್ಥನೆಯಲ್ಲಿದೆ. ಮನುಷ್ಯನ ಸ್ಥೂಲ ಸೃಷ್ಟಿಯೂ ಕೂಡ ಇವೆ ಪಂಚಭೂತಗಳಿಂದ ಉಂಟಾಗಿದೆ. ಹೀಗೆ " ಸರ್ವಭೂತೇಷುಜಾತ್ಮನಾಂ | ಸರ್ವಭೂತಾನಿಜಾತ್ಮನಿ ॥ " ಎಂಬ ಆತ್ಮ ಭಾವನೆಯುಳ್ಳವರು ಸರ್ವ ಪೂಜಾವಿಧಾನಗಳನ್ನೂ ಅನುಸರಿಸಬೇಕು. ಆದ ಪ್ರಯುಕ್ತ ನಮ್ಮ ಸಮಾಜವು ಎಲ್ಲಾ ವಿಧಾನಗಳನ್ನೂ ಒಂದಾಗಿ ಸಮಾವೇಶಗೊಳಿಸಿ, ದೈವಪ್ರಾರ್ಥನೆಯನ್ನುಮಾಡಿ, ಪ್ರಾರ್ಥನಾರೀತಿಗಳ ಭೇದ ಭಾವನೆಯಿಂದುಂಟಾದ ದುಃಖವನ್ನು ದೂರಮಾಡಲು ನಿಂತಿರುತ್ತದೆ.

ಈ ವಿಧವಾದ ಪ್ರಾರ್ಥನೆಯು ಹಿಂದಿನ ಅವತಾರಿಗಳಿಂದ ನಡೆದು ಬಂದಿರುತ್ತದೆ. ಇದರವಿಚಾರವು ದೇವೋಕ್ತಗ್ರಂಥಗಳಿಂದ ತಿಳಿದುಬಂದಿರುತ್ತದೆ. ಶ್ರೀರಾಮರು ಮೊಟ್ಟಮೊದಲು ಈ ವಿಧವಾದ ಪ್ರಾರ್ಥನೆಯನ್ನು ಮಾಡಿದರು. ಮತ್ತು ಆಂಜನೇಯನು ಶ್ರೀರಾಮನನ್ನು ಕುರಿತು ದೇವರನ್ನು ಯಾವರೀತಿಯಿಂದ ಪ್ರಾರ್ಥಿಸಬೇಕೆಂದು ಕೇಳಲು, ಆಗ ಶ್ರೀರಾಮರು " ನಿನ್ನಲ್ಲಿನ ಓಂಕಾರರೂಪದ ವಿವರಕ್ಕೋಸ್ಕರ ಈ ಜಗತ್ತು ರೂಪವನ್ನು ಧರಿಸಿತು. ಇವುಗಳಲ್ಲಿನ ಆಧ್ಯಾತ್ಮರೂಪವು ನಾನೇ ಎಂದು ತಿಳಿದು ಇವುಗಳ ಭಿನ್ನಭಿನ್ನರೂಪವಾದ ಪ್ರಾರ್ಥನೆಗಳನ್ನು ಸೇರಿಸಿ ಮಾಡಬೇಕೆಂದು " ಹೀಗೆ ಹೇಳಿದರು:—

ಶ್ಲೋಕ ॥. ಅಷ್ಟಾಂಗಂಚತುಷ್ಪಾದಂ, ತ್ರಿಸ್ಥಾನಂಪಂಚದೈವತಂ |
ಓಮಿತ್ಯೇವಂನಜಾನಾತಿಬ್ರಾಹ್ಮಣೋನಭವೇತ್ಸಹಿ ॥ ೧ ॥

ಪ್ರಥಮಂತಾರಕಂಚೈವ ದ್ವಿತೀಯಂದಂಡಮುಚ್ಯತೇ ।
ತೃತಿಯಂಕುಂಡಲಾಕಾರಂ ಚತುರ್ಥಂತ್ವರ್ಧಚಂದ್ರಕಂ ।
ಪಂಚಮಂಬಿಂದುಸಂಯುಕ್ತಂಓಮಿತ್ಯಜ್ಯೋತಿರೂಪಕಂ॥
(ಶ್ರೀರಾಮತತ್ವಬೋಧಾಮೃತ).

ಇದೇರೀತಿಯಲ್ಲಿ ಪುರಾತನ ಅವತಾರೀಕರೆಲ್ಲರೂ ಅನುಸರಿಸಿ ಪ್ರಾರ್ಥನೆ ಮಾಡುತ್ತಾಬಂದರು. ಇದೇ ವಿಚಾರವು ಕುರಾನಿನಲ್ಲಿ ಬಂದಿರುತ್ತದೆ.

ತುಸಬ್ಬಿ ಹೂಲಹುಸ್ ಸಮಾವಾತೊಸ್ ಸಬವೊ
ವಲ್ ಅರ್ದೊವಮನ್ ಫೀಹಿನ್ನವ ಇನ್‌ಮಿನ್
ಷೈಯನ್ ಇಲ್ಲಾಯುಸಬ್ಬಿ ಹೂಬೆ ಹಂದೆಹಿ.
(ಕು. ಅ. ೧೭, ಸಂ. ೫.)

ಅರ್ಥ:—ಸಪ್ತಾಕಾಶಗಳೂ, ಭೂಮಿಯೂ ಮತ್ತು ಅವುಗಳಲ್ಲಿನ ಸರ್ವವೂ ಆತನ (ಪರಮ್ಮಾನ) ಪ್ರಾರ್ಥನೆಯಲ್ಲಿಯೆ ಇವೆ. ಮತ್ತು ಆತನನ್ನು ಘನತೆಯಿಂದ ಪ್ರಾರ್ಥಿಸದೆ ಒಂದು ವಸ್ತುವೂ ಇಲ್ಲಾ.

ಈ ಮೇಲಿನ ಆಸನಗಳಿಗೆ ಕುರಾನ್ ಕಾಯದ, ಕಯಾಮ, ರುಕು, ಸಿಜದ, ಎನ್ನುತ್ತಾರೆ. ಈ ಪ್ರಾರ್ಥನೆಯೇ ಓಂಕಾರಸ್ವರೂಪವು. ಒಂದೊಂದರ ಅಭಿಮಾನದಿಂದ ಧರ್ಮಗಳಲ್ಲಿ ಭೇದ ಹುಟ್ಟಿ ಶಾಂತತಾ ಭಂಗವುಂಟಾಗುವುದರಿಂದ, ನಮ್ಮ ಸಮಾಜವು ಇವುಗಳೆಲ್ಲಕ್ಕೂ ಅಭಿಮಾನಿಯಾಗಿ ಅನುಸರಿಸಿ ಶಾಂತಿಯನ್ನು ನೆಲೆಗೊಳಿಸುವುದಾಗಿರುತ್ತದೆ.

---

## ಪಂಚಶಾಂತಿಮಾರ್ಗವು ಮತ್ತು ಅದರ ವಿಚಾರವು

ಈ ಮಾರ್ಗವು ಹಿಂದಿನ ನಾಲ್ಕು ಮಾರ್ಗಗಳ ಫಲವಾಗಿದೆ.

ಈ ಸಮಾಜವು ಜಾತಿಸೂತಕ, ಪ್ರೇತಸೂತಕ, ಜನನಸೂತಕ, ನಿತ್ಯ ಸೂತಕ ಉಚ್ಛಿಷ್ಟಸೂತಕ, ಎಂಬ ಪಂಚಮಾಹಾಸೂತಕಗಳಿಗೆ ದೂರವಾಗಿರುತ್ತದೆ. ಇದೇ ಮತವು ಹಜರತ್ ಮೊಹಮ್ಮದ್ ಪೈಗಂಬರ್‌ರಿಂದಲೂ ಮತ್ತು ಕಲ್ಯಾಣ ಬಸವೇಶ್ವರ, ಚಿಕ್ಕ ಚನ್ನಬಸವೇಶ್ವರರಿಂದಲೂ ಅನುಸರಿ

ಸಲ್ಪಟ್ಟಿರುತ್ತದೆ. ಸರ್ವ ನದಿಗಳ ಜಲದ ಐಕಮತ್ಯದಿಂದ ಮಹಾಸಾಗರ ವಾಗುವಂತೆ ಅದೇಪ್ರಕಾರ ಲಿಂಗಾಯಿತ ಮತವಾದ ಅನಾದಿ ಮತವು (ಇಸ್ಲಾಮ್) ಉಂಟಾಗಿರುತ್ತದೆ. ಇದನ್ನನುಸರಿಸಿಯೇ ಈ ಸಮಾಜವು ಏರ್ಪಟ್ಟಿಧೆ.

ಜಾತಿಸೂತಕದಿಂದ ದೂರವಾಗುವುದೆಂದರೆ ಇವನು ಹೊಲೆಯನು, ಇವನು ಶುದ್ಧನು, ಇವರು ಕೀಳು, ಅವರು ಮೇಲು ಎಂಬ ಕುಲಭೇದಗಳನ್ನು ಬಿಡುವುದರಿಂದ ಕುಲಭೇದಗಳಿಂದುಂಟಾದ ದುಃಖವು ದೂರವಾಗುವುದು. ಜನನಸೂತಕದಿಂದ ದೂರವೆಂದರೆ, ಹೆಣ್ಣು ಗಂಡಿನ ಬಳಕೆಯಲ್ಲಿ ಭೇದವನ್ನು ಎಣಿಸದೆ ಎಲ್ಲಾ ಕುಲದವರೂ ಬಳಕೆ ಮಾಡುವುದರಿಂದ ಭೇದವು ಹೋಗಿ ಶಾಂತಿಯು ನೆಲೆಗೊಳ್ಳುತ್ತದೆ. ಪ್ರೇತಸೂತಕದಿಂದ ದೂರವಾಗುವುದೆಂದರೆ, ಯಾರಾದರೂ ಸ್ವರ್ಗಸ್ಥರಾದರೆ ಸರ್ವರೂ ಅವರ ಅವಸಾನಕಾಲದ ಕ್ರಿಯೆ ಯಲ್ಲಿ ಸೇರಿ ನಡೆಯಬೇಕು. ಇದರ ಭೇದವನ್ನು ಎಣಿಸಬಾರದು. ನಿತ್ಯ ಸೂತಕದಿಂದ ದೂರವಾಗುವುದೆಂದರೆ ಶುದ್ಧವಾದ ನೀರು, ಧರ್ಮಾನುಸಾರ ಮಾಡಿದ ಆಹಾರವನ್ನು ಯಾರ ಕೈಯಿಂದಲಾದರೂ ತೆಗೆದುಕೊಳ್ಳಬಹುದು; ಇದರಲ್ಲಿ ಭೇದವನ್ನು ಹುಡುಕಬಾರದು. ಉಚ್ಛಿಷ್ಟಸೂತಕದಿಂದ ದೂರವಾ ಗುವುದೆಂದರೆ, ಊಟದಲ್ಲಿ ಬೇರೆಯಾಗದೆ, ಎಲ್ಲರೂ ಒಂದೇ ಪಂಕ್ತಿಯಲ್ಲಿ ಎಂಜಲೆಂಬ ಭೇದವನ್ನೆಣಿಸದೆ ಪ್ರಸಾದವೆಂದು ತಿಳಿದು ಭುಂಜಿಸಬೇಕು. ಇದೇ ಈ ಸಮಾಜದವರ ಕರ್ತವ್ಯವು. ಇವುಗಳಿಂದ ಸರ್ವವಿಧವಾದ ಭೇದ ಗಳೂ ನಾಶವಾಗಿ ಜಗತ್ತಿನಲ್ಲಿ ಶಾಂತಿಯುಂಟಾಗುವುದು.

ಈ ಐದು ಶಾಂತಿಮಾರ್ಗಗಳೂ ಹೊಸದಾಗಿ ಈ ಸಮಾಜದಿಂದ ಸ್ಥಾಪಿ ಸಲಿಲ್ಲ. ಇವು ಹಿಂದೆ ಹಜರತ್ ಮೊಹಮ್ಮದ್ ಪೈಗಂಬರರ ಕಾಲದಲ್ಲಿಯೂ ಮತ್ತು ಬಸವೇಶ್ವರರ ಕಾಲದಲ್ಲಿಯೂ ಇದೇರೀತಿಯಿಂದ ಶಾಂತಿಯನ್ನುಂಟು ಮಾಡಿದವು. ಹಿಂದಕ್ಕೆ ಪುರಾತನರು ಇದರಲ್ಲಿಯೆ ಶಾಂತಿಯಿದೆಯೆಂದೂ ಮುಂದೆ ದಕ್ಷಿಣಭಾಗದಲ್ಲಿ ಶಾಂತಿಯುಂಟುಮಾಡುವ ದೀಂದಾರ ಚನ್ನ ಬಸವೇಶ್ವರರು ೧೪೪೫ ಶಾಲಿವಾಹನ ಶಕೆಯಲ್ಲಿ ಪ್ರತ್ಯಕ್ಷ ಕಂಡುಬಂದು ಜಗ ತ್ತಿಗೆ ಶಾಂತಿಯುಂಟುಮಾಡುವರೆಂದೂ ಪುರಾತನರು ಹೇಳಿರುತ್ತಾರೆ. ಇಸ್ಲಾಮ್ ಮತದಲ್ಲಿಯೇ ಈ ಮಾರ್ಗಗಳು ಸ್ಪಷ್ಟವಾಗಿರುವುದರಿಂದ, ಈ

ಹಿಂದುಗಳೆಲ್ಲರೂ ಮುಸಲ್ಮಾನರಾಗುತ್ತಾರೆಂದು ಹೇಳಿರುತ್ತಾರೆ. ಅದು ಹೇಗಂದರೆ:—

ಈತನು ಹಿಂದು ಮುಸಲ್ಮಾನ ಆದಾನು ।
ಬಹುವಾಗಿ ಎಲ್ಲಾ ಮಸೂತಿಗಳಾದಾವು ॥
ಕಲ್ಲುಪೂಜೆಯಮಾಡಿದರೆ ಎಲ್ಲಿ ನಿಂತೀಯೆ ।
ಹಕಮತಿ ಪಂಚಮುಖ ಇದ್ದಾನು ॥
ಹಿಂದು ತುರುಕರು ಒಂದಾಗಿ ನಡದಾರು ।
ದೀಂದಾರ ಚನ್ನಬಸವಣ್ಣ ಬರುವಾಗ ॥
ಮುಸಲ್ಮಾನರರೂಪ ವಸುಧಿಯೊಳಗೆ ತಂದಾನೆ ।
ಹೊಸನ್ಯಾಯ ಮಾಡಲಿಕ್ಕೆ ಬಂದಾನೆ ॥
ವೊಹಮ್ಮದ ನಬಿಸಾಹೇಬರ ಮುಸಹಪ ಹಿಡಿದು ನಿಂತಾನೆ ।
ಸಾಹೇಬರ ಆತ್ಮದಲ್ಲಿ ಶರಣ ಉದಿಸಿದ ನೋಡಿರಣ್ಣ ॥
ಲಿಖಿತ ತಂದಾನು ಅಖಿಳ ಬ್ರಹ್ಮಾಂಡದ ।
ಲೇಖ ಕೊಡಲಿ ಬಂದಾ ನಿಮಗೆ॥
(ಮೌನೇಶ್ವರ ಮತ್ತು ಕೊಡಕಲ್ಲು ಬಸಪ್ಪನವರ ವಚನಗಳು)

ನಮ್ಮ ಸಮಾಜಕ್ಕೆ ಮೆಂಬರಾಗಲು ಇಷ್ಟವುಳ್ಳವರು ಇದರ ಸಂಗಡ ಲಗತ್ತಿಸಿರುವ ಫಾರಂನಲ್ಲಿ ರುಜುಮಾಡಿ ಬೆಂಗಳೂರಿನಲ್ಲಿರುವ ಹೆಡ್ಡಾಫೀಸಿಗೆ ಕಳುಹಿಸಿ ಕೊಡತಕ್ಕದ್ದು.

ದೀ॥ದಾರ್ ಬಸವ ಸಮಾಜ,
ಬಸವನಗುಡಿ, ಬೆಂಗಳೂರು ಸಿಟಿ.